

GOVERNMENT OF TAMILNADU

ಸಮಾಜ ವಿಜ್ಞಾನ

SOCIAL SCIENCE - KANNADA

ಹತ್ತನೆಯ ತರಗತಿ

X STANDARD

Untouchability is Inhuman and a Crime

Department of School Education

© Government of Tamil Nadu
First Edition - 2011
Revised Edition - 2013, 2014, 2015, 2016, 2017
(Published under Uniform system of School Education Scheme)

Textbook Preparation

State Council of Educational Research and Training

College Road, Chennai - 600 006.

Textbook Printing

Tamil Nadu Textbook and Educational Services Corporation

College Road, Chennai - 600 006.

This book has been printed on 80 gsm Maplitho Paper

Price: Rs.

Printed by web offset at:

Textbook available at
www.textbooksonline.tn.nic.in

ಪರಿವಿಡಿ

ಘಟಕ	ಪಾಠ ಸಂಖ್ಯೆ	ಪಾಠ	ಪುಟ ಸಂಖ್ಯೆ
		ಇತಿಹಾಸ	
I.	1.	ಸಾಮ್ರಾಜ್ಯಶಾಹಿತ್ವ – ಭಾರತ ಮತ್ತು ಚೀನಾದಲ್ಲಿ ಸಾಮ್ರಾಜ್ಯ ಶಾಹಿತ್ವ	1
II.	2.	ಮೊದಲನೆಯ ಮಹಾಯುದ್ಧ(ಕ್ರಿ.ಶ. 1914 – ಕ್ರಿ.ಶ. 1918) ಸಂಯುಕ್ತ ರಾಷ್ಟ್ರಗಳ ಸಂಘ	11
III.	3.	ಎರಡು ಮಹಾಯುದ್ಧಗಳ ನಡುವಣ ಪ್ರಪಂಚದ ಸ್ಥಿತಿ (ಕ್ರಿ.ಶ.1919 – ಕ್ರಿ.ಶ.1939) ಆರ್ಥಿಕ ಕುಸಿತ	23
	4.	ಇಟಲಿಯಲ್ಲಿ ಫ್ಯಾಸಿಸಂ (ಕ್ರಿ.ಶ. 1922 – ಕ್ರಿ.ಶ. 1945)	27
	5.	ಜರ್ಮನಿಯಲ್ಲಿ ನಾಜಿಸಂ (ಕ್ರಿ.ಶ. 1933 – ಕ್ರಿ.ಶ. 1945)	31
IV.	6.	ಎರಡನೆಯ ಮಹಾಯುದ್ಧ (ಕ್ರಿ.ಶ. 1939 – ಕ್ರಿ.ಶ. 1945)	36
	7.	ವಿಶ್ವಸಂಸ್ಥೆ – 1945	44
	8.	ಯೂರೋಪಿಯನ್ ಒಕ್ಕೂಟ	50
V.	9.	1857ರ ಮಹಾಕ್ರಾಂತಿ	55
VI.	10.	19ನೇ ಶತಮಾನದಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳುವಳಿಗಳು.	65
VII.	11.	ಭಾರತ ಸ್ವಾತಂತ್ರ್ಯ ಚಳುವಳಿ– ಮೊದಲ ಹಂತ – ಗಾಂಧಿ ಪೂರ್ವಯುಗ (ಕ್ರಿ. ಶ. 1885–ಕ್ರಿ.ಶ.1919)	76
	12.	ಭಾರತದ ಸ್ವಾತಂತ್ರ್ಯ ಚಳುವಳಿ _ ಎರಡನೇ ಹಂತ – ಗಾಂಧಿಯುಗ (ಕ್ರಿ.ಶ. 1920 _ 1947)	85
	13.	ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ತಮಿಳುನಾಡಿನ ಪಾತ್ರ	100
VIII.	14.	ತಮಿಳುನಾಡಿನಲ್ಲಿ ಸಾಮಾಜಿಕ ಬದಲಾವಣೆಗಳು	108
		ಭೂಗೋಳಶಾಸ್ತ್ರ	
I.	1.	ಭಾರತದ ಸನ್ನಿವೇಶ ಮತ್ತು ನೈಸರ್ಗಿಕ ರಚನೆ	118
	2.	ಭಾರತ–ವಾಯುಗುಣ	143
II.	3.	ಭಾರತ – ಸ್ವಾಭಾವಿಕ ಸಂಪನ್ಮೂಲಗಳು	156
III.	4.	ಭಾರತ – ವ್ಯವಸಾಯ	178
	5.	ಭಾರತ – ಕೈಗಾರಿಕೆಗಳು	194
	6.	ಪರಿಸರದಲ್ಲಿ ಕಂಡುಬರುವ ಸಮಸ್ಯೆಗಳು	206
IV.	7.	ವ್ಯಾಪಾರ, ಸಾರಿಗೆ ಮತ್ತು ಸಂಪರ್ಕ	214
V.	8.	ದೂರ ಸಂವೇದಿ	232
	9.	ವಿಕೋಪದ ಅಪಾಯ ಕಡಿಮೆಗೊಳಿಸುವಿಕೆ	240

ಪೌರನೀತಿ

I.	1.	ಭಾರತ ಮತ್ತು ವಿಶ್ವಶಾಂತಿ	244
II.	2.	ಪ್ರಜಾಪ್ರಭುತ್ವ	249
	3.	ವೈವಿಧ್ಯತೆಯಲ್ಲಿ ಏಕತೆ	257
III.	4.	ಗ್ರಾಹಕರ ಹಕ್ಕುಗಳು	261

ಅರ್ಥಶಾಸ್ತ್ರ

I.	1.	ರಾಷ್ಟ್ರೀಯ ಆದಾಯ	267
II.	2.	ಸ್ವಾತಂತ್ರ್ಯಾ ನಂತರದ ಭಾರತದ ಆರ್ಥಿಕತೆ	274

ಏಕರೂಪ ಶಿಕ್ಷಣ ಯೋಜನೆ – ಪ್ರಶ್ನೆಪತ್ರಿಕೆ ನೀಲನಕ್ಷೆ – 10ನೇ ತರಗತಿ
ಇತಿಹಾಸ ಮತ್ತು ಪೌರನೀತಿ

ಇತಿಹಾಸ	ವಸ್ತುನಿಷ್ಠ ಮಾದರಿ ಪ್ರಶ್ನೆಗಳು (1 ಅಂಕ)			ಕಿರು ಉತ್ತರ ಪ್ರಶ್ನೆಗಳು (2 ಅಂಕ)			ಶೀರ್ಷಿಕೆ ಪ್ರಶ್ನೆಗಳು (4 ಅಂಕ)			ಒಂದು ಪುಟದ ಪ್ರಶ್ನೆಗಳು (5 ಅಂಕ)			ಭೂಪಟ (1 ಅಂಕ)	ಕಾಲರೇಖೆ	ಒಟ್ಟು ಅಂಕಗಳು
	ಜ್ಞಾನ	ತಿಳುವಳಿಕೆ	ಅನ್ವಯ	ಜ್ಞಾನ	ತಿಳುವಳಿಕೆ	ಅನ್ವಯ	ಜ್ಞಾನ	ತಿಳುವಳಿಕೆ	ಅನ್ವಯ	ಜ್ಞಾನ	ತಿಳುವಳಿಕೆ	ಅನ್ವಯ		ಕೌಶಲ	
ಘಟಕ-I	-	1	-	1	-	-	-	-	1	1	-	-	5		
ಘಟಕ-II	1	-	-	-	1	-								✓	
ಘಟಕ-III	1	-	-	1	-	-	-	-	1						
ಘಟಕ-IV	1	-	-	-	1	-								✓	
ಘಟಕ-V	-	1	-	1	-	-	-	1	-	-	-	1	5		
ಘಟಕ-VI	1	-	-	-	1	-									
ಘಟಕ-VII	-	1	-	1	-	-	1	-	-	-	1	-		✓	
ಘಟಕ-VIII	1	1	-	-	1	-									
ಒಟ್ಟು ಅಂಕಗಳು	9			16			16			15			10	5	71
ಪೌರನೀತಿ															
ಘಟಕ-I	1	-	-	1	-	-				1	-	-			
ಘಟಕ-II	-	1	-	-	1	-				-	1	-			
ಘಟಕ-III	-	-	1	-	-	-				-	-	1			
ಒಟ್ಟು ಅಂಕಗಳು	3			4			-			15					22

ಸೂಚನೆ : "✓" ಕಾಲರೇಖೆಯನ್ನು ಈ ಘಟಕಗಳಿಂದ ಕೇಳಲಾಗುವುದು.

"ಪ್ರ" ಪ್ರಪಂಚ ಭೂಪಟ

"ಭಾ" ಭಾರತ ಭೂಪಟ

ಏಕರೂಪ ಶಿಕ್ಷಣ ಯೋಜನೆ – ಪ್ರಶ್ನೆಪತ್ರಿಕೆ ನೀಲನಕ್ಷೆ – 10ನೇ ತರಗತಿ
ಭೂಗೋಳಶಾಸ್ತ್ರ ಮತ್ತು ಅರ್ಥಶಾಸ್ತ್ರ

ಭೂಗೋಳಶಾಸ್ತ್ರ	ವಸ್ತುನಿಷ್ಠ ಮಾದರಿ ಪ್ರಶ್ನೆಗಳು (1 ಅಂಕ)			ಕಿರು ಉತ್ತರ ಪ್ರಶ್ನೆಗಳು (2 ಅಂಕ)			ವ್ಯತ್ಯಾಸ ತಿಳಿಸುವಿಕೆ (2 ಅಂಕ)			ಒಂದು ಪುಟದ ಪ್ರಶ್ನೆಗಳು (5 ಅಂಕ)			ಭೂಪಟ ಕೌಶಲ (1 ಅಂಕ)	ಒಟ್ಟು ಅಂಕಗಳು
	ಜ್ಞಾನ	ತಿಳುವಳಿಕೆ	ಅನ್ವಯ	ಜ್ಞಾನ	ತಿಳುವಳಿಕೆ	ಅನ್ವಯ	ಜ್ಞಾನ	ತಿಳುವಳಿಕೆ	ಅನ್ವಯ	ಜ್ಞಾನ	ತಿಳುವಳಿಕೆ	ಅನ್ವಯ		
ಘಟಕ-I	2	-	-	1	1	-	1	-	1	-	1	-	15	
ಘಟಕ-II	2	-	-	-	-	1	-	1	-	-		-		
ಘಟಕ-III	2	-	-	2	1	-	1	1	1	-	1	-		
ಘಟಕ-IV	2	-	-	-	1	-	1	1	-	-		-		
ಘಟಕ-V	1	-	-	1	-	-	-	-	-	-	-	1		
ಒಟ್ಟು ಅಂಕಗಳು	9			16			16			15			15	71
ಅರ್ಥಶಾಸ್ತ್ರ														
ಘಟಕ-I	1	-	-	-	1	-	-	-	-	1	-	-	-	8
ಘಟಕ-II	2	-	-	-	-	1	-	-	-	-	1	1	-	14
ಒಟ್ಟು ಅಂಕಗಳು	3			4			-				15			22

ಇತಿಹಾಸ

1. ಸಾಮ್ರಾಜ್ಯಶಾಹಿತ್ವ–ಭಾರತ ಮತ್ತು ಚೀನಾದಲ್ಲಿ ಸಾಮ್ರಾಜ್ಯಶಾಹಿತ್ವ

ಸಾಮ್ರಾಜ್ಯಶಾಹಿತ್ವ

ಯುರೋಪಿನಲ್ಲಿ ಹತ್ಹೊಂಭತ್ತನೇ ಶತಮಾನದ ಉತ್ತರಾರ್ಧದಲ್ಲಿ ಮತ್ತು ಇಪ್ಪತ್ತನೇ ಶತಮಾನದ ಪೂರ್ವಾರ್ಧದಲ್ಲಿ ರಾಜಕೀಯ ಹಾಗೂ ಆರ್ಥಿಕತೆಯಲ್ಲಿಯೂ ಒಂದು ಮಹಾನ್ ಏಳಿಗೆ ಉಂಟಾಯಿತು. ಈ ಏಳಿಗೆಯಿಂದ ಯೂರೋಪಿನ ಪ್ರಬಲ ರಾಷ್ಟ್ರಗಳು ತಮ್ಮ ಆಧಿಕ್ಯವನ್ನು ಇತರ ದೇಶಗಳ ರಾಜಕೀಯದಲ್ಲಿಯೂ, ಆರ್ಥಿಕತೆಯಲ್ಲಿಯೂ ಸ್ಥಾಪಿಸಲು ಪ್ರಯತ್ನಿಸಿದವು. ಇದನ್ನೇ ನಾವು 'ಸಾವಮ್ರಾಜ್ಯಶಾಹಿತ್ವ' ಎಂದು ಕರೆಯುತ್ತೇವೆ. ಸಾಮ್ರಾಜ್ಯಶಾಹಿತ್ವ ಎಂಬ ಪದವು Imperium ಎಂಬ ಲ್ಯಾಟಿನ್ ಪದದಿಂದ ಬಂದಿದೆ. ಇದರ ಅರ್ಥ ಆಧಿಕ್ಯ (Power) ಎಂಬುದಾಗಿದೆ.

ಸಾಮ್ರಾಜ್ಯಶಾಹಿತ್ವ ಎಂಬುದು ಒಂದು ದೇಶವು ಇತರ ದೇಶಗಳ ಭಾಗಗಳನ್ನು ಬಲವಂತವಾಗಿ ಜಯಿಸಿ ಅವುಗಳನ್ನು ತನ್ನ ಆಳ್ವಿಕೆಗೆ ಒಳಪಡಿಸಿಕೊಳ್ಳುವುದು (ಅಥವಾ) ಒಂದು ದೇಶದ ಆಳ್ವಿಕೆಯು ಮತ್ತೊಂದು ದೇಶದ ರಾಜಕೀಯ ಮತ್ತು ಆರ್ಥಿಕ ಅಧಿಕಾರಗಳನ್ನು ತನ್ನ ವಶಕ್ಕೊಳಪಡಿಸಿಕೊಂಡು ಆ ದೇಶದ ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿಕೊಳ್ಳುವುದಾಗಿದೆ.

ವಸಾಹತುಶಾಹಿತ್ವ ಮತ್ತು ಸಾಮ್ರಾಜ್ಯಶಾಹಿತ್ವ

ಕ್ರಿ.ಶ. 1492ರಿಂದ ಕ್ರಿ.ಶ. 1763ರವರೆಗೆ ಯೂರೋಪಿನ ದೇಶಗಳು ಅನುಸರಿಸಿದ ನೀತಿಯನ್ನು ವಸಾಹತುಶಾಹಿತ್ವ ಎಂದು ಕರೆಯಲಾಗುತ್ತದೆ. ಈ ಕಾಲಾವಧಿಯಲ್ಲಿ ಇಂಗ್ಲೆಂಡ್, ಫ್ರಾನ್ಸ್, ಸ್ಪೈನ್ ಮತ್ತು ಪೋರ್ಚುಗಲ್ ಮುಂತಾದ ದೇಶಗಳು ಏಷ್ಯಾ ಮತ್ತು ಅಮೆರಿಕ ಖಂಡಗಳಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸಿದವು.

ವಸಾಹತುಶಾಹಿತ್ವ ಎಂದರೆ ವಸಾಹತುಗಳನ್ನು ಇತರ ರಾಷ್ಟ್ರಗಳಲ್ಲಿ ಸ್ಥಾಪಿಸಿ ಅದರ ನೈಸರ್ಗಿಕ ಸಂಪನ್ಮೂಲಗಳನ್ನು ಅಪಹರಿಸುವುದು ಎಂದರ್ಥ. ಇದಲ್ಲದೆ ಇದು ಸ್ವದೇಶಿ ಬಹುಸಂಖ್ಯಾತರಿಗೂ, ವಿದೇಶಿ ಅಲ್ಪಸಂಖ್ಯಾತರಿಗೂ ನಡುವೆ ಏರ್ಪಟ್ಟ ನೇರವಾದ ಸಂಬಂಧವಾಗುವುದು.

ಸಾಮ್ರಾಜ್ಯಶಾಹಿತ್ವ ಎಂಬುದು ಒಂದು ದೇಶದ ನೀತಿಯಾಗಿದೆ. ಇದು ರಾಜನೀತಿಯಾಗಿಯೂ, ಆರ್ಥಿಕ ಕಾರಣಗಳಿಗಾಗಿಯೂ ಸ್ಥಾಪಿಸಿದುದು. ಸಾಮ್ರಾಜ್ಯಶಾಹಿತ್ವ ಎಂಬುದು ನೀತಿ, ವಸಾಹತುಶಾಹಿತ್ವ ಎಂಬುದು ಆಚರಣೆಗೊಳಪಡಿಸಲ್ಪಟ್ಟ ನೀತಿ.

ಕ್ರಿ.ಶ. 1763ರಿಂದ ಕ್ರಿ.ಶ. 1870ರವರೆಗಿನ ಅವಧಿಯಲ್ಲಿ ಯೂರೋಪ್ ರಾಷ್ಟ್ರಗಳು ಹಲವು ಯುದ್ಧಗಳಲ್ಲಿಯೂ, ದೇಶದ ಏಕೀಕರಣದ ಚಳುವಳಿಗಳಲ್ಲಿಯೂ ತೊಡಗಿದ್ದವು. ಕ್ರಿ.ಶ. 1870ರಲ್ಲಿ ಇಟಲಿ ಮತ್ತು ಜರ್ಮನಿಯ ಏಕೀಕರಣದ ನಂತರ ಆ ರಾಷ್ಟ್ರಗಳು ಏಷ್ಯಾ ಮತ್ತು ಆಫ್ರಿಕ ಖಂಡಗಳಲ್ಲಿ ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಲು ಪ್ರಯತ್ನಿಸಿದವು. ಕ್ರಿ.ಶ. 1870ರಿಂದ ಕ್ರಿ.ಶ. 1945ರವರೆಗೆ ಯೂರೋಪ್ ರಾಷ್ಟ್ರಗಳಿಂದ ಅನುಸರಿಸಲ್ಪಟ್ಟ ಸಾಮ್ರಾಜ್ಯಶಾಹಿತ್ವ ನೀತಿಯು 'ಹೊಸ ಸಾಮ್ರಾಜ್ಯಶಾಹಿತ್ವ' ಎಂದು ಕರೆಯಲ್ಪಟ್ಟಿತು.

I. ಸಾಮ್ರಾಜ್ಯಶಾಹಿತ್ವದ ಪ್ರಧಾನ ಸ್ವರೂಪಗಳು

19ನೇ ಶತಮಾನದಲ್ಲಿ ಸಾಮ್ರಾಜ್ಯಶಾಹಿತ್ವವು ಮೂರು ಪ್ರಧಾನ ಸ್ವರೂಪಗಳಾಗಿ ಕಂಡುಬಂದಿತು.

1. ಸೈನಿಕ ಸಾಮ್ರಾಜ್ಯಶಾಹಿತ್ವ

ದೇಶಗಳು ತಮ್ಮ ಸೈನ್ಯವನ್ನು ಕಳುಹಿಸಿ ಇತರ ದೇಶಗಳಲ್ಲಿ ನೇರವಾಗಿ ಆಧಿಕ್ಯವನ್ನು ಸ್ಥಾಪಿಸುವುದನ್ನು ಸೈನಿಕ ಸಾಮ್ರಾಜ್ಯಶಾಹಿತ್ವ ಎನ್ನುತ್ತೇವೆ.

ಉದಾಹರಣೆಗೆ ಅಮೆರಿಕ ಸಂಯುಕ್ತ ಸಂಸ್ಥಾನವು ಇರಾಕ್ ದೇಶದ ಮೇಲೆ ತನ್ನ ಸೈನ್ಯವನ್ನು ಕಳುಹಿಸಿ ದಾಳಿಮಾಡಿ ಅಲ್ಲಿ ದೇಶಕ್ಕೆ ಅನುಕೂಲವಾದ ಸರ್ಕಾರವೊಂದನ್ನು ಸ್ಥಾಪಿಸಿತು.

2.ರಾಜಕೀಯ ಸಾಮ್ರಾಜ್ಯಶಾಹಿತ್ವ

ದೇಶಗಳ ರಾಜರುಗಳನ್ನು ತಮ್ಮ ಆಳ್ವಿಕೆಗೊಳಪಡಿಸಿಕೊಂಡು ಅವರ ಮೂಲಕ ಪರೋಕ್ಷವಾಗಿ ಆಳ್ವಿಕೆಯನ್ನು ಸ್ಥಾಪಿಸುವುದನ್ನು ರಾಜಕೀಯ ಸಾಮ್ರಾಜ್ಯಶಾಹಿತ್ವ ಎನ್ನುತ್ತೇವೆ.

ಉದಾಹರಣೆಗೆ ಬ್ರಿಟಿಷರು ಭಾರತವನ್ನು ವಶಪಡಿಸಿಕೊಂಡು ತಮ್ಮ ಅಧಿಕಾರಿಗಳನ್ನು ನೇಮಿಸಿ ಅದಾಗಲೇ ಇದ್ದ

ರಾಜಕೀಯ ಸ್ವರೂಪವನ್ನು ತಮಗೆ ಅನುಕೂಲಕರವಾಗಿ ಬದಲಾಯಿಸಿ ಸ್ಥಾಪಿಸಿಕೊಂಡರು.

3. ಆರ್ಥಿಕ ಸಾಮ್ರಾಜ್ಯಶಾಹಿತ್ವ

ಒಂದು ದೇಶ ಮತ್ತೊಂದು ದೇಶದ ಮೇಲೆ ಆರ್ಥಿಕ ಅಧಿಕಾರವನ್ನು ತನ್ನ ವಶಕ್ಕೊಳಪಡಿಸಿಕೊಂಡು ಆ ದೇಶದ ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿಕೊಳ್ಳುವುದನ್ನೇ ಆರ್ಥಿಕ ಸಾಮ್ರಾಜ್ಯಶಾಹಿತ್ವ ಎನ್ನುತ್ತೇವೆ.

ಉದಾಹರಣೆಗೆ ಮಂಚು ವಂಶದ ರಾಜರುಗಳು, ಚೀನಾ ದೇಶವನ್ನು ರಾಜಕೀಯವಾಗಿ ಸ್ವತಂತ್ರವಾಗಿ ಆಳ್ವಿಕೆ ಮಾಡಿದಾಗ್ಯೂ, ಯೂರೋಪಿಯನ್ನರು ಮತ್ತು ಅಮೆರಿಕನ್ನರು ಅದರ ಆರ್ಥಿಕತೆಯನ್ನು ತಮ್ಮ ನಿಯಂತ್ರಣದಲ್ಲಿಟ್ಟುಕೊಂಡರು.

II. ಸಾಮ್ರಾಜ್ಯಶಾಹಿತ್ವ ಉಂಟಾಗಲು ಕಾರಣಗಳು

1. ಕೈಗಾರಿಕಾ ಕ್ರಾಂತಿ (Industrial Revolution)

ಯೂರೋಪಿನಲ್ಲಿ ಉಂಟಾದ ಕೈಗಾರಿಕಾ ಕ್ರಾಂತಿಯ ಕಾರಣದಿಂದಾಗಿ ವಸ್ತುಗಳ ಉತ್ಪತ್ತಿಯು ಅಧಿಕವಾಯಿತು. ಆದ್ದರಿಂದಲೇ ಯೂರೋಪ್ ರಾಷ್ಟ್ರಗಳಿಗೆ ಉತ್ಪಾದನೆಯ ಅಗತ್ಯವಾದ ಕಚ್ಚಾ ವಸ್ತುಗಳು, ಉತ್ಪಾದಿಸಿದ ಸಿದ್ಧವಸ್ತುಗಳ ಮಾರಾಟಕ್ಕೆ ಮಾರುಕಟ್ಟೆಗಳು ಅಗತ್ಯವಾಗಿದ್ದವು. ಕೈಗಾರಿಕಾ ಕ್ರಾಂತಿಯಿಂದಾಗಿ ಸಾರಿಗೆ ಮತ್ತು ಸಂಪರ್ಕಗಳ ಮಾಧ್ಯಮದಲ್ಲಿ ಅಭಿವೃದ್ಧಿ ಉಂಟಾಯಿತು. ರೈಲ್ವೆ ಇಲಾಖೆಯಲ್ಲಿ ಉಂಟಾದ ಬೆಳವಣಿಗೆಯು ಕಚ್ಚಾವಸ್ತುಗಳನ್ನು ಕೈಗಾರಿಕೆಗಳಿಗೂ, ಸಿದ್ಧವಸ್ತುಗಳನ್ನು ಮಾರುಕಟ್ಟೆಗಳಿಗೂ, ತ್ವರಿತವಾಗಿ ಸಾಗಿಸಲು ಬಹಳ ಸಹಾಯಕವಾಯಿತು. ಯೂರೋಪ್ ರಾಷ್ಟ್ರಗಳಲ್ಲಿ ಕೈಗಾರಿಕಾ ರಕ್ಷಣಾ ಕಾಯಿದೆಯನ್ನು ಅನುಸರಿಸಿದುದರಿಂದ ದೇಶೀಯ ಮಾರುಕಟ್ಟೆಗಳಲ್ಲಿ ತಮ್ಮ ವಸ್ತುಗಳನ್ನು ಮಾರಾಟ ಮಾಡಲು ಸಾಧ್ಯವಾಗಲಿಲ್ಲ. ಆದ್ದರಿಂದಲೇ ಕೈಗಾರಿಕಾ ಕ್ರಾಂತಿಯು ಹರಡದೇ ಇದ್ದುದರಿಂದ ಏಷ್ಯಾ ಮತ್ತು ಆಫ್ರಿಕದ ವಸಾಹತು ರಾಷ್ಟ್ರಗಳು ಉತ್ತಮ ಮಾರುಕಟ್ಟೆಗಳಾಗಿಯೂ ಕಚ್ಚಾವಸ್ತುಗಳನ್ನು ಪೂರೈಸುವ ಸ್ಥಳಗಳಾಗಿಯೂ ಕಾರ್ಯನಿರ್ವಹಿಸಿದವು. ಆದ್ದರಿಂದ ಯೂರೋಪಿಯನ್ನರು ಆ ರಾಷ್ಟ್ರಗಳ ಮೇಲೆ ಹಕ್ಕು ಪಡೆಯಲು ಮುಂದಾದರು.

2. ರಾಷ್ಟ್ರೀಯ ಭದ್ರತೆ (National security)

ತನ್ನ ದೇಶದ ಸಂಪನ್ಮೂಲಗಳನ್ನು ವಿದೇಶದಲ್ಲಿ ಬಂಡವಾಳ ತೊಡಗಿಸುವಾಗ ಅದರ ರಕ್ಷಣೆಗಾಗಿ ಆ ದೇಶವನ್ನು ತಮ್ಮ ಅಧೀನಕ್ಕೆ ತೆಗೆದುಕೊಳ್ಳಲು ಯೂರೋಪ್ ರಾಷ್ಟ್ರಗಳು ಬಯಸಿದವು.

3. ರಾಷ್ಟ್ರೀಕರಣ (Nationalisation)

ಹತ್ತೊಂಬತ್ತನೇ ಶತಮಾನದ ಉತ್ತರಾರ್ಧದಲ್ಲಿ ತೀವ್ರವಾದ ರಾಷ್ಟ್ರೀಯತೆಯು ಯೂರೋಪಿನಲ್ಲಿ ಉಂಟಾಯಿತು. ಅನೇಕ ರಾಷ್ಟ್ರಗಳು ತಮ್ಮ ಜಾತಿ, ಪಂಗಡ, ಸಂಸ್ಕೃತಿ ಮತ್ತು ಭಾಷೆಗಳಲ್ಲಿ ಅಪಾರ ವ್ಯಾಮೋಹ ಬೆಳೆಸಿಕೊಂಡಿದ್ದವು. ಆ ದೇಶಗಳು ತಮ್ಮ ದೇಶದ ಘನತೆಯನ್ನು ಹೆಚ್ಚಿಸಲು ಅಭಿವೃದ್ಧಿ ಹೊಂದದ ರಾಷ್ಟ್ರಗಳ ಮೇಲೆ ಅಧಿಕಾರ ನಡೆಸಲು ಬಯಸಿದವು. ತಮ್ಮ ದೇಶದ ಗೌರವವನ್ನು ಹೆಚ್ಚಿಸುವ ಸಲುವಾಗಿ ಅಧಿಕ ವಸಾಹತು ದೇಶಗಳನ್ನು ವಶಪಡಿಸಿಕೊಳ್ಳಲು ಬಯಸಿದರು. ಸಾಮ್ರಾಜ್ಯಶಾಹಿತ್ವವು ಅಂದಿನ ಕಾಲದ ನಾಗರೀಕತೆಯೆಂದು ಭಾವಿಸಲಾಯಿತು. ಅಲ್ಲದೇ ಯೂರೋಪಿನ ಬಿಳಿಯರು ತಮ್ಮ ಜನಾಂಗದವರು ಉನ್ನತ ಮಟ್ಟದವರೆಂದು, ಆಫ್ರಿಕ, ಏಷ್ಯಾದ ಕಪ್ಪುವರ್ಣದ ಜನಾಂಗದವರಿಗೆ ನಾಗರೀಕತೆಯನ್ನು ಕಲಿಸುವುದು ತಮ್ಮ ಅತಿಯಾದ ಭಾರ ಎಂದು ಭಾವಿಸಿದುದು ಸಾಮ್ರಾಜ್ಯಶಾಹಿತ್ವ ಉಂಟಾಗಲು ನಾಂದಿಯಾಯಿತೆಂದು ಹೇಳಬಹುದು.

4. ಅಧಿಕಾರದ ಸಮತೋಲನ (Balance of Power)

ಸಮತೋಲನದ ಅಧಿಕಾರವನ್ನು ಪಡೆಯಲು ಯೂರೋಪ್ ರಾಷ್ಟ್ರಗಳು ತಮ್ಮ ಪ್ರತಿಸ್ಪರ್ಧಿಯಾಗಿರುವ ರಾಷ್ಟ್ರಗಳು ಮತ್ತು ನೆರೆಹೊರೆಯ ರಾಷ್ಟ್ರಗಳಿಗೆ ಸಮನಾಗಿ ವಸಾಹತುಗಳನ್ನು ಸ್ಥಾಪಿಸಲು ಪ್ರಯತ್ನಿಸಿದವು.

5. ಹೊಸ ಮಾರ್ಗಗಳ ಅನ್ವೇಷಣೆ

ಆಫ್ರಿಕ ಮತ್ತು ಏಷ್ಯಾ ಖಂಡಗಳನ್ನು ತಲುಪಲು ಕಂಡುಹಿಡಿಯಲ್ಪಟ್ಟ ಹೊಸ ಮಾರ್ಗಗಳು ಸಾಮ್ರಾಜ್ಯಶಾಹಿತ್ವ ನೀತಿಯನ್ನು ಪ್ರೇರೇಪಿಸಿದವು. ಹೊಸ ಜಲಮಾರ್ಗಗಳು ವ್ಯಾಪಾರಿಗಳಿಗೂ, ಸೈನ್ಯಕ್ಕೂ, ವಸಾಹತು ರಾಷ್ಟ್ರಗಳಲ್ಲಿರುವ ಹೇರಳವಾದ ಸಂಪತ್ತನ್ನು ಅಪಹರಿಸಲು ಬಹಳ ಸಹಾಯಕವಾಗಿದ್ದವು.

6. ಜನಸಂಖ್ಯಾ ಬೆಳವಣಿಗೆ (Growth of Population)

ಜನಸಂಖ್ಯೆಯ ಹೆಚ್ಚಳದ ಪರಿಣಾಮವಾಗಿ ಏರ್ಪಟ್ಟ ನಿರುದ್ಯೋಗದಿಂದಾಗಿ ಯೂರೋಪಿಯನ್ನರನ್ನು ವಸಾಹತುಗಳಿಗಾಗಿ ಮತ್ತು

ಉದ್ಯೋಗಕ್ಕಾಗಿಯೂ ಇತರೆ ದೇಶಗಳನ್ನು ಹುಡುಕಿಕೊಂಡು ಹೋಗಲು ಪ್ರೇರೇಪಿಸಿತು.

7. ಕಾನೂನು ಅರಾಜಕತೆ (State of Anarchy)

ಒಂದನೇ ಮಹಾಯುದ್ಧಕ್ಕೂ ಮೊದಲು ವಿಶ್ವರಾಷ್ಟ್ರಗಳನ್ನು ನಿಯಂತ್ರಿಸಿ ರಾಷ್ಟ್ರಗಳ ನಡುವೆ ಶಾಂತಿ ಬೆಳೆಸಲು, ರಕ್ಷಣೆಯನ್ನು ಬಲಪಡಿಸಲು ಕಾಯಿದೆಗಳನ್ನು ಅನುಷ್ಠಾನಗೊಳಿಸುವಂತಹ ಅಂತರರಾಷ್ಟ್ರೀಯ ಸಂಘಟನೆ ಇರಲಿಲ್ಲ. ಇಂತಹ ಕಾನೂನು ಅರಾಜಕ ಸ್ಥಿತಿಯು ವಸಾಹತುಗಳನ್ನು ವಶಪಡಿಸಿಕೊಳ್ಳಲು ದಾರಿಮಾಡಿಕೊಟ್ಟಿತು.

III. ಸಾಮ್ರಾಜ್ಯಶಾಹಿತ್ವ – ಮಾರ್ಗೋಪಾಯಗಳು

ಸಾಮ್ರಾಜ್ಯಶಾಹಿತ್ವವನ್ನು ಸ್ಥಾಪಿಸಲು ಹಲವು ಮಾರ್ಗೋಪಾಯಗಳನ್ನು ಅಳವಡಿಸಿಕೊಳ್ಳಲಾಯಿತು.

1. ಯುದ್ಧ ಮತ್ತು ಆಕ್ರಮಣ (Conquest and Annexation)

ಆಧುನಿಕ ಕಾಲದ ಪ್ರಾರಂಭದಲ್ಲಿ ಸ್ಪೈನ್, ಫ್ರಾನ್ಸ್, ಇಂಗ್ಲೆಂಡ್ ದೇಶಗಳಿಂದ ಕಳುಹಿಸಲ್ಪಟ್ಟ ಯುದ್ಧವೀರರು ಅನೇಕ ರಾಷ್ಟ್ರಗಳ ರಾಜರುಗಳನ್ನು ಸೋಲಿಸಿ ಅಲ್ಲಿ ಸಾಮ್ರಾಜ್ಯಶಾಹಿತ್ವವನ್ನು ಸ್ಥಾಪಿಸಿದರು. ಇದು ಯುದ್ಧದ ಮೂಲಕ ರಾಷ್ಟ್ರಗಳನ್ನು ವಶಪಡಿಸಿಕೊಳ್ಳುವ ಮಾದರಿಯಾಗಿದೆ.

2. ವಿನಾಯಿತಿಗಳು ಅಥವಾ ಹಕ್ಕುಗಳು (Concession of Franchise)

ಕೆಲವು ಸಮಯಗಳಲ್ಲಿ ತೀವ್ರ ಸಂಘಟನೆಗಳು, ಹಿಂದುಳಿದ ದೇಶಗಳ ಆರ್ಥಿಕ ಸಂಪನ್ಮೂಲಗಳನ್ನು ಅಪಹರಿಸುವ ಪ್ರತ್ಯೇಕ ಹಕ್ಕನ್ನು ಹೊಂದಿದ್ದವು. ಇದಕ್ಕೆ ವಿನಾಯಿತಿಗಳ ಅಥವಾ ಹಕ್ಕುಗಳ ಪದ್ಧತಿ ಎಂದು ಹೆಸರು. ಟರ್ಕಿಯಲ್ಲಿ ಉದ್ದವಾದ ರೈಲುಮಾರ್ಗವನ್ನು ನಿರ್ಮಿಸುವ ಪ್ರತ್ಯೇಕ ಹಕ್ಕನ್ನು ಜರ್ಮನಿಗೆ ಸೇರಿದ ವ್ಯಾಪಾರಿಗಳ ಮತ್ತು ಇಂಜಿನಿಯರುಗಳ ಸಮಿತಿಯು ಪಡೆದಿತ್ತು.

3. ಗುತ್ತಿಗೆ ಹಕ್ಕು (Leasehold)

ಕೆಲವು ರಾಷ್ಟ್ರಗಳು ತಮ್ಮ ವಸಾಹತು ರಾಷ್ಟ್ರಗಳಿಂದ ಒಂದು ಭೂಭಾಗವನ್ನು ಗುತ್ತಿಗೆಗೆ ಪಡೆದು ಅಲ್ಲಿರುವ ಆರ್ಥಿಕ ಸಂಪನ್ಮೂಲಗಳನ್ನು ದೋಚಿಕೊಂಡು ಬಂದವು. ನಂತರ ಆ ಗುತ್ತಿಗೆಯ ಭೂಭಾಗಗಳ ಮೇಲೆ ತಮ್ಮ ರಾಜಕೀಯ ಆಧಿಕ್ಯವನ್ನು ಉಂಟುಮಾಡಿದವು. ಜರ್ಮನಿಯು ಚೀನಾದಿಂದ ಶಾಂಟುಂಗ್ ಪರ್ಯಾಯ ದ್ವೀಪದ ಮೇಲೆ 99 ವರ್ಷಗಳಿಗೆ ಗುತ್ತಿಗೆಯ ಹಕ್ಕನ್ನು ಪಡೆದಿತ್ತು.

4. ಪ್ರಾಬಲ್ಯವನ್ನು ಸ್ಥಿರಗೊಳಿಸುವುದು (Sphere of Influence)

'ಪ್ರಾಬಲ್ಯವನ್ನು ಸ್ಥಿರಗೊಳಿಸುವುದು' ಎಂಬ ಪದ್ಧತಿಯಂತೆ ಕೆಲವು ರಾಷ್ಟ್ರಗಳು ವಸಾಹತು ರಾಷ್ಟ್ರಗಳ ಕೆಲವು ಭಾಗಗಳಲ್ಲಿ ಆರ್ಥಿಕತೆಯನ್ನು ದೋಚುವ ಪ್ರತ್ಯೇಕ ಹಕ್ಕನ್ನು ಸೃಷ್ಟಿಸಿಕೊಂಡವು. ಉದಾಹರಣೆಗೆ, 1907ರಲ್ಲಿ ಇಂಗ್ಲೆಂಡ್ ಮತ್ತು ರಷ್ಯಾ, ಪರ್ಷಿಯಾ ದೇಶವನ್ನು ತಮ್ಮೊಳಗೇ ಹಂಚಿಕೊಂಡವು. ಯೂರೋಪ್ ರಾಷ್ಟ್ರಗಳು ಚೀನಾದಲ್ಲಿಯೂ ಇದೇ ಮಾರ್ಗವನ್ನು ಅನುಸರಿಸಿದವು.

5. ರಕ್ಷಣೆ ಒದಗಿಸುವುದು (protectorate)

ಭಾಗಶಃ ಎಲ್ಲಾ ಯೂರೋಪ್ ರಾಷ್ಟ್ರಗಳು ಆಫ್ರಿಕ ರಾಷ್ಟ್ರಗಳ ಪ್ರಮುಖ ಜವಾಬ್ದಾರಿಯಲ್ಲಿ ಇರುವವರೊಡನೆ (Puppet rulers) ಒಪ್ಪಂದವನ್ನು ಮಾಡಿಕೊಂಡು ಬಹುದೊಡ್ಡ ಭೂಭಾಗವನ್ನು ತಮ್ಮ ವಶಕ್ಕೆ ತೆಗೆದುಕೊಂಡು ನಂತರ ಅದನ್ನು ಸೂರೆಮಾಡಲು ಪ್ರಯತ್ನಿಸಿದರು. ಇಂತಹ ಪದ್ಧತಿಗೆ ರಕ್ಷಣೆ ಒದಗಿಸುವುದು ಎಂದು ಹೆಸರು. ಉದಾಹರಣೆಗೆ, 1912ರಲ್ಲಿ ಫ್ರಾನ್ಸ್ ದೇಶವು ಮೊರಾಕ್ಕೊ ದೇಶದ ಮೇಲೆ ತನ್ನ ಭದ್ರತೆಯನ್ನು ಸ್ಥಾಪಿಸಿತು.

6. ಆರ್ಥಿಕತೆ ಅಥವಾ ತೆರಿಗೆ ನಿಯಂತ್ರಣ (Economy or Tariff control)

ಕೆಲವು ಸಮಯಗಳಲ್ಲಿ ಬಲಯುತವಾದ ನಾಡೊಂದು ಬಲಹೀನವಾದ ನಾಡೊಂದರ ಒಟ್ಟು ಆರ್ಥಿಕತೆಯ ಅಧಿಕಾರಗಳನ್ನು ವಶಪಡಿಸಿಕೊಳ್ಳುವುದು ಆರ್ಥಿಕತೆ ಅಥವಾ ತೆರಿಗೆ ನಿಯಂತ್ರಣ ಪದ್ಧತಿಯಾಗುತ್ತದೆ. ಉದಾಹರಣೆಗೆ, ಒಂದನೇ ಮಹಾಯುದ್ಧದ ನಂತರ ಟರ್ಕಿಯಲ್ಲಿ ಎಲ್ಲಾ ಆರ್ಥಿಕ ಸಂಘಟನೆಗಳು, ಆಟ್ಟೋಮನ್ ಸಾರ್ವಜನಿಕ ಸಾಲ ಸಮಿತಿಯ ನಿಯಂತ್ರಣದಲ್ಲಿದ್ದವು. ಈ ಸಮಿತಿಯಲ್ಲಿದ್ದ ಎಲ್ಲರೂ ಯೂರೋಪ್ ಅಧಿಕಾರಿಗಳಾಗಿದ್ದರು.

7. ಆಜ್ಞಾಪದ್ಧತಿ (Mandate System)

ಇದು ಹೊಸ ಸಾಮ್ರಾಜ್ಯಶಾಹಿತ್ವದ ಅಂತಿಮ ಸ್ವರೂಪವಾಗಿದೆ. ಈ ಪದ್ಧತಿಯು 1919ರಲ್ಲಿ ನಡೆದ

ಪ್ಯಾರಿಸ್ ಶಾಂತಿ ಸಮ್ಮೇಳನದಲ್ಲಿ ದಕ್ಷಿಣ ಆಫ್ರಿಕಾಕ್ಕೆ ಸೇರಿದ ಜನರಲ್ ಜಾನ್ ಸ್ಮಟ್ ಎಂಬುವವರ ಸಲಹೆಯಂತೆ ರೂಪಿಸಲ್ಪಟ್ಟಿತು. ಹಿಂದಿನ ಅನೇಕ ವಸಾಹತು ರಾಷ್ಟ್ರಗಳಲ್ಲಿ, ಹಿಂದುಳಿದ ಭಾಗಗಳು ಸಂಯುಕ್ತ ರಾಷ್ಟ್ರಗಳ ಸಂಘಕ್ಕೆ ಒಪ್ಪಿಸಲ್ಪಟ್ಟವು. ಈ ಸಂಘವು ಕೆಲವು ನಿರ್ಬಂಧಗಳೊಡನೆ ಇಂತಹ ರಾಷ್ಟ್ರಗಳನ್ನು ನಿರ್ವಹಿಸುವಂತೆ ಹಲವು ರಾಷ್ಟ್ರಗಳನ್ನು ಕೇಳಿಕೊಂಡಿತು. ಇಂತಹ ರಾಷ್ಟ್ರಗಳನ್ನು ಆಜ್ಞಾಪೂರ್ವಕವಾದ ರಾಷ್ಟ್ರಗಳು ಎಂದು ಕರೆಯುತ್ತೇವೆ.

IV. ಸಾಮ್ರಾಜ್ಯಶಾಹಿತ್ವದ ಪರಿಣಾಮಗಳು

1. ಸಾಧಕವಾದ ಪರಿಣಾಮಗಳು: ಬಲಯುತ ರಾಷ್ಟ್ರಗಳು ಬಲಹೀನವಾದ ರಾಷ್ಟ್ರಗಳಲ್ಲಿ ಸಾರಿಗೆ ಮತ್ತು ಸಂಪರ್ಕ ಮಾಧ್ಯಮದಲ್ಲಿ ಹಲವು ಅಭಿವೃದ್ಧಿಗಳನ್ನು ಉಂಟುಮಾಡಿದವು. ಆ ರಾಷ್ಟ್ರಗಳು, ವಸಾಹತು ರಾಷ್ಟ್ರಗಳಿಗೆ ಶಿಕ್ಷಣ ನೀಡಿ ವೈದ್ಯಕೀಯ ಸೌಲಭ್ಯ ಮತ್ತು ನೈರ್ಮಲ್ಯಗಳನ್ನು ಅಭಿವೃದ್ಧಿಪಡಿಸಿದವು. ನವೀನ ವ್ಯವಸಾಯ ವಿಧಾನಗಳನ್ನು ಪರಿಚಯಿಸಿ ಆಹಾರ ಉತ್ಪನ್ನಗಳನ್ನು ಹೆಚ್ಚಿಸಿದವು. ಇಂತಹ ಬದಲಾವಣೆಗಳು ವಸಾಹತು ರಾಷ್ಟ್ರಗಳ ಜನರ ಜೀವನ ಮಟ್ಟವನ್ನು ಹೆಚ್ಚಿಸಿದವು. ಇವುಗಳು ರಾಷ್ಟ್ರಗಳಲ್ಲಿ ಶಾಂತಿ, ಶಿಸ್ತು ಮತ್ತು ಒಗ್ಗಟ್ಟನ್ನು ಬೆಳೆಸಿದವು.

2. ಬಾಧಕವಾದ ಪರಿಣಾಮಗಳು: ವಸಾಹತು ರಾಷ್ಟ್ರಗಳು ತಮ್ಮ ಸ್ವತಂತ್ರವನ್ನು ಕಳೆಡುಕೊಂಡವು. ಜನರ ದುಡಿಮೆಯನ್ನು ಶೋಷಣೆಗೊಳಪಡಿಸುವುದರ ಜೊತೆಗೆ ಅವರನ್ನು ಗುಲಾಮರನ್ನಾಗಿಯೂ ನಡೆಸಿಕೊಂಡವು. ವಸಾಹತುರಾಷ್ಟ್ರಗಳು ಕಚ್ಚಾವಸ್ತುಗಳನ್ನು ಪೂರೈಸಲೂ, ಸಿದ್ಧವಸ್ತುಗಳನ್ನು ವಾರಾಟ ವಾಡುವ ಮಾರುಕಟ್ಟೆಗಳಾಗಿಯೂ ಕಂಡುಬಂದವು. ಆ ರಾಷ್ಟ್ರಗಳಲ್ಲಿ ದೇಶೀಯ ಕೈಗಾರಿಕೆಗಳು ನಶಿಸಿಹೋಗಿ ಬಡತನ ಹಾಗೂ ನಿರುದ್ಯೋಗವು ಹೆಚ್ಚಾಯಿತು. ಪಾರಂಪರ್ಯ ವ್ಯವಸಾಯ ಪದ್ಧತಿಯು ಬದಲಾವಣೆಗೊಂಡು ಆಹಾರ ಉತ್ಪನ್ನಗಳ ಉತ್ಪತ್ತಿಯ ಬದಲಾಗಿ ಕಚ್ಚಾವಸ್ತುಗಳನ್ನು ಬೆಳೆಯುವಂತೆ ಆ ದೇಶದ ಜನರು ನಿರ್ಬಂಧಿಸಲ್ಪಟ್ಟರು. ಪಾಶ್ಚಿಮಾತ್ಯ ಸಂಸ್ಕೃತಿಯ ಪರಿಚಯ, ಪರಂಪರೆಯ ಸಂಸ್ಕೃತಿಯ ನಾಶಕ್ಕೆ ದಾರಿಯಾಯಿತು. ಗುಲಾಮಿ ವ್ಯಾಪಾರದಿಂದಾಗಿ ಕೆಲವು ಆಫ್ರಿಕಾದ ಜನಾಂಗಗಳ ಅವನತಿಗೆ ಇದುವೇ ಕಾರಣವಾಯಿತು. ಕೆಲವು ವಸಾಹತು ರಾಷ್ಟ್ರಗಳಲ್ಲಿ ವರ್ಣಬೇಧ ನೀತಿಯನ್ನು ಅನುಸರಿಸಲು ಸಾಮ್ರಾಜ್ಯಶಾಹಿತ್ವವೇ ಕಾರಣವಾಯಿತು.

ಭಾತರದಲ್ಲಿ ಸಾಮ್ರಾಜ್ಯಶಾಹಿತ್ವ

ಭಾರತದಲ್ಲಿ ಅರಸರ ನಡುವೆ ಏರ್ಪಟ್ಟ ಸ್ಪರ್ಧಾಮನೋಭಾವನೆ ಮತ್ತು ಅನೈಕ್ಯತೆಯೂ ಸಾಮ್ರಾಜ್ಯಶಾಹಿತ್ವ ಏರ್ಪಡಲು ಕಾರಣವಾಗಿದೆ. ಇಂಗ್ಲಿಷ್ ಈಸ್ಟ್ ಇಂಡಿಯಾ ವಾಣಿಜ್ಯ ಕಂಪೆನಿಯು ಕ್ರಿ.ಶ. 1600ರಲ್ಲಿ ಇಂಗ್ಲೆಂಡಿನಲ್ಲಿ ಸ್ಥಾಪಿಸಲ್ಪಟ್ಟಿತು. ಅದು ನಂತರ ಭಾರತದಲ್ಲಿ, ಆಗ ಆಡಳಿತ ನಡೆಸುತ್ತಿದ್ದ ಮೊಗಲರ ಸಾಮ್ರಾಟ ಜಹಾಂಗೀರನ ಅನುಮತಿ ಪಡೆದು ಸೂರತ್‌ನಲ್ಲಿ ತನ್ನ ವ್ಯಾಪಾರ ಕೇಂದ್ರವನ್ನು ಸ್ಥಾಪಿಸಿತು. ಅದರ ನಂತರ ಮೊಗಲರು ಬ್ರಿಟಿಷರಿಗೆ ವ್ಯಾಪಾರ ಮಾಡಲು ಹಕ್ಕನ್ನು ನೀಡಿದರಲ್ಲದೇ ಕೈಗಾರಿಕೆಗಳನ್ನೂ ಸ್ಥಾಪಿಸಲು ಹಕ್ಕುಗಳನ್ನು ನೀಡಿದರು. ಇದಕ್ಕೆ ಪ್ರತಿಫಲವಾಗಿ ಬ್ರಿಟಿಷರ ನೌಕಾಪಡೆಯು ಮೊಗಲರನ್ನು ಪೋರ್ಚುಗೀಸರಿಂದ ರಕ್ಷಿಸಿತು. ಕ್ರಿ.ಶ. 1664ರಲ್ಲಿ ಫ್ರೆಂಚ್ ಈಸ್ಟ್ ಇಂಡಿಯಾ ವಾಣಿಜ್ಯ ಕಂಪೆನಿಯು 14ನೇ ಲೂಯಿಯ ಮಂತ್ರಿಯಾಗಿದ್ದ ಕಾಲ್‌ಬರ್ಟ್ ಎಂಬುವವನಿಂದ ಸ್ಥಾಪಿಸಲ್ಪಟ್ಟಿತು. ಇದು ಭಾರತದಲ್ಲಿ ತಮ್ಮ ವ್ಯಾಪಾರ ಕೇಂದ್ರಗಳನ್ನು ಪ್ರಾರಂಭಿಸಿತು. ಇದರಿಂದಾಗಿ ಫ್ರಾನ್ಸ್–ಇಂಗ್ಲೆಂಡ್‌ಗಳ ನಡುವೆ ವೈರತ್ವ ಬೆಳೆಯಿತು. ಇದರಿಂದಾಗಿ ಕರ್ನಾಟಿಕ್ ಯುದ್ಧಗಳು ನಡೆದವು. ಕೊನೆಯಲ್ಲಿ ಭಾರತದಲ್ಲಿ ಬ್ರಿಟಿಷರು ಫ್ರಾನ್ಸ್‌ನ ಪ್ರಾಬಲ್ಯವನ್ನು ಬೇರುಸಹಿತ ಕಿತ್ತುಹಾಕಿದರು.

ಬ್ರಿಟಿಷರು ಜಾರಿಗೆ ತಂದ ತೆರಿಗೆಮುಕ್ತ ವ್ಯಾಪಾರ ಎಂಬ ಪದ್ಧತಿಗೆ ಬಂಗಾಳದ ನವಾಬ ಸಿರಾಜ್–ಉದ್–ದೌಲಾ ವಿರೋಧ ವ್ಯಕ್ತಪಡಿಸಿದನು. ಇದು 1757ರಲ್ಲಿ ರಾಬರ್ಟ್ ಕ್ಲೈವ್‌ನ ನಾಯಕತ್ವದಲ್ಲಿ ಪ್ಲಾಸಿ ಕದನವು ನಡೆಯಲು ಕಾರಣವಾಯಿತು. ಈ ಯುದ್ಧದ ಕೊನೆಯಲ್ಲಿ ಈಸ್ಟ್ ಇಂಡಿಯಾ ವಾಣಿಜ್ಯ ಕಂಪೆನಿಯು ಬಂಗಾಳ, ಬಿಹಾರ್, ಒರಿಸ್ಸಾ ಮತ್ತು ಕಲ್ಕತ್ತಾದ ಸಮೀಪದಲ್ಲಿರುವ 24 ಪರಗಣಗಳು ಮುಂತಾದ ಸ್ಥಳಗಳಲ್ಲಿ ತೆರಿಗೆಮುಕ್ತ ವ್ಯಾಪಾರ ಮಾಡಲು ತಡೆರಹಿತ ಹಕ್ಕನ್ನು ಪಡೆಯಿತು. ಈಸ್ಟ್ ಇಂಡಿಯಾ ವಾಣಿಜ್ಯ ಕಂಪೆನಿಯು ಬಕ್ಸಾರ್ ಕದನದ (ಕ್ರಿ.ಶ. 1764) ನಂತರ ಬಂಗಾಳವನ್ನು ಆಳುವ ಪ್ರತ್ಯೇಕ ಹಕ್ಕನ್ನು ಮೊಗಲರ ಅರಸ ಷಾ ಆಲಂನಿಂದ ಪಡೆಯಿತು. ಇದುವೇ ಈಸ್ಟ್ ಇಂಡಿಯಾ ವಾಣಿಜ್ಯ ಕಂಪೆನಿಯ ಆಳ್ವಿಕೆಯ ಪ್ರಾರಂಭವಾಗಿದೆ. ಲಾರ್ಡ್ ವೆಲ್ಲೆಸ್ಲಿಯು ತನ್ನ ಸಹಾಯಕ ಸೈನ್ಯ ಪದ್ಧತಿಯ

ಮೂಲಕವೂ, ಲಾರ್ಡ್ ಡಾಲ್‌ಹೌಸಿಯು ತನ್ನ ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯ ಮೂಲಕವೂ ಈಸ್ಟ್ ಇಂಡಿಯಾ ವಾಣಿಜ್ಯ ಕಂಪೆನಿಯ ಆಳ್ವಿಕೆಯನ್ನು ವಿಸ್ತರಿಸಿದರು. ಇದನ್ನು ವಿರೋಧಿಸಿ 1857ರಲ್ಲಿ ಮಹಾಕ್ರಾಂತಿ ನಡೆಯಿತು. ಇದನ್ನು ಅಡಗಿಸಿದ ನಂತರ ಇಂಗ್ಲೆಂಡಿನ ಮಹಾರಾಣಿ ವಿಕ್ಟೋರಿಯಾ ಅವರ ಹೆಸರಿನಿಂದ 1858ರಲ್ಲಿ ಘೋಷಿಸಿದ ಮಹಾಪ್ರಕಟಣೆಗಳ ಮೂಲಕ ಈಸ್ಟ್ ಇಂಡಿಯಾ ವಾಣಿಜ್ಯ ಕಂಪೆನಿಯ ಆಳ್ವಿಕೆಗೆ ಅಂತ್ಯಹಾಡಿತು. ವಿಕ್ಟೋರಿಯಾ ಮಹಾರಾಣಿಯು ಭಾರತವನ್ನು ತಮ್ಮ ನೇರ ಆಳ್ವಿಕೆಗೆ ಒಳಪಡಿಸಿಕೊಂಡರು. ಅಂದಿನಿಂದ 1947ರಲ್ಲಿ ಸ್ವಾತಂತ್ರ್ಯವನ್ನು ಗಳಿಸುವವರೆಗೆ ಭಾರತವು ಬ್ರಿಟಿಷ್ ಸರ್ಕಾರದ ಅಧೀನದಲ್ಲಿ ಒಂದು ವಸಾಹತು ರಾಷ್ಟ್ರವಾಗಿತ್ತು.

ಚೀನಾದಲ್ಲಿ ಸಾಮ್ರಾಜ್ಯಶಾಹಿತ್ವ

ಚೀನಾದಲ್ಲಿ ಸಾಮ್ರಾಜ್ಯಶಾಹಿತ್ವವು ಉಂಟಾದುದು ಒಂದು ಆಸಕ್ತಿದಾಯಕವಾದ ಸಂಗತಿಯಾಗಿದೆ. ಪ್ರಾಚೀನ ನಾಗರೀಕತೆಯನ್ನು ತಮ್ಮದಾಗಿಸಿಕೊಂಡ ಚೀನಿಯರು ತಮ್ಮನ್ನು ಇತರರಿಗಿಂತ ಉನ್ನತವಾದವರೆಂದೂ, ನಾಗರೀಕತೆಯುಳ್ಳವರೆಂದೂ ಭಾವಿಸಿದ್ದರು. ಏಷ್ಯಾರಾಷ್ಟ್ರಗಳಿಗೆ ಸೇರಿದ ವ್ಯಾಪಾರಿಗಳು ಚೀನಾ ಸಂಸ್ಕೃತಿಯನ್ನು ಸ್ವೀಕರಿಸಿದ್ದಾಗ್ಯೂ, ಯೂರೋಪ್ ವ್ಯಾಪಾರಿಗಳು ಅದನ್ನು ನಿರಾಕರಿಸಿದರು. ಆದ್ದರಿಂದಲೇ 1757ರಲ್ಲಿ ಚೀನಾ ಸಾಮ್ರಾಟರು ವಿದೇಶಿ ವ್ಯಾಪಾರವನ್ನು ಕ್ಯಾಂಟನ್(Canton) ಮತ್ತು ಮಕಾವ್ (Macao) ನಗರಗಳೊಡನೆ ನಿಲ್ಲಿಸುವಂತೆ ಆಜ್ಞೆ ಮಾಡಿದರು. ಇದರಿಂದ ಯೂರೋಪಿಯನ್ನರು ಚೀನಾದ ಮೇಲೆ ಸಿಟ್ಟಾದರು. ಅವರು ಅಕ್ರಮವಾದ ವಾಣಿಜ್ಯವನ್ನು ಅನುಸರಿಸಿದರು. ಇದುವೇ ಪ್ರಖ್ಯಾತ ಅಫೀಮು ಯುದ್ಧಕ್ಕೆ ನಾಂದಿಯಾಯಿತು.

ಒಂದನೇ ಅಫೀಮು ಯುದ್ಧ ಕ್ರಿ.ಶ. 1839–ಕ್ರಿ.ಶ.1842


ಬ್ರಿಟಿಷರು ಅಫೀಮು ಗಿಡವನ್ನು ಭಾರತದಲ್ಲಿ ಬೆಳೆಸಿ ಅದನ್ನು ಕಾನೂನುಬಾಹಿರವಾಗಿ ಚೀನಾದಲ್ಲಿ ಚೀನಾ ವಸ್ತುಗಳಿಗೆ ಬದಲಾಗಿ ಕೆಲವು ಸಮಯಗಳಲ್ಲಿ ಚಿನ್ನಕ್ಕೆ ಸಮನಾಗಿಯೂ ಮಾರಾಟ ಮಾಡಿದರು. ಇದು ತಮ್ಮ ಶಾಂತಿಗೆ ಭಂಗವನ್ನುಂಟುಮಾಡುವುದಾಗಿ ಚೀನಿಯರು ಭಾವಿಸಿದರು. ಅದೇ ವೇಳೆ ಅಧಿಕ ತೆರಿಗೆ ವಿಧಿಸುವುದು ಮತ್ತು ಬೆಳೆಯುತ್ತಿರುವ ಅಫೀಮು ವ್ಯಾಪಾರವನ್ನು ನಿಗ್ರಹಿಸಲು ಚೀನಾ ಸರ್ಕಾರವು ಜರುಗಿಸಿದ ಕ್ರಮವು ಯೂರೋಪ್ ವ್ಯಾಪಾರಿಗಳನ್ನು ಅಸೂಯೆಗೊಳ್ಳುವಂತೆ ಮಾಡಿತು. 1800ರಲ್ಲಿ ಚೀನಾ ಸಾಮ್ರಾಜ್ಯವು ಅಫೀಮು ವ್ಯಾಪಾರವನ್ನು ನಿಷೇಧಿಸಿತು. ಹೀಗಿದ್ದರೂ ಅಫೀಮು ವ್ಯಾಪಾರವು ದಿನಗಳೆದಂತೆ ಅಭಿವೃದ್ಧಿ ಹೊಂದುತ್ತಲೇ ಇದ್ದಿತು. ಅಫೀಮು ವ್ಯಾಪಾರದಲ್ಲಿ ಪ್ರಮುಖ ಪಾತ್ರ ವಹಿಸಿದ ಬ್ರಿಟಿಷರು ಚೀನಾ ಸಾಮ್ರಾಜ್ಯದ ನಿರ್ಬಂಧವನ್ನು ಅಂತ್ಯಗೊಳಿಸಲು ಚೀನಾದ ಮೇಲೆ 1840ರಲ್ಲಿ ಯುದ್ಧ ಹೂಡಿದರು. ಇದನ್ನೇ ಒಂದನೇ ಅಫೀಮು ಯುದ್ಧ ಎಂದು ಕರೆಯಲಾಯಿತು. ಈ ಯುದ್ಧದಲ್ಲಿ ಚೀನಾ ಸೋಲಿಸಲ್ಪಟ್ಟು ಕ್ರಿ.ಶ.1842ರಲ್ಲಿ ನಾನ್‌ಕಿಂಗ್ ಒಪ್ಪಂದವನ್ನು ಮಾಡಿಕೊಂಡಿತು. ಅದರಂತೆ ಚೀನಾ ಹಾಂಕಾಂಗ್ ದ್ವೀಪವನ್ನು ಶಾಶ್ವತವಾಗಿ ಇಂಗ್ಲೆಂಡಿಗೆ ಧಾರೆ ಎರೆದುಕೊಟ್ಟಿತು. ಮತ್ತು ಯುದ್ಧದ ನಷ್ಟದ ಪರಿಹಾರವಾಗಿ ಅಪಾರ ಮೊತ್ತವನ್ನು ನೀಡಿದುದಲ್ಲದೇ ಐದು ಬಂದರುಗಳಲ್ಲಿ ವ್ಯಾಪಾರ ಮಾಡಲು ಬ್ರಿಟಿಷರಿಗೆ ಅನುಮತಿ ನೀಡಿತು. ಕ್ರಿಮಿನಲ್ ವ್ಯಾಜ್ಯಗಳಲ್ಲಿ ಬ್ರಿಟಿಷರಿಗೆ ಅಧಿಕವಾದ ಸವಲತ್ತುಗಳನ್ನು ಕೊಡಲಾಯಿತು.

ತೈಪಿಂಗ್ ದಂಗೆ ಕ್ರಿ.ಶ. 1854

ನಾನ್‌ಕಿಂಗ್ ಒಪ್ಪಂದವನ್ನು ಅನುಸರಿಸಿ ಅಮೆರಿಕನ್ನರು, ಫ್ರೆಂಚರು ಮತ್ತು ಇತರ ವಿದೇಶಿಯರು ಹಲವು ಒಪ್ಪಂದಗಳನ್ನು ಚೀನಾದೊಡನೆ ಮಾಡಿಕೊಂಡರು. ಆದ್ದರಿಂದಲೇ 1854ರಲ್ಲಿ ಮಂಚು ಅರಸರ ಮತ್ತು ವಿದೇಶಿಯರ ವಿರುದ್ಧವಾಗಿ ಚೀನಿಯರು ಕಲಹದಲ್ಲಿ ತೊಡಗಿದರು. ಈ ಕಲಹವನ್ನು ತೈಪಿಂಗ್ ದಂಗೆ(Taiping Rebellion) ಎಂದು ಕರೆಯಲಾಯಿತು. ಈ ದಂಗೆಯನ್ನು ತ್ವರಿತವಾಗಿ ನಿಗ್ರಹಿಸಲಾಯಿತು.

ಎರಡನೇ ಅಫೀಮು ಯುದ್ಧ ಕ್ರಿ.ಶ.1857– ಕ್ರಿ.ಶ.1860

ವಿದೇಶಿಯರು ತಮಗೆ ಹಲವು ಬಂದರುಗಳು ಮುಕ್ತವಾಗಿ ತೆರೆದಿರಬೇಕು ಎಂದು ಕೋರಿದರು. ಇದನ್ನು ಮಂಚು ಅರಸರು ನಿರಾಕರಿಸಿದಾಗ ಬ್ರಿಟಿಷ್ ಮತ್ತು ಫ್ರೆಂಚ್ ಸೈನ್ಯಗಳು ಕ್ಯಾಂಟನ್ ಬಂದರನ್ನು ದಾಳಿಮಾಡಿ ವಶಪಡಿಸಿಕೊಂಡವು. ಇದನ್ನು ಎರಡನೇ ಅಫೀಮು ಯುದ್ಧ ಎಂದು ಕರೆಯಲಾಯಿತು. ಇದರಲ್ಲಿ ಚೀನಿಯರ ಸೋಲು ಕ್ರಿ.ಶ.1860ರಲ್ಲಿ ಪೀಕಿಂಗ್ ಒಪ್ಪಂದವು ಏರ್ಪಡಲು ಕಾರಣವಾಯಿತು. ಈ ಒಪ್ಪಂದದ ಮೂಲಕ


ಏಷ್ಯಾದಲ್ಲಿ ಸಾಮ್ರಾಜ್ಯಶಾಹಿತ್ವ
ಸಾಖಲಿನ್ ದ್ವೀಪ
ಮಂಗೋಲಿಯ
ಮಂಚೂರಿಯ
ಉ
ಜಪಾನ್
ಪೀಕಿಂಗ್
ಕೊರಿಯ
ಟರ್ಕಿ
ಇರಾನ್
ಚೀನಾ
ನಾನ್‌ಕಿಂಗ್
ಷಾಂಗಾಯ್
ಪೆಸಿಫಿಕ್ ಮಹಾಸಾಗರ
ಫಾರ್‌ಮೋಸ (ತೈವಾನ್)
ಪಾಕಿಸ್ತಾನ
ಟಿಬೆಟ್
ಕ್ಯಾಂಟನ್
ಹಾಂಗ್‌ಕಾಂಗ್
ಫಿಲಿಫೈನ್ಸ್
ಸೌದಿಅರೇಬಿಯ
ನೇಪಾಳ
ಬರ್ಮಾ
ಭಾರತ
ಥೈಲ್ಯಾಂಡ್
ಅರಬ್ಬಿಸಮುದ್ರ
ಬಂಗಾಳಕೊಲ್ಲಿ
ಮಲೇಶಿಯಾ
ಶ್ರೀಲಂಕ
ಸಿಂಗಾಪುರ
ಹಿಂದೂಮಹಾಸಾಗರ

ಬ್ರಿಟಿಷರು ಕೌಲೂನ್(Kowloon) ಬಂದರನ್ನು ಪಡೆದರಲ್ಲದೇ ಹಲವು ಬಂದರುಗಳನ್ನೂ ಚೀನಾ ಸಾಮ್ರಾಜ್ಯವು ವಿದೇಶಿಯರಿಗೆ ಧಾರೆ ಎರೆದುಕೊಟ್ಟಿತು.

ಬಾಕ್ಸರ್ ದಂಗೆ

ಎರಡನೇ ಅಫಿಮು ಯುದ್ಧದ ನಂತರ ಚೀನಾದಲ್ಲಿ ಕೆಲಕಾಲ ಶಾಂತಿಯುತ ಪರಿಸ್ಥಿತಿ ನೆಲೆಸಿತ್ತು. 1894ರಲ್ಲಿ ನಡೆದ ಚೀನಾ–ಜಪಾನ್ ಯುದ್ಧದಲ್ಲಿ ಭರ್ಜರಿ ಸೋಲುಂಟಾದ ಕಾರಣದಿಂದ ಚೀನಾ ಫಾರ್‌ಮೋಸಾ(Formosa)ದ್ವೀಪ (ತೈವಾನ್) ವನ್ನು ಜಪಾನಿಯರಿಗೆ ಒಪ್ಪಿಸಿತು. ಇದರಿಂದ ಚೀನಿಯರು



ಚಕ್ರವರ್ತಿನಿ ದವೇಗರ್‌ಸೂಸಿ

ಮಂಚು ಅರಸರ ಮೇಲೆ ಕೋಪಗೊಂಡರು. ಹಳೆಯ ಬುದ್ಧ ಎಂದು ಕರೆಯಲ್ಪಟ್ಟ ಚೀನಾ ಚಕ್ರವರ್ತಿನಿ ದವೇಗರ್(Empress Dowager) ಸರ್ಕಾರದ ಮೇಲೆ ಕೋಪಗೊಂಡ ಚೀನಾದ ಯುವಕರನ್ನು ವಿದೇಶಿಯರ ಕಡೆಗೆ ದಿಕ್ಕುಬದಲಾಯಿಸಿದರು. ಚಕ್ರವರ್ತಿನಿಯ ಪ್ರೇರೇಪಣೆಯಂತೆ ಚೀನಾದ ಯುವಕರು ದಂಗೆಯಲ್ಲಿ ತೊಡಗಿದರು. ದಂಗೆಕೋರರು(ಬಾಕ್ಸರ್‌ಗಳು) ಬ್ರಿಟಿಷ್, ಫ್ರೆಂಚ್ ಮತ್ತು ಜರ್ಮನಿ ವಸಾಹತುಗಳು ಮತ್ತು ಕ್ರೈಸ್ತರ ಮೇಲೆ 1899ರಲ್ಲಿ ದಾಳಿಮಾಡಿದರು. ಇದು ಬಾಕ್ಸರ್ ದಂಗೆ ಎಂದು ಕರೆಯಲ್ಪಟ್ಟಿತು.

ಸಾಮ್ರಾಜ್ಯಶಾಹಿತ್ವದ ಅಂತ್ಯ

ವಿದೇಶಿಯರ ಸಂಯೋಜನೆಯ ಸೈನ್ಯವು ಬಾಕ್ಸರ್ ದಂಗೆಯನ್ನು ಅಡಗಿಸಿದ ನಂತರ ಚೀನಾದ ರಾಜಧಾನಿ ಪೀಕಿಂಗನ್ನು ತಲುಪಿತು. ಆದರೆ ಚಕ್ರವರ್ತಿನಿ ದವೇಗರ್ ತಲೆಮರೆಸಿಕೊಂಡು ಓಡಿಹೋದರು. ನಂತರ ಅಮೆರಿಕಾ ಮತ್ತು ಇಂಗ್ಲೆಂಡ್‌ದೇಶಗಳು ತೆರೆದ ಬಾಗಿಲು ನೀತಿ(Open door policy) ರೂಪಿಸಿದವು. ಇದರಂತೆ ಚೀನಾ ದೇಶವನ್ನು ವಿದೇಶಿಯರು ತಮ್ಮಗಳ ನಡುವೆ ವ್ಯಾಪಾರದ ಹಕ್ಕನ್ನು ರಕ್ಷಿಸಿಕೊಳ್ಳಲು ಹಂಚಿಕೊಂಡರು. ಹೀಗೆ ಚೀನಾ ಅಂತರರಾಷ್ಟ್ರೀಯ ವಸಾಹತು ದೇಶವಾಗಿ ಬದಲಾವಣೆಯಾಯಿತು. ಬಾಕ್ಸರ್ ಕಲಹದಿಂದ ಕಲಿತ ಪಾಠ 1911ರಲ್ಲಿ ನಡೆದ ಕ್ರಾಂತಿಗೆ ಬೀಜ ಬಿತ್ತಿ ಚೀನಾ, ಡಾ॥ಸನ್‌ಯಾತ್‌ಸೆನ್ ರವರ ನಾಯಕತ್ವದಲ್ಲಿ ಗಣರಾಜ್ಯ ದೇಶವಾಗಿ ಸ್ಥಾಪಿತವಾಗಲು ಕಾರಣವಾಯಿತು.

ಅಭ್ಯಾಸ

ಅ. ಸರಿಯಾ ಉತ್ತರವನ್ನು ಆರಿಸಿ ಬರೆಯಿರಿ.

1. ಜರ್ಮನಿ ಮತ್ತು ಇಟಲಿ ದೇಶಗಳು ಏಕೀಕರಣಗೊಳಿಸಲ್ಪಟ್ಟ ವರ್ಷ

   ಅ) 1870 ಆ)1872 ಇ) 1780 ಈ)1782

2. ಕಚ್ಚಾ ವಸ್ತುಗಳಿಗೆ ಅಧಿಕ ಬೇಡಿಕೆಯನ್ನುಂಟುಮಾಡಿದುದು

   ಅ) ಕೈಗಾರಿಕಾ ಕ್ರಾಂತಿ ಆ) ಮಾಹಿತಿ ತಂತ್ರಜ್ಞಾನ ಕ್ರಾಂತಿ

   ಇ) ಫ್ರಾನ್ಸ್ ಕ್ರಾಂತಿ ಈ) ಕೃಷಿ ಕ್ರಾಂತಿ

3. 1870 ರಿಂದ 1945ರವರೆಗೆ ಯೂರೋಪ್ ರಾಷ್ಟ್ರಗಳು ಅನುಸರಿಸಿದ ಸಾಮ್ರಾಜ್ಯಶಾಹಿ ನೀತಿ

   ಅ) ನವೀನ ಸಾಮ್ರಾಜ್ಯಶಾಹಿತ್ವ ಆ) ರಾಜಕೀಯ ಸಾಮ್ರಾಜ್ಯಶಾಹಿತ್ವ

   ಇ) ಹೊಸ ಸಾಮ್ರಾಜ್ಯಶಾಹಿತ್ವ ಈ) ಸೈನಿಕ ಸಾಮ್ರಾಜ್ಯಶಾಹಿತ್ವ

4. ಚೀನಾ ರಾಜಕೀಯ ರೀತಿಯಾದ ಸ್ವತಂತ್ರವನ್ನು ಈ ಆಳ್ವಿಕೆಯ ಕಾಲದಲ್ಲಿ ಪಡೆಯಿತು

ಅ) ಚಿನ್ ಆಳ್ವಿಕೆಯ ಕಾಲದಲ್ಲಿ ಆ) ಷಾಂಗ್ ಆಳ್ವಿಕೆಯ ಕಾಲದಲ್ಲಿ

ಇ)ಚೌ ಆಳ್ವಿಕೆಯ ಕಾಲದಲ್ಲಿ ಈ)ಮಂಚು ಆಳ್ವಿಕೆಯ ಕಾಲದಲ್ಲಿ

5. ಸರಕುಗಳ ಸಾಗಾಣಿಕೆಯು ಇದರ ಅಭಿವೃದ್ಧಿಯಿಂದಾಗಿ ಅಧಿಕವಾಯಿತು

ಅ) ರೈಲುಮಾರ್ಗದ ಆ) ರಸ್ತೆಮಾರ್ಗದ ಇ) ವಾಯುಮಾರ್ಗದ ಈ) ಜಲಮಾರ್ಗದ

6. ಪ್ರಾಬಲ್ಯವನ್ನು ಸ್ಥಿರಗೊಳಿಸುವ ನೀತಿಯನ್ನು ಯೂರೋಪ್ ರಾಷ್ಟ್ರಗಳು ಅಳವಡಿಸಿದುದು

ಅ) ಜಪಾನಿನಲ್ಲಿ ಆ) ಚೀನಾದಲ್ಲಿ ಇ) ಭಾರತದಲ್ಲಿ ಈ) ಬರ್ಮಾದಲ್ಲಿ

7. ಇಂಗ್ಲೀಷ್ ಈಸ್ಟ್ ಇಂಡಿಯಾ ವಾಣಿಜ್ಯ ಕಂಪೆನಿಯು ಪ್ರಾರಂಭಿಸಲ್ಪಟ್ಟ ವರ್ಷ

ಅ) 1600 ಆ) 1664 ಇ) 1644 ಈ) 1700

8. ಫ್ರೆಂಚ್ ಈಸ್ಟ್ ಇಂಡಿಯಾ ವಾಣಿಜ್ಯ ಕಂಪೆನಿಯನ್ನು ಸ್ಥಾಪಿಸಿದವರು

ಅ) 14ನೇ ಲೂಯಿ ಆ) ಕಾಲ್‌ಬರ್ಟ್ ಇ) 16ನೇ ಲೂಯಿ ಈ) ಡಿ ಬ್ರಾಸಾ

9. ಎರಡನೇ ಅಫೀಮು ಯುದ್ಧವನ್ನು ಮುಕ್ತಾಯಕ್ಕೆ ತಂದ ಒಪ್ಪಂದ

ಅ) ಪೀಕಿಂಗ್ ಆ) ನಾನ್‌ಕಿಂಗ್ ಇ) ಕೇಂಟೂ ಈ) ಸಂಟೂಂಗ್

10. ಅಮೆರಿಕಾ ಸಂಯುಕ್ತ ಸಂಸ್ಥಾನ ಮತ್ತು ಇಂಗ್ಲೆಂಡ್ ಚೀನಾ ದೇಶಕ್ಕಾಗಿ ಅಳವಡಿಸಿದ ನೀತಿ

ಅ) ತೆರದ ಬಾಗಿಲು ನೀತಿ ಆ) ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ

ಇ) ರಕ್ಷಿಸಲ್ಪಟ್ಟ ವ್ಯಾಪಾರ ನೀತಿ ಈ) ಭೂಮಿ ನೀಡುವಿಕೆ ನೀತಿ

11. ಇಂಗ್ಲೀಷ್ ಈಸ್ಟ್ ಇಂಡಿಯಾ ವಾಣಿಜ್ಯ ಕಂಪೆನಿಗೆ ಸೂರತ್‌ನಲ್ಲಿ ವ್ಯಾಪಾರ ಕೇಂದ್ರಗಳನ್ನು ಸ್ಥಾಪಿಸಲು ಅನುಮತಿ ನೀಡಿದ ರಾಜ

ಅ) ಷಾಜಹಾನ್ ಆ) ಜಹಾಂಗೀರ್ ಇ) ಔರಂಗಜೇಬ್ ಈ) ಹುಮಾಯೂನ್

12. ಚೀನಾ ಗಣರಾಜ್ಯದ ಸ್ಥಾಪಕರು

ಅ) ಡಾ॥ ಸನ್‌ಯಾತ್ ಸೆನ್ ಆ) ಚೌ ಎನ್ ಲಾಯ್

ಇ) ಮಾವೋ ತ್ಸೆ ತುಂಗ್ ಈ) ಚಿಯಾಂಗ್ ಕೈ ಶೇಕ್

ಆ. ಹೊಂದಿಸಿ ಬರೆಯಿರಿ

1.	ಕರ್ನಾಟಿಕ್ ಯುದ್ಧಗಳು	ಏಷ್ಯಾ
2.	ರಕ್ಷಣೆ ಒದಗಿಸುವುದು	ಚೀನಾ
3.	ವರ್ಣಬೇಧ ನೀತಿ	ಇಂಗ್ಲೆಂಡ್
4.	ಹಾಂಕಾಂಗ್ ದ್ವೀಪ	ಭಾರತದಲ್ಲಿ ಫ್ರಾನ್ಸ್ ಆಧಿಕ್ಯ ಅಂತ್ಯ
5.	ಅಂತರರಾಷ್ಟ್ರೀಯ ವಸಾಹತು	ಫ್ರಾನ್ಸ್
		ಸಾಮ್ರಾಜ್ಯಶಾಹಿತ್ವ
		ಆಫ್ರಿಕ

ಇ. ಸಂಕ್ಷಿಪ್ತವಾಗಿ ಉತ್ತರಿಸಿ

1. ಸಾಮ್ರಾಜ್ಯಶಾಹಿತ್ವ – ವ್ಯಾಖ್ಯಾನಿಸಿ.
2. ವಸಾಹತುಶಾಹಿತ್ವ ಎಂದರೇನು?
3. ಸೈನಿಕ ಸಾಮ್ರಾಜ್ಯಶಾಹಿತ್ವದ ಬಗ್ಗೆ ಬರೆಯಿರಿ.
4. ಸಾಮ್ರಾಜ್ಯಶಾಹಿತ್ವದ ಉದಯಕ್ಕೆ ಕೈಗಾರಿಕಾ ಕ್ರಾಂತಿ ಹೇಗೆ ಮುಖ್ಯ ಕಾರಣವಾಯಿತು?
5. ಆರ್ಥಿಕ ಮತ್ತು ತೆರಿಗೆ ನಿಯಂತ್ರಣದ ಬಗ್ಗೆ ಬರೆಯಿರಿ.
6. ಆಜ್ಞಾ ಪದ್ಧತಿಯ ಬಗ್ಗೆ ಲಘುವಾಗಿ ಬರೆಯಿರಿ.
7. ಒಂದನೇ ಅಫೀಮು ಯುದ್ಧಕ್ಕೆ ಕಾರಣಗಳೇನು?
8. ಚೀನಾ ಅಂತರರಾಷ್ಟ್ರೀಯ ವಸಾಹತು ದೇಶವಾಗಿ ಹೇಗೆ ಬದಲಾವಣೆಯಾಯಿತು?
9. ತೈಪಿಂಗ್ ದಂಗೆಯ ಬಗ್ಗೆ ಬರೆಯಿರಿ.

ಈ. ಕೆಳಗಿನ ಪ್ರತಿಯೊಂದು ಶೀರ್ಷಿಕೆಗಳಡಿಯಲ್ಲಿರುವ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ.

1. ಸಾಮ್ರಾಜ್ಯಶಾಹಿತ್ವದ ಉದಯಕ್ಕೆ ಕಾರಣಗಳು.

   ಅ) 19ನೇ ಶತಮಾನದ ಅಂತ್ಯದಲ್ಲಿ ಯಾವುದನ್ನು ನಾಗರೀಕತೆಯೆಂದು ಭಾವಿಸಲಾಯಿತು?

   ಆ) ಬಿಳಿಯರ ಭಾರ ಎಂದು ಯಾವುದನ್ನು ಯೂರೋಪಿಯನ್ನರು ಭಾವಿಸಿದರು?

   ಇ) ಯೂರೋಪಿನ ರಾಷ್ಟ್ರಗಳು ವಸಾಹತು ದೇಶಗಳನ್ನು ಸ್ಥಾಪಿಸಲು ಮುಂದೆ ಬರಲು ಕಾರಣವೇನು?

   ಈ) ಸಾಮ್ರಾಜ್ಯಶಾಹಿತ್ವ ನೀತಿಯನ್ನು ಪ್ರೋತ್ಸಾಹಿಸಿದುದು ಯಾವುವು?

2. ಪ್ಲಾಸಿ ಮತ್ತು ಬಕ್ಸಾರ್ ಕದನ.

   ಅ) 1757ರಲ್ಲಿ ಬಂಗಾಳದ ನವಾಬನಾಗಿದ್ದವನು ಯಾರು?

   ಆ) ಸಹಾಯಕ ಸೈನ್ಯ ಪದ್ಧತಿಯನ್ನು ಪರಿಚಯಿಸಿದವನು ಯಾರು?

   ಇ) ಲಾರ್ಡ್ ಡಾಲ್‌ಹೌಸಿಯ ನೀತಿ ಯಾವುದು?

   ಈ) ವಿಕ್ಟೋರಿಯಾ ಮಹಾರಾಣಿಯ ಪ್ರಕಟಣೆಯನ್ನು ಯಾವಾಗ ಪ್ರಕಟಿಸಲಾಯಿತು?

3. ಚೀನಾ ಸಾಮ್ರಾಜ್ಯಶಾಹಿತ್ವ

   ಅ) ಕ್ಯಾಂಟನ್ ಮತ್ತು ಮಕಾವ್ ನಗರಗಳಿಗೆ ವ್ಯಾಪಾರವನ್ನು ಏಕೆ ನಿರ್ಬಂಧಿಸಲಾಯಿತು?

   ಆ) ಚೀನಾ ಯಾವ ಯಾವ ಪದಾರ್ಥಗಳನ್ನು ಇಂಗ್ಲೆಂಡಿಗೆ ಮಾರಾಟ ಮಾಡಿತು?

   ಇ) ಚೀನಾದ ರಾಣಿಯ ಹೆಸರೇನು? ಅವರನ್ನು ಹೇಗೆ ಕರೆಯುತ್ತಿದ್ದರು?

   ಈ) ತೆರೆದ ಬಾಗಿಲು ನೀತಿಯನ್ನು ಜಾರಿಗೆ ತಂದವರು ಯಾರು?

4. ಬಾಕ್ಸರ್ ದಂಗೆ.

ಅ) ಚೀನಾ– ಜಪಾನ್ ಯುದ್ಧದ ಪರಿಣಾಮವೇನು?

ಆ) ಚೀನಾ ಜಪಾನಿಗೆ ನೀಡಿದ ದ್ವೀಪ ಯಾವುದು?

ಇ) ಬಾಕ್ಸರ್ ದಂಗೆಗೆ ಕಾರಣವೇನು?

ಈ) ಬಾಕ್ಸರ್‌ಗಳು ಏನು ಮಾಡಿದರು?

ಊ. ಕೆಳಕಂಡ ಪ್ರಶ್ನೆಗಳಿಗೆ ಒಂದು ಪುಟದಲ್ಲಿ ಉತ್ತರಿಸಿ.

1. ಸಾಮ್ರಾಜ್ಯಶಾಹಿತ್ವಕ್ಕೆ ಕಾರಣಗಳೇನು?
2. ಸಾಮ್ರಾಜ್ಯಶಾಹಿತ್ವದ ತಂತ್ರಗಳನ್ನು ವಿವರಿಸಿ.
3. ಸಾಮ್ರಾಜ್ಯಶಾಹಿತ್ವದ ಪರಿಣಾಮಗಳು ಯಾವುವು?
4. ಒಂದನೇ ಮತ್ತು ಎರಡನೇ ಅಫೀಮು ಯುದ್ಧಗಳ ಬಗ್ಗೆ ವಿವರಿಸಿ.

ಋ. ಚಟುವಟಿಕೆ

ಏಷ್ಯಾದ ಭೂಪಟದಲ್ಲಿ ಕೆಳಕಂಡ ಸ್ಥಳಗಳನ್ನು ಗುರುತಿಸಿ.

ಪೀಕಿಂಗ್, ಕ್ಯಾಂಟನ್, ಹಾಂಕಾಂಗ್, ಫಾರ್‌ಮೋಸಾ, ಕೊರಿಯಾ, ನಾನ್‌ಕಿಂಗ್, ಮಂಚುರಿಯಾ, ಸಾಕಲಿನ್ ದ್ವೀಪಗಳು, ಜಪಾನ್, ಪೆಸಿಫಿಕ್ ಸಾಗರ.

2. ಮೊದಲನೆಯ ಮಹಾಯುದ್ಧ(ಕ್ರಿ.ಶ. 1914 – ಕ್ರಿ.ಶ. 1918)
ಸಂಯುಕ್ತ ರಾಷ್ಟ್ರಗಳ ಸಂಘ

ಕ್ರಿ.ಶ. 19ನೇ ಶತಮಾನದಲ್ಲಿ ರಾಜನೀತಿ ನಿಪುಣರು ಮತ್ತು ವಿಜ್ಞಾನಿಗಳು ನಿರೀಕ್ಷಿಸಿದಂತೆ ವಿಶ್ವ ಶಾಂತಿಗೆ ಉಂಟಾದ ಧಕ್ಕೆಯೇ **ಮೊದಲನೇ ಮಹಾಯುದ್ಧ** ಎಂಬುದಾಗಿ ಅಭಿಪ್ರಾಯಪಡಲಾಗಿದೆ.

ಪ್ರಪಂಚದ ಇತಿಹಾಸದಲ್ಲಿ ಪ್ರಪ್ರಥಮವಾಗಿ ವಿಶ್ವದ ಬಲಯುತ ರಾಷ್ಟ್ರಗಳು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಈ ಯುದ್ಧದಲ್ಲಿ ಭಾಗಿಯಾದವು. ಆದ್ದರಿಂದ ಈ ಯುದ್ಧವು ಮಹಾಯುದ್ಧ ಎಂದು ಕರೆಯಲ್ಪಟ್ಟಿತು. ಪ್ರಪಂಚದಲ್ಲಿರುವ ಎಲ್ಲಾ ದೇಶಗಳಲ್ಲಿ ಮಾನವ ಮತ್ತು ಇತರ ಸಂಪನ್ಮೂಲಗಳ ಮೇಲೆ ಪರಿಣಾಮ ಬೀರಿದುದರಿಂದ ಈ ಯುದ್ಧವು ಮೊದಲನೇ ಮಹಾಯುದ್ಧ ಎಂದು ಕರೆಯಲ್ಪಟ್ಟಿತು.

I.ಯುದ್ಧಕ್ಕೆ ಕಾರಣಗಳು

1.ಜರ್ಮನಿಯ ಮಹದಾಸೆ

1870ರಲ್ಲಿ ಜರ್ಮನಿಯ ಏಕೀಕರಣವು ಜರ್ಮನಿಯನ್ನು ಕೈಗಾರಿಕೆಯಲ್ಲಿ ಅಭಿವೃದ್ಧಿ ಹೊಂದುವಂತೆ ಮಾಡಿತು. ಇದರ ಪರಿಣಾಮವಾಗಿ ಕಚ್ಚಾ ವಸ್ತುಗಳು, ಸಿದ್ಧವಸ್ತುಗಳನ್ನು ಮಾರಾಟ ಮಾಡಲು ಮಾರುಕಟ್ಟೆಗಳು ಅಗತ್ಯವಾದವು. ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳಂತೆ ಜರ್ಮನಿಯ ವಸಾಹತು ರಾಷ್ಟ್ರಗಳು ಸಂಪದ್ಭರಿತವಾಗಿರಲಿಲ್ಲ. ಕೈಸರ್ ಎರಡನೇ ವಿಲಿಯಂ ಇಡೀ ವಿಶ್ವವನ್ನು ಆಳ್ವಿಕೆ ನಡೆಸುವ ಹಕ್ಕು ಮತ್ತು ಸಾಮರ್ಥ್ಯ ಜರ್ಮನಿಗೆ ಮಾತ್ರ ಇದೆ ಎಂದು ಭಾವಿಸಿದನು. ಅವನಿಂದ ಬ್ರಿಟಿಷರ ಹೇಳಿಕೆಯಾದ 'ಬ್ರಿಟಿಷರ ಸಾಮ್ರಾಜ್ಯದಲ್ಲಿ ಸೂರ್ಯ ಅಸ್ತವಾಗುವುದಿಲ್ಲ' ಎಂಬುದನ್ನು ಸಹಿಸಿಕೊಳ್ಳಲಾಗಲಿಲ್ಲ. ಪ್ರಪಂಚದಲ್ಲಿ ತನ್ನ ಮೌಲ್ಯವನ್ನು ಹೆಚ್ಚಿಸಿಕೊಳ್ಳುವುದಲ್ಲದೇ ಬೆಳೆಯುತ್ತಿರುವ ಜನಸಂಖ್ಯೆಗೂ ಜರ್ಮನಿಗೂ ವಸಾಹತುಗಳು ಅಗತ್ಯವಾದವು. ಆದ್ದರಿಂದಲೇ ಜರ್ಮನಿಯ ರಕ್ಷಣೆಗೆ **ಕೈಸರ್ ಎರಡನೇ ವಿಲಿಯಂ** ಸೈನಿಕ ಬಲವನ್ನು ಹೆಚ್ಚಿಸಿ ಉತ್ತರ ಸಮುದ್ರದಲ್ಲಿರುವ ಹೆಲಿಗೋಲ್ಯಾಂಡ್ (Heligoland) ಎಂಬ ಸ್ಥಳದಲ್ಲಿ ನೌಕಾಸೇನೆಯನ್ನು ನಿಲ್ಲಿಸಿದನು. ಜರ್ಮನಿಯ ಇಂತಹ ಆಕ್ರಮಣಕಾರಿ ನೀತಿಗಳು ಮೊದಲನೇ ಮಹಾಯುದ್ಧಕ್ಕೆ ಮುಖ್ಯ ಕಾರಣವಾದವು.

2.ರಹಸ್ಯ ಒಪ್ಪಂದಗಳು (Secret Alliances)

ಯೂರೋಪ್ ರಾಷ್ಟ್ರಗಳು ಎರಡು ಮಹಾನ್ ವಿರೋಧಿ ಬಣಗಳಾಗಿ ಬೇರ್ಪಟ್ಟಿದ್ದವು. ಈ ಎರಡು ವಿರೋಧಿ ಬಣಗಳ ರಾಷ್ಟ್ರಗಳ ನಡುವೆ ಏರ್ಪಟ್ಟ ರಹಸ್ಯ ಒಪ್ಪಂದಗಳು ಮತ್ತು ಸೈನಿಕ ಒಪ್ಪಂದಗಳು ವೈರತ್ವ ಮತ್ತು ಸಂದೇಹಗಳನ್ನುಂಟುಮಾಡಿ ಮೊದಲನೇ ಮಹಾಯುದ್ಧಕ್ಕೆ ದಾರಿಮಾಡಿಕೊಟ್ಟವು.

ತ್ರಿರಾಷ್ಟ್ರ ಮೈತ್ರಿಕೂಟಗಳ ಒಪ್ಪಂದ (Triple Alliance) 1882ರಲ್ಲಿ ಇಟಲಿ, ಜರ್ಮನಿ ಮತ್ತು ಆಸ್ಟ್ರಿಯಾ – ಹಂಗೇರಿ ಈ ಮೂರು ರಾಷ್ಟ್ರಗಳ ನಡುವೆ ಏರ್ಪಟ್ಟಿತು. 1907ರಲ್ಲಿ ಇಂಗ್ಲೆಂಡ್, ಫ್ರಾನ್ಸ್ ಮತ್ತು ರಷ್ಯಾ ರಾಷ್ಟ್ರಗಳು ತಮ್ಮೊಳಗೆ ತ್ರಿರಾಷ್ಟ್ರ ಸಖ್ಯಕೂಟಗಳ ಒಪ್ಪಂದ (Triple Entente) ಮಾಡಿಕೊಂಡವು. ಇಂತಹ ರಹಸ್ಯ ಸೇನಾ ಒಪ್ಪಂದಗಳು ಯೂರೋಪಿನಲ್ಲಿ ಮಹಾಯುದ್ಧದ ಪರಿಸರವನ್ನುಂಟುಮಾಡಿದವು.

3.ಅಂತರ್‌ರಾಷ್ಟ್ರೀಯ ಸಂಘಟನೆಯ ಕೊರತೆ (Lack of International Organisation)

ರಾಷ್ಟ್ರಗಳ ಹಿತಕ್ಕಾಗಿ ಏರ್ಪಡುತ್ತಿದ್ದ ಘರ್ಷಣೆಗಳನ್ನು ಶಾಂತಿ ಸಮಾಧಾನಗೊಳಿಸಲು ಯಾವುದೇ ಪರಿಣಾಮಕಾರಿಯಾದ ಅಂತರ್‌ರಾಷ್ಟ್ರೀಯ ಸಂಘಟನೆ ಇರಲಿಲ್ಲ. 1882 ಮತ್ತು 1907ರಲ್ಲಿ ನಡೆದ ದಿ ಹೇಗ್ (The Hague) ಸಮ್ಮೇಳನವು ಅಂತರ್‌ರಾಷ್ಟ್ರೀಯ ಸಂಘಟನೆಯ ಸ್ಥಾಪನೆಗೆ ತೆಗೆದುಕೊಂಡ ಪ್ರಯತ್ನವು ವಿಫಲವಾಯಿತು.

4.ಸೈನಿಕ ನೀತಿ (Militarism)

ಸೈನಿಕ ನೀತಿಯು ಯುದ್ಧಕ್ಕೆ ಮುಖ್ಯ ಕಾರಣವಾಯಿತು. ಯೂರೋಪ್ ರಾಜನೀತಿ ನಿಪುಣರು **'ಶಾಂತಿ ಬಯಸುವುದಾದರೆ ಯುದ್ಧಕ್ಕೆ ತಯಾರಾಗಿ'** ಎಂದು ಘೋಷಿಸಿದರು. ಹೊಸ ಯೋಜನೆಗಳ ಮೂಲಕ ರಷ್ಯಾ, ಫ್ರಾನ್ಸ್, ಜರ್ಮನಿ ದೇಶಗಳು ತಮ್ಮ ಸೈನಿಕ ಬಲವನ್ನು ವಿಸ್ತರಿಸಿದರು. ಇಂಗ್ಲೆಂಡ್ ನೌಕಾಸೇನೆಗಾಗಿ ಅಧಿಕ ವೆಚ್ಚ ಮಾಡಿತು. ಫ್ರಾನ್ಸ್ ತನ್ನನ್ನು ದಾಳಿ ಮಾಡುತ್ತದೆ ಎಂಬ ಭಾವನೆಯಿಂದ ಜರ್ಮನಿ ತನ್ನ ಸೈನಿಕ ಬಲವನ್ನು ಹೆಚ್ಚಿಸಿಕೊಳ್ಳಲು ಪ್ರಾರಂಭಿಸಿತು.

5.ವಸಾಹತು ಮತ್ತು ವಾಣಿಜ್ಯ ಪೈಪೋಟಿ (Colonial and Commercial Rivalry)

ಹದಿನೈದನೇ ಮತ್ತು ಹದಿನಾರನೇ ಶತಮಾನಗಳಲ್ಲಿ ಉಂಟಾದ ಭೌಗೋಳಿಕ ಸಂಶೋಧನೆಗಳ ಪರಿಣಾಮಗಳು ಯೂರೋಪ್ ರಾಷ್ಟ್ರಗಳ ನಡುವೆ ವಸಾಹತುಗಳನ್ನು ಸ್ಥಾಪಿಸಲು ತ್ವರಿತ

ಸ್ಪರ್ಧೆಯುಂಟಾಯಿತು. ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ಕಚ್ಚಾ ವಸ್ತುಗಳಿಗೂ ಅದೇ ಸಮಯದಲ್ಲಿ ತಮ್ಮ ಸಿದ್ಧವಸ್ತುಗಳನ್ನು ಮಾರಾಟ ಮಾಡಲು ಮಾರುಕಟ್ಟೆಗಳೂ ಅಗತ್ಯವಾಗಿದ್ದವು. ಏಷ್ಯಾ ಮತ್ತು ಆಫ್ರಿಕ ದೇಶಗಳಲ್ಲಿ ಅದಾಗಲೇ ಯೂರೋಪ್ ರಾಷ್ಟ್ರಗಳು ತಮ್ಮ ವಸಾಹತುಗಳನ್ನು ಸ್ಥಾಪಿಸಿಕೊಂಡಿದ್ದವು. ಜರ್ಮನಿ ಏಕೀಕರಣದ ನಂತರ ತನ್ನ ಸ್ಥಿತಿಯನ್ನು ಬಲಪಡಿಸಿಕೊಂಡಿತು. ಈ ಸ್ಥಿತಿಯಲ್ಲಿ ಕೈಗಾರಿಕ ಕ್ಷೇತ್ರದಲ್ಲಿಯೂ, ವಾಣಿಜ್ಯ ಕ್ಷೇತ್ರದಲ್ಲಿಯೂ ಜರ್ಮನಿಯು ಅಭಿವೃದ್ಧಿಯು ಇಂಗ್ಲೆಂಡನ್ನು ಕೋಪಗೊಳ್ಳುವಂತೆ ಮಾಡಿತು. ಇದು ಯುದ್ಧಕ್ಕೆ ದಾರಿಮಾಡಿಕೊಟ್ಟಿತು.

6.ಮೊರಾಕ್ಕೊ ಸಮಸ್ಯೆ

ಆಫ್ರಿಕ ದೇಶವಾದ ಮೊರಾಕ್ಕೊವನ್ನು ಫ್ರಾನ್ಸ್ ವಶಪಡಿಸಿಕೊಂಡಿತು. ಇದನ್ನು ಇಂಗ್ಲೆಂಡ್ ಅಂಗೀಕರಿಸಿತು. ಆದರೆ, ಜರ್ಮನಿಯ ಅರಸ ಎರಡನೇ ಕೈಸರ್ ವಿಲಿಯಂ, ಮೊರಾಕ್ಕೊವನ್ನು ಒಂದು ಅಂತರ್‌ರಾಷ್ಟ್ರೀಯ ವಸಾಹತು ರಾಷ್ಟ್ರವನ್ನಾಗಿ ಮಾಡಲು ಬಯಸಿದನು. ಆದ್ದರಿಂದಲೇ ಅವನು ಬರ್ಲಿನ್ ಮತ್ತು ಪ್ಯಾಂಥರ್ ಎಂಬ ಎರಡು ಯುದ್ಧನೌಕೆಗಳನ್ನು ಮೊರಾಕ್ಕೊಗೆ ಕಳುಹಿಸಿದನು. ಆದರೆ ಇಂಗ್ಲೆಂಡ್ ಮೊರಾಕ್ಕೊ ಸಮಸ್ಯೆಯಲ್ಲಿ ತಲೆಹಾಕಿದುದರಿಂದ ಜರ್ಮನಿಯು ತನ್ನ ಎರಡು ಯುದ್ಧ ನೌಕೆಗಳನ್ನು ಮೊರಾಕ್ಕೊದಿಂದ ಹಿಂತೆಗೆದುಕೊಂಡಿತು. ಆದ್ದರಿಂದಲೇ ಜರ್ಮನಿಯು ಇಂಗ್ಲೆಂಡಿನ ವೈರಿಯಾಗಿ ಸೇಡುತೀರಿಸಿಕೊಳ್ಳಲು ಬಯಸಿತು. ಇದು ಯುದ್ಧಕ್ಕೆ ದಾರಿಮಾಡಿಕೊಟ್ಟಿತು.

7. ಬಾಲ್ಕನ್ ಸಮಸ್ಯೆ

ಆಟೊಮನ್ ಟರ್ಕಿಯ ನಿಯಂತ್ರಣದಲ್ಲಿದ್ದ ಬಾಲ್ಕನ್ ಭಾಗದ ದೇಶಗಳಾದ ಸೆರ್ಬಿಯಾ, ಬಲ್ಗೇರಿಯಾ, ಅಲ್ಬೇನಿಯಾ, ಗ್ರೀಸ್ ಮತ್ತು ಮಾಂಟಿನೀಗ್ರೊ ರಾಷ್ಟ್ರಗಳು ಟರ್ಕಿಯು ಬಲಹೀನವಾದುದರಿಂದಾಗಿ ತಮ್ಮ ಸ್ವತಂತ್ರವನ್ನು ಘೋಷಿಸಿಕೊಂಡವು. 1912ರಲ್ಲಿ ಬಾಲ್ಕನ್ ರಾಷ್ಟ್ರಗಳು – ಟರ್ಕಿಯ ವಿರುದ್ಧವಾಗಿ ಯುದ್ಧ ಘೋಷಿಸಿದರು. ಇದನ್ನು ಒಂದನೆ ಬಾಲ್ಕನ್ ಯುದ್ಧ ಎಂದು ಕರೆಯಲಾಯಿತು. ಈ ಯುದ್ಧದಲ್ಲಿ ಟರ್ಕಿಯು ಸೋಲಲ್ಪಟ್ಟು ಲಂಡನ್ ಒಪ್ಪಂದದ ಮೂಲಕ ಯುದ್ಧ ಅಂತ್ಯಗೊಂಡಿತು. ಯುದ್ಧದ ಅಂತ್ಯದಲ್ಲಿ ದೊರೆತ ಭಾಗಗಳನ್ನು ಹಂಚಿಕೊಳ್ಳುವಲ್ಲಿ ಸೆರ್ಬಿಯಾ ಮತ್ತು ಬಲ್ಗೇರಿಯಾಗಳ ನಡುವೆ ಸಮಸ್ಯೆಗಳುಂಟಾದವು. ಇದರಿಂದ 1913ರಲ್ಲಿ ಬಾಲ್ಕನ್ ರಾಷ್ಟ್ರಗಳು ಬಲ್ಗೇರಿಯಾದ ಮೇಲೆ ಯುದ್ಧ ಘೋಷಿಸಿದವು. ಇದನ್ನು ಎರಡನೇ ಬಾಲ್ಕನ್ ಯುದ್ಧ ಎನ್ನುತ್ತೇವೆ. ಯುದ್ಧದಲ್ಲಿ ಬಲ್ಗೇರಿಯಾ ಸೋಲಲ್ಪಟ್ಟು, ಸೆರ್ಬಿಯಾ ಬಹುಭಾಗಗಳನ್ನು ತನ್ನೊಡನೆ ಸೇರಿಸಿಕೊಂಡಿತು. ಸೋತ ಟರ್ಕಿ ಮತ್ತು ಬಲ್ಗೇರಿಯಾಗಳು ತಮ್ಮ ಭಾಗಗಳನ್ನು ಹಿಂತಿರುಗಿ ಪಡೆಯಲು ಜರ್ಮನಿಯ ಸಹಾಯ ಕೋರಿದವು. ಇದು ಯುದ್ಧಕ್ಕೆ ದಾರಿಮಾಡಿಕೊಟ್ಟಿತು.

8. ಫ್ರಾನ್ಸ್‌ನ ಆಸಕ್ತಿ

ಫ್ರಾನ್ಸ್ – ಪ್ರಷ್ಯಾ ದೇಶಗಳ ನಡುವೆ ನಡೆದ ಫ್ರಾಂಕೊ–ಪ್ರಷ್ಯಾ ಯುದ್ಧದ ಪರಿಣಾಮವಾಗಿ ತಾನು ಕಳೆದುಕೊಂಡ ಅಲ್ಸೇಸ್ ಮತ್ತು ಲೊರೈನ್ ಭಾಗಗಳನ್ನು ಜರ್ಮನಿಯಿಂದ ಹಿಂದಕ್ಕೆ ಪಡೆಯಬೇಕೆಂದು ಫ್ರಾನ್ಸ್ ಬಯಸಿತು. ಈ ಭಾಗಗಳು ಜರ್ಮನಿಯ ಕೈಗಾರಿಕಾಭಿವೃದ್ಧಿಗೆ ಮೂಲ ಕಾರಣವಾಗಿದ್ದವು. ಆದ್ದರಿಂದಲೇ ಈ ಭಾಗಗಳನ್ನು ಹಿಂದಕ್ಕೆ ಪಡೆಯಬೇಕೆಂದು ಫ್ರಾನ್ಸ್ ಆಲೋಚಿಸಿತು.

9.ತಕ್ಷಣದ ಕಾರಣ (ಸೆರಾಜಿವೋ ಕಗ್ಗೊಲೆ)

1878ರಲ್ಲಿ ನಡೆದ ಬರ್ಲಿನ್ ಸಮ್ಮೇಳನದಲ್ಲಿ ಬೋಸ್ನಿಯಾ ಮತ್ತು ಹರ್ಜೆಗೋವಿನ ಭಾಗಗಳನ್ನು ಆಳ್ವಿಕೆ ನಡೆಸುವ ಹಕ್ಕು ಆಸ್ಟ್ರಿಯಾ–ಹಂಗೇರಿಗಳಿಗೆ ಕೊಡಲಾಯಿತು. ಆದರೆ ಅವುಗಳನ್ನು ವಿಲೀನಗೊಳಿಸಿಕೊಳ್ಳಬಾರದು ಎಂದು ಆ ಸಮ್ಮೇಳನದಲ್ಲಿ ಘೋಷಿಸಲಾಯಿತು. ಸೆರ್ಬಿಯನ್ನರು ಅಧಿಕವಾಗಿ ವಾಸಿಸುವ ಬೋಸ್ನಿಯಾ ಮತ್ತು ಹರ್ಜೆಗೋವಿನ ಭಾಗಗಳನ್ನು ಸೆರ್ಬಿಯಾಕ್ಕೆ ನೀಡಬೇಕಾಗಿತ್ತು. ಆದರೆ 1908ರಲ್ಲಿ ಬರ್ಲಿನ್ ಸಮ್ಮೇಳನದ ತೀರ್ಮಾನಕ್ಕೆ ವಿರುದ್ಧವಾಗಿ ಸೆರ್ಬಿಯಾ ಭಾಗಗಳನ್ನು ಆಸ್ಟ್ರಿಯಾ ತನ್ನ ದೇಶದೊಡನೆ ವಿಲೀನಗೊಳಿಸಿಕೊಂಡಿತು. ಇದು ಆಸ್ಟ್ರಿಯಾ ಮತ್ತು ಸೆರ್ಬಿಯಾಗಳ ನಡುವೆ ದ್ವೇಷವನ್ನುಂಟುಮಾಡಿತು.

ಈ ಸಂದರ್ಭದಲ್ಲಿ 1914ರ ಜೂನ್ 28ರಂದು ಬೋಸ್ನಿಯಾದ ರಾಜಧಾನಿ ಸೆರಾಜಿವೊ ನಗರದಲ್ಲಿ ಸೆರ್ಬಿಯಾದ ಉಗ್ರವಾದಿ ಯುವಕನೊಬ್ಬನಿಂದ ಆಸ್ಟ್ರಿಯಾ ದೇಶದ ಯುವರಾಜ ಫ್ರಾನ್ಸಿಸ್ ಫರ್ಡಿನೆಂಡ್ ಮತ್ತು ಅವನ ಪತ್ನಿ ಇಸಬೆಲ್ಲಾ ಅವರಿಬ್ಬರೂ ಸುಟ್ಟು ಕೊಲ್ಲಲ್ಪಟ್ಟರು. ಇದರ ಕುರಿತು ವಿವರಣೆ ನೀಡಬೇಕೆಂದು ಆಸ್ಟ್ರಿಯಾ ಕೋರಿತು. ಆದರೆ ಸೆರ್ಬಿಯಾದ ಉತ್ತರವು ಆಸ್ಟ್ರಿಯಾಕ್ಕೆ ತೃಪ್ತಿ ತರಲಿಲ್ಲ. ಆದ್ದರಿಂದ ಆಸ್ಟ್ರಿಯಾ 1914ರ ಜುಲೈ 28ರಂದು ಸೆರ್ಬಿಯಾದ ಮೇಲೆ ಯುದ್ಧ ಘೋಷಿಸಿತು.

ರಷ್ಯಾ ಆಸ್ಟ್ರಿಯಾ ದೇಶದ ವಿರುದ್ಧವಾಗಿ ಸೆರ್ಬಿಯಾಕ್ಕೆ ಸಹಾಯಸ್ತ ನೀಡಿ ತನ್ನ ಸೈನ್ಯಗಳನ್ನು

ಕಳುಹಿಸಿತು. ಇದನ್ನು ಕಂಡ ಜರ್ಮನಿಯು ರಷ್ಯಾದ ವಿರುದ್ಧವಾಗಿ ಯುದ್ಧವನ್ನು ಘೋಷಿಸಿತು. ಫ್ರಾನ್ಸ್ ಸಖ್ಯ ರಾಷ್ಟ್ರವಾದ ರಷ್ಯಾಗೆ ಬೆಂಬಲವಾಗಿ ಯುದ್ಧದಲ್ಲಿ ಧುಮುಕಿತು. ಆದ್ದರಿಂದಲೇ ಜರ್ಮನಿ ಫ್ರಾನ್ಸ್ ಮೇಲೆ ಯುದ್ಧ ಘೋಷಣೆ ಮಾಡಿತು. ಇದನ್ನು ಕಂಡ ಇಂಗ್ಲೆಂಡ್ ಫ್ರಾನ್ಸ್‌ನೊಡನೆ ಸೇರಿಕೊಂಡಾಗ ಮೊದಲನೆಯ ಮಹಾಯುದ್ಧವು ಪ್ರಾರಂಭವಾಯಿತು.

II.ಯುದ್ಧದ ಮುನ್ನಡೆ

ಮೊದಲನೆಯ ಮಹಾಯುದ್ಧವು 1914ರ ಜುಲೈ 28ರಂದು ಪ್ರಾರಂಭವಾಗಿ 1918ರ ನವೆಂಬರ್ 11ರಂದು ಅಂತ್ಯಗೊಂಡಿತು. ಯುದ್ಧದ ಸಮಯದಲ್ಲಿ ಜರ್ಮನಿ ಮತ್ತು ಅದರ ಮಿತ್ರರಾಷ್ಟ್ರಗಳು **ಕೇಂದ್ರ ಪಕ್ಷ** (Central Powers) ಎಂದೂ, ಇಂಗ್ಲೆಂಡ್ ಮತ್ತು ಅದರ ಮಿತ್ರರಾಷ್ಟ್ರಗಳನ್ನು **ಮೈತ್ರಿರಾಷ್ಟ್ರಗಳು** (Allies) ಎಂದೂ ಕರೆಯಲ್ಪಟ್ಟವು. ಪಿರಂಗಿದಳ ಮತ್ತು ಜಲಾಂತರ್ಗಾಮಿ ನೌಕೆಗಳು ಈ ಯುದ್ಧದಲ್ಲಿ ಬಳಸಲ್ಪಟ್ಟವು.

1.ಪಶ್ಚಿಮ ಭಾಗದಲ್ಲಿ ಯುದ್ಧ

ಜರ್ಮನಿಯು ಬೆಲ್ಜಿಯಂ ಮಾರ್ಗವಾಗಿ ಫ್ರಾನ್ಸಿನ ಮೇಲೆ ದಂಡೆತ್ತಿ ಹೋಯಿತು. ಜರ್ಮನಿಯ ಸೈನ್ಯದ ಮುನ್ನಡೆಯನ್ನು ಇಂಗ್ಲೆಂಡ್ ಮತ್ತು ಫ್ರೆಂಚ್ ಸೈನ್ಯಗಳಿಂದ ತಡೆದು ನಿಲ್ಲಿಸಲಾಗಲಿಲ್ಲ. ಇಂಗ್ಲೆಂಡ್ ಮತ್ತು ಫ್ರೆಂಚ್ ಸೈನ್ಯಗಳು ಮಾರ್ನ್ ನದಿ ತೀರದ ಯುದ್ಧದಲ್ಲಿ ಜರ್ಮನಿಯ ಸೈನ್ಯಗಳನ್ನು ತಡೆದು ಮುನ್ನುಗ್ಗದಂತೆ ಮಾಡಿದವು. ಎರಡೂ ಸೈನ್ಯಗಳು ಆಳವಾದ ರಹಸ್ಯ ಕಂದಕ ಯುದ್ಧ ಪದ್ಧತಿಯನ್ನು ಅನುಸರಿಸಿದವು.

2.ಪೂರ್ವ ಭಾಗದಲ್ಲಿ ಯುದ್ಧ

ರಷ್ಯಾದ ಸೈನ್ಯಗಳು ಜರ್ಮನಿಯನ್ನು ಆಸ್ಟ್ರಿಯಾವನ್ನು ದಾಳಿಮಾಡಿದವು. ಆದರೆ ಟಾನ್‌ನ್‌ಬರ್ಗ್ ಯುದ್ಧದಲ್ಲಿ ರಷ್ಯಾ ಕಡುಸೋಲನ್ನನುಭವಿಸಿತು. ಈ ಸಮಯದಲ್ಲಿ ಆಸ್ಟ್ರಿಯಾ ಸಂಕಷ್ಟದಲ್ಲಿದ್ದಾಗ ಜರ್ಮನಿಯು ಅದಕ್ಕೆ ಸಹಾಯ ಮಾಡಿತು. ಜರ್ಮನಿಯ ಕಠಿಣವಾದ ದಾಳಿಯನ್ನು ಎದುರಿಸಲು ಸಾಧ್ಯವಾಗದೇ ರಷ್ಯಾದ ಸೈನ್ಯಗಳು ಆಸ್ಟ್ರಿಯಾದ ಭಾಗಗಳನ್ನು ಬಿಟ್ಟು ಹೊರನಡೆದವು.

3.ಪೂರ್ವ ಭಾಗದ ಸಮೀಪದಲ್ಲಿ ಯುದ್ಧ

1914ರ ಅಕ್ಟೋಬರ್‌ನಲ್ಲಿ ಟರ್ಕಿಯು ಕೇಂದ್ರಪಕ್ಷದ ರಾಷ್ಟ್ರಗಳಿಗೆ ಬೆಂಬಲವಾಗಿ ಯುದ್ಧದಲ್ಲಿ ಧುಮುಕಿತು. ಇದು ರಷ್ಯಾ ಮತ್ತು ಅದರೊಡನಿರುವ ಮಿತ್ರರಾಷ್ಟ್ರಗಳ ನಡುವೆ ಇದ್ದ ಸುದ್ದಿ ಸಂಪರ್ಕವು ಕಡಿದುಹಾಕಲ್ಪಟ್ಟಿದ್ದರಿಂದ ಇದು ಒಂದು ಚಾಟಿ ಏಟಿನಂತಾಯಿತು. ಇಂಗ್ಲೆಂಡ್ ಸೈನ್ಯವು ಡಾರ್ಡನಲ್ಸ್ ಭಾಗವನ್ನು ನಿಯಂತ್ರಿಸುವ ಸಲುವಾಗಿ ಕಾನ್ಸ್‌ಟಾಂಟಿನೋಪಲ್ ಅನ್ನು ವಶಪಡಿಸಿಕೊಂಡು **ಗಲ್ಲಿಪೊಲಿ** (Gallipoli) ಭಾಗಗಳನ್ನು ವಶಪಡಿಸಿಕೊಳ್ಳಲು ಯೋಜನೆ ಹಾಕಿತು. ಆದರೆ, ಡಾರ್ಡನಲ್ಸ್ ಭಾಗವನ್ನು ವಶಪಡಿಸಿಕೊಳ್ಳುವ ಪ್ರಯತ್ನದಲ್ಲಿ ಸಂಪೂರ್ಣವಾಗಿ ವಿಫಲವಾಯಿತು.

4. ಯುದ್ಧದಲ್ಲಿ ಬಲ್ಗೇರಿಯಾ ಮತ್ತು ರುಮೇನಿಯಾ


1915ರ ಡಾರ್ಡನಲ್ಸ್ ಯುದ್ಧದಲ್ಲಿ ಇಂಗ್ಲೆಂಡ್ ಸೈನ್ಯಕ್ಕೆ ಉಂಟಾದ ಸೋಲು ಬಲ್ಗೇರಿಯಾವನ್ನು ಕೇಂದ್ರ ಪಕ್ಷದ ರಾಷ್ಟ್ರಗಳ ಕಡೆಗೆ ಸೇರುವಂತೆ ಮಾಡಿತು. 1916ರಲ್ಲಿ ರುಮೇನಿಯಾ ಮೈತ್ರಿರಾಷ್ಟ್ರಗಳೊಡನೆ ಸೇರಿತು.

5. ಸಮುದ್ರ ಯುದ್ಧ

ಇಂಗ್ಲೆಂಡ್ ನೌಕಾಪಡೆಯು ಉತ್ತರ ಸಮುದ್ರದ ಭಾಗವನ್ನು ತನ್ನ ನಿಯಂತ್ರಣದಲ್ಲಿ ಇಟ್ಟುಕೊಂಡಿದ್ದಾಗ, ಫ್ರಾನ್ಸ್ ಮತ್ತು ಇಟಲಿಯ ಸೈನ್ಯಗಳು ಸೇರಿಕೊಂಡು ಇಂಗ್ಲೆಂಡಿನ ಸಹಕಾರದೊಡನೆ ಮೆಡಿಟರೇನಿಯನ್ ಸಮುದ್ರಭಾಗದಲ್ಲಿ ತಮ್ಮ ಆಧಿಕ್ಯವನ್ನು ಮಾಡಿದವು. ಡೋಗ್ಗರ್ ನದಿ ತೀರದ ಯುದ್ಧದಲ್ಲಿ ಜರ್ಮನಿಯ ಸೈನ್ಯಗಳು ಇಂಗ್ಲೆಂಡಿನ ಸೈನ್ಯಗಳಿಂದ ನಾಶಗೊಳಿಸಲ್ಪಟ್ಟವು. 1916ರಲ್ಲಿ ನಡೆದ ಜಟ್‌ಲ್ಯಾಂಡ್ ಯುದ್ಧದಲ್ಲಿ ಜರ್ಮನಿಯ ಸೈನ್ಯಗಳು ಸೋಲನ್ನನುಭವಿಸಿ ಹಿಂದಿರುಗಿದವು. ಬ್ರಿಟಿಷರ ನೌಕಾಸೇನೆಯು ನಿಯಂತ್ರಣವನ್ನು ನಾಶಪಡಿಸಲಾಗದಿದ್ದರಿಂದ ಜರ್ಮನಿಯು ಜಲಾಂತರ್ಗಾಮಿ ನೌಕಾ ಯುದ್ಧದಲ್ಲಿ ಧುಮುಕಿತು. ಜಲಾಂತರ್ಗಾಮಿ ಯುದ್ಧ ಪದ್ಧತಿಯಿಂದ ಮಿತ್ರ ರಾಷ್ಟ್ರಗಳ ಹಲವು ಯುದ್ಧನೌಕೆಗಳು ಮುಳುಗಿಸಲ್ಪಟ್ಟು ಅತ್ಯಧಿಕ ಜೀವಹಾನಿ ಏರ್ಪಟ್ಟಿತು.

6. ಒಂದನೇ ಮಹಾಯುದ್ಧದಲ್ಲಿ ಅಮೆರಿಕದ ಪ್ರವೇಶ

1917ರಲ್ಲಿ ಅಮೆರಿಕದ ಧ್ವಜಗಳನ್ನು ಹೊಂದಿದ್ದ ಲೂಸಿಡಾನಿಯ ಹಡಗಿನ ಜೊತೆಗೆ ನಾಲ್ಕು ವಾಣಿಜ್ಯ ನೌಕೆಗಳು ಜರ್ಮನಿಯ ಜಲಾಂತರ್ಗಾಮಿ ನೌಕೆಯಿಂದ ಮುಳುಗಿಸಲ್ಪಟ್ಟವು.



ಲೂಸಿಡಾನಿಯ – ಅಮೆರಿಕದ ನೌಕೆ

ಯೂರೋಪ್ ಮಹಾಖಂಡದ ಭೂಪಟ
ರಷ್ಯಾ
ಉಕ್ರೇನ್
ಬೆಲಾರುಸ್
ಪೋಲೆಂಡ್
ಜರ್ಮನಿ
ಫ್ರಾನ್ಸ್
ಸ್ಪೇನ್
ಪೋರ್ಚುಗಲ್
ಇಟಲಿ
ಗ್ರೀಸ್
ಟರ್ಕಿ
ಸ್ವೀಡನ್
ನಾರ್ವೆ
ಫಿನ್‌ಲ್ಯಾಂಡ್
ಐರ್ಲೆಂಡ್
ಐಸ್‌ಲ್ಯಾಂಡ್
ಯುನೈಟೆಡ್ ಕಿಂಗ್‌ಡಮ್
ಬೆಲ್ಜಿಯಂ
ನೆದರ್‌ಲ್ಯಾಂಡ್
ಡೆನ್ಮಾರ್ಕ್
ಸ್ವಿಟ್ಜರ್‌ಲ್ಯಾಂಡ್
ಆಸ್ಟ್ರಿಯಾ
ಹಂಗೇರಿ
ಸ್ಲೊವೇನಿಯಾ
ಕ್ರೊವೇಷಿಯಾ
ಬೋಸ್ನಿಯಾ ಹರ್ಜೆಗೋವಿನಾ
ಸರ್ಬಿಯಾ
ಮಾಂಟೆನೆಗ್ರೊ
ಅಲ್ಬೇನಿಯಾ
ಸ್ಲೊವಾಕಿಯಾ
ಜೆಕ್ ಗಣರಾಜ್ಯ
ರೊಮೇನಿಯಾ
ಬಲ್ಗೇರಿಯಾ
ಮೊಲ್ಡೊವಾ
ಬೆಲಾರುಸ್
ಲಿಥುವೇನಿಯಾ
ಲಾಟ್ವಿಯಾ
ಎಸ್ಟೋನಿಯಾ
ಫಿನ್‌ಲ್ಯಾಂಡ್
ಸ್ವೀಡನ್
ನಾರ್ವೆ
ಐಸ್‌ಲ್ಯಾಂಡ್
ಐರ್ಲೆಂಡ್
ಯುನೈಟೆಡ್ ಕಿಂಗ್‌ಡಮ್
ಬೆಲ್ಜಿಯಂ
ನೆದರ್‌ಲ್ಯಾಂಡ್
ಡೆನ್ಮಾರ್ಕ್
ಸ್ವಿಟ್ಜರ್‌ಲ್ಯಾಂಡ್
ಆಸ್ಟ್ರಿಯಾ
ಹಂಗೇರಿ
ಸ್ಲೊವೇನಿಯಾ
ಕ್ರೊವೇಷಿಯಾ
ಬೋಸ್ನಿಯಾ ಹರ್ಜೆಗೋವಿನಾ
ಸರ್ಬಿಯಾ
ಮಾಂಟೆನೆಗ್ರೊ
ಅಲ್ಬೇನಿಯಾ
ಸ್ಲೊವಾಕಿಯಾ
ಜೆಕ್ ಗಣರಾಜ್ಯ
ರೊಮೇನಿಯಾ
ಬಲ್ಗೇರಿಯಾ
ಮೊಲ್ಡೊವಾ
ಬೆಲಾರುಸ್
ಲಿಥುವೇನಿಯಾ
ಲಾಟ್ವಿಯಾ
ಎಸ್ಟೋನಿಯಾ

ಇದರಲ್ಲಿ ನೂರಾರು ಅಮೆರಿಕನ್ನರು ಕೊಲ್ಲಲ್ಪಟ್ಟರು. ಈ ಸಂಭವವು ಅಮೆರಿಕಾದ ಅಧ್ಯಕ್ಷ ವುಡ್ರೊ ವಿಲ್ಸನ್‌ನನ್ನು ಕೋಪಗೊಳ್ಳುವಂತೆ ಮಾಡಿತು. ಆದ್ದರಿಂದಲೇ ಅವನು 1917ರ ಏಪ್ರಿಲ್ 6ರಂದು ಶುಭ ಶುಕ್ರವಾರದಂದು ಜರ್ಮನಿಯ ಮೇಲೆ ಯುದ್ಧ ಘೋಷಿಸಿದನು.

7. ರಷ್ಯಾದ ಹಿಂತೆಗೆತ

ಮೊದಲನೆಯ ಮಹಾಯುದ್ಧದಿಂದಾಗಿ ರಷ್ಯಾ ಅತ್ಯಧಿಕವಾಗಿ ಬಾಧಿಸಲ್ಪಟ್ಟಿತು. ಅಪಾರ ಜೀವಹಾನಿ, ಆರ್ಥಿಕ ಮುಗ್ಗಟ್ಟು ಉಂಟಾಯಿತು. ಇದರಿಂದ ಜನರಲ್ಲಿ ಅತೃಪ್ತಿ ಉಂಟಾಯಿತು. ಇದರ ಪರಿಣಾಮವಾಗಿ 1917ರಲ್ಲಿ ಅಕ್ಟೋಬರ್ ಕ್ರಾಂತಿ ರಷ್ಯಾದಲ್ಲಿ ಏರ್ಪಟ್ಟಿತು. ಈ ಕ್ರಾಂತಿಯಿಂದಾಗಿ, ರಷ್ಯಾವನ್ನು ಆಳುತ್ತಿದ್ದ ಝಾರ್ ಚಕ್ರವರ್ತಿಯು ಆಳ್ವಿಕೆಯು ಲೆನಿನ್‌ನಿಂದ ವಜಾಗೊಳಿಸಲ್ಪಟ್ಟಿತು. ರಷ್ಯಾ ಯುದ್ಧಭೂಮಿಯಿಂದ ತನ್ನ ಸೈನ್ಯವನ್ನು ಹಿಂದಕ್ಕೆ ಕರೆಸಿಕೊಂಡಿತು. 1918ರಲ್ಲಿ ಬ್ರೆಸ್ಟ್–ಲಿಟೋವ್ಸ್ಕ ಒಪ್ಪಂದವನ್ನು ಕೇಂದ್ರಪಕ್ಷ ರಾಷ್ಟ್ರಗಳೊಡನೆ ಮಾಡಿಕೊಂಡಿತು.

8.ಯುದ್ಧದ ಅಂತ್ಯ

ಪ್ರಾರಂಭದಲ್ಲಿ ಕೇಂದ್ರಪಕ್ಷ ರಾಷ್ಟ್ರಗಳು ಕೆಲವು ವಿಜಯಗಳನ್ನು ಸಾಧಿಸಿದ್ದರೂ ಅಂತ್ಯದಲ್ಲಿ ಅವುಗಳು ಸೋಲನ್ನನುಭವಿಸಿದವು. ಜರ್ಮನಿಯು ಯುದ್ಧದಲ್ಲಿ ಸೋಲುಂಡಿತು. ಇದನ್ನು ಕಂಡ ಟರ್ಕಿ ಮತ್ತು ಬಲ್ಗೇರಿಯಾಗಳು ಭಯಗೊಂಡವು. ಆಸ್ಟ್ರಿಯಾ ಶಾಂತಿಯನ್ನು ನಿರೀಕ್ಷಿಸಿತು. ಜರ್ಮನಿಯ ಎರಡನೇ ಕೈಸರ್ ವಿಲಿಯಂ ಸಿಂಹಾಸನ ತ್ಯಜಿಸಿ ಹಾಲೆಂಡಿಗೆ ಓಡಿಹೋದನು. ಜರ್ಮನಿಯು 1918ರ ನವೆಂಬರ್ 11ರಂದು ಶಾಂತಿಗೆ ಮೊರೆಹೋಯಿತು.


III.ಯುದ್ಧದ ಪರಿಣಾಮಗಳು

1919ರಲ್ಲಿ ಪ್ಯಾರಿಸ್‌ನಲ್ಲಿ ನಡೆದ ಶಾಂತಿ ಸಮ್ಮೇಳನದ ಮೂಲಕ ಮೊದಲನೆಯ ಮಹಾಯುದ್ಧವು ಮುಕ್ತಾಯಕ್ಕೆ ಬಂದಿತು. ಸಮ್ಮೇಳನದಲ್ಲಿ ಭಾಗವಹಿಸಿದ್ದ ಪ್ರಮುಖ ನಾಯಕರು ಫ್ರಾನ್ಸಿನ ಪ್ರಧಾನಮಂತ್ರಿ ಕ್ಲೆಮೆನ್‌ಷ್ಯೂ, ಇಂಗ್ಲೆಂಡಿನ ಪ್ರಧಾನಿ ಲಾಯ್ಡ್ ಜಾರ್ಜ್, ಇಟಲಿಯ ಪ್ರಧಾನಮಂತ್ರಿ ಆರ್ಲಾಂಡೊ ಮತ್ತು ಅಮೆರಿಕದ ಅಧ್ಯಕ್ಷ ವುಡ್ರೊ ವಿಲ್ಸನ್. ಜರ್ಮನಿಯು ಶಾಂತಿ ಒಪ್ಪಂದದಲ್ಲಿ ಸಹಿ ಹಾಕಿತು. ಇದನ್ನು ವರ್ಸೇಲ್ಸ್ ಒಪ್ಪಂದ (Treaty of Versailles) ಎಂದು ಕರೆಯುವರು.

ಅಲ್ಲದೆ ಈ ಸಮ್ಮೇಳನದಲ್ಲಿ ಹಲವಾರು ಒಪ್ಪಂದಗಳನ್ನು ಸೋತ ದೇಶಗಳೊಡನೆ ಮಾಡಿಕೊಳ್ಳಲಾಯಿತು. ಜರ್ಮನಿಯ ಒಪ್ಪಂದವು (Treaty of Germaine) ಆಸ್ಟ್ರಿಯಾದೊಡನೆ ಮಾಡಿಕೊಳ್ಳಲ್ಪಟ್ಟಿತು. ಹಂಗೇರಿಯೊಡನೆ ಟ್ರಿಯನನ್ (Trianon) ಒಪ್ಪಂದವೂ ಬಲ್ಗೇರಿಯಾದೊಡನೆ ನ್ಯೂಯಿಲ್ಲಿ (Neuilly) ಒಪ್ಪಂದವೂ, ಟರ್ಕಿಯೊಡನೆ ಸೆವೆರ್ಸ್ (Severes) ಒಪ್ಪಂದವೂ ಮಾಡಿಕೊಳ್ಳಲ್ಪಟ್ಟವು. ಅಮೆರಿಕದ ಅಧ್ಯಕ್ಷ ವುಡ್ರೋ ವಿಲ್ಸನ್ ತನ್ನ 14 ಅಂಶಗಳ ತತ್ವಗಳ ಆಧಾರದಲ್ಲಿ ಒಪ್ಪಂದದ ಷರತ್ತುಗಳು ರಚಿಸಲ್ಪಟ್ಟವು.

ವರ್ಸೇಲ್ಸ್ ಒಪ್ಪಂದದ ಮುಖ್ಯಾಂಶಗಳು

1. ಅಂತರ್‌ರಾಷ್ಟ್ರೀಯ ಸಂಘಟನೆಯ ರೂಪುರೇಷೆಗಳನ್ನು ನಿರ್ಣಯಿಸಲಾಯಿತು.
2. ಜರ್ಮನಿಯ ಸೇನಾಬಲವನ್ನು ಕುಗ್ಗಿಸಲ್ಪಟ್ಟು ಅದಕ್ಕೆ ಅಧಿಕ ಮೊತ್ತದ ಯುದ್ಧ ಪರಿಹಾರವನ್ನು ಹೇರಲಾಯಿತು.
3. ಜರ್ಮನಿಯು ತನ್ನೊಡನೆ ಇದ್ದ ಅಲ್ಸೇಸ್ ಮತ್ತು ಲೊರೈನ್ ಭಾಗಗಳನ್ನು ಫ್ರಾನ್ಸ್‌ಗೆ ಒಪ್ಪಿಸಿತು. ಅಲ್ಲದೇ ಕಲ್ಲಿದ್ದಲು ಗಣಿಗಳಿದ್ದ ಸಾರ್ (Saar) ಭಾಗಗಳನ್ನು 15 ವರ್ಷಗಳವರೆಗೆ ಇಟ್ಟುಕೊಳ್ಳುವ ಗುತ್ತಿಗೆಯ ಹಕ್ಕನ್ನೂ ಸಹ ಫ್ರಾನ್ಸ್‌ಗೆ ನೀಡಿತು.
4. ಜರ್ಮನಿಯ ಸಮುದ್ರದಾಚೆಯ ವಸಾಹತುಗಳನ್ನು, ಜಯ ಪಡೆದ ರಾಷ್ಟ್ರಗಳು ತಮ್ಮೊಳಗೆ ಹಂಚಿಕೊಂಡವು.
5. ಜರ್ಮನಿ, ರಷ್ಯಾ, ಆಸ್ಟ್ರಿಯಾ ಮತ್ತು ಟರ್ಕಿ ದೇಶಗಳಲ್ಲಿ ಅರಸರಾಡಳಿತವು ನಿಷೇಧಿಸಲ್ಪಟ್ಟಿತು.
6. ಹಲವಾರು ದೇಶಗಳಲ್ಲಿ ಅರಸಾಡಳಿತವು ನಿಷೇಧಿಸಲ್ಪಟ್ಟು ಪ್ರಜಾಪ್ರಭುತ್ವದ ಆಳ್ವಿಕೆಯು ಉದಯವಾಯಿತು. ಜೆಕೊಸ್ಲೊವೇಕಿಯಾ ಮತ್ತು ಪೋಲೆಂಡ್ ದೇಶಗಳಲ್ಲಿ ಹೊಸ ಗಣರಾಜ್ಯಗಳು ಉದಯವಾದವು.
7. ಆಸ್ಟ್ರಿಯಾ ಮತ್ತು ಹಂಗೇರಿಗಳ ಗಣರಾಜ್ಯಗಳು ಅಂಗೀಕರಿಸಲ್ಪಟ್ಟವು.
8. ಡ್ಯಾನ್ ಜಿಗ್ ನಗರಕ್ಕೆ ಅಂತರರಾಷ್ಟ್ರೀಯ ಅಂಗೀಕಾರ ನೀಡಲಾಯಿತು.
9. ಲಿತುವೇನಿಯಾ, ಲಾಟ್‌ವಿಯಾ ಮತ್ತು ಎಸ್ತೋನಿಯಾ ದೇಶಗಳಿಗೆ ಸ್ವಾತಂತ್ರ್ಯ ನೀಡಲಾಯಿತು.



ಪ್ಯಾರಿಸ್ ಒಪ್ಪಂದದಲ್ಲಿ ಭಾಗವಹಿಸಿದ ಪ್ರತಿನಿಧಿಗಳು

10. ಗೆದ್ದ ರಾಷ್ಟ್ರಗಳು ಸೋತ ರಾಷ್ಟ್ರಗಳ ಮೇಲೆ ಅನಗತ್ಯವಾದ ಮತ್ತು ಅನ್ಯಾಯವಾದ ಒಪ್ಪಂದಗಳನ್ನು ಸ್ವೀಕರಿಸುವಂತೆ ಬಲವಂತಪಡಿಸಿದವು. ಇದು ಮತ್ತೊಂದು ಮಹಾಯುದ್ಧಕ್ಕೆ ಬೀಜಬಿತ್ತಿತು.

ಸಂಯುಕ್ತ ರಾಷ್ಟ್ರಗಳ ಸಂಘ– 1920 (League of Nations)

ಮೊದಲನೆಯ ಮಹಾಯುದ್ಧವು ಪ್ರಪಂಚದ ರಾಷ್ಟ್ರಗಳಲ್ಲಿ ಅತ್ಯಧಿಕ ಹಣ ಮತ್ತು ಪ್ರಾಣಹಾನಿಯನ್ನುಂಟುಮಾಡಿತು. ಪ್ರಪಂಚದ ರಾಷ್ಟ್ರಗಳೆಲ್ಲವೂ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಈ ಯುದ್ಧದಿಂದಾಗಿ ಅಧಿಕ ಬಾಧಿಸಲ್ಪಟ್ಟವು.

ಆದ್ದರಿಂದಲೇ ಇನ್ನುಮುಂದೆ ಪ್ರಪಂಚದಲ್ಲಿ ಇಂತಹ ಯುದ್ಧವು ಸಂಭವಿಸುವುದನ್ನು ತಡೆಯುವ ಸಲುವಾಗಿ ಒಂದು ಅಂತರ್‌ರಾಷ್ಟ್ರೀಯ ಸಂಘಟನೆಯು ಅಗತ್ಯವೆಂಬುದನ್ನು ವಿಶ್ವ ರಾಷ್ಟ್ರಗಳು ಮನಗಂಡವು. ಅಮೆರಿಕದ ಅಧ್ಯಕ್ಷ ವುಡ್ರೊ ವಿಲ್ಸನ್‌ನ ಪ್ರಯತ್ನದಿಂದ 1919ರ ಜನವರಿಯಲ್ಲಿ ಪ್ಯಾರಿಸ್‌ನಲ್ಲಿ ಶಾಂತಿ ಸಮ್ಮೇಳನವನ್ನು ಕರೆಯಲಾಯಿತು. ಇದರಲ್ಲಿ 42 ರಾಷ್ಟ್ರಗಳು ಭಾಗವಹಿಸಿದ್ದವು. ಈ ಸಮ್ಮೇಳನದಲ್ಲಿ 10 ಸದಸ್ಯರನ್ನೊಳಗೊಂಡ ಒಂದು ಸಮಿತಿಯು ರಚಿಸಲ್ಪಟ್ಟಿತು. ಈ ಸಮಿತಿಯಲ್ಲಿ ಸ್ಥಾನವನ್ನು ಹೊಂದಿದ್ದ ಪ್ರಮುಖ ನಾಯಕರು ವುಡ್ರೊ ವಿಲ್ಸನ್(ಅಮೆರಿಕ), ಲಾಂವನ್ಡ್ ಜಾರ್ಜ್(ಇಂಗ್ಲೆಂಡ್), ಜಾರ್ಜ್ ಕ್ಲೆಮೆನ್‌ಷ್ಯೂ(ಫ್ರಾನ್ಸ್) ಮತ್ತು ಆರ್ಲಾಂಡೊ(ಇಟಲಿ) ಇವರುಗಳಾಗಿದ್ದರು. ಈ ಸಮಿತಿಯ ಸಲಹೆಯಂತೆ, ವಿಶ್ವದಲ್ಲಿ ಶಾಂತಿ ಸ್ಥಾಪಿಸಲು ಯುದ್ಧ ಸಂಭವಿಸುವುದನ್ನು ತಡೆಯಲು ಮತ್ತು ರಾಷ್ಟ್ರಗಳ ನಡುವೆ ಒಗ್ಗಟ್ಟನ್ನು ಬೆಳೆಸಲು ಸಂಯುಕ್ತ ರಾಷ್ಟ್ರಗಳ ಸಂಘವು ಅಗತ್ಯವೆಂದು ತೀರ್ಮಾನಿಸಲಾಯಿತು. ಇದರ ಆಧಾರದಲ್ಲಿ 1920ರ ಜನವರಿ 20ರಂದು ಸಂಯುಕ್ತ ರಾಷ್ಟ್ರಗಳ ಸಂಘವು ಸ್ಥಾಪಿಸಲ್ಪಟ್ಟಿತು. ಇದರ ಪ್ರಧಾನ ಕಛೇರಿ ಸ್ವಿಡ್ಜರ್‌ಲ್ಯಾಂಡ್ ದೇಶದಲ್ಲಿರುವ ಜನೀವಾ ನಗರದಲ್ಲಿ ಸ್ಥಾಪಿಸಲ್ಪಟ್ಟಿತು.



ವುಡ್ರೊ ವಿಲ್ಸನ್



ಸಂಯುಕ್ತ ರಾಷ್ಟ್ರಗಳ ಸಂಘದ ಪ್ರಧಾನ ಕಚೇರಿ – ಜಿನಿವಾ

ಸಂಯುಕ್ತ ರಾಷ್ಟ್ರಗಳ ಸಂಘವು ಸ್ಥಾಪಿಸಲ್ಪಡುವ ಮೊದಲೇ 1. ಸಂಯುಕ್ತ ರಾಷ್ಟ್ರಗಳ ಸಂಘ ಸಮಾಜ(1915) 2. ವಿಶ್ವ ಶಾಂತಿ ಒಕ್ಕೂಟ(1917) 3. ಸ್ವತಂತ್ರ ರಾಷ್ಟ್ರಗಳ ಸಂಘ (1918) ದಂತಹ ಸಂಘಟನೆಗಳು ಪ್ರಾರಂಭಿಸಲ್ಪಟ್ಟಿದ್ದವು.

ಸಂಯುಕ್ತ ರಾಷ್ಟ್ರಗಳ ಸಂಘದ ಮೂಲಭೂತ ತತ್ವಗಳು

1. ವಿಶ್ವ ರಾಷ್ಟ್ರಗಳ ನಡುವೆ ಒಗ್ಗಟ್ಟು, ರಕ್ಷಣೆ ಮತ್ತು ಶಾಂತಿಯನ್ನು ಸ್ಥಾಪಿಸುವುದು.
2. ಸದಸ್ಯ ರಾಷ್ಟ್ರಗಳು ತಮ್ಮ ನೆರೆಹೊರೆಯ ರಾಷ್ಟ್ರಗಳ ಎಲ್ಲೆಗಳನ್ನು ಗೌರವಿಸಿ ನಡೆದುಕೊಳ್ಳಬೇಕು, ಆ ರಾಷ್ಟ್ರಗಳಲ್ಲಿ ಆಕ್ರಮಣವನ್ನು ಮಾಡದಿರುವಿಕೆ.
3. ಸದಸ್ಯ ರಾಷ್ಟ್ರಗಳು ತಮ್ಮೊಳಗೆ ಉಂಟಾಗುವ ಸಮಸ್ಯೆಗಳನ್ನು ಸಂಯುಕ್ತ ರಾಷ್ಟ್ರಗಳ ಸಂಘದ ಮೂಲಕ ಸುಲಲಿತವಾಗಿ ಪರಿಹರಿಸಿಕೊಳ್ಳಬೇಕು. ಅಲ್ಲದೆ ರಾಷ್ಟ್ರಗಳು ಕನಿಷ್ಠಪಕ್ಷ ಮೂರು ತಿಂಗಳುಗಳಾದರೂ ಸಂಯುಕ್ತ ರಾಷ್ಟ್ರಗಳ ಸಂಘದ ತೀರ್ಮಾನಕ್ಕೆ ಕಾಯಬೇಕು.
4. ಸದಸ್ಯ ರಾಷ್ಟ್ರಗಳು ಯಾವುದಾದರೂ ಸಂಯುಕ್ತ ರಾಷ್ಟ್ರಗಳ ಸಂಘದ ವಿಧಿನಿಯಮಗಳನ್ನು ಮೀರಿ ಇತರ ರಾಷ್ಟ್ರಗಳನ್ನು ಆಕ್ರಮಿಸಿದರೆ, ಸಂಕಷ್ಟಕ್ಕೊಳಗಾದ ದೇಶವನ್ನು ಶಸ್ತ್ರಾಸ್ತ್ರಗಳನ್ನು ಕೊಟ್ಟಾದರೂ ರಕ್ಷಿಸಬೇಕು.
5. ಸಂಯುಕ್ತ ರಾಷ್ಟ್ರಗಳ ಸಂಘದ ತತ್ವಗಳಿಗೆ ವಿರುದ್ಧವಾದ ಎಲ್ಲಾ ಒಪ್ಪಂದಗಳನ್ನು ಕೈಬಿಡುವುದು ಮೊದಲಾದವು ಸಂಯುಕ್ತ ರಾಷ್ಟ್ರಗಳ ಸಂಘದ ಮೂಲಭೂತ ತತ್ವಗಳಾಗಿ ಭಾವಿಸಲ್ಪಟ್ಟವು.

ಸಂಯುಕ್ತ ರಾಷ್ಟ್ರಗಳ ಸಂಘದ ಅಂಗಗಳು

1. ಸಾಮಾನ್ಯ ಸಭೆ
2. ಕಾರ್ಯಕಾರಿ ಸಮಿತಿ
3. ಕಾರ್ಯಾಲಯ
4. ಅಂತರ್‌ರಾಷ್ಟ್ರೀಯ ನ್ಯಾಯಾಲಯ
5. ಅಂತರ್‌ರಾಷ್ಟ್ರೀಯ ಕಾರ್ಮಿಕ ಸಂಘಟನೆ

ಸಂಯುಕ್ತ ರಾಷ್ಟ್ರಗಳ ಸಂಘದ ಸಾಧನೆಗಳು

ಸಂಯುಕ್ತ ರಾಷ್ಟ್ರಗಳ ಸಂಘವು ಅಸ್ತಿತ್ವದಲ್ಲಿದ್ದ 20 ವರ್ಷಗಳಲ್ಲಿ ಅನೇಕ ಸಮಸ್ಯೆಗಳಿಗೆ ಪರಿಹಾರ ಹುಡುಕಿ ಸಮಾಧಾನವನ್ನುಂಟುಮಾಡುವ ಪ್ರಯತ್ನದಲ್ಲಿ ಸ್ವಲ್ಪ ಜಯ ಪಡೆಯಿತು.

1. ಫಿನ್‌ಲ್ಯಾಂಡ್–ಸ್ವೀಡನ್‌ಗಳ ನಡುವೆ ಬಾಲ್ಟಿಕ್ ಸಮುದ್ರಭಾಗದಲ್ಲಿರುವ ಹಾಲೆಂಡ್ ದ್ವೀಪದ ಹಕ್ಕಿನ ಸಮಸ್ಯೆಯನ್ನು ಬಗೆಹರಿಸಿತು.
2. ಸೈಲೀಸಿಯಾದ ಎಲ್ಲೆ ಸಮಸ್ಯೆಯನ್ನು ಬಗೆಹರಿಸಿ ಪೋಲೆಂಡ್–ಜರ್ಮನಿಗಳ ನಡುವೆ ಯುದ್ಧ ಸಂಭವಿಸುವುದನ್ನು ತಪ್ಪಿಸಿತು.
3. ಗ್ರೀಸ್ ದೇಶಕ್ಕೂ ಇಟಲಿಗೂ ನಡುವೆ ಉಂಟಾದ ಕಾರ್ಫು(Corfu) ದ್ವೀಪದ ಸಮಸ್ಯೆಯನ್ನು ಬಗೆಹರಿಸಿತು.
4. ಗ್ರೀಸ್ ಮತ್ತು ಬಲ್ಗೇರಿಯಾಗಳ ನಡುವೆ ಉಂಟಾದ ಎಲ್ಲೆಯ ಸಮಸ್ಯೆಯನ್ನು ಬಗೆಹರಿಸಿತು.
5. ಜರ್ಮನಿಯು 1926ರಲ್ಲಿ ಸಂಯುಕ್ತ ರಾಷ್ಟ್ರಗಳ ಸಂಘದಲ್ಲಿ ನಿರಂತರವಾಗಿ 1934ರಲ್ಲಿ ಸೋವಿಯತ್ ರಷ್ಯಾ ಸಂಯುಕ್ತ ರಾಷ್ಟ್ರಗಳ ಸಂಘದೊಡನೆ ವಿಲೀನಗೊಳ್ಳುವ ಕ್ರಮ ಕೈಗೊಂಡಿತು.
6. ಪೆರು ಮತ್ತು ಕೊಲಂಬಿಯಾ ದೇಶಗಳ ನಡುವೆ ಏರ್ಪಟ್ಟ ಎಲ್ಲೆಯ ಸಮಸ್ಯೆಯನ್ನು ಬಗೆಹರಿಸಿತು.
7. ತನ್ನ ಇತರ ಅಂಗಗಳ ಮೂಲಕ ವಿಶ್ವ ರಾಷ್ಟ್ರಗಳಲ್ಲಿ ಹರಡಿದ್ದ ಅನೇಕ ರೋಗಗಳನ್ನು ನಿವಾರಿಸಲು ಶ್ರಮಿಸಿತು.
8. ನಿರಾಶ್ರಿತರು ಮತ್ತು ಕುಷ್ಠರೋಗಿಗಳ ಪುನರ್ಜೀವನಕ್ಕಾಗಿ ಸಹಾಯ ಹಸ್ತವನ್ನು ಚಾಚಿತು.
9. ವಿಶ್ವ ರಾಷ್ಟ್ರಗಳ ಶಿಕ್ಷಣ ಮಟ್ಟವನ್ನು ಹೆಚ್ಚಿಸಲು ಶ್ರಮಿಸಿತು.
10. ಅಂತರ್‌ರಾಷ್ಟ್ರೀಯ ನ್ಯಾಯಾಲಯವು 30 ಕ್ಕಿಂತಲೂ ಹೆಚ್ಚು ವ್ಯಾಜ್ಯಗಳನ್ನು ವಿಚಾರಿಸಿ ಅದರಲ್ಲಿ ಕೆಲವು ವ್ಯಾಜ್ಯಗಳಿಗೆ ತೀರ್ಮಾನಗಳನ್ನು, ಕೆಲವು ವ್ಯಾಜ್ಯಗಳಿಗೆ ಸಲಹೆಗಳನ್ನು ನೀಡಿತು.

ಸಂಯುಕ್ತ ರಾಷ್ಟ್ರಗಳ ಸಂಘದ ವಿಫಲತೆಗೆ ಕಾರಣಗಳು

ಸಂಯುಕ್ತ ರಾಷ್ಟ್ರಗಳ ಸಂಘವು ತನ್ನ ತತ್ವವಾದ, ದೇಶಗಳ ನಡುವೆ ಉಂಟಾದ ಸಮಸ್ಯೆಗಳನ್ನು ಶಾಂತಿ ಮಾರ್ಗದಲ್ಲಿ ಬಗೆಹರಿಸಿಕೊಳ್ಳುವುದು ಎಂಬ ಮೂಲತತ್ವದಲ್ಲಿ ಸಂಪೂರ್ಣವಾಗಿ ಜಯಸಾಧಿಸಲು ಸಾಧ್ಯವಾಗಲಿಲ್ಲ. ಇದು ಸದಸ್ಯ ರಾಷ್ಟ್ರಗಳಿಂದ ಸೃಷ್ಟಿಸಲ್ಪಟ್ಟ ದೋಷವೇ ಹೊರತು ಸಂಯುಕ್ತ ರಾಷ್ಟ್ರಗಳ ಸಂಘದಿಂದ ಏರ್ಪಟ್ಟ ದೋಷವಲ್ಲ.

1. ಸಂಯುಕ್ತ ರಾಷ್ಟ್ರಗಳ ಸಂಘವು ಸ್ಥಾಪಿತವಾಗಲು ಕಾರಣರಾಗಿದ್ದವರು ಅಮೆರಿಕ ಸಂಯುಕ್ತ ಸಂಸ್ಥಾನದ ರಾಷ್ಟ್ರಾಧ್ಯಕ್ಷರು. ಆದರೆ ಅಮೆರಿಕ ದೇಶವು ಸಂಯುಕ್ತ ರಾಷ್ಟ್ರಗಳ ಸಂಘದಲ್ಲಿ ಸದಸ್ಯತ್ವ ಪಡೆದಿರಲಿಲ್ಲ. ಇದರಿಂದ ಸಂಯುಕ್ತ ರಾಷ್ಟ್ರಗಳ ಸಂಘವು ಬಲವಾದ ಅಡಿಪಾಯವಿಲ್ಲದ ಕಟ್ಟಡದಂತೆ ಬಲಹೀನವಾಯಿತು.
2. ಸಂಯುಕ್ತ ರಾಷ್ಟ್ರಗಳ ಸಂಘದ ತೀರ್ಮಾನಗಳಿಗೆ ಸಹಕರಿಸದ ಸದಸ್ಯ ರಾಷ್ಟ್ರಗಳು ಸಂಘದಿಂದ ಹೊರ ನಡೆಯಬಹುದು ಎಂಬ ಅನುಮತಿಯನ್ನು ನೀಡಲಾಗಿದ್ದುದು ಸಂಘವನ್ನು ನಿಷ್ಕ್ರಿಯಗೊಳಿಸಿತು.
3. 1931ರಲ್ಲಿ ಜಪಾನ್ ದೇಶ ಮಂಚೂರಿಯಾವನ್ನು ವಶಪಡಿಸಿಕೊಂಡು ಮಂಚುಕೊ ಎಂದು ಹೆಸರನ್ನು ಬದಲಾಯಿಸಿ ಅಲ್ಲಿ ಒಂದು ಕೈಗೊಂಬೆ ಸರ್ಕಾರವನ್ನು ಸ್ಥಾಪಿಸಿತು. ಇದನ್ನು ಸಂಯುಕ್ತ ರಾಷ್ಟ್ರಗಳ ಸಂಘವು ವಿರೋಧಿಸಿದಾಗ ಜಪಾನ್ ಸಂಘದ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ ಹೊರನಡೆಯಿತು. ಇದು ಸಂಯುಕ್ತ ರಾಷ್ಟ್ರಗಳ ಸಂಘವನ್ನು ಬಲಹೀನಗೊಳಿಸಿತು.
4. ಸಂಯುಕ್ತ ರಾಷ್ಟ್ರಗಳ ಸಂಘವು ತನಗಾಗಿ ಒಂದು ಶಾಶ್ವತ ಸೈನ್ಯವನ್ನು ಇಟ್ಟುಕೊಳ್ಳಲಿಲ್ಲ. ಇದರಿಂದ ತನ್ನ ತೀರ್ಮಾನಗಳನ್ನು ಕಾರ್ಯಗತಗೊಳಿಸಲು ಸಾಧ್ಯವಾಗಲಿಲ್ಲ.
5. ಜರ್ಮನಿ, ಇಟಲಿ ಮತ್ತು ಜಪಾನಿನಲ್ಲಿ ಉದಯಿಸಿದ ಸರ್ವಾಧಿಕಾರವು ಸಂಯುಕ್ತ ರಾಷ್ಟ್ರಗಳ ಸಂಘದ ಸೋಲಿಗೆ ಮುಖ್ಯ ಕಾರಣವಾಯಿತು.
6. ಸಂಯುಕ್ತ ರಾಷ್ಟ್ರಗಳ ಸಂಘದ ಪ್ರತಿಷ್ಠೆ ಹೊಂದಿದ್ದ ನಾಯಕರು ಪ್ರಚಲಿತ ಸಮಸ್ಯೆಗಳಿಗೆ ಪರಿಹಾರ ಕಾಣಲು ವಿಫಲರಾದರು. ಆದ್ದರಿಂದ ಈ ಸಂಘವು ಮೂರ್ಖರ ಸಂಘ ಎಂದು ಗುರುತಿಸಲ್ಪಟ್ಟಿತು.

ಈ ಕೊರತೆಗಳೆಲ್ಲವೂ ಸಂಯುಕ್ತ ರಾಷ್ಟ್ರಗಳ ಸಂಘವು ವಿಫಲವಾಗಲು ಕಾರಣಗಳಾಗಿದ್ದವು. ಹೀಗಿದ್ದರೂ ತನ್ನಿಂದ ಸಾಧ್ಯವಾದಷ್ಟು ಹಲವು ಸಮಸ್ಯೆಗಳನ್ನು ಬಗೆಹರಿಸಲು ಸಂಯುಕ್ತ ರಾಷ್ಟ್ರಗಳ ಸಂಘವು ಪ್ರಯತ್ನಿಸಿತು. ಇದು ಎರಡನೆಯ ಮಹಾಯುದ್ಧದ ನಂತರ ವಿಶ್ವ ಸಂಸ್ಥೆಯ(UNO) ಸ್ಥಾಪನೆಗೆ ಪೂರ್ವಜನಂತಾಯಿತು.

ಮೊದಲನೆಯ ಮಹಾಯುದ್ಧ (1914–1918)

ಮಿತ್ರ ರಾಷ್ಟ್ರಗಳು	ಕೇಂದ್ರ ರಾಷ್ಟ್ರಗಳು
ಜರ್ಮನಿ	ಇಂಗ್ಲೆಂಡ್
ಆಸ್ಟ್ರಿಯ – ಹಂಗೇರಿ	ಫ್ರಾನ್ಸ್
ಬಲ್ಗೇರಿಯ	ರಷ್ಯಾ
ಟರ್ಕಿ	ರುಮೇನಿಯಾ
	ಅಮೆರಿಕ

ಅಭ್ಯಾಸ

ಅ. ಸರಿ ಉತ್ತರ ಆರಿಸಿ ಬರೆಯಿರಿ.

1. ವಿಶ್ವದಾದ್ಯಂತ ಆಧಿಕ್ಯ ಮಾಡುವ ಹಕ್ಕು ಮತ್ತು ಸಾಮರ್ಥ್ಯ ಜರ್ಮನಿಗೆ ಮಾತ್ರ ಅರ್ಹವಾದುದು ಎಂದು ಹೇಳಿದವರು

ಅ) ಬಿಸ್ಮಾರ್ಕ್ ಆ) ಎರಡನೇ ಕೈಸರ್ ವಿಲಿಯಂ ಇ) ಹಿಟ್ಲರ್ ಈ) ಮುಸೋಲಿನಿ

2. ಎರಡನೇ ಕೈಸರ್ ವಿಲಿಯಂ ನೌಕಾಸೇನೆಯನ್ನು ನಿಲ್ಲಿಸಿದ್ದ ಸ್ಥಳ

ಅ) ಹೆಲಿಗೋಲ್ಯಾಂಡ್ ಆ) ಹಾಲೆಂಡ್ ಇ) ಜಟ್‌ಲ್ಯಾಂಡ್ ಈ) ಐರ್ಲೆಂಡ್

3. ಫ್ರಾನ್ಸ್ ಮರಳಿ ಪಡೆಯಲು ಇಚ್ಚಿಸಿದ ಸ್ಥಳಗಳು

ಅ) ಅಲ್ಸಾಸ್ ಮತ್ತು ಲೊರೈನ್ ಆ) ಬೋಸ್ನಿಯಾ ಮತ್ತು ಹರ್ಜೆಗೋವಿನ

ಇ) ಆಸ್ಟ್ರಿಯಾ ಮತ್ತು ಹಂಗೆರಿ ಈ) ಎಸ್ಟೋನಿಯಾ ಮತ್ತು ಲಾಟ್‌ವಿಯಾ

4. ಆಸ್ಟ್ರಿಯಾದ ಯುವರಾಜ

ಅ) ಫ್ರಾನ್ಸಿಸ್ ಫರ್ಡಿನಾಂಡ್ ಆ) ಫ್ರಿನ್ಸಿಸ್ ಡ್ಯುಕ್

ಇ) ಫ್ರಾನ್ಸಿಸ್ ಡಿ ಲೆಸಪ್ಸ್ ಈ) ಫ್ರಾನ್ಸಿಸ್ ಬೇಯಾ

5. ಆಸ್ಟ್ರಿಯಾ ಸರ್ಬಿಯಾದ ಮೇಲೆ ದಂಡೆತ್ತಿ ಹೋದ ದಿನ

ಅ) ಜುಲೈ 28, 1914 ಆ) ಜೂನ್ 28, 1914

ಇ) ಮಾರ್ಚ್ 28, 1914 ಈ) ಆಗಸ್ಟ್ 28, 1914

6. ಜರ್ಮನಿಯು ಫ್ರಾನ್ಸ್ ಮೇಲೆ ದಂಡೆತ್ತಿ ಈ ದೇಶದ ಮಾರ್ಗವಾಗಿ ಹೋಯಿತು

ಅ) ನೆದರ್‌ಲ್ಯಾಂಡ್ ಆ) ಲಕ್ಸಂಬರ್ಗ್ ಇ) ರೈನ್‌ಲ್ಯಾಂಡ್ ಈ) ಬೆಲ್ಜಿಯಂ

7. ಟರ್ಕಿಯು ತನ್ನ ಸಹಾಯಹಸ್ತವನ್ನು ಇವರಿಗೆ ನೀಡಿತು

ಅ) ಮೈತ್ರಿ ರಾಷ್ಟ್ರಗಳು ಆ) ಶತ್ರು ರಾಷ್ಟ್ರಗಳು ಇ) ಕೇಂದ್ರ ಪಕ್ಷ ಈ) ಉನ್ನತ ರಾಷ್ಟ್ರಗಳು

8. ಆಂಗ್ಲೇಯರಿಗೆ ಈ ದಂಡಯಾತ್ರೆಯು ಒಂದು ಸೋಲು

ಅ) ಜರ್ಮನಿಯ ದಂಡಯಾತ್ರೆ ಆ) ಫ್ರೆಂಚ್ ದಂಡಯಾತ್ರೆ

ಇ) ಡಾರ್ಡನಲ್ಸ್ ದಂಡಯಾತ್ರೆ ಈ) ಕ್ಯೂಬಾ ದಂಡಯಾತ್ರೆ

9. ಜರ್ಮನಿಯಿಂದ ಮುಳುಗಿಸಲ್ಪಟ್ಟ ಅಮೆರಿಕದ ಪ್ರಖ್ಯಾತ ವಾಣಿಜ್ಯ ಹಡಗು

ಅ) ಲುಪ್ತಾಫೆ ಆ) ರಾಯಲ್ ಇ) ಲೂಸಿಡಾನಿಯಾ ಈ) ಬರ್ಲಿನ್

10. ರಷ್ಯಾದಲ್ಲಿ ಝಾರ್ ಆಳ್ವಿಕೆಯನ್ನು ಕೊನೆಗೊಳಿಸಿದವನು

ಅ) ಲೆನಿನ್ ಆ) ಕಾರ್ಲ್‌ಮಾರ್ಕ್ಸ್ ಇ) ಮಾರ್ಟೊವ್ ಈ) ಸ್ಟಾಲಿನ್

11. ಜರ್ಮನಿಯ ನೌಕಾಸೇನೆಯನ್ನು ನಾಶಗೊಳಿಸಲ್ಪಟ್ಟ ಸಾಗರಯುದ್ಧ ನೆಲೆ

ಅ) ಜಟ್‌ಲ್ಯಾಂಡ್ ಆ) ಡೋಗರ್‌ಬ್ಯಾಂಕ್ ಇ) ಉತ್ತರಸಮುದ್ರ ಈ) ಬಾಲ್ಟಿಕ್ ಸಮುದ್ರ

12. ಜರ್ಮನಿ ಶಾಂತಿ ಬಯಸಿದ ದಿನ

ಅ) ನವಂಬರ್ 11, 1918 ಆ) ನವಂಬರ್ 21, 1918

ಇ) ನವಂಬರ್ 12, 1918 ಈ) ನವಂಬರ್ 22, 1918

13. ಮೊದಲನೇ ಮಹಾಯುದ್ಧವನ್ನು ಮುಕ್ತಾಯಗೊಳಿಸಿದ ಒಪ್ಪಂದ

ಅ) ಲಂಡನ್ ಶಾಂತಿ ಒಪ್ಪಂದ ಆ) ರೋಮ್ ಶಾಂತಿ ಒಪ್ಪಂದ

ಇ) ಬರ್ಲಿನ್ ಶಾಂತಿ ಒಪ್ಪಂದ ಈ) ಪ್ಯಾರಿಸ್ ಶಾಂತಿ ಒಪ್ಪಂದ

14. ಸಂಯುಕ್ತ ರಾಷ್ಟ್ರಗಳ ಸಂಘವನ್ನು ಅಧಿಕಾರಯುತವಾಗಿ ಸ್ಥಾಪಿಸಿದ ದಿನಾಂಕ

ಅ) ಮಾರ್ಚ್ 7, 1930 ಆ) ಮಾರ್ಚ್ 2, 1928

ಇ) ಜನವರಿ 20, 1920 ಈ) ಜನವರಿ 20, 1924

ಆ. ಹೊಂದಿಸಿ ಬರೆಯಿರಿ

I

1.	ಕ್ಲೆಮೆನ್‌ಷ್ಯೂ	ಇಂಗ್ಲೆಂಡ್
2.	ಆರ್ಲಾಂಡೊ	ಫ್ರಾನ್ಸ್
3.	ಲಾಯ್ಡ್ ಜಾರ್ಜ್	ಜರ್ಮನಿ
4.	ವುಡ್ರೋ ವಿಲ್ಸನ್	ಆಸ್ಟ್ರಿಯಾ
5.	ಎರಡನೇ ಕೈಸರ್ ವಿಲಿಯಂ	ರಷ್ಯಾ
		ಅಮೆರಿಕ
		ಇಟಲಿ

II

1.	ವರ್ಸೇಲ್ಸ್ ಒಪ್ಪಂದ	ರುಮೇನಿಯ
2.	ಟ್ರಿಯನಾನ್ ಒಪ್ಪಂದ	ಟರ್ಕಿ
3.	ನ್ಯೂಲಿ ಒಪ್ಪಂದ	ಇಟಲಿ
4.	ಸೆವೆರ್ಸ್ ಒಪ್ಪಂದ	ಆಸ್ಟ್ರಿಯಾ
5.	ಸೇಂಟ್ ಜರ್ಮನಿ ಒಪ್ಪಂದ	ಹಂಗೇರಿ
		ಜರ್ಮನಿ
		ಬಲ್ಗೇರಿಯಾ

ಇ. ಸಂಕ್ಷಿಪ್ತವಾಗಿ ಉತ್ತರಿಸಿ.

1. ಜರ್ಮನಿಗೆ ವಸಾಹತುಗಳು ಏಕೆ ಅಗತ್ಯವಾಗಿದ್ದವು?
2. ಮೊರಾಕ್ಕೊ ಸಮಸ್ಯೆ–ಟಿಪ್ಪಣಿ ಬರೆಯಿರಿ.
3. ಮೊದಲನೇ ಮಹಾಯುದ್ಧಕ್ಕೆ ತಕ್ಷಣದ ಕಾರಣವೇನು?
4. ಪೂರ್ವ ಭಾಗದಲ್ಲಿ ಯುದ್ಧ–ಟಿಪ್ಪಣಿ ಬರೆಯಿರಿ.
5. ಸಮುದ್ರ ಯುದ್ಧದ ಬಗ್ಗೆ ಲಘುಟಿಪ್ಪಣಿ ಬರೆಯಿರಿ.
6. ಮೊದಲನೇ ಮಹಾಯುದ್ಧದಲ್ಲಿ ಅಮೆರಿಕಾ ಭಾಗವಹಿಸಲು ಕಾರಣವೇನು?
7. ವರ್ಸೇಲ್ಸ್ ಒಪ್ಪಂದದಲ್ಲಿ ಸೂಚಿಸಲಾದ ಯಾವುದಾದರೂ ಎರಡು ಮುಖ್ಯಾಂಶಗಳನ್ನು ಬರೆಯಿರಿ.
8. ಸಂಯುಕ್ತ ರಾಷ್ಟ್ರಗಳ ಸಂಘದ ಅಂಗಗಳಾವುವು?
9. ಸಂಯುಕ್ತ ರಾಷ್ಟ್ರಗಳ ಸಂಘದ ಸೋಲಿಗೆ ಯಾವುದಾದರೂ ಎರಡು ಕಾರಣಗಳನ್ನು ತಿಳಿಸಿ.
10. ಸಂಯುಕ್ತ ರಾಷ್ಟ್ರಗಳ ಸಂಘದ ಮೂಲಭೂತ ತತ್ವಗಳಲ್ಲಿ ಯಾವುದಾದರೂ ಎರಡನ್ನು ಬರೆಯಿರಿ.

ಈ. ಪ್ರತಿಯೊಂದು ಶೀರ್ಷಿಕೆಯಡಿಯಲ್ಲಿರುವ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ.

1. ಜರ್ಮನಿಯ ಮಹದಾಸೆ

   ಅ) ಮೊದಲನೆಯ ಮಹಾಯುದ್ಧದ ಸಮಯದಲ್ಲಿ ಜರ್ಮನಿಯನ್ನು ಆಳಿದವರಾರು?

   ಆ) ಅವರ ನಂಬಿಕೆಯೇನು?

   ಇ) ಅವರಿಂದ ಏನನ್ನು ಸಹಿಸಿಕೊಳ್ಳಲಾಗಲಿಲ್ಲ?

   ಈ) ನೌಕಾಸೇನೆಯ ನೆಲೆಯು ಎಲ್ಲಿ ಸ್ಥಾಪಿಸಲ್ಪಟ್ಟಿತ್ತು?

2. ಬಾಲ್ಕನ್ ಸಮಸ್ಯೆ

   ಅ) ಬಾಲ್ಕನ್ ದೇಶಗಳನ್ನು ತಿಳಿಸಿ.

   ಆ) ಒಂದನೆಯ ಬಾಲ್ಕನ್ ಯುದ್ಧವು ಹೇಗೆ ಮುಕ್ತಾಯವಾಯಿತು?

   ಇ) ಇತರ ಬಾಲ್ಕನ್ ದೇಶಗಳು ಬಲ್ಗೇರಿಯಾದ ಮೇಲೆ ಏಕೆ ಯುದ್ಧ ಸಾರಿದವು?

   ಈ) ಎರಡನೆಯ ಬಾಲ್ಕನ್ ಯುದ್ಧದ ಅಂತ್ಯವೇನು?

3. ತಕ್ಷಣದ ಕಾರಣ

   ಅ) ಆಸ್ಟ್ರಿಯಾವು ಬೊಸ್ನಿಯಾ ಮತ್ತು ಹರ್ಜೆಗೋವಿನಗಳನ್ನು ಯಾವಾಗ ವಶಪಡಿಸಿಕೊಂಡಿತು?

   ಆ) ಆಸ್ಟ್ರಿಯಾದ ಯುವರಾಜನಾರು?

   ಇ) ಅವನಿಗೆ ಏನು ಸಂಭವಿಸಿತು?

   ಈ) ಆಸ್ಟ್ರಿಯಾ ಏನು ಮಾಡಿತು?

4. ಯುದ್ಧದ ಮುನ್ನಡೆ

   ಅ) ಮೊದಲನೆಯ ಮಹಾಯುದ್ಧದ ಅವಧಿಯೇನು?

   ಆ) ಕೇಂದ್ರ ಪಕ್ಷದ ದೇಶಗಳು ಯಾವುವು?

   ಇ) ಮೈತ್ರಿರಾಷ್ಟ್ರಗಳು ಯಾವುವು?

   ಈ) ಯುದ್ಧದಲ್ಲಿ ಬಳಸಲ್ಪಟ್ಟ ಯುದ್ಧದ ಸಲಕರಣೆಗಳು ಯಾವುವು?

5. ಪೂರ್ವಭಾಗದ ಸಮೀಪ ಯುದ್ಧ

   ಅ) ಟರ್ಕಿ ಯಾವ ವರ್ಷ ಯುದ್ಧದಲ್ಲಿ ಭಾಗವಹಿಸಿತು?

   ಆ) ಇದನ್ನು ಏಕೆ ಒಂದು ಚಾಟಿಯೇಟೆಂದು ಭಾವಿಸಲಾಯಿತು?

   ಇ) ಇಂಗ್ಲೆಂಡ್ ಗಲ್ಲಿಪೋಲಿ ಪರ್ಯಾಯ ದ್ವೀಪವನ್ನು ವಶಪಡಿಸಿಕೊಳ್ಳಲು ಏಕೆ ಇಚ್ಛಿಸಿತು?

   ಈ) ಡಾರ್ಡನಲ್ಸ್ ದಂಡಯಾತ್ರೆಯ ಪರಿಣಾಮವೇನು?

6. ಯುದ್ಧದ ಪರಿಣಾಮಗಳು

ಅ) ಒಪ್ಪಂದದ ಷರತ್ತುಗಳನ್ನು ಹೇಗೆ ಬರೆಯಲಾಯಿತು?

ಆ) ಜರ್ಮನಿಯು ಫ್ರಾನ್ಸಿಗೆ ಹಿಂದಿರುಗಿಸಿದ ಪ್ರದೇಶಗಳು ಯಾವುವು?

ಇ) ಅರಸಾಡಳಿತವನ್ನು ಎಲ್ಲೆಲ್ಲಿ ಅಂತ್ಯಗೊಳಿಸಲಾಯಿತು?

ಈ) ಹೊಸ ಗಣರಾಜ್ಯಗಳನ್ನು ಹೆಸರಿಸಿ.

7. ಸಂಯುಕ್ತ ರಾಷ್ಟ್ರಗಳ ಸಂಘ

ಅ) ಸಂಯುಕ್ತ ರಾಷ್ಟ್ರಗಳ ಸಂಘದ ಸ್ಥಾಪನೆಗೂ ಮೊದಲು ಸ್ಥಾಪಿಸಲಾಗಿದ್ದ ಕೆಲವು ಸಂಸ್ಥೆಗಳನ್ನು ಹೆಸರಿಸಿ.

ಆ) ಸಂಯುಕ್ತ ರಾಷ್ಟ್ರಗಳ ಸಂಘದ ಪ್ರಧಾನ ಕಛೇರಿ ಎಲ್ಲಿದೆ?

ಇ) ಸದಸ್ಯ ರಾಷ್ಟ್ರಗಳು ತಮ್ಮ ಸಮಸ್ಯೆಗಳಿಗೆ ಹೇಗೆ ಪರಿಹಾರ ಕಂಡುಕೊಳ್ಳಬೇಕು?

ಈ) ಜಪಾನ್ ಮಂಚೂರಿಯಾವನ್ನು ಯಾವಾಗ ವಶಪಡಿಸಿಕೊಂಡಿತು?

ಊ. ಒಂದು ಪುಟದಲ್ಲಿ ಉತ್ತರಿಸಿ.

1. ಬಾಲ್ಕನ್ ಸಮಸ್ಯೆಯು ಮೊದಲನೇ ಮಹಾಯುದ್ಧಕ್ಕೆ ಹೇಗೆ ದಾರಿಮಾಡಿಕೊಟ್ಟಿತು?
2. ಮೊದಲನೇ ಮಹಾಯುದ್ಧದ ಪರಿಣಾಮಗಳಾವುವು?
3. ಸಂಯುಕ್ತ ರಾಷ್ಟ್ರಗಳ ಸಂಘದ ಸಾಧನೆಗಳನ್ನು ವಿವರಿಸಿ.
4. ಸಂಯುಕ್ತ ರಾಷ್ಟ್ರಗಳ ಸಂಘದ ವಿಫಲತೆಗೆ ಕಾರಣಗಳೇನು?

ಋ. ಚಟುವಟಿಕೆ.

ಪ್ರಪಂಚದ ಭೂಪಟದಲ್ಲಿ ಕೆಳಕಂಡ ಸ್ಥಳಗಳನ್ನು ಗುರುತಿಸಿ.

ಅ)ಟಾನೆನ್‌ಬರ್ಗ್ ಆ)ಮಾರ್ನ್ ನದಿ

ಇ)ಜಟ್‌ಲ್ಯಾಂಡ್ ಈ)ಡಾರ್ಡನೆಲ್ಸ್ ಉ)ಡ್ಯಾನ್‌ಜಿಗ್

3. ಎರಡು ಮಹಾಯುದ್ಧಗಳ ನಡುವಣ ಪ್ರಪಂಚದ ಸ್ಥಿತಿ (ಕ್ರಿ.ಶ.1919–ಕ್ರಿ.ಶ.1939)

ಆರ್ಥಿಕ ಕುಸಿತ

1929ರ ಪ್ರಾರಂಭದಲ್ಲಿ ಏರ್ಪಟ್ಟ ಆರ್ಥಿಕ ಕುಸಿತವು ಎರಡು ಪ್ರಪಂಚ ಯುದ್ಧಗಳ ಅವಧಿಯಲ್ಲಿ ವಿಶ್ವರಾಷ್ಟ್ರಗಳ ನಡುವೆ ಸಂಭವಿಸಿದ ಮುಖ್ಯ ಘಟನೆಯಾಗಿದೆ. ಇದು ಸೋವಿಯತ್ ರಷ್ಯಾ ಹೊರತುಪಡಿಸಿ ಇತರ ದೊಡ್ಡ ರಾಷ್ಟ್ರಗಳನ್ನೂ ಹೆಚ್ಚಾಗಿ ಬಾಧಿಸಿತು. ಅಮೆರಿಕ ಸಂಯುಕ್ತ ಸಂಸ್ಥಾನಗಳಲ್ಲಿ ಪ್ರಾರಂಭವಾದ ಆರ್ಥಿಕ ಕುಸಿತವು ಬಹುತೇಕ ಎಲ್ಲಾ ಯೂರೋಪ್ ರಾಷ್ಟ್ರಗಳನ್ನೂ ಬಾಧಿಸಿತು.

ಕಾರಣಗಳು

ಅಮೆರಿಕ ಷೇರು ಮಾರುಕಟ್ಟೆಯಲ್ಲಿ ಉಂಟಾದ ಕುಸಿತವೇ ಆರ್ಥಿಕ ಮಹಾಕುಸಿತಕ್ಕೆ ಮುಖ್ಯ ಕಾರಣವಾಯಿತು. ಷೇರುಗಳ ಬೆಲೆ ಹೆಚ್ಚಾಗುತ್ತದೆ ಎಂಬ ಅನುಮಾನದ ಆಧಾರದ ಮೇಲೆ ಜನರು ಸಾಲ ಮಾಡಿ ಷೇರು ಮಾರುಕಟ್ಟೆಯಲ್ಲಿ ಬಂಡವಾಳ ಹೂಡಿದುದು ಈ ಮಹಾಕುಸಿತಕ್ಕೆ ಕಾರಣವಾಯಿತು.



ಹರ್‌ಬರ್ಟ್ ಹೂವರ್

1929ರಲ್ಲಿ ಅಮೆರಿಕದ ಅಧ್ಯಕ್ಷರಾಗಿ ಅಧಿಕಾರಕ್ಕೆ ಬಂದ ಹರ್‌ಬರ್ಟ್ ಹೂವರ್‌ರವರ ಕಾಲದಲ್ಲಿ ಷೇರು ಮಾರುಕಟ್ಟೆಯು ಪರಾಕಾಷ್ಠತೆಯನ್ನು ತಲುಪಿತು. ಷೇರು ಮಾರುಕಟ್ಟೆಯಲ್ಲಿ ಬಂಡವಾಳ ಹೂಡಲು ಅಮೆರಿಕದ ಜನರು ಬಹಳ ಆಸಕ್ತಿಯಲ್ಲಿ ತೊಡಗಿದರು. ಸಮಾಜದ ಎಲ್ಲಾ ವರ್ಗದವರು ಷೇರು ಮಾರುಕಟ್ಟೆಯಿಂದ ಸಿಗುವ ಆದಾಯವಲ್ಲದೆ, ಅವುಗಳನ್ನು ಮರುಮಾರಾಟ ಮಾಡುವ ಮೂಲಕ ದೊರೆಯುವ ಲಾಭಕ್ಕಾಗಿ ಹೆಚ್ಚಾಗಿ ಮಾರುಕಟ್ಟೆಯಲ್ಲಿ ಬಂಡವಾಳ ಹೂಡಿದರು. ಈ ಮೂಲಕ ಅತಿ ಶೀಘ್ರವಾಗಿ ಶ್ರೀಮಂತರಾಗಬಹುದು ಎಂಬ ಮನೋಭಾವನೆಯು ಜನರಲ್ಲಿ ಉಂಟಾಯಿತು. 1929ರ ಅಕ್ಟೋಬರ್ 24ರಂದು ಷೇರುಗಳಲ್ಲಿ ಮಹಾಕುಸಿತವುಂಟಾಗಿ, ಷೇರುಗಳ ಬೆಲೆ ಗಣನೀಯವಾಗಿ ಇಳಿಯತೊಡಗಿತು.

ಇದು ಜನರಲ್ಲಿ ಭಯವನ್ನು ಉಂಟುಮಾಡಿದುದರಿಂದ ಬಹಳ ಬೇಗ ತಮ್ಮ ಷೇರುಗಳನ್ನು ಮಾರಾಟ ಮಾಡಲು ಮುಂದಾದರು. ಇದರಿಂದ ಷೇರುಗಳ ಬೆಲೆ ಮತ್ತಷ್ಟು ಕುಸಿಯಿತು. ಇದರ ನಂತರ ಬ್ಯಾಂಕುಗಳು ಕಾರ್ಯನಿರ್ವಹಿಸಲು ಸಾಧ್ಯವಾಗದ ಪರಿಸ್ಥಿತಿ ಉಂಟಾದುದರಿಂದ ಸಾಲ ನೀಡಲು ಸಾಧ್ಯವಾಗದ ಕಾರಣ ಕೃಷಿ ಉತ್ಪಾದನೆ, ಕೈಗಾರಿಕಾ ಬೆಳವಣಿಗೆಗಳು ಕುಂಠಿತವಾದವು.

ಹೂವರ್‌ರವರ ಪರಿಹಾರ ಕ್ರಮಗಳು

ಹೂವರ್ ಅಮೆರಿಕದ ಅಧ್ಯಕ್ಷರಾಗಿ ಹಲವಾರು ಸುಧಾರಣಾ ಕ್ರಮಗಳನ್ನು ಕೈಗೊಂಡರು. 1932ರಲ್ಲಿ ಹೂವರ್‌ರಿಂದ ರಚಿಸಲ್ಪಟ್ಟ ಪುನರ್‌ರಚಿತ ಹಣಕಾಸು ಸಂಸ್ಥೆಯು ಬ್ಯಾಂಕುಗಳಿಗೆ ಹಾಗೂ ಕೈಗಾರಿಕೆಗಳಿಗೆ ಸಾಲದ ಸಹಾಯ ನೀಡಲು ಮುಂದೆ ಬಂದಿತು. ಈ ಪ್ರಯತ್ನವು ಬಹುಬೇಗ ಪರಿಹಾರವನ್ನು ನೀಡದ ಕಾರಣದಿಂದ ಹೂವರ್ ಸರ್ಕಾರದ ಮೇಲೆ ಅಮೆರಿಕನ್ನರು ನಂಬಿಕೆಯನ್ನು ಕಳೆದುಕೊಂಡರು.

1932ರಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ನಡೆದ ಚುನಾವಣೆಯಲ್ಲಿ ಎಫ್.ಡಿ.ಆರ್(FDR) ಎಂದು ಕರೆಯಲ್ಪಟ್ಟ ಫ್ರಾಂಕ್ಲಿನ್ ಡಿ ರೂಸ್‌ವೆಲ್ಟ್ "ನಾನು ನಿಮಗೆ ಭರವಸೆ ನೀಡುತ್ತೇನೆ, ಅಮೆರಿಕ ಪ್ರಜೆಗಳಿಗೆ ಹೊಸ ಯೋಜನೆ ನೀತಿಯನ್ನು ಜಾರಿಗೊಳಿಸಲು ನಾನು ಪ್ರಮಾಣೀಕರಿಸುತ್ತೇನೆ" ಎಂದು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಭರವಸೆ ನೀಡಿದರು. ಇದರಿಂದ ಚುನಾವಣೆಯಲ್ಲಿ ಜಯಗಳಿಸಿ 1933ರ

ಮಾರ್ಚ್ 4ರಂದು ಅಮೆರಿಕಾದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡರು.



ಫ್ರಾಂಕ್ಲಿನ್ ಡಿ ರೂಸ್‌ವೆಲ್ಟ್

ಎಫ್.ಡಿ.ರೂಸ್‌ವೆಲ್ಟ್

- ಆರ್ಥಿಕ ಮಹಾಕುಸಿತವನ್ನು ಅಂತ್ಯಗೊಳಿಸಲು ಎಫ್.ಡಿ.ರೂಸ್‌ವೆಲ್ಟ್(FDR) ನೂತನ ನೀತಿ ಎಂಬ ಸುಧಾರಣಾ ಯೋಜನೆಯನ್ನು ರೂಪಿಸಿದರು. ಇದು ಪರಿಹಾರ, ಪುನರ್ಲಾಭ ಮತ್ತು ಸುಧಾರಣೆ ಎಂಬ ಮೂರು ಮೂಲಭೂತ ಅಂಶಗಳನ್ನು ಹೊಂದಿತ್ತು.
- ನೂತನ ನೀತಿ ಯೋಜನೆಯಂತೆ ಟೆನ್ನೆಸ್ಸಿ ಕಣಿವೆ ಯೋಜನೆಯನ್ನು ಪ್ರಾರಂಭಿಸಲಾಯಿತು. ಈ ಯೋಜನೆಯು ಮೂಲಕ ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿಕೊಂಡು ಕೈಗಾರಿಕಾಭಿವೃದ್ಧಿಯನ್ನು ಸಾಧಿಸುವುದು ಮತ್ತು ಕೃಷಿಗೆ ಉತ್ತೇಜನ ನೀಡುವುದು ಆಗಿದೆ. ಇದರ ಪ್ರಕಾರ ಅಣೆಕಟ್ಟುಗಳ ನಿರ್ಮಾಣ, ವಿದ್ಯುಚ್ಛಕ್ತಿ ಉತ್ಪಾದನೆ ಮಾಡುವುದು, ಹಡಗು ಸಾರಿಗೆ ಯೋಜನೆ, ಪ್ರವಾಹ ನಿಯಂತ್ರಣಾ ಯೋಜನೆಗಳು ಮಣ್ಣಿನ ಸಂಪತ್ತನ್ನು ರಕ್ಷಿಸುವುದು, ಅರಣ್ಯ ಸಂರಕ್ಷಣೆ ಮಾಡುವುದು ಮುಂತಾದ ಯೋಜನೆಗಳನ್ನು ಜಾರಿಗೊಳಿಸಲಾಯಿತು.
- ಸಂಯುಕ್ತ ತುರ್ತು ಪರಿಹಾರ ಆಡಳಿತದ ಮೂಲಕ ಐನೂರು ಮಿಲಿಯನ್ ಡಾಲರ್‌ಗಳನ್ನು ರಾಜ್ಯ ಮತ್ತು ಸ್ಥಳೀಯ ಸರ್ಕಾರಗಳಿಗೆ ನಿಧಿಯನ್ನು ನೀಡಲಾಯಿತು.
- ಫೆಡರಲ್ ರಿಸರ್ವ್ ಬ್ಯಾಂಕನ್ನು ಸ್ಥಾಪಿಸಿ ಬ್ಯಾಂಕ್ ಸಂಸ್ಥೆಗಳಿಗೆ ಹಾಗೂ ಕೈಗಾರಿಕೆಗಳಿಗೆ ಸಾಲ ನೀಡಲಾಯಿತು.
- ಭದ್ರತಾ ವಿನಿಮಯ ಶಾಸನ(The Security Exchange Act 1934)ದ ಮೂಲಕ ಷೇರು ಮಾರುಕಟ್ಟೆಯಲ್ಲಿ ತೊಡಗಿಸಿರುವ ಸಂಸ್ಥೆಗಳಿಗೆ ಅನುಮತಿ ನೀಡಲಾಯಿತು.
- ರಾಷ್ಟ್ರೀಯ ಕೈಗಾರಿಕಾ ಪುನರ್ಲಾಭ ಶಾಸನ(The National Industrial Recovery Act)ವನ್ನು ಜಾರಿಗೊಳಿಸಿ ಕೈಗಾರಿಕೆಗಳಲ್ಲಿ ವೇತನ ಹೆಚ್ಚಳ, ಕೆಲಸದ ಅವಧಿ ಕಡಿತ ಮುಂತಾದ ಸುಧಾರಣೆಗಳನ್ನು ತರಲಾಯಿತು.
- ವ್ಯವಸಾಯ ಸರಕುಗಳ ಸುಧಾರಣಾ ಶಾಸನವನ್ನು ಜಾರಿಗೊಳಿಸಲಾಯಿತು. ಇದರ ಮೂಲಕ ಸರ್ಕಾರ ವ್ಯವಸಾಯಗಾರರಿಗೆ ವಿನಾಯಿತಿ ನೀಡಲು ಸಾಧ್ಯವಾಯಿತು. ಈ ವಿನಾಯಿತಿಯಿಂದ ರೈತರು ಉತ್ಪಾದಿಸಿದ ಧಾನ್ಯದ ಪ್ರಮಾಣ ಕಡಿಮೆಯಾಗಿ ಬೆಲೆ ಏರಿಕೆಗೆ ದಾರಿ ಮಾಡಿಕೊಟ್ಟಿತು.

ಪರಿಣಾಮಗಳು

- ನೂತನ ನೀತಿ ಶಾಸನದ ಕೆಲವು ಕಾರ್ಯಗಳನ್ನು ಹೊರತುಪಡಿಸಿ ಇನ್ನುಳಿದವುಗಳೆಲ್ಲವೂ ಅಮೆರಿಕದ ಆರ್ಥಿಕತೆಯನ್ನು ಬಲಪಡಿಸಿದವು. ಪ್ರಜೆಗಳಿಗೆ ಸರ್ಕಾರದ ಮೇಲೆ ನಂಬಿಕೆಯನ್ನುಂಟುಮಾಡಿದವು. ಆರ್ಥಿಕಾಭಿವೃದ್ಧಿಗೂ ಉತ್ಪಾದನೆಗೂ ಭರವಸೆಯ ಆಡಿಪಾಯವನ್ನು ಹಾಕಿದವು.
- ನೂತನ ನೀತಿ ಶಾಸನದ ಕೆಲವು ಯೋಜನೆಗಳಾದ ಮಾಲೀಕ ಮತ್ತು ಕಾರ್ಮಿಕರ ನಡುವೆ ಪರಸ್ಪರ ಮಾತುಕತೆ, ಷೇರು ಮಾರುಕಟ್ಟೆ ಕ್ರಮಪಡಿಸುವುದು ಮತ್ತು ಕೆಲಸದ ವೇಳೆ ನಿಯಮಗಳು ಮೊದಲಾದವುಗಳು ಇಂದಿಗೂ ಅಮೆರಿಕ ಜನರ ಜೀವನದ ಒಂದು ಅಂಗವಾಗಿದೆ. ಈ ಅನುಕೂಲಕರ ಯೋಜನೆಯು ವಿಶ್ವರಾಷ್ಟ್ರಗಳ ಸುಧಾರಣೆಗಳಿಗೆ ಮಾದರಿಯಾಗಿದೆ. ಇದರ ಪರಿಣಾಮವಾಗಿ ಮುನಃ 1940ರಲ್ಲಿ ಅಮೆರಿಕಾದ ಅರ್ಥವ್ಯವಸ್ಥೆಯು ಸಹಜ ಸ್ಥಿತಿಗೆ ತಲುಪಿತು.

ಅಭ್ಯಾಸ

ಅ. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1. ಆರ್ಥಿಕ ಕುಸಿತ ಕಂಡುಬಂದ ದೇಶ

ಅ) ಇಂಗ್ಲೆಂಡ್ ಆ) ಅಮೆರಿಕ ಸಂಯುಕ್ತ ಸಂಸ್ಥಾನ

ಇ) ಫ್ರಾನ್ಸ್ ಈ) ಜರ್ಮನಿ

2. 1929ರಲ್ಲಿ ಅಮೆರಿಕದ ಅಧ್ಯಕ್ಷರಾಗಿದ್ದವರು

ಅ) ಥಿಯೋಡರ್ ರೂಸ್‌ವೆಲ್ಟ್ ಆ) ವುಡ್ರೋ ವಿಲ್ಸನ್

ಇ) ಹಾರ್ಬರ್ಟ್ ಹೂವರ್ ಈ) ಎಫ್.ಡಿ.ರೂಸ್‌ವೆಲ್ಟ್

3. ಅಮೆರಿಕನ್ನರು ಅಪಾರ ಆಸಕ್ತಿಯಿಂದ ಭಾಗವಹಿಸಿದ ಕ್ಷೇತ್ರ

ಅ) ವಾಣಿಜ್ಯ ಆ) ಜೂಜಾಟ

ಇ) ಸಿನಿಮಾ ಈ) ಷೇರು ಮಾರುಕಟ್ಟೆ ಅನುಮತಿ ಹಕ್ಕು

4. ಎಫ್.ಡಿ.ರೂಸ್‌ವೆಲ್ಟ್ ಅಧಿಕಾರವಹಿಸಿಕೊಂಡ ದಿನ

ಅ) ಮಾರ್ಚ್ 4,1933 ಆ) ಮಾರ್ಚ್ 4, 1993 ಇ) ಏಪ್ರಿಲ್ 6, 1933 ಈ) ಏಪ್ರಿಲ್ 6, 1943

5. ಅಮೆರಿಕದ ಆರ್ಥಿಕ ಪರಿಸ್ಥಿತಿಯು ಸಹಜ ಸ್ಥಿತಿಗೆ ಬಂದ ವರ್ಷ

ಅ) 1930 ಆ) 1940 ಇ) 1950 ಈ) 1945

ಆ. ಹೊಂದಿಸಿ ಬರೆಯಿರಿ

1.	ಷೇರು ಮಾರುಕಟ್ಟೆ ಕುಸಿತ	ಬ್ಯಾಂಕುಗಳು ಮತ್ತು ಕೈಗಾರಿಕೆಗಳು
2.	ಪುನರ್ರಚನೆ	ಸಾಲದ ಸಹಾಯಗಳು
3.	ಆರ್ಥಿಕ ಮಹಾಕುಸಿತ	ಷೇರು ಮಾರುಕಟ್ಟೆ ಹಕ್ಕು
4.	ಫೆಡರಲ್ ರಿಸರ್ವ್ ಬ್ಯಾಂಕ್	ರೈತರಿಗೆ ವಿನಾಯಿತಿ
5.	ರಕ್ಷಣಾ ಪರಿವರ್ತನಾ ಕಾಯಿದೆ	ಷೇರು ಮಾರುಕಟ್ಟೆಗಳಲ್ಲಿ ಸಾಲ ಹೂಡಿಕೆ
		1929

ಇ. ಸಂಕ್ಷಿಪ್ತವಾಗಿ ಉತ್ತರಿಸಿ

1. ಆರ್ಥಿಕ ಮಹಾಕುಸಿತವು ಏರ್ಪಡಲು ಕಾರಣಗಳು ಯಾವುವು?
2. ರಾಷ್ಟ್ರೀಯ ಕೈಗಾರಿಕಾ ಪುನರ್ಲಾಭ ಶಾಸನ–ಟಿಪ್ಪಣಿ ಬರೆಯಿರಿ
3. ವ್ಯವಸಾಯವನ್ನು ಸರಕುಗಳ ಸುಧಾರಣಾ ಶಾಸನದ ಬಗ್ಗೆ ಬರೆಯಿರಿ.

ಈ. ಪ್ರತಿಯೊಂದು ಶೀರ್ಷಿಕೆಗಳಡಿಯಲ್ಲಿ ಕೊಟ್ಟಿರುವ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ.

1. ಫ್ರಾಂಕ್ಲಿನ್ ಡಿ ರೂಸ್‌ವೆಲ್ಟ್

ಅ) ಅಧ್ಯಕ್ಷ ಚುನಾವಣೆಯು ಯಾವಾಗ ನಡೆಯಿತು?

ಆ) ಫ್ರಾಂಕ್ಲಿನ್ ಡಿ ರೂಸ್‌ವೆಲ್ಟ್ ಹೇಗೆ ಕರೆಯಲ್ಪಟ್ಟರು?

ಇ) ಅವರ ಚುನಾವಣಾ ಪ್ರಣಾಳಿಕೆ ಏನು?

ಈ) ಅವರು ತಯಾರಿಸಿದ ತತ್ವಗಳ ಹೆಸರೇನು?

2. ಪರಿಹಾರ ಕಾರ್ಯಗಳ ಪರಿಣಾಮಗಳು

ಅ) ಜನರಿಗೆ ಯಾರ ಮೇಲೆ ನಂಬಿಕೆ ಬರುವಂತೆ ಮಾಡಿತು?

ಆ) ಯಾವುದಕ್ಕೆ ಭದ್ರಬುನಾದಿ ಹಾಕಿಕೊಟ್ಟಿತು?

ಇ) ಅಮೆರಿಕನ್ನರ ಜೀವನದ ಒಂದು ಭಾಗವಾಗಿ ಸ್ವೀಕರಿಸಿದ ಕೆಲವು ಅಭಿಪ್ರಾಯಗಳನ್ನು ಬರೆಯಿರಿ.

ಈ)ಅಮೇರಿಕಾದ ಅರ್ಥವ್ಯವಸ್ಥೆಯು ಪುನಃ ಯಾವಾಗ ಸಹಜ ಸ್ಥಿತಿಗೆ ತಲುಪಿತು?

ಉ. ಒಂದು ಪುಟದಲ್ಲಿ ಉತ್ತರಿಸಿ

ಫ್ರಾಂಕ್ಲಿನ್ ಡಿ ರೂಸ್‌ವೆಲ್ಟ್ ಪ್ರಕಟಿಸಿದ ಪರಿಹಾರ, ಪುನರ್ರಚನೆ ಮತ್ತು ಸುಧಾರಣೆಗಳ ಬಗ್ಗೆ ವಿವರಿಸಿ.

4. ಇಟಲಿಯಲ್ಲಿ ಫ್ಯಾಸಿಸಂ (ಕ್ರಿ.ಶ. 1922–ಕ್ರಿ.ಶ. 1945)

ಫ್ಯಾಸಿಸಂ ಎಂಬ ಪದ 'ಫ್ಯಾಸಿಸ್' ಎಂಬ ಲ್ಯಾಟಿನ್ ಪದದಿಂದ ಪಡೆದುದಾಗಿದೆ. ಇದಕ್ಕೆ 'ಗುಂಪು' ಅಥವಾ 'ಸಮಿತಿ' ಎಂದರ್ಥ. ಇಟಲಿಯ ಫ್ಯಾಸಿಸ್ಟ್ ನಾಯಕ ಮುಸೋಲಿನಿಯು ಇಟಲಿಯ ಯುವಕರನ್ನು ಒಂದುಗೂಡಿಸಿ ಅವರುಗಳಿಗೆ ಫ್ಯಾಸಿಸ್ ಎಂದು ಹೆಸರಿಟ್ಟನು. ಈ ಫ್ಯಾಸಿಸಂ, ದೇಶದ ವಿರುದ್ಧವಾಗಿ ಕಾರ್ಯಶೀಲರಾಗಿದ್ದವರಿಗೆ ಪ್ರತ್ಯುತ್ತರ ನೀಡಿತು.

ಒಬ್ಬನೇ ನಾಯಕ, ಸರ್ವಾಧಿಕಾರಿಯ ಕೆಳಗೆ ಒಂದೇ ಪಕ್ಷದ ಆಳ್ವಿಕೆ, ತೀವ್ರವಾದ, ಆರ್ಥಿಕ ನಿಯಂತ್ರಣ–ಇವುಗಳೇ ಫ್ಯಾಸಿಸಂ ಕಟ್ಟಡದ ನಾಲ್ಕು ಆಧಾರ ಸ್ಥಂಭಗಳಾಗಿವೆ.

ಮುಸೋಲಿನಿ ಫ್ಯಾಸಿಸಂನ ತತ್ವಗಳನ್ನು ಹೆಚ್ಚಾಗಿ ನಂಬಿದ್ದನಲ್ಲದೇ ಅದರೊಡನೆ ಸಂಬಂಧಿಸಿದ 'ನಂಬು', 'ವಿಧೇಯನಾಗಿರು', 'ಹೋರಾಡು' ಎಂಬ ಮೂರು ಆಜ್ಞೆಗಳನ್ನೂ, 'ಅಧಿಕ ಸೈನ್ಯ, ಅಧಿಕ ಗೌರವ' ಎಂಬ ಘೋಷಣೆಯನ್ನೂ ಜಾರಿಗೆ ತಂದನು.

ಫ್ಯಾಸಿಸಂ–ಉದಯಕ್ಕೆ ಕಾರಣಗಳು

ಇಟಲಿಯ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿಗಳು ಫ್ಯಾಸಿಸಂ ಉದಯವಾಗಲು ಅನುಕೂಲಕರವಾಗಿದ್ದವು.

ಆರ್ಥಿಕ ಬಿಕ್ಕಟ್ಟು

ಮೊದಲನೆಯ ಮಹಾಯುದ್ಧದಲ್ಲಿ ತೊಡಗಿಸಿಕೊಂಡಿದ್ದರ ಪರಿಣಾಮವಾಗಿ ಇಟಲಿಗೆ ಆರ್ಥಿಕ ಬಿಕ್ಕಟ್ಟು ಏರ್ಪಟ್ಟಿತು. ರಾಷ್ಟ್ರದ ಸಾಲದ ಭಾರವು ಬಹುಪಟ್ಟು ಅಧಿಕವಾಯಿತು. ಪ್ಯಾರಿಸ್ ಶಾಂತಿ ಸಮ್ಮೇಳನದಲ್ಲಿ ಇಟಲಿಗೆ ರಾಜಕೀಯ ಒಳಿತುಗಳನ್ನು ಪಡೆಯಲೂ ಮತ್ತು ಕಾನೂನು ಸುವ್ಯವಸ್ಥೆಯನ್ನು ಸ್ಥಾಪಿಸಲು ಸರ್ಕಾರವು ವಿಫಲವಾಯಿತು ಎಂದು ಇಟಲಿಯ ಜನರು ಅತೃಪ್ತಿಹೊಂದಿದ್ದರು. ಸ್ಥಿರವಾದ ಆಡಳಿತವನ್ನು ತರಲು ಸರ್ಕಾರದಿಂದ ಸಾಧ್ಯವಾಗಲಿಲ್ಲ. 'ಇಟಲಿ ಯುದ್ಧದಲ್ಲಿ ಜಯಹೊಂದಿತು ಆದರೆ ಶಾಂತಿಯನ್ನು ಕಳೆದುಕೊಂಡಿತು.'

ಸಮಾಜವಾದಿಗಳ ಕಾರ್ಯಚಟುವಟಿಕೆಗಳು

ದೇಶದಲ್ಲಿ ನೆಲೆಸಿದ್ದ ಸಾಮಾಜಿಕ ಭಾವನೆಗಳು ಮತ್ತಷ್ಟು ಶಾಂತಿಯನ್ನು ಹಾಳುಮಾಡಿದವು ಎನ್ನಬಹುದು. ಈ ರೀತಿಯ ರಾಜಕೀಯ ಗೊಂದಲಗಳು 1919ರಲ್ಲಿ ಇಟಲಿಯಲ್ಲಿ ಫ್ಯಾಸಿಸಂ ಉದಯವಾಗಲು ಅನುಕೂಲಕರವಾಗಿದ್ದವು. ಇಂತಹ ಪರಿಸ್ಥಿತಿಯನ್ನು ಬದಲಾಯಿಸಲು ಒಬ್ಬ ಮಹಾನ್ ನಾಯಕನ ಅಗತ್ಯವು ಮುಸೋಲಿನಿಯ ಮೂಲಕ ಪೂರೈಸಲ್ಪಟ್ಟಿತು.

ಬೆನಿಟೊ ಮುಸೋಲಿನಿ(1883–1945)

ಬೆನಿಟೊ ಅಮಿಲ್ಕೇರ್ ಆಂಡ್ರಿಯಾ ಮುಸೋಲಿನಿ 1883ರ ಜುಲೈ 29ರಂದು ಮಧ್ಯ ಇಟಲಿಯಲ್ಲಿ ರೋಮಗ್ನ ಎಂಬ ಸ್ಥಳದಲ್ಲಿ ಜನಿಸಿದನು. ಇವನ ತಂದೆ ಒಬ್ಬ ಕಾರ್ಮಿಕ, ತಾಯಿ ಪ್ರಾಥಮಿಕ ಶಾಲಾ ಶಿಕ್ಷಕಿ.



ಮುಸೋಲಿನಿ

1902ರಲ್ಲಿ ಪದವಿ ಪಡೆದ ಮುಸೋಲಿನಿ ಶಾಲೆಯೊಂದರ ಶಿಕ್ಷಕನಾದನು.ನಂತರ ಆ ಹುದ್ದೆಯನ್ನು ತೊರೆದು ಸ್ವಿಡ್ಜರ್‌ಲ್ಯಾಂಡಿಗೆ ಬಂದು ಸೇರಿದನು. ಅಲ್ಲಿ ಲೆನಿನ್‌ನನ್ನು ಭೇಟಿಮಾಡಿ ಅವನ ತತ್ವಗಳನ್ನು ಕಲಿತನು. ನಂತರ ಆಸ್ಟ್ರಿಯಾಕ್ಕೆ ಹೋಗಿ ಅಲ್ಲಿ ಇಟಲಿಯ ಸಮಧರ್ಮ ಪತ್ರಿಕೆಯ ಸಂಪಾದಕನಾದನು. ಇದರಿಂದ ಆಸ್ಟ್ರಿಯಾದಿಂದ ಹೊರದೂಡಲ್ಪಟ್ಟನು. ಇಟಲಿಗೆ ಹಿಂತಿರುಗಿ ಬಂದ ಇವನು ಇಟಲಿಯ ಸಮಧರ್ಮ

ಪತ್ರಿಕೆ 'ಅವಂತಿ' ಯ ಸಂಪಾದಕನಾದನು. ಮೊದಲನೇ ಮಹಾಯುದ್ಧದಲ್ಲಿ ಒಬ್ಬ ಸಾಧಾರಣ ಸೈನಿಕನಾಗಿ ಭಾಗವಹಿಸಿದನು. ಯುದ್ಧದ ನಂತರ ಇಟಲಿಯ ಯುವಕರನ್ನು ಒಂದುಗೂಡಿಸಿದನು. ಇವರುಗಳನ್ನು ಫ್ಯಾಸಿಸ್ಟ್‌ಗಳು ಎಂದು ಕರೆಯಲಾಯಿತು. ಇವರುಗಳ ಸಹಾಯದೊಡನೆ ಮುಸೋಲಿನಿ 1921ರ ನವಂಬರ್‌ನಲ್ಲಿ ರಾಷ್ಟ್ರೀಯ ಫ್ಯಾಸಿಸ್ಟ್ ಪಕ್ಷವನ್ನು ಸ್ಥಾಪಿಸಿದನು.

ಅಧಿಕಾರವನ್ನು ಸ್ವಾಧೀನಪಡಿಸಿಕೊಳ್ಳುವಿಕೆ

1922ರ ಅಕ್ಟೋಬರ್ 30ರಂದು ಮುಸೋಲಿನಿಯ ನಾಯಕತ್ವದಲ್ಲಿ ಫ್ಯಾಸಿಸ್ಟ್‌ಗಳು ರೋಮ್ ನಗರದ ಕಡೆಗೆ ಸೈನ್ಯದ ಪ್ರಯಾಣ ಬೆಳೆಸಿ ತಮ್ಮ ಬಲವನ್ನು ಪ್ರದರ್ಶಿಸಿದರು. ಇದನ್ನರಿತ ಅರಸ ಎರಡನೇ ವಿಕ್ಟರ್ ಇಮ್ಯಾನುವೇಲ್ ಸರ್ಕಾರವನ್ನು ರಚಿಸುವಂತೆ ಮುಸೋಲಿನಿಗೆ ಆಹ್ವಾನವಿತ್ತನು. ಇದರ ನಂತರ ಯಾವುದೇ ರಕ್ತವೂ ಚೆಲ್ಲದೆ ಫ್ಯಾಸಿಸ್ಟ್‌ಗಳು ಅಧಿಕಾರವನ್ನು ವಶಪಡಿಸಿಕೊಂಡರು. ಹೀಗಿದ್ದರೂ ನಂತರ ನಿಗ್ರಹಿಸುವಿಕೆ, ಕೊಲೆ ಮತ್ತು ಗಡಿಪಾರು ಹೆಚ್ಚಾದವು. ಕೊನೆಯಲ್ಲಿ ಮುಸೋಲಿನಿಯ ಸರ್ವಾಧಿಕಾರ ಆಳ್ವಿಕೆಯು ಇಟಲಿಯಲ್ಲಿ ಅರಳಿತು. ಈ ಸರ್ವಾಧಿಕಾರ ಆಳ್ವಿಕೆಯು ಕ್ರಿ.ಶ.1922ರಿಂದ ಕ್ರಿ.ಶ.1945ರವರೆಗೆ ನಡೆಯಿತು.

ಫ್ಯಾಸಿಸಂ ಪಕ್ಷ

ಮುಸೋಲಿನಿಯ ತತ್ವಗಳನ್ನು ಅನುಸರಿಸಿದವರು 'ಕಪ್ಪು ಅಂಗಿಯವರು' ಎಂದು ಕರೆಯಲ್ಪಟ್ಟರು. ಇವರುಗಳು ಮುಸೋಲಿನಿಯನ್ನು 'ಡ್ಯೂಸ್'(DUCE) ಎಂದು ಕರೆದರು. ಇವನ ಗುಪ್ತಚರ ದಳ 'ಓವ್ರ'(OVRA) ಎಂದು ಕರೆಯಲ್ಪಟ್ಟಿತು.

ಫ್ಯಾಸಿಸಂ ತತ್ವಗಳ ಉದ್ದೇಶಗಳು


- ದೇಶವನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ಯುವುದು.
- ವ್ಯಕ್ತಿಗತ ಆಸ್ತಿಗಳ ಸಂರಕ್ಷಣೆ ಮಾಡುವುದು.
- ಸಧೃಡತೆಯ ವಿದೇಶಾಂಗ ನೀತಿ.

ಫ್ಯಾಸಿಸಂ ತತ್ವದ ಧ್ಯೇಯವಾಕ್ಯ (Motto)

- ಎಲ್ಲವೂ ದೇಶಕ್ಕಾಗಿಯೇ.
- ದೇಶದ ವಿರುದ್ಧವಾಗಿ ಯಾವುದೂ ಇಲ್ಲ.
- ದೇಶದ ಹೊರಗೆ ಯಾವುದೂ ಇಲ್ಲ.

ಮುಸೋಲಿನಿಯ ಸಾಧನೆಗಳು

ಮುಸೋಲಿನಿಯು ಒಬ್ಬ ಉತ್ತಮ ನಾಯಕನಾಗಿದ್ದನು. ಇಟಲಿಯನ್ನು ಬಲಯುತ ದೇಶವನ್ನಾಗಿ ಮಾಡಲು ಬಯಸಿದನು. ಆದ್ದರಿಂದಲೇ ಅನೇಕ ಕ್ರಮಗಳನ್ನು ಕೈಗೊಂಡನು. ಇಟಲಿಯಲ್ಲಿ ಶಾಂತಿ ಮತ್ತು ಶಿಸ್ತನ್ನು ಸ್ಥಾಪಿಸಿದನು. ಸ್ಥಿರವಾದ ಸರ್ಕಾರವನ್ನು ಸ್ಥಾಪಿಸಿದನು. ಅವನು ಶಿಸ್ತು ಮತ್ತು ಆಜ್ಞೆಗಳನ್ನು ಕೈಗಾರಿಕಾ ಕ್ಷೇತ್ರದಲ್ಲಿ ತಂದನು.



ಹಿಟ್ಲರನೊಡನೆ ಮುಸೋಲಿನಿ

ಇವನಿಂದ ಪ್ರಕಟಿಸಲ್ಪಟ್ಟ 'ಕೈಗಾರಿಕಾ ಶಾಸನ' (Charter of Labour) ಕಾರ್ಮಿಕರ ಕಲ್ಯಾಣಕ್ಕೆ ಬಹಳ ಸೂಕ್ತವಾಗಿತ್ತು. ಅದರ ಮೂಲಕ ಕಾರ್ಮಿಕರು ಮುಷ್ಕರವನ್ನು ನಿಗ್ರಹಿಸಿ ವಸ್ತುಗಳ ಉತ್ಪತ್ತಿಯನ್ನು ಹೆಚ್ಚಿಸಲು ಅನೇಕ ಕ್ರಮಗಳನ್ನು ಕೈಗೊಂಡನು. ನೀರಾವರಿ ಸೌಲಭ್ಯಗಳನ್ನು ಅಭಿವೃದ್ಧಿಗೊಳಿಸಿದನು. ಜವುಳು ಭೂಮಿಗಳನ್ನು ಬದಲಾವಣೆ ಮಾಡಿ ಇಳುವರಿಯನ್ನು ಹೆಚ್ಚಿಸಿದನು. ಜಲವಿದ್ಯುತ್ ಉತ್ಪಾದನೆಯನ್ನು ಪ್ರಾರಂಭಿಸಿದನು. ಇವನ ಕಾಲದಲ್ಲಿ ರಸ್ತೆ ಸಾರಿಗೆ ಮತ್ತು ರೈಲು ಮಾರ್ಗವು ಅಭಿವೃದ್ಧಿ ಹೊಂದಿದವು. ಇವುಗಳ ಮೂಲಕ ಇಟಲಿ ತನ್ನ ಸ್ವಂತ ಅಗತ್ಯಗಳನ್ನು ಪೂರೈಸಿಕೊಳ್ಳುವ ದೇಶವಾಗಿ ಅಭಿವೃದ್ಧಿ ಹೊಂದಿತು.

ಸಮರ್ಥ ಆಡಳಿತಗಾರನಾದ ಮುಸೋಲಿನಿ 1929ರಲ್ಲಿ ಪೋಪ್‌ರೊಡನೆ ಲೇಟ್ಟರನ್ ಒಪ್ಪಂದವೊಂದನ್ನು ಮಾಡಿಕೊಂಡನು. ಇದರ ಮೂಲಕ ಸುಮಾರು 60 ವರ್ಷಗಳಿಂದಲೂ ಪೋಪ್ ಮತ್ತು

ಇಟಲಿಯ ರಾಜನ ನಡುವೆ ನಡೆಯುತ್ತಿದ್ದ ಹೋರಾಟಕ್ಕೆ ಅಂತ್ಯ ಹಾಡಿದನು. ಈ ಒಪ್ಪಂದದ ಮೂಲಕ ವ್ಯಾಟಿಕನ್ ನಗರದಲ್ಲಿ ಪೋಪರ ಆಳ್ವಿಕೆಯನ್ನು ಮುಸೋಲಿನಿ ಅಂಗೀಕರಿಸಿದನು. ಇದಕ್ಕೆ ಬದಲಾಗಿ ಪೋಪರು ರೋಮ್ ನಗರದಲ್ಲಿ ಅರಸನ ವೈಭವವನ್ನು ಅಂಗೀಕರಿಸಿದರು. ಈ ಒಪ್ಪಂದವು ಮುಸೋಲಿನಿಯ ಹಿರಿಮೆ ಮತ್ತು ಕೀರ್ತಿಯನ್ನು ಮತ್ತಷ್ಟು ಹೆಚ್ಚಿಸಿತು.

ಮುಸೋಲಿನಿಯ ವಿದೇಶಾಂಗ ನೀತಿ

ಮುಸೋಲಿನಿಯು ತೀವ್ರವಾದ ಮತ್ತು ಆಕ್ರಮಣಕಾರಿ ವಿದೇಶಾಂಗ ನೀತಿಯನ್ನು ಅನುಸರಿಸಿದನು. ಇಟಲಿಯ ಹಿರಿಮೆ ಮತ್ತು ಕೀರ್ತಿಯನ್ನು ವಿಶ್ವರಂಗದಲ್ಲಿ ಹೆಚ್ಚುವಂತೆ ಮಾಡಿದನು. ಪ್ರಾಚೀನ ಹಿರಿಮೆಯುಳ್ಳ ರೋಮನ್ ಸಾಮ್ರಾಜ್ಯವನ್ನು ಪುನಃ ಸ್ಥಾಪಿಸಬೇಕೆಂಬುದೇ ಅವನ ಗುರಿಯಾಗಿದ್ದಿತು. 'ಇಟಲಿಯನ್ನು ಸಾಮ್ರಾಜ್ಯವನ್ನಾಗಿ ಬದಲಿಸಬೇಕು ಅಥವಾ ನಾಶಪಡಿಸಬೇಕು' ಎಂಬುದೇ ಮುಸೋಲಿನಿಯ ಘೋಷಣೆಯಾಗಿತ್ತು. 1936ರಲ್ಲಿ ಮುಸೋಲಿನಿ ಇಥಿಯೋಪಿಯಾವನ್ನು ವಶಪಡಿಸಿಕೊಂಡನು. 1937ರಲ್ಲಿ ಇವನು ಸಂಯುಕ್ತ ರಾಷ್ಟ್ರಗಳ ಸಂಘದಿಂದ ಹೊರನಡೆದನು.

1939ರಲ್ಲಿ ಇವನು ಅಲ್ಬೇನಿಯಾವನ್ನು ವಶಪಡಿಸಿಕೊಂಡನು. ಹಿಟ್ಲರನ ಸಾಮಾನ್ಯ ನೀತಿಯನ್ನು ಸ್ವೀಕರಿಸಿದನು. ಎರಡನೇ ಮಹಾಯುದ್ಧವು ಏರ್ಪಡಲು ಕಾರಣವಾದ ರೋಮ್–ಬರ್ಲಿನ್–ಟೋಕಿಯೋ ಒಪ್ಪಂದದಲ್ಲಿ ವಿಲೀನಗೊಂಡನು. ಎರಡನೇ ಮಹಾಯುದ್ಧವು ಇಟಲಿಗೆ ಅಪಾರ ನಷ್ಟವನ್ನುಂಟುಮಾಡಿತು. ಎರಡನೇ ಮಹಾಯುದ್ಧವು ನಡೆಯುತ್ತಿದ್ದಾಗ 1941ರಲ್ಲಿ ಇಟಲಿ ತನ್ನ ಆಫ್ರಿಕದ ವಸಾಹತುಗಳನ್ನು ಕಳೆದುಕೊಂಡಿತು. ಮುಸೋಲಿನಿಯಿಂದ ಇಟಲಿಯ ನಾಶವನ್ನು ತಡೆಯಲು ಸಾಧ್ಯವಾಗಲಿಲ್ಲ. 1943ರಲ್ಲಿ ಸಖ್ಯರಾಷ್ಟ್ರಗಳ ಸೈನ್ಯಗಳ ಗುಂಪು ಸಿಸಲಿ ದ್ವೀಪವನ್ನು ಬಲವಾಗಿ ಗುಂಡು ಎಸೆದು ದಾಳಿ ನಡೆಸಿ ವಶಪಡಿಸಿಕೊಂಡವು. ಮುಸೋಲಿನಿಯು ತಪ್ಪಿಸಿಕೊಂಡು ಓಡಿಹೋಗಲು ಪ್ರಯತ್ನಿಸಿದಾಗ ಇಟಲಿಯ ಪ್ರಜೆಯೊಬ್ಬನಿಂದ ಸುಟ್ಟು ಕೊಲ್ಲಲ್ಪಟ್ಟನು. ಇಟಲಿಯಲ್ಲಿ ಮುಸೋಲಿನಿಯ ಮರಣವು ಫ್ಯಾಸಿಸಂ ಆಳ್ವಿಕೆಗೆ ಒಂದು ಪೂರ್ಣವಿರಾಮ ಹಾಕಿತು. ನಂತರ ಇಟಲಿಯಲ್ಲಿ ಸಂಸತ್ತಿನ ಪ್ರಜಾಪ್ರಭುತ್ವ ಪದ್ಧತಿಯು ಅರಳಿತು.

ಅಭ್ಯಾಸ

ಅ. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1. ಫ್ಯಾಸಿಸಂ ಪಕ್ಷವನ್ನು ಸ್ಥಾಪಿಸಿದವರು

   ಅ) ಹಿಟ್ಲರ್ ಆ) ಮುಸೋಲಿನಿ ಇ) ಸ್ಟಾಲಿನ್ ಈ) ಲೆನಿನ್

2. ಮುಸೋಲಿನಿಯು ರಾಷ್ಟ್ರೀಯ ಫ್ಯಾಸಿಸಂ ಪಕ್ಷವನ್ನು ಸ್ಥಾಪಿಸಿದ ವರ್ಷ

   ಅ) ನವಂಬರ್, 1921 ಆ) ಡಿಸಂಬರ್, 1921 ಇ) ಜನವರಿ, 1921 ಈ) ಫೆಬ್ರವರಿ, 1921

3. ಮುಸೋಲಿನಿಯಿಂದ ಉಂಟಾದುದು

   ಅ) ಪ್ರಜಾಪ್ರಭುತ್ವ ಆಳ್ವಿಕೆ ಆ) ಕಮ್ಯುನಿಸ್ಟ್ ಆಳ್ವಿಕೆ ಇ)ಸರ್ವಾಧಿಕಾರ ಆಳ್ವಿಕೆ ಈ) ಗಣರಾಜ್ಯ ಆಳ್ವಿಕೆ

4. ಕಾರ್ಮಿಕರಿಗೆ ನೀಡಲ್ಪಟ್ಟ ಉತ್ತಮ ಪರಿಹಾರ

   ಅ) ಅಂತರ್‌ರಾಷ್ಟ್ರೀಯ ಕಾರ್ಮಿಕರ ಸಂಘಟನೆ ಆ) ಕಾರ್ಖಾನೆ ಕಾಯಿದೆ

   ಇ) ಕೈಗಾರಿಕಾ ಶಾಸನ ಈ) ಕಾರ್ಮಿಕರ ಒಕ್ಕೂಟ

5. ಮುಸೋಲಿನಿಯು ಇವನ ಸಾಮಾನ್ಯ ನೀತಿಯನ್ನು ಸ್ವೀಕರಿಸಿದನು.

   ಅ) ಚರ್ಚಿಲ್‌ನ ಆ) ಹಿಟ್ಲರ್‌ನ ಇ) ಸ್ಟಾಲಿನ್‌ನ ಈ)ಲೆನಿನ್‌ನ

6. ಸಂಯುಕ್ತ ರಾಷ್ಟ್ರಗಳ ಸಂಘದಿಂದ ಮುಸೋಲಿನಿಯು ಹೊರನಡೆದ ವರ್ಷ

   ಅ) 1931 ಆ)1932 ಇ) 1935 ಈ) 1937

ಆ. ಹೊಂದಿಸಿ ಬರೆಯಿರಿ

1.	ಡ್ಯೂಸ್	ಮುಸೋಲಿನಿಯ ಗುಪ್ತಚರ ದಳ
2.	ಕಪ್ಪು ಅಂಗಿ	1922
3.	ಓವ್ರ	1924
4.	ರೋಮ್ ಕಡೆಗೆ ಸೈನ್ಯದ ಪ್ರಯಾಣ	ಮುಸೋಲಿನಿ
5.	ಆಲ್ಬೇನಿಯಾವನ್ನು ವಶಪಡಿಸಿಕೊಂಡದ್ದು	ಮುಸೋಲಿನಿಯ ಸೇವಕರು
		1939

ಇ. ಸಂಕ್ಷಿಪ್ತವಾಗಿ ಉತ್ತರಿಸಿ.

1. ಫ್ಯಾಸಿಸಂ–ಅರ್ಥ ತಿಳಿಸಿರಿ.
2. ಫ್ಯಾಸಿಸಂನ ನಾಲ್ಕು ಆಧಾರ ಸ್ಥಂಭಗಳು ಯಾವುವು?
3. ಫ್ಯಾಸಿಸಂನ ಉದಯಕ್ಕೆ ಕಾರಣಗಳು ಯಾವುವು?
4. ಮುಸೋಲಿನಿಯು ಹೇಗೆ ಅಧಿಕಾರಕ್ಕೆ ಬಂದನು?
5. ಮುಸೋಲಿನಿಯ ಯಾವುದಾದರು ಎರಡು ಸಾಧನೆಗಳನ್ನು ಬರೆಯಿರಿ.
6. ಮುಸೋಲಿನಿಯು ಪೋಪ್ ಮತ್ತು ರಾಜನ ನಡುವೆಯಿದ್ದ ಹೋರಾಟವನ್ನು ಹೇಗೆ ತಪ್ಪಿಸಿದನು?

ಈ. ಪ್ರತಿಯೊಂದು ಶೀರ್ಷಿಕೆಯಲ್ಲಿರುವ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ.

1. ಫ್ಯಾಸಿಸಂ ಪಕ್ಷ
   - ಅ) ಫ್ಯಾಸಿಸಂ ಪಕ್ಷವನ್ನು ಸ್ಥಾಪಿಸಿದವರಾರು?
   - ಆ) ಮುಸೋಲಿನಿಯ ಘೋಷಣೆಯನ್ನು ಬರೆಯಿರಿ.
   - ಇ) ಫ್ಯಾಸಿಸಂನ ಉದ್ದೇಶಗಳೇನು?
   - ಈ) ಫ್ಯಾಸಿಸಂನ ಧ್ಯೇಯ ವಾಕ್ಯಗಳೇನು?
2. ಫ್ಯಾಸಿಸಂನ ಸಾಧನೆಗಳು
   - ಅ) ಕೈಗಾರಿಕಾ ಉತ್ಪತ್ತಿಯಲ್ಲಿ ಮುಸೋಲಿನಿಯು ಪ್ರಕಟಿಸಿದ ಬದಲಾವಣೆಗಳು ಯಾವುವು?
   - ಆ) ಕೈಗಾರಿಕಾ ಶಾಸನದ ಬಗ್ಗೆ ನೀನು ತಿಳಿದಿರುವುದನ್ನು ಬರೆ.
   - ಇ) ವ್ಯವಸಾಯ ಕ್ಷೇತ್ರದಲ್ಲಿ ಮುಸೋಲಿನಿಯು ಕೈಗೊಂಡ ಕ್ರಮಗಳೇನು?
   - ಈ) ಲೇಟ್ಟರನ್ ಒಪ್ಪಂದಕ್ಕೆ ಯಾವಾಗ ಸಹಿ ಹಾಕಲ್ಪಟ್ಟಿತು?
3. ಮುಸೋಲಿನಿಯ ಆಕ್ರಮಣಕಾರಿ ವಿದೇಶಾಂಗ ನೀತಿ
   - ಅ) ದೇಶದ ಮುಂದೆ ಮುಸೋಲಿನಿಯ ಘೋಷಣೆಯೇನು?
   - ಆ) ಮುಸೋಲಿನಿಯು ಯಾವಾಗ ಅಲ್ಬೇನಿಯಾವನ್ನು ವಶಪಡಿಸಿಕೊಂಡನು?
   - ಇ) ಸಖ್ಯರಾಷ್ಟ್ರಗಳ ಸೈನ್ಯಗಳ ಗುಂಪು ಯಾವ ದ್ವೀಪದ ಮೇಲೆ ಗುಂಡು ಎಸೆದವು?
   - ಈ) ಮುಸೋಲಿನಿಯ ಅಂತ್ಯ ಹೇಗಾಯಿತು?

ಉ. ಒಂದು ಪುಟದಲ್ಲಿ ಉತ್ತರಿಸಿ.

1. ಮುಸೋಲಿನಿಯ ನಾಯಕತ್ವದಲ್ಲಿ ಫ್ಯಾಸಿಸಂ ಮಾಡಿದ ಸಾಧನೆಗಳು ಯಾವುವು?
2. ಮುಸೋಲಿನಿಯ ಆಕ್ರಮಣಕಾರಿ ವಿದೇಶಾಂಗ ನೀತಿಯ ಬಗ್ಗೆ ಒಂದು ಪುಟದಲ್ಲಿ ಬರೆಯಿರಿ.

5. ಜರ್ಮನಿಯಲ್ಲಿ ನಾಜಿಸಂ– (ಕ್ರಿ.ಶ. 1933–ಕ್ರಿ.ಶ. 1945)

ಇಪ್ಪತ್ತನೇ ಶತಮಾನದ ಪ್ರಾರಂಭದಲ್ಲಿ ನಡೆದ ಮೊದಲನೇ ಮಹಾಯುದ್ಧದಲ್ಲಿ(1914–1918) ಪ್ರಬಲವಾದ ಜರ್ಮನಿ, ಮೈತ್ರಿ ರಾಷ್ಟ್ರಗಳನ್ನು ವಿರೋಧಿಸಿ ಯುದ್ಧ ಮಾಡಿತು. ಯುದ್ಧದ ಪ್ರಾರಂಭ ಘಟ್ಟದಲ್ಲಿ ಫ್ರಾನ್ಸ್, ಬೆಲ್ಜಿಯಂ ದೇಶಗಳನ್ನು ವಶಪಡಿಸಿಕೊಂಡು ಆರಂಭದ ಅನುಕೂಲತೆ ಪಡೆಯಿತು. ಆದರೆ 1917ರಲ್ಲಿ ಅಮೆರಿಕ ಮೈತ್ರಿ ರಾಷ್ಟ್ರಗಳೊಡನೆ ಸೇರಿ ಅದನ್ನು ಸದೃಢವಾಗುವಂತೆ ಮಾಡಿತು. ಇದರಿಂದ ಮೈತ್ರಿರಾಷ್ಟ್ರಗಳು 1918ರ ನವಂಬರ್‌ನಲ್ಲಿ ಜರ್ಮನಿ ಮತ್ತು ಕೇಂದ್ರಪಕ್ಷ ರಾಷ್ಟ್ರಗಳನ್ನು ಸೋಲಿಸಿದವು.

ಜರ್ಮನಿಯ ಸೋಲು

ಮೊದಲನೆಯ ಮಹಾಯುದ್ಧದಲ್ಲಿ ಜರ್ಮನಿಯು ಸೋತು ಅದರ ಅರಸ ಕೈಸರ್ ಎರಡನೇ ವಿಲಿಯಂ ಸಿಂಹಾಸನತ್ಯಾಗ ಮಾಡಿದುದರಿಂದ ಸಂಸತ್‌ಪಕ್ಷಗಳಿಗೆ ಜರ್ಮನಿಯಲ್ಲಿ ರಾಜಕೀಯವನ್ನು ಬದಲಾಯಿಸಿ ರಚಿಸುವ ಅವಕಾಶ ದೊರೆಯಿತು. ಜರ್ಮನಿಯ ರಾಷ್ಟ್ರೀಯ ಸಭೆಯು ವೈಮಾರ್(Weimar) ನಗರದಲ್ಲಿ ಸೇರಿ ಚರ್ಚಿಸಿತು. ಒಕ್ಕೂಟ ಆಳ್ವಿಕೆಯ ಗುಣಮಟ್ಟದ ಪ್ರಜಾಪ್ರಭುತ್ವ ಸಂವಿಧಾನವು ರಚನೆಯಾಯಿತು. ಹೀಗಿದ್ದರೂ ಜನರಲ್ಲಿ ಈ ಗಣರಾಜ್ಯಕ್ಕೆ ಸ್ವಾಗತವಿರಲಿಲ್ಲ.

ವರ್ಸೇಲ್ಸ್ ಒಪ್ಪಂದದಂತೆ ಜರ್ಮನಿಯನ್ನು ಕಠಿಣವಾದ, ದೊಡ್ಡ ಅಪಮಾನಕ್ಕೆ ಒಳಪಡಿಸಲ್ಪಟ್ಟಿತು. ಈ ಒಪ್ಪಂದದಂತೆ, ತನ್ನ ವಸಾಹತು ರಾಷ್ಟ್ರಗಳನ್ನೂ, ಹತ್ತನೇ ಒಂದು ಭಾಗ ಜನಸಂಖ್ಯೆಯನ್ನು ಕಳೆದುಕೊಂಡಿತು. ಜರ್ಮನಿಯ ಬಲವನ್ನು ಕುಗ್ಗಿಸುವ ಸಲುವಾಗಿ ಮೈತ್ರಿ ರಾಷ್ಟ್ರಗಳು ಅದರ ಸೈನಿಕ ಬಲವನ್ನು ಕಡಿಮೆಗೊಳಿಸಿತು. ಜರ್ಮನಿಯು ಆರು ಬಿಲಿಯನ್ ಡಾಲರ್‌ಗಳನ್ನು ಯುದ್ಧದ ನಷ್ಟವಾಗಿ ನೀಡುವಂತೆ ಒತ್ತಾಯಪಡಿಸಲ್ಪಟ್ಟಿತು. ಅಲ್ಲದೇ ಮಿತ್ರರಾಷ್ಟ್ರಗಳ ಸೈನ್ಯಗಳು ಸಂಪತ್ಭರಿತವಾದ ರೈನ್(Rhine) ಭಾಗವನ್ನು ಆಕ್ರಮಿಸಿಕೊಂಡವು. ಜರ್ಮನ್ನರು ವೈಮಾರ್‌ನಲ್ಲಿ ಏರ್ಪಡಿಸಲ್ಪಟ್ಟ ಗಣರಾಜ್ಯವೇ ಯುದ್ಧದ ಸೋಲಿಗೂ, ವರ್ಸೇಲ್ಸ್ ಒಪ್ಪಂದದಲ್ಲಿ ಉಂಟಾದ ಅವಮಾನಕ್ಕೆ ಕಾರಣ ಎಂದು ಭಾವಿಸಿದರು.

1929ರಲ್ಲಿ ಏರ್ಪಟ್ಟ ಆರ್ಥಿಕ ಕುಸಿತವು ಜರ್ಮನಿಯನ್ನು ಬಹಳವಾಗಿ ಬಾಧಿಸಿತು. ಇಂತಹ ಇಕ್ಕಟ್ಟಿನ ಪರಿಸ್ಥಿತಿಯಿಂದ ಜರ್ಮನಿಯನ್ನು ಕಾಪಾಡಲು ಅತ್ಯಂತ ಎದೆಗಾರಿಕೆಯ ಒಬ್ಬ ಮಹಾನ್ ನಾಯಕನನ್ನು ಜನರು ನಿರೀಕ್ಷಿಸಿ ಕಾಯುತ್ತಿದ್ದ ಸಮಯದಲ್ಲಿ ಅವರ ನಿರೀಕ್ಷೆಗಳನ್ನು ಪೂರ್ತಿಮಾಡುವ ವಿಧದಲ್ಲಿ ಅಡಾಲ್ಫ್ ಹಿಟ್ಲರ್‌ನ ಪ್ರವೇಶವಾಯಿತು.

ಅಡಾಲ್ಫ್ ಹಿಟ್ಲರ್(ಕ್ರಿ.ಶ. 1889–ಕ್ರಿ.ಶ. 1945)

ಅಡಾಲ್ಫ್ ಹಿಟ್ಲರ್ 1889ರಲ್ಲಿ ಆಸ್ಟ್ರಿಯಾದಲ್ಲಿ ಜನಿಸಿದನು. ಇವನ ತಂದೆ ಒಬ್ಬ ಸುಂಕಾಧಿಕಾರಿಯಾಗಿದ್ದರು. ಚಿಕ್ಕವಯಸ್ಸಿನಲ್ಲಿಯೇ ತಂದೆಯನ್ನು ಕಳೆದುಕೊಂಡ ಹಿಟ್ಲರ್ ಉದ್ಯೋಗವನ್ನರಸಿ ವಿಯನ್ನಾಗೆ ಬಂದು ಸೇರಿದನು. ಅಲ್ಲಿ ಕೆಲವು ಕಾಲ ಬಣ್ಣಗಾರನಾಗಿ ಕೆಲಸಮಾಡಿದನು.



ಅಡಾಲ್ಫ್ ಹಿಟ್ಲರ್

ಮೊದಲನೇ ಮಹಾಯುದ್ಧದ ಸಮಯದಲ್ಲಿ ಸೇನೆಯಲ್ಲಿ ಸೇರಿ ಧೈರ್ಯವಾಗಿ ಯುದ್ಧ ಮಾಡಿದನು.

ಇದರಿಂದ ಸನ್ಮಾನ ಪಡೆದನು. ಯುದ್ಧದ ನಂತರ ಉದ್ಯೋಗವನ್ನು ಕಳೆದುಕೊಂಡನು. ಆದ್ದರಿಂದಲೇ ರಾಜಕೀಯದಲ್ಲಿ ತೊಡಗಿಸಿಕೊಂಡನು. ತನ್ನ ಅನುಯಾಯಿಗಳನ್ನು ಒಂದೆಡೆ ಸೇರಿಸಿದನು. ಇವರು ರಾಷ್ಟ್ರೀಯ ಸಮಧರ್ಮವಾದಿಗಳು ಎಂದು ಕರೆಯಲ್ಪಟ್ಟರು. ಇವರೇ 1919ರಲ್ಲಿ ನಾಜಿಸಂ ಪಕ್ಷದವರಾಗಿ ಮಾರ್ಪಟ್ಟರು. ಹಿಟ್ಲರ್ ತನ್ನ ಪಕ್ಷದವರಿಗೆ ತತ್ವಗಳು, ಚಿನ್ಹೆ ಮತ್ತು ಸಮವಸ್ತ್ರಗಳನ್ನು ನೀಡಿದನು. ಹಿಟ್ಲರನ ಅನುಯಾಯಿಗಳು ಕಂದು ಬಣ್ಣದ ಸಮವಸ್ತ್ರವನ್ನು ಧರಿಸುವುದರಿಂದ ಅವರು 'ಕಂದು ಬಣ್ಣದ ಅಂಗಿಯವರು' ಎಂದು ಕರೆಯಲ್ಪಟ್ಟರು. ಇವರು ಹಿಟ್ಲರ್‌ನನ್ನು ಫರರ್(Fuhrer), ನಾಯಕ ಎಂದು ಕರೆದರು. ನಾಜಿಸಂ ಪಕ್ಷದ ಚಿನ್ಹೆ ಸ್ವಸ್ತಿಕ(Swastika)卐. ಇವರ ರಹಸ್ಯ ಸೈನ್ಯಗಳು ಗೆಸ್ಟಪೋ(Gestapo)ಆಗಿದೆ.

ಹಿಟ್ಲರ್ ಒಬ್ಬ ಚಳುವಳಿಗಾರನಾಗಿ ತನ್ನ ರಾಜಕೀಯ ಜೀವನವನ್ನು ಪ್ರಾರಂಭಿಸಿದನು. 1923ರಲ್ಲಿ ಅಧಿಕಾರವನ್ನು ವಶಪಡಿಸಿಕೊಳ್ಳುವ ಪ್ರಯತ್ನದಲ್ಲಿ ತೊಡಗಿದನು. ಇದಕ್ಕೆ 'ಬೀರ್ ಮಂಟಪ ಕ್ರಾಂತಿ' ಎಂದು ಹೆಸರು. ಆದರೆ ವಿಫಲವಾದನು. ಇದರಿಂದ ಅವನ ಮೇಲೆ ದೇಶದ್ರೋಹದ ಅಪರಾಧವನ್ನು ಹೊರಿಸಿ ಬಂಧಿಸಲಾಯಿತು. 5 ವರ್ಷಗಳು ಸೆರೆಮನೆಯಲ್ಲಿ ಬಂಧಿಸಲ್ಪಟ್ಟನು. ಸೆರೆಮನೆಯಲ್ಲಿದ್ದಾಗ 'ಮೈನ್ ಕ್ಯಾಂಫ್'(Mein Kampf) (ನನ್ನ ಹೋರಾಟ) ಎಂಬ ಪುಸ್ತಕವನ್ನು ಬರೆದನು. ಇದು ನಾಜಿಸಂನ ವೇದಗ್ರಂಥವಾಗಿ ಕಂಡುಬಂದಿತು. ನಂತರ ಹಿಟ್ಲರ್ ಬಿಡುಗಡೆಯಾದನು.

ಅಧಿಕಾರವನ್ನು ವಶಪಡಿಕೊಳ್ಳುವಿಕೆ

ಹಿಟ್ಲರ್ ನಾಯಕತ್ವದಲ್ಲಿ ನಾಜಿಸಂ ಪಕ್ಷವು ಒಂದು ದೊಡ್ಡ ಪಕ್ಷವಾಗಿ ಹೊರಹೊಮ್ಮಿತು. 1932ರ ಚುನಾವಣೆಯಲ್ಲಿ ಅಧಿಕ ಸ್ಥಾನಗಳಲ್ಲಿ ಜಯಗಳಿಸಿ ಜರ್ಮನಿಯ ಸಂಸತ್ತಿನಲ್ಲಿ ಎರಡನೇ ದೊಡ್ಡ ಪಕ್ಷವಾಗಿ ಬದಲಾವಣೆಯಾಯಿತು. 1933ರಲ್ಲಿ ಹಿಟ್ಲರ್ ಜರ್ಮನಿಯ ಛಾನ್ಸಲರ್ ಆದನು. ಹಿಂಡನ್‌ಬರ್ಗ್ ಎಂಬುವವನು ಗಣರಾಜ್ಯದ ಅಧ್ಯಕ್ಷನಾದನು. 1934ರಲ್ಲಿ ಹಿಂಡನ್‌ಬರ್ಗ್ ನಿಧನಹೊಂದಿದ ನಂತರ ಹಿಟ್ಲರ್ ತಾನೇ ಗಣರಾಜ್ಯದ ಅಧ್ಯಕ್ಷನಾದನು. ವೈಮಾರ್ ಗಣರಾಜ್ಯವನ್ನು ರದ್ದುಗೊಳಿಸಿ ತನ್ನನ್ನು ಜರ್ಮನಿಯ ಅರಸನನ್ನಾಗಿ ಘೋಷಿಸಿಕೊಂಡನು.

'ಒಂದೇ ಜನರು'

'ಒಂದೇ ದೇಶ'

'ಒಬ್ಬನೇ ನಾಯಕ' ಎಂಬ ತತ್ವಗಳನ್ನು ಹಿಟ್ಲರ್ ಪ್ರಕಟಿಸಿದನು.

ಹಿಟ್ಲರನ ಸಾಧನೆಗಳು

ಜರ್ಮನಿಯ ಹಿರಿಮೆಯನ್ನು ಸಾರಿದನು. ಜರ್ಮನಿಯರು ಪ್ರಪಂಚದಲ್ಲಿ ಅತ್ಯುನ್ನತ ವರ್ಗಕ್ಕೆ ಸೇರಿದವರು ಎಂಬುದರಲ್ಲಿ ಅವನು ಅಪಾರ ನಂಬಿಕೆಯನ್ನು ಇಟ್ಟುಕೊಂಡಿದ್ದನು. ನಾರ್ಡಿಕ್ ಜರ್ಮನಿಯು ಜನಾಂಗದವರು ಅತಿ ಉನ್ನತರಾದವರೆಂದೂ, ಸೆಮೈಟ್ ಯಹೂದಿಯರು ಅತ್ಯಂತ ಕೆಳವರ್ಗದವರೆಂದೂ ಭಾವಿಸಿದನು. ನಾರ್ಡಿಕ್ ಜನಾಂಗದ ವೈಶಿಷ್ಟತೆಯನ್ನು ಕಾಪಾಡುವುದರಲ್ಲಿ ಸೆಮೈಟ್ ಯಹೂದಿಗಳನ್ನು ದ್ವೇಷಿಸಿ ಉಚ್ಚಾಟಿಸಿದನು. ಅವನ ದ್ವೇಷದ ಅಂತಿಮ ಘಟ್ಟವೇ ಯಹೂದಿಗಳ ಕಗ್ಗೊಲೆಯಾಗಿದೆ. ಹಿಟ್ಲರನ ಕಾರ್ಯಶೀಲತೆ, ಹಿಂಸಾಚಾರ, ತೀವ್ರವಾದ ಮುಂತಾದವುಗಳಲ್ಲಿ ನಂಬಿಕೆಯಿಟ್ಟುಕೊಂಡಿದ್ದನು. ಜನರ ಮೂಲಭೂತ ಹಕ್ಕುಗಳು ಕಸಿದುಕೊಳ್ಳಲ್ಪಟ್ಟವು. ನಾಜಿಸಂ ಪಕ್ಷವನ್ನು ಬಿಟ್ಟು ಉಳಿದೆಲ್ಲಾ ಪಕ್ಷಗಳನ್ನು ನಾಶಗೊಳಿಸಿದನು. ಸಂಸತ್ತಿನ ಸಂಸ್ಥೆಗಳು ನಿಷೇಧಿಸಲ್ಪಟ್ಟವು. ಜರ್ಮನಿಗೆ ಹೊಸ ಅಂತಸ್ತನ್ನು ನೀಡಿದನು. ಒಕ್ಕೂಟ ಸರ್ಕಾರದ ರಚನೆಯು ನಾಶಗೊಳಿಸಲ್ಪಟ್ಟು ಸದೃಢವಾದ ನಿರಂಕುಶ ಕೇಂದ್ರೀಕೃತ ಪ್ರಭುತ್ವವನ್ನು ಸ್ಥಾಪಿಸಿದನು.

ಜರ್ಮನಿಯು ಆರ್ಥಿಕತೆಯನ್ನು ಅಭಿವೃದ್ಧಿಗೊಳಿಸಲು ಹಲವಾರು ಕ್ರಮಗಳನ್ನು ಕೈಗೊಂಡನು. ಯುದ್ಧದಿಂದಾಗಿ ಬಾಧಿಸಲ್ಪಟ್ಟಿದ್ದ ಆರ್ಥಿಕತೆಯನ್ನು ಅಭಿವೃದ್ಧಿಗೊಳಿಸಿದನು. ವ್ಯಾಪಾರ ಸಂಘಗಳ ಬದಲಾಗಿ ಮಾಲೀಕರು ಮತ್ತು ಕಾರ್ಮಿಕರ ಸದಸ್ಯರನ್ನೊಳಗೊಂಡ ಕಾರ್ಮಿಕ ಅಭಿವೃದ್ಧಿ

ಸಂಘವನ್ನು ಸ್ಥಾಪಿಸಿದನು. ಇದರ ಮೂಲಕ ಕಾರ್ಮಿಕರ ಕಲ್ಯಾಣವನ್ನು ಅಭಿವೃದ್ಧಿಗೊಳಿಸಿದನು. ಕಾರ್ಖಾನೆಗಳಿಗೆ ಬೀಗಮುದ್ರೆ ಮತ್ತು ಮುಷ್ಕರಗಳು ನಿಷೇಧಿಸಲ್ಪಟ್ಟವು.ಆಹಾರ ಧಾನ್ಯಗಳ ಉತ್ಪತ್ತಿ, ಕಚ್ಚಾವಸ್ತುಗಳು ಮತ್ತು ಕೈಗಾರಿಕಾ ಉತ್ಪತ್ತಿಯಲ್ಲಿ ಜರ್ಮನಿಯನ್ನು ಸ್ವಾವಲಂಬನೆಯ ದೇಶವಾಗಿ ಬದಲಾಯಿಸಿದನು. ವೈಜ್ಞಾನಿಕ ಪದ್ಧತಿಗಳು ನುಸುಳಲ್ಪಟ್ಟು ಹೇರಳವಾದ ಭೂಭಾಗಗಳು ವ್ಯವಸಾಯಕ್ಕೆ ಬಳಸಲ್ಪಟ್ಟವು. ಯುದ್ಧೋಪಕರಣಗಳನ್ನು ಅಧಿಕ ಪ್ರಮಾಣದಲ್ಲಿ ಉತ್ಪತ್ತಿ ಮಾಡುವುದರ ಮೂಲಕ ಅಪಾರ ಜನರಿಗೆ ಉದ್ಯೋಗಾವಕಾಶವನ್ನು ನೀಡಿ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಿದನು. ದೇಶದಾದ್ಯಂತ ಶಾಲೆಗಳನ್ನು ಪ್ರಾರಂಭಿಸಿ ಅನಕ್ಷರತೆಯನ್ನು ಹೋಗಲಾಡಿಸಿದನು. ವಿದ್ಯಾರ್ಥಿಗಳಿಗೆ ನಾಜಿಸಂ ಸಂಸ್ಕೃತಿಯು ಬೋಧಿಸಲ್ಪಟ್ಟಿತು. ನಾಜಿಸಂ ಪಕ್ಷದಲ್ಲಿ ನಂಬಿಕೆಯುಳ್ಳವರನ್ನು ಶಿಕ್ಷಕರನ್ನಾಗಿ ನೇಮಿಸಿದನು. ನಾಜಿಸಂ ಪಠ್ಯ ಯೋಜನೆಯನ್ನು ಆಧಾರವಾಗಿಟ್ಟುಕೊಂಡ ಪಠ್ಯಪುಸ್ತಕಗಳು ಮಾತ್ರ ಅನುಮತಿಸಲ್ಪಟ್ಟವು. ಸ್ತ್ರೀಯರು ನಿರ್ಲಕ್ಷಿಸಲ್ಪಟ್ಟಿದ್ದರು. ಇವರು ಮಕ್ಕಳನ್ನು ಹೆರುವ ಯಂತ್ರಗಳೆಂಬುದಾಗಿ ಭಾವಿಸಲ್ಪಟ್ಟರು. ಎಲ್ಲಾ ವಿಧವಾದ ಸಾಮಾಜಿಕ ಸಂಸ್ಥೆಗಳು ವಿಸರ್ಜಿಸಲ್ಪಟ್ಟವು.

ಹಿಟ್ಲರ್‌ನ ಆಕ್ರಮಣಕಾರಿ ವಿದೇಶಾಂಗ ನೀತಿ

ಹಿಟ್ಲರ್ ತೀವ್ರವಾದ ಆಕ್ರಮಣಕಾರಿ ವಿದೇಶಾಂಗ ನೀತಿಯನ್ನು ಅನುಸರಿಸಿದನು. ಇವನ ವಿದೇಶಾಂಗ ನೀತಿಯು ಜರ್ಮನಿಗೆ ಅಪಾಯವನ್ನೂ, ವಿನಾಶವನ್ನೂ ಹುಡುಕಿತಂದಿತಲ್ಲದೇ, ಸಂಕಟಗಳು ಮತ್ತು ದುಗುಡದುಮ್ಮಾನಗಳನ್ನೂ ಉಂಟುಮಾಡಿತು. ಹಿಟ್ಲರನು ಕಡ್ಡಾಯ ಸೈನಿಕ ಸೇವೆಯನ್ನು ಪರಿಚಯಿಸಿದನು. ಶಸ್ತ್ರಾಸ್ತ್ರಗಳನ್ನು ಅಧಿಕ ಪ್ರಮಾಣದಲ್ಲಿ ತಯಾರಿಸಿಟ್ಟನು. ಜರ್ಮನಿಯ ಸಂಪನ್ಮೂಲಗಳನ್ನು ಅಧಿಕಗೊಳಿಸಲು, ಬೆಳೆಯುತ್ತಿರುವ ಜನಸಂಖ್ಯೆಗೆ ವಾಸಸ್ಥಳಗಳಿಗಾಗಿಯೂ ಬೇರೆ ರಾಷ್ಟ್ರಗಳನ್ನು ವಶಪಡಿಸಿಕೊಳ್ಳಲು ಆಕ್ರಮಣಕಾರಿ ವಿದೇಶಾಂಗ ನೀತಿಯನ್ನು ಅನುಸರಿಸಿದನು. 1933ರಲ್ಲಿ ಸಂಯುಕ್ತ ರಾಷ್ಟ್ರಗಳ ಸಂಘದಿಂದ ಜರ್ಮನಿಯನ್ನು ಹೊರತಂದನು. 1936ರಲ್ಲಿ ಸೇನಾ ಚಟುವಟಿಕೆಗಳಿಗೆ ತಡೆಹಾಕಿದ್ದ ರೈನ್ ಭೂಭಾಗವನ್ನು (Rhine land) ವಶಪಡಿಸಿಕೊಂಡನು. ಇದರ ಮೂಲಕ 1925ರ ಲೊಕರ್ನೊ ಒಪ್ಪಂದವನ್ನು ತಿರಸ್ಕರಿಸಿದನು. 1937ರ ನವಂಬರ್‌ನಲ್ಲಿ ಇಟಲಿ ಮತ್ತು ಜಪಾನಿನೊಡನೆ ಸೇರಿ ರೋಮ್–ಬರ್ಲಿನ್–ಟೋಕಿಯೋ ಒಪ್ಪಂದವನ್ನು ಮಾಡಿಕೊಂಡನು. 1938ರಲ್ಲಿ ಆಸ್ಟ್ರಿಯಾವನ್ನು ಜರ್ಮನಿಯೊಡನೆ ವಿಲೀನಗೊಳಿಸಿಕೊಂಡನು. ಅದೇ ವರ್ಷ ಜೆಕೊಸ್ಲೊವಾಕಿಯಾದ ಒಂದು ಭಾಗವಾದ ಸುಡಟನ್‌ಲ್ಯಾಂಡನ್ನು ವಶಪಡಿಸಿಕೊಳ್ಳಲು ಇಚ್ಛಿಸುವುದಾಗಿ ಪ್ರಕಟಿಸಿದನು. ಹೀಗಾಗಿ ಇಂಗ್ಲೆಂಡಿನ ಪ್ರಧಾನಿ ನಿವಿಲ್ಲೆ ಚೇಂಬರ್ಲೈನ್(Neville Chamberlain) ಎಂಬುವವನನ್ನು ಹಿಟ್ಲರ್ ಮ್ಯೂನಿಚ್(Munich) ಎಂಬ ಸ್ಥಳದಲ್ಲಿ ಭೇಟಿಯಾಗಿ ಶಾಂತಿ ಒಪ್ಪಂದವೊಂದನ್ನು ಮಾಡಿಕೊಂಡನು. ಅದರಂತೆ ಹಿಟ್ಲರ್ ಸುಡಟನ್‌ಲ್ಯಾಂಡನ್ನು ಮಾತ್ರ ಆಕ್ರಮಿಸಿಕೊಳ್ಳಬಹುದು ಎಂದೂ ಇತರ ಸ್ಥಳಗಳನ್ನು ವಶಪಡಿಸಿಕೊಳ್ಳಬಾರದು ಎಂಬ ಆಶ್ವಾಸನೆಯನ್ನು ಪಡೆದುಕೊಂಡನು. ಆದರೆ 1939ರಲ್ಲಿ ಮ್ಯೂನಿಚ್ ಒಪ್ಪಂದವನ್ನು ತಿರಸ್ಕರಿಸಿ ಜೆಕೊಸ್ಲೊವಾಕಿಯಾವನ್ನು ಸಂಪೂರ್ಣವಾಗಿ ಜರ್ಮನಿಯೊಡನೆ ವಿಲೀನಗೊಳಿಸಿಕೊಂಡನು. ಇದು ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳಿಗೆ ಮಹದಾಶ್ಚರ್ಯವನ್ನುಂಟುಮಾಡಿತು.

1939ರಲ್ಲಿ ಹಿಟ್ಲರ್ ಜರ್ಮನಿಯನ್ನೂ, ಪೂರ್ವಪ್ರಷ್ಯಾವನ್ನೂ ಪೋಲೆಂಡ್ ಮಾರ್ಗವಾಗಿ ಸಂಪರ್ಕಿಸುವ ಸೈನಿಕ ರಸ್ತೆಯನ್ನು ನಿರ್ಮಿಸುವ ಹಕ್ಕನ್ನು ನೀಡುವಂತೆ ಪೋಲೆಂಡ್ ದೇಶವನ್ನು ಒತ್ತಾಯಿಸಿದನು ಮತ್ತು ಡ್ಯಾನ್‌ಜಿಗ್(Danzig) ಬಂದರನ್ನು ತನಗೆ ಒಪ್ಪಿಸಬೇಕೆಂದು ಬಲವಂತಪಡಿಸಿದನು. ಇದನ್ನು ಪೋಲೆಂಡ್ ನಿರಾಕರಿಸಿದಾಗ 1939ರ ಸೆಪ್ಟಂಬರ್ 1ರಂದು ಹಿಟ್ಲರ್ ಪೋಲೆಂಡಿನ ಮೇಲೆ ಮಿಂಚಿನ ದಾಳಿಯನ್ನು ನಡೆಸಿ ಪೋಲೆಂಡನ್ನು ವಶಪಡಿಸಿಕೊಂಡನು. ಇದೇ ಎರಡನೆಯ ಮಹಾಯುದ್ಧವು ಏರ್ಪಡಲು ಕಾರಣವಾಯಿತು.

ಹಿಟ್ಲರ್ 1941ರಲ್ಲಿ ರಷ್ಯಾದೊಡನೆ ಮಾಡಿಕೊಂಡ ಆಕ್ರಮಣ ಮಾಡದ ಒಪ್ಪಂದವನ್ನು ಉಲ್ಲಂಘಿಸಿ ರಷ್ಯಾದ ವಿರುದ್ಧವಾಗಿ ದಾಳಿ ನಡೆಸಿದನು. ಈ ರಷ್ಯಾದ ದಂಡಯಾತ್ರೆಯು ಭಾರಿಸೋಲನ್ನು ಅನುಭವಿಸಿತು. 1945ರಲ್ಲಿ ರಷ್ಯಾದ ಸೈನ್ಯಗಳು ಬರ್ಲಿನ್ ನಗರದೊಳಕ್ಕೆ ಪ್ರವೇಶಿಸಿದವು. ತನ್ನಿಂದ ಜಯಗಳಿಸಲು ಸಾಧ್ಯವಿಲ್ಲಾ ಎಂಬುದನ್ನು ಅರಿತ ಹಿಟ್ಲರ್ ತನಗಾಗಿಯೇ ನಿರ್ಮಿಸಿಕೊಂಡಿದ್ದ ಗುಪ್ತ ಆಶ್ರಯ ತಾಣವಾದ ನೆಲಮಾಳಿಗೆಯಲ್ಲಿ (ಬಂಕರ್) ಆತ್ಮಹತ್ಯೆ ಮಾಡಿಕೊಂಡನು. ಹಿಟ್ಲರನ ಮರಣದ ನಂತರ ಎರಡನೇ ಮಹಾಯುದ್ಧವು ಮುಕ್ತಾಯಕ್ಕೆ ಬಂದಿತು. ನಂತರ ಅವನ ನಾಜಿಸಂ ಪಕ್ಷವೂ ಸಹ ಬಲಹೀನವಾಯಿತು.

ಅಭ್ಯಾಸ

ಅ. ಸರಿ ಉತ್ತರವನ್ನು ಆರಿಸಿ ಬರೆಯಿರಿ

1. ರಾಷ್ಟ್ರೀಯ ಸಭೆಯು ಇಲ್ಲಿ ಒಂದು ಪ್ರಜಾಪ್ರಭುತ್ವ ಸಂವಿಧಾನದಿಂದ ಕೂಡಿದ ಒಕ್ಕೂಟ ಆಳ್ವಿಕೆಯ ಪದ್ಧತಿ

   ಅ) ಬರ್ಲಿನ್ ಆ) ವೈಮಾರ್ ಇ) ಫ್ರಾಂಕ್‌ಫರ್ಟ್ ಈ) ಫಿನ್‌ಲ್ಯಾಂಡ್

2. ಮೈತ್ರಿ ಬಣಗಳು ಸಂಪತ್ಭರಿತವಾದ ಈ ಸ್ಥಳವನ್ನು ಆಕ್ರಮಿಸಿದವು.

   ಅ) ರೈನ್‌ಲ್ಯಾಂಡ್ ಆ) ಸುಡಟನ್‌ಲ್ಯಾಂಡ್ ಇ) ಗ್ರೀನ್‌ಲ್ಯಾಂಡ್ ಈ) ಫಿನ್‌ಲ್ಯಾಂಡ್

3. ಹಿಟ್ಲರನ ಯಹೂದಿ ವಿರೋಧಿ ನೀತಿಯಿಂದಾಗಿ ಇವರನ್ನು ಕೊಲ್ಲುವ ಹಂತಕ್ಕೆ ತಲುಪಿದನು.

   ಅ) ಆರ್ಯರು ಆ) ಮಂಗೋಲಿಯನ್ನರು ಇ) ಯಹೂದಿಯರು ಈ) ಆಸ್ಟ್ರೇಲಿಯನ್ನರು

4. ಹಿಟ್ಲರನು ಕೆಲಕಾಲ ಹೀಗೆ ಕೆಲಸ ನಿರ್ವಹಿಸಿದನು.

   ಅ) ಬಣ್ಣಗಾರನಾಗಿ ಆ) ಹೊಲಿಗೆಗಾರನಾಗಿ ಇ) ಶಿಕ್ಷಕನಾಗಿ ಈ) ಬ್ಯಾಂಕ್ ಉದ್ಯೋಗಿಯಾಗಿ

5. 1941ರಲ್ಲಿ ಹಿಟ್ಲರ್ ದಾಳಿ ಮಾಡಿದ ದೇಶ

   ಅ) ರಷ್ಯಾ ಆ) ಫ್ರಾನ್ಸ್ ಇ) ಪ್ರಷ್ಯಾ ಈ) ಪರ್ಷಿಯಾ

6. ಮೈತ್ರಿ ರಾಷ್ಟ್ರಗಳು ಈ ದೇಶಗಳ ಆಗಮನದಿಂದ ಪ್ರಾಬಲ್ಯ ಪಡೆದವು

   ಅ) ಆಸ್ಟ್ರಿಯಾ ಆ) ಅಮೆರಿಕ ಇ) ಫಿನ್‌ಲ್ಯಾಂಡ್ ಈ) ಪೋಲೆಂಡ್

ಆ. ಹೊಂದಿಸಿ ಬರೆಯಿರಿ

1.	ಕಂದುಬಣ್ಣದ ಅಂಗಿಗಳು	ನಾಜಿಸಂ ಲಾಂಛನ
2.	ಫರರ್	ನನ್ನ ಹೋರಾಟ
3.	ಸ್ವಸ್ತಿಕ	ನಾಯಕ
4.	ಗೆಸ್ಟಪೊ	ಅಧ್ಯಕ್ಷ
5.	ಮೈನ್‌ಕ್ಯಾಂಪ್	ಹಿಟ್ಲರನ ಅನುಯಾಯಿಗಳು
		ಗೌರ್ನರ್
		ಹಿಟ್ಲರನ ಗುಪ್ತಚರದಳ

ಇ. ಸಂಕ್ಷಿಪ್ತವಾಗಿ ಉತ್ತರಿಸಿ

1. ಹಿಟ್ಲರ್ ಏನನ್ನು ಘೋಷಿಸಿದನು?
2. 1923ರಲ್ಲಿ ಹಿಟ್ಲರ್ ಏನು ಮಾಡಿದನು? ಅದರ ಪರಿಣಾಮವೇನು?
3. ಹಿಟ್ಲರ್ ಹೇಗೆ ಜರ್ಮನಿಯ ಅಧ್ಯಕ್ಷನಾದನು?
4. ಮ್ಯೂನಿಚ್ ಒಪ್ಪಂದ–ಲಘು ಟಿಪ್ಪಣಿ ಬರೆಯಿರಿ.
5. ಹಿಟ್ಲರ್ ನಾರ್ಡಿಕ್ ಜನಾಂಗದವರ ಪ್ರತ್ಯೇಕತೆಯನ್ನು ಹೇಗೆ ಸಂರಕ್ಷಿಸಲ್ಪಟ್ಟನು?

ಈ. ಪ್ರತಿಯೊಂದು ಶೀರ್ಷಿಕೆಗಳಡಿಯಲ್ಲಿರುವ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ.

1. ಅಡಾಲ್ಫ್ ಹಿಟ್ಲರ್

   ಅ) ಅಡಾಲ್ಫ್ ಹಿಟ್ಲರ್ ಎಲ್ಲಿ ಜನಿಸಿದನು?

   ಆ) ಅವನ ತಂದೆಯ ವೃತ್ತಿ ಯಾವುದು?

   ಇ) ಹಿಟ್ಲರ್ ಏನನ್ನು ಸ್ಥಾಪಿಸಿದನು?

   ಈ) ಹಿಟ್ಲರ್ ಬರೆದ ಪುಸ್ತಕದ ಹೆಸರೇನು?

2. ಹಿಟ್ಲರ್‌ನ ಆಕ್ರಮಣಕಾರಿ ನೀತಿ

   ಅ) ಹಿಟ್ಲರ್ ಏಕೆ ದೇಶಗಳನ್ನು ವಶಪಡಿಸಿಕೊಂಡನು?

   ಆ) 1925ರಲ್ಲಿ ಏರ್ಪಟ್ಟ ಲೊಕರ್ನೊ ಒಪ್ಪಂದವನ್ನು ಹೇಗೆ ಉಲ್ಲಂಘಿಸಿದನು?

   ಇ) ಹಿಟ್ಲರ್ ಪೋಲೆಂಡಿಗೆ ಎಂತಹ ಬೇಡಿಕೆಯಿತ್ತನು?

   ಈ) ಹಿಟ್ಲರ್ ಪೋಲೆಂಡ್ ಮೇಲೆ ಯಾವಾಗ ಯುದ್ಧ ಸಾರಿದನು?

ಉ. ಒಂದು ಪುಟದಲ್ಲಿ ಉತ್ತರಿಸಿ.

1. ಜರ್ಮನಿಯಲ್ಲಿ ಹಿಟ್ಲರ್ ನಾಜ಼ಿಸಂ ಆಳ್ವಿಕೆಯನ್ನುಂಟುಮಾಡಿದ ಬಗ್ಗೆ ವಿವರಿಸಿ.
2. ಹಿಟ್ಲರನ ಆಕ್ರಮಣಕಾರಿ ನೀತಿಯ ಬಗ್ಗೆ ವಿವರಿಸಿ.

6. ಎರಡನೆಯ ಮಹಾಯುದ್ಧ (ಕ್ರಿ.ಶ. 1939– ಕ್ರಿ.ಶ. 1945)

ಕ್ರಿ.ಶ 1939ರಿಂದ ಕ್ರಿ.ಶ. 1945ರವರೆಗೆ ನಡೆದ ಎರಡನೆಯ ಮಹಾಯುದ್ಧವು ವಿಶ್ವಮಟ್ಟದ ಒಂದು ಮಹಾಯುದ್ಧ ಎಂಬುದಾಗಿ ಅಭಿಪ್ರಾಯ ಪಡಲಾಗಿದೆ. ಸೈನಿಕ ಒಪ್ಪಂದಗಳಿಂದ ಮಹಾನ್ ಪ್ರಬಲ ರಾಷ್ಟ್ರಗಳು, ಮೈತ್ರಿ ರಾಷ್ಟ್ರಗಳು ಮತ್ತು ಶತ್ರುರಾಷ್ಟ್ರಗಳು ಎಂದು ವಿರುದ್ಧ ಬಣಗಳಾಗಿ ಯುದ್ಧದಲ್ಲಿ ತೊಡಗಿದವು. ಈ ಯುದ್ಧದಲ್ಲಿ ಅಧಿಕ ಸಂಖ್ಯೆಯ ರಾಷ್ಟ್ರಗಳು ಭಾಗವಹಿಸಿದ್ದವು. ಯುದ್ಧದಲ್ಲಿ ಭಾಗವಹಿಸಿದ ಎಲ್ಲಾ ರಾಷ್ಟ್ರಗಳೂ ಶತ್ರು ರಾಷ್ಟ್ರದ ಪ್ರಜೆಗಳು, ಆಸ್ತಿಗಳು, ಸೈನಿಕ ಸಂಪನ್ಮೂಲಗಳನ್ನು ನಾಶಗೊಳಿಸಲು ತಮ್ಮ ಆರ್ಥಿಕ ಸಂಪನ್ಮೂಲಗಳನ್ನು ಸಂಪೂರ್ಣವಾಗಿ ಬಳಸಿಕೊಂಡವು.

I. ಎರಡನೆಯ ಮಹಾಯುದ್ಧಕ್ಕೆ ಕಾರಣಗಳು

1. ವರ್ಸೇಲ್ಸ್ ಒಪ್ಪಂದದ ನ್ಯೂನ್ಯತೆಗಳು

ವರ್ಸೇಲ್ಸ್ ಒಪ್ಪಂದದ ಪ್ರಕಾರ ವೊದ್ಲನ್ಂಯ ವುಹಾಂಯುದ್ಧವ್ ಮುಕ್ತಾಯವಾಯಿತು. ಈ ಒಪ್ಪಂದವು ಸೇಡಿನ ಮನೋಭಾವನೆಯಿಂದ ಕೂಡಿತ್ತು. ಹಲವು ರಾಷ್ಟ್ರಗಳಿಗೆ ಅತೃಪ್ತಿಯನ್ನು ತಂದಿತು. ಈ ಒಪ್ಪಂದದಂತೆ ಜರ್ಮನಿಯು ಪ್ರಮುಖವಾದ ತಪ್ಪಿತಸ್ಥ ಎಂಬ ಆಪಾದನೆ ಹೊರಿಸಿ, ಜರ್ಮನಿಯ ವಸಾಹತುಗಳನ್ನು ಕಸಿದುಕೊಳ್ಳಲಾಯಿತು. ಅತ್ಯಧಿಕ ಖನಿಜ ಸಂಪನ್ಮೂಲಗಳ ಅಲ್ಸೇಸ್ ಮತ್ತು ಲೊರೈನ್ ಭಾಗಗಳನ್ನು ಪುನಃ ಹಿಂದಕ್ಕೆ ಪಡೆಯಲಾಯಿತು. ಸಾರ್ ಕಲ್ಲಿದ್ದಲು ನಿಕ್ಷೇಪಗಳನ್ನು ಫ್ರಾನ್ಸ್‌ಗೆ ಹದಿನೈದು ವರ್ಷಗಳವರೆಗೆ ಉಚಿತವಾಗಿ ಅನುಭವಿಸಿಕೊಳ್ಳುವ ಹಕ್ಕನ್ನು ನೀಡಿತು. ಜರ್ಮನಿಯ ಸೈನಿಕ ಬಲವನ್ನು ಕುಗ್ಗಿಸಲಾಯಿತು. ಜರ್ಮನಿಯ ತೇಜೋವಧೆಯ ಉದ್ದೇಶದೊಡನೆ ತೆಗೆದುಕೊಂಡ ಈ ಕ್ರಮಗಳೆಲ್ಲವೂ ಎರಡನೆಯ ಮಹಾಯುದ್ಧಕ್ಕೆ ಬೀಜ ಬಿತ್ತಿದವು.

2. ರಾಷ್ಟ್ರೀಯ ಮನೋಭಾವ

ಜರ್ಮನಿ ಜರ್ಮನ್ನರಿಗೆ, ಇಟಲಿ ಇಟಲಿಯನ್ನರಿಗೆ ಎಂಬ ತತ್ವಗಳು ಜನರಲ್ಲಿ ರಾಷ್ಟ್ರೀಯ ಭಾವನೆಯನ್ನು ಉಂಟುಮಾಡಿದವು. ಜರ್ಮನ್ನರೇ ಪ್ರಪಂಚವನ್ನು ಆಳಲು ಅರ್ಹರಾದವರು ಎಂದು ಭಾವಿಸಿದರು. ಒಂದು ದೇಶದ ರಾಷ್ಟ್ರೀಯ ಭಾವನೆಗಳು ದೇಶದ ಆಂತರಿಕ ಬೆಳವಣಿಗೆಗೆ ಉಪಯೋಗವಾದರೂ ಅದು ಮಿತಿಮೀರಿದಾಗ ಸಂಕುಚಿತ ರಾಷ್ಟ್ರೀಯ ಭಾವನೆಯಾಗಿ ಬದಲಾಗುವಾಗ ದುರುಪಯೋಗವಾಗುತ್ತದೆ.

3. ಸಂಯುಕ್ತ ರಾಷ್ಟ್ರಗಳ ಸಂಘದ ವೈಫಲ್ಯ

ವಿಶ್ವದಲ್ಲಿ ಶಾಂತಿ ಮತ್ತು ಸುಭದ್ರತೆಯನ್ನು ಸ್ಥಾಪಿಸಲು ಮೊದಲನೆಯ ಮಹಾಯುದ್ಧದ ನಂತರ ಸ್ಥಾಪಿತವಾದುದೇ ಸಂಯುಕ್ತ ರಾಷ್ಟ್ರಗಳ ಸಂಘವಾಗಿದೆ. ಈ ಸಂಘವು ತನ್ನ ಪ್ರಮುಖ ಉದ್ದೇಶಗಳ ನಿರ್ವಹಣೆಯಲ್ಲಿ ವಿಫಲವಾಯಿತು. ತನ್ನ ಮುಖ್ಯ ಉದ್ದೇಶವಾದ ಸೈನ್ಯದ ಬಲವನ್ನು ಕುಗ್ಗಿಸುವ ಮತ್ತು ಶಾಂತಿ ಕಾಪಾಡುವಲ್ಲಿ ವಿಫಲವಾಯಿತು. ಪ್ರಬಲ ರಾಷ್ಟ್ರಗಳು ಈ ಸಂಘದಲ್ಲಿ ಅತ್ಯಧಿಕ ವರ್ಚಸ್ಸು ಬೀರಿ ಸಂಘವನ್ನು ಗೌರವಿಸಲಿಲ್ಲ. ಇದು ಮಹಾಯುದ್ಧಕ್ಕೆ ದಾರಿಮಾಡಿಕೊಟ್ಟಿತು.

4. ಜಪಾನಿನ ಏಳಿಗೆ

ಮೊದಲನೆಯ ಮಹಾಯುದ್ಧದ ನಂತರ ಜಪಾನ್ ಒಂದು ಬಲಶಾಲಿಯಾದ ರಾಷ್ಟ್ರವಾಗಿ ಕಂಡುಬಂದಿತು. ಆ ರಾಷ್ಟ್ರದಲ್ಲಿ ಕೈಗಾರಿಕೆ ಮತ್ತು ಆರ್ಥಿಕ ಬೆಳವಣಿಗೆಯು ಉಂಟಾದುದರಿಂದ ಸಾಮ್ರಾಜ್ಯಶಾಹಿತ್ವ ನೀತಿಯನ್ನು ಅನುಸರಿಸಲು ಪ್ರಾರಂಭಿಸಿತು. ಇಟಲಿ, ಜರ್ಮನಿ, ಜಪಾನ್ ಈ ಮೂರು ರಾಷ್ಟ್ರಗಳೂ ರೋಮ್–ಬರ್ಲಿನ್–ಟೋಕಿಯೋ ಶತ್ರು ಬಣದ ಒಪ್ಪಂದವನ್ನು ಮಾಡಿಕೊಂಡವು. ಇದು ಎರಡನೆಯ ಮಹಾಯುದ್ಧಕ್ಕೆ ಬೀಜ ಬಿತ್ತಿತು.

5. ಸರ್ವಾಧಿಕಾರಿಗಳ ಏಳಿಗೆ

ಮೊದಲನೇ ಮಹಾಯುದ್ಧದ ನಂತರ ಪ್ರಪಂಚದಲ್ಲಿ ಪ್ರಜಾಪ್ರಭುತ್ವ, ಕಮ್ಯುನಿಸಂ, ಫ್ಯಾಸಿಸಂ, ನಾಜಿಸಂ ಮುಂತಾದ ತತ್ವಗಳು ಕಂಡುಬಂದವು. ಯೂರೋಪ್ ರಾಷ್ಟ್ರಗಳಲ್ಲಿ ಉಂಟಾದ ಹೊಸ ಗಣರಾಜ್ಯದ ಸೋಲು ಹಿಟ್ಲರ್, ಮುಸೋಲಿನಿ ಮುಂತಾದವರ ಸರ್ವಾಧಿಕಾರ ಬೆಳವಣಿಗೆಗೆ ದಾರಿಮಾಡಿಕೊಟ್ಟಿತು. ಇದು ಸರ್ವಾಧಿಕಾರಿಗಳ ತತ್ವಗಳಾದ ಯುದ್ಧ ಮತ್ತು ಆಕ್ರಮಣ ನೀತಿಗಳೇ ಎರಡನೆಯ ಮಹಾಯುದ್ಧಕ್ಕೆ ದಾರಿಮಾಡಿಕೊಟ್ಟವು.

6. ಅಲ್ಪಸಂಖ್ಯಾತರ ಸಮಸ್ಯೆಗಳು

ಮೊದಲನೆಯ ಮಹಾಯುದ್ಧದ ನಂತರ ಅನೇಕ ಹೊಸ ದೇಶಗಳು ಉದಯವಾದವು. ಆದರೆ ಆ ದೇಶಗಳಿಗೆ ರಾಷ್ಟ್ರೀಯತೆಯ ತತ್ವಗಳು ಇರಲಿಲ್ಲ. ಪೋಲೆಂಡ್, ಆಸ್ಟ್ರಿಯಾ. ಜೆಕೊಸ್ಲೊವಾಕಿಯಾ ದೇಶಗಳಲ್ಲಿ ಅಲ್ಪಸಂಖ್ಯಾತರ ಸ್ವಯಂ ನಿರ್ಣಯ ಹಕ್ಕನ್ನು ನಿರಾಕರಿಸಲಾಯಿತು.

7. ಸಮಾಧಾನಪಡಿಸುವ ನೀತಿ

ಪ್ರಬಲ ರಾಷ್ಟ್ರಗಳ ರಾಜನೀತಿ ನಿಪುಣರು ಕಡೆಗಣಿಸಲ್ಪಟ್ಟು, ತಮ್ಮ ತತ್ವಗಳನ್ನು ಮರೆತು ತಪ್ಪಾದ ಸಮಾಧಾನ ನೀತಿಗಳನ್ನು ಅನುಸರಿಸಿದರು. ಅವರ ನೀತಿಗಳನ್ನು ಸಾಮ್ರಾಜ್ಯಶಾಹಿ ರಾಷ್ಟ್ರಗಳು ಸ್ವೀಕರಿಸಲು ನಿರಾಕರಿಸಿದರು. ಇದು ಎರಡನೆಯ ಮಹಾಯುದ್ಧಕ್ಕೆ ದಾರಿಯಾಯಿತು.

8. ಶತ್ರುಬಣದ ಮೈತ್ರಿರಚನೆ

ಜರ್ಮನಿಯ ನಾಜಿಸಂ ಪಕ್ಷದ ನಾಯಕ ಅಡಾಲ್ಫ್ ಹಿಟ್ಲರ್ ಜನಾಂಗೀಯ ದ್ವೇಷದ ಪ್ರಚಾರದಲ್ಲಿ ತೊಡಗಿದನು. ವರ್ಸೇಲ್ಸ್ ಒಪ್ಪಂದದಲ್ಲಿ ಕಂಡುಬಂದ ಶಸ್ತ್ರಾಸ್ತ್ರಗಳ ಕುಗ್ಗಿಸುವಿಕೆಯ ಅಂಶವನ್ನು ಕೈಬಿಟ್ಟು ವಾಯುದಳ ವಿಭಾಗವನ್ನು ಪ್ರಾರಂಭಿಸಿದನು. ಕಡ್ಡಾಯ ಸೈನಿಕ ಸೇವೆಯನ್ನು ಜಾರಿಗೊಳಿಸಿದನು. ಇಟಲಿ ಮತ್ತು ಜಪಾನಿನೊಡನೆ ಸೇರಿ ರೋಮ್–ಬರ್ಲಿನ್–ಟೋಕಿಯೋ ಮೈತ್ರಿಯನ್ನು 1937ರಲ್ಲಿ ಮಾಡಿಕೊಂಡನು. ಇದು ಯುದ್ಧಕ್ಕೆ ಬೀಜಬಿತ್ತಿತು.

9. ಜರ್ಮನಿಯ ಆಕ್ರಮಣ ನೀತಿ

1938-ರ ಸೆಪ್ಟಂಬರ್‌ನಲ್ಲಿ ಹಿಟ್ಲರ್ ಸುಡಟನ್‌ಲ್ಯಾಂಡನ್ನು ವಶಪಡಿಸಿಕೊಳ್ಳುವುದಾಗಿ ಹೇಳಿ ಜೆಕೊಸ್ಲೊವಾಕಿಯಾವನ್ನು ಹೆದರಿಸಿದನು. ಇದರಿಂದ ಇಂಗ್ಲೆಂಡಿನ ಪ್ರಧಾನಿ ನಿವಿಲ್ ಚೇಂಬರ್ಲೈನ್‌ನಿಗೂ ಮತ್ತು ಹಿಟ್ಲರನಿಗೂ ಮ್ಯೂನಿಚ್ ಎಂಬಲ್ಲಿ ಒಪ್ಪಂದವೊಂದು ಏರ್ಪಟ್ಟಿತು. ಇದರಿಂದ ಜೆಕೊಸ್ಲೊವಾಕಿಯಾದ ಯಾವುದೇ ಭಾಗವನ್ನು(ಮ್ಯೂನಿಚ್ ಹೊರತುಪಡಿಸಿ) ವಿಲೀನಗೊಳಿಸಿಕೊಳ್ಳುವುದಿಲ್ಲ ಎಂದು ವಾಗ್ದಾನ ನೀಡಿದನು. ಆದರೆ ಆರು ತಿಂಗಳೊಳಗೆಯೇ ಹಿಟ್ಲರ್ ಜೆಕೊಸ್ಲೊವಾಕಿಯಾದ ಉಳಿದ ಭಾಗಗಳನ್ನು ವಶಪಡಿಸಿಕೊಂಡು ಮ್ಯೂನಿಚ್ ಒಪ್ಪಂದವನ್ನು ಮೀರಿದನು. ಅದು ಎರಡನೆಯ ಮಹಾಯುದ್ಧಕ್ಕೆ ಕಾರಣವಾಯಿತು.

10. ತಕ್ಷಣದ ಕಾರಣ

1939-ರಲ್ಲಿ ಹಿಟ್ಲರ್ ಜರ್ಮನಿಯನ್ನೂ, ಪೂರ್ವಪ್ರಷ್ಯಾವನ್ನೂ ಪೋಲೆಂಡ್ ಮಾರ್ಗವಾಗಿ ಸಂಪರ್ಕಿಸುವ ಸೈನಿಕ ರಸ್ತೆಯನ್ನು ನಿರ್ಮಿಸುವ ಹಕ್ಕನ್ನು ನೀಡುವಂತೆ ಪೋಲೆಂಡ್ ದೇಶವನ್ನು ಒತ್ತಾಯಿಸಿದನು. ಮತ್ತು ಡ್ಯಾನ್‌ಜಿಗ್(Danzig) ಬಂದರನ್ನು ತನಗೆ ಒಪ್ಪಿಸಬೇಕೆಂದು ಬಲವಂತಪಡಿಸಿದನು. ಇದನ್ನು ಪೋಲೆಂಡ್ ನಿರಾಕರಿಸಿದಾಗ 1939-ರ ಸೆಪ್ಟಂಬರ್ 1ರಂದು ಹಿಟ್ಲರ್ ಪೋಲೆಂಡಿನ ವೇಲೆ ಮಿಂಚಿನ ದಾಳಿಯನ್ನು (ಬ್ಲಿಟ್ಜ್‌ಕ್ರೀಗ್-**BLITZKRIEG**)ನಡೆಸಿ ಪೋಲೆಂಡನ್ನು ವಶಪಡಿಸಿಕೊಂಡನು. ಇದೇ ಎರಡನೆಯ ಮಹಾಯುದ್ಧವು ಏರ್ಪಡಲು ತಕ್ಷಣದ ಕಾರಣವಾಯಿತು.

II. ಯುದ್ಧದ ಮುನ್ನಡೆ

1. ಪ್ರಾರಂಭದ ಘಟನೆಗಳು(1939)

1939 ರ ಸೆಪ್ಟಂಬರ್ 3 ರಂದು ಅಧಿಕಾರಪೂರ್ವಕವಾಗಿ ಎರಡನೆಯ ಮಹಾಯುದ್ಧವು ಪ್ರಾರಂಭವಾಯಿತು. ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳು, ಹಿಟ್ಲರ್ ಅತ್ಯಾಶ್ಚರ್ಯಪಡುವಂತೆ ಜರ್ಮನಿಯ ವಿರುದ್ಧವಾಗಿ ಯುದ್ಧವನ್ನು ಘೋಷಿಸಿದವು.

2. ಸೋವಿಯತ್ ರಷ್ಯಾದ ಆಕ್ರಮಣ(1939–1941)

ಸೋವಿಯತ್ ರಷ್ಯಾ ಜರ್ಮನಿಯೊಡನೆ ಮಾಡಿಕೊಂಡ ರಹಸ್ಯ ಆಕ್ರಮಣ ಒಪ್ಪಂದದ ಪರಿಣಾಮವಾಗಿ ತಟಸ್ಥವಾಯಿತು. ಈ ಒಪ್ಪಂದದಂತೆ ಸ್ವತಂತ್ರ ರಾಷ್ಟ್ರಗಳಾದ ಎಸ್ತೋನಿಯಾ, ಲಾಟ್ವಿಯಾ, ಲಿಥುವೇನಿಯಾ ಮತ್ತು ಪೂರ್ವ ಪೋಲೆಂಡ್ ಭಾಗಗಳು ಯುದ್ಧದ ನಂತರ ಸೋವಿಯತ್ ರಷ್ಯಾದೊಡನೆ ವಿಲೀನಗೊಂಡವು.

ಈ ಪರಿಸ್ಥಿತಿಯಲ್ಲಿ ಮುಸೋಲಿನಿ ಮೈತ್ರಿ ರಾಷ್ಟ್ರಗಳ ವಿರುದ್ಧವಾಗಿ ಯುದ್ಧ ಘೋಷಿಸಿ ಫ್ರಾನ್ಸಿನ ಅನೇಕ ಭಾಗಗಳನ್ನುವಶಪಡಿಸಿಕೊಂಡನು.

3. ಬ್ರಿಟನ್ ವಿರುದ್ಧವಾಗಿ ಯುದ್ಧ 1940

ಹಿಟ್ಲರ್, ಬ್ರಿಟನ್‌ನ ವಿರುದ್ಧವಾಗಿ ತನ್ನ ಗಮನವನ್ನು ಹರಿಸಿದನು.ಅದರಲ್ಲೂ ಲುಫ್ಟ್‌ವಫ್(Luftwaffe) ಎಂಬ ವಾಯುಸೇನಾ ದಾಳಿಮಾಡಿದನು. 'U' ಆಕಾರದ ಜಲಾಂತರ್ಗಾಮಿ ನೌಕೆಯ ಮೂಲಕ ಇಂಗ್ಲೆಂಡಿನ ಹಲವು ನೌಕೆಗಳನ್ನು

ನಾರ್ವೆ
ಸ್ವೀಡನ್
ಫಿನ್‌ಲ್ಯಾಂಡ್
ಎಸ್ಟೋನಿಯಾ
ಲಾಟ್ವಿಯಾ
ಲಿಥುವೇನಿಯಾ
ಬೆಲಾರಸ್
ರಷ್ಯಾ
ಉಕ್ರೇನ್
ಪೋಲೆಂಡ್
ಜರ್ಮನಿ
ನೆದರ್‌ಲ್ಯಾಂಡ್
ಬೆಲ್ಜಿಯಂ
ಫ್ರಾನ್ಸ್
ಇಂಗ್ಲೆಂಡ್
ಐರ್‌ಲ್ಯಾಂಡ್
ಸ್ಪೇನ್
ಪೋರ್ಚುಗಲ್
ಸ್ವಿಟ್ಜರ್‌ಲ್ಯಾಂಡ್
ಆಸ್ಟ್ರಿಯಾ
ಹಂಗೇರಿ
ರುಮೇನಿಯಾ
ಬಲ್ಗೇರಿಯಾ
ಸರ್ಬಿಯಾ
ಗ್ರೀಸ್
ಟರ್ಕಿ
ಇರಾಕ್
ಸಿರಿಯಾ
ಲೆಬನಾನ್
ಇಸ್ರೇಲ್
ಜೋರ್ಡಾನ್
ಈಜಿಪ್ಟ್
ಲಿಬಿಯಾ
ಟುನೀಷಿಯಾ
ಅಲ್ಜೀರಿಯಾ
ಮೊರಾಕ್ಕೊ
ಪೋರ್ಚುಗಲ್

ಸೋಲಿಸಿದನು. 1940 ರ ಆಗಸ್ಟ್ ಮತ್ತು ಸೆಪ್ಟಂಬರ್ ತಿಂಗಳುಗಳಲ್ಲಿ ಪ್ರತಿದಿನವೂ ಲಂಡನ್ ಮತ್ತು ಇತರ ನಗರಗಳಲ್ಲಿ ಲೂಫ್ತ್‌ವಫೆ ಮೂಲಕ ಬಾಂಬ್ ಹಾಕಲಾಯಿತು. ಇದು ಇಂಗ್ಲೆಂಡ್ ಯುದ್ಧ ಎಂದು ಕರೆಯಲ್ಪಟ್ಟಿತು. ಆರಂಭದಲ್ಲಿ ಸಣ್ಣ ಪ್ರಮಾಣದ ಸೋಲುಗಳನ್ನು ಸಂಧಿಸಿದ ಇಂಗ್ಲೆಂಡ್ ನಂತರ ಜರ್ಮನಿಯ ದಾಳಿಯನ್ನು ಸರ್ ವಿನ್ಸ್ಟನ್ ಚರ್ಚಿಲ್‌ರವರ ಮುಂದಾಳತ್ವದಲ್ಲಿ ತಡೆದು ಮುನ್ನಡೆಯದಂತೆ ಮಾಡಿದನಲ್ಲದೇ ಜರ್ಮನಿಯ ವಿರುದ್ಧವಾಗಿ ವಾಯುಸೇನಾ ದಾಳಿಯನ್ನು ಮಾಡಿದನು.

4.ಬಾರ್ಬರೆಸ್ಸಾದ ನೌಕಾಯುದ್ಧದ ಕ್ರಮಗಳು (1941)

ರಷ್ಯಾದ ಅಧ್ಯಕ್ಷ ಸ್ಟಾಲಿನ್‌ನೊಡನೆ ಆಕ್ರಮಣರಹಿತ ನೀತಿಯ ಒಪ್ಪಂದ ಮಾಡಿಕೊಂಡಿದ್ದರೂ ಇಂಗ್ಲೆಂಡಿನ ನೌಕಾಸೇನೆಯ ದಾಳಿಯಲ್ಲಿ ಸೋಲನ್ನನುಭವಿಸಿದ ಹಿಟ್ಲರ್, ರಷ್ಯಾದ ಕಡೆಗೆ ತನ್ನ ಗಮನಹರಿಸಿದನು. ಕಮ್ಯುನಿಸಂ ಅನ್ನು ಅದು ಉದಯಿಸಿದ ಮಣ್ಣಿನಲ್ಲಿಯೇ ನಾಶಮಾಡಲು ಹಿಟ್ಲರ್ ಬಯಸಿದನು. ಅಲ್ಬೇನಿಯಾದಲ್ಲಿರುವ ಮುಸೋಲಿನಿಯ ಇಟಲಿಯ ಸೈನ್ಯಗಳಿಗೆ ಸಹಾಯ ಮಾಡಲು ತನ್ನ ಬೃಹತ್ ಸೈನ್ಯವನ್ನು ಕಳುಹಿಸಿದನು. ಆ ಸೈನ್ಯವು ಜೆಕೊಸ್ಲೊವಾಕಿಯಾ, ರುಮೇನಿಯಾ, ಬಲ್ಗೇರಿಯಾ ಮುಂತಾದ ದೇಶಗಳನ್ನು ಬಹು ಸುಲಭವಾಗಿ ಜಯಿಸಿತು. ಇಟಲಿ ಮತ್ತು ಜರ್ಮನಿಯ ಸೈನ್ಯಗಳು ಗ್ರೀಸ್ ದೇಶವನ್ನೂ ವಶಪಡಿಸಿಕೊಂಡವು. ಆದರೆ ಶತ್ರು ರಾಷ್ಟ್ರಗಳು ಬಾಲ್ಕನ್ ರಾಷ್ಟ್ರಗಳನ್ನು ಏಪ್ರಿಲ್ ತಿಂಗಳ ಅಂತ್ಯದೊಳಗೆ ಪುನಃ ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡವು.

5.ಸೋವಿಯತ್ ರಷ್ಯಾದ ದಾಳಿ

1941ರ ಜೂನ್ 22ರಂದು ರಷ್ಯಾದೊಡನೆ ಮಾಡಿಕೊಂಡಿದ್ದ ಆಕ್ರಮಣರಹಿತ ನೀತಿಯ ಒಪ್ಪಂದವನ್ನು ನಿರಾಕರಿಸಿದ ಹಿಟ್ಲರ್ ರಷ್ಯಾದ ಮೇಲೆ ದಂಡೆತ್ತಿ ಹೋದನು. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ರಷ್ಯಾದಲ್ಲಿ ಚಳಿಗಾಲ ಪ್ರಾರಂಭವಾಯಿತು. ಆದ್ದರಿಂದಲೇ ಜರ್ಮನಿಯ ಸೈನ್ಯಗಳು ಮಾಸ್ಕೋದಲ್ಲಿ ಬೀಡುಬಿಟ್ಟವು. ಸ್ಟಾಲಿನ್ ಮಾಸ್ಕೋ ನಗರವನ್ನು ನಾಶಪಡಿಸಿದನಲ್ಲದೇ ಸರ್ಕಾರಿ ಅಧಿಕಾರಿಗಳೆಲ್ಲರನ್ನೂ ಹೊರನಡೆಯುವಂತೆ ಮಾಡಿದನು. ರಷ್ಯನ್ನರು ನಾಶಗೊಳಿಸಿ ಹಿಂಪಡೆಯುವ ನೀತಿಯನ್ನು ಅನುಸರಿಸಿದನು. ಅದರ ಮೂಲಕ ಬೆಳೆಗಳು, ಸೇತುವೆಗಳು, ರೈಲುವಾಗ್ಗಿಗಳು ವಾಯುಂತಾದವುಗಳನ್ನು ಶತ್ರುಗಳು ವಶಪಡಿಸಿಕೊಳ್ಳದಿರಲು ಅವುಗಳನ್ನು ತಾವೇ ಬೆಂಕಿಯಿಟ್ಟು ನಾಶಪಡಿಸಿ ಮುನ್ನುಗ್ಗಿದ್ದರು. ಜರ್ಮನಿಯ ಸೈನ್ಯಗಳಿಗೆ ಏನೂ ದೊರೆಯಲಿಲ್ಲ. ಐದು ತಿಂಗಳುಗಳ ಕಠಿಣ ಪರಿಶ್ರಮದ ನಂತರ ಮಾಸ್ಕೋ ನಗರವನ್ನು ಜರ್ಮನಿಯರು ವಶಪಡಿಸಿಕೊಂಡರು. ರಷ್ಯಾದಲ್ಲಿ ಏರ್ಪಟ್ಟ ಭಾರೀ ಸೋಲಿನ ನಂತರ ಜರ್ಮನಿಯು 1944ರ ಜನವರಿಯಲ್ಲಿ ತನ್ನ ತಾಯ್ನಾಡಿಗೆ ಹಿಂತಿರುಗಿತು.

6.ಅಟ್ಲಾಂಟಿಕ್ ಶಾಸನ

1941ರ ಆಗಸ್ಟ್ ತಿಂಗಳಲ್ಲಿ ಇಂಗ್ಲೆಂಡಿನ ಪ್ರಧಾನಿ ವಿನ್ಸ್ಟನ್ ಚರ್ಚಿಲ್ ಮತ್ತು ಅಮೆರಿಕದ ಅಧ್ಯಕ್ಷ ಎಫ್.ಡಿ. ರೂಸ್‌ವೆಲ್ಟ್ ಅಟ್ಲಾಂಟಿಕ್ ಸಾಗರದಲ್ಲಿ ಆಗಸ್ಟಾ ಎಂಬ ಯುದ್ಧ ನೌಕೆಯಲ್ಲಿ ಭೇಟಿಯಾಗಿ ಅಟ್ಲಾಂಟಿಕ್ ಶಾಸನದಲ್ಲಿ ಸಹಿ ಹಾಕಿದರು. ನಂತರ ಇಂಗ್ಲೆಂಡ್ ಮತ್ತು ಅಮೆರಿಕ ದೇಶಗಳು ಒಂದಾಗಿ ಜರ್ಮನಿಯ ವಿರುದ್ಧವಾಗಿ ಒಂದು ಬೃಹತ್ ದಾಳಿಯನ್ನು ಮಾಡುವಂತೆ ಒಪ್ಪಿಕೊಂಡವು.

7.ಅಮೆರಿಕದ ಪ್ರವೇಶ



ಪರ್ಲ್ ಬಂದರಿನ ಮೇಲೆ ದಾಳಿ

1941ರ ಡಿಸೆಂಬರ್ 7,ರಂದು ಪರ್ಲ್ ಬಂದರಿನಲ್ಲಿದ್ದ(Pearl Harbour) ಅಮೆರಿಕದ ನೌಕಾಸೇನಾನೆಲೆಯನ್ನು ಜಪಾನ್ ದಾಳಿಮಾಡಿತು. ಈ ದಾಳಿಯಿಂದ ಏರ್ಪಟ್ಟ ನಾಶವು ಅಮೆರಿಕವನ್ನು ಯುದ್ಧದಲ್ಲಿ ಧುಮುಕುವಂತೆ ಮಾಡಿತು. ಇದಾದ ನಂತರ ಅಮೆರಿಕ ಜಪಾನಿನ ಮೇಲೆ ಯುದ್ಧಘೋಷಣೆ ಮಾಡಿತು.

8. ಆಫ್ರಿಕಾದ ಭಾಗಗಳ ಮೇಲೆ ಮುಸೋಲಿನಿಯ ಆಕ್ರಮಣ(1940–1942)

ಮುಸೋಲಿನಿಯು ಇಥಿಯೋಪಿಯಾವನ್ನು ವಶಪಡಿಸಿಕೊಂಡ ನಂತರ ಕೀನ್ಯಾ, ಸುಡಾನ್ ಮತ್ತು ಸೋಮಾಲಿಯಾ ದೇಶಗಳ ಮೇಲೆ ತನ್ನ ದಂಡಯಾತ್ರೆಯನ್ನು ಕೈಗೊಂಡನು. ಇಂಗ್ಲೆಂಡಿನ ಸೈನ್ಯಗಳು ಪ್ರತಿದಾಳಿಯನ್ನು ಮಾಡಿ ಎರಿಥ್ರಿಯಾ, ಸೊಮಾಲಿಲ್ಯಾಂಡ್, ಇಥಿಯೋಪಿಯಾದ ರಾಜಧಾನಿಯಾದ ಅಡಿಸ್‌ಅಬಾಬಗಳನ್ನು ವಶಪಡಿಸಿಕೊಂಡಿತು.

9.ಯುದ್ಧದ ಅಂತ್ಯ

ಮೈತ್ರಿರಾಷ್ಟ್ರಗಳ ಸೈನ್ಯಗಳು ಇಂಗ್ಲೆಂಡಿನಿಂದ ಫ್ರಾನ್ಸ್ ಮೇಲೆ ದಾಳಿಮಾಡಲು ತೀರ್ಮಾನಿಸಿದವು. 1944ರ ಮೇ ತಿಂಗಳಲ್ಲಿ ಅಮೆರಿಕ ಮತ್ತು ಇಂಗ್ಲೆಂಡಿನ ಸೈನ್ಯಗಳು ನಾರ್ಮಂಡಿ ಎಂಬ ಸ್ಥಳದಲ್ಲಿ ಬೀಡುಬಿಟ್ಟವು. ಈ ಸೈನ್ಯಗಳೊಡನೆ ಫ್ರಾನ್ಸಿನಲ್ಲಿದ್ದ ಗುಪ್ತಚರ ಸೈನ್ಯಗಳು ಸೇರಿಕೊಂಡವು. ಜರ್ಮನಿಯು ಎಲ್ಲಾ ಭಾಗಗಳಿಂದಲೂ ದಾಳಿಗೊಳಗಾಯಿತು. ಪೂರ್ವಭಾಗದಿಂದ ರಷ್ಯಾದ ಸೇನೆಗಳು ಜರ್ಮನಿ ಸೈನ್ಯಗಳನ್ನು ಹಿಮ್ಮೆಟ್ಟಿದವು. ಎರಡೂ ಕಡೆಗಳಿಂದಲೂ ಸೈನ್ಯಗಳು ಮುನ್ನುಗ್ಗಿ ಬರ್ಲಿನ್ ಕಡೆಗೆ ಬರುವುದನ್ನು ಅರಿತ ಹಿಟ್ಲರ್ ತನಗಾಗಿಯೇ ನಿರ್ಮಿಸಿಕೊಂಡಿದ್ದ ಗುಪ್ತ ಆಶ್ರಯ ತಾಣವಾದ ನೆಲವಾಳಿಗೆಯಲ್ಲಿ(ಬಂಕರ್) ಆತ್ಮಹತ್ಯೆ ಮಾಡಿಕೊಂಡನು.



ಅಣುಬಾಂಬ್ ಸ್ಫೋಟನೆ

ಇಟಲಿಯು ಸೋಲಲ್ಪಟ್ಟು ಮೈತ್ರಿರಾಷ್ಟ್ರಗಳಿಂದ ವಶಪಡಿಸಿಕೊಳ್ಳಲ್ಪಟ್ಟಿತು. ಮುಸೋಲಿನಿಯು ಕೊಲ್ಲಲ್ಪಟ್ಟನು. ಮಿತ್ರರಾಷ್ಟ್ರಗಳ ಸೈನ್ಯವು ಜರ್ಮನಿಯನ್ನು ಪ್ರವೇಶಿಸಿದವು. ಹೀಗಾಗಿ ಅನ್ಯಮಾರ್ಗವಿಲ್ಲದೆ ಜರ್ಮನಿಯು 1945ರ ಮೇ 7ರಂದು ಶರಣಾಯಿತು. ಜರ್ಮನಿಯ ಅವನತಿಯ ನಂತರ ಅಮೆರಿಕ 1945ರ ಆಗಸ್ಟ್ 6 ಮತ್ತು 9ರಂದು ಕ್ರಮವಾಗಿ ಹಿರೊಷಿಮಾ ಮತ್ತು ನಾಗಸಾಕಿ ಎಂಬ ಜಪಾನಿನ ನಗರಗಳ ಮೇಲೆ ಅಣುಬಾಂಬ್ ದಾಳಿಮಾಡಿ ನಾಶಪಡಿಸಿತು. ಇದರಿಂದ ಜಪಾನ್ ಯಾವುದೇ ಷರತ್ತುಗಳಿಲ್ಲದೆ ಶರಣಾಯಿತು. ಇದರೊಂದಿಗೆ ಎರಡನೆಯ ಮಹಾಯುದ್ಧವು ಮುಕ್ತಾಯಕ್ಕೆ ಬಂದಿತು.

III. ಯುದ್ಧದ ಪರಿಣಾಮಗಳು

1. ಮೊದಲನೆಯ ಮಹಾಯುದ್ಧಕ್ಕಿಂತಲೂ ಎರಡನೆಯ ಮಹಾಯುದ್ಧದಲ್ಲಿ ಅಪಾರ ಪ್ರಾಣಹಾನಿ ಮತ್ತು ಸಂಪತ್ತಿನ ಹಾನಿಯುಂಟಾಯಿತು. ಸುಮಾರು 50 ಮಿಲಿಯನ್ ಜನರು ಪ್ರಾಣ ಕಳೆದುಕೊಂಡರು.

2. ಇಟಲಿ ಮತ್ತು ಜರ್ಮನಿಯಲ್ಲಿ ಕಾರ್ಯಶೀಲವಾಗಿದ್ದ ಸರ್ವಾಧಿಕಾರ ಆಳ್ವಿಕೆಗೆ ಸಾವಿನ ಸೂಚಕ ಗಂಟೆಯನ್ನು ಬಾರಿಸಿತು. ಜರ್ಮನಿಯು ಮಿತ್ರರಾಷ್ಟ್ರಗಳಿಂದ ವಶಪಡಿಸಿಕೊಳ್ಳಲ್ಪಟ್ಟು ಎರಡು ಭಾಗಗಳಾಗಿ ವಿಭಜಿಸಲ್ಪಟ್ಟಿತು. ಪಶ್ಚಿಮ ಜರ್ಮನಿಯು ಇಂಗ್ಲೆಂಡ್, ಫ್ರಾನ್ಸ್ ಮತ್ತು ಅಮೆರಿಕ ಈ ಮೂರು ರಾಷ್ಟ್ರಗಳಿಂದ ನಿಯಂತ್ರಿಸಲ್ಪಟ್ಟಿತು. ಪೂರ್ವ ಜರ್ಮನಿಯು ರಷ್ಯಾದಿಂದ ನಿಯಂತ್ರಿಸಲ್ಪಟ್ಟಿತು. ಯುದ್ಧದ ಕೊನೆಯಲ್ಲಿ ಅಮೆರಿಕವು ತನ್ನ ಸೇನಾದಳಪತಿ ಜನರಲ್ ಮೆಕಾರ್ಥರ್ ನಾಯಕತ್ವದಲ್ಲಿ ಜಪಾನನ್ನು ವಶಪಡಿಸಿಕೊಂಡಿತು.

3. ಈ ಯುದ್ಧವು ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳನ್ನು ಬಲಹೀನಗೊಳಿಸಿ ಎರಡನೆಯ ಸ್ಥಾನಕ್ಕೆ ಕೊಂಡೊಯ್ಯಿತು. ಅಮೆರಿಕ ಮತ್ತು ರಷ್ಯಾ ದೇಶಗಳು ಪ್ರಪಂಚದ ಅಗ್ರ ಪ್ರಬಲ ರಾಷ್ಟ್ರಗಳಾಗಿ ಹೊರಹೊಮ್ಮಿದವು. ಈ ಯುದ್ಧದಿಂದಾಗಿ ರಷ್ಯಾದ ನಿರಂಕುಶಪ್ರಭುತ್ವವು ಮುಕ್ತಾಯಕ್ಕೆ ಬರಲಿಲ್ಲವಾದ್ದರಿಂದ ರಷ್ಯಾ ಮತ್ತು ಅಮೆರಿಕಗಳ ನಡುವೆ ಶೀತಲ ಸಮರವು ಪ್ರಾರಂಭವಾಯಿತು.

4. ಎರಡನೆಯ ಮಹಾಯುದ್ಧವು ಏಷ್ಯಾ ಮತ್ತು ಆಫ್ರಿಕ ದೇಶಗಳಲ್ಲಿ ಸ್ವಾತಂತ್ರ್ಯ ಹೋರಾಟಗಳನ್ನು

ತೀವ್ರಗೊಳಿಸಿತು. ಭಾರತ, ಶ್ರೀಲಂಕಾ, ಬರ್ಮಾ, ಈಜಿಪ್ಟ್, ಮಲೇಷಿಯಾ ಮುಂತಾದ ದೇಶಗಳು ಇಂಗ್ಲೆಂಡಿನ ಹಿಡಿತದಿಂದಲೂ, ಅಮೆರಿಕದ ಹಿಡಿತದಿಂದ ಫಿಲಿಪೈನ್ಸ್ ದ್ವೀಪಗಳು, ಫ್ರಾನ್ಸ್‌ನಿಂದ ಇಂಡೋ-ಚೈನಾ, ಡಚ್ಚರುಗಳಿಂದ ಇಂಡೋನೇಷ್ಯಾ ಇವುಗಳು ಬಿಡುಗಡೆ ಹೊಂದಿದವು.

5. ಯೂರೋಪ್ ರಾಷ್ಟ್ರಗಳು ವಸಾಹತು ನೀತಿ ಮತ್ತು ಸಾಮ್ರಾಜ್ಯಶಾಹಿತ್ವ ನೀತಿಗಳನ್ನು ಕೈಬಿಟ್ಟವು.

6. ವಿಶ್ವರಂಗದಲ್ಲಿ ಶಾಂತಿಯನ್ನು ಕಾಪಾಡಲು, ಜಗತ್ತಿನ ಜನರಲ್ಲಿ ಒಗ್ಗಟ್ಟು ಮತ್ತು ಸೌಹಾರ್ದತೆಯನ್ನು ಉಂಟುಮಾಡಲು ವಿಶ್ವಸಂಸ್ಥೆಯನ್ನು ಸ್ಥಾಪಿಸಲಾಯಿತು.

ಅಭ್ಯಾಸ

ಅ. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1. ಎರಡನೆಯ ಮಹಾಯುದ್ಧಕ್ಕೆ ಪ್ರಮುಖ ಕಾರಣವಾಗಿ ಮಾಡಿಕೊಂಡ ಒಪ್ಪಂದ

   ಅ) ವರ್ಸೇಲ್ಸ್ ಒಪ್ಪಂದ ಆ) ರೋಮ್ ಒಪ್ಪಂದ

   ಇ) ಲಂಡನ್ ಒಪ್ಪಂದ ಈ) ಆಕ್ಸ್-ಲಾ-ಚಾಪೆಲ್ ಒಪ್ಪಂದ

2. ಫ್ರಾನ್ಸ್‌ಗೆ ಹಿಂದಿರುಗಿ ಕೊಡಲ್ಪಟ್ಟ ಕಲ್ಲಿದ್ದಲು ಗಣಿ

   ಅ) ಜಾರಿಯಾ ಆ) ಸಾರ್ ಇ) ಬೊಕಾರೊ ಈ) ರಾಣಿಗಂಜ್

3. ಒಂದನೆಯ ಮಹಾಯುದ್ಧದ ನಂತರ ಪ್ರಬಲ ರಾಷ್ಟ್ರವಾಗಿ ಕಂಡುಬಂದುದು

   ಅ) ಚೀನಾ ಆ) ಜಪಾನ್ ಇ) ಭಾರತ ಈ) ಕೊರಿಯಾ

4. ಯುದ್ಧ ಮತ್ತು ಆಕ್ರಮಣ ಎಂಬ ನೀತಿಗಳನ್ನು ಅನುಸರಿಸಿದವರು

   ಅ) ಮಿತವಾದಿಗಳು ಆ) ತೀವ್ರವಾದಿಗಳು

   ಇ) ಸರ್ವಾಧಿಕಾರಿಗಳು ಈ) ಕ್ರಾಂತಿಕಾರಿಗಳು

5. ಸೆಪ್ಟಂಬರ್ 1938ರಲ್ಲಿ ಹಿಟ್ಲರ್ ದಂಡಯಾತ್ರೆಯನ್ನು ಕೈಗೊಳ್ಳುವುದಾಗಿ ಹೆದರಿಸಿದ ರಾಷ್ಟ್ರ

   ಅ) ಯುಗೊಸ್ಲಾವಿಯಾ ಆ) ಪೋಲೆಂಡ್ ಇ) ಫಿನ್‌ಲ್ಯಾಂಡ್ ಈ)ಜೆಕೊಸ್ಲೊವಾಕಿಯಾ

6. ಹಿಟ್ಲರ್ ತನಗೆ ಒಪ್ಪಿಸುವಂತೆ ಕೇಳಿದುದು

   ಅ) ಟ್ಯಾನೆನ್‌ಬರ್ಗ್ ಆ) ಡ್ಯಾನ್‌ಜಿಗ್ ಇ) ಜಟ್‌ಲ್ಯಾಂಡ್ ಈ) ಎಸ್ತೋನಿಯಾ

7. ಬ್ಲಿಟ್ಜ್‌ಕ್ರೀಗ್ ಎಂದರೆ

   ಅ) ಮಿಂಚಿನ ಯುದ್ಧ ಆ) ಸುರಂಗ ಯುದ್ಧ

   ಇ) ಜಲಾಂತರ್ಗಾಮಿ ನೌಕಾಯುದ್ಧ ಈ) ಗೊರಿಲ್ಲ ಯುದ್ಧ

8. ಎರಡನೆಯ ಮಹಾಯುದ್ಧದ ಸಮಯದಲ್ಲಿ ಇಂಗ್ಲೆಂಡಿನ ಪ್ರಧಾನಿಯಾಗಿದ್ದವರು

   ಅ) ಸರ್ ವಿನ್ಸ್‌ಟನ್ ಚರ್ಚಿಲ್ ಆ) ಕ್ಲೆಮೆಂಟ್ ಅಟ್ಲೀ

   ಇ) ಮಾರ್ಗರೇಟ್ ಥ್ಯಾಚರ್ ಈ) ಲಾಯ್ಡ್ ಜಾರ್ಜ್

9. ಹಿಟ್ಲರ್‌ನೊಡನೆ ಆಕ್ರಮಣರಹಿತ ನೀತಿಯ ಒಪ್ಪಂದವನ್ನು ಮಾಡಿಕೊಂಡವನು

   ಅ) ಗೋರ್ಬಚೆವ್ ಆ) ಬೋರಿಸ್ ಎಲ್‌ಸ್ಟಿನ್

   ಇ) ಸ್ಟಾಲಿನ್ ಈ) ಲೆನಿನ್

ಆ. ಹೊಂದಿಸಿ ಬರೆಯಿರಿ

1.	ನಾಶಪಡಿಸಿ ಹಿಂಪಡೆಯುವ ನೀತಿ	ಜರ್ಮನಿ
2.	U'ಆಕಾರದ ನೌಕೆಗಳು	ಥಿಯೋಡರ್ ರೂಸ್‌ವೆಲ್ಟ್
3.	ಲುಫ್ಟ್‌ವಫೆ	ಇಂಗ್ಲೆಂಡ್
4.	ರಾಯಲ್ ವಾಯುಸೇನೆ	ಚೀನಾ
5.	ಅಟ್ಲಾಂಟಿಕ್ ಶಾಸನ	ರಷ್ಯಾ
		ಎಫ್.ಡಿ.ರೂಸ್‌ವೆಲ್ಟ್
		ಜರ್ಮನಿಯ ಜಲಾಂತರ್ಗಾಮಿ ನೌಕೆ

ಇ. ಸಂಕ್ಷಿಪ್ತವಾಗಿ ಉತ್ತರಿಸಿ.

1. ರಾಷ್ಟ್ರೀಯತೆಯು ಎರಡನೆಯ ಮಹಾಯುದ್ಧಕ್ಕೆ ಹೇಗೆ ಕಾರಣವಾಯಿತು?
2. ಜಪಾನ್ ಎರಡನೇ ಮಹಾಯುದ್ಧಕ್ಕೆ ಹೇಗೆ ಕಾರಣವಾಯಿತು?
3. ಮ್ಯೂನಿಚ್ ಒಪ್ಪಂದವು ಕೆಲಕಾಲ ಶಾಂತಿಯನ್ನು ಉಂಟುಮಾಡಿತು–ವಿಶ್ಲೇಷಿಸಿ.
4. ಎರಡನೆಯ ಮಹಾಯುದ್ಧಕ್ಕೆ ತಕ್ಷಣದ ಕಾರಣಗಳೇನು?
5. ನಾಶಪಡಿಸಿ ಹಿಂಪಡೆಯುವ ನೀತಿಯ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.
6. ಬ್ರಿಟನ್ ಯುದ್ಧದ ಬಗ್ಗೆ ಸಂಕ್ಷಿಪ್ತವಾಗಿ ಬರೆಯಿರಿ.
7. ಅಮೆರಿಕವು ಜಪಾನಿನ ಮೇಲೆ ಯುದ್ಧ ಹೂಡಲು ಕಾರಣವೇನು?

ಈ. ಶೀರ್ಷಿಕೆಯಡಿಯಲ್ಲಿ ಕೊಟ್ಟಿರುವ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ.

1. ಎರಡನೆಯ ಮಹಾಯುದ್ಧ–ಕಾರಣಗಳು

   ಅ) ಇಟಲಿ–ಜರ್ಮನಿ–ಜಪಾನ್ ಮಾಡಿಕೊಂಡ ಒಪ್ಪಂದ ಯಾವುದು?

   ಆ) ಮೊದಲನೆ ಮಹಾಯುದ್ಧದ ನಂತರ ಏರ್ಪಟ್ಟ ಕೆಲವು ರಾಜಕೀಯ ನೀತಿಗಳನ್ನು ತಿಳಿಸಿರಿ.

   ಇ) ಪ್ರಬಲ ರಾಷ್ಟ್ರಗಳ ರಾಜನೀತಿ ನಿಪುಣರು ಅನುಸರಿಸಿದ ನೀತಿಗಳ ಬಗ್ಗೆ ತಿಳಿಸಿರಿ.

   ಈ) ಹಿಟ್ಲರ್ ಯಾವ ಒಪ್ಪಂದವನ್ನು ನಿರಾಕರಿಸಿದನು?

2. ಬಾರ್ಬರೆಸ್ಸಾದ ನೌಕಾಯುದ್ಧದ ಕ್ರಮಗಳು

   ಅ) ಬಾರ್ಬರೆಸ್ಸಾ ನೌಕಾಯುದ್ಧವು ಯಾವ ವರ್ಷ ಪ್ರಾರಂಭವಾಯಿತು?

   ಆ) ಹಿಟ್ಲರ್ ಬಯಸಿದುದು ಏನು?

   ಇ) ಹಿಟ್ಲರ್‌ನ ಆಜ್ಞೆ ಏನು?

   ಈ) ಶತ್ರು ರಾಷ್ಟ್ರಗಳು ಬಾಲ್ಕನ್ ರಾಷ್ಟ್ರಗಳನ್ನು ಯಾವಾಗ ತಮ್ಮ ಹತೋಟಿಗೆ ತಂದವು?

3. ಯುದ್ಧದ ಅಂತ್ಯ

ಅ) ಅಮೆರಿಕ, ಇಂಗ್ಲೆಂಡ್ ಸೈನ್ಯಗಳು ಎಲ್ಲಿ ಬೀಡುಬಿಟ್ಟವು?

ಆ) ಈ ಸೈನ್ಯಗಳು ಯಾರ ಸೇನೆಗಳೊಂದಿಗೆ ಸೇರಿಕೊಂಡವು?

ಇ) ಹಿಟ್ಲರ್ ಏನು ಮಾಡಿಕೊಂಡನು?

ಈ) ಅಮೆರಿಕವು ಹಿರೊಷಿಮಾ ಮತ್ತು ನಾಗಸಾಕಿಗಳ ಮೇಲೆ ಯಾವಾಗ ಅಣುಬಾಂಬ್ ದಾಳಿ ಮಾಡಿತು?

4. ಯುದ್ಧದ ಪರಿಣಾಮಗಳು

ಅ) ಜಪಾನ್ ದೇಶವನ್ನು ವಶಪಡಿಸಿಕೊಂಡವರಾರು?

ಆ) ಎರಡನೆಯ ಮಹಾಯುದ್ಧದ ನಂತರ ಕಂಡುಬಂದ ಎರಡು ಪ್ರಬಲ ರಾಷ್ಟ್ರಗಳು ಯಾವುವು?

ಇ) ಯುದ್ಧದ ನಂತರ ಸ್ವಾತಂತ್ರ್ಯ ಪಡೆದ ದೇಶಗಳಾವುವು?

ಈ) ವಿಶ್ವ ಸಂಸ್ಥೆಯು ಏಕೆ ಸ್ಥಾಪಿಸಲ್ಪಟ್ಟಿತು?

ಊ. ಒಂದು ಪುಟದಲ್ಲಿ ಉತ್ತರಿಸಿ.

1. ಎರಡನೆಯ ಮಹಾಯುದ್ಧವು ಸಂಭವಿಸಲು ಕಾರಣವಾದವುಗಳಲ್ಲಿ ಯಾವುದಾದರು ಐದನ್ನು ವಿವರಿಸಿ.
2. ಸೋವಿಯತ್ ರಷ್ಯಾದ ದಾಳಿ ಮತ್ತು ಇಂಗ್ಲೆಂಡ್ ಮೇಲಿನ ಯುದ್ಧ ಇವುಗಳ ಬಗ್ಗೆ ಬರೆಯಿರಿ.
3. ಎರಡನೆಯ ಮಹಾಯುದ್ಧದ ಪರಿಣಾಮಗಳು ಯಾವುವು?

ಋ. ಚಟುವಟಿಕೆ

ಯೂರೋಪ್ ಭೂಪಟದಲ್ಲಿ ಕೆಳಕಂಡವುಗಳನ್ನು ಗುರುತಿಸಿ.

ಶತ್ರು ರಾಷ್ಟ್ರಗಳು–ಇಟಲಿ, ಜರ್ಮನಿ

ಮಿತ್ರರಾಷ್ಟ್ರಗಳು–ಇಂಗ್ಲೆಂಡ್, ಫ್ರಾನ್ಸ್, ರಷ್ಯಾ

ತಟಸ್ಥ ರಾಷ್ಟ್ರಗಳು– ಪೋರ್ಚುಗಲ್, ಸ್ಪೈನ್, ಸ್ವಿಡ್ಜರ್‌ಲ್ಯಾಂಡ್

7. ವಿಶ್ವಸಂಸ್ಥೆ – 1945

ವಿಶ್ವಸಂಸ್ಥೆಯು ಒಂದು ಅಂತರ್‌ರಾಷ್ಟ್ರೀಯ ಸಂಸ್ಥೆಯಾಗಿದೆ. ಇದು 1945ರಲ್ಲಿ ಸ್ಥಾಪನೆಯಾಯಿತು. ಎರಡನೇ ಮಹಾಯುದ್ಧದ ಅವಧಿಯಲ್ಲಿ(1941) ಅಮೆರಿಕದ ಅಧ್ಯಕ್ಷ ಫ್ರಾಂಕ್‌ಲಿನ್ ಡಿ ರೂಸ್‌ವೆಲ್ಟ್(FDR) ಮತ್ತು ಇಂಗ್ಲೆಂಡಿನ ಪ್ರಧಾನಿ ವಿನ್ಸ್‌ಟನ್ ಚರ್ಚಿಲ್ ಅಟ್ಲಾಂಟಿಕ್ ಯುದ್ಧನೌಕೆಯಲ್ಲಿ ಪ್ರಯಾಣ ಮಾಡುತ್ತಿದ್ದಾಗ ವಿಶ್ವಸಂಸ್ಥೆಯ ಶಾಸನಕ್ಕೆ ಸಹಿ ಹಾಕಿದರು. ಈ ಕಾಯ್ದೆಯನ್ನು ಹಲವಾರು ಸಮ್ಮೇಳನಗಳಲ್ಲಿ ಚರ್ಚಿಸಿದ ನಂತರ ಅಂತಿಮವಾಗಿ ವಿಶ್ವಸಂಸ್ಥೆಯ ಕಾಯ್ದೆಗೆ 1945 ಜೂನ್ 26ರಂದು ಸ್ಯಾನ್‌ಫ್ರಾನ್ಸಿಸ್ಕೋ ಸಮ್ಮೇಳನದಲ್ಲಿ ಸಹಿಹಾಕಲಾಯಿತು. ಇದರಂತೆ ವಿಶ್ವಸಂಸ್ಥೆಯು 1945ರ ಅಕ್ಟೋಬರ್ 24ರಂದು ಸ್ಥಾಪನೆಯಾಯಿತು. ಪ್ರಸ್ತುತ ಇದರ ಸದಸ್ಯ ರಾಷ್ಟ್ರಗಳ ಸಂಖ್ಯೆ **193.** ವಿಶ್ವಸಂಸ್ಥೆಯ ಕೇಂದ್ರ ಕಛೇರಿಯು ನ್ಯೂಯಾರ್ಕ್‌ನಲ್ಲಿದೆ.



ವಿಶ್ವಸಂಸ್ಥೆಯ ಪ್ರಧಾನ ಕಾರ್ಯಾಲಯ–ನ್ಯೂಯಾರ್ಕ್

ಪ್ರಮುಖ ಉದ್ದೇಶಗಳು

1. ಅಂತರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ಕಾಪಾಡುವುದು.
2. ರಾಷ್ಟ್ರಗಳ ನಡುವೆ ಸ್ನೇಹ ಸೌಹಾರ್ದವನ್ನು ಬೆಳೆಸುವುದು.
3. ಅಂತರಾಷ್ಟ್ರೀಯ ಸಮಸ್ಯೆಗಳನ್ನು ಶಾಂತಿಯುತವಾಗಿ ಬಗೆಹರಿಸಿಕೊಳ್ಳುವುದು.

ಮೇಲ್ಕಂಡ ಉದ್ದೇಶಗಳನ್ನು ಸಾಧಿಸಲು ಎಲ್ಲಾ ರಾಷ್ಟ್ರಗಳಿಗೂ ಸಹಾಯವಾಗುವಂತೆ ಒಂದು ಸಂಸ್ಥೆಯ ಅವಶ್ಯಕವಿದ್ದಿತು.



ವಿಶ್ವಸಂಸ್ಥೆಯ ಲಾಂಛನ

ವಿಶ್ವಸಂಸ್ಥೆಯ ಅಂಗ ಸಂಸ್ಥೆಗಳು

ವಿಶ್ವಸಂಸ್ಥೆಯು ಪ್ರಮುಖವಾಗಿ ಆರು ಅಂಗಗಳನ್ನು ಹೊಂದಿದ. ಅವುಗಳಿಂದರೆ,

1. ಸಾಮಾನ್ಯ ಸಭೆ
2. ಭದ್ರತಾ ಮಂಡಲಿ
3. ಆರ್ಥಿಕ ಮತ್ತು ಸಾಮಾಜಿಕ ಮಂಡಲಿ
4. ಧರ್ಮದರ್ಶಿ ಮಂಡಲಿ
5. ಅಂತರಾಷ್ಟ್ರೀಯ ನ್ಯಾಯಾಲಯ
6. ಕಾರ್ಯಾಲಯ

1. ಸಾಮಾನ್ಯ ಸಭೆ

ಸಾಮಾನ್ಯ ಸಭೆಯು ವಿಶ್ವ ಸಂಸ್ಥೆಯ ಪ್ರಾಯಂ ಅಂಗವಾಗಿದೆ. ಇದು ಎಲ್ಲಾ ರಾಷ್ಟ್ರಗಳ ಸದಸ್ಯರನ್ನು ಒಳಗೊಂಡಿದೆ. ಇದು ಪ್ರತಿಯೊಂದು ರಾಷ್ಟ್ರದಿಂದಲೂ ಐದು ಮಂದಿ ಸದಸ್ಯರನ್ನು ಹೊಂದಿರುತ್ತದೆ ಆದರೆ

ಒಂದು ದೇಶ ಒಂದು ಮತವನ್ನು ಮಾತ್ರ ಚಲಾಯಿಸಬಹುದು. ಈ ಸಭೆಯನ್ನು ಒಂದು ವರ್ಷಕ್ಕೆ ಒಂದು ಬಾರಿ ಮಾತ್ರ ಕರೆಯಲಾಗುತ್ತದೆ. ವಿಶ್ವಸಂಸ್ಥೆಯ ಕಾಯ್ದೆಯ ವ್ಯಾಪ್ತಿಯಂತೆ ಇದು ಚರ್ಚೆ ನಡೆಸುವ ಶಿಫಾರಸ್ಸು ಮಾಡುವ ಅಧಿಕಾರವನ್ನು ಹೊಂದಿದೆ.

ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್ 1953ರಲ್ಲಿ ಸಾಮಾನ್ಯಸಭೆಯ ಅಧ್ಯಕ್ಷರಾಗಿ ಚುನಾಯಿತರಾಗಿದ್ದರು.

2. ಭದ್ರತಾ ಮಂಡಳಿ

ಭದ್ರತಾ ಮಂಡಳಿಯು ವಿಶ್ವ ಸಂಸ್ಥೆಯ ಪ್ರಮುಖ ಅಂಗವಾಗಿದೆ. ಇದು ಐದು ಖಾಯಂ ರಾಷ್ಟ್ರಗಳ ಸದಸ್ಯತ್ವವನ್ನು ಒಳಗೊಂಡಿದೆ. ಅಮೆರಿಕ ಸಂಯುಕ್ತ ಸಂಸ್ಥಾನ, ಇಂಗ್ಲೆಂಡ್, ಫ್ರಾನ್ಸ್, ರಷ್ಯಾ ಮತ್ತು ಚೀನಾ. ಹತ್ತು ಸದಸ್ಯ ರಾಷ್ಟ್ರಗಳ ಹಂಗಾಮಿ ಸದಸ್ಯರು ಎರಡು ವರ್ಷಕ್ಕೆ ಒಂದು ಬಾರಿ ಸಾಮಾನ್ಯ ಸಭೆಯಿಂದ ಚುನಾಯಿತರಾಗುತ್ತಾರೆ. ಖಾಯಂ ಸದಸ್ಯರು ಯಾವುದೇ ಸಭೆಯ ತೀರ್ಮಾನದ ಮೇಲೆ ನಿಷೇಧಿಸುವ ಅಧಿಕಾರವನ್ನು (VETO POWER) ಹೊಂದಿರುತ್ತವೆ. ಇದರ ಪ್ರಮುಖ ಜವಾಬ್ದಾರಿ ಅಂತರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ಕಾಪಾಡುವುದು.

3. ಆರ್ಥಿಕ ಮತ್ತು ಸಾಮಾಜಿಕ ಮಂಡಳಿ

ಈ ಮಂಡಳಿಯು 54 ಸದಸ್ಯ ರಾಷ್ಟ್ರಗಳನ್ನು ಹೊಂದಿದ್ದು ಇವರ ಅಧಿಕಾರದ ಅವಧಿ 9 ವರ್ಷ. 1/3 ಭಾಗದಷ್ಟು ಸದಸ್ಯರು ಪ್ರತಿ ಮೂರು ವರ್ಷಗಳಿಗೊಮ್ಮೆ ನಿವೃತ್ತಿ ಹೊಂದುವರು. ಈ ಮಂಡಳಿಯು ವಿಶ್ವಸಂಸ್ಥೆ ಮತ್ತು ಅದರ ವಿಶೇಷ ಅಂಗಗಳ ಮೂಲಕ ಸದಸ್ಯರಾಷ್ಟ್ರಗಳ ಆರ್ಥಿಕ ಮತ್ತು ಸಾಮಾಜಿಕ ಕಾರ್ಯಗಳನ್ನು ಸಮನ್ವಯಗೊಳಿಸುತ್ತದೆ.

4. ಧರ್ಮದರ್ಶಿ ಮಂಡಳಿ

ವಿಶ್ವಸಂಸ್ಥೆಯ ಅಧೀನದಲ್ಲಿರುವ ಕೆಲವು ರಾಷ್ಟ್ರಗಳು ಧರ್ಮದರ್ಶಿ ಮಂಡಳಿಯ ಮೇಲ್ವಿಚಾರಣೆಯಲ್ಲಿವೆ. ಇವುಗಳಲ್ಲಿ ಬಹುತೇಕ ರಾಷ್ಟ್ರಗಳು ಎರಡನೆಯ ಮಹಾಯುದ್ಧದಲ್ಲಿ ಸೋತ ರಾಷ್ಟ್ರಗಳಾಗಿವೆ. ಪ್ರಸ್ತುತ ಈ ರಾಷ್ಟ್ರಗಳು ಸ್ವಾತಂತ್ರ್ಯ ಪಡೆದಿರುವುದರಿಂದ ಧರ್ಮದರ್ಶಿ ಮಂಡಳಿಯು **1994** ರ ನವಂಬರ್ 1 ರಿಂದ ತನ್ನ ಕಾರ್ಯಗಳನ್ನು ಮುಕ್ತಾಯಗೊಳಿಸಿಕೊಂಡಿತು.

5. ಅಂತರಾಷ್ಟ್ರೀಯ ನ್ಯಾಯಾಲಯ

ಅಂತರಾಷ್ಟ್ರೀಯ ನ್ಯಾಯಾಲಯವನ್ನು ವಿಶ್ವದ ನ್ಯಾಯಾಲಯವೆಂದು ಪರಿಗಣಿಸಲಾಗಿದೆ. ವಿಶ್ವಸಂಸ್ಥೆಯ ಅಂತರಾಷ್ಟ್ರೀಯ ನ್ಯಾಯಾಲಯ



ದಿ ಹೇಗ್‌ನಲ್ಲಿದೆ. ಅಂತರಾಷ್ಟ್ರೀಯ ನ್ಯಾಯಾಲಯದಲ್ಲಿ ಹದಿನೈದು ಮಂದಿ ನ್ಯಾಯಾಧೀಶರುಗಳಿದ್ದಾರೆ. ಇವರು ಸಾಮಾನ್ಯ ಸಭೆ ಮತ್ತು ಭದ್ರತಾ ಮಂಡಳಿಯಿಂದ ಆಯ್ಕೆಯಾಗುವರು. ಸದಸ್ಯ ರಾಷ್ಟ್ರಗಳ ವಿವಾದವನ್ನು ಬಗೆಹರಿಸುತ್ತದೆ. ಸಾಮಾನ್ಯ ಸಭೆ, ಭದ್ರತಾ ಮಂಡಳಿ ಮತ್ತು ವಿಶ್ವಸಂಸ್ಥೆಯ ಇತರ ಅಂಗಸಂಸ್ಥೆಗಳು ಸಲಹೆಯನ್ನು ನೀಡುತ್ತವೆ.

6. ಕಾರ್ಯಾಲಯ

ವಿಶ್ವ ಸಂಸ್ಥೆಯ ಕಾರ್ಯಾಲಯವು ದೈನಂದಿನ ಕಾರ್ಯಕಲಾಪಗಳನ್ನು ಸಂಘಟನೆ ಮಾಡುತ್ತದೆ ಮತ್ತು ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತದೆ. ವಿಶ್ವಸಂಸ್ಥೆಯು ಜಾರಿಗೊಳಿಸಿದ ಕಾರ್ಯನೀತಿ(ಕರಾರು)ಯನ್ನು ಕಾರ್ಯಗೊಳಿಸುತ್ತದೆ. ಇದರ ಅಧೀನದಲ್ಲಿ ಇತರೆ ಎಲ್ಲಾ ಅಂಗಸಂಸ್ಥೆಗಳು ಕಾರ್ಯನಿರ್ವಹಿಸುತ್ತವೆ.



ಆಂಟೋನಿಯೋ ಗುಟೆರ್ರೆಸ್

ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಇದರ ಮುಖ್ಯಾಧಿಕಾರಿ. ಇವರ ಅಧಿಕಾರದ ಅವಧಿ 5 ವರ್ಷ.

ಭದ್ರತಾ ಮಂಡಳಿಯ ಶಿಫಾರಸ್ಸಿನಂತೆ ಸಾಮಾನ್ಯ ಸಭೆಯು ಪ್ರಧಾನ ಕಾರ್ಯದರ್ಶಿಯನ್ನು ಆಯ್ಕೆ ಮಾಡುತ್ತದೆ. ವಿಶ್ವಸಂಸ್ಥೆಯ ಪ್ರಸ್ತುತ ಪ್ರಧಾನ ಕಾರ್ಯದರ್ಶಿ ಪೋರ್ಚುಗಲ್ ದೇಶದ ಆಂಟೋನಿಯೋ ಗುಟೆರ್ರೆಸ್.

ವಿಶ್ವಸಂಸ್ಥೆಯ ವಿಶೇಷ ಸಂಸ್ಥೆಗಳು

ವಿಶ್ವಸಂಸ್ಥೆಯು ಹಲವಾರು ವಿಶೇಷ ಸಂಸ್ಥೆಗಳನ್ನು ಒಳಗೊಂಡಿದೆ. ಅವುಗಳೆಂದರೆ,

1. ವಿಶ್ವ ಆರೋಗ್ಯ ಸಂಸ್ಥೆ(W.H.O)
2. ವಿಶ್ವ ಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಸ್ಥೆ(UNESCO)
3. ವಿಶ್ವ ಸಂಸ್ಥೆಯ ಅಂತರಾಷ್ಟ್ರೀಯ ಮಕ್ಕಳ ತುರ್ತುನಿಧಿ(UNICEF)
4. ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆ(ILO)
5. ಆಹಾರ ಮತ್ತು ಕೃಷಿ ಸಂಸ್ಥೆ(FAO)
6. ಅಂತರಾಷ್ಟ್ರೀಯ ಹಣಕಾಸು ಸಂಸ್ಥೆ (IMF)
7. ಅಂತರಾಷ್ಟ್ರೀಯ ಪುನರ್ರಚನೆ ಮತ್ತು ಅಭಿವೃದ್ಧಿ ಬ್ಯಾಂಕ್ (IBRD)

ಆಡಳಿತ ಭಾಷೆಗಳು

ವಿಶ್ವಸಂಸ್ಥೆಯ ಆಡಳಿತ ಭಾಷೆಗಳಾದ ಅರೆಬಿಕ್, ಚೀನಿ, ಇಂಗ್ಲೀಷ್, ಫ್ರೆಂಚ್, ರಷ್ಯನ್ ಮತ್ತು ಸ್ಪ್ಯಾನಿಸ್. ಹೀಗಿದ್ದರು ಇಂಗ್ಲೀಷ್ ಮತ್ತು ಫ್ರೆಂಚ್ ಭಾಷೆಗಳು ಆಡಳಿತ ಭಾಷೆಗಳಾಗಿ ಬಳಸಲ್ಪಡುತ್ತಿವೆ.

ಧ್ವಜ

ಬಿಳಿ ಮತ್ತು ನೀಲಿಬಣ್ಣದಿದ ಕೂಡಿದ ವಿಶ್ವಸಂಸ್ಥೆಯ ಧ್ವಜವು ಎರಡು ಆಲಿವ್ ರೆಂಬೆಗಳ ಮಧ್ಯೆ ಪ್ರಪಂಚದ ಭೂಪಟವನ್ನು ಹೊಂದಿದುದಾಗಿದೆ. ಇದು ವಿಶ್ವಶಾಂತಿ ಮತ್ತು ಭದ್ರತೆಯನ್ನು ಒತ್ತಾಯಿಸುತ್ತದೆ.

ಹಣಕಾಸು

ವಿಶ್ವಸಂಸ್ಥೆಯು ತನ್ನ ಹಣಕಾಸಿನ ಸಹಾಯವನ್ನು ಅಮೆರಿಕ ಮತ್ತು ಸದಸ್ಯ ರಾಷ್ಟ್ರಗಳಿಂದ ಪಡೆದುಕೊಳ್ಳುತ್ತದೆ.

ವಿಶ್ವ ಸಂಸ್ಥೆಯ ಪ್ರಮುಖ ಸಾಧನೆಗಳು

★ ವಿಶ್ವ ಸಂಸ್ಥೆಯು ಹಲವಾರು ಅಂತರ್‌ರಾಷ್ಟ್ರೀಯ ಸಮಸ್ಯೆಗಳನ್ನು ಬಗೆಹರಿಸಿದೆ ಮತ್ತು ಪರಸ್ಪರ ಒಪ್ಪಂದ ಮಾಡಿಕೊಳ್ಳುವುದರ ಮೂಲಕ ವಿಶ್ವಶಾಂತಿಯನ್ನು ಕಾಪಾಡಿಕೊಂಡು ಬಂದಿದೆ. ರಾಜಕೀಯ ಸಮಸ್ಯೆಗಳನ್ನು ಭದ್ರತಾ ಮಂಡಳಿಯ ಮೂಲಕ ಕಾನೂನಿಗೆ ಸಂಬಂಧಪಟ್ಟ ಸಮಸ್ಯೆಗಳನ್ನು ವಿಶ್ವಸಂಸ್ಥೆಯು ನ್ಯಾಯಾಲಯದ ಮೂಲಕ ಬಗೆಹರಿಸಿಕೊಳ್ಳುತ್ತದೆ.

★ ವಿಶ್ವಸಂಸ್ಥೆಯು ಇಸ್ರೇಲ್ ಮತ್ತು ಪ್ಯಾಲೆಸ್ತೀನ್, ಇರಾನ್ ಮತ್ತು ಇರಾಕ್ ಸಮಸ್ಯೆಗಳನ್ನು ಬಗೆಹರಿಸಿದ್ ಸೋವಿಯತ್ ಅಫ್ಘಾನಿಸ್ತಾನದಲ್ಲಿದ್ದ ತನ್ನ ಸೇನೆಯನ್ನು ಹಿಂದಕ್ಕೆ ಕರೆಸಿಕೊಂಡಿತು.

★ 1963ರಲ್ಲಿ ಅಣು ಸಂಶೋಧನಾ ತಡೆ ಕಾಯ್ದೆಯನ್ನು 1996ರಲ್ಲಿ ವ್ಯಾಪಕ ಸಂಶೋಧನಾ ತಡೆ ಒಪ್ಪಂದ ಗಳನ್ನು ನೆರವೇರಿಸಿತು.

★ 1992ರಲ್ಲಿ ರಿಯೋ-ಡಿ-ಜನೈರೋ ಎಂಬ ಸ್ಥಳದಲ್ಲಿ ಪರಿಸರ ಮತ್ತು ಅಭಿವೃದ್ಧಿಗಾಗಿ ಸಮ್ಮೇಳನವನ್ನು ನಡೆಸಲಾಯಿತು. ಈ ಸಮ್ಮೇಳನದಲ್ಲಿ "ಕಾರ್ಯಸೂಚಿಪತ್ರ 21" ಎಂಬ ನೀಲಿನಕ್ಷೆಯನ್ನು ಸಿದ್ಧಪಡಿಸಿ ಅದನ್ನು ಎಲ್ಲಾ ರಾಷ್ಟ್ರಗಳು ಒಪ್ಪಿಕೊಂಡವು. ನೈಸರ್ಗಿಕ ಪರಿಸರ ಸಂರಕ್ಷಣೆ, ಆರ್ಥಿಕ ಅಭಿವೃದ್ಧಿಗೆ ನೈಸರ್ಗಿಕ ಸಂಪನ್ಮೂಲಗಳನ್ನು ರಕ್ಷಿಸಿ ಆರ್ಥಿಕ ಅಭಿವೃದ್ಧಿ ಸಾಧಿಸಲು ಭರವಸೆ ನೀಡಿತು.

★ ವಿಶ್ವ ಸಂಸ್ಥೆಯ ಮಹಿಳಾ ಅಭಿವೃದ್ಧಿನಿಧಿ ಮತ್ತು ಅಂತರ್‌ರಾಷ್ಟ್ರೀಯ ಸಂಶೋಧನೆ ಮತ್ತು ಮಹಿಳಾ ಅಭಿವೃದ್ಧಿಗಾಗಿ ತರಬೇತಿ ಸಂಸ್ಥೆಯ ಮೂಲಕ 100 ರಾಷ್ಟ್ರಗಳಲ್ಲಿ ಮಹಿಳೆಯರ ಜೀವನ ಮಟ್ಟವನ್ನು ಉತ್ತಮಪಡಿಸಿಕೊಳ್ಳಲು ಕಾರ್ಯಕ್ರಮಗಳನ್ನು ಜಾರಿಗೊಳಿಸಿ ಪ್ರೇರೇಪಿಸಿತು.


★ 1956ರಲ್ಲಿ ಈಜಿಪ್ಟ್ ಅಧ್ಯಕ್ಷ ನಾಜರ್ ಸೂಯೆಜ್ ಕಾಲುವೆಯನ್ನು ರಾಷ್ಟ್ರೀಕರಣಗೊಳಿಸಿದರು. ಇದನ್ನು ಬ್ರಿಟನ್, ಫ್ರಾನ್ಸ್, ಇಸ್ರೇಲ್ ಮೊದಲಾದ ದೇಶಗಳು ವಿರೋಧಿಸಿದವು. ವಿಶ್ವಸಂಸ್ಥೆಯು ಶಾಂತಿಪಡೆಯನ್ನು ಈಜಿಪ್ಟ್‌ಗೆ ಕಳುಹಿಸಿ ಸೂಯಜ್ ಕಾಲುವೆಯ ಸಮಸ್ಯೆಯನ್ನು ಬಗೆಹರಿಸಿತು.

ಇದಲ್ಲದೆ ಕೊರಿಯಾ ಮತ್ತು ವಿಯಟ್ನಾಂ ಯುದ್ಧಗಳನ್ನು ಅಂತ್ಯಗೊಳಿಸಲಾಯಿತು.

ವಿಶ್ವಸಂಸ್ಥೆಯ ಹೊರನೋಟ

50ನೇ ವರ್ಷದ ಸುವರ್ಣ ಮಹೋತ್ಸವ

ವಿಶ್ವಸಂಸ್ಥೆಯು ವಿಶ್ವದಾದ್ಯಂತ ಮಾಡಿದ ಸಾಮಾಜಿಕ ಸೇವೆಯ ಫಲವಾಗಿ 1995ರಲ್ಲಿ ಅದರ 50ನೇ ವರ್ಷದ ಸುವರ್ಣ ಮಹೋತ್ಸವವನ್ನು ಆಚರಿಸಿತು. ಇದರ ಉದ್ದೇಶ "ವಿಶ್ವಸಂಸ್ಥೆಯ ಪ್ರಜೆಗಳಾದ ನಾವೆಲ್ಲರೂ ಉತ್ತಮವಾದ ವಿಶ್ವದ ಅಭಿವೃದ್ಧಿಗಾಗಿ ಒಂದಾಗೋಣ" ಎಂದು ಸಾಮಾನ್ಯ ಸಭೆಯು ಅಕ್ಟೋಬರ್ 1993ರಲ್ಲಿ ದೃಢಪಡಿಸಿತು. ವಿಶ್ವಸಂಸ್ಥೆಯು ಮುಂಬರುವ ದಿನಗಳ ಚಟುವಟಿಕೆಗಳ ಕಾರ್ಯನಿಮಿತ್ತ ಇದರ 50 ವರ್ಷಗಳ ಕಾರ್ಯಕ್ರಮವನ್ನು ಕುರಿತು ವಿದ್ಯಾವಂತ ಜನರ ನಡುವೆ ಪ್ರಕಟಣೆ ಮಾಡಿತು. 1995ರ ನವಂಬರ್ ತಿಂಗಳಿನಲ್ಲಿ ಅಮೆರಿಕದ ಗಗನಯಾತ್ರಿಗಳು(Astronauts) ಅಟ್ಲಾಂಟಿಸ್ ಎಂಬ ಉಪಗ್ರಹದ ಮೂಲಕ ಗಗನಯಾತ್ರೆ ಮಾಡಿ ವಿಶ್ವಸಂಸ್ಥೆಯ ಧ್ವಜವನ್ನು ಹಾರಿಸಿ ವಿಶ್ವದ ಶಾಂತಿಯನ್ನು ರಕ್ಷಿಸಲು ಶ್ರಮಿಸಿದ ವಿಶ್ವರಾಷ್ಟ್ರಸಂಸ್ಥೆಯ 50 ವರ್ಷಗಳ ಸೇವೆಗೆ ವಂದನೆ ಸಲ್ಲಿಸಿದರು.



ಅಭ್ಯಾಸ

ಅ. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1. ವಿಶ್ವಸಂಸ್ಥೆಯನ್ನು ಸ್ಥಾಪಿಸಿದ ವರ್ಷ

   ಅ) 1955 ಆ) 1945 ಇ) 1965 ಈ) 1975

2. ವಿಶ್ವಸಂಸ್ಥೆಯ ಕಾಯ್ದೆಗೆ ಎಲ್ಲಿ ಸಹಿಹಾಕಲ್ಪಟ್ಟಿತು?

   ಅ) ನ್ಯೂಯಾರ್ಕ್ ಆ) ಜಿನಿವಾ ಇ) ಸ್ಯಾನ್ ಫ್ರಾನ್ಸಿಸ್ಕೋ ಈ) ಕ್ಯಾಲಿಫೋರ್ನಿಯಾ

3. ವಿಶ್ವಸಂಸ್ಥೆಯ ಶಾಶ್ವತ ಸಭೆ

   ಅ) ಸಾಮಾನ್ಯ ಸಭೆ ಆ)ಪ್ರಧಾನ ಕಾರ್ಯಾಲಯ ಇ) ಭದ್ರತಾ ಮಂಡಳಿ ಈ) ಧರ್ಮದರ್ಶಿ ಮಂಡಳಿ

4. ಅಂತರ್‌ರಾಷ್ಟ್ರೀಯ ನ್ಯಾಯಾಲಯದ ಪ್ರಧಾನ ಕಛೇರಿ ಇರುವ ಸ್ಥಳ

   ಅ) ದಿ ಹೇಗ್ ಆ) ಬರ್ಲಿನ್ ಇ) ರೋಮ್ ಈ) ಟೋಕಿಯೋ

5. ವಿಶ್ವಸಂಸ್ಥೆಯ ಸುವರ್ಣ ಮಹೋತ್ಸವ ಆಚರಿಸಿದ ವರ್ಷ

   ಅ) 1985 ಆ) 2005 ಇ) 1995 ಈ) 1975

ಆ. ಹೊಂದಿಸಿರಿ

1. ನ್ಯೂಯಾರ್ಕ್	ವಿಟೋ(ನಿಷೇಧಾತ್ಮಕ ಮತ)
2. ರದ್ದುಗೊಳಿಸುವ ಹಕ್ಕು	1963
3. ಪ್ರಸ್ತುತ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ	1969
4. ಅಣುಸಂಶೋಧನಾ ತಡೆ ಕಾಯ್ದೆ	ವಿಶ್ವಸಂಸ್ಥೆಯ ಪ್ರಧಾನ ಕಾರ್ಯಾಲಯ
5. ವ್ಯಾಪಕ ಅಣುಸಂಶೋಧನಾ ತಡೆ ಕಾಯಿದೆ	ಕೋಫಿಅನ್ನಾನ್
	1996
	ಆಂಟೋನಿಯೋ ಗುಟೆರ್ರೆಸ್

ಇ. ಸಂಕ್ಷಿಪ್ತವಾಗಿ ಉತ್ತರಿಸಿ.

1. ವಿಶ್ವಸಂಸ್ಥೆಯ ಸಭೆಯ ಮುಖ್ಯ ಉದ್ದೇಶಗಳು ಯಾವುವು?
2. ಭದ್ರತಾ ಮಂಡಳಿ– ಲಘು ಟಿಪ್ಪಣಿ ಬರೆಯಿರಿ.
3. ವಿಶ್ವಸಂಸ್ಥೆಯ ಯಾವುದಾದರೂ ಎರಡು ಸಾಧನೆಗಳನ್ನು ತಿಳಿಸಿರಿ
4. ವಿಶ್ವಸಂಸ್ಥೆಯ ಸುವರ್ಣ ಮಹೋತ್ಸವದ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.
5. ವಿಶ್ವಸಂಸ್ಥೆಯ ಕೆಲವು ಅಂಗಗಳನ್ನು ತಿಳಿಸಿರಿ.

ಈ. ಪ್ರತಿಯೊಂದು ಶೀರ್ಷಿಕೆಗಳಡಿಯಲ್ಲಿ ಕೊಟ್ಟಿರುವ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ.

1. ವಿಶ್ವಸಂಸ್ಥೆಯ ಅಂಗಗಳು

   ಅ) ವಿಶ್ವಸಂಸ್ಥೆಯ ಮುಖ್ಯ ಅಂಗಗಳಾವುವು?

   ಆ) 1953ರಲ್ಲಿ ಸಾಮಾನ್ಯ ಸಭೆಯ ಅಧ್ಯಕ್ಷರಾಗಿ ಆಯ್ಕೆಯಾದವರು ಯಾರು?

   ಇ) ಧರ್ಮದರ್ಶಿ ಮಂಡಳಿಯ ಕಾರ್ಯಗಳ ಬಗ್ಗೆ ಬರೆಯಿರಿ.

   ಈ) ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಹೇಗೆ ಆಯ್ಕೆಯಾಗುವರು?

2. ವಿಶ್ವಸಂಸ್ಥೆಯ ಮುಖ್ಯ ಸಾಧನೆಗಳು

   ಅ) ವಿಶ್ವಸಂಸ್ಥೆಯು ಮಾಡಿಕೊಂಡ ಮುಖ್ಯವಾದ ಒಪ್ಪಂದಗಳನ್ನು ಬರೆಯಿರಿ

   ಆ) ಪರಿಸರ ಬೆಳವಣಿಗೆಯ ಸಮ್ಮೇಳನ ಎಲ್ಲಿ ನಡೆಯಿತು?

   ಇ) ಸರ್ವರಾಷ್ಟ್ರಗಳು ಯಾವುದನ್ನು ಸ್ವೀಕರಿಸಿಕೊಂಡವು?

   ಈ) ಸೂಯಜ್ ಕಾಲುವೆ ಸಮಸ್ಯೆಯನ್ನು ವಿಶ್ವಸಂಸ್ಥೆಯು ಹೇಗೆ ಮುಕ್ತಾಯಕ್ಕೆ ತಂದಿತು?

ಉ. ಈ ಕೆಳಕಂಡ ಪ್ರಶ್ನೆಗಳಿಗೆ ಒಂದು ಪುಟದಲ್ಲಿ ಉತ್ತರಿಸಿ.

1. ವಿಶ್ವಸಂಸ್ಥೆಯ ಅಂಗಗಳ ಕಾರ್ಯಗಳ ಬಗ್ಗೆ ವಿವರಿಸಿ.
2. ವಿಶ್ವಸಂಸ್ಥೆಯ ಮುಖ್ಯ ಸಾಧನೆಗಳು ಯಾವುವು?

8. ಯೂರೋಪಿಯನ್ ಒಕ್ಕೂಟ

ಎರಡನೆಯ ವಿಶ್ವಯುದ್ಧದ ಅಂತ್ಯದಲ್ಲಿ ಯೂರೋಪಿನಲ್ಲಿ ಉಂಟಾದ ರಾಜಕೀಯ ಮತ್ತು ಆರ್ಥಿಕ ಐಕ್ಯತೆ, ಯುದ್ಧದ ನಂತರ ನಡೆದ ಪುನರ್‌ನಿರ್ಮಾಣ ಕಾರ್ಯಗಳು ಮುಖ್ಯವಾದ ಅಂಶವಾಗಿದೆ. ಯೂರೋಪ್ ಖಂಡದಲ್ಲಿ ರಾಜಕೀಯ ಮತ್ತು ಅಭಿವೃದ್ಧಿ ಫ್ರಾನ್ಸ್ ಮತ್ತು ಜರ್ಮನಿ ದೇಶಗಳ ನಡುವೆ ಯಾವಾಗಲೂ ತೊಡಕುಂಟಾಗಬಾರದೆಂದು ಫ್ರಾನ್ಸಿನ ರಾಜನೀತಿಜ್ಞ ಜೀನ್ ಮೋನಟ್ (Jean Monnet) ಪ್ರಕಟಿಸಿದನು. ಇಂತಹ ಒಗ್ಗಟ್ಟು ಏರ್ಪಡಲು ಇಟಲಿ ಮತ್ತು ಮೂರು ಬೆನಿಲಕ್ಸ್ ದೇಶಗಳು (ಬೆಲ್ಜಿಯಂ, ನೆದರ್ ಲ್ಯಾಂಡ್, ಲಕ್ಸಂಬರ್ಗ್) ತಮ್ಮ ಸಹಾಯ ಹಸ್ತಗಳನ್ನು ಚಾಚಿದವು.

ಒಕ್ಕೂಟ ದೇಶಗಳು

ಬೆಲ್ಜಿಯಂ, ಫ್ರಾನ್ಸ್, ಇಟಲಿ, ಲಕ್ಷಂಬರ್ಗ್, ನೆದರ್‌ಲ್ಯಾಂಡ್ ಮತ್ತು ಪಶ್ಚಿಮಜರ್ಮನಿ ಇನ್ನೂ ಮುಂತಾದ ದೇಶಗಳು ಯೂರೋಪ್ ಒಕ್ಕೂಟವನ್ನು ಪ್ರಾರಂಭಿಸಿದವು.

ಉದಯ

ಫ್ರಾನ್ಸಿನ ವಿದೇಶಾಂಗ ಸಚಿವ ರಾಬರ್ಟ್ ಸ್ಕೂಮನ್‌ರವರು 1950ರ ಮೇ 9 ರಂದು ಪ್ರಕಟಿಸಿದ ಅಭಿಪ್ರಾಯದಂತೆ 1951ರಲ್ಲಿ ರಚಿಸಿದ ಆರು ದೇಶಗಳ ಯೂರೋಪ್ ಕಲ್ಲಿದ್ದಲು ಮತ್ತು ಉಕ್ಕಿನ ಸಾಮೂಹಿಕ ಮಾಲೀಕತ್ವವೇ (ECSC) ಯೂರೋಪ್ ಒಕ್ಕೂಟದ ಉದಯಕ್ಕೆ ಮೂಲಸ್ಥಾನವಾಗಿದೆ ಎಂಬ ಅಭಿಪ್ರಾಯವಾಗಿದೆ.



ರೋಮ್‌ನಲ್ಲಿ ಒಪ್ಪಂದದ ಸಹಿ

ರೋಮ್ ಒಪ್ಪಂದದಂತೆ ಯೂರೋಪಿಯನ್ ಆರ್ಥಿಕ ಸಮುದಾಯ (EEC) ಮತ್ತು ಯೂರೋಪಿಯನ್ ಅಣುಶಕ್ತಿ ಸಮುದಾಯ (EURATOM) ಸ್ಥಾಪಿತವಾದವು. ನಂತರ ಈ ಮೂರು ಸಮುದಾಯಗಳು 1967ರಲ್ಲಿ ರಚಿಸಿಕೊಂಡ ಒಕ್ಕೂಟ ಒಪ್ಪಂದದ ಮೂಲಕ ಯೂರೋಪ್ ಒಕ್ಕೂಟವು ಉದಯವಾಯಿತು.

ಮುಖ್ಯ ಉದ್ದೇಶಗಳು

ಯೂರೋಪಿಯನ್ ಪೌರತ್ವವನ್ನು ವಿಸ್ತರಿಸುವುದು, ಯೂರೋಪಿಯನ್ ಪ್ರಜೆಗಳಿಗೆ ನಾಗರಿಕ ಹಕ್ಕುಗಳ ಭರವಸೆ ಕೊಡುವುದು.

ಸಾಮಾಜಿಕ ಅಭಿವೃದ್ಧಿಗೆ, ಉತ್ತೇಜನ ನೀಡುವುದು. ಯೂರೋಪಿಯನ್ ರಕ್ಷಣೆಯನ್ನು ಭದ್ರಪಡಿಸುವುದು, ಸಮಾನ ನ್ಯಾಯವನ್ನು ಒದಗಿಸುವುದು.

ಗುರಿಗಳು: ವೈವಿಧ್ಯತೆಯಲ್ಲಿ ಏಕತೆ

I. ಯೂರೋಪ್ ಒಕ್ಕೂಟದ ಅಂಗಗಳು

1. ಯೂರೋಪಿಯನ್ ಸಂಸತ್ತು.
2. ಯೂರೋಪಿಯನ್ ಸಭೆ
3. ಯೂರೋಪಿಯನ್ ಕಮಿಷನ್ (ಆಯೋಗ)
4. ಯೂರೋಪಿಯನ್ ನ್ಯಾಯಾಲಯ
5. ಯೂರೋಪಿಯನ್ ಲೆಕ್ಕ ಪರಿಶೋಧಕರ ಕಾರ್ಯಾಲಯ



ಯೂರೋಪ್ ಒಕ್ಕೂಟದ ಚಿಹ್ನೆ

1. ಯೂರೋಪಿಯನ್ ಸಂಸತ್ತು.

ಇದು ಯೂರೋಪಿಯನ್ ಒಕ್ಕೂಟದ ಶಾಸನಾಧಿಕಾರದ ಸಂಸ್ಥೆಯಾಗಿದೆ. ಇದರ ಸದಸ್ಯರು , ಸದಸ್ಯ ರಾಷ್ಟ್ರಗಳ ಪ್ರಜೆಗಳಿಂದ ನೇರವಾಗಿ ಆಯ್ಕೆಯಾಗುವರು.



ಯೂರೋಪಿಯನ್ ಸಂಸತ್ತು.

1979ರಲ್ಲಿ ಯೂರೋಪಿಯನ್ ಸಂಸತ್ತಿನ ಚುನಾವಣೆಯು ಪ್ರಪಥಮವಾಗಿ ಪ್ರಜಾಪ್ರಭುತ್ವ ಮಾದರಿಯಲ್ಲಿ ನಡೆಯಿತು. ಇದರ ಪ್ರಧಾನ ಕಛೇರಿಯು ಫ್ರಾನ್ಸ್‌ನಲ್ಲಿರುವ ಸ್ಟ್ರಸ್‌ಬರ್ಗ್ (Strasbourg) ಎಂಬ ಸ್ಥಳದಲ್ಲಿದೆ. ಯೂರೋಪ್ ಸಂಸತ್ತಿನಲ್ಲಿ ಈಗ 736 ಸದಸ್ಯರು ಇದ್ದಾರೆ. ಇವರ ಅಧಿಕಾರಾವಧಿ ಐದು ವರ್ಷಗಳಾಗಿವೆ.

ಸಂಸತ್ತಿನ ಮುಖ್ಯ ಅಧಿಕಾರ

ಯುರೋಪಿಯನ್ ಕಮಿಷನ್‌ನಲ್ಲಿ ಮಂಡಿಸಲಾದ ಆಯ-ವ್ಯಯ ಯೋಜನೆಯನ್ನು ಅಂಗೀಕರಿಸುವುದು ಅಥವಾ ತಿದ್ದುಪಡಿ ಮಾಡುವುದು.

2. ಯೂರೋಪಿಯನ್ ಒಕ್ಕೂಟ ಸಭೆ

ಯೂರೋಪಿಯನ್ ಒಕ್ಕೂಟ ಸಭೆಯನ್ನು ಕೆಲವು ಸಮಯಗಳಲ್ಲಿ "ಮಂತ್ರಿಗಳ ಸಂಯುಕ್ತ ಸಭೆ" ಎಂದು ಕರೆಯಲಾಗುತ್ತದೆ. ಇದು ಯೂರೋಪಿಯನ್ ಶಾಸನ ಸಭೆಯ ಉಳಿದ ಅರ್ಧ ಭಾಗವಾಗಿದೆ. ಪ್ರತಿಯೊಂದು ಸದಸ್ಯ ರಾಷ್ಟ್ರಗಳಿಂದಲೂ ಒಬ್ಬರು ಈ ಸಭೆಗೆ ಸದಸ್ಯರಾಗಿ ಆಯ್ಕೆಯಾಗುವರು. 2009ರ ನವೆಂಬರ್ 19 ರಂದು ಹೆರ್ಮಾನ್ ವಾನ್ ರಾಂಪೇ (Herman Van Rampay) ಖಾಯಂ ಅಧ್ಯಕ್ಷರಾಗಿ ಆಯ್ಕೆಯಾದರು. 2009 ಡಿಸೆಂಬರ್ ಒಂದರಂದು ಇವರು ಅಧಿಕಾರವಹಿಸಿಕೊಂಡರು.

3.ಯೂರೋಪಿಯನ್ ಕಮಿಷನ್(ಆಯೋಗ)

ಇದು ಯೂರೋಪಿಯನ್ ಒಕ್ಕೂಟದ ಕಾರ್ಯನಿರ್ವಾಹಕ ಮಂಡಲಿಯಾಗಿ ಕಾರ್ಯ ನಿರ್ವಹಿಸುತ್ತದೆ. ಅಲ್ಲದೆ ಶಾಸನ ರೂಪಿಸುವುದರ ಜತೆಗೆ ಯೂರೋಪಿಯನ್ ಸಂಯುಕ್ತ ಸಭೆಯ ದಿನನಿತ್ಯದ ಕಾರ್ಯಗಳನ್ನು ಮಾಡುತ್ತದೆ. ಯೂರೋಪಿನ ಸಂಯುಕ್ತ ಸಭೆಯ ಶಾಸನಗಳನ್ನು ಮಂಡಿಸಿ ಅವನ್ನು ಯುರೋಪಿಯನ್ ಸಂಸತ್ತಿನಲ್ಲಿ ಯುರೋಪಿಯನ್ ಒಕ್ಕೂಟ ಸಭೆಯಲ್ಲಿಯೂ ಒಪ್ಪಿಸುವುದು ಇದರ ಮೊದಲ ಕರ್ತವ್ಯವಾಗಿದೆ.

4.ಯೂರೋಪಿಯನ್ ನ್ಯಾಯಾಲಯ

ಇದು ಲಕ್ಸಂಬರ್ಗ್ ನಗರದಲ್ಲಿ ಸ್ಥಾಪಿಸಲ್ಪಟ್ಟಿದೆ. ಇದರಲ್ಲಿ 15 ನ್ಯಾಯಾಧೀಶರು ಸ್ಥಾನ ಪಡೆದುಕೊಂಡಿದ್ದಾರೆ.



ಯೂರೋಪಿಯನ್ ನ್ಯಾಯಾಲಯ

ಯುರೋಪಿಯನ್ ಒಕ್ಕೂಟವು ತೆಗೆದುಕೊಳ್ಳುವ ಎಲ್ಲಾ ಒಪ್ಪಂದಗಳೂ ಸಭೆಯ ಶಾಸನಗಳಿಗೆ ಒಳಪಟ್ಟಿದೆಯೇ ಎಂಬುದನ್ನು ತೀರ್ಮಾನಿಸುತ್ತದೆ. ಈ ಸಭೆಯ ತೀರ್ಮಗಳು, ಒಕ್ಕೂಟದ ಶಾಸನಗಳು ಸದಸ್ಯ ರಾಷ್ಟ್ರಗಳೆಲ್ಲವನ್ನು ನಿಯಂತ್ರಿಸುತ್ತದೆ.

5.ಯೂರೋಪಿಯನ್ ಲೆಕ್ಕ ಪರಿಶೋಧಕ ಕಾರ್ಯಾಲಯ

ಈ ಸಭೆಯು ಯೂರೂಪಿಯನ್ ಒಕ್ಕೂಟದ ಆಯವ್ಯಯ ಲೆಕ್ಕಗಳನ್ನು ನಿರ್ವಹಿಸುತ್ತದೆ. ಯೂರೋಪಿಯನ್ ಸಂಸತ್ತಿನೊಡನೆ ಜತೆಗೂಡಿ ಸಂಪನ್ಮೂಲಗಳು ಮತ್ತು ನಿಧಿಯನ್ನು ಹಂಚಿಕೆ ಮಾಡುತ್ತದೆ.

II. ಯೂರೋಪಿಯನ್ ಕೇಂದ್ರ ಬ್ಯಾಂಕು

ಇದು ಒಂದು ಸ್ವತಂತ್ರವಾದ ಸಂಸ್ಥೆಯಾಗಿದೆ. ಯೂರೋಪಿಯನ್ ಒಕ್ಕೂಟದಲ್ಲಿ ಬೆಲೆ ಏರಿಕೆಯನ್ನು ನಿಯಂತ್ರಿಸುವುದು ಮತ್ತು ಆರ್ಥಿಕ ನೀತಿಯನ್ನು ಗಮನಿಸುತ್ತಾ ಬಂದಿದೆ. ವಿದೇಶಿ ಪರಿವರ್ತನಾ ಪದ್ಧತಿ ಮತ್ತು ವಿದೇಶಿ ವಿನಿಮಯ ನಿರ್ವಹಣೆ ಇವುಗಳೆರಡು ಬ್ಯಾಂಕಿನ ಮುಖ್ಯ ಜವಾಬ್ದಾರಿಗಳಾಗಿವೆ.



ಯೂರೋಪಿಯನ್ ಕೇಂದ್ರ ಬ್ಯಾಂಕು

III. ಯೂರೋಪಿಯನ್ ಒಕ್ಕೂಟದ ಸಾಧನೆಗಳು

1. ಏಕ ಮಾರುಕಟ್ಟೆ

ಸ್ಥಿರವಾದ ಶಾಸನದ ಮೂಲಕ ಯೂರೋಪಿಯನ್ ಒಕ್ಕೂಟವು ಮಾರುಕಟ್ಟೆ ಪದ್ಧತಿಯನ್ನು ಜಾರಿಗೆ ತಂದಿತು. ಈ ಶಾಸನವು ಎಲ್ಲಾ ಸದಸ್ಯ ರಾಷ್ಟ್ರಗಳಿಗೂ ಸಂಬಂಧಿಸಿದುದಲ್ಲದೆ ತನ್ನ ಸದಸ್ಯ ರಾಷ್ಟ್ರಗಳ ನಡುವೆ ವಸ್ತುಗಳು, ಸೇವೆಗಳು ಮತ್ತು ಬಂಡವಾಳಗಳಿಗೆ ಭರವಸೆ ನೀಡಿದೆ.

ಇದು ಸಾಮಾನ್ಯ ವ್ಯಾಪಾರ ಪದ್ಧತಿ, ವ್ಯವಸಾಯ ನೀತಿ, ಮೀನು ಅಭಿವೃದ್ಧಿನೀತಿ ಮುಂತಾದವುಗಳೊಡನೆ ಪ್ರಾದೇಶಿಕಾಭಿವೃದ್ಧಿ ನೀತಿಯನ್ನು ಕಾರ್ಯಗತಗೊಳಿಸುತ್ತಾ ಬರುತ್ತಿದೆ.

2. ಸಾಮಾನ್ಯ ವಿದೇಶಿ ಮತ್ತು ಭದ್ರತಾ ನೀತಿ

ಯೂರೋಪಿಯನ್ ಒಕ್ಕೂಟವು ಇತರ ದೇಶಗಳೊಡನೆ ಒಪ್ಪಂದಗಳನ್ನು ಮಾಡಿಕೊಳ್ಳುವುದರೊಂದಿಗೆ ಒಕ್ಕೂಟದ ಆಂತರ್ ವ್ಯವಹಾರ ಶಾಸನಗಳನ್ನು (ಪಕ್ಷ)ಭೇಧವಿಲ್ಲದೆ ವಿಧಿಸುತ್ತಾ ಬರುತ್ತಿದೆ. ಯೂರೋಪಿಯನ್ ಒಕ್ಕೂಟವು ಶಾಶ್ವತ ರಾಯಭಾರಿ ರಾಜಕೀಯ ಪ್ರಾಬಲ್ಯ ನೀತಿಯನ್ನು ಜಾರಿಗೊಳಿಸಿದುದರ ಜತೆಗೆ ವಿಶ್ವ ವ್ಯಾಪಾರ ಸಂಸ್ಥೆ, ಜಿ.8, ಜಿ.20 ಮುಂತಾದ ಮುಖ್ಯ ಆರ್ಥಿಕ ಸಂಸ್ಥೆಗಳು ಮತ್ತು ವಿಶ್ವ ಸಂಸ್ಥೆಯಿಂದಲೂ ತನ್ನ ಸೌರ್ವಭೌಮತ್ವವನ್ನು ನೆಲೆಯೂರಿಸಿದೆ.

3. ಏಕ ನಾಣ್ಯ ಪದ್ಧತಿ

2002ರ, ಜನವರಿ 1 ರಿಂದ ಚಲಾವಣೆಗೊಳಿಸಲ್ಪಟ್ಟ ಯೂರೋಪಿಯನ್ ಒಕ್ಕೂಟದ ಏಕನಾಣ್ಯ ಪದ್ಧತಿ "ಯೂರೋ' ಎಂದು ಕರೆಯಲ್ಪಡುತ್ತದೆ. ಇದರ ಚಿಹ್ನೆಯು € ಆಗಿದೆ. ಯುರೋಪಿಯನ್ ಒಕ್ಕೂಟವು ಪ್ರಾರಂಭವಾದಂದಿನಿಂದ 2002 ವರೆಗಿನ ಮಧ್ಯಂತರ ಅವಧಿಯಲ್ಲಿ ಸದಸ್ಯ ರಾಷ್ಟ್ರಗಳು ತಮ್ಮ ನಾಣ್ಯ ಪದ್ಧತಿಯನ್ನು ಅನುಸರಿಸುತ್ತಿದ್ದವು. ಯೂರೋಪಿಯನ್ ಒಕ್ಕೂಟ "ಯೂರೋ" ಯೂರೋಪಿಯನ್ ಗಡಿಯನ್ನು ದಾಟಿ ವಿದೇಶಗಳಲ್ಲಿ ವ್ಯಾಪಾರ ಮಾಡುವ ಕಂಪನಿಗಳಿಗೆ ಉಂಟಾಗುವ ವಾಣಿಜ್ಯ ಪರಿವರ್ತನೆಗಾಗುವ ನಿರ್ಬಂಧಗಳನ್ನು ನಿವಾರಿಸುತ್ತದೆ. ಅಲ್ಲದೆ ಇದು ಮುಕ್ತ ವ್ಯಾಪಾರವನ್ನು ಅಭಿವೃದ್ಧಿಗೊಳಿಸುತ್ತದೆ.

4. ಯೂರೋಪಿಯನ್ ಒಕ್ಕೂಟ ವಿಸ್ತರಣೆ

ಪ್ರಾರಂಭದಲ್ಲಿ ಆರು ದೇಶಗಳಲ್ಲಿ ಹೊಂದಿದ್ದ ಯೂರೋಪಿಯನ್ ಒಕ್ಕೂಟವು, ಪ್ರಸ್ತುತ 28 ಸದಸ್ಯ ದೇಶಗಳನ್ನು ಒಳಗೊಂಡಿದೆ. ಈ ದೇಶಗಳು ಒಪ್ಪಂದಗಳಿಗೆ ಒಳಪಟ್ಟು, ತಮ್ಮ ಪ್ರಭುತ್ವ ಕಳೆದುಕೊಳ್ಳದೆ ಯೂರೋಪಿಯನ್ ಒಕ್ಕೂಟದ ಸಂಸ್ಥೆಗೆ ತಮ್ಮ ಸದಸ್ಯರುಗಳನ್ನು ಕಳುಹಿಸಿ ಕೊಡುತ್ತಾ ಬಂದಿವೆ.

28 ಸದಸ್ಯ ರಾಷ್ಟ್ರಗಳು

ಆಸ್ಟ್ರೇಲಿಯಾ, ಬೆಲ್ಜಿಯಂ, ಬಲ್ಗೇರಿಯಾ, ಸೈಪ್ರಸ್, ಜೆಕ್ ಗಣರಾಜ್ಯ, ಡೆನ್ಮಾರ್ಕ್, ಎಸ್ಟೋನಿಯಾ, ಫಿನ್‌ಲ್ಯಾಂಡ್, ಫ್ರಾನ್ಸ್, ಜರ್ಮನಿ, ಗ್ರೀಸ್, ಹಂಗೇರಿ, ಐರ್‌ಲ್ಯಾಂಡ್, ಇಟಲಿ, ಲಾಟ್ವಿಯಾ, ಕ್ರೋಸಿಯಾ, ಲಿಥುವೇನಿಯಾ, ಲಕ್ಸಂಬರ್ಗ್, ಮಾಲ್ಟಾ, ನೆದರ್‌ಲ್ಯಾಂಡ್, ಪೋಲೆಂಡ್, ಪೋರ್ಚುಗಲ್, ರುಮೇನಿಯಾ, ಸ್ಲೋವೇನಿಯಾ, ಸ್ಪೈನ್, ಸ್ವೀಡನ್ ಮತ್ತು ಇಂಗ್ಲೆಂಡ್.

ವೈಜ್ಞಾನಿಕ ಸಂಶೋಧನೆ

ವೈಜ್ಞಾನಿಕ ಅಭಿವೃದ್ಧಿಗಾಗಿ ಸೌಲಭ್ಯಗಳನ್ನು ಒದಗಿಸಿಕೊಡುವ ಕಾರ್ಯವು ಯೂರೋಪಿಯನ್ ಒಕ್ಕೂಟದ ಮುಖ್ಯ ಉದ್ದೇಶಗಳಲ್ಲಿ ಒಂದಾಗಿದೆ. ವೈಜ್ಞಾನಿಕ ಸಂಶೋಧನೆಗೆ ಆಧಾರಸ್ಥಂಭವಾಗಿಯೂ ಅದಕ್ಕೆ ಸಹಕರಿಸುವುದು ಇದರ ಮುಖ್ಯ ಗುರಿಯಾಗಿದೆ. ಯೂರೋಪಿಯನ್ ಸಂಶೋಧನಾ ಕಮಿಷನ್

ಯೂರೋಪಿಯನ್ ಒಕ್ಕೂಟ ಮತ್ತು ಸ್ವತಂತ್ರ ದೇಶಗಳ ವೈಜ್ಞಾನಿಕ ಸಂಶೋಧನಾ ಯೋಜನೆಗಳಿಗೆ ಧನ ಸಹಾಯ ಮಾಡುತ್ತಾ ಬರುತ್ತಿದೆ.

ಯೂರೋಪ್ ಒಕ್ಕೂಟವು ವಿಶ್ವಸಂಸ್ಥೆಯೊಡನೆ ಸದೃಢವಾದ ಸಂಬಂಧವನ್ನು ಹೊಂದಿದೆ. ಅಭಿವೃದ್ಧಿ, ವಾಯುಗುಣ ಬದಲಾವಣೆ, ತೊಂದರೆಗೊಳಗಾದ ದೇಶಗಳಲ್ಲಿ ಶಾಂತಿ ಸ್ಥಾಪನೆಗಾಗಿ ಶ್ರಮಿಸುವುದು, ಬಿಕ್ಕಟ್ಟಿನ ಸಂದರ್ಭಗಳಲ್ಲಿ ಮಾನವೀಯ ಸಹಾಯ, ವಿಶ್ವ ಆರೋಗ್ಯರಕ್ಷಣೆ, ಕಾರ್ಮಿಕರ ಸಮಸ್ಯೆಗಳು ಮತ್ತು ಸಂಸ್ಕೃತಿ ಸುಧಾರಣೆಗಳು ಮುಂತಾದ ಬಹುದೊಡ್ಡ ಕಾರ್ಯಕ್ರಮಗಳಲ್ಲಿ ವಿಶ್ವ ಸಂಸ್ಥೆಯ ಸಹಾಯದಿಂದ ಯೂರೋಪಿಯನ್ ಒಕ್ಕೂಟವು ಶ್ರೇಷ್ಠ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಾ, ಬರುತ್ತಿದೆ. ವಿಶ್ವ ಸಂಸ್ಥೆ ಯೋಜನೆಗಳಿಗೆ ಅತ್ಯಲ್ಪ ಸಹಕಾರ ನೀಡುವುದಲ್ಲದೆ ಆರ್ಥಿಕವಾಗಿಯೂ ಸಹಾಯ ನೀಡುತ್ತಿದೆ. ವಿಶ್ವ ವಿದೇಶಿ ವಿನಿಮಯದಲ್ಲಿ ಯೂರೋಪಿಯನ್ ಒಕ್ಕೂಟದ ಪಾತ್ರ ಬಹಳ ದೊಡ್ಡದಾಗಿದೆ. 2006ರಲ್ಲಿ ಯೂರೋಪಿಯನ್ ಒಕ್ಕೂಟದ ಆಯ–ವ್ಯಯ ಮುಂಗಡ ಪತ್ರದ ಬೆಲೆ 671 ಮಿಲಿಯನ್‌ಯೂರೋ ಆಗಿದೆ.ಇದರಲ್ಲಿ ಶೇ.48ರಷ್ಟನ್ನು ಆಫ್ರಿಕ, ಕೆರೀಬಿಯಾ ಮತ್ತು ಪೆಸಿಫಿಕ್ ದೇಶಗಳಿಗೆ ನೀಡಲಾಯಿತು. ಅಲ್ಲದೆ ಯೂರೋಪಿಯನ್ ಒಕ್ಕೂಟ ಗಡಿಯೊಳಗೆ ಐಕ್ಯತೆಯನ್ನು ಬೆಳೆಸಿತು.

ಅಭ್ಯಾಸ

ಅ) ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1. ಯೂರೋಪ್ ಒಕ್ಕೂಟದ ಉದಯವು ಇದರಿಂದ ಕಂಡು ಬಂದಿತು _____

   ಅ) ಈ.ಸಿ.ಎಸ್.ಸಿ. ಆ) ಇ.ಇ.ಸಿ.

   ಇ) ಯೂರೋಪ್ ಅಣುಕಾರ್ಯದ ಸಮಾಜ ಈ) ಇ.ಡಿ.ಸಿ.

2. ಯೂರೋಪ್ ಅಣುಶಕ್ತಿ ಸಮುದಾಯವನ್ನು ಉಂಟುಮಾಡಿದ ಒಪ್ಪಂದ

   ಅ) ನಾನ್‌ಗಿಲ್ ಒಪ್ಪಂದ ಆ) ಲಂಡನ್ ಒಪ್ಪಂದ

   ಇ) ರೋಮ್ ಒಪ್ಪಂದ ಈ) ವರ್ಸೇಲ್ಸ್ ಒಪ್ಪಂದ

3. ಯೂರೋಪ್ ಒಕ್ಕೂಟ ಸಭೆಯು ಕೆಲವು ಸಮಯಗಳಲ್ಲಿ ಹೀಗೂ ಸಹ ಕರೆಯಲ್ಪಡುವುದು.

   ಅ) ವ್ಯಾಪಾರಿಗಳ ಒಕ್ಕೂಟ ಆ)ರೈತರ ಒಕ್ಕೂಟ

   ಇ) ಗ್ರಾಹಕರ ಒಕ್ಕೂಟ ಈ) ಸಚಿವರ ಒಕ್ಕೂಟ

4. ಯೂರೋಪ್ ಒಕ್ಕೂಟ ಸಭೆಯ ಪ್ರಥಮ ಶಾಶ್ವತ ಅಧ್ಯಕ್ಷ _____

   ಅ) ರಾಮ್ಸೆ ಮ್ಯಾಕ್ ಡೋನಾಲ್ಡ್ ಆ)ಹರ್ಮನ್ ವಾನ್ ರಾಂಪೇ

   ಇ)ವಿಜಯ ಲಕ್ಷ್ಮಿ ಪಂಡಿತ್ ಈ) ಬಿಸ್ಮಾರ್ಕ್

5. ಯೂರೋಪ್ ಒಕ್ಕೂಟದ ಆರ್ಥಿಕ ನೀತಿಗಳನ್ನು ಗಮನಿಸುತ್ತಿರುವುದು._____

   ಅ) ಯೂರೋಪಿಯನ್ ಕೇಂದ್ರ ಬ್ಯಾಂಕ್ ಆ) ರಿಸರ್ವ್ ಬ್ಯಾಂಕ್ ಇ) ಸ್ಟೇಟ್ ಬ್ಯಾಂಕ್ ಈ) ಸ್ವಿಸ್ ಬ್ಯಾಂಕ್

6. ಯೂರೋಪ್ ಒಕ್ಕೂಟದ ಏಕನಾಣ್ಯ

   ಅ)ಡಾಲರ್ ಆ)ಯೆನ್ ಇ)ಯೂರೋ ಈ) ಪೌಂಡ್

7. ಯೂರೋಪ್ ಒಕ್ಕೂಟವು ಇದರೊಂದಿಗೆ ಸದೃಢವಾದ ಸಂಬಂಧವನ್ನು ಹೊಂದಿದೆ.

   ಅ) ಅಮೆರಿಕ ಆ) ರಷ್ಯಾ

   ಇ) ವಿಶ್ವಸಂಸ್ಥೆ ಈ) ಅರಬ್ ಸಂಯುಕ್ತ ರಾಷ್ಟ್ರಗಳು.

ಆ) **ಹೊಂದಿಸಿರಿ.**

1.	ಒಂದುಗೂಡಿಸುವ ಒಪ್ಪಂದ	ಫ್ರಾನ್ಸ್ ವಿದೇಶಾಂಗ ಮಂತ್ರಿ
2.	ಯೂರೋ	ಯೂರೋಪ್ ಲೆಕ್ಕಪರಿಶೋಧಕ ಕಾರ್ಯಾಲಯ
3.	ರಾಬರ್ಟ್ ಸ್ಕೂಮಾನ್	2002
4.	ಜೀನ್ ಮೋನಟ್	ಯೂರೋಪ್ ನ್ಯಾಯಾಲಯ
5.	ಯೂರೋಪ್ ಒಕ್ಕೂಟ ಆದಾಯ ವೆಚ್ಚ	ಫ್ರಾನ್ಸ್ ರಾಜಕೀಯ ಪ್ರಮುಖ
		1967
		2007

ಇ) **ಸಂಕ್ಷಿಪ್ತವಾಗಿ ಉತ್ತರಿಸಿ.**

1. ಯೂರೋಪ್ ಒಕ್ಕೂಟ ಸಂಸ್ಥಾನದ ದೇಶಗಳು ಯಾವುವು?
2. ಯೂರೋಪ್ ಒಕ್ಕೂಟದ ಉದ್ದೇಶಗಳು ಯಾವುವು?
3. ಯೂರೋಪ್ ಒಕ್ಕೂಟದ ಅಂಗಗಳನ್ನು ತಿಳಿಸಿರಿ.
4. ಯೂರೋಪ್ ಲೋಕಸಭೆಯ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.
5. ಯೂರೋಪ್ ಒಕ್ಕೂಟದ ನ್ಯಾಯಾಲಯಗಳ ಕಾರ್ಯಗಳನ್ನು ತಿಳಿಸಿರಿ.
6. "ಯೂರೊ" ಪ್ರಾಮುಖ್ಯತೆಯ ಬಗ್ಗೆ ನಿಮಗೆ ತಿಳಿದಿರುವುದನ್ನು ಬರೆಯಿರಿ.

ಈ) **ಪ್ರತಿಯೊಂದು ಶೀರ್ಷಿಕೆಯಡಿಯಲ್ಲಿ ಕೊಟ್ಟಿರುವ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ.**

1. ಯೂರೋಪ್ ಒಕ್ಕೂಟದ ಅಂಗಗಳು.

   ಅ) ಯೂರೋಪ್ ಒಕ್ಕೂಟದ ಕಾನೂನು ರೂಪಿಸುವ ಸಂಘಟನೆ ಯಾವುದು?

   ಆ) ಯೂರೋಪ್ ಆಯೋಗದ ಕಾರ್ಯಗಳು ಯಾವುವು?

   ಇ) ಯೂರೋಪಿನ ನ್ಯಾಯಾಲಯ ಎಲ್ಲಿದೆ?

   ಈ) ವಿದೇಶಿ ಪರಿವರ್ತನ ವಿಧಾನಗಳು ಯಾರ ಮುಖ್ಯ ಜವಾಬ್ದಾರಿ?

2. ಯೂರೋಪ್ ಒಕ್ಕೂಟದ ಸಾಧನೆಗಳು.

   ಅ) ಯೂರೋಪ್ ಒಕ್ಕೂಟದ ಏಕ ನಾಣ್ಯದ ಹೆಸರೇನು?

   ಆ) ಯೂರೋಪ್ ಏಕ ನಾಣ್ಯವು ಯಾವುದನ್ನು ಹೋಗಲಾಡಿಸುವುದು?

   ಇ) ಯೂರೋಪ್ ಒಕ್ಕೂಟದಲ್ಲಿ ಈಗ ಎಷ್ಟು ಸದಸ್ಯ ರಾಷ್ಟ್ರಗಳಿವೆ?

   ಈ) ಯೂರೋಪ್ ಒಕ್ಕೂಟದಲ್ಲಿ ಸಂಶೋಧನಾ ಯೋಜನೆಗಳಿಗೆ ಹಣ ಒದಗಿಸುವ ಸಂಘಟನೆ ಯಾವುದು?

ಉ) **ಒಂದು ಪುಟದಲ್ಲಿ ಉತ್ತರಿಸಿ.**

ಯೂರೋಪ್ ಒಕ್ಕೂಟದ ಸಾಧನೆಗಳನ್ನು ಕುರಿತು ವಿವರಿಸಿ.

9. 1857ರ ಮಹಾಕ್ರಾಂತಿ



ಭಾರತದ ಇತಿಹಾಸದಲ್ಲಿ 1857ನೇ ವರ್ಷ ಬಹಳ ಪ್ರಾಮುಖ್ಯತೆ ಪಡೆದ ವರ್ಷವೆಂದು ಭಾವಿಸಲಾಗಿದೆ. ಈ ವರ್ಷದಲ್ಲಿ ಕಂಪೆನಿಯ ಆಡಳಿತದ ವಿರುದ್ಧವಾಗಿ ಒಂದು ಮಹಾಕ್ರಾಂತಿಯೇ ನಡೆಯಿತು. ಇದು ಬ್ರಿಟಿಷರಿಗೆ



ಭಯವನ್ನು ಉಂಟುಮಾಡಿತು. ಈ ಕ್ರಾಂತಿಯನ್ನು



ಚಾರ್ಲ್ಸ್ ಕ್ಯಾನಿಂಗ್

ಬ್ರಿಟಿಷ್ ಇತಿಹಾಸಕಾರರು **'ಸಿಪಾಯಿ ದಂಗೆ'** ಎಂದೂ ಭಾರತೀಯರು **'ಪ್ರಥಮ ಸ್ವಾತಂತ್ರ್ಯ ಸಂಗ್ರಾಮ'** ಎಂದೂ ವರ್ಣಿಸಿದ್ದಾರೆ.

1857ರಲ್ಲಿ ನಡೆದ ಘಟನೆಗೆ ಬ್ರಿಟಿಷರ

ಅನೀತಿಯುತ ಆಡಳಿತದಿಂದ ಪ್ರಜೆಗಳು ತೊಂದರೆಗೆ ಒಳಗಾದುದೇ ಕಾರಣವಾಯಿತು. ಈ ಅವಧಿಯಲ್ಲಿ ಲಾರ್ಡ್ ಕ್ಯಾನಿಂಗ್ ಭಾರತದ ಗೌರ್ನರ್ ಜನರಲ್‌ನಾಗಿದ್ದನು.

I. ಕ್ರಾಂತಿಯ ಕಾರಣಗಳು

1. ರಾಜಕೀಯ ಕಾರಣಗಳು

ಬ್ರಿಟಿಷರ ಸಾಮ್ರಾಜ್ಯ ವಿಸ್ತರಣಾ ನೀತಿಯು ಕ್ರಾಂತಿಗೆ ಒಂದು ಪ್ರಮುಖ ಕಾರಣವಾಯಿತು. ವೆಲ್ಲೆಸ್ಲಿಯ ಸಹಾಯಕ ಸೈನ್ಯ ಪದ್ಧತಿಯ ಯೋಜನೆಯು ಭಾರತೀಯ ಅರಸರಲ್ಲಿ ಅತೃಪ್ತಿಯನ್ನು ಉಂಟುಮಾಡಿತು. ಡಾಲ್ ಹೌಸಿಯ "ದತ್ತು ಮಕ್ಕಳಿಗೆ ಹಕ್ಕಿಲ್ಲ" ವೆಂಬ ನೀತಿಯು ಭಾರತದಾದ್ಯಂತ ಭೀತಿಯನ್ನು ಅಶಾಂತಿಯನ್ನು ಉಂಟುಮಾಡಿತು. ಈ ನೀತಿಯ ಮೂಲಕ ಸತಾರ, ನಾಗಪುರ ಮತ್ತು ಝಾನ್ಸಿ ವೊದಲಾದ ಹಿಂದೂ ರಾಜ್ಯಗಳನ್ನು ವಿಲೀನಮಾಡಿಕೊಂಡರು.



ಡಾಲ್ ಹೌಸಿ

ಅಯೋಧ್ಯೆಯ ನವಾಬನು ಇಂಗ್ಲೀಷ್ ಈಸ್ಟ್ ಇಂಡಿಯಾ ಕಂಪೆನಿಯೊಡನೆ ಸುಮಾರು ನೂರು ವರ್ಷಗಳ ಸ್ನೇಹ ಮತ್ತು ವಿಶ್ವಾಸವನ್ನು ಹೊಂದಿದ್ದರೂ ಸಹ ಅಯೋಧ್ಯೆಯನ್ನು ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನಮಾಡಿಕೊಂಡರು. ಈ ನೀತಿಯಿಂದಾಗಿ ಮುಸ್ಲೀಮರಲ್ಲದೆ ಇತರ ಭಾರತೀಯ ಅರಸರುಗಳು ಬ್ರಿಟಿಷ್ ಸರ್ಕಾರದ ಮೇಲೆ ಅತೃಪ್ತಿಗೊಂಡರು.

ವೊಗಲ್ ಅರಸ ಎರಡನೆಯ ಬಹದ್ದೂರ್‌ಷಹನ ಮರಣದನಂತರ ಅವನ ವಾರಸುದಾರರು ಅರಮನೆ ಮತ್ತು ಕೆಂಪುಕೋಟೆಯನ್ನು ಬಿಟ್ಟುಕೊಡಬೇಕೆಂದು ಆಜ್ಞೆ ಮಾಡಿದರು. ಎರಡನೇ ಬಾಜೀರಾವ್‌ನ ಮರಣದ ನಂತರ ಅವನ ದತ್ತು ಮಗ ನಾನಾಸಾಹೇಬನಿಗೆ ಕೊಡುತ್ತಿದ್ದ ವಿಶ್ರಾಂತಿ ವೇತನವನ್ನು ನಿಲ್ಲಿಸಲಾಯಿತು. ಇದರಂದ ಮರಾಠರು ಬ್ರಿಟಿಷರ ಕಡುವೈರಿಯಾದನು. ಈ ನಡುವೆ ಬ್ರಿಟಿಷರೊಡನೆ ಮುಸ್ಲೀಮರು ಬ್ರಿಟಿಷ್ ಸರ್ಕಾರದ ನಡವಳಿಕೆಯಿಂದ ಅತೃಪ್ತಗೊಂಡರಲ್ಲದೆ ಅಧಿಕಾರವನ್ನು ಕಳೆದುಕೊಂಡೆವೆಂದು ಭಾವಿಸಿದರು.

2.ಆಡಳಿತ ಕಾರಣಗಳು

ಭಾರತೀಯರು ಬ್ರಿಟಿಷರ ಆಡಳಿತದಲ್ಲಿ ನಂಬಿಕೆ ಮತ್ತು ವಿಶ್ವಾಸವನ್ನು ಹೊಂದಿರಲಿಲ್ಲ. ಉದಾಹರಣೆಗೆ ನ್ಯಾಯಾಲಯಗಳಲ್ಲಿ ಪರ್ಶಿಯನ್ ಭಾಷೆಗೆ ಬದಲಾಗಿ ಆಂಗ್ಲಭಾಷೆಯನ್ನು ಜಾರಿಮಾಡಿದುದನ್ನು ಭಾರತೀಯರು ವಿರೋಧಿಸಿದರು.ಬ್ರಿಟಿಷರ ನ್ಯಾಯಾಂಗ ಪದ್ಧತಿ ದುಬಾರಿಯಾಗಿಯೂ, ಯಾಂತ್ರಿಕರಣವಾಗಿಯೂ (Mechanical) ಕಾಲವಿಳಂಬವಾಗುತ್ತಿತ್ತು. ಈ ಅವಧಿಯಲ್ಲಿ ಪೋಲಿಸ್ ಇಲಾಖೆಯಲ್ಲಿ ದಕ್ಷತೆಯಿರಲಿಲ್ಲ. ಪ್ರಜೆಗಳ ಆಸ್ತಿ ಮತ್ತು ಜೀವಕ್ಕೆ ಯಾವುದೇ ರೀತಿಯ ರಕ್ಷಣೆ ಇರಲಿಲ್ಲ. ಬ್ರಿಟಿಷರ ಆಳ್ವಿಕೆಯ ಕಾಲದ ಕಂದಾಯ ಪದ್ಧತಿಯು ಅತ್ಯಂತ ದುರ್ಭರವಾಗಿತ್ತು ಅಲ್ಲದೆ ರೈತರು ಮತ್ತು ಜಮೀನ್ದಾರರು ತೊಂದರೆಗೆ ಒಳಗಾದರು. ರೈತರು ಅಧಿಕ ಭೂಕಂದಾಯವನ್ನು ಪಾವತಿಸುತ್ತಿದ್ದರು. ಭಾರತೀಯರನ್ನು ಸಿವಿಲ್ ಮತ್ತು ಸೈನ್ಯದ ಉನ್ನತ ಹುದ್ದೆಗೆ ನೇಮಕ ಮಾಡಿಕೊಳ್ಳುತ್ತಿರಲಿಲ್ಲ. ಆದುದರಿಂದ ವಿದ್ಯಾವಂತರಾದ ಭಾರತೀಯರು ಕಂಪೆನಿಯಲ್ಲಿ ಉದ್ಯೋಗ ದೊರೆಯುವುದಿಲ್ಲವೆಂದು ನಿರಾಸೆಗೊಂಡರು.

3.ಆರ್ಥಿಕ ಕಾರಣಗಳು

ದೇಶದ ಆರ್ಥಿಕ ಹೀರಿಕೆ,ಸಂಪತ್ತಿನ ಸೋರಿಕೆ, ದೇಶೀಯ ಕೈಗಾರಿಕೆಗಳ ವಿನಾಶ ಭಾರತೀಯರ

ಆರ್ಥಿಕ ಜೀವನದ ಮೇಲೆ ದುಷ್ಪರಿಣಾಮವನ್ನು ಉಂಟುಮಾಡಿತು. ಭಾರತೀಯರು ರಫ್ತು ಮಾಡುತ್ತಿದ್ದ ಉತ್ಪನ್ನಗಳಿಗೆ ಅಧಿಕವಾದ ರಕ್ಷಣಾ ತೆರಿಗೆಯನ್ನು ಪಾವತಿ ಮಾಡಬೇಕಾಗಿದ್ದಿತು. ಭಾರತಕ್ಕೆ ಆಮದಾಗುತ್ತಿದ್ದ ಬ್ರಿಟಿಷ್ ಉತ್ಪನ್ನಗಳಿಗೆ ಅತ್ಯಂತ ಕಡಿಮೆ ತೆರಿಗೆಯನ್ನು ವಿಧಿಸುತ್ತಿದ್ದರು. ಭಾರತದ ನೇಯ್ಗೆಯವರು ಮತ್ತು ಕರಕುಶಲ ಕೆಲಸಗಾರರನ್ನು ಕಂಪೆನಿಯ ಇಚ್ಛೆಗನುಸಾರವಾಗಿ ಕೆಲಸ ಮಾಡಲು ಒತ್ತಾಯ ಮಾಡುತ್ತಿದ್ದರು. ಅವರಿಗೆ ಕಡಿಮೆ ವೇತನವನ್ನು ಕೊಡುತ್ತಿದ್ದರು. ಈ ನೀತಿಯಿಂದ ಕಾರ್ಮಿಕರ ಆಸಕ್ತಿಯು ಕಡಿಮೆಯಾಯಿತು. ಇದರಿಂದ ಭಾರತದ ಅತ್ಯಂತ ಲಾಭದಾಯಕ ಕೈಗಾರಿಕೆಯು ನಶಿಸಿಹೋಯಿತಲ್ಲದೆ ಜೀವನೋಪಾಯಕ್ಕಾಗಿ ಇವುಗಳನ್ನು ಅವಲಂಬಿಸಿಕೊಂಡಿದ್ದ ಕಾರ್ಮಿಕರು ತೊಂದರೆಗೆ ಒಳಗಾದರು. ತೀವ್ರ ಆರ್ಥಿಕ ಹಿಂಜರಿತವನ್ನು ಸುಧಾರಿಸಲು ಲಾರ್ಡ್‌ವಿಲಿಯಂ ಬೆಂಟಿಂಕ್ ಮುಕ್ತ ಗೇಣಿ ಪದ್ಧತಿಯನ್ನು 19ನೇ ಶತಮಾನದ ಮಧ್ಯಭಾಗದವರೆಗೆ ಜಾರಿಗೆ ತಂದನು.

4. ಸಾಮಾಜಿಕ ಮತ್ತು ಧಾರ್ಮಿಕ ಕಾರಣಗಳು

ಬ್ರಿಟಿಷರು ಭಾರತದ ಸಮಾಜದಲ್ಲಿ ಜಾರಿಗೊಳಿಸಿದ ಸತಿ ಸಹಗಮನ ಪದ್ಧತಿ ನಿಷೇಧ, ಹೆಣ್ಣು ಶಿಶು ಹತ್ಯೆ ತಡೆ, ವಿಧವಾ ವಿವಾಹ ಪ್ರೋತ್ಸಾಹ ಮೊದಲಾದವುಗಳು ಬ್ರಿಟಿಷರು ಹಿಂದೂಗಳ ಸಂಪ್ರದಾಯ ಮತ್ತು ಪದ್ಧತಿಗಳಲ್ಲಿ ತಲೆಹಾಕುವುದರಿಂದ ಪಾಶ್ಚಿಮಾತ್ಯ ಸಂಸ್ಕೃತಿಯು ಭಾರತದಲ್ಲಿ ಬಹುಬೇಗ ಹರಡುತ್ತದೆಂದು ಸಂಪ್ರದಾಯವಾದಿಗಳ ಗುಂಪು ಜಾಗೃತಗೊಂಡಿತು. ಕ್ರೈಸ್ತಮತಕ್ಕೆ ಮತಾಂತರ ಹೊಂದಿದ ವ್ಯಕ್ತಿಗಳು ತಮ್ಮ ಅನುವಂಶಿತವಾದ ಆಸ್ತಿಯನ್ನು ಪಡೆಯಲು ವಿಧಿಸಿದ್ದ ನಿರ್ಬಂಧ ಕಾಯಿದೆಗಳನ್ನು ತೆಗೆದುಹಾಕಿದುದು ಹಿಂದೂಗಳನ್ನು ಕ್ರೈಸ್ತ ಧರ್ಮಕ್ಕೆ ಮತಾಂತರಿಸಲು ಪ್ರೋತ್ಸಾಹಿಸುತ್ತಾರೆಂದು ತಿಳಿದುಕೊಂಡರು. ದೇವಾಲಯ ಮತ್ತು ಮಸೀದಿಗಳಿಗೆ ಸ್ವಂತವಾದ ಭೂಮಿಯ ಮೇಲೆ ಕಂದಾಯವನ್ನು ವಿಧಿಸಿದುದು ಧಾರ್ಮಿಕ ಭಾವನೆಯನ್ನು ಕೆರಳಿಸಿತು.


5. ಸೈನಿಕ ಕಾರಣಗಳು

ಭಾರತೀಯ ಸೈನಿಕರು ಬ್ರಿಟಿಷರೊಡನೆ ಪ್ರಾಮಾಣಿಕತೆಯಿಂದ ನಡೆದುಕೊಂಡಿದ್ದರೆ ಅಂತಹ ಸಂಭವವು ಏರ್ಪಡುತ್ತಿರಲಿಲ್ಲ. ಬ್ರಿಟಿಷರು ಭಾರತೀಯ ಸೈನಿಕರ ಹಾಗೂ ಇಂಗ್ಲೀಷ್ ಸೈನಿಕರ ನಡುವೆ ತಾರತಮ್ಯ ಮಾಡುವುದಲ್ಲದೆ ಭಾರತದ ಸಿಪಾಯಿಗಳಿಗೆ ಕಡಿಮೆ ಸಂಬಳವನ್ನು ನೀಡುವುದರ ಜೊತೆಗೆ ಯಾವುದೇ ಬಡ್ತಿಯನ್ನು ನೀಡುತ್ತಿರಲಿಲ್ಲ. ಒಬ್ಬ ಭಾರತೀಯ ಸೈನಿಕನು ಸುಭೇದಾರನಾಗಿ ಪಡೆಯುತ್ತಿದ್ದ ಸಂಬಳವು ಆಗ ತಾನೆ ಸೈನ್ಯದಲ್ಲಿ ಸೇರಿದ ಬ್ರಿಟಿಷ್ ಸೈನಿಕನ ಸಂಬಳಕ್ಕಿಂತ ಕಡಿಮೆಯಾಗಿದ್ದಿತು. ಅಲ್ಲದೆ ಭಾರತೀಯ ಸೈನಿಕರನ್ನು ಅಗೌರವವಾಗಿ ಕಾಣಲಾಗುತ್ತಿತ್ತು. ಲಾರ್ಡ್ ಕ್ಯಾನಿಂಗ್ 1856ರಲ್ಲಿ ಹೊರಡಿಸಿದ ಸಾರ್ವತ್ರಿಕ ಸೇನಾ ಕಾಯಿದೆ(General Services Enlistment Act)ಹೊರಡಿಸಿದುದು ಮತ್ತಷ್ಟು ಅತೃಪ್ತಿಯನ್ನು ಉಂಟುಮಾಡಿತು. ಈ ಕಾಯಿದೆಯಂತೆ ಭಾರತದ ಸಿಪಾಯಿಗಳು ದೇಶ ವಿದೇಶಗಳಲ್ಲಿ ಯುದ್ಧ ಮಾಡುವಂತಾಯಿತು. ಬ್ರಿಟಿಷ್ ಸೈನಿಕರಿಗಿಂತ ಭಾರತೀಯ ಸೈನಿಕರ ತಂಡವು ಐದು ಪಟ್ಟು ಹೆಚ್ಚಾಗಿದ್ದಿತು. ಯುದ್ಧ ಕೌಶಲ್ಯವನ್ನು ತಿಳಿದಿದ್ದ ಭಾರತೀಯ ಸೈನಿಕರು ದೆಹಲಿ ಮತ್ತು ಅಲಹಬಾದ್ ಪಟ್ಟಣಗಳಲ್ಲಿ ಬೀಡುಬಿಟ್ಟಿದ್ದುದರಿಂದ ಬ್ರಿಟಿಷರ ವಿರುದ್ಧ ದಂಗೆ ಏಳಲು ಸೈನಿಕರನ್ನು ಹುರಿದುಂಬಿಸಿತು.

6. ತಕ್ಷಣದ ಕಾರಣಗಳು

ಭಾರತದ ಸೇನೆಯಲ್ಲಿ ಬ್ರಿಟಿಷರಿಂದ ಪರಿಚಯಿಸಲ್ಪಟ್ಟ ನೂತನ ಎನ್‌ಫಿಲ್ಡ್ ಬಂದೂಕುಗಳಿಗೆ ಬಳಸುವ ತೋಟಾಗಳ ಹೊರಹೊದಿಕೆಗಳಿಗೆ ಜಿಡ್ಡು ಲೇಪಿಸಿದ ಕಾಗದವನ್ನು ಸುತ್ತಲಾಗಿತ್ತು. ಬಂದೂಕಿಗೆ ತೋಟಾಗಳನ್ನು ಹಾಕುವಾಗ ಸೈನಿಕರು ಹಲ್ಲುಗಳಿಂದ ಕಚ್ಚಿ ಬಂದೂಕುಗಳಿಗೆ ಸೇರಿಸಬೇಕಾಗಿದ್ದಿತು. ಇವುಗಳಿಗೆ ಹಸು ಮತ್ತು ಹಂದಿಯ ಜಿಡ್ಡನ್ನು ಲೇಪಿಸಿದೆ ಎಂಬ ವದಂತಿ ಇದ್ದುದರಿಂದ ತೋಟಾಗಳ

1857ರಲ್ಲಿ ಕ್ರಾಂತಿ ನಡೆದ ಸ್ಥಳಗಳು



ಉಪಯೋಗವನ್ನು ನಿರಾಕರಿಸಿದರು. ಗೋವು ಹಿಂದೂಗಳಿಗೆ ಪವಿತ್ರವಾದುದು ಮತ್ತು ಮುಸ್ಲೀಮರಿಗೆ ಹಂದಿ ನಿಷಿದ್ಧವಾದುದಾಗಿತ್ತು.

1857ರ ಮಾರ್ಚ್ 29ರಂದು ಕಲ್ಕತ್ತಾದ ಸಮೀಪವಿರುವ ಭಾರಕ್‌ಪುರ ಎಂಬ ಸ್ಥಳದಲ್ಲಿ ಬಂಗಾಳದ ಭೂಸೇನಾಪಡೆಗೆ ಸೇರಿದ ಮಂಗಳಪಾಂಡೆ ಎಂಬ ಯುವ ಸಿಪಾಯಿ ತೋಟಾಗಳ ಉಪಯೋಗವನ್ನು ನಿರಾಕರಿಸಿದುದಲ್ಲದೆ ತನ್ನ ಮಿಲಿಟರಿ ಅಧಿಕಾರಿಯನ್ನು ಗುಂಡಿಕ್ಕಿ ಕೊಂದನು. ಮಂಗಳಪಾಂಡೆಯನ್ನು ಬಂಧಿಸಿ ಗಲ್ಲಿಗೇರಿಸಲಾಯಿತು. ಭಾರಕ್‌ಪುರದಲ್ಲಿದ್ದ ಬ್ರಿಟಿಷ್ ಅಧಿಕಾರಿಗಳು ಮತ್ತು ಭೂಸೇನಾಪಡೆಯನ್ನು ಮೀರತ್‌ಗೆ ವರ್ಗಾಯಿಸಲಾಯಿತು. ಈ ವಿಷಯ ಹರಡುತ್ತಿದ್ದಂತೆ ಹಲವಾರು ಸೈನಿಕರು ಕ್ರಾಂತಿಯನ್ನು ಆರಂಭಿಸಿದರು.

II. ಕ್ರಾಂತಿಯ ಹರಡುವಿಕೆ ಮತ್ತು ಕ್ರಾಂತಿಯ ದಮನ

ಪ್ರಥಮವಾಗಿ ಕ್ರಾಂತಿಯು 1857ರಲ್ಲಿ ಬಂಗಾಳದಲ್ಲಿರುವ ಭಾರಕ್‌ಪುರದಲ್ಲಿ ನಡೆಯಿತು. ಇದನ್ನು ಬಹುಬೇಗ ಧಮನಗೊಳಿಸಿ ಕ್ರಾಂತಿಕಾರರನ್ನು ಶಿಕ್ಷೆಗೆ ಒಳಪಡಿಸಲಾಯಿತು. ಆದರೆ ಸಿಪಾಯಿಗಳು ಮೇ 1857ರಲ್ಲಿ



ರಾಣಿ ಲಕ್ಷ್ಮಿಬಾಯಿ

ಮೀರತ್‌ನಲ್ಲಿ ಬಹಿರಂಗವಾಗಿ ಕ್ರಾಂತಿಯಲ್ಲಿ ತೊಡಗಿದರು. ಮತ್ತು ಸೆರೆಯಲ್ಲಿದ್ದ ತಮ್ಮ ಒಡನಾಡಿಗಳನ್ನು ಬಿಡುಗಡೆ ಮಾಡಿದರು. ನಂತರ ದೆಹಲಿಯ ಕಡೆಗೆ ಬಹುಬೇಗ ಮುನ್ನಡೆದು ದೆಹಲಿಯನ್ನು ತಮ್ಮ ನಿಯಂತ್ರಣಕ್ಕೆ ಒಳಪಡಿಸಿಕೊಂಡರು. ಲಕ್ನೋ, ಬರೈಲಿ, ಕಾನ್ಪುರ, ಆಗ್ರಾ, ಝಾನ್ಸಿ, ಬನಾರಸ್, ಮಧ್ಯಭಾರತ, ಬುಂದೇಲ್‌ಖಂಡ್ ಮುಂತಾದ ಭಾಗಗಳಲ್ಲಿ ಕ್ರಾಂತಿಯು ಹರಡಿತು.

ಈ ಕ್ರಾಂತಿಯ ಪ್ರಮುಖ ನಾಯಕರುಗಳೆಂದರೆ ಝಾನ್ಸಿರಾಣಿ ಲಕ್ಷ್ಮಿಬಾಯಿ, ತಾಂತ್ಯಾಟೋಪೆ, ನಾನಾಸಾಹೇಬ ಮತ್ತು ಕನ್ವರ್‌ಸಿಂಗ್. ಈ ಕ್ರಾಂತಿಯು ಕೇಂದ್ರೀಕೃತವಾಗಿದ್ದ ಮೂರು ಪ್ರಮುಖ ಪಟ್ಟಣಗಳೆಂದರೆ ಕಾನ್ಪುರ, ದೆಹಲಿ ಮತ್ತು ಲಕ್ನೋ.

1. ಕಾನ್ಪುರ

ಕಾನ್ಪುರದಲ್ಲಿ ದಂಗೆಯು ಆರಂಭವಾದ ಅವಧಿಯಲ್ಲಿ ನಾನಾಸಾಹೇಬ ಪೇಶ್ವೆ ಎರಡನೇ ಬಾಜೀರಾಯನ ಸಾಕುಮಗ. ಇವನು ಕ್ರಾಂತಿಯ ಮುಂದಾಳತ್ವ ವಹಿಸಿಕೊಂಡು ಕ್ರಾಂತಿಯನ್ನು ನಡೆಸಿದನು. ಇವನ ಸೇನಾನಾಯಕ ತಾಂತ್ಯಾಟೋಪೆಯ ಸಹಾಯದಿಂದ ಕಾನ್ಪುರದ ಕೋಟೆಯನ್ನು ವಶಪಡಿಸಿಕೊಂಡು ತನ್ನನ್ನು ಪೇಶ್ವೆ ಎಂದು ಘೋಷಿಸಿಕೊಂಡನು. ಬ್ರಿಟಿಷರು ಕ್ರಾಂತಿಯನ್ನು ಅಡಗಿಸಿದರಲ್ಲದೆ ಪುರುಷರು, ಮಹಿಳೆಯರು ಮತ್ತು ಮಕ್ಕಳನ್ನು ಕರುಣೆಯಿಲ್ಲದೆ ಕೊಲೆಗೈದರು. ಅಂತಿಮವಾಗಿ ನಾನಾಸಾಹೇಬನು ಸರ್ ಕಾಲಿನ್‌ನಿಂದ ಸೋಲನ್ನು ಅನುಭವಿಸಿ ನೇಪಾಳಕ್ಕೆ ಓಡಿಹೋಗಿ ಕೆಲವು ವರ್ಷಗಳ ನಂತರ ಮರಣಹೊಂದಿದನು. 1857 ನವಂಬರ್ ಮಧ್ಯದ ವೇಳೆಗೆ ಕಾನ್ಪುರ ಬ್ರಿಟಿಷರ ವಶವಾಯಿತು.

2. ದೆಹಲಿ

ಸರ್ ಆರ್ಕ್‌ಡಾಲ್ ವಿಲ್ಸನ್, ನಿಕೋಲಸ್ ಮತ್ತು ಸರ್ ಜಾನ್ ಲಾರೆನ್ಸ್ ಎಂಬ ಮಿಲಿಟರಿ ಅಧಿಕಾರಿಗಳು ದೆಹಲಿಯನ್ನು ಕ್ರಾಂತಿಕಾರರಿಂದ

ಮುಕ್ತಗೊಳಿಸಿದರು. ಬ್ರಿಟಿಷರ ನಿಷ್ಕರುಣೆಯ ಹತ್ಯಾಕಾಂಡದಿಂದ ದೆಹಲಿಯೇ ತಲ್ಲಣಗೊಂಡಿತು. ಅಸಮರ್ಥನಾದ ಮೊಗಲ್ ಅರಸ ಎರಡನೇ ಬಹದ್ದೂರ್‌ಷ ಒಳಸಂಚು ನಡೆಸುವ ಪ್ರಯತ್ನದಿಂದ ರಂಗೂನಿಗೆ ಓಡಿಹೋದನು. ಅಲ್ಲಿ ತನ್ನ 87ನೇ ವಯಸ್ಸಿನಲ್ಲಿ ಮರಣಹೊಂದಿದನು.

3.ಲಕ್ನೋ

ಲಕ್ನೋ ಕ್ರಾಂತಿಕಾರರ ಮತ್ತೊಂದು ಪ್ರಮುಖ ಕೇಂದ್ರ. ಮುಖ್ಯಾಧಿಕಾರಿ(ಆಯುಕ್ತ) ಸರ್ ಲಾರೆನ್ಸ್ ಮತ್ತು ಕ್ಲೊನೆಲ್‌ನೀಲ್ ಎಂಬುವವರನ್ನು ಕೊಲೆಗೈಯ್ಯಲಾಯಿತು. ಅಯೋಧ್ಯೆಯ ನವಾಬನ ಹೆಂಡತಿ ಹಜರತ್‌ಮಹಲ್ ಕ್ರಾಂತಿಕಾರರೊಡನೆ ಸೇರಿಕೊಂಡಳು. ಅಂತಿಮವಾಗಿ ಲಕ್ನೋವನ್ನು ಸರ್ ಕಾಲಿನ್ ಕ್ಯಾಂಬಲ್ 1858ರಲ್ಲಿ ಪುನರ್ ಆಕ್ರಮಣ ಮಾಡಿಕೊಂಡನು.

4. ಮಧ್ಯಭಾರತ

ಮಧ್ಯಭಾರತದಲ್ಲಿ ಕ್ರಾಂತಿಯ ಮುಂದಾಳತ್ವ ವಹಿಸಿಕೊಂಡ ಝಾನ್ಸಿರಾಣಿ ಲಕ್ಷ್ಮಿಬಾಯಿ ಮತ್ತು ಕಾನ್ಪುರದಿಂದ ಬಂದಿದ್ದ ತಾಂತ್ಯಾಟೋಪೆ ಇವರಿಬ್ಬರು ಪರಾಕ್ರಮದಿಂದ ಹೋರಾಡಿದರು. ರಾಣಿಯು ಗಂಡುಡುಗೆಯನ್ನು ಧರಿಸಿಕೊಂಡು ಧೈರ್ಯವಾಗಿ ಯುದ್ಧಮಾಡಿ ಗ್ವಾಲಿಯರನ್ನು ವಶಪಡಿಸಿಕೊಂಡಳು. 1858ರ ಜೂನ್ ತಿಂಗಳಿನಲ್ಲಿ ರಣರಂಗದಲ್ಲಿಯೇ ಹೋರಾಡುತ್ತಲೇ ವೀರ ಮರಣಹೊಂದಿದಳು. ತಾಂತ್ಯಾಟೋಪೆ ತಲೆಮರೆಸಿಕೊಂಡರೂ ಅವನನ್ನು ಸೆರೆಹಿಡಿದು ಮರಣದಂಡನೆ ವಿಧಿಸಲಾಯಿತು.

5.ಬರೈಲಿ

ರೋಹಿಲ್‌ಖಂಡದ ರಾಜಧಾನಿಯಾದ ಬರೈಲಿಯಲ್ಲಿ ಸೈನಿಕರು ಕ್ರಾಂತಿನಡೆಸಿದರು. ಅವರು ತಮ್ಮ ನಾಯಕನನ್ನು ರೋಹಿಲ್‌ಖಂಡದ ಗೌರ್ನರ್ ಎಂದು ಘೋಷಿಸಿಕೊಂಡರು. ಆದರೆ ಕ್ರಾಂತಿಯು ನಸುಕಿಹಾಕಲ್ಪಟ್ಟಿತು.

6.ಬಿಹಾರ

ಬಿಹಾರದಲ್ಲಿರುವ ಜಗದೀಶಪುರದ ಜಮೀನ್ದಾರ 80 ವರ್ಷ ತುಂಬಿದ ಕನ್ವರ್‌ಸಿಂಗ್ ಕ್ರಾಂತಿಗೆ ನಾಯಕತ್ವ ವಹಿಸಿಕೊಂಡನು. 1858ರಲ್ಲಿ ತನ್ನ ಕೊನೆಯುಸಿರು ಇರುವವರೆಗೂ ಪರಾಕ್ರಮದಿಂದ ಹೋರಾಡಿ ಮರಣಹೊಂದಿದನು. ಇವನು ಪಶ್ಚಿಮ ಬಿಹಾರದ ಶ್ರೇಷ್ಠ ಸೇನಾಧಿಪತಿಯಾಗಿದ್ದನು. ಇವನ ನಂತರ ಇವನ ಸಹೋದರ ಅಮರ್‌ಸಿಂಗ್ ಕ್ರಾಂತಿಯ ನಾಯಕತ್ವವನ್ನು ವಹಿಸಿಕೊಂಡನು. ಆದರೆ ಕ್ರಾಂತಿಯು ತಕ್ಷಣ ಕೊನೆಗೊಂಡಿತು.

III.ಕ್ರಾಂತಿಯ ಸೋಲಿಗೆ ಕಾರಣಗಳು

- ಕ್ರಾಂತಿಕಾರರಲ್ಲಿದ್ದ ಅನೈಕ್ಯತೆಯೇ ಈ ಕ್ರಾಂತಿಯ ಸೋಲಿಗೆ ಪ್ರಥಮ ಮತ್ತು ಪ್ರಮುಖವಾದ ಕಾರಣವಾಯಿತು.
- ಕ್ರಾಂತಿ ದೇಶದಾದ್ಯಂತ ಹರಡಲಿಲ್ಲ ಉತ್ತರಭಾರತದಲ್ಲಿ ಮಾತ್ರ ಕ್ರಾಂತಿ ಕೇಂದ್ರೀಕೃತವಾಗಿದ್ದಿತು. ದಕ್ಷಿಣ ಭಾರತ, ಪಂಜಾಬ್, ಸಿಂಧು ಮತ್ತು ರಾಜಸ್ತಾನ ಈ ಕ್ರಾಂತಿಯಲ್ಲಿ ಭಾಗವಹಿಸಲಿಲ್ಲ.
- ಅತಿ ಹೆಚ್ಚಿನ ಸಂಖ್ಯೆಯ ದೇಶೀಯ ಅರಸರು ಮತ್ತು ಪ್ರಖ್ಯಾತಿಯಾದ ಜಮೀನ್ದಾರರು ಕ್ರಾಂತಿಯಲ್ಲಿ ಭಾಗವಹಿಸಲಿಲ್ಲ
- ಕ್ರಾಂತಿಯನ್ನು ಬೆಂಬಲಿಸದ ದೇಶೀಯ ಅರಸರು ತಟಸ್ಥವಾಗಿದ್ದುಕೊಂಡರು
- ವಿದ್ಯಾವಂತರಾದ ಭಾರತೀಯರು ಸಹ ಸಾರ್ವತ್ರಿಕವಾಗಿ ಕ್ರಾಂತಿಯನ್ನು ಬೆಂಬಲಿಸಲಿಲ್ಲ.
- ಕ್ರಾಂತಿಕಾರರಿಗೆ ಆಧುನಿಕ ಯುದ್ಧೋಪಕರಣಗಳ ಕೊರತೆ ಇದ್ದಿತು. ಇವರು ಸಾಂಪ್ರದಾಯಿಕವಾದ ಆಯುಧಗಳನ್ನು ಉಪಯೋಗಿಸಿಕೊಂಡು ಕ್ರಾಂತಿಯಲ್ಲಿ ತೊಡಗಿದರು. ಆದರೆ ಬ್ರಿಟಿಷ್ ಸಿಪಾಯಿಗಳು ಆಧುನಿಕ ಶಸ್ತ್ರಾಸ್ತ್ರಗಳನ್ನು ಹೊಂದಿದುದರಿಂದ ಕ್ರಾಂತಿಕಾರರು ಸೋಲನ್ನು ಅನುಭವಿಸಬೇಕಾಯಿತು.

- ಭಾರತದ ಕ್ರಾಂತಿಯ ನಾಯಕರುಗಳಾದ ನಾನಾಸಾಹೇಬ, ತಾಂತ್ಯಾಟೋಪೆ ಮತ್ತು ರಾಣಿ ಲಕ್ಷ್ಮಿಬಾಯಿ ಬ್ರಿಟಿಷ್ ಸೇನಾದಳಪತಿಗಳಿಗೆ ಸರಿಸಮಾನರಾಗಿರಲಿಲ್ಲ.

- ಟೆಲಿಗ್ರಾಫ್(ತಂತಿ), ರೈಲ್ವೆ, ರಸ್ತೆ ಮತ್ತು ನೌಕಾಪ್ರಭುತ್ವ ಮೊದಲಾದುವು ಸೈನಿಕ ಮತ್ತು ಅಗತ್ಯವಸ್ತುಗಳನ್ನು ಸರಬರಾಜು ಮಾಡುವ ಕಾರ್ಯದಲ್ಲಿ ಬ್ರಿಟಿಷರಿಗೆ ಸಹಾಯಕವಾದವು.

- 1857ರ ಮೇ 31ರಂದು ನಡೆಯಬೇಕಾಗಿದ್ದ ಕ್ರಾಂತಿಯು ನಿಗದಿತ ದಿನಕ್ಕಿಂತ ಮೊದಲೇ ಸಂಭವಿಸಿದುದರಿಂದ ಕ್ರಾಂತಿಗೆ ಅಗತ್ಯವಾದ ಏರ್ಪಾಡುಗಳನ್ನು ಮಾಡಿಕೊಳ್ಳಲು ವಿಫಲರಾದುದು ಕ್ರಾಂತಿಯ ಸೋಲಿಗೆ ದಾರಿಯಾಯಿತು.

- ಕ್ರಾಂತಿಕಾರಿಗಳ ಸಂಘಟನೆ, ಯೋಜನೆಗಳನ್ನು ರೂಪಿಸುವ ಕಾರ್ಯಗಳಲ್ಲಿ ಉತ್ತಮವಾದ ತರಬೇತಿ ಇರಲಿಲ್ಲ. ಭಾರತದ ನಾಯಕರುಗಳು ಧೈರ್ಯಶಾಲಿಗಳು, ತ್ಯಾಗಕ್ಕೂ ಹೆಸರುವಾಸಿಗಳಾಗಿದ್ದರೂ ಸೇನೆಗೆ ಮುಂದಾಳತ್ವ ವಹಿಸಿಕೊಂಡು ಸೈನಿಕರನ್ನು ನಿಯಂತ್ರಿಸುವಲ್ಲಿ ವಿಫಲರಾದರು.

- ಕ್ರಾಂತಿಕಾರರುಗಳಲ್ಲಿ ಒಂದೇ ರೀತಿಯಾದ ಅಭಿಪ್ರಾಯವಿರಲಿಲ್ಲ. ಮುಸ್ಲೀಮರು ಮೊಗಲ್ ಸಾಮ್ರಾಜ್ಯವನ್ನು ಮತ್ತೆ ಸ್ಥಾಪಿಸಲು ಬಯಸಿದರು. ಹಿಂದೂಗಳು ಮರಾಠ ಸಾಮ್ರಾಜ್ಯವನ್ನು ಸ್ಥಾಪಿಸಲು ಪ್ರಯತ್ನಿಸಿದರು.

- ಬ್ರಿಟಿಷರ ರಾಜಕೀಯ ತಂತ್ರವಾದ "ಒಡೆದು ಆಳುವ ನೀತಿ"ಯ ಮೂಲಕ ಭಾರತೀಯ ಅರಸರುಗಳು ಒಗ್ಗಟ್ಟಾಗುವುದನ್ನು ಬ್ರಿಟಿಷರು ತಮ್ಮ ರಾಜನೀತಿಯಿಂದ ತಡೆಗಟ್ಟಿದರು.

IV. ಕ್ರಾಂತಿಯ ಫಲಿತಾಂಶಗಳು

1857ರ ಮಹಾಕ್ರಾಂತಿಯು ತನ್ನ ಗುರಿಯನ್ನು ತಲುಪುವಲ್ಲಿ ವಿಫಲವಾಯಿತು. ಆದರೂ ಹಲವು ಫಲಿತಾಂಶಗಳನ್ನು ಪಡೆದುಕೊಂಡಿತು. ಈ ಕ್ರಾಂತಿಯು ಭಾರತದಲ್ಲಿ ರಾಜಕೀಯ ಬದಲಾವಣೆಗಳನ್ನು ಉಂಟುಮಾಡಿತು. ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿಯ ಆಳ್ವಿಕೆಯನ್ನು ಕೊನೆಗೊಳಿಸಿತು. ಭಾರತದ ಆಳ್ವಿಕೆಯ ಹೊಣೆಯನ್ನು ಬ್ರಿಟಿಷ್ ಸರ್ಕಾರವೇ ವಹಿಸಿಕೊಂಡಿತು. 1858ರಲ್ಲಿ ವಿಶೇಷ ಕಾಯ್ದೆಯಂತೆ ನಿಯಂತ್ರಣ ಮಂಡಳಿ ಮತ್ತು ನಿರ್ದೇಶಕ ಮಂಡಳಿಯ ನಿರ್ದೇಶಕರನ್ನು ವಜಾ ಮಾಡಿ ಇವುಗಳಿಗೆ ಬದಲಾಗಿ ರಾಜ್ಯ ಕಾರ್ಯದರ್ಶಿ ಕಾರ್ಯಾಲಯವೊಂದನ್ನು ಸ್ಥಾಪಿಸಲಾಯಿತು. ಹದಿನೈದು ಮಂದಿ ಸದಸ್ಯರನ್ನು ಒಳಗೊಂಡ ಒಂದು ಮಂಡಳಿಯನ್ನು ರಚಿಸಲಾಯಿತು. ಭಾರತದಲ್ಲಿ ಆಳ್ವಿಕೆ ನಡೆಸುವ ಆಂಗ್ಲ ಅಧಿಕಾರಿಯನ್ನು ಗವರ್ನರ್ ಜನರಲ್‌ಗೆ ಬದಲಾಗಿ ವೈಸ್‌ರಾಯ್ ಎಂದು ಕರೆಯಲಾಯಿತು. ವೈಸ್‌ರಾಯ್ ಎಂದರೆ 'ರಾಜಪ್ರತಿನಿಧಿ' ಎಂದರ್ಥ. ಭಾರತ ಅರಸರಿಗೆ ದತ್ತು ಸ್ವೀಕಾರ ಮಾಡುವ ಹಕ್ಕನ್ನು ಕೊಡಲಾಯಿತು. ದಯೆ ಇಲ್ಲದೆ ಭಾರತದ ಸಂಸ್ಥಾನಗಳನ್ನು ವಿಲೀನಮಾಡಿಕೊಳ್ಳುವ ಪದ್ಧತಿಯನ್ನು ಕೈಬಿಡಲಾಯಿತು. ಭಾರತೀಯ ಸೈನಿಕ ಪದ್ಧತಿಯನ್ನು ಸಂಪೂರ್ಣವಾಗಿ ಮಾರ್ಪಡಿಸಲಾಯಿತು. ಭಾರತೀಯ ಸಾಂಸ್ಕೃತಿಕ ಪರಂಪರೆಯನ್ನು ಇನ್ನು ಮುಂದೆ ಗೌರವಿಸಲಾಗುವುದೆಂಬ ಭರವಸೆ ನೀಡಲಾಯಿತು. ಭಾರತೀಯರಿಗೆ ಸಂಪೂರ್ಣವಾಗಿ ಧಾರ್ಮಿಕ ಸ್ವಾತಂತ್ರ್ಯವನ್ನು ಕೊಡಲಾಯಿತು. ಜಾತಿ ಮತ ಬೇಧವಿಲ್ಲದೆ ಎಲ್ಲಾ ಭಾರತೀಯರನ್ನು ಪಕ್ಷಪಾತವಿಲ್ಲದೆ ಅರ್ಹತೆ ಮತ್ತು ದಕ್ಷತೆಯ ಆಧಾರದ ಮೇಲೆ ಸರ್ಕಾರಿ ಉದ್ಯೋಗಕ್ಕೆ ನೇಮಿಸಿಕೊಳ್ಳಲಾಗುವುದೆಂದು ತಿಳಿಸಲಾಯಿತು. ಬ್ರಿಟಿಷ್ ಸೈನಿಕರ ಸಂಖ್ಯೆಯನ್ನು ಹೆಚ್ಚಿಸಲಾಯಿತು. ಪಿರಂಗಿ ಪಡೆಯನ್ನು ಬ್ರಿಟಿಷರ ನಿಯಂತ್ರಣಕ್ಕೆ ವಹಿಸಲಾಯಿತು. ಸ್ವಾತಂತ್ರ್ಯ ಸಂಗ್ರಾಮಕ್ಕೆ ಈ ಕ್ರಾಂತಿಯ ಮೂಲಕ ಬೀಜವನ್ನು ಬಿತ್ತಿ 1947ರಲ್ಲಿ ಆಂಗ್ಲರ ಆಳ್ವಿಕೆಯನ್ನು ಮುಕ್ತಾಯಗೊಳಿಸಿ ಭಾರತವು ಸ್ವಾತಂತ್ರ್ಯ ಪಡೆದುಕೊಳ್ಳುವಂತೆ ಮಾಡಿತು.

V.1858ರ ವಿಕ್ಟೋರಿಯಾ ಮಹಾರಾಣಿಯ ಪ್ರಕಟಣೆ

1858 ನವೆಂಬರ್ 1ರಂದು ಅಲಹಾಬಾದಿನಲ್ಲಿ ನಡೆದ ರಾಜವೈಭವ ಸಭೆಯಲ್ಲಿ (ದರ್ಬಾರ್) ವಿಕ್ಟೋರಿಯಾ ಮಹಾರಾಣಿಯ ಘೋಷಣೆಯನ್ನು ಭಾರತದ ಕೊನೆಯ ಗವರ್ನರ್ ಜನರಲ್ ಮತ್ತು ಮೊದಲನೇ ವೈಸರಾಯ್ ಲಾರ್ಡ್ ಕ್ಯಾನಿಂಗ್ ಪ್ರಕಟಿಸಿದನು. ವಿಕ್ಟೋರಿಯಾ ಮಹಾರಾಣಿಯ ಘೋಷಣೆಯನ್ನು ಭಾರತದ 'ಮಹಾಶಾಸನ' ಎಂದು ಕರೆಯುತ್ತಾರೆ.



ವಿಕ್ಟೋರಿಯಾ ಮಹಾರಾಣಿ

ಈ ಪ್ರಕಟಣೆಯು ದೇಶೀಯ ಅರಸರು ಇಂಗ್ಲೀಷ್ ಈಸ್ಟ್ ಇಂಡಿಯಾ ಕಂಪೆನಿಯಿಂದ ಅನುಭವಿಸುತ್ತಿದ್ದ ಉಪಟಳವಿರುವುದಿಲ್ಲವೆಂಬುದನ್ನು ಖಾಯಂಗೊಳಿಸಿತು. ದೇಶೀಯ ಅರಸರುಗಳು ತಮ್ಮ ಸಾಂಪ್ರದಾಯಿಕ ಆಚಾರ ಮತ್ತು ಪದ್ಧತಿಗಳನ್ನು ಮುಂದುವರಿಸಿಕೊಂಡು ಹೋಗುವಂತೆ ವಾಗ್ದಾನ ಮಾಡಲಾಯಿತು. ಬ್ರಿಟಿಷರನ್ನು ಕೊಲೆಗೈದವರನ್ನು ಹೊರತುಪಡಿಸಿ ಸೆರೆಯಲ್ಲಿದ್ದ ಭಾರತೀಯ ಅಪರಾಧಿಗಳಿಗೆ ಸಾರ್ವತ್ರಿಕ ಕ್ಷಮಾಪಣೆಯನ್ನು ಕೊಡಲಾಯಿತು.

ಈ ಕ್ರಾಂತಿಯು ಪ್ರಜೆಗಳಲ್ಲಿ ದೇಶಪ್ರೇಮವನ್ನು ಉಂಟುಮಾಡಿದುದಲ್ಲದೆ, ರಾಷ್ಟ್ರೀಯ ಚಳುವಳಿಯು ಉದಯವಾಗಲು ಮಾರ್ಗದರ್ಶನವಾಯಿತು. ಈ ಕ್ರಾಂತಿಯ ನಂತರ ನಡೆದ ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಮೂಲಭೂತ ಕಾರಣವಾಗಿದ್ದು, 1947ರಲ್ಲಿ ಭಾರತ ಸ್ವಾತಂತ್ರ್ಯ ಪಡೆಯಲು ಸಹಾಯಮಾಡಿತು.

ಕ್ರಾಂತಿಯಲ್ಲಿ ಭಾಗವಹಿಸಿದ ನಾಯಕರುಗಳು

ಭರಕ್‌ಪುರ	– ಮಂಗಲ್ ಪಾಂಡೆ
ದೆಹಲಿ	– ಎರಡನೆಯ ಬಹದ್ದೂರ್‌ಷಾ
ಮಧ್ಯಭಾರತ	– ಝಾನ್ಸಿರಾಣಿ ಲಕ್ಷ್ಮಿಬಾಯಿ
ಲಕ್ನೋ	– ಬೇಗಂ ಹಜರತ್‌ಮಹಲ್
ಕಾನ್ಪುರ	– ನಾನಾಸಾಹೇಬ ಮತ್ತು ತಾಂತ್ಯಾಟೋಪೆ
ಬಿಹಾರ	– ಕನ್ವರ್ ಸಿಂಗ್

ಅಭ್ಯಾಸ

ಅ. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1. 1857ರ ಮಹಾಕ್ರಾಂತಿಯನ್ನು ಆಂಗ್ಲ ಇತಿಹಾಸಕಾರರು ಹೀಗೆ ಕರೆದರು

   ಅ) ಸಿಪಾಯಿ ದಂಗೆ ಆ) ಮಹಾದಂಗೆ

   ಇ) ಭಾರತದ ಸ್ವಾತಂತ್ರ್ಯ ಯುದ್ಧ ಈ) ಸ್ವಾತಂತ್ರ್ಯ ಸಂಗ್ರಾಮ

2. ಭಾರತದ ಇತಿಹಾಸಕಾರರು 1857ರ ಮಹಾಕ್ರಾಂತಿಯನ್ನು ಹೀಗೆ ಕರೆದರು

   ಅ) ಸಿಪಾಯಿದಂಗೆ ಆ) ಮಹಾಕ್ರಾಂತಿ

   ಇ) ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಈ) ಸ್ವಾತಂತ್ರ್ಯ ಹೋರಾಟ

3. 1857ರ ಮಹಾಕ್ರಾಂತಿಯ ಸಮಯದಲ್ಲಿ ಭಾರತದ ಗವರ್ನರ್ ಜನರಲ್ ಆಗಿದ್ದವನು

   ಅ) ಲಾರ್ಡ್ ಲಿಟ್ಟನ್ ಆ) ಲಾರ್ಡ್ ರಿಪ್ಪನ್ ಇ) ಲಾರ್ಡ್ ಕ್ಯಾನಿಂಗ್ ಈ) ಲಾರ್ಡ್ ವೆಲ್ಲೆಸ್ಲಿ

4. ರೈತರು ಅಧಿಕವಾಗಿ ಸಲ್ಲಿಸಬೇಕಾಗಿದ್ದ ತೆರಿಗೆ

ಅ) ಭೂ ತೆರಿಗೆ ಆ) ಆಮದು– ರಫ್ತು ತೆರಿಗೆ ಇ) ವರಮಾನ ತೆರಿಗೆ ಈ) ಸೇವಾ ತೆರಿಗೆ

5. ಗುತ್ತಿಗೆಯ ಭೂಮಿಗಳನ್ನು ಸರ್ಕಾರದ ನಿಯಂತ್ರಣಕ್ಕೆ ತಂದವನು

ಅ) ಲಿನ್‌ಲಿತ್‌ಗೋ ಆ) ಲಾರ್ಡ್ ಡಾಲ್‌ಹೌಸಿ ಇ) ಲಾರ್ಡ್ ಬೆಂಟಿಂಕ್ ಈ) ಲಾರ್ಡ್ ಮೌಂಟ್ ಬ್ಯಾಟನ್

6. ಸಾಮಾನ್ಯ ಸೇನಾ ಕಾಯಿದೆಯನ್ನು ಜಾರಿಗೆ ತಂದ ವರ್ಷ

ಅ) 1856 ಆ) 1857 ಇ) 1858 ಈ) 1859

7. ಮೊಟ್ಟ ಮೊದಲು ಕ್ರಾಂತಿ ಸ್ಫೋಟಗೊಂಡ ಸ್ಥಳ

ಅ) ಮೀರತ್ ಆ) ಬರೇಲಿ ಇ) ಭಾರಕ್‌ಪುರ ಈ) ಕಾನ್ಪುರ

8. ಸಿಪಾಯಿಗಳು ಬಹಿರಂಗವಾಗಿ ಕ್ರಾಂತಿಯಲ್ಲಿ ತೊಡಗಿದ ಸ್ಥಳ

ಅ) ಮೀರತ್ ಆ) ಬರೇಲಿ ಇ) ಭಾರಕ್‌ಪುರ ಈ) ಕಾನ್ಪುರ

9. ಅಯೋಧ್ಯೆಯ ನವಾಬನ ಹೆಂಡತಿ

ಅ) ಮುಮ್ತಾಜ್ ಆ) ಫಾತಿಮಾ ಬೇಗಂ

ಇ) ಬೇಗಮ್ ಹಜರತ್ ಮಹಲ್ ಈ) ರಜಿಯಾ ಸುಲ್ತಾನ

10. 1857ರ ಮಹಾಕ್ರಾಂತಿಯ ನಂತರ ಭಾರತದ ಗವರ್ನರ್ ಜನರಲ್‌ನನ್ನು ಹೀಗೆಂದು ಕರೆಯುವರು

ಅ) ಭಾರತ ಸರ್ಕಾರದ ಪ್ರತಿನಿಧಿ ಆ) ಭಾರತದ ರಾಜ

ಇ) ಭಾರತದ ರಾಜ್ಯಪಾಲ ಇ) ಭಾರತದ ಮಂತ್ರಿ

ಆ. ಹೊಂದಿಸಿರಿ

I

1.	ಮಂಗಳಪಾಂಡೆ	ಕಾನ್ಪುರ
2.	ಎರಡನೇ ಬಹದ್ದೂರ್‌ಷಾ	ಲಕ್ನೋ
3.	ನಾನಾ ಸಾಹೇಬ್	ಮಧ್ಯಭಾರತ
4.	ಬೇಗಂ ಹಜರತ್	ಮಹಲ್ ಅರಾ
5.	ರಾಣಿ ಲಕ್ಷ್ಮಿಬಾಯಿ	ಭಾರಕ್‌ಪುರ
		ಅಯೋಧ್ಯೆ
		ದೆಹಲಿ

II

1.	ರಾಣಿ ಲಕ್ಷ್ಮಿಬಾಯಿ	ಮೊಗಲರ ಅರಸ
2.	ಎರಡನೇ ಬಹದ್ದೂರ್‌ಷಾ	ಕಾಲಿನ್ ಕ್ಯಾಂಬೆಲ್
3.	ಮಹಾಕ್ರಾಂತಿ	ಝಾನ್ಸಿ
4.	ಲಕ್ನೋ	ಮಹಾಶಾಸನ
5.	ವಿಕ್ಟೋರಿಯಾ ಮಹಾರಾಣಿಯ ಮಹಾಪ್ರಕಟಣೆ	1856
		1854
		1857

ಇ. ಸಂಕ್ಷಿಪ್ತವಾಗಿ ಉತ್ತರಿಸಿ

1. 1857ರ ಮಹಾಕ್ರಾಂತಿಗೆ ಸಾಮಾಜಿಕ ಮತ್ತು ಧಾರ್ಮಿಕ ಕಾರಣಗಳು ಯಾವುವು?
2. ಮಹಾಕ್ರಾಂತಿಯಲ್ಲಿ ಭಾಗವಹಿಸಿದ್ದ ಪ್ರಮುಖ ನಾಯಕರು ಮತ್ತು ಪ್ರಮುಖ ಸ್ಥಳಗಳನ್ನು ತಿಳಿಸಿರಿ.
3. ದೆಹಲಿಯಲ್ಲಿ ನಡೆದ ಮಹಾಕ್ರಾಂತಿಯನ್ನು ಕುರಿತು ಬರೆಯಿರಿ.
4. ವಿಕ್ಟೋರಿಯಾ ಮಹಾರಾಣಿಯ ಮಹಾಪ್ರಕಟಣೆಯ ಮುಖ್ಯತ್ವವೇನು?
5. ಭಾರತದ ಕೈಗಾರಿಕೆಗಳಿಗೆ ಬ್ರಿಟಿಷರು ಹೇಗೆ ಹಾನಿಯುಂಟುಮಾಡಿದರು?
6. 1857ರಲ್ಲಿ ನಡೆದ ಕ್ರಾಂತಿಗೆ ತಕ್ಷಣದ ಕಾರಣವೇನು?
7. ಕ್ರಾಂತಿಯು ಭಾರತದಾದ್ಯಂತ ಏಕೆ ಹರಡಲಿಲ್ಲ?

ಈ. ಪ್ರತಿಯೊಂದು ಶೀರ್ಷಿಕೆಯಡಿಯಲ್ಲಿ ಕೊಟ್ಟಿರುವ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ.

1. 1857ರ ಮಹಾಕ್ರಾಂತಿಗೆ ರಾಜಕೀಯ ಕಾರಣಗಳು.

   ಅ) ಸಹಾಯಕ ಸೈನ್ಯ ಪದ್ಧತಿಯನ್ನು ಯಾರು ಪರಿಚಯಿಸಿದರು?

   ಆ) ಲಾರ್ಡ್ ಡಾಲ್‌ಹೌಸಿಯು ಪರಿಚಯಿಸಿದ ನೀತಿ ಯಾವುದು?

   ಇ) ಮೊಗಲ್ ಅರಸ ಎರಡನೆಯ ಬಹದ್ದೂರ್‌ಷಾನ ಮೇಲೆ ಬ್ರಿಟಿಷರು ಕೈಗೊಂಡ ಕ್ರಮಗಳೇನು?

   ಈ) ಬ್ರಿಟಿಷರ ವಿರುದ್ಧವಾಗಿ ನಾನಾಸಾಹೇಬ್ ತನ್ನ ದ್ವೇಷವನ್ನು ಅಧಿಕಗೊಳಿಸಿದುದು ಏಕೆ?

2. ಕಾನ್ಪುರದಲ್ಲಿ ಕ್ರಾಂತಿ

   ಅ) ಕಾನ್ಪುರದಲ್ಲಿ ನಡೆದ ಕ್ರಾಂತಿಕಾರರೊಡನೆ ಒಂದುಗೂಡಿದವರು ಯಾರು?

   ಆ) ಬ್ರಿಟಿಷರಿಗೆ ಯಾವ ಸ್ಥಿತಿ ಏರ್ಪಟ್ಟಿತು?

   ಇ) ನಾನಾಸಾಹೇಬನನ್ನು ಯಾರು ಸೋಲಿಸಿದರು?

   ಈ) ಕಾನ್ಪುರ ಯಾವಾಗ ಬ್ರಿಟಿಷರ ವಶಕ್ಕೆ ಬಂದಿತು?

3. ಮಧ್ಯಭಾರತದಲ್ಲಿ ಮಹಾಕ್ರಾಂತಿ

   ಅ) ಮಧ್ಯಭಾರತದ ಕ್ರಾಂತಿಯ ನಾಯಕತ್ವ ವಹಿಸಿದ್ದವರು ಯಾರು?

   ಆ) ರಾಣಿ ಲಕ್ಷ್ಮಿಬಾಯಿ ವಶಪಡಿಸಿಕೊಂಡ ನಗರ ಯಾವುದು?

   ಇ) ರಾಣಿ ಲಕ್ಷ್ಮಿಬಾಯಿಯ ಅಂತ್ಯ ಹೇಗಾಯಿತು?

   ಈ) ತಾಂತ್ಯಾಟೋಪೆಗೆ ನಡೆದ ಸಂಭವವೇನು?

ಉ. ಒಂದು ಪುಟದಲ್ಲಿ ಉತ್ತರಿಸಿ.

1. 1857ರ ಮಹಾಕ್ರಾಂತಿಗೆ ಆಡಳಿತ ಮತ್ತು ಸೈನಿಕ ಕಾರಣಗಳನ್ನು ವಿವರಿಸಿ.
2. 1857ರ ಮಹಾಕ್ರಾಂತಿಯ ಸೋಲಿಗೆ ಕಾರಣಗಳನ್ನು ವಿವರಿಸಿ.
3. 1857ರ ಮಹಾಕ್ರಾಂತಿಯ ಪರಿಣಾಮಗಳು ಯಾವುವು?

ಊ. ಪ್ರಾಯೋಗಿಕ ಚಟುವಟಿಕೆ.

ಕೊಟ್ಟಿರುವ ಭಾರತದ ಭೂಪಟದಲ್ಲಿ ಕೆಳಕಂಡ ಸ್ಥಳಗಳನ್ನು ಗುರುತಿಸಿ.

ಅ) ದೆಹಲಿ ಆ) ಮೀರತ್ ಇ) ಬರೇಲಿ ಈ) ಲಕ್ನೋ ಉ) ಕಾನ್ಪುರ

ಊ) ಝಾನ್ಸಿ ಋ) ಗ್ವಾಲಿಯರ್ ಎ) ಭಾರಕ್‌ಪುರ ಏ) ಅಲಹಾಬಾದ್ ಐ) ಆರಾ

10. 19ನೇ ಶತಮಾನದಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳುವಳಿಗಳು.

ಹತ್ತೊಂಭತ್ತನೇ ಶತಮಾನದಲ್ಲಿ ಭಾರತದಲ್ಲಿ ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಹಲವು ಸುಧಾರಣಾ ಕ್ರಮಗಳು ಕಂಡುಬಂದವು. ಭಾರತೀಯರು ಪಾಶ್ಚಾತ್ಯ ಪರಿಕಲ್ಪನೆಗಳಾದ ತರ್ಕ, ಸಮಾನತೆ, ಸ್ವಾತಂತ್ರ್ಯ ಮತ್ತು ಮಾನವೀಯತೆ ಮುಂತಾದ ವಿಚಾರಗಳಿಂದ ಹೆಚ್ಚು ಆಕರ್ಷಿಸಲ್ಪಟ್ಟರು. ಭಾರತೀಯ ಸಂಪ್ರದಾಯದಲ್ಲಿದ್ದ ಸಾಮಾಜಿಕ ಕೆಡುಕುಗಳನ್ನು ಹೋಗಲಾಡಿಸಿ ಭಾರತದ ಪ್ರಾಚೀನ ಸಂಸ್ಕೃತಿಯ ಹಿರಿಮೆಯನ್ನು ಪುನಃ ತರಲು ಇಚ್ಛಿಸಿದರು. ಅವರು ಅನೇಕ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳನ್ನು ಪ್ರಾರಂಭಿಸಿದರು. ಇದರ ಮೂಲಕ ಭಾರತದ ಸಮಾಜದಲ್ಲಿದ್ದ ಕೆಡಕುಗಳನ್ನು ನೀಗಿಸಲು ಪ್ರಯತ್ನಿಸಿದರು. ಇಂತಹ ಸಾಮಾಜಿಕ–ಧಾರ್ಮಿಕ ಸುಧಾರಣಾ ಚಳುವಳಿಗಳನ್ನು ಭಾರತೀಯ ಪುನರುಜ್ಜೀವನ ಚಳುವಳಿಗಳು ಎಂದು ಕರೆಯಲಾಯಿತು.

ಬ್ರಹ್ಮ ಸಮಾಜ – 1828

ಭಾರತೀಯ ಸುಧಾರಣಾ ಚಳುವಳಿಗಳ ಪಿತಾಮಹನೆಂಬ ಕೀರ್ತಿ ಪಡೆದ ರಾಜಾ ರಾಮ್‌ಮೋಹನ ರಾಯ್ ಬಂಗಾಳದಲ್ಲಿ ಶ್ರೀಮಂತ



ರಾಜಾ ರಾಮ್‌ಮೋಹನ ರಾಯ್

ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿದರು. ಇವರು ಅರೇಬಿಕ್, ಸಂಸ್ಕೃತ, ಪರ್ಷಿಯನ್, ಇಂಗ್ಲೀಷ್, ಫ್ರೆಂಚ್, ಲ್ಯಾಟಿನ್, ಗ್ರೀಕ್ ಮತ್ತು ಹೀಬ್ರೂ ಮುಂತಾದ ಹಲವು ಭಾಷೆಗಳಲ್ಲಿ ಪಾಂಡಿತ್ಯ ಪಡೆದಿದ್ದರು. ರಾಜಾ ರಾಮ್‌ಮೋಹನರಾಯರು ಬೆಂಗಾಳಿ, ಹಿಂದಿ, ಸಂಸ್ಕೃತ, ಪರ್ಷಿಯ ಹಾಗೂ ಇಂಗ್ಲೀಷ್‌ನಲ್ಲಿ ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. ಅವುಗಳಲ್ಲಿ "ಏಸು ಕ್ರಿಸ್ತನ ನೀತಿಬೋಧನೆಗಳು" (Precepts of Jesus Christ), "ಶಾಂತಿಗೂ ಸಂತೋಷಕ್ಕೂ ಮಾರ್ಗ" (Guide to peace and happiness) ಎಂಬ ಪುಸ್ತಕಗಳು ಮುಖ್ಯವಾದವು. ಪ್ರಪಂಚದ ಹಲವಾರು ಧರ್ಮಗಳ ಬಗ್ಗೆ ಚೆನ್ನಾಗಿ ತಿಳಿದುಕೊಂಡಿದ್ದರು. ಇಂಗ್ಲೀಷ್ ಈಸ್ಟ್ ಇಂಡಿಯಾ ಕಂಪೆನಿಯಲ್ಲಿ 1805ರಲ್ಲಿ ಸೇವೆಗೆ ಸೇರಿ 1814ರವರೆಗೆ ಸೇವೆಸಲ್ಲಿಸಿದರು. ಮೊಗಲ್ ಅರಸನಾದ ಎರಡನೇ ಅಕ್ಬರನಿಗೆ ಬ್ರಿಟಿಷ್ ಸರ್ಕಾರ ನೀಡುತ್ತಿದ್ದ ನಿವೃತ್ತಿ ವೇತನವನ್ನು ಹೆಚ್ಚಿಸಲು ಇಂಗ್ಲೆಂಡಿಗೆ ತೆರಳಿದ್ದರು. ರಾಜಾ ರಾಮ್‌ಮೋಹನ ರಾಯರು 1833ರಲ್ಲಿ ಬ್ರಿಸ್ಟಲ್ ಎಂಬ ಸ್ಥಳದಲ್ಲಿ ನಿಧನರಾದರು. ಇವರಿಗೆ ಮೊಗಲ್ ಅರಸ "ರಾಜಾ" ಎಂಬ ಬಿರುದನ್ನು ನೀಡಿದನು. ಇವರನ್ನು 'ಆಧುನಿಕ ಭಾರತದ ಧೃವತಾರೆ' (Herald of New age in India) ಎಂದು ಕರೆಯುವರು.

ಸಾಧನೆಗಳು

ರಾಜಾ ರಾಮ್‌ಮೋಹನರಾಯರು ಹಿಂದು ಸಮಾಜ ಮತ್ತು ಧರ್ಮದಲ್ಲಿ ಕಂಡುಬಂದ ಮೂಢನಂಬಿಕೆ, ಆಚಾರ–ವಿಚಾರಗಳನ್ನು ತೆಗೆದುಹಾಕಿದರು. ರಾಜಾರಾಮ್ ಮೋಹನರಾಯರು 1815ರಲ್ಲಿ ಆತ್ಮೀಯಸಭಾವನ್ನು ಸ್ಥಾಪಿಸಿದರು. ನಂತರ ಇದುವೇ 1828ರಿಂದ ಬ್ರಹ್ಮಸಮಾಜವಾಗಿ ಬೆಳವಣಿಗೆ ಹೊಂದಿತು. ದೇವರು ಒಬ್ಬನೇ ಎಂಬ ಸಿದ್ಧಾಂತದ ತಳಹದಿಯಲ್ಲಿ ಸಾರ್ವತ್ರಿಕ ಧರ್ಮದಲ್ಲಿ ನಂಬಿಕೆಹೊಂದಿದವರ ಸಭೆಯಾಗಿ ಬ್ರಹ್ಮಸಮಾಜ ಇದ್ದಿತು. ರಾಜಾ ರಾಮ್‌ಮೋಹನರಾಯರು ಮೂರ್ತಿಪೂಜೆ, ದುಬಾರಿ ವೆಚ್ಚದ ಶಾಸ್ತ್ರ ವಿಧಿ ವಿಧಾನಗಳು, ಧಾರ್ಮಿಕ ವಿಧಿವಿಧಾನಗಳು, ಜಾತಿ

ಪದ್ಧತಿ, ಅಸ್ಪೃಶ್ಯತೆ ಮತ್ತು ಸತಿ ಪದ್ಧತಿ ಮುಂತಾದವುಗಳನ್ನು ಕಟುವಾಗಿ ಖಂಡಿಸಿದರು. ಇವರ ಕಠಿಣ ಪರಿಶ್ರಮದ ಫಲವಾಗಿ 1829ರಲ್ಲಿ ಬ್ರಿಟಿಷ್ ಗವರ್ನರ್ ಲಾರ್ಡ್ ವಿಲಿಯಂ ಬೆಂಟಿಂಕ್ ಸತಿ ಪದ್ಧತಿಯನ್ನು ನಿಷೇಧಿಸಿ ಕಾನೂನನ್ನು ಜಾರಿಗೆ ತಂದನು. ಈ ಕಾನೂನಿನ ಪ್ರಕಾರ ಸತಿಸಹಗಮನ ಪದ್ಧತಿಯನ್ನು ಅನುಸರಿಸುವವರಿಗೆ ಗರಿಷ್ಠಮಿತಿಯ ದಂಡನೆಯಾಗಿ ಮರಣದಂಡನೆಯನ್ನು ನೀಡಲಾಗುವುದೆಂದು ತಿಳಿಸಿತು. ಇವರು ಬಹುಪತ್ನಿತ್ವ ಮತ್ತು ಬಾಲ್ಯವಿವಾಹ ಇವುಗಳನ್ನು ವಿರೋಧಿಸಿ ಹೋರಾಡಿದರು. ವಿಧವೆಯರ ಪುನರ್ವಿವಾಹ, ಸ್ತ್ರೀಶಿಕ್ಷಣ, ಸ್ತ್ರೀಯರ ಅಭಿವೃದ್ಧಿ, ಅಂತರ್ಜಾತಿ ವಿವಾಹ ಮುಂತಾದವುಗಳನ್ನು ಪ್ರೋತ್ಸಾಹಿಸಿದರು. ಇವರು ಇಂಗ್ಲಿಷ್ ಶಿಕ್ಷಣ ಮತ್ತು ಸಂಸ್ಕೃತಿಯನ್ನು ಭಾರತೀಯರು ಪಡೆಯುವಂತೆ ಒತ್ತಾಯಿಸಿದರು. ಪಾಶ್ಚಿಮಾತ್ಯ ಶಿಕ್ಷಣ, ವಿಜ್ಞಾನ ಮತ್ತು ಅಭಿಪ್ರಾಯಗಳು, ಮೂಢನಂಬಿಕೆಗಳನ್ನೂ, ಅಂಧಾಚಾರ ವಿಚಾರಗಳನ್ನು ನೀಗಿಸಲು ದಾರಿಮಾಡಿಕೊಡುತ್ತಿವೆ ಎಂದು ದೃಢವಾಗಿ ನಂಬಿದರು.

ರಾಜಾ ರಾಮ್‌ಮೋಹನರಾಯರ ಮರಣದ ನಂತರ ಕೇಶವಚಂದ್ರಸೇನ್ ಮತ್ತು ದೇವೇಂದ್ರನಾಥ ಠಾಗೂರ್ ಬ್ರಹ್ಮಸಮಾಜವನ್ನು ಮುಂದುವರಿಸಿದರು. ಕೇಶವಚಂದ್ರಸೇನರ ಪ್ರಯತ್ನದಿಂದಾಗಿ 1872ರಲ್ಲಿ ಬಹುಪತ್ನಿತ್ವ ಮತ್ತು ಬಾಲ್ಯವಿವಾಹಗಳನ್ನು ತಡೆಗಟ್ಟಲು ಕಾಯಿದೆಯೊಂದನ್ನು ಜಾರಿಗೆ ತರಲಾಯಿತು. ಈ ಕಾಯಿದೆಯು ಅಂತರ್ಜಾತಿ ವಿವಾಹ ಮತ್ತು ವಿಧವೆಯರ ಪುನರ್ವಿವಾಹಗಳನ್ನು ಪ್ರೋತ್ಸಾಹಿಸಿತು.

ಪ್ರಾರ್ಥನಾ ಸಮಾಜ–1867

ಪ್ರಾರ್ಥನಾ ಸಮಾಜವು ಡಾಕ್ಟರ್ ಆತ್ಮಾರಾಂ ಪಾಂಡುರಂಗ ಎಂಬುವವರಿಂದ 1867ರಲ್ಲಿ ಮುಂಬೈಯಲ್ಲಿ ಸ್ಥಾಪಿಸಲ್ಪಟ್ಟಿತು. ಪ್ರಾರ್ಥನಾ ಸಮಾಜವು ಅನೇಕ ಸಾಮಾಜಿಕ ಸುಧಾರಣೆಗಳು ಉಂಟಾಗಲು ಕಾರಣವಾಗಿತ್ತು. ಈ ಸಮಾಜವು ಸಾಮಾಜಿಕ ಸುಧಾರಣೆಗಳಾದ ಸಮಪಂಕ್ತಿಭೋಜನ, ಅಂತರ್ಜಾತಿ ವಿವಾಹ, ವಿಧವೆಯರ ಮರುಮದುವೆ, ಮಹಿಳೆಯರ ಕಲ್ಯಾಣದ ಅಭಿವೃದ್ಧಿಪಡಿಸುವಿಕೆ, ಅಸ್ಪೃಶ್ಯರ ಉದ್ಧಾರ, ಪರ್ದಾ ಪದ್ಧತಿಯ ನಿಷೇಧ ಮತ್ತು ಬಾಲ್ಯ ವಿವಾಹದ ನಿಷೇಧ ಮುಂತಾದ ಕ್ರಮಗಳಲ್ಲಿ ತೊಡಗಿಸಿಕೊಂಡಿತು. ಈ ಸಮಾಜವು ಹಿಂದುಳಿದ ಜನರಿಗೆ ರಾತ್ರಿಶಾಲೆಗಳು, ಅನಾಥಾಲಯಗಳು ಮತ್ತು ರಕ್ಷಣಾಧಾಮಗಳನ್ನು ಸ್ಥಾಪಿಸಿತು. ಮಹಾದೇವ ಗೋವಿಂದ ರಾನಡೆಯವರು ಈ ಸಮಾಜದ ಶ್ರೇಯಸ್ಸಿಗೆ ತಮ್ಮ ಜೀವನಪರ್ಯಂತ ಅರ್ಪಣಾಭಾವದಿಂದ ದುಡಿದಿದ್ದಾರೆ.

ಆರ್ಯ ಸಮಾಜ 1875

ಸ್ವಾಮಿ ದಯಾನಂದ ಸರಸ್ವತಿಯವರು ಆರ್ಯಸಮಾಜವನ್ನು 1875ರಲ್ಲಿ ಸ್ಥಾಪಿಸಿದರು.



ಸ್ವಾಮಿ ದಯಾನಂದ ಸರಸ್ವತಿ

ಇವರು ಗುಜರಾತ್ ರಾಜ್ಯದ ಕಾಥೇವಾಡ ಸಂಸ್ಥಾನದಲ್ಲಿ ಮೂರ್ವಿ ಎಂಬಲ್ಲಿ ಸಂಪ್ರದಾಯಸ್ತ ಶ್ರೀಮಂತ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ಸ್ವಾಮಿ ದಯಾನಂದ ಸರಸ್ವತಿಯವರ ನಿಜವಾದ ಹೆಸರು 'ಮೂಲಶಂಕರ' ಎಂಬುದಾಗಿದೆ. ಚಿಕ್ಕ ವಯಸ್ಸಿನಲ್ಲಿಯೇ ಸನ್ಯಾಸ ಸ್ವೀಕರಿಸಿ ಅನೇಕ ಸ್ಥಳಗಳಲ್ಲಿ ಸುತ್ತಾಡಿ ಸಂಸ್ಕೃತವನ್ನು ಕಲಿತು ಅದರಲ್ಲಿ ಉತ್ತಮ ಪಾಂಡಿತ್ಯ ಪಡೆದರು. ಇವರು ಸ್ವಾಮಿ ವ್ರಜಾನಂದರ ಶಿಷ್ಯರಾಗಿದ್ದಾರೆ.

ಸ್ವಾಮಿ ದಯಾನಂದ ಸರಸ್ವತಿಯವಯರು ವೇದಗಳಲ್ಲಿ ತಿಳಿಸಿರುವ ಎಲ್ಲವೂ ಸತ್ಯವಾದುದು ಎಂದು ತಿಳಿದುಕೊಂಡರು. ಆದ್ದರಿಂದಲೇ ವೇದಗಳನ್ನು ಪ್ರಚಾರ ಮಾಡುವುದರಲ್ಲಿಯೇ ತಮ್ಮ

ಜೀವನವನ್ನೇ ಅರ್ಪಿಸಿಕೊಂಡರು. ಅವರು ಹಿಂದೂ ಸಮಾಜವನ್ನು ಸುಧಾರಿಸಲು ಬಯಸಿದರು. 'ವೇದಗಳಿಗೆ ಹಿಂದಿರುಗಿ'(Go back to Vedas) ಎಂಬುದೇ ಅವರ ಘೋಷಣೆ ಆಗಿತ್ತು. ಆದ್ದರಿಂದಲೇ ಸ್ವಾಮಿ ದಯಾನಂದ ಸರಸ್ವತಿಯವಯರ ವಾಣಿಯು ವೇದಗಳು ಎಲ್ಲಾ ಸತ್ಯಗಳನ್ನು ಒಳಗೊಂಡಿವೆ ಎಂಬುದಾಗಿದೆ. ವೇದಕಾಲ ಸಮಾಜದಲ್ಲಿರುವ ಉತ್ತಮ ಕಾರ್ಯಗಳನ್ನು ಎತ್ತಿಹಿಡಿದು ಜನರಲ್ಲಿ ಆತ್ಮಗೌರವ ಮತ್ತು ಆತ್ಮನಂಬಿಕೆಗಳನ್ನೂ ಬೆಳೆಸಿದರು.

ಆರ್ಯ ಸಮಾಜವು ಪ್ರಾಣಿಬಲಿ, ವಿಗ್ರಹಾರಾಧನೆ, ಮೂಢನಂಬಿಕೆಗಳು, ಸ್ವರ್ಗ, ನರಕ ಮತ್ತು ಹಣೆಬರಹ ಮುಂತಾದವುಗಳನ್ನು ವಿರೋಧಿಸಿತು. ಮತಾಂತರಗೊಂಡ ಹಿಂದೂಗಳನ್ನು ಪುನಃ ಹಿಂದೂ ಧರ್ಮಕ್ಕೆ ಸೇರಿಸಿಕೊಳ್ಳಲು 'ಶುದ್ಧಿ ಚಳುವಳಿ' (Suddhi Movement) ಯನ್ನು ಪ್ರಾರಂಭಿಸಿದರು.

ಆರ್ಯ ಸಮಾಜವು ಬಾಲ್ಯ ವಿವಾಹ, ಬಹುಪತ್ನಿತ್ವ, ಪರ್ದಾ ಪದ್ಧತಿ, ಜಾತಿ ಪದ್ಧತಿ ಮತ್ತು ಸತಿ ಪದ್ಧತಿ ಮುಂತಾದವುಗಳನ್ನು ವಿರೋಧಿಸಿತು. ಸ್ತ್ರೀಶಿಕ್ಷಣ, ಅಂತರ್ಜಾತಿ ವಿವಾಹ, ಸಮಪಂಕ್ತಿ ಭೋಜನ ಪದ್ಧತಿ, ಮಹಿಳೆಯರ ಮತ್ತು ಅಸ್ಪೃಶ್ಯತೆ ಅಭಿವೃದ್ಧಿ ಮುಂತಾದವುಗಳಿಗಾಗಿ ದುಡಿಯಿತು. ಇದು ವೇದ ಮತ್ತು ಇಂಗ್ಲಿಷ್ ಮಾಧ್ಯಮದ ಶಿಕ್ಷಣವನ್ನು ಕಲಿಸುವುದಕ್ಕಾಗಿ ದಯಾನಂದ ಆಂಗ್ಲೋ ವೇದ ಪಾಠಶಾಲೆ(DAV-Dayananda Anglo Vedic Schools)ಗಳು ಮತ್ತು ಕಾಲೇಜುಗಳನ್ನು ಸ್ಥಾಪಿಸಿತು.

ದಯಾನಂದರ ಮುಖ್ಯ ಶಿಷ್ಯರುಗಳಾದ ಲಾಲಾಲಜಪರಾಯ್, ಲಾಲಾ ಹನ್ಸರಾಜ್ ಮತ್ತು ಪಂಡಿತ ಗುರುದತ್ತ ಇವರು ಆರ್ಯ ಸಮಾಜದ ತತ್ವಗಳನ್ನು ಪ್ರಚಾರ ಮಾಡಿದರು. ಬಾಲಗಂಗಾಧರ ತಿಲಕರು ಮತ್ತು ಗೋಪಾಲಕೃಷ್ಣ ಗೋಖಲೆ ಮೊದಲಾದವರ ಮೇಲೆ ಆರ್ಯ ಸಮಾಜದ ತತ್ವಗಳು ಮತ್ತು ಸಿದ್ಧಾಂತಗಳು ಬಹಳ ಪ್ರಭಾವ ಬೀರಿದ್ದವು. 'ಸ್ವದೇಶಿ' ಮತ್ತು 'ಭಾರತ ಭಾರತೀಯರಿಗೇ' ಎಂಬ ಘೋಷಣೆಗಳನ್ನು ಮೊಟ್ಟಮೊದಲು ಘೋಷಿಸಿದವರು ಸ್ವಾಮಿ ದಯಾನಂದ ಸರಸ್ವತಿಯವರೇ ಆಗಿದ್ದಾರೆ. ಇವರನ್ನು ಹಿಂದೂ ಧರ್ಮದ 'ಮಾರ್ಟಿನ್ ಲೂಥರ್' ಎಂದು ಕರೆಯುತ್ತಾರೆ.

ಬ್ರಹ್ಮ(ದಿವ್ಯ) ಜ್ಞಾನ ಸಭೆ–1875 (Theosophical Society)

ರಷ್ಯಾದ ಮಹಿಳೆ ಮೇಡಂ ಬ್ಲಾವಟ್ಸ್ಕಿ ಮತ್ತು ಅಮೆರಿಕದ ಕರ್ನಲ್ ಹೆನ್ರಿ ಆಲ್ಕಾಟ್ ಎಂಬುವವರಿಂದ 1875ರಲ್ಲಿ ಅಮೆರಿಕದ ನ್ಯೂಯಾರ್ಕ್ ನಗರದಲ್ಲಿ ದೇವರ ಭಕ್ತಿ ಮತ್ತು ಸತ್ಯದ ಜ್ಞಾನವನ್ನು ಪಡೆಯಲು ಬ್ರಹ್ಮಜ್ಞಾನ ಸಭೆಯನ್ನು ಸ್ಥಾಪಿಸಲಾಯಿತು. 'ಥಿಯೋಸ್' ಎಂದರೆ ದೇವರು ಮತ್ತು 'ಸೋಫಿಯಾ' ಎಂದರೆ ಜ್ಞಾನ ಎಂದರ್ಥ.

ಜನರಲ್ಲಿ ಸಹೋದರತ್ವ ಭಾವನೆ ಬೆಳೆಸುವುದು, ಪುರಾತನ ಧರ್ಮ, ತತ್ವಶಾಸ್ತ್ರ ಮತ್ತು ವಿಜ್ಞಾನ ಹಾಗೂ ಪ್ರಕೃತಿಯ ನಿಯಮಗಳನ್ನು ತಿಳಿದು ಮಾನವನಲ್ಲಿ ದೈವೀಕ ಶಕ್ತಿಯನ್ನು ವೃದ್ಧಿಸುವುದು ಇವೆಲ್ಲವೂ ಬ್ರಹ್ಮಜ್ಞಾನ ಸಭೆಯ ಮುಖ್ಯ ಗುರಿಗಳಾಗಿವೆ.



ಅನ್ನಿಬೆಸೆಂಟ್


ಶ್ರೀಮತಿ ಅನ್ನಿಬೆಸೆಂಟರು 1893ರಲ್ಲಿ ಬ್ರಹ್ಮಜ್ಞಾನ ಸಭೆಯ ಅಧ್ಯಕ್ಷರಾಗಿ ಅಧಿಕಾರವಹಿಸಿಕೊಂಡು ಹಿಂದೂ ಧರ್ಮದ ಪುನರುತ್ಥಾನಕ್ಕಾಗಿ ಮತ್ತು ಭಾರತದ ಶಿಕ್ಷಣಕ್ಕಾಗಿಯೂ ತಮ್ಮನ್ನು ಅರ್ಪಿಸಿಕೊಂಡರು. ಶಿಕ್ಷಣ ಕ್ಷೇತ್ರದಲ್ಲಿ ಇವರು ಮಾಡಿದ ಕಾರ್ಯಗಳು ಅತಿ ಮುಖ್ಯವಾದವುಗಳಾಗಿವೆ. ಇವರಿಂದ ಬನಾರಸ್(ಕಾಶಿ)ನಲ್ಲಿ ಸ್ಥಾಪಿಸಲ್ಪಟ್ಟ ಸೆಂಟ್ರಲ್ ಹಿಂದೂ ಕಾಲೇಜು ನಂತರ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯವಾಗಿ ಅಭಿವೃದ್ಧಿ ಹೊಂದಿತು.

ಬ್ರಹ್ಮಜ್ಞಾನ ಸಭೆಯ ಗುರಿಗಳನ್ನು ಪ್ರಚಾರ ಮಾಡಲು ಅನ್ನಿಬೆಸೆಂಟರು 'ನ್ಯೂ ಇಂಡಿಯಾ'(New India) ಎಂಬ ಪತ್ರಿಕೆಯನ್ನು ಪ್ರಾರಂಭಿಸಿದರು. ಬ್ರಹ್ಮಜ್ಞಾನ ಸಭೆಯ ಪ್ರಧಾನ ಕಛೇರಿಯನ್ನು ಚೆನ್ನೈಯಲ್ಲಿ ಅಡ್ಯೆಯಾರ್ ಎಂಬ ಸ್ಥಳದಲ್ಲಿ ಸ್ಥಾಪಿಸಿದರು. ಚೆನ್ನೈನ ಅಡ್ಯೆಯಾರ್ ನಲ್ಲಿ ಒಂದು ಗ್ರಂಥಾಲಯವನ್ನು ಸ್ಥಾಪಿಸಿ ಪ್ರಾಚೀನ ಸಂಸ್ಕೃತ ಗ್ರಂಥಗಳನ್ನು ಸಂರಕ್ಷಿಸಿಕೊಂಡು ಬಂದರು. ಹೀಗಾಗಿ ಈ ಬ್ರಹ್ಮಜ್ಞಾನ ಸಭೆಯು ಭಾರತೀಯರ ಪುನರುದ್ಧಾರಕ್ಕಾಗಿ ಒಂದು ಪ್ರಮುಖ ಸಂಸ್ಥೆಯಾಗಿ ಕಾರ್ಯನಿರ್ವಹಿಸಿತು.

ರಾಮಕೃಷ್ಣ ಮಠ–1897

ರಾಮಕೃಷ್ಣ ಮಠವು ರಾಮಕೃಷ್ಣ ಪರಮಹಂಸರ ನಿಧನದ ನಂತರ ಅವರ ನಾಮಾಂಕಿತವನ್ನು ಮೂಲಾಧಾರವಾಗಿಟ್ಟುಕೊಂಡು ಪ್ರಾರಂಭಿಸಲ್ಪಟ್ಟಿತು. ಇದು ಒಂದು ಸ್ವಯಂ ಸಂಘಟನಾ ಸಂಸ್ಥೆ. ರಾಮಕೃಷ್ಣ ಮಠವನ್ನು ಸ್ವಾಮಿ ವಿವೇಕಾನಂದರು 1897 ಮೇ 1, ರಂದು ಸ್ಥಾಪಿಸಿದರು. ರಾಮಕೃಷ್ಣ ಪರಮಹಂಸರ ಮುಖ್ಯ ಶಿಷ್ಯರಲ್ಲಿ ಸ್ವಾಮಿ ವಿವೇಕಾನಂದರೂ ಒಬ್ಬರಾಗಿದ್ದರು. ಇವರು ರಾಮಕೃಷ್ಣ ಪರಮಹಂಸರ ಬೋಧನೆಗಳನ್ನು ಪ್ರಪಂಚದಾದ್ಯಂತ ಪ್ರಚಾರ ಮಾಡಿದರು. ಸ್ವಾಮಿ ವಿವೇಕಾನಂದರು ರಾಮಕೃಷ್ಣ ಮಠವನ್ನು 1897ರಲ್ಲಿ ಕೋಲ್ಕತ್ತಾದ ಸಮೀಪವಿರುವ ಬೇಲೂರಿನಲ್ಲಿ ಸ್ಥಾಪಿಸಿದರು. ರಾಮಕೃಷ್ಣಮಠದ ಶಾಖೆಗಳು ಭಾರತದಲ್ಲಲ್ಲದೆ ಪ್ರಪಂಚದ ಹಲವು ಭಾಗಗಳಲ್ಲಿಯೂ ಇವೆ. ಆರೋಗ್ಯ, ಪ್ರಕೃತಿ ವಿಕೋಪದ ದುರಂತಗಳಿಗೆ ನಿವಾರಣೆ, ಗ್ರಾಮಗಳ ಅಭಿವೃದ್ಧಿ, ಗಿರಿಜನರ ಕಲ್ಯಾಣ ಮತ್ತು ಪ್ರಾಥಮಿಕ ಶಿಕ್ಷಣ ಮತ್ತು ಉನ್ನತ ಶಿಕ್ಷಣ, ಹಾಗೂ ಸಂಸ್ಕೃತಿಯ ಅಭಿವೃದ್ಧಿಗಾಗಿ ಅಪಾರ ಸೇವೆ ಸಲ್ಲಿಸುತ್ತಿವೆ.

ರಾಮಕೃಷ್ಣ ಪರಮಹಂಸರು ಬಂಗಾಳದಲ್ಲಿ ಸಂಪ್ರದಾಯ ಬ್ರಾಹ್ಮಣ ಕುಟುಂಬವೊಂದರಲ್ಲಿ 1836ರಲ್ಲಿ ಜನಿಸಿದರು. ಇವರು ಶಾರದಾಮಣಿದೇವಿ ಎಂಬುವವರನ್ನು ವಿವಾಹವಾದರು. ಪರಮಹಂಸರು ಕೊಲ್ಕತ್ತಾದಲ್ಲಿ ದಕ್ಷಿಣೇಶ್ವರದ ಕಾಳಿ ದೇವಾಲಯದಲ್ಲಿ ಅರ್ಚಕರಾಗಿದ್ದರು. ಸರ್ವಧರ್ಮಗಳ ಮೂಲಭೂತ ಸತ್ಯಗಳಲ್ಲೂ ಅವರಿಗೆ ಅಪಾರ ನಂಬಿಕೆಯಿತ್ತು. ದೇವರು ಹಲವು ರೂಪಗಳಲ್ಲಿದ್ದರೂ ಒಬ್ಬನೇ ಎಂಬ ತೀಕ್ಷ್ಣವಾದ ತತ್ವವನ್ನು ಹೊಂದಿದ್ದರು. ಅವರ ಪ್ರಕಾರ ಮಾನವನಿಗೆ ಮಾಡುವ ಸೇವೆ ದೇವರಿಗೆ ಮಾಡುವ ಸೇವೆಯೆಂದು ಭಾವಿಸಲಾಗುವುದೆಂದು ಪ್ರಬಲವಾಗಿ ನಂಬಿದ್ದರು. ಪರಮಹಂಸರು 1886ರಲ್ಲಿ ನಿಧನರಾದರು.



ರಾಮಕೃಷ್ಣ ಪರಮಹಂಸರು

ರಾಮಕೃಷ್ಣ ಪರಮಹಂಸರ ನಂತರ ಅವರ ಪ್ರಧಾನ ಶಿಷ್ಯರಾದ ವಿವೇಕಾನಂದರೆಂದು ಕರೆಯಲ್ಪಡುವ ನರೇಂದ್ರನಾಥದತ್ತ ಪರಮಹಂಸರ ತತ್ವಗಳನ್ನು ವಿಶ್ವದಾದ್ಯಂತ ಪ್ರಚಾರ ಮಾಡಿದರು. 1893ರಲ್ಲಿ ಅಮೆರಿಕದ ಚಿಕಾಗೋ ನಗರದಲ್ಲಿ ನಡೆದ ವಿಶ್ವಸರ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಿ 'ನನ್ನ ಅಮೆರಿಕದ ಸಹೋದರ ಸಹೋದರಿಯರೇ' ಎಂದು ತಮ್ಮ ಉಪನ್ಯಾಸದಲ್ಲಿ ಆಡಿದ ಮೊದಲ ನುಡಿಗಳ ಮೂಲಕ ಭಾರತದ ಸಂಸ್ಕೃತಿಯನ್ನೂ, ಹಿಂದೂ ಧರ್ಮದ ಔನ್ನತ್ಯವನ್ನು ಇಡೀ ವಿಶ್ವವು ತಿಳಿಯುವಂತೆ ಮಾಡಿದರು.

ರಾಮಕೃಷ್ಣ ಮಠದ ಗುರಿ, ಉದ್ದೇಶಗಳು ಮತ್ತು ಆದರ್ಶ ತತ್ವಗಳೆಲ್ಲವೂ ಸಂಪೂರ್ಣವಾಗಿ ಆಧ್ಯಾತ್ಮಿಕ ಮತ್ತು ಮಾನವೀಯತೆಯ

ತಳಹದಿಯಲ್ಲಿದ್ದವು. ಈ ಸಂಸ್ಥೆಯು ಯಾವುದೇ ರಾಜಕೀಯ ಉದ್ದೇಶವನ್ನು ಹೊಂದಿರಲಿಲ್ಲ. ವಿವೇಕಾನಂದರು 'ತ್ಯಾಗ' ಮತ್ತು 'ಸೇವೆ' ಇವೆರಡೂ ಆಧುನಿಕ ಭಾರತದ ತತ್ವಗಳಾಗಿರಬೇಕು ಎಂದು ಹೇಳಿ ಅದರ ಮೂಲಾಧಾರದಿಂದಲೇ ಶ್ರಮಿಸಿದರು. 'ಜೀವವೇ ಶಿವ' ಎಂಬ ನಂಬಿಕೆಯ ಆಧಾರದಿಂದ ಬಡಜನರಿಗೆ ಮಾಡುವ ಸೇವೆಯೇ ದೇವರಿಗೆ ಮಾಡುವ ಸೇವೆ ಎಂದು ಹೇಳಿ ಸೇವೆಸಲ್ಲಿಸಿದರು. ರಾಮಕೃಷ್ಣ ಆಶ್ರಮವು ಜನಸೇವೆಗಾಗಿ ಹಲವಾರು ಕ್ರಮಗಳನ್ನು ಕೈಗೊಂಡಿತು.



ಸ್ವಾಮಿ ವಿವೇಕಾನಂದ

* ಶಿಕ್ಷಣ ಕಾರ್ಯ, ಆರೋಗ್ಯ, ಸಾಂಸ್ಕೃತಿಕ ಚಟುವಟಿಕೆಗಳು, ಗ್ರಾಮಾಭಿವೃದ್ಧಿ, ಗಿರಿಜನರ ಅಭಿವೃದ್ಧಿ ಮತ್ತು ಯುವಕರ ಸಂಘಟನೆ ಮುಂತಾದವುಗಳಿಗಾಗಿ ಶ್ರಮಿಸುತ್ತಿದೆ.

* ಈ ಆಶ್ರಮವು ಆಸ್ಪತ್ರೆಗಳು, ಚಾರಿಟಬಲ್ ಟ್ರಸ್ಟ್ ಆಸ್ಪತ್ರೆಗಳು, ಹೆರಿಗೆ ಆಸ್ಪತ್ರೆಗಳು, ಅನಾಥಾಶ್ರಮಗಳು, ವೃದ್ಧಾಶ್ರಮಗಳು, ದಾದಿಯರ ತರಬೇತಿ ಶಾಲೆಗಳು, ಕ್ಷಯರೋಗದ ಆಸ್ಪತ್ರೆಗಳು ಮತ್ತು ಸಂಚಾರಿ ಆಸ್ಪತ್ರೆಗಳನ್ನು ನಡೆಸಿಕೊಂಡು ಜನರಿಗೆ ಸೇವೆ ಸಲ್ಲಿಸುತ್ತಿದೆ.

* ಭಾರತದಾದ್ಯಂತ ಪ್ರಸಿದ್ಧಿ ಪಡೆದ ಶಿಕ್ಷಣ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು, ಕಾಲೇಜುಗಳು, ವೃತ್ತಿಶಿಕ್ಷಣ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಿ ಶಿಕ್ಷಣದ ಅಭಿವೃದ್ಧಿಗಾಗಿ ಮಹತ್ತರ ಸೇವೆ ಸಲ್ಲಿಸುತ್ತಿದೆ. ಪ್ರಕೃತಿ ವಿಕೋಪಗಳಾದ ಕ್ಷಾಮ, ಪ್ರವಾಹ, ಭೂಕಂಪ, ಚಂಡಮಾರುತ ಮತ್ತು ಭಯಂಕರವಾದ ಸಾಂಕ್ರಾಮಿಕ ರೋಗಗಳಿಂದ ಜನರನ್ನು ಕಾಪಾಡಲು ಅನೇಕ ಪರಿಹಾರ ಶಿಬಿರಗಳನ್ನು ನಡೆಸಿ ಅತ್ಯುತ್ತಮ ಸೇವೆ ಮಾಡುತ್ತಿದೆ.

* ಪಶ್ಚಿಮ ಬಂಗಾಳದಲ್ಲಿರುವ ಸುಂದರವನ ಭಾಗದಲ್ಲಿ ಸೌರಶಕ್ತಿಯನ್ನು ಬಳಸಿ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಯೋಜನೆ (Photo Voltaic(PV) Lighting System) ಯನ್ನು ಸ್ಥಾಪಿಸುವುದರಲ್ಲಿ ರಾಮಕೃಷ್ಣ ಆಶ್ರಮ ಪ್ರಮುಖ ಪಾತ್ರ ವಹಿಸಿದೆ. ಅದರ ಪರಿಣಾಮವಾಗಿ ಪಾರಂಪರ್ಯವಾಗಿ ಸೀಮೆಎಣ್ಣೆ ಮತ್ತು ಡೀಸೆಲ್‌ಗಳನ್ನು ಬಳಸುತ್ತಿದ್ದ ಜನರಿಗೆ ವಿದ್ಯುತ್ತನ್ನು ಬಳಸುವ ಸ್ಥಿತಿಯನ್ನುಂಟುಮಾಡಿತು. ವಿಶ್ವಸಂಸ್ಥೆಯ ಶಿಕ್ಷಣ, ವಿಜ್ಞಾನ ಮತ್ತು ಸಾಸ್ಕೃತಿಕ ಸಂಘಟನೆ (UNESCO) ಮಹಾನಿರ್ದೇಶಕರಾಗಿದ್ದ ಫೆಡ್ರಿಕೊ ಮೇಯರ್ (Federico Mayor) 1993ರಲ್ಲಿ ಭಾಷಣ ಮಾಡುವಾಗ 1897ರಲ್ಲಿ ಪ್ರಾರಂಭಿಸಲ್ಪಟ್ಟ ರಾಮಕೃಷ್ಣಾಶ್ರಮದ ರಚನೆ ಮತ್ತು ಕಾರ್ಯಶೀಲತೆಗಳು 1945ರಲ್ಲಿ ಸ್ಥಾಪಿಸಲ್ಪಟ 'ಯುನೆಸ್ಕೊ'ದ ರಚನೆಯಂತೆಯೇ ಇರುವುದರಿಂದ ಅತ್ಯಂತ ಆಕರ್ಷಿಸಲ್ಪಟ್ಟಿದೆ ಎಂದು ತಿಳಿಸಿದರು.

ಸಮರಸ ಶುದ್ಧ ಸನ್ಮಾರ್ಗ ಸಂಘ

ಸಮರಸ ಶುದ್ಧ ಸನ್ಮಾರ್ಗ ಸಂಘವು ವಳ್ಳಲಾರ್ ಎಂದು ಎಲ್ಲರಿಂದಲೂ ಪ್ರೀತಿಯಿಂದ ಕರೆಯಲ್ಪಡುವ ರಾಮಲಿಂಗ ಅಡಿಗಳಾರ್‌ರವರಿಂದ ಸ್ಥಾಪಿಸಲ್ಪಟ್ಟಿತು. ಇವರು 1823ರಲ್ಲಿ ಚಿದಂಬರಂನ ಹತ್ತಿರವಿರುವ ಚಿನ್ನಮರುದೂರಿನಲ್ಲಿ ಹುಟ್ಟಿದರು. ಇವರು 19ನೇ ಶತಮಾನದಲ್ಲಿ ತಮಿಳುನಾಡಿನಲ್ಲಿ ಕಂಡುಬಂದ ಸಾಮಾಜಿಕ–ಧಾರ್ಮಿಕ ಸುಧಾರಣಾ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದರು. ಇವರ

ಆಧ್ಯಾತ್ಮಿಕದ ಮೇಲಿನ ಭಕ್ತಿಯಿಂದಾಗಿ ಅವರ ಹಾಡುಗಳಲ್ಲಿ ಸಾಮಾಜಿಕ ಸುಧಾರಣೆಗಳು ಮತ್ತು ಧಾರ್ಮಿಕ ಭಾವನೆಗಳೆರಡೂ ಸಮ್ಮಿಶ್ರಣಗೊಂಡಿದ್ದವು. ಆಧ್ಯಾತ್ಮಿಕತೆಯು ಜಾಗೃತಿಯು ಮೂಲಕ ಸಮಾಜದಲ್ಲಾಗುವ ಕೆಡಕುಗಳನ್ನು ಹೋಗಲಾಡಿಸಲು ಸಾಧ್ಯ ಎಂಬುದಕ್ಕೆ ಪ್ರಯತ್ನಗಳನ್ನು ಕೈಗೊಂಡರು.

ರಾಮಲಿಂಗ ಅಡಿಗಳ್, ತಮಿಳು ಜನರಲ್ಲಿ ಧಾರ್ಮಿಕ ಒಗಟ್ಟು ಮತ್ತು ಏಕತೆಯನ್ನುಂಟುಮಾಡಿದರು. ದೇವರ ಮಾರ್ಗದರ್ಶನದಿಂದ ಮಾತ್ರ ಜಾತ್ಯಾತೀತ ಸಮಾಜವನ್ನು ನಿರ್ಮಾಣಮಾಡಬಹುದು ಎಂದುಒತ್ತಿಹೇಳಿದರಲ್ಲದೆ **"ಆ ದೇವರು ಜ್ಯೋತಿರೂಪದಲ್ಲಿರುವನು"** ಎಂದೂ, **"ಕೃಪೆ ತೋರುವ ಜ್ಯೋತಿ"** ಯಾಗಿರುವರೆಂದೂ ತಿಳಿಸಿದರು. ರಾಮಲಿಂಗ ಅಡಿಗಳ್ ಹುಟ್ಟಿನಿಂದ ಉಂಟಾಗುವ ಮೇಲು ಕೀಳೆಂಬ ಭಾವನೆಗಳನ್ನು ವಿರೋಧಿಸಿದರು. ಜಾತಿ ಹಾಗೂ ಸಾಮಾಜಿಕ ಭೇದ ಭಾವಗಳು ಅರ್ಥವಿಲ್ಲದವು ಎಂದು ತಿಳಿಸಿದರಲ್ಲದೆ, ಪ್ರೀತಿ, ಸಹೋದರತ್ವವನ್ನು ಬೆಳೆಸಬೇಕೆಂದು ಶ್ರಮಿಸಿದರು.



ರಾಮಲಿಂಗ ಅಡಿಗಳ್

ಹಸಿವು ಮತ್ತು ಬಡತನವೇ ಸಮಾಜದ ಎಲ್ಲಾ ಕೆಡುಕುಗಳಿಗೆ ಕಾರಣವೆಂದು ವಳ್ಳಲಾರ್ ನಂಬಿದ್ದರು. ಬಡವರಿಗೆ ಆಹಾರ ಒದಗಿಸುವುದೇ ಉತ್ತಮ ಪೂಜೆ ಎಂದು ದೃಢವಾಗಿ ನಂಬಿದ್ದರು. ಆದ್ದರಿಂದಲೇ ಬಡವರ ಹಸಿವನ್ನು ನೀಗಿಸುವುದಕ್ಕಾಗಿಯೇ **'ಸತ್ಯ ಧರ್ಮಶಾಲೆ'** ಯೊಂದನ್ನು ವಡಲೂರಿನಲ್ಲಿ ಸ್ಥಾಪಿಸಿದರು.

ಸತ್ಯ ಧರ್ಮಶಾಲೆಯ ಪ್ರಾರಂಭದ ದಿನದಂದು ಒಲೆಗೆ ಬೆಂಕಿಹಚ್ಚಿ, ಈ ಬೆಂಕಿಯು ಸದಾಕಾಲ ಉರಿದುಕೊಂಡಿರಲಿ ಹಾಗಾದಾಗ ಮಾತ್ರ ಬಡವರಿಗೆ ಯಾವಾಗಲೂ ಆಹಾರ ನೀಡಲು ಸಾಧ್ಯ ಎಂದು ದೃಢವಾಗಿ ಹೇಳಿದರು. ಅವರ ಮೇಲ್ಕಂಡ ಪ್ರತಿಜ್ಞೆಗೆ ತಕ್ಕಂತೆ ವರ್ಷಪೂರ್ತಿ ಜಾತಿ–ಮತ ಬೇಧವಿಲ್ಲದೆ ಎಲ್ಲರಿಗೂ ಇಂದಿಗೂ ಸಹ ಆಹಾರ ಉಣಬಡಿಸುತ್ತಾ ಬರುತ್ತಿದೆ.

ವಳ್ಳಲಾರ್ ಪ್ರೀತಿ ಮಾರ್ಗದಲ್ಲಿ ಆಧ್ಯಾತ್ಮಿಕವನ್ನು ಪಡೆಯಬಹುದು ಎಂಬ ದೃಢ ನಿರ್ಧಾರ ಹೊಂದಿದ್ದರು. ಆದ್ದರಿಂದಲೇ ಮಾನವನಲ್ಲಿ ಹಾಗೂ ಸಸ್ಯ, ಕ್ರಿಮಿ, ಕೀಟಗಳು ಮತ್ತು ಪ್ರಾಣಿಗಳು, ಪಕ್ಷಿಗಳು ಮುಂತಾದ ಸಕಲ ಜೀವಿಗಳಲ್ಲಿಯೂ ಪ್ರೀತಿ ತೋರಿಸಿದರು. ಇದನ್ನೇ **'ಜೀವ' ಕಾರುಣ್ಯಂ'**(ಜೀವಿಗಳಲ್ಲಿ ಪ್ರೀತಿ ತೋರಿಸುವುದು) ಎಂದು ಕರೆಯುತ್ತೇವೆ. "ಬಾಡಿಹೋದ ಪೈರನ್ನು ನೋಡಿದಾಗಲೆಲ್ಲಾ ನಾನು ಬಾಡಿಹೋದೆನು" ಎಂದು ಹೇಳಿದ ಅಡಿಗಳಾರ್ ಅವರು ಜೀವಿಗಳಲ್ಲಿಯೂ ಹೇಗೆ ಪ್ರೀತಿಯಿಂದಿದ್ದರು ಎಂದು ತಿಳಿಯುತ್ತೇವೆ. ಮೂಢನಂಬಿಕೆ, ಆಚಾರ–ವಿಚಾರಗಳು ಮತ್ತು ಧಾರ್ಮಿಕ ಆಚರಣೆಗಳನ್ನು ತೀವ್ರವಾಗಿ ವಿರೋಧಿಸಿದರು. ಸಸ್ಯಾಹಾರಕ್ಕೆ ಪ್ರಾಮುಖ್ಯತೆಯನ್ನು ನೀಡಿದರು.

'ಮಾನವ ಜನಾಂಗಕ್ಕೆ ಮಾಡುವ ಸೇವೆಯೇ ಮೋಕ್ಷ ಪಡೆಯಲು ದಾರಿ' ಎಂಬುದು ವಳ್ಳಲಾರರ ಬೋಧನೆಗಳಲ್ಲಿ ಅತಿ ಮುಖ್ಯವಾದುದಾಗಿದೆ. ದೇವರು ಕರುಣೆ ಮತ್ತು ಜ್ಞಾನದ ರೂಪದಲ್ಲಿ ಕಾಣುತ್ತಾನೆ. ಆದ್ದರಿಂದಲೇ ದೇವರನ್ನು ಕಾಣುವ ಮಾರ್ಗ ಜೀವಿಗಳಲ್ಲಿ ತೋರುವ ಕರುಣೆ ಹಾಗೂ ದಯೆಯೂ ಆಗುತ್ತವೆಂದು ತಿಳಿಸಿದರು.

ಧ್ಯಾನ ಮಾಡುವುದೇ ಉತ್ತಮ ಪೂಜೆ ಎಂದು ಭಾವಿಸಿದ ವಳ್ಳಲಾರ್ 1870ರಲ್ಲಿ ಸತ್ಯಜ್ಞಾನ ಸಭೆಯನ್ನು ಸ್ಥಾಪಿಸಿದರು. ಇಲ್ಲಿ ಧಾರ್ಮಿಕ ಸಭೆಗಳು ಜಾತಿ–ಮತ ಬೇಧವಿಲ್ಲದೆ ನಡೆಯುವುದನ್ನು ದೃಢಪಡಿಸಿದರು. ಇವರ ಭಕ್ತಿಹಾಡುಗಳನ್ನು ಸಂಗ್ರಹಿಸಿ, ಅವುಗಳನ್ನು **'ತಿರುವರುಟ್‌ಪಾ'** ಎಂದು ಕರೆಯಲಾಯಿತು.

ಅಲಿಘರ್ ಚಳುವಳಿ

ಅಲಿಘರ್ ಚಳುವಳಿಯು, **ಸರ್ ಸೈಯದ್ ಅಹಮದ್ ಖಾನ್** ಎಂಬ ಬ್ರಿಟಿಷ್ ಸರ್ಕಾರದ ನ್ಯಾಯಾಲಯದಲ್ಲಿ ಸೇವೆ ಸಲ್ಲಿಸಿದ ಅಧಿಕಾರಿಯಿಂದ ಸ್ಥಾಪಿಸಲ್ಪಟ್ಟಿತು. ಇದು ಆಧುನಿಕ ಶಿಕ್ಷಣ ಮತ್ತು ಸಾಮಾಜಿಕ ಸುಧಾರಣೆಗಳನ್ನೂ ಮುಸ್ಲಿಮರಲ್ಲಿ ಹರಡಲು ಸ್ಥಾಪಿಸಲ್ಪಟ್ಟ ಮೊದಲ ಮತ್ತು ಅತಿ ಮುಖ್ಯವಾದ ಚಳುವಳಿಯಾಗಿದೆ.

ಸರ್ ಸೈಯದ್ ಅಹಮದ್ ಖಾನ್ 1864ರಲ್ಲಿ ಘಾಝಿಪುರ್‌ನಲ್ಲಿ ಶಾಲೆಯೊಂದನ್ನು ಆರಂಭಿಸಿದರು. ನಂತರ ಅದು ವೈಜ್ಞಾನಿಕ ಸಂಸ್ಥೆ(Scientific Society) ಎಂದು ಕರೆಯಲ್ಪಟ್ಟಿತು. ಆ ಸಂಸ್ಥೆಯು ಅನೇಕ ವಿಜ್ಞಾನ ಪುಸ್ತಕಗಳನ್ನು ಉರ್ದು ಭಾಷೆಗೆ ಅನುವಾದಿಸಿ ಪ್ರಕಟಿಸಿತು. ಇವರ ಮಹತ್ಸಾಧನೆಯೆಂದರೆ 1875ರಲ್ಲಿ ಅಲಿಘಡದಲ್ಲಿ ಮೊಹಮ್ಮದನ್ ಆಂಗ್ಲೋ–ಓರಿಯಂಟಲ್(MAO) ಕಾಲೇಜನ್ನು ಸ್ಥಾಪಿಸಿದುದಾಗಿದೆ. ಈ ಕಾಲೇಜು ದಿನಗಳೆದಂತೆ ಭಾರತದ ಮುಸಲ್ಮಾನರ ಅತಿ ಮುಖ್ಯವಾದ ಶಿಕ್ಷಣ ಸಂಸ್ಥೆಯಾಯಿತು.

ಈ ಕಾಲೇಜು ಮುಂದೆ ಅಲಿಘಡ ಮುಸ್ಲಿಂ ವಿಶ್ವವಿದ್ಯಾಲಯವಾಗಿ ಬೆಳೆಯಿತು. ಸರ್ ಸೈಯದ್ ಅಹಮದ್ ಖಾನ್ ಪ್ರಾರಂಭಿಸಿದ ಸುಧಾರಣಾ ಚಳುವಳಿಯು **ಅಲಿಘರ್ ಚಳುವಳಿ** ಎಂದು ಕರೆಯಲ್ಪಟ್ಟಿತು. ತನ್ನ ಬರವಣಿಗೆಗಳ ಪ್ರಭಾವದಿಂದಾಗಿ ಮುಸ್ಲಿಂ ಸಮಾಜದಲ್ಲಿ ಸುಧಾರಣೆಗಳನ್ನು ತಂದರು. ಮಹಿಳೆಯರು ಪರ್ದಾ(ಘೋಷಾ) ಧರಿಸುವುದನ್ನು ನಿಷೇಧಿಸಲೂ ಹಾಗೂ ಸ್ತ್ರೀ ಶಿಕ್ಷಣವು ಅಭಿವೃದ್ಧಿ ಹೊಂದಲೂ ಶ್ರಮಿಸಿದರು. ಮುಸ್ಲೀಮರಲ್ಲಿ ತನ್ನ ಸುಧಾರಣಾ ನೀತಿಗಳನ್ನು ತನ್ನ **ತಾಹಝಿಲ್–ಉದ್–ಅಪ್‌ಲಕ್** ಎಂಬ ದಿನಪತ್ರಿಕೆಯ ಮೂಲಕ ಪ್ರಚಾರ ಮಾಡಿದರು. ಹಿಂದೂಗಳು ಮತ್ತು ಮುಸ್ಲೀಮರು ಭಾರತ ಎಂಬ ಸುಂದರ ಪಕ್ಷಿಯ ಎರಡು ಕಣ್ಣುಗಳು ಎಂದು ಹೇಳಿದರು. ಮುಸ್ಲಿಂ ಸಮಾಜದ ಅಭಿವೃದ್ಧಿಗಾಗಿ ಶ್ರಮಿಸಿದ ನಿಸ್ವಾರ್ಥ ಸೇವೆಯ ನಾಯಕ ಸರ್ ಸೈಯದ್ ಅಹಮದ್ ಖಾನ್ ಆಗಿದ್ದಾರೆ.


ಇನ್ನಿತರ ಸುಧಾರಕರು
ಜ್ಯೋತಿಭಾಫುಲೆ

ಭಾರತದಲ್ಲಿ 19ನೇ ಶತಮಾನದಲ್ಲಿ ಕಂಡುಬಂದ ಉತ್ತಮ ಸಮಾಜ ಸುಧಾರಕರಲ್ಲಿ ಜ್ಯೋತಿಭಾಫುಲೆ ಒಬ್ಬರಾಗಿದ್ದಾರೆ. ಜಾತಿ ಕಟ್ಟುಪಾಡುಗಳಿಗೆ ವಿರೋಧವಾಗಿ ಹೋರಾಡಲು ಒಂದು ಚಳುವಳಿಯನ್ನು ಸ್ಥಾಪಿಸಿದರು. ಬ್ರಾಹ್ಮಣರ ಮೇಲ್ಮೆಯನ್ನು ಕಟುವಾಗಿ ವಿರೋಧಿಸಿದರು. ರೈತರು ಮತ್ತು ಕೆಳವರ್ಗದವರ ಹಕ್ಕುಗಳಿಗೆ ಹೋರಾಡಿದರು. ಅನಾಥ ಮಕ್ಕಳಿಗಾಗಿ ಅನಾಥಾಲಯಗಳನ್ನು ಸ್ಥಾಪಿಸಿದ ಮೊದಲ ಹಿಂದೂ ಇವರೇ ಎಂದು ನಿಶ್ಚಯವಾಗಿ ಹೇಳಬಹುದು.

1873ರಲ್ಲಿ **'ಸತ್ಯಶೋಧಕ ಸಮಾಜ'** (ಸತ್ಯ ಹುಡುಕುವವರ ಸಂಘ) ಎಂಬ ಸಂಘಟನೆಯನ್ನು ಸ್ಥಾಪಿಸಿದರು. ಬ್ರಾಹ್ಮಣರ ಹಿಡಿತದಿಂದ ಕೆಳವರ್ಗದವರನ್ನು ಮುಕ್ತಗೊಳಿಸುವುದೇ ಇದರ ಉದ್ದೇಶವಾಗಿತ್ತು. ಅಸ್ಪೃಶ್ಯರ ಸ್ಥಿತಿಯನ್ನು ಅಭಿವೃದ್ಧಿಗೊಳಿಸಲು ತಮ್ಮ ಮನೆಯ ಸಮೀಪದಲ್ಲಿಯೇ ಕೊಳವೊಂದನ್ನು ಪ್ರಾರಂಭಿಸಿ ಅಲ್ಲಿಂದ ಅಸ್ಪೃಶ್ಯರು ನೀರನ್ನು ತೆಗೆದುಕೊಂಡು ಬಳಸುವಂತೆ ಮಾಡಿದರು. ಎಲ್ಲರೊಡನೆಯೂ ಒಂದಾಗಿ ಕುಳಿತು, ಜಾತಿಬೇಧ ಮರೆತು ಭೋಜನ ಮಾಡುವುದನ್ನು(ಸಮಪಂಕ್ತಿ ಭೋಜನ) ಇಚ್ಛಿಸಿದರು.

ಶ್ರೀ ನಾರಾಯಣಗುರು

ಕೇರಳಕ್ಕೆ ಸೇರಿದ ಪ್ರಸಿದ್ಧ ಸಮಾಜಸುಧಾರಕರು ಶ್ರೀ ನಾರಾಯಣಗುರು.



ಶ್ರೀ ನಾರಾಯಣಗುರು

ತಾವು ಸೇರಿದ ಈಳವ ಜನರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಅಭಿವೃದ್ಧಿಗೆ ಮತ್ತು ಇತರ

ಕೇರಳದ ಹಿಂದುಳಿದ ಜನರ ಅಭಿವೃದ್ಧಿಗಾಗಿಯೂ 1903ರಲ್ಲಿ ಶ್ರೀ ನಾರಾಯಣಗುರು 'ಧರ್ಮ ಪರಿಪಾಲನ ಯೋಗಂ' ಎಂಬ ಚಳುವಳಿಯನ್ನು ಸ್ಥಾಪಿಸಿದರು. ಇವರು ಪ್ರಾಣಿಬಲಿ, ಜಾತಿಭೇದ, ಅಸ್ಪೃಶ್ಯತೆ ಮುಂತಾದ ಸಾಮಾಜಿಕ ಹಿಂಸಾಚಾರಗಳನ್ನು ಖಂಡಿಸಿದರು.

ಶ್ರೀ ಪಾದಸಾಧುಮಹಾರಾಜ

ಶ್ರೀ ಪಾದಸಾಧುಮಹಾರಾಜರು ಮೂಂಗಿರ್ ಜಿಲ್ಲೆಯಲ್ಲಿರುವ ಶ್ರೀಮಂತ ಕುಟುಂಬದಲ್ಲಿ ಜನಿಸಿದರು. ಇವರು ವೈಷ್ಣವರಾಗಿ ಮತಾಂತರಗೊಂಡರು. ಇವರಿಗೂ ಮುನ್ನ ಇವರ ಕುಟುಂಬದವರೆಲ್ಲರೂ ಶೈವ ಮತಕ್ಕೆ ಸೇರಿ ಶಿವನನ್ನು ಆರಾಧಿಸಿದರು. ಇವರು ಚೈತನ್ಯರನ್ನು ಗೌರವಿಸುವ ವಿಧವಾಗಿ ಪ್ರೇಮ ಮಂದಿರ ಎಂಬ ದೇವಾಲಯವನ್ನು ಕಟ್ಟಿದರು. ಮಾನವನ ಸೇವೆ ಮಾಡುವುದಕ್ಕಾಗಿಯೇ ಹಲವು ಸೇವಾಶ್ರಮಗಳನ್ನು ಸ್ಥಾಪಿಸಿದರು.

ಡಾಕ್ಟರ್ ಬಿ.ಆರ್.ಅಂಬೇಡ್ಕರ್

ಡಾಕ್ಟರ್. ಬಿ.ಆರ್. ಅಂಬೇಡ್ಕರ್ ರವರು ಪರಿಶಿಷ್ಟ ಜನರು ಮತ್ತು ದಲಿತರ ರಕ್ಷಕರು ಎಂಬುದಾಗಿ ಭಾವಿಸಲ್ಪಟ್ಟಿದ್ದಾರೆ. ಇವರು ಸ್ವತಂತ್ರ ಭಾರತದ ಸಂವಿಧಾನ ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿದ್ದರು.



ಡಾಕ್ಟರ್. ಬಿ.ಆರ್.ಅಂಬೇಡ್ಕರ್

ಭಾರತದ ಮೊದಲ ಕಾನೂನು ಮಂತ್ರಿಯಾಗಿ ಸೇವೆ ಸಲ್ಲಿಸಿದರು. ಇವರ ಅತ್ಯುತ್ತಮ ಸೇವೆಯನ್ನು ಶ್ಲಾಘಿಸಿ ಇವರಿಗೆ 1990ರಲ್ಲಿ ಭಾರತದ ಅತ್ಯುನ್ನತ ಪ್ರಶಸ್ತಿಯಾದ 'ಭಾರತರತ್ನ' ಬಿರುದನ್ನು ನೀಡಲಾಯಿತು.

ಡಾಕ್ಟರ್.ಬಿ.ಆರ್.ಅಂಬೇಡ್ಕರ್‌ರವರು 1891ರ ಏಪ್ರಿಲ್ 14ರಂದು ಮಹೌ (Mhow) (ಈಗಿನ ಮಧ್ಯಪ್ರದೇಶ) ಎಂಬಲ್ಲಿ ಜನಿಸಿದರು. 1924ರ ಜೂಲೈಯಲ್ಲಿ ಜಾತಿಯಿಂದ ಬಹಿಷ್ಕರಿಸಲ್ಪಟ್ಟವರ ಹಿತಕರ ಸಂಘ **(Outcastes Welfare Association)** ಬಹಿಷ್ಕೃತ್ ಹಿತಕಾರಿಣಿ ಸಭಾ **(Bahiskrit Hitkaraini Sabha)**ಎಂಬುದನ್ನು ಸ್ಥಾಪಿಸಿದರು. ಅಸ್ಪೃಶ್ಯರನ್ನು ಇತರರ ಸಮನಾಗಿ ಸಮಾಜದಲ್ಲಿ ಮತ್ತು ರಾಜಕೀಯದಲ್ಲಿ ಮೇಲಕ್ಕೆ ತರುವುದೇ ಈ ಸಂಘದ ಗುರಿಯಾಗಿದೆ. ಅಸ್ಪೃಶ್ಯರಿಗೆ ಮಹದ್ ಎಂಬಲ್ಲಿ ಸಾರ್ವಜನಿಕ ಕೊಳದಲ್ಲಿ ಕುಡಿಯುವ ನೀರನ್ನು ತೆಗೆದುಕೊಳ್ಳುವ ಹಕ್ಕನ್ನು ಪಡೆಯುವುದಕ್ಕಾಗಿ 1927ರಲ್ಲಿ ಮುಂಬೈಯಲ್ಲಿ ಮಹದ್ ಎಂಬ ಬೃಹತ್ ಯಾತ್ರೆಯನ್ನು ಸಂಘಟಿಸಿ ಮುಂದಾಳತ್ವ ವಹಿಸಿದ್ದರು.

ತಂದೆ ಪೆರಿಯಾರ್

ದಕ್ಷಿಣ ಭಾರತದ ಮಹಾನ್ ಸುಧಾರಕರಲ್ಲಿ ಪೆರಿಯಾರ್ ಈ.ವೆ.ರಾಮಸ್ವಾಮಿ ನಾಯ್ಕರೂ ಒಬ್ಬರಾಗಿದ್ದಾರೆ. ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ಜನರ ಅಭಿವೃದ್ಧಿಗಾಗಿಯೇ ತಮ್ಮ ಜೀವನವನ್ನೇ ಅರ್ಪಿಸಿಕೊಂಡರು. ಪೆರಿಯಾರ್ ಪ್ರಕಟಿಸಿದ ಸಾಮಾಜಿಕ ಸುಧಾರಣೆಗಳು 20ನೇ ಶತಮಾನದಲ್ಲಿ ಸಾಮಾಜಿಕ ಸುಧಾರಣೆಗಳಿಗೆ ತಳಹದಿಯಾದವು.

ಸಾಮಾಜಿಕ–ಧಾರ್ಮಿಕ ಚಳುವಳಿಗಳ ಪರಿಣಾಮಗಳು

ಸಾಮಾಜಿಕ–ಧಾರ್ಮಿಕ ಚಳುವಳಿಗಳು ಸಮಾಜ ಮತ್ತು ಧರ್ಮಗಳಲ್ಲಿ ಪ್ರಮುಖ ಬದಲಾವಣೆಗಳನ್ನುಂಟುಮಾಡಿದವು.

ಸಮಾಜದಲ್ಲಿದ್ದ ಸಾಮಾಜಿಕ ಪಿಡುಗುಗಳಾದ ಸತಿಪದ್ಧತಿ, ಬಾಲ್ಯವಿವಾಹ, ಅಸ್ಪೃಶ್ಯತೆ ಮುಂತಾದವುಗಳನ್ನು ಹೋಗಲಾಡಿಸಲು ಕಾರಣವಾಗಿದ್ದವು.

ಸ್ತ್ರೀಶಿಕ್ಷಣ, ವಿಧವೆಯರ ಪುನರ್ವಿವಾಹ, ಅಂತರ್ಜಾತಿ ವಿವಾಹ ಮತ್ತು ಸಮಪಂಕ್ತಿ ಭೋಜನ ಮುಂತಾದವುಗಳು ಅನೇಕ ಜನರಿಂದ

ಸ್ವೀಕರಿಸಲ್ಪಟ್ಟವು. ಅವು ಭಾರತೀಯರಲ್ಲಿ ಸಾಮಾಜಿಕ ಜಾಗೃತಿ ಮತ್ತು ರಾಷ್ಟ್ರೀಯತೆಯ ಭಾವನೆಯು ಅಧಿಕವಾಗಲು ದಾರಿಯಾಯಿತು.

ಜನರು ತಮ್ಮ ಸಂಸ್ಕೃತಿ ಮತ್ತು ಅದರ ಹಿರಿಮೆಯನ್ನು ಅರಿತುಕೊಳ್ಳುವಂತೆ ಮಾಡಿತು. ಎಲ್ಲಕ್ಕಿಂತಲೂ ಹೆಚ್ಚಾಗಿ ಈ ಚಳುವಳಿಗಳು ಸರ್ಕಾರದ ಮೂಲಕವಾಗಿ ಹಾಗೂ ಪ್ರಾಮಾಣಿಕ ಪ್ರಯತ್ನದಿಂದಾಗಿ ಹಲವಾರು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಂತೆ ಮಾಡಿದವು.

ಅಭ್ಯಾಸ

ಅ. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1. ಸುಧಾರಣಾ ಚಳುವಳಿಗಳ ಪಿತಾಮಹನೆಂದು ಕೀರ್ತಿ ಪಡೆದವರು

   ಅ) ರಾಜಾ ರಾಮಮೋಹನ ರಾಯ್ ಆ) ಸ್ವಾಮಿ ದಯಾನಂದ ಸರಸ್ವತಿ

   ಇ) ಕೇಶವ ಚಂದ್ರ ಸೇನ್ ಈ) ದೇವೇಂದ್ರನಾಥ್ ಠಾಗೂರ್

2. 1829ರಲ್ಲಿ ಲಾರ್ಡ್ ವಿಲಿಯಂ ಬೆಂಟಿಂಕ್ ಸತಿ ಸಹಗಮನ ಪದ್ಧತಿಯನ್ನು ನಿಷೇಧಿಸಲು ಸಹಾಯಕರಾಗಿದ್ದವರು

   ಅ) ಶ್ರೀಮತಿ ಅನಿಬೆಸೆಂಟ್ ಆ) ಸ್ವಾಮಿ ವಿವೇಕಾನಂದ

   ಇ) ರಾಜಾ ರಾಮ್‌ಮೋಹನ ರಾಯ್ ಈ) ಲಾಲಾ ಹನ್ಸರಾಜ್

3. ಸ್ವಾಮಿ ದಯಾನಂದ ಸರಸ್ವತಿಯಿಂದ ಸ್ಥಾಪಿಸಲ್ಪಟ್ಟಿದ್ದು

   ಅ) ಬ್ರಹ್ಮ ಸಮಾಜ ಆ) ಆರ್ಯ ಸಮಾಜ

   ಇ) ಪ್ರಾರ್ಥನಾ ಸಮಾಜ ಈ) ಅಲಿಘರ್ ಚಳುವಳಿ

4. ರಾಮಕೃಷ್ಣ ಮಠದ ಪ್ರಧಾನ ಕೇಂದ್ರವಿರುವ ಸ್ಥಳ

   ಅ) ಕಾಂಚೀಪುರಂ ಆ) ಬೇಲೂರು ಇ) ಮೇಲೂರು ಈ) ಹಂಪಿ

5. ವಳ್ಳಲಾರರ ಭಕ್ತಿಹಾಡುಗಳನ್ನೊಳಗೊಂಡ ಭಾಗ

   ಅ) ತೇವಾರಂ ಆ) ತಿರುವಾಚಕಂ ಇ)ಎಟ್ಟುತ್ತೊಗೈ ಈ) ತಿರುವರುಟ್‌ಪಾ

6. ಸರ್ ಸೈಯದ್ ಅಹಮದ್ ಖಾನ್ ಸ್ಥಾಪಿಸಿದುದು

   ಅ) ಅಲಿಘರ್ ಚಳುವಳಿ ಆ) ಬ್ರಹ್ಮ ಜ್ಞಾನ ಸಭೆ

   ಇ) ಸಮರಸ ಶುದ್ಧ ಸನ್ಮಾರ್ಗ ಈ) ಮುಸ್ಲೀಂ ಲೀಗ್

7. ಸರ್ ಸೈಯದ್ ಅಹಮದ್ ಖಾನ್ ಶಾಲೆಯನ್ನು ಆರಂಭಿಸಿದ ಸ್ಥಳ

   ಅ) ಅಲಿಪುರ ಆ) ಆಲಪ್ಪುಳ ಇ) ಫಾರ್ಖೀಪುರ ಈ) ಕಾನ್ಪುರ

8. ಕೇರಳಕ್ಕೆ ಸೇರಿದ ಪ್ರಸಿದ್ಧ ಸಮಾಜ ಸುಧಾರಕರು

   ಅ) ಶ್ರೀನಾರಾಯಣಗುರು ಆ) ಗುರುಪ್ರಸಾದ್

   ಇ)ಗುರುನಾನಕ್ ಈ) ಗುರುಸಾಯಿ

ಆ. ಹೊಂದಿಸಿರಿ

1.	ಆಧುನಿಕ ಭಾರತದ ಧೃವತಾರೆ	ಸ್ವಾಮಿ ದಯಾನಂದ ಸರಸ್ವತಿ
2.	ಹಿಂದೂ ಧರ್ಮದ ಮಾರ್ಟಿನ್ ಲೂಥರ್	ರಾಮಕೃಷ್ಣ ಆಶ್ರಮ
3.	ನ್ಯೂ ಇಂಡಿಯಾ	ರಾಮಲಿಂಗ ಅಡಿಗಳ್
4.	ಸೌರಶಕ್ತಿ ಮೂಲಕ ವಿದ್ಯುಚ್ಛಕ್ತಿ ಉತ್ಪಾದಿಸುವ ಯೋಜನೆ	ಅನಿಬೆಸೆಂಟ್
5.	ವಳ್ಳಲಾರ್	ಡಾಕ್ಟರ್ ಧರ್ಮಾಂಬಾಳ್
		ರಾಜಾ ರಾರ್ಮಮೋಹನ ರಾಯ್

ಇ. ಸಂಕ್ಷಿಪ್ತವಾಗಿ ಉತ್ತರಿಸಿ

1. ಪ್ರಾರ್ಥನಾ ಸಮಾಜ–ಟಿಪ್ಪಣಿ ಬರೆಯಿರಿ.
2. ಆರ್ಯ ಸಮಾಜದ ಕಾರ್ಯಗಳೇನು?
3. ಬ್ರಹ್ಮಜ್ಞಾನ ಸಭೆಯ ಮುಖ್ಯ ಗುರಿಗಳಾವುವು?
4. ವಳ್ಳಲಾರರ ಬೋಧನೆಗಳು ಯಾವುವು?
5. ಕೆಳವರ್ಗದವರ(ಜಾತಿಯಿಂದ ಬಹಿಷ್ಕರಿಸಲ್ಪಟ್ಟ) ಹಿತಕರ ಸಂಘದ ಗುರಿ ಏನು?
6. 19ನೇ ಶತಮಾನದ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳುವಳಿಗಳ ಪರಿಣಾಮಗಳೇನು?

ಈ. ಕೆಳಕಂಡ ಶೀರ್ಷಿಕೆಗಳಲ್ಲಿರುವ ಪ್ರಶ್ನೆಗಳಿಗೆ ಉತ್ತರಿಸಿ

1. ಬ್ರಹ್ಮ ಸಮಾಜ
   - ಅ) ಬ್ರಹ್ಮ ಸಮಾಜವನ್ನು ಸ್ಥಾಪಿಸಿದವರಾರು?
   - ಆ) ರಾಜಾ ರಾಮ್‌ಮೋಹನರಾಯರು ಕಲಿತಿದ್ದ ಭಾಷೆಗಳು ಯಾವುವು?
   - ಇ) ರಾಜಾ ರಾಮ್‌ಮೋಹನ ರಾಯರು ಬರೆದ ಪುಸ್ತಕಗಳು ಯಾವುವು?
   - ಈ) ಬ್ರಹ್ಮ ಸಮಾಜದ ನಂಬಿಕೆ ಏನು?
2. ಆರ್ಯ ಸಮಾಜ
   - ಅ) ಸ್ವಾಮಿ ದಯಾನಂದ ಸರಸ್ವತಿಯ ನಿಜವಾದ ಹೆಸರೇನು?
   - ಆ) ಸ್ವಾಮಿ ದಯಾನಂದ ಸರಸ್ವತಿಯ ಗುರು ಯಾರು?
   - ಇ) ಸ್ವಾಮಿ ದಯಾನಂದ ಸರಸ್ವತಿಯ ಘೋಷಣೆ ಏನು?
   - ಈ) ಆರ್ಯ ಸಮಾಜವು ಪ್ರೋತ್ಸಾಹಿಸಿದವುಗಳು ಯಾವುವು?
3. ಬ್ರಹ್ಮ(ದಿವ್ಯ) ಜ್ಞಾನ ಸಭೆ
   - ಅ) ಬ್ರಹ್ಮ ಜ್ಞಾನ ಸಭೆಯನ್ನು ಸ್ಥಾಪಿಸಿದವರು ಯಾರು?
   - ಆ) ಬ್ರಹ್ಮ ಜ್ಞಾನ ಸಭೆಯು ಏಕೆ ಸ್ಥಾಪಿಸಲ್ಪಟ್ಟಿತು?
   - ಇ) 1893ರಲ್ಲಿ ಬ್ರಹ್ಮಜ್ಞಾನ ಸಭೆಯ ಅಧ್ಯಕ್ಷರಾಗಿದ್ದವರು ಯಾರು?
   - ಈ) ಬ್ರಹ್ಮ ಜ್ಞಾನ ಸಭೆಯ ಪ್ರಧಾನ ಕಛೇರಿ ಎಲ್ಲಿದೆ?

4. ರಾಮಕೃಷ್ಣ ಮಠ

ಅ) ರಾಮಕೃಷ್ಣ ಪರಮಹಂಸ ಎಂಬುವವರು ಯಾರು?

ಆ) ರಾಮಕೃಷ್ಣ ಮಠವನ್ನು ಸ್ಥಾಪಿಸಿದವರಾರು?

ಇ) ವಿಶ್ವ ಸರ್ವಧರ್ಮ ಸಮ್ಮೇಳನವು ಎಲ್ಲಿ, ಯಾವಾಗ ನಡೆಯಿತು?

ಈ) ವಿಶ್ವ ಸರ್ವಧರ್ಮ ಸಮ್ಮೇಳನದಲ್ಲಿ ಹಿಂದೂ ಧರ್ಮದ ಪ್ರತಿನಿಧಿಯಾಗಿ ಭಾಗವಹಿಸಿದವರಾರು?

5. ಅಲಿಘರ್ ಚಳುವಳಿ

ಅ) ಮುಸ್ಲಿಮರ ಮೊದಲ ಧಾರ್ಮಿಕ ಚಳುವಳಿಯ ಹೆಸರೇನು?

ಆ) ಸರ್ ಸೈಯದ್ ಅಹಮದ್ ಖಾನ್ ದೃಢವಾಗಿ ಯಾವುದನ್ನು ನಂಬಿದ್ದರು?

ಇ) ಸರ್ ಸೈಯದ್ ಅಹಮದ್ ಖಾನ್‌ನ ಮಹತ್ಸಾಧನೆ ಏನು?

ಈ) ಸರ್ ಸೈಯದ್ ಅಹಮದ್ ಖಾನ್ ಹೊರಡಿಸಿದ ದಿನಪತ್ರಿಕೆಯ ಹೆಸರೇನು?

6. ಡಾಕ್ಟರ್ ಬಿ.ಆರ್.ಅಂಬೇಡ್ಕರ್

ಅ) ದಲಿತರ ಮತ್ತು ಕೆಳವರ್ಗದವರ ಉದ್ಧಾರಕರು ಯಾರು?

ಆ) ಭಾರತದ ಮೊದಲ ಕಾನೂನು ಮಂತ್ರಿ ಯಾರು?

ಇ) ಭಾರತ ಸರ್ಕಾರವು ಇವರಿಗೆ ಯಾವ ಬಿರುದಿನಿಂದ ಶ್ಲಾಘಿಸಿತು?

ಈ) ಮುಂಬೈಯಲ್ಲಿ ಬೃಹತ್ ಯಾತ್ರೆಯ ಮುಂದಾಳತ್ವ ವಹಿಸಿದ್ದವರಾರು?

ಉ. ಒಂದು ಪುಟದಲ್ಲಿ ಉತ್ತರಿಸಿ.

1. ಬ್ರಹ್ಮ ಸಮಾಜದ ಬಗ್ಗೆ ವಿವರವಾಗಿ ಬರೆಯಿರಿ.
2. ರಾಮಕೃಷ್ಣ ಮಠದ ಕಾರ್ಯಗಳನ್ನು ವಿವರಿಸಿ.
3. ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳುವಳಿಗಳಲ್ಲಿ ರಾಮಲಿಂಗ ಅಡಿಗಳ್ ಮುಖ್ಯಪಾತ್ರವಹಿಸಿದರು– ವಿವರಿಸಿ.

11. ಭಾರತ ಸ್ವಾತಂತ್ರ್ಯ ಚಳುವಳಿ– ಮೊದಲ ಹಂತ ಗಾಂಧಿ ಪೂರ್ವಯುಗ (ಕ್ರಿ. ಶ. 1885–ಕ್ರಿ.ಶ.1919)

1857ರಲ್ಲಿ ನಡೆದ ಮಹಾಕ್ರಾಂತಿಯಿಂದ ಭಾರತದ ರಾಷ್ಟ್ರೀಯ ಚಳುವಳಿಯು ಉದಯವಾಯಿತು. ಈ ಚಳುವಳಿಯು ಮಹಾ ಹೋರಾಟಗಳಾಗಿ ನಡೆದು ಅಂತ್ಯದಲ್ಲಿ 1947ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಪಡೆದು ತಂದಿತು ಭಾರತದ ರಾಷ್ಟ್ರೀಯ ಚಳುವಳಿಯ ಉದಯಕ್ಕೆ ಹಲವು ಅಂಶಗಳು ಮೂಲಭೂತವಾಗಿ ಕಂಡಬಂದವು.

I. ಭಾರತೀಯ ರಾಷ್ಟ್ರೀಯ ಚಳುವಳಿಯ ಉಗಮಕ್ಕೆ ಕಾರಣಗಳು

1. ಬ್ರಿಟಿಷರ ಏಕಾಧಿಪತ್ಯ

ಭಾರತೀಯ ರಾಷ್ಟ್ರೀಯ ಚಳುವಳಿಯು ಉಗಮವಾಗಲು ಬ್ರಿಟಿಷರ ಏಕಾಧಿಪತ್ಯವು ಒಂದು ಮುಖ್ಯವಾದ ಕಾರಣವಾಗಿದೆ. ಬ್ರಿಟಿಷರು ಸಂಪೂರ್ಣ ಭಾರತವನ್ನು ತಮ್ಮ ಆಳ್ವಿಕೆಯಲ್ಲಿ ತರುವುದರ ಮೂಲಕ ಐಕ್ಯತೆಯನ್ನು ಸ್ಥಿರ ಪಡಿಸಿದರು. ಇದರಿಂದ ಭಾರತ ಒಂದು ದೇಶ ಎಂಬ ಅಂಶವನ್ನು ಜನರಲ್ಲಿ ಉಂಟುಮಾಡಿದರು. ಇದು ರಾಷ್ಟ್ರೀಯ ಚಳುವಳಿ ಪ್ರಾರಂಭವಾಗಲು ದಾರಿಮಾಡಿಕೊಟ್ಟಿತು.

2. ಯೂರೋಪ್ ದೇಶಗಳೊಡನೆ ಸಂಪರ್ಕ

ಬ್ರಿಟಿಷರ ಏಕಾಧಿಪತ್ಯದ ಪರಿಣಾಮವಾಗಿ ಭಾರತವು ಪಾಶ್ಚಾತ್ಯ ದೇಶಗಳೊಡನೆ ಸಂಪರ್ಕ ಹೊಂದಿತ್ತು. ಬ್ರಿಟಿಷರು ಭಾರತೀಯರಿಗೆ ನೀಡಿದ ಇಂಗ್ಲೀಷ್ ವಿದ್ಯಾಭ್ಯಾಸದ ಪರಿಣಾಮವಾಗಿ ಭಾರತೀಯರು ಪಾಶ್ಚಿಮಾತ್ಯ ರಾಜಕೀಯ ವಿಚಾರಧಾರೆ, ವಿಜ್ಞಾನ ಸಂಸ್ಕೃತಿಗಳಿಂದ ಪ್ರಭಾವಿತರಾದರು. ಅಲ್ಲದೆ ಜರ್ಮನಿ, ಇಟಲಿ ಏಕೀಕರಣದಿಂದ ಪ್ರಭಾವಿತರಾಗಿ ಅಖಂಡ ಭಾರತವನ್ನು ರೂಪಿಸಬೇಕೆಂಬ ಭಾವನೆಗಳನ್ನು ಹೊಂದಿದ್ದರು. ಇದರಿಂದ ಬ್ರಿಟಿಷರ ದಾಸ್ಯದಿಂದ ಭಾರತವನ್ನು ಬಿಡುಗಡೆಗೊಳಿಸಬೇಕೆಂಬ ಅಂಶದಿಂದ ಹೋರಾಟ ನಡೆಸಲು ಬಯಸಿದರು.

3. ನವೀನ ಸಾರಿಗೆ ಮತ್ತು ಸಂಪರ್ಕಗಳು

ನವೀನ ಸಾರಿಗೆ ಮತ್ತು ಸಂಪರ್ಕಗಳ ಬೆಳವಣಿಗೆಯಿಂದ ಜನರ ಅಭಿಪ್ರಾಯಗಳು ದೇಶದ ಮೂಲೆ ಮೂಲೆಗೂ ಹರಡತೊಡಗಿದವು. ರಾಷ್ಟ್ರೀಯ ನಾಯಕರ ಮತ್ತು ಜನರ ನಡುವಿನ ಸಂಪರ್ಕದಿಂದ ದೇಶದಾದ್ಯಂತ ಹರಡಿ ರಾಷ್ಟ್ರೀಯ ಚಳುವಳಿ ಉಂಟಾಗಲು ಮಾರ್ಗ ಮಾಡಿಕೊಟ್ಟರು.

4. ಭಾರತೀಯ ರಾಷ್ಟ್ರೀಯ ನಾಯಕರು

ಭಾರತದಲ್ಲಿ ನಾಯಕರು, ಪಂಡಿತರು, ಕವಿಗಳು ಮತ್ತು ಸಾಮಾಜಿಕ, ಧಾರ್ಮಿಕ ಸುಧಾರಕರು ಭಾರತದ ಹಿರಿಮೆಗಳನ್ನು ಹೊಗಳಿ ಜನರ ನಡುವೆ ರಾಷ್ಟ್ರೀಯ ಮನೋಭಾವನೆ ಉಂಟಾಗುವಂತೆ ಮಾಡಿದರು. ರಾಜಾರಾಮ್ ಮೋಹನ್‌ರಾಯ್, ಸ್ವಾಮಿವಿವೇಕಾನಂದ ರಂತಹ ಸಮಾಜ ಸುಧಾರಕರೂ, ತಿಲಕರು, ನೆಹರು, ಗಾಂಧೀಜಿ, ಪಟೇಲ್ ಮುಂತಾದ ನಾಯಕರೂ ಸಹ ಭಾರತೀಯರಲ್ಲಿ ಆತ್ಮವಿಶ್ವಾಸ, ನವಚೇತನ ಬೆಳೆಸಿದರು. ಭಾರತ ಮತ್ತು ಭಾರತೀಯರ ಜನಪ್ರಿಯತೆಯನ್ನು ಗಳಿಸುವಂತೆ ಮಾಡಿದರು. ಇದು ಭಾರತದಲ್ಲಿ ರಾಷ್ಟ್ರೀಯ ಚಳುವಳಿಯ ಉದಯಕ್ಕೆ ಅಡಿಪಾಯವಾಯಿತು.

5. ಮುದ್ರಣ ಮತ್ತು ವಾರ್ತಾಪತ್ರಿಕೆಗಳು

ರಾಷ್ಟ್ರೀಯತೆಯು ಉದಯವಾಗಲು ಹಾಗೂ ಬೆಳವಣಿಗೆಯಾಗಲು ಮುದ್ರಣವು ಭಾರತೀಯ ಪತ್ರಿಕೆಗಳು ಅತ್ಯಂತ ಮುಖ್ಯ ಶಕ್ತಿಗಳಾಗಿ ಕಾರ್ಯನಿರ್ವಹಿಸಿದವು. ಹಲವಾರು ಪ್ರಾಂತೀಯ ಭಾಷೆಗಳಲ್ಲಿ ಅನೇಕ ಪತ್ರಿಕೆಗಳು ಪ್ರಕಟಗೊಂಡವು ಅವುಗಳಲ್ಲಿ ಬಹುತೇಕ ಪತ್ರಿಕೆಗಳು ಬ್ರಿಟಿಷರ ವಿರುದ್ಧವಾಗಿ ಅಭಿಪ್ರಾಯಗಳನ್ನು ಪ್ರಕಟಿಸಿದವು. ಇಂಡಿಯನ್ ಮಿರರ್ ಎಂಬ ಪತ್ರಿಕೆ, ಬಾಂಬೆ ಸಮಾಚಾರ್, ಅಮೃತಬಜಾರ್ ಪತ್ರಿಕೆಗಳು, ಹಿಂದು, ಕೇಸರಿ, ಮರಾಠಿ ಮುಂತಾದ ಪತ್ರಿಕೆಗಳು ಜನಸಾಮಾನ್ಯರ ಅಭಿಪ್ರಾಯಗಳನ್ನು ವಿಮರ್ಶಿಸುವುದರ ಜೊತೆಗೆ, ಜನರಲ್ಲಿ ರಾಷ್ಟ್ರೀಯ ಮನೋಭಾವನೆ ಉಂಟಾಗುವಂತೆ ಮಾಡಿದವು. ಬಂಕೀಮ್‌ಚಂದ್ರಚಟರ್ಜಿ, ರವೀಂದ್ರನಾಥ್ ಠ್ಯಾಗೂರ್, ಸುಬ್ರಹ್ಮಣ್ಯ ಭಾರತೀಯಾರ್ ಮುಂತಾದ ಬರಹಗಾರರ ಬರವಣಿಗೆಗಳು ಭಾರತೀಯರಲ್ಲಿ

ರಾಷ್ಟ್ರೀಯತೆಯ ಪ್ರಜ್ಞೆ ಬರುವಂತೆ ಮಾಡಿದವು. 1878ರಲ್ಲಿ ಜಾರಿಗೊಳಿಸಲ್ಪಟ್ಟ ಮಾತೃಭಾಷಾ ಪತ್ರಿಕಾ ನಿಷೇಧ ಕಾಯಿದೆಯು ಪತ್ರಿಕಾ ಸ್ವಾತಂತ್ರ್ಯವನ್ನು ಕಿತ್ತುಕೊಂಡಿತು. ಇದು ಬ್ರಿಟಿಷರ ಆಡಳಿತದ ವಿರುದ್ಧ ಹೋರಾಟ ನಡೆಸುವಂತೆ ಮಾಡಿತು.

6.1857ರ ಮಹಾಕ್ರಾಂತಿ

1857ರಲ್ಲಿ ನಡೆದ ಮಹಾಕ್ರಾಂತಿಯನ್ನು ಅಡಗಿಸಲಾಯಿತು. ಇದರಿಂದ ಭಾರತೀಯರು ಬ್ರಿಟಿಷರ ಹಟ್ಟಹಾಸವನ್ನು ಕಂಡು ದಿಗ್ಭ್ರಮೆಗೊಂಡರು. ಈ ದಂಗೆಯು ಬ್ರಿಟಿಷರ ಹಾಗೂ ಭಾರತೀಯರ ನಡುವೆ ಮುಗಿಯದ ಮನೊಭಾವನೆಯನ್ನು ಪರಸ್ಪರ ಸಂದೇಹ ಪ್ರವೃತ್ತಿಯನ್ನು ಉಂಟುಮಾಡಿತು. ಸಂಪೂರ್ಣವಾಗಿ ಸಂಭವಿಸಿದ ಈ ದಂಗೆಯು ರಾಷ್ಟ್ರೀಯತೆಯಾಗಿ ಬದಲಾಗಿ ಅಂತ್ಯದಲ್ಲಿ ಭಾರತವು ಸ್ವಾತಂತ್ರ್ಯದ ಜಾಗೃತಿಯನ್ನು ಬೆಳೆಸಿತು.

7.ವರ್ಣಭೇದ

ಬ್ರಿಟಿಷರು ಒಡೆದು ಆಳುವ ನೀತಿಯನ್ನು ಅನುಸರಿಸಿದರು. ಇದರಂತೆ ವರ್ಣಭೇದ ನೀತಿಯನ್ನು ರೂಪಿಸಿದರು. ಇದರಿಂದ ಬ್ರಿಟಿಷರು ತಮ್ಮನ್ನು ಶ್ರೇಷ್ಠರೆಂದು ಭಾರತೀಯರು ಕನಿಷ್ಠರಾದವರೆಂದು ಭಾವಿಸಿದರು. ಎಲ್ಲಾ ಉನ್ನತ ಪದವಿಗಳನ್ನು ಬ್ರಿಟಿಷರಿಗೆ ಕೊಡಲಾಯಿತು. ಭಾರತೀಯರಿಗೆ ಯಾವ ವಿಧವಾದ ಉನ್ನತಪದವಿಯನ್ನು ನೀಡಲಿಲ್ಲ.

ಇಲ್ಬರ್ಟ್ ಮಸೂದೆಯು ಭಾರತೀಯರಿಗೆ ಯಾವ ಫಲವನ್ನೂ ನೀಡಲಿಲ್ಲ. ಇದರಿಂದ ಬ್ರಿಟಿಷರಿಂದ ಸರಿಯಾದ ನ್ಯಾಯವನ್ನು ನಿರೀಕ್ಷಿಸಲಾಗದ ಸ್ಥಿತಿ ಉಂಟಾಯಿತು. ಇದು ರಾಷ್ಟ್ರೀಯತೆಯ ಬೆಳವಣಿಗೆಗೆ ದಾರಿ ಮಾಡಿ ಕೊಟ್ಟಿತು.

II.ಭಾರತದ ಸ್ವಾತಂತ್ರ್ಯ ಹೋರಾಟ

ಮೊದಲ ಹಂತ ಗಾಂಧಿ ಪೂರ್ವಕಾಲ ಕ್ರಿಶ 1885–ಕ್ರಿಶ 1919

ಭಾರತೀಯರಿಗೆ ಹಲವಾರು ಉನ್ನತ ಪದವಿಗಳನ್ನು ನೀಡುವ ಸಂಬಂಧವಾಗಿ ಶಾಸನ ಮಸೂದೆಯು **1833** ಮತ್ತು **1858** ರಲ್ಲಿ ಅಂಗೀಕರಿಸಲ್ಪಟ್ಟಿತು. ಆದರೆ ಯಾವ ಭಾರತೀಯರಿಗೂ ಉನ್ನತ ಪದವಿ ನೀಡಲಿಲ್ಲ. ಬ್ರಿಟಿಷ್ ಸರ್ಕಾರ ಒಡೆದು ಆಳುವ ನೀತಿಯನ್ನೂ, ವರ್ಣಬೇಧ ನೀತಿಯನ್ನು ಮುಂದುವರಿಸಿತು. ಇದು ಭಾರತಿಯರಲ್ಲಿ ಭಾವೈಕ್ಯತೆಯನ್ನುಂಟು ಮಾಡಿತು. ಈ ನಡುವೆ ಭಾರತೀಯರಲ್ಲಿ ರಾಷ್ಟ್ರೀಯ ಮನೊಭಾವನೆ ಉದಯಿಸಿ ತಮಗೆ ಹೆಚ್ಚು ಅಧಿಕಾರಗಳನ್ನು ನೀಡಬೇಕೆಂದು ಕೋರಿದರು. **1878** ರ ಶಸ್ತ್ರಾಸ್ತ್ರ ಕಾಯಿದೆ ಮತ್ತು ದೇಶಭಾಷಾ ಪತ್ರಿಕೆ ಕಾನೂನುಗಳನ್ನು ಜಾರಿಗೊಳಸಲ್ಪಟ್ಟು ಭಾರತೀಯರ ರಾಷ್ಟ್ರೀಯತೆಯ ಮನೋಭಾವನೆ ಮತ್ತಷ್ಟು ಹೆಚ್ಚಾಯಿತು.

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಉದಯ:1885

ಬ್ರಿಟಿಷರ ಆಳ್ವಿಕೆಯಲ್ಲಿ ನಂಬಿಕೆ ಕಳೆದುಕೊಂಡ ಭಾರತೀಯರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಎಂಬ ಸಂಸ್ಥೆಯನ್ನು ಪ್ರಾರಂಭಿಸಿದರು. **1885** ರಲ್ಲಿ ನಿವೃತ್ತ ಬ್ರಿಟಿಷ್ ಅಧಿಕಾರಿಯಾದ ಆ್ಯಲನ್ ಆಕ್ಟೋವಿಯನ್ ಹ್ಯೂಮ್ ಎಂಬುವವರ ಸಲಹೆಯಂತೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆಗೊಂಡಿತು. ಕಾಂಗ್ರೆಸ್ಸಿನ ಮೊದಲ ಸಮಾವೇಶವು ಬಾಂಬೆಯಲ್ಲಿ ನಡೆಯಿತು. ಆ ಸಮಾವೇಶದಲ್ಲಿ ಡಬ್ಲ್ಯು.ಸಿ. ಬ್ಯಾನರ್ಜಿ (W.C.Banerjee)ಅಧ್ಯಕ್ಷತೆ ವಹಿಸಿದ್ದರು. ಭಾರತದಾದ್ಯಂತ **72** ಪ್ರತಿನಿಧಿಗಳು ಈ ಸಮಾವೇಶದಲ್ಲಿ ಭಾಗವಹಿಸಿದ್ದರು. ದಾದಾಬಾಯ್ ನವರೋಜಿ, ಸುರೇಂದ್ರನಾಥ ಬ್ಯಾನರ್ಜಿ, ಮದನಮೋಹನಮಾಳವೀಯ, ಎಂ.ಜಿ. ರಾನಡೆ, ಗೋಪಾಲಕೃಷ್ಣ ಗೋಖಲೆ, ಫಿರೋಜ್‌ಷಾ ಮೆಹ್ತಾ, ಜಿ .ಸುಬ್ರಹ್ಮಣ್ಯ ಅಯ್ಯರ್ ಮುಂತಾದ ಧಾರಾಳವಾದ ಮನಸ್ಸನ್ನು ಹೊಂದಿದ್ದ ಹಲವು ಗಣ್ಯರು ಈ ಸಮಾವೇಶದಲ್ಲಿ ಪ್ರತಿನಿಧಿಗಳಾಗಿ ಭಾಗವಹಿಸಿದ್ದರು.

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಧ್ಯೇಯೋದ್ದೇಶಗಳು

1. ವಿಧಾನ ಸಭೆಗಳನ್ನು ವಿಸ್ತರಿಸುವುದು , ಹೆಚ್ಚಾಗಿ ಪ್ರತಿನಿಧಿತ್ವವನ್ನು ನೀಡಬೇಕು.
2. ಶಿಕ್ಷಣವನ್ನು ಹರಡಲು ಕ್ರಮಕೈಗೊಳ್ಳುವುದು.
3. ಪತ್ರಿಕಾ ಸ್ವಾತಂತ್ರ್ಯವನ್ನು ನೀಡುವುದು.
4. ಭಾರತದ ಆಡಳಿತ ಸೇವೆ ಪರೀಕ್ಷೆಗಳನ್ನು (ICS) ಭಾರತದಲ್ಲಿಯೇ ನಡೆಸುವುದು.

5. ಸೈನ್ಯದ ಖರ್ಚುಗಳನ್ನು ಕಡಿಮೆ ಮಾಡಲು ಒತ್ತಾಯಿಸುವುದು ಮತ್ತು
6. ತೆರಿಗೆ ವಿಧಾನವನ್ನು ಸರಳಗೊಳಿಸುವುದು ಮತ್ತು ವಿದೇಶಿ ವಸ್ತುಗಳ ಮೇಲಿನ ಆಮದು ತೆರಿಗೆಯನ್ನು ಹೆಚ್ಚಿಸುವಂತೆ ಕೋರುವುದು.
7. ಭಾರತೀಯರನ್ನು ಉನ್ನತ ಪದವಿಗಳಲ್ಲಿ ನೇಮಕ ಮಾಡುವಂತೆ ಕೋರುವುದು.
8. ಲಂಡನ್ನಿನಲ್ಲಿರುವ ಇಂಡಿಯನ್ ಕೌನ್ಸಿಲ್ ಸಭೆಯನ್ನು ತೆಗೆದುಹಾಕುವುದು ಮುಂತಾದ ಬೇಡಿಕೆಗಳನ್ನು ಒಳಗೊಂಡ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಕಾರ್ಯನಿರ್ವಹಿಸಿತು.

ಮಂದಗಾಮಿಗಳು

ಪ್ರಾರಂಭದಲ್ಲಿ ಕಾಂಗ್ರೆಸ್ ನಾಯಕರು ಓದಿದ ಮಧ್ಯಮವರ್ಗದವರಿಂದ ಕೂಡಿದ್ದರು. ಆದ್ದರಿಂದಲೇ ಇವರುಗಳು ಮಂದಗಾಮಿಗಳು ಎಂದು ಕರೆಯಲ್ಪಟ್ಟರು. ಅವರು ಬ್ರಿಟಿಷರ ಪ್ರಾಮಾಣಿಕವಾದ ನಡವಳಿಕೆಗಳ ಮೇಲೆ ನಂಬಿಕೆಯನ್ನು ಹೊಂದಿದ್ದರು. ತಮ್ಮ ಬೇಡಿಕೆಗಳನ್ನು, ವಾದಗಳನ್ನು ಶಾಂತರೀತಿಯಲ್ಲಿ ಮನವಿ ಪತ್ರಗಳ ಮೂಲಕ ಬಗೆಹರಿಸಿಕೊಳ್ಳಲು ಇಚ್ಚಿಸಿದರು. ಮಂದಗಾಮಿ ಕಾಂಗ್ರೆಸ್ ನಾಯಕರುಗಳು ಸುರೇಂದ್ರನಾಥ ಬ್ಯಾನರ್ಜಿ, ದಾದಾಬಾಯಿ ನವರೋಜಿ, ಫಿರೋಜ್ ಷಾ ಮೆಹ್ತಾ, ಗೋಪಾಲಕೃಷ್ಣ ಗೋಖಲೆ, ಎಂ.ಜಿ. ರಾನಡೆ ಮುಂತಾದವರುಗಳಾಗಿದ್ದಾರೆ. ಮಂದಗಾಮಿಗಳ ಬೇಡಿಕೆಗಳು ರಾಜಕೀಯ ಭಿಕ್ಷೆ ಯಂತೆ ಇದೆ ಎಂದು ಕಾಂಗ್ರೆಸಿನಲ್ಲಿದ್ದ ಯುವ ಪೀಳಿಗೆಯವರು ವರ್ಣಿಸಿದರು. ಪ್ರಾರಂಭದಲ್ಲಿ ಬ್ರಿಟಿಷ್ ಸರ್ಕಾರ ಕಾಂಗ್ರೆಸ್ಸಿನೊಂದಿಗೆ ಸ್ನೇಹದಿಂದಿತ್ತು. ಆದರೆ ಕಾಂಗ್ರೆಸ್ ಹೆಚ್ಚು ಬೇಡಿಕೆಗಳನ್ನು ಈಡೇರಿಸುವಂತೆ ಕೇಳಿದಾಗ ಕಾಂಗ್ರೆಸ್ಸಿನೊಂದಿಗಿನ ಬ್ರಿಟಿಷ್ ಸರ್ಕಾರದ ಧೋರಣೆ ಬದಲಾಗಿ ಕಾಂಗ್ರೆಸ್ಸಿನ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಯಾವ ಗಮನವನ್ನೂ ಹರಿಸಲಿಲ್ಲ.

ತೀವ್ರಗಾಮಿಗಳು

ಕಾಂಗ್ರೆಸ್ಸಿನ ಒಂದು ಗುಂಪಿನವರು ಮಂದಗಾಮಿಗಳ ನಂಬಿಕೆಯನ್ನು ಕಳೆದುಕೊಂಡರು. ಅವರುಗಳಲ್ಲಿ ಮುಖ್ಯವಾದವರು ಬಾಲಗಂಗಾಧರ ತಿಲಕರು(ಬಾಲ್), ಲಾಲಾಲಜಪತರಾಯ್ (ಲಾಲ್), ಬಿಪಿನ್‌ಚಂದ್ರಪಾಲ್ (ಪಾಲ್), ಅರವಿಂದಘೋಷ್ ರವರುಗಳಾಗಿದ್ದಾರೆ. ಅವರು ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಟದಲ್ಲಿ ನಿರತರಾದವರು. ಅವರು ಸ್ವಾತಂತ್ರ್ಯಕ್ಕಾಗಿ ಸರ್ಕಾರದ ಕರುಣೆಯನ್ನು ಬಯಸಿರಲಿಲ್ಲ. ಹಿಂಸಾತ್ಮಕ ಹೋರಾಟದಲ್ಲಿ ನಂಬಿಕೆ ಹೊಂದಿದ್ದರು. ಸ್ವಾತಂತ್ರ್ಯಗಳಿಸುವುದು ನಮ್ಮ ಹಕ್ಕು ಎಂದು ನಂಬಿದ್ದರು. ಅವರ ತೀವ್ರವಾದ ನೀತಿಯಿಂದಾಗಿ ಅವರುಗಳನ್ನು ತೀವ್ರಗಾಮಿಗಳು ಎಂದು ಕರೆಯಲ್ಪಟ್ಟರು.



ಬಾಲಗಂಗಾಧರ ತಿಲಕರು

ಲೋಕಮಾನ್ಯ ಬಾಲಗಂಗಾಧರ ತಿಲಕರು ಮರಾಠಿಯಲ್ಲಿ ಕೇಸರಿ ಎಂಬ ಪತ್ರಿಕೆಯ ಮೂಲಕ ಬ್ರಿಟಿಷರ ನೀತಿಯನ್ನು ಬಿಂಬಿಸಿದರು. "ಸ್ವರಾಜ್ಯ ನನ್ನ ಆ ಜನ್ಮ ಸಿದ್ಧ ಹಕ್ಕು ಅದನ್ನು ನಾನು ಪಡೆದೇತೀರುತ್ತೇನೆ" ಎಂದು ಘೋಷಿಸಿದರು. ಅವರು ಗಣಪತಿ ಮತ್ತು ಶಿವಾಜಿ ಉತ್ಸವಗಳನ್ನು ಸಂಘಟಿಸುವ ಮೂಲಕ ಭಾರತೀಯರಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಮೂಡಿಸಿದರು. ಹೀಗೆ ತೀವ್ರಗಾಮಿ ಗುಂಪಿನವರು ಕಾಂಗ್ರೆಸ್‌ನ ಉದ್ದೇಶವನ್ನು ಬದಲಾಯಿಸಿದುದಲ್ಲದೆ ಅವುಗಳನ್ನು ಹೊಂದುವ ಮಾರ್ಗಗಳನ್ನೂ ಸಹ ಬದಲಾಯಿಸಲು ಬಯಸಿದರು.

ಬಂಗಾಳದ ವಿಭಜನೆ ಕ್ರಿ.ಶ.1905

1905 ರಲ್ಲಿ ಲಾರ್ಡ್ ಕರ್ಜನ್ ಬಂಗಾಳದ ವಿಭಜನೆಯನ್ನು ಕೈಗೊಂಡನು. ಆಡಳಿತದ ಹಿತ

ದೃಷ್ಟಿಯಿಂದ ಬಂಗಾಳವನ್ನು ಪೂರ್ವ ಬಂಗಾಳ ಮತ್ತು ಅಸ್ಸಾಂನ್ನು ಸೇರಿಸಿ ಒಂದು ಪ್ರಾಂತ್ಯವನ್ನಾಗಿಯೂ ಪಶ್ಚಿಮ ಬಂಗಾಳ ಮತ್ತು ಬಿಹಾರವನ್ನು ಸೇರಿಸಿ ಮತ್ತೊಂದು ಪ್ರಾಂತ್ಯವನ್ನು ರಚಿಸುವುದು ಎಂದು ಪ್ರಕಟಿಸಿದನು. ಆಡಳಿತದ ಹಿತದೃಷ್ಟಿಯಿದ ಬಂಗಾಳವನ್ನು ಎರಡು ಭಾಗಗಳನ್ನಾಗಿ ವಿಭಾಗಿಸಲ್ಪಡುವುದು ಎಂಬ ಕರ್ಜನ್‌ನ ಹೇಳಿಕೆಯನ್ನು ಭಾರತೀಯರು ನಂಬಲಿಲ್ಲ. ಈ ಕಾರ್ಯವು ಹಿಂದೂಗಳನ್ನು, ಮುಸ್ಲೀಮರನ್ನು ಪ್ರತ್ಯೇಕಿಸುವ ಸಲುವಾಗಿ ಮಾಡಿದ ಸಂಚು ಎಂದು ಅಭಿಪ್ರಾಯಪಟ್ಟರು. ಇದನ್ನು ತೀವ್ರಗಾಮಿಗಳು ಮತ್ತು ಮಂದಗಾಮಿಗಳು ಒಡೆದು ಆಳುವ ಧೋರಣೆ ಎಂದು ಅಭಿಪ್ರಾಯಪಟ್ಟರು. ತೀವ್ರ ಪ್ರತಿಭಟನೆ ಹಾಗೂ ಹಿಂಸಾತ್ಮಕ ಹೋರಾಟಗಳಿಂದಾಗಿ ಬಂಗಾಳವು 1911ರಲ್ಲಿ ಮತ್ತೆ ಒಗ್ಗೂಡಿಸಲ್ಪಟ್ಟಿತು. ಬಂಗಾಳದ ವಿಭಜನೆಯನ್ನು ಆರ್ಥಿಕತೆಯ ನಿರ್ಲಕ್ಷ್ಯ ಎಂದು ಸ್ವದೇಶಿ ಚಳುವಳಿ ಉದಯವಾಗಲು ಕಾರಣವಾಯಿತು.



ಲಾರ್ಡ್ ಕರ್ಜನ್

ಸ್ವದೇಶಿ ಎಂಬುದರ ಅರ್ಥ ಸ್ವಂತ ದೇಶ ಎಂಬುದಾಗಿದೆ. ಈ ಚಳುವಳಿಯಿಂದ ದೇಶದ ಕೈಗಾರಿಕೆಗಳು ಅಭಿವೃದ್ಧಿ ಸಾಧಿಸಲು ಪ್ರೋತ್ಸಾಹಿಸಿ ವಿದೇಶಿ ವಸ್ತುಗಳನ್ನು ಬಹಿಷ್ಕರಿಸುವುದಾಗಿತ್ತು. ಕಾಂಗ್ರೆಸ್ಸಿಗರಾದ ಬಂಕಿಮ ಚಂದ್ರ ಚಟರ್ಜಿ ಯವರು ರಚಿಸಲ್ಪಟ್ಟ 'ವಂದೇ ಮಾತರಂ' ಎಂಬ ಮಾತೃಭೂಮಿಯ ದೇಶಭಕ್ತಿಯ ಜಾಗೃತಿಯನ್ನು ಮೂಡಿಸಿದರು.

ಮುಸ್ಲೀಂ ಲೀಗ್ ಸ್ಥಾಪನೆ – 1906

1857 ರಲ್ಲಿ ನಡೆದ ಮಹಾಕ್ರಾಂತಿಯಲ್ಲಿ ಮುಸ್ಲೀಮರು ಭಾಗವಹಿಸಿದ್ದರು. ಆದರೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಧೋರಣೆಯು ಮುಸ್ಲೀಮರುಗಳಲ್ಲಿ ಭಯವನ್ನುಂಟುಮಾಡಿತು. ಮುಸ್ಲೀಮರು ತಮ್ಮ ಏಳಿಗೆಗಾಗಿ ಪ್ರತ್ಯೇಕವಾಗಿ ಒಂದು ಸಂಸ್ಥೆ ಅವಶ್ಯಕ ಎಂದು ಅರಿತರು. ಒಡೆದು ಆಳುವ ನೀತಿಯನ್ನು ಅನುಸರಿಸಿದ ಬ್ರಿಟಿಷ್ ಸರ್ಕಾರವು ಮುಸ್ಲೀಮರ ಬೇಡಿಕೆಗಳನ್ನು ಒಪ್ಪಿತು. 1906 ರಲ್ಲಿ ಢಾಕಾ ನಗರಕ್ಕೆ ಸೇರಿದ ನವಾಬ್ ಸಲೀಮುಲ್ಲಾಖಾನ್ ಎಂಬುವವರ ಅಧ್ಯಕ್ಷತೆಯಲ್ಲಿ ಮುಸ್ಲೀಂ ಲೀಗ್ ಪಕ್ಷವು ಸ್ಥಾಪಿಸಲ್ಪಟ್ಟಿತು. ಮುಸ್ಲೀಮರ ಹಕ್ಕುಗಳನ್ನು ರಕ್ಷಿಸುವುದು, ಅವರಿಗೆ ಇನ್ನೂ ಹಲವು ಸಲುಗೆಗಳನ್ನು ಪಡೆಯುವುದು, ಕಾಂಗ್ರೆಸ್‌ನಿಂದ ಅವರನ್ನು ಪ್ರತ್ಯೇಕಿಸಿ, ಬ್ರಿಟಿಷರೊಡನೆ ವಿಶ್ವಾಸದಿಂದಿದ್ದು ಪ್ರತ್ಯೇಕ ಸ್ಥಾನ ಪಡೆಯುವುದು ಮುಂತಾದ ಉದ್ದೇಶಗಳನ್ನು ಇದು ಹೊಂದಿತ್ತು.

ಸೂರತ್ ಒಡಕು 1907

ಕಾಂಗ್ರೆಸ್ಸಿನಲ್ಲಿ ಮಂದಗಾಮಿಗಳು ಮತ್ತು ತೀವ್ರಗಾಮಿಗಳ ನಡುವೆ ಭಿನ್ನಾಭಿಪ್ರಾಯಗಳು ಹೆಚ್ಚಾಗುತ್ತಲೇ ಬಂದವು. 1907 ರಲ್ಲಿ ನಡೆದ ಸೂರತ್ ಅಧಿವೇಶನದಲ್ಲಿ ಮಂದಗಾಮಿಗಳು ತೀವ್ರಗಾಮಿಗಳ ನಡುವೆ ಕಾಂಗ್ರೆಸ್ ನಾಯಕರನ್ನು ಆಯ್ಕೆ ಮಾಡುವುದರಲ್ಲಿ ಭಿನ್ನಾಭಿಪ್ರಾಯ ಉಂಟಾಯಿತು. ಇದರಿಂದ ಕಾಂಗ್ರೆಸ್ ಇಬ್ಭಾಗವಾಗಿ ತೀವ್ರಗಾಮಿಗಳು ಹೊರಬಂದರು. ಬಾಲಗಂಗಾಧರ ತಿಲಕರು ತೀವ್ರಗಾಮಿಗಳ ನಾಯಕರಾಗಿಯೂ, ಗೋಪಾಲಕೃಷ್ಣ ಗೋಖಲೆ ಮಂದಗಾಮಿಗಳ ನಾಯಕರಾಗಿಯೂ ಅರಿಸಲ್ಪಟ್ಟರು.

ಮಿಂಟೋ–ಮಾರ್ಲೆ ಸುಧಾರಣಾ ಕಾಯಿದೆ – ಕ್ರಿ.ಶ.1909

ಮುಸ್ಲೀಮರನ್ನು ತೃಪ್ತಿಪಡಿಸಲು 1909 ರಲ್ಲಿ ಮಿಂಟೋ–ಮಾರ್ಲೆ ಸುಧಾರಣಾ ಶಾಸನವನ್ನು ಜಾರಿಗೊಳಿಸಲ್ಪಟ್ಟಿತು. ಈ ಶಾಸನದನ್ವಯ ಮುಸ್ಲೀಮರಿಗೆ ಪ್ರತ್ಯೇಕ ಸ್ಥಾನಗಳನ್ನು ಜಾರಿಗೊಳಿಸಲ್ಪಟ್ಟಿತು. ಈ ಶಾಸನದನ್ವಯ ಮುಸ್ಲೀಮರಿಗೆ ಪ್ರತ್ಯೇಕ ಸ್ಥಾನಗಳನ್ನು ನೀಡಲಾಯಿತು. ಆದರೆ ಇದನ್ನು ಕಾಂಗ್ರೆಸ್ ಕಟುವಾಗಿ ವಿರೋಧಿಸಿತು.

ಮೊದಲನೆ ಪ್ರಪಂಚ ಯುದ್ಧ 1914–1918

ಕ್ರಿ.ಶ. 1914 ರಲ್ಲಿ ಮೊದಲನೆ ಪ್ರಪಂಚ ಯುದ್ಧವು ಪ್ರಾರಂಭವಾಯಿತು. ಈ ಯುದ್ಧದಲ್ಲಿ ಬ್ರಿಟನ್ ,ಫ್ರಾನ್ಸ್ ,ರಷ್ಯಾ, ಈ ಮೂರು ದೇಶಗಳು ಒಟ್ಟಾಗಿ ಸೇರಿದವು. ಬ್ರಿಟೀಷರ ಪರವಾಗಿ ಭಾರತೀಯರು ಈ ಯುದ್ಧದಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಇದರ ಮೂಲಕ ಬ್ರಿಟಿಷರು ತಮಗೆ ಆಡಳಿತದ ಜವಾಬ್ದಾರಿಯನ್ನು ನೀಡುವರು ಎಂಬ ನಂಬಿಕೆಯು ಭಾರತೀಯರಲ್ಲಿ ಏರ್ಪಟ್ಟಿತು.

ಸ್ವಯಂ ಆಡಳಿತ (ಹೋಂರೂಲ್)ಚಳುವಳಿ: 1916

ಬಾಲಗಂಗಾಧರ ತಿಲಕರು 1916 ರಲ್ಲಿ ಸ್ವಯಂ ಆಡಳಿತ ಸಂಸ್ಥೆಯನ್ನು ಬಾಂಬೆಯಲ್ಲಿ ಸ್ಥಾಪಿಸಿದರು. ಐರ್ಲ್ಯಾಂಡ್‌ಗೆ ಸೇರಿದ ಅನಿಬೆಸೆಂಟ್ ಚೆನ್ನೈನಲ್ಲಿ ಸ್ವಯಂ ಆಡಳಿತ ಸಂಸ್ಥೆಯ ಶಾಖೆಯನ್ನು ಸ್ಥಾಪಿಸಿದರು. ಈ ಎರಡು ಸಂಸ್ಥೆಗಳು ಸೇರಿ ಭಾರತೀಯರು ಸ್ವಯಂನಿರ್ಣಯಾಧಿಕಾರ ಅಥವಾ ಸ್ವಯಂ ಆಡಳಿತ ಪಡೆಯಲು ಪ್ರಚಾರ ಮಾಡಿದವು. ಅನಿಬೆಸೆಂಟರವರು ತಮ್ಮ ಭಾಷಣಗಳಿಂದ ಮತ್ತು ಬರವಣಿಗೆಗಳಿಂದ ಭಾರತೀಯರಲ್ಲಿ ಅತ್ಯಂತ ಉತ್ಸಾಹವನ್ನುಂಟುಮಾಡಿದರು. ಇದರಿಂದ ಅನಿಬೆಸೆಂಟ್ ರವರು ಪ್ರಕಟಿಸಿದ ನ್ಯೂ ಇಂಡಿಯಾ ಪತ್ರಿಕೆಯನ್ನು ಬ್ರಿಟಿಷ್ ಸರ್ಕಾರವು ನಿಷೇಧಿಸಿತು.

ಮೋತಿಲಾಲ್ ನೆಹರು ಮತ್ತು ಚಿತ್ತರಂಜನ್‌ದಾಸ್ ಸ್ವಯಂನಿರ್ಣಯಾಧಿಕಾರ ಚಳುವಳಿಗೆ ತಮ್ಮ ಸಂಪೂರ್ಣ ಬೆಂಬಲ ನೀಡಿದರು.

ಲಕ್ನೋ ಒಪ್ಪಂದ ಕ್ರಿಶ 1916

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ವಾರ್ಷಿಕ ಅಧಿವೇಶನವು ಲಕ್ನೋ ನಗರದಲ್ಲಿ ಜರುಗಿತು. ಈ ಅಧಿವೇಶನದಲ್ಲಿ ಎರಡು ಮುಖ್ಯ ಐತಿಹಾಸಿಕ ಘಟನೆಗಳು ಸ್ಥಾನ ಪಡೆದವು.

1.ಮಂದಗಾಮಿಗಳು ಮತ್ತು ತೀವ್ರಗಾಮಿಗಳು ಒಂದಾದರು.

2. ಕಾಂಗ್ರೆಸ್ ಮತ್ತು ಮುಸ್ಲೀಂ ಲೀಗ್ ಸ್ವಯಂ ಆಡಳಿತ ಪಡೆಯಲು ಒಬ್ಬರಿಗೊಬ್ಬರು ಸಹಕರಿಸುವ ಸಲುವಾಗಿ ಒಪ್ಪಂದವೊಂದಕ್ಕೆ ಸಹಿ ಹಾಕಿದರು. ಆ ಅಧಿವೇಶನದಲ್ಲಿ ಜವಹರ್‌ಲಾಲ್ ನೆಹರು ಗಾಂಧೀಜಿಯನ್ನು ಮೊಟ್ಟಮೊದಲಬಾರಿ ಭೇಟಿಯಾದರು.

ಆಗಸ್ಟ್ ಪ್ರಕಟಣೆ 1917

1917 ರಲ್ಲಿ ಹೊರಡಿಸಲ್ಪಟ್ಟ ಆಗಸ್ಟ್ ಪ್ರಕಟಣೆಯು ಭಾರತದ ಭವಿಷ್ಯದ ರಾಜಕೀಯ ಸುಧಾರಣೆಗಳ ಬಗ್ಗೆ ಹಾಗೂ ಭಾರತದಲ್ಲಿ ಹಂತ–ಹಂತವಾಗಿ ಸ್ವಯಂ ಆಡಳಿತ ಸಂಸ್ಥೆಗಳನ್ನು ಸ್ಥಾಪಿಸುವುದು ಎಂದು ಭರವಸೆ ನೀಡಿತು. ಇದರಿಂದ ಸ್ವದೇಶಿ ಚಳುವಳಿ ಹಂತ–ಹಂತವಾಗಿ ಅಂತ್ಯಗೊಂಡಿತು.


ಮಾಂಟೆಗೋ– ಚಲ್ಮ್ಸ್‌ಫೋರ್ಡ್ ಸುಧಾರಣಾ ಕಾಯಿದೆ – ಕ್ರಿಶ. 1919

ಮೊದಲನೇ ಪ್ರಪಂಚ ಯುದ್ಧದ ಸಂದರ್ಭದಲ್ಲಿ ಭಾರತೀಯರು ಬ್ರಿಟಿಷರಿಗೆ ಸಂಪೂರ್ಣವಾಗಿ ಸಹಕಾರ ನೀಡಿದರು.ಅದರಂತೆ 1919ರಲ್ಲಿ ಬ್ರಿಟಿಷ್ ಪಾರ್ಲಿಮೆಂಟ್ ಮಾಂಟೆಗೋ–ಚಲ್ಮ್ಸ್‌ಫೋರ್ಡ್‌ಸುಧಾರಣಾ ಶಾಸನವನ್ನು ಜಾರಿಗೊಳಿಸಿತು. ಈ ಶಾಸನವು ಕೇಂದ್ರ ಹಾಗೂ ಪ್ರಾಂತೀಯ ಶಾಸನಸಭೆಗಳನ್ನು ವಿಸ್ತರಿಸಿತು. ಪ್ರಾಂತ್ಯಗಳಲ್ಲಿ ದ್ವಿಆಡಳಿತ ಪದ್ಧತಿಯನ್ನು ಜಾರಿಗೊಳಿಸಿತು. ಈ ಶಾಸನದ ಪ್ರಕಾರ ಆಂಗ್ಲೋ–ಇಂಡಿಯನ್ನರು, ಸಿಖ್ಖರು ಮತ್ತು ಕ್ರೈಸ್ತರು ಈ ಮೂರು ಧರ್ಮದವರಿಗೆ ಸ್ವಯಂ ಆಡಳಿತ ಕ್ಷೇತ್ರಗಳನ್ನು ನೀಡಲಾಯಿತು. ಆದರೂ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಈ ಶಾಸನವನ್ನು ನಿರಾಕರಿಸಿತು. ಈ ಶಾಸನವನ್ನು ಜಾರಿಗೊಳಿಸಿದಂದು ಬ್ರಿಟಿಷರ ಕೃತ್ಯವೆಂದು ಅದನ್ನು ಒಪ್ಪಿಕೊಳ್ಳಲು ಭಾರತೀಯರ ಗೌರವಕ್ಕೆ ಕುಂದುಂಟಾಗುತ್ತದೆಂದು ಅನಿಬೆಸೆಂಟ್ ವಿವರಿಸಿದರು.

ರೌಲಟ್ ಕಾಯಿದೆ–1919

ಭಾರತೀಯರ ಕ್ರಾಂತಿಕಾರಿ ಚಟುವಟಿಕೆಗಳನ್ನು ಹತ್ತಿಕ್ಕಲು 1919 ರಲ್ಲಿ ಬ್ರಿಟಿಷ್ ಸರ್ಕಾರವು ರೌಲಟ್ ಕಾಯಿದೆಯನ್ನು ಜಾರಿಗೆ ತಂದಿತು. ಈ ಮಸೂದೆಯು ಅನುಮತಿಯಿಲ್ಲದೆ ಯಾರನ್ನಾದರೂ ಬಂಧಿಸುವ, ವಿಚಾರಣೆಯಿಲ್ಲದೆ ಸೆರೆಮನೆಗೆ ಕಳುಹಿಸುವ ಅಧಿಕಾರವನ್ನು ಬ್ರಿಟಿಷ್ ಸರ್ಕಾರಕ್ಕೆ ನೀಡಿತು.

ಭಾರತೀಯ ರಾಷ್ಟ್ರೀಯ ಚಳುವಳಿಯು ನಡೆದ ಕೇಂದ್ರಗಳು



ಭಾರತೀಯರು ಗಾಂಧಿಜೀಯವರ ನಾಯಕತ್ವದಲ್ಲಿ ರೌಲಟ್ ಕಾಯಿದೆಯನ್ನು ವಿರೋಧಿಸಿದರು. ಇದರ ಪರಿಣಾಮವಾಗಿ 1919 ಏಪ್ರಿಲ್ 6 ರಂದು ದೇಶದಾದ್ಯಂತ ಸತ್ಯಾಗ್ರಹ ಮತ್ತು ಹರತಾಳಗಳು ನಡೆದವು.

ಜಲಿಯನ್ ವಾಲಾಬಾಗ್ ಹತ್ಯಾಕಾಂಡ – 1919

1919, ಏಪ್ರಿಲ್ 13 ರಂದು ಪಂಜಾಬಿನ ಪ್ರಮುಖ ನಾಯಕರಾದ ಡಾಕ್ಟರ್ ಸತ್ಯಪಾಲ್ ಮತ್ತು ಡಾಕ್ಟರ್ ಸೈಫುದ್ದೀನ್ ಕಿಚ್ಲು ಇವರುಗಳು ಬಂಧಿಸಲ್ಪಟ್ಟರು. ಇದನ್ನು ವಿರೋಧಿಸಿ ಸುಮಾರು ಹತ್ತು ಸಾವಿರ ಜನರು ಅಮೃತಸರದಲ್ಲಿರುವ ಜಲಿಯನ್ ವಾಲಾಬಾಗ್ ಉದ್ಯಾನವ ನದಲ್ಲಿ ಶಾಂತಿ ಸಭೆ ಸೇರಿದ್ದರು.



ಜಲಿಯನ್ ವಾಲಾಬಾಗ್ – ಅಮೃತಸರ

ಈ ಉದ್ಯಾನವನವು ನಾಲ್ಕು ಕಡೆಯೂ ಎತ್ತರದ ಗೋಡೆ ಗಳಿಂದ ಮುಚ್ಚಲ್ಪಟ್ಟ ಒಂದು ಚಿಕ್ಕ ಪ್ರವೇಶ ದ್ವಾರವನ್ನು ಮಾತ್ರ ಹೊಂದಿತ್ತು. ಸೇನಾ ದಂಡನಾಯಕನಾದ ಜನರಲ್ ಡಯಾರ್ ತಮ್ಮ ಸೈನಿಕರೊಡನೆ ಅಲ್ಲಿಗೆ ಹೋಗಿ ಪ್ರವೇಶ ದ್ವಾರವನ್ನು ಮುಚ್ಚಿ ಮುಗ್ಧ ಜನರ ಮೇಲೆ ಗುಂಡಿನಮಳೆಗರೆಯಲು ಆದೇಶಿಸಿದನು. ಈ ಸಭೆಯಲ್ಲಿ ಹಲವು ಮಹಿಳೆಯರು ಮತ್ತು ಮಕ್ಕಳು ಇದ್ದರು. ಈ ಸಮಯದಲ್ಲಿ ನೂರಾರು ಜನರು ಕೊಲ್ಲಲ್ಪಟ್ಟರು. ಸಾವಿರಾರು ಮಂದಿ ತೀವ್ರ ಗಾಯಗೊಂಡರು. ಈ ಹತ್ಯಾಕಾಂಡವು ಭಾರತೀಯರನ್ನು ತೀವ್ರ ದುಃಖಕ್ಕೀಡುಮಾಡಿತು. ಈ ಹಿಂಸಾಕೃತ್ಯವನ್ನು ವಿರೋಧಿಸಿ ರವೀಂದ್ರನಾಥ ಠಾಗೂರ್ ತಮ್ಮ ನೈಟ್‌ಹುಡ್ (knight hood) ಪದವಿಯನ್ನು ತಿರಸ್ಕರಿಸಿದರು.

ಖಿಲಾಫತ್ ಚಳುವಳಿ :1919

ಭಾರತೀಯ ಮುಸ್ಲೀಮರುಗಳು ಬ್ರಿಟಿಷರಿಗೆ ವಿರುದ್ಧವಾಗಿ ಹಲವಾರು ನ್ಯೂನ್ಯತೆಗಳನ್ನು ಹೊಂದಿದ್ದರು. ಒಂದನೆಯ ಮಹಾಯುದ್ಧದಲ್ಲಿ ಜರ್ಮನಿ ಮತ್ತು ಅದರ ಮಿತ್ರ ದೇಶವಾದ ಟರ್ಕಿಯೂ ಸೋಲನ್ನನುಭವಿಸಿದವು. ಟರ್ಕಿ ಸಾಮ್ರಾಜ್ಯವನ್ನು ಒಡೆದು ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳು ತಮ್ಮೊಳಗೇ ಹಂಚಿಕೊಂಡವು. ಪ್ರಪಂಚದ ಮುಸ್ಲೀಂ ಧರ್ಮದ ಮುಖಂಡರಾದ ಖಲೀಫರು ಅವಮಾನಿತರಾದರು. ಇದನ್ನು ಮುಸ್ಲೀಮರು ದೊಡ್ಡ ಅವಮಾನವೆಂದು ಭಾವಿಸಿದರು. ಭಾರತದಲ್ಲಿ ಮಹಮದ್ ಆಲಿ ಮತ್ತು ಶೌಕತ್ ಆಲಿ ಎಂಬ ಆಲಿ ಸಹೋದರರು ಖಿಲಾಪತ್ ಚಳುವಳಿಯನ್ನು ಆರಂಭಿಸಿದರು. ಮುಸ್ಲೀಂ ಲೀಗ್ ಪಕ್ಷ ಮತ್ತು ಕಾಂಗ್ರೆಸ್ ಪಕ್ಷಗಳು ಆತ್ಮೀಯರಾಗಲು ಸುಸಂದರ್ಭ ಎಂದು ಭಾವಿಸಿ ಗಾಂಧೀಜಿಯು ಮುಕ್ತ ಮನಸ್ಸಿನಿಂದ ಸಂಪೂರ್ಣವಾಗಿ ಈ ಚಳುವಳಿಗೆ ಬೆಂಬಲ ನೀಡಿದರು.

ಅಭ್ಯಾಸ

ಅ) ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1. ಬ್ರಿಟಿಷರ ಒಗ್ಗೂಡಿಸಲ್ಪಟ್ಟ ನಾಡನ್ನು ಉಂಟುಮಾಡಿದುದು.

   ಅ) ಏಕ ಚಕ್ರಾಧಿಪತ್ಯ ಆ) ರಾಜಕೀಯ ಇ) ದಂಡಯಾತ್ರೆ ಈ) ಮಾತುಕತೆ

2. ಎದ್ಯಾವಂತ ಭಾರತೀಯರ ಭಾಷೆಯಾಗಿದ್ದುದು.

   ಅ) ಫ್ರೆಂಚ್ ಆ) ಇಂಗ್ಲೀಷ್ ಇ) ಹಿಂದಿ ಈ) ಬಂಗಾಳಿ

3. ಧರ್ಮ ಮತ್ತು ಸಮಾಜ ಸುಧಾರಣೆಯಿಂದ ಉಂಟಾದುದು.

ಅ) ರಾಷ್ಟ್ರೀಯತೆ ಆ) ಕ್ರಾಂತಿ ಇ) ಕಲಹ ಈ) ದಂಗೆ

4. ಮಂದಗಾಮಿಗಳ ಕೋರಿಕೆಯನ್ನು ತೀವ್ರ ಗಾಮಿಗಳು ವರ್ಣಿಸಿದುದು.

ಅ) ರಾಜಕೀಯ ಭಿಕ್ಷೆ ಆ)ಎರಡನೇ ಬಗೆಯಾದುದು ಇ) ಕಟ್ಟಳೆಗಳು ಈ) ಮುಕ್ತವಿದೇಶ ನೀತಿ

5. ಕಾಂಗ್ರೆಸ್ ಒಡಕನ್ನು ಉಂಟುಮಾಡಿದ ಅಧಿವೇಶನ

ಅ) ಸೂರತ್ ಆ) ಲಾಹೂರ್ ಇ) ತ್ರಿಪುರ ಈ)ಮದರಾಸು

6. ಮಿಂಟೋ–ಮಾರ್ಲೆ ಸುಧಾರಣಾ ಶಾಸನ ಪ್ರತ್ಯೇಕ ಸ್ಥಾನಗಳನ್ನು ಇವರಿಗೆ ಪರಿಚಯಿಸಿತು.

ಅ) ಹಿಂದೂಗಳಿಗೆ ಆ) ಮುಸ್ಲೀಮರಿಗೆ ಇ) ಸಿಖ್ಖರಿಗೆ ಈ) ಕ್ರೈಸ್ತರಿಗೆ

7. ಮುಂಬೈಯಲ್ಲಿ ಸ್ವಯಂ ಆಡಳಿತವನ್ನು ಸ್ಥಾಪಿಸಿದವರು.

ಅ)ನೆಹರು ಆ) ಶ್ರೀಮತಿ ಅನಿಬಿಸೆಂಟ್ ಇ) ತಿಲಕರು ಈ) ಭಾರತೀಯರು

ಆ ಹೊಂದಿಸಿ ಬರೆಯಿರಿ:–

1.	ಈಶ್ವರ ಚಂದ್ರ ವಿದ್ಯಾಸಾಗರ	ದೇಶಭಕ್ತ ಬರಹಗಾರರು
2.	ಸುಬ್ರಹ್ಮಣ್ಯ ಭಾರತಿ	ಒಬ್ಬರ ಸ್ವಂತ ದೇಶ
3.	ಸ್ವದೇಶ	ಬಾಲಗಂಗಾಧರ ತಿಲಕರು
4.	ನ್ಯೂ ಇಂಡಿಯ	ಧಾರ್ಮಿಕ ಮತ್ತು ಸಾಮಾಜಿಕ ಸುಧಾರಣೆಗಳು
5.	ಕೇಸರಿ	ಅನಿಬೆಸೆಂಟ್
		ಬಿಪಿನ್ ಚಂದ್ರ ಪಾಲ್

ಇ. ಸಂಕ್ಷಿಪ್ತವಾಗಿ ಉತ್ತರಿಸಿ:–

1. ಭಾರತೀಯ ಪತ್ರಿಕೆ ಮತ್ತು ಸಾಹಿತ್ಯಗಳು ಭಾರತೀಯ ರಾಷ್ಟ್ರೀಯ ಚಳುವಳಿ ಉದಯವಾಗಲು ಹೇಗೆ ದಾರಿಮಾಡಿಕೊಟ್ಟವು?
2. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಧ್ಯೇಯೋದ್ದೇಶಗಳು ಯಾವುವು?
3. ಕೆಲವು ಪ್ರಮುಖ ಮಂದಗಾಮಿಗಳ ಹೆಸರನ್ನು ಬರೆಯಿರಿ.
4. ಮುಸ್ಲೀಂ ಲೀಗ್ ಸ್ಥಾಪನೆಯ ಬಗ್ಗೆ ಲಘು ಟಿಪ್ಪಣಿ ಬರೆಯಿರಿ .
5. 1916 ರಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿ ನ ಲಕ್ನೋ ಅಧಿವೇಶನದ ಪ್ರಾಮುಖ್ಯತೆಯನು ತಿಳಿಸಿ.

ಈ. ಕೆಳಕಂಡ ಶೀರ್ಷಿಕೆಯಲ್ಲಿರುವ ಪಶ್ನೆಗಳಿಗೆ ಉತ್ತರಿಸಿ.

1. **ರಾಷ್ಟ್ರೀಯ ಚಳುವಳಿ ಆರಂಭವಾಗಲು ಕಾರಣಗಳು.**

ಅ) ರಾಷ್ಟ್ರೀಯ ನಾಯಕರುಗಳು ಭಾರತೀಯರಲ್ಲಿ ಆತ್ಮವಿಶ್ವಾಸ ಮತ್ತು ನವಚೇತನವನ್ನು ಬೆಳೆಸಿ ಹೇಗೆ ಜನರನ್ನು ಆಕರ್ಷಿಸಿದರು?

ಆ) ದೇಶ ಭಾಷಾ ಪತ್ರಿಕಾ ಶಾಸನವನ್ನು ಯಾವಾಗ ಜಾರಿಗೊಳಿಸಲಾಯಿತು?

ಇ) ಬ್ರಿಟಿಷರು ಅನುಸರಿಸಿದ ನೀತಿ ಯಾವುದು?

ಈ) ಬ್ರಿಟಿಷರು ಭಾರತೀಯರನ್ನು ಹೇಗೆ ಭಾವಿಸಿದರು?

2. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್.

ಅ) ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಯಾವಾಗ ಸ್ಥಾಪಿಸಲ್ಪಟ್ಟಿತು?

ಆ) ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಯಾರ ಸಲಹೆಯಂತೆ ಸ್ಥಾಪಿಸಲ್ಪಟ್ಟಿತು?

ಇ) ಕಾಂಗ್ರೆಸ್ಸಿನ ಮೊದಲ ಅಧಿವೇಶನ ಎಲ್ಲಿ ನಡೆಯಿತು? ಇದರ ಅಧ್ಯಕ್ಷತೆಯನ್ನು ಯಾರು ವಹಿಸಿದ್ದರು?

ಈ) ಕಾಂಗ್ರೆಸ್ಸಿನ ಮೊದಲ ಅಧಿವೇಶನದಲ್ಲಿ ಭಾಗವಹಿಸಿದ್ದ ಕೆಲವು ನಾಯಕರನ್ನು ಹೆಸರಿಸಿ.

3. ತೀವ್ರಗಾಮಿಗಳು.

ಅ) ಕೆಲವು ತೀವ್ರಗಾಮಿ ನಾಯಕರುಗಳ ಹೆಸರುಗಳನ್ನು ತಿಳಿಸಿ.

ಆ) ತಿಲಕರ ಘೋಷಣೆಗಳು ಯಾವುವು?

ಇ) ತಿಲಕರು, ಸಂಘಟಿಸಿದ ಹಬ್ಬಗಳನ್ನು ತಿಳಿಸಿ.

ಈ) ತೀವ್ರಗಾಮಿ ರಾಷ್ಟ್ರೀಯವಾದಿಗಳ ಬಯಕೆ ಏನು?

4. ಜಲಿಯನ್ ವಾಲಾಬಾಗ್ ಹತ್ಯಾಕಾಂಡ

ಅ) ಬಂಧಿಸಲ್ಪಟ್ಟ ಪ್ರಮುಖ ನಾಯಕರು ಯಾರು?

ಆ) ಜನರು ಯಾವ ಸ್ಥಳದಲ್ಲಿ ಸಭೆಸೇರಿದರು?

ಇ) ಅಮೃತಸರದ ಬ್ರಿಟಿಷ್ ಸೇನಾ ದಂಡನಾಯಕ ಯಾರು?

ಈ) ರವೀಂದ್ರನಾಥ ಠಾಗೂರರು ಯಾವುದನ್ನು ಹಿಂದಿರುಗಿಸಿದರು?

ಊ. ವಿವರವಾಗಿ ಉತ್ತರಿಸಿ:–


1. ರಾಷ್ಟ್ರೀಯ ಚಳುವಳಿಯ ಉದಯಕ್ಕೆ ಐದು ಕಾರಣಗಳನ್ನು ತಿಳಿಸಿ.
2. ಬಂಗಾಳದ ವಿಭಜನೆಯ ಬಗ್ಗೆ ವಿವರಿಸಿ.

ಋ. ಕಾಲರೇಖೆ:

1. 1885 ರಿಂದ 1919 ರವರೆಗಿನ ಘಟನೆಗಳನ್ನು ಕಾಲರೇಖೆಯಲ್ಲಿ ಬರೆಯಿರಿ.

12. ಭಾರತದ ಸ್ವಾತಂತ್ರ್ಯ ಚಳುವಳಿ – ಎರಡನೇ ಹಂತ
ಗಾಂಧಿ ಯುಗ (ಕ್ರಿ.ಶ. 1920 – 1947)

ಬಾಲಗಂಗಾಧರ ತಿಲಕರು 1920ರಲ್ಲಿ ಮರಣ ಹೊಂದಿದ ನಂತರ ಗಾಂಧೀಜಿಯವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರಾದರು. ಗಾಂಧೀಜಿಯವರ ನೇತೃತ್ವದಲ್ಲಿ ಭಾರತೀಯ ರಾಷ್ಟ್ರೀಯ ಚಳುವಳಿಯು ಸ್ವಾತಂತ್ರ್ಯಕ್ಕೆ ಮುಂದಾಯಿತು. ಇದು ಭಾರತೀಯರಲ್ಲಿ ಹೊಸ ಆರಂಭವನ್ನು, ಜಾಗೃತಿಯನ್ನು ಉಂಟು ಮಾಡಿತು. ಭಾರತದ ರಾಜಕೀಯದಲ್ಲಿ ಗಾಂಧೀಜಿಯವರ ಆಗಮನದಿಂದ ಭಾರತೀಯರು ನವಚೈತನ್ಯವನ್ನು ಮತ್ತು ಹಿರಿಮೆಯನ್ನು ಹೊಂದಿದರು. ರಾಷ್ಟ್ರಪಿತ ಎಂದು ಕರೆಯಲ್ಪಟ್ಟ ಗಾಂಧೀಜಿಯವರು ಸ್ವಾತಂತ್ರ್ಯ ಹೋರಾಟದಲ್ಲಿ ಸತ್ಯಾಗ್ರಹ ಎಂಬ ಹೊಸ ತಂತ್ರವನ್ನು ಅನುಸರಿಸಿದರು. ಇದು ಸತ್ಯ ಮತ್ತು ಅಹಿಂಸೆಯ ಆಧಾರವಾಗಿತ್ತು.



ಮಹಾತ್ಮಾ ಗಾಂಧಿ

ಅಸಹಕಾರ ಚಳುವಳಿ ಕ್ರಿ.ಶ. 1920 – ಕ್ರಿ.ಶ. 1922.

ರೌಲತ್ ಶಾಸನವನ್ನು ವಿರೋಧಿಸಿಯೂ, ಜಲಿಯನ್‌ವಾಲಾಬಾಗ್ ಕಗ್ಗೊಲೆಯನ್ನು ಖಂಡಿಸಿಯೂ, ಮಾಂಟೆಗೂ–ಚೆಲ್ಮ್ಸ್‌ಫೋರ್ಡ್ ಸುಧಾರಣೆಯ ಕಾನೂನಿನ ಅನಾನುಕೂಲವನ್ನು ಬ್ರಿಟಿಷರಿಗೆ ಮನವರಿಕೆ ಮಾಡಿಕೊಡಲು ಕಲ್ಕತ್ತಾದಲ್ಲಿ ನಡೆದ ಕಾಂಗ್ರೆಸ್ ಮಹಾಧಿವೇಶನದಲ್ಲಿ ಅಸಹಕಾರ ಚಳುವಳಿಯನ್ನು ನಡೆಸುವುದೆಂದು ಗಾಂಧೀಜಿಯವರು ಪ್ರಕಟಿಸಿದರು. ಇದರ ಪ್ರಕಾರ ಕಾಂಗ್ರೆಸ್ ಪಕ್ಷವು 1920ರಲ್ಲಿ ಅಸಹಕಾರ ಚಳುವಳಿಯನ್ನು ಪ್ರಾರಂಭಿಸಿತು. ಈ ಚಳುವಳಿಯು ಮೂರು ಹಂತಗಳಲ್ಲಿ ಅನುಸರಿಸಲ್ಪಟ್ಟಿತ್ತು. ಮೊದಲನೆಯ ಹಂತವಾಗಿ ಬ್ರಿಟಿಷ್ ಸರ್ಕಾರದಿಂದ ಪಡೆದ ಬಿರುದುಗಳು, ಪದವಿಗಳನ್ನು ಹಿಂದಿರುಗಿಸಿದರು. ಎರಡನೆಯ ಹಂತವಾಗಿ ಉದ್ಯೋಗಗಳನ್ನು ಬಹಿಷ್ಕರಿಸಿ ಬೃಹತ್ ಹೋರಾಟಗಳನ್ನು ನಡೆಸಿದರು. ಎಲ್ಲಾ ಸರಕಾರಿ ಕಛೇರಿಗಳು, ಶಾಲಾ ಕಾಲೇಜುಗಳು ಮತ್ತು ನ್ಯಾಯಾಲಯಗಳ ಕಾರ್ಯ ಕಲಾಪಗಳೆಲ್ಲವನ್ನೂ ಬಹಿಷ್ಕರಿಸಿದರು. ಪ್ರಮುಖ ನಾಯಕರುಗಳು ಬಂಧಿಸಲ್ಪಟ್ಟರು.

ಮೂರನೆಯ ಪ್ರಮುಖ ಮತ್ತು ಕೊನೆಯ ಹಂತವಾಗಿ ತೆರಿಗೆ ಪಾವತಿಸದಿರುವ ಚಳುವಳಿಯನ್ನು ಪ್ರಾರಂಭಿಸಲಾಯಿತು. 1921ರಲ್ಲಿ ಅಹಮದಬಾದ್ ನಲ್ಲಿ ನಡೆದ ಕಾಂಗ್ರೆಸ್ ಸಮ್ಮೇಳನದಲ್ಲಿ ಸರಕಾರವು ತಮ್ಮ ಬೇಡಿಕೆಗಳನ್ನು ಈಡೇರಿಸುವವರೆಗೆ ಜನರು ಸರಕಾರಕ್ಕೆ ತೆರಿಗೆಯನ್ನು ಸಲ್ಲಿಸಬಾರದು ಎಂಬ ತೀರ್ಮಾನವನ್ನು ಕೈಗೊಳ್ಳಲಾಯಿತು. ಅಸಹಕಾರ ಚಳುವಳಿಯು ಸಂಪೂರ್ಣವಾಗಿ ಅಂಗಡಿಗಳನ್ನು ಮುಚ್ಚಿಸುವುದು, ಉದ್ಯೋಗ ಬಹಿಷ್ಕಾರದಂತಹ ಕ್ರಮಗಳನ್ನು ದೇಶದಾದ್ಯಂತ ನಡೆಸಿತು. ಉಗ್ರ ಹೋರಾಟಗಳು ತಲೆ ಎತ್ತಿದವು.

ಚೌರಿ ಚೌರಾ ಘಟನೆ – 1922

ಅಸಹಕಾರ ಚಳುವಳಿಯ ಸಂದರ್ಭದಲ್ಲಿ ಗಾಂಧೀಜಿಯವರು, ಯಾವುದೇ ವಿಧವಾದ ಮುಷ್ಕರದಲ್ಲಿಯೂ ಭಾಗವಹಿಸಬಾರದೆಂದು ದೇಶದ ಪ್ರಜೆಗಳಿಗೆ ಮನವಿ ಮಾಡಿಕೊಂಡರು. ಆದರೂ ಗಲಭೆಗಳು ಹಲವು ಸ್ಥಳಗಳಲ್ಲಿ ಪ್ರಾರಂಭವಾದವು. 1922ರ, ಫೆಬ್ರವರಿ 5ರಂದು ಉತ್ತರ ಪ್ರದೇಶದಲ್ಲಿ ಚೌರಿ ಚೌರಾ (ಗೋರಖ್‌ಪುರ) ಎಂಬ ಸ್ಥಳದಲ್ಲಿ ಸುಮಾರು ಒಂದು ಸಾವಿರ ರೈತರು ಬೃಹತ್ ಚಳುವಳಿಯಲ್ಲಿ ಭಾಗವಹಿಸಿದರು. ಈ ಚಳುವಳಿಯ ಸಂದರ್ಭದಲ್ಲಿ ಶಾಂತಿ ರೀತಿಯಲ್ಲಿ ಹೊರಟಿದ್ದ ರೈತರ ಮೇಲೆ ಪೋಲೀಸರು ತುಪಾಕಿಯಿಂದ ಗುಂಡು ಹಾರಿಸಿದರು. ಇದರಿಂದ ಉದ್ರಿಕ್ತಗೊಂಡ ರೈತರು ತಾಳ್ಮೆ ಕಳೆದುಕೊಂಡು ಪೋಲೀಸ್ ಠಾಣೆಯನ್ನು ಮುತ್ತಿಗೆ ಹಾಕಿ ಬೆಂಕಿ

ಹಚ್ಚಿದರು. ಇದರಲ್ಲಿ 22 ಮಂದಿ ಪೋಲೀಸರು ಜೀವಂತವಾಗಿ ಸುಟ್ಟು ಭಸ್ಮವಾದರು. ಈ ಘಟನೆಯಿಂದ ಮನನೊಂದ ಗಾಂಧೀಜಿಯವರು ಅಸಹಕಾರ ಚಳುವಳಿಯನ್ನು ತಕ್ಷಣದಲ್ಲೇ ನಿಲ್ಲಿಸಿಬಿಟ್ಟರು. ಆದರೆ ಗಾಂಧೀಜಿಯವರು ತಕ್ಷಣವೇ ಬಂಧನಕ್ಕೊಳಗಾದರು. ಇದರಿಂದಾಗಿ ರಾಷ್ಟ್ರೀಯ ಚಳುವಳಿಗೆ ಸಂಬಂಧಿಸಿದ ಕ್ರಮಗಳನ್ನು ಕೆಲವು ವರ್ಷಗಳವರೆಗೆ ಕೈಬಿಡಲಾಯಿತು. ಗಾಂಧೀಜಿಯವರು ಹಿಂದೂ – ಮುಸ್ಲೀಮರ ಏಕತೆ, ಅಸ್ಪೃಶ್ಯತೆ ನಿವಾರಣೆ ಮತ್ತು ಮಹಿಳೆಯರ ಏಳಿಗೆಗಾಗಿ ದುಡಿದರು.

ಸ್ವರಾಜ್ಯ ಪಕ್ಷ – ಕ್ರಿ.ಶ. 1923 – 1925

1923ರಲ್ಲಿ ರಾಷ್ಟ್ರೀಯ ಚಳುವಳಿಯನ್ನು ಮುನ್ನಡೆಸಲು ರಾಷ್ಟ್ರ ನಾಯಕರುಗಳಾದ ಚಿತ್ತರಂಜನ್ ದಾಸ್ ಮತ್ತು ಮೋತಿಲಾಲ್ ನೆಹರು ಒಂದುಗೂಡಿ ಸ್ವರಾಜ್ಯ ಪಕ್ಷವನ್ನು ಸ್ಥಾಪಿಸಿದರು. ಈ ಪಕ್ಷವು, ಗಾಂಧೀಜಿಯವರನ್ನು ಬಂಧಿಸಿದ ನಂತರ ಸ್ವಾತಂತ್ರ್ಯ ಹೋರಾಟದ ಮುಂದಾಳತ್ವ ವಹಿಸಿ ನಡೆಸಿತು. ಶಾಸನಸಭೆಗಳಿಂದ ಹೊರನಡೆಯುವುದನ್ನು ತಪ್ಪಿಸಿ ಬ್ರಿಟಿಷ್ ಸರ್ಕಾರವನ್ನು ಶಾಸನಸಭೆಗಳಲ್ಲಿಯೇ ವಿರೋಧಿಸುವುದು ಎಂದು ಇದರ ನಾಯಕರು ಇಚ್ಛಿಸಿದರು. ಭಾರತದಲ್ಲಿ ಭಾರತೀಯರ ಸ್ವಯಂ ಆಡಳಿತವನ್ನು ಏರ್ಪಡಿಸಲು ಮತ್ತು ದುಂಡುಮೇಜಿನ ಸಮ್ಮೇಳನಗಳ ಮೂಲಕ ತಮ್ಮ ಕೋರಿಕೆಗಳನ್ನು ಪರಿಶೀಲಿಸಬೇಕೆಂದೂ ತೀರ್ಮಾನಗಳನ್ನು ಕೈಗೊಂಡರು. ಈ ಪಕ್ಷದ ಸ್ಥಾಪಕರಾದ ಚಿತ್ತರಂಜನ್ ದಾಸರು ಮರಣ ಹೊಂದಿದುದರಿಂದ 1925ರಲ್ಲಿ ಸ್ವರಾಜ್ಯ ಪಕ್ಷವೂ ತನ್ನ ಕಾರ್ಯಚಟುವಟಿಕೆಗಳಿಂದ ಸ್ಥಗಿತಗೊಂಡು ಕೊನೆಗೊಂಡಿತು.

ಸೈಮನ್ ರಾಯಭಾರ ಸಮಿತಿ. ಕ್ರಿ.ಶ. 1927 – 1928

1919ರಲ್ಲಿ ಜಾರಿಗೊಳಿಸಿದ ಮಾಂಟೆಗೋ –ಚೆಲ್ಮ್ಸ್‌ಫೋರ್ಡ್ ಕಾಯಿದೆಯು ಎಷ್ಟರ ಮಟ್ಟಿಗೆ ಉಪಯೋಗವಾಯಿತು ಎಂಬುದನ್ನು ಅಧ್ಯಯನ ಮಾಡಲು, ಭಾರತದ ಆಡಳಿತವನ್ನು ಅಭಿವೃದ್ಧಿ ಪಡಿಸಲು ಮತ್ತಷ್ಟು ಹಲವು ಸಲಹೆಗಳನ್ನು ನೀಡಲೂ ಸರ್ ಜಾನ್ ಸೈಮನ್ ನೇತೃತ್ವದಲ್ಲಿ 7 ಸದಸ್ಯರುಗಳನ್ನೊಳಗೊಂಡ ಒಂದು ಸಮಿತಿಯನ್ನು 1927ರಲ್ಲಿ ಬ್ರಿಟಿಷ್ ಸರಕಾರವು ನೇಮಿಸಿತು. ಇದನ್ನು **ಸೈಮನ್ ಸಮಿತಿ** ಎಂದು ಕರೆಯುವರು. ಈ ಸಮಿತಿಯಲ್ಲಿ ಸದಸ್ಯರಾಗಿದ್ದವರೆಲ್ಲರೂ ಬ್ರಿಟಿಷರೇ ಆಗಿದ್ದರು. ಒಬ್ಬ ಭಾರತೀಯ ಸದಸ್ಯನು ಸಹ ಈ ಸಮಿತಿಯಲ್ಲಿರಲಿಲ್ಲ. ಆದ್ದರಿಂದಲೇ ಈ ಸಮಿತಿಯು 1928ರಲ್ಲಿ ಭಾರತಕ್ಕೆ ಬಂದಾಗ ತೀವ್ರ ವಿರೋಧ ವ್ಯಕ್ತಪಡಿಸಿದರು. ಈ ಸಮಿತಿಯು ಹೋದ ಸ್ಥಳಗಳಲ್ಲೆಲ್ಲಾ ಕಪ್ಪು ಬಾವುಟ ಪ್ರದರ್ಶನ ಮಾಡಿ ಹೋರಾಟವನ್ನೂ, ವಿರೋಧವನ್ನು ವ್ಯಕ್ತಪಡಿಸಿದರು. **"ಸೈಮನ್ ಹಿಂತಿರುಗಿ ಹೋಗು"** ಎಂದು ದೇಶದಾದ್ಯಂತ ಘೋಷಣೆ ಮೊಳಗಿತು. ಬ್ರಿಟಿಷ್ ಸರಕಾರವು ವಿರೋಧಿಸುವವರನ್ನು ತೀವ್ರವಾಗಿ ದಾಳಿ ಮಾಡಿತು.



ಸೈಮನ್ ರಾಯಭಾರ ಸಮಿತಿ

"ಪಂಜಾಬ್ ಸಿಂಹ" ಎಂದು ಕರೆಯಲ್ಪಟ್ಟ ಲಾಲಾ ಲಜಪತರಾಯ್, ಸೈಮನ್ ಆಯೋಗವನ್ನು ವಿರೋಧಿಸಿದುದರಿಂದ ಪೋಲಿಸರು ನಡೆಸಿದ ಲಾಠಿ ಏಟಿಗೆ ಬಲಿಯಾಗಿ ಪ್ರಾಣ ಬಿಟ್ಟರು. ಭಗತ್‌ಸಿಂಗ್ ಮತ್ತು ಅನೇಕ ಕ್ರಾಂತಿಕಾರರು ಬ್ರಿಟಿಷರ ಮೇಲೆ ಸೇಡು ತೀರಿಸಿಕೊಳ್ಳಲು ಹಾತೊರೆದರು.

ಲಾಹೋರ್ ಕಾಂಗ್ರೆಸ್ ಅಧಿವೇಶನ – ಕ್ರಿ.ಶ. 1929

1929ರಲ್ಲಿ ಕಾಂಗ್ರೆಸ್ ಅಧಿವೇಶನವು ಲಾಹೋರಿನಲ್ಲಿ ಜವಹರಲಾಲ್ ನೆಹರೂರವರ ಅಧ್ಯಕ್ಷತೆಯಲ್ಲಿ ನಡೆಯಿತು. ಈ ಅಧಿವೇಶನದಲ್ಲಿ **ಪೂರ್ಣ ಸ್ವಾತಂತ್ರ್ಯ ಪಡೆಯುವುದೇ ಭಾರತದ ಉದ್ದೇಶ** ಎಂದು ಘೋಷಿಸಲಾಯಿತು. 1930ರ, ಡಿಸೆಂಬರ್ 31ರ ಮಧ್ಯರಾತ್ರಿಯಲ್ಲಿ **"ವಂದೇ ಮಾತರಂ"** ಎಂಬ ಗೀತೆಯ ಮೂಲಕ ರಾವಿ ನದಿ ದಡದಲ್ಲಿ ಭಾರತದ ತ್ರಿವರ್ಣ ಧ್ವಜವನ್ನು ಹಾರಿಸಲಾಯಿತು. ಇದಾದ ನಂತರ ಜನವರಿ 26, 1930ರಲ್ಲಿ ದೇಶದಾದ್ಯಂತ ಸ್ವಾತಂತ್ರ್ಯ ದಿನವೆಂದು ಆಚರಿಸಲಾಯಿತು. ಇದೇ ದಿನದಂದು 1950ರ ಜನವರಿ

26ರಂದು ಭಾರತದ ಸಂವಿಧಾನವು ಜಾರಿಗೆ ಬಂದಿತು. ಆದ್ದರಿಂದ ಜನವರಿ 26ರ ದಿನವನ್ನು ಇಂದಿಗೂ ಗಣರಾಜ್ಯ ದಿನವನ್ನಾಗಿ ಆಚರಿಸುತ್ತಾ ಬರುತ್ತಿದ್ದೇವೆ.

ಕಾನೂನು ಭಂಗ ಚಳುವಳಿ ಅಥವಾ ಉಪ್ಪಿನ ಸತ್ಯಾಗ್ರಹ _ ಕ್ರಿ.ಶ. 1930

ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆಯುವ ಉದ್ದೇಶದಿಂದ ಗಾಂಧೀಜಿಯವರು 1930ರಲ್ಲಿ ಕಾನೂನು ಭಂಗ ಚಳುವಳಿಯನ್ನು ಆರಂಭಿಸಿದರು. ಲಕ್ಷಾಂತರ ಜನರು ಉಪಯೋಗಿಸುತ್ತಿರುವ ಉಪ್ಪಿನ ಮೇಲೆ ಬ್ರಿಟಿಷ್ ಸರಕಾರವು ತೆರಿಗೆಯನ್ನು ವಿಧಿಸಿತು. ಇದು ಬಡ ಜನರ ಮೇಲೆ ಪರಿಣಾಮ ಬೀರಿತು. ಆದ್ದರಿಂದಲೇ ಇದನ್ನು ವಿರೋಧಿಸಿ ಗಾಂಧೀಜಿಯವರು 1930ರ ಮಾರ್ಚ್ 12ರಂದು ಕಾನೂನು ಭಂಗ ಚಳುವಳಿಯನ್ನು ಕೈಗೊಂಡರು.



ದಂಡಿ ಯಾತ್ರೆ

ಸರೋಜಿನಿ ನಾಯ್ಡು ರವರೂ ಸೇರಿದಂತೆ ಸುಮಾರು 78 ಜನರೊಂದಿಗೆ ಗಾಂಧೀಜಿಯವರು ಅಹಮದಾಬಾದಿನಲ್ಲಿರುವ ಸಬರಮತಿ ಆಶ್ರಮದಿಂದ ಪಾದಯಾತ್ರೆಯನ್ನು ಪ್ರಾರಂಭಿಸಿ ಸುಮಾರು 400 ಕಿಲೋಮೀಟರ್‌ಗಳವರೆಗೆ ಪ್ರಯಾಣ ಬೆಳೆಸಿ ಗುಜರಾತಿನ ಸಮುದ್ರ ತೀರದಲ್ಲಿರುವ ದಂಡಿಯನ್ನು ತಲುಪಿದರು. ಇದನ್ನು ದಂಡಿಯಾತ್ರೆ ಅಥವಾ ಉಪ್ಪಿನ ಸತ್ಯಾಗ್ರಹ ಎಂದು ಕರೆಯಲಾಯಿತು. ಮಾರ್ಗ ಮಧ್ಯದಲ್ಲಿ ಸಾವಿರಾರು ಜನರು ಗಾಂಧೀಜಿಯವರೊಡನೆ ಸೇರಿ ಪಾದಯಾತ್ರೆ ಕೈಗೊಂಡರು.

ದಂಡಿಯಲ್ಲಿ ಸಮುದ್ರದ ನೀರಿನಿಂದ ಉಪ್ಪನ್ನು ತಯಾರಿಸಿ ಏಪ್ರಿಲ್ 6ರಂದು ಉಪ್ಪಿನ ಕಾಯಿದೆಯನ್ನು ಮುರಿದರು. ಗಾಂಧೀಜಿಯವರನ್ನು ಬಂಧಿಸಿ ಸೆರಮನೆಗೆ ಹಾಕಲಾಯಿತು. ತಮಿಳುನಾಡಿನಲ್ಲಿ ಸಿ. ರಾಜಗೋಪಾಲಾಚಾರಿ ಯವರ ನೇತೃತ್ವದಲ್ಲಿ ತಿರುಚ್ಚಿಯಿಂದ ಅನುಯಾಯಿಗಳು ಪಾದಯಾತ್ರೆಯನ್ನು ಕೈಗೊಂಡು ತಂಜಾವೂರಿನ ಸಮುದ್ರ ತೀರದ ಭಾಗದಲ್ಲಿ ವೇದಾರಣ್ಯ ಎಂಬಲ್ಲಿ ಉಪ್ಪಿನ ಮೇಲಿನ ಕಾನೂನುಗಳನ್ನು ಮೀರಿ ಉಪ್ಪನ್ನು ತಯಾರಿಸಿದರು.

ದುಂಡು ಮೇಜಿನ ಸಮ್ಮೇಳನಗಳು 1930 _ 1932

ಮೊದಲನೇ ದುಂಡು ಮೇಜಿನ ಸಮ್ಮೇಳನ _ 1930

ಕಾನೂನು ಭಂಗ ಚಳುವಳಿಯನ್ನು ಬ್ರಿಟಿಷ್ ಸರ್ಕಾರದಿಂದ ನಿಯಂತ್ರಿಸಲಾಗಲಿಲ್ಲ. ಆದ್ದರಿಂದಲೇ ಭಾರತದ ರಾಜಕೀಯ ಸಮಸ್ಯೆಗಳನ್ನು ಪರಿಹರಿಸುವ ಪ್ರಯತ್ನದಲ್ಲಿ ಬ್ರಿಟಿಷ್ ಸರ್ಕಾರವು ತೊಡಗಿಸಿಕೊಂಡಿತು. ಆದ್ದರಿಂದ 1930ರಲ್ಲಿ ಲಂಡನ್ ನಗರದಲ್ಲಿ ಮೊದಲನೇ ದುಂಡು ಮೇಜಿನ ಸಮ್ಮೇಳನವು ನಡೆಯಿತು. ಕಾನೂನು ಭಂಗ ಚಳುವಳಿಯು ಭಾರತದಲ್ಲಿ ನಡೆಯುತ್ತಿದ್ದುದರಿಂದ ಕಾಂಗ್ರೆಸ್ ಪಕ್ಷವು ಈ ಸಮ್ಮೇಳನದಲ್ಲಿ ಭಾಗವಹಿಸಲಿಲ್ಲ. ಇದರಿಂದ ಈ ಸಮ್ಮೇಳನವು ವಿಫಲವಾಯಿತು.

ಗಾಂಧಿ – ಇರ್ವಿನ್ ಒಪ್ಪಂದ _ 1931

ಮೊದಲನೇ ದುಂಡು ಮೇಜಿನ ಪರಿಷತ್ತು ಸೋಲಿನಲ್ಲಿ ಮುಕ್ತಾಯವಾದುದರಿಂದ ಯಾವುದೇ ತೀರ್ಮಾನವನ್ನು ಕೈಗೊಳ್ಳಲಾಗಲಿಲ್ಲ. ಆದ್ದರಿಂದ ಬ್ರಿಟಿಷ್ ಸರ್ಕಾರವು ಲಾರ್ಡ್ ಇರ್ವಿನ್ ನನ್ನು ಗಾಂಧೀಜಿಯವರನ್ನು ಭೇಟಿ ಮಾಡಲು ಭಾರತಕ್ಕೆ ಕಳುಹಿಸಿತು. ಇವರಿಬ್ಬರ ನಡುವೆ ಚರ್ಚೆ ನಡೆಯಿತು. ಇದರ ಅಂತ್ಯದಲ್ಲಿ 1931ರಲ್ಲಿ ಗಾಂಧಿ – ಇರ್ವಿನ್ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಈ ಒಪ್ಪಂದದಂತೆ ಕಾನೂನು ಭಂಗ ಚಳುವಳಿಯನ್ನು ಕೈಬಿಡುವುದೆಂದೂ, ಎರಡನೇ ದುಂಡು ಮೇಜಿನ ಸಮ್ಮೇಳನದಲ್ಲಿ ಭಾಗವಹಿಸುವುದೆಂದೂ ಕಾಂಗ್ರೆಸ್ ಪಕ್ಷವು ಒಪ್ಪಿಕೊಂಡಿತು. ಇದಕ್ಕೆ ಬದಲಾಗಿ ಬ್ರಿಟಿಷ್ ಸರ್ಕಾರವು ಚಳುವಳಿಯಲ್ಲಿ ಭಾಗವಹಿಸಿದ್ದವರೆಲ್ಲರನ್ನು ಬಿಡುಗಡೆ ಮಾಡುವುದು, ಉಪ್ಪಿನ ಮೇಲಿನ ಕಾನೂನನ್ನು, ತೆರಿಗೆಯನ್ನೂ ಹಿಂದಕ್ಕೆ ಪಡೆಯುವುದೆಂದೂ ಒಪ್ಪಿಕೊಂಡಿತು.

ಎರಡನೇ ದುಂಡು ಮೇಜಿನ ಸಮ್ಮೇಳನ _ 1931

ಎರಡನೇ ದುಂಡು ಮೇಜಿನ ಸಮ್ಮೇಳನವು ಲಂಡನ್ನಿನಲ್ಲಿ 1931ರಲ್ಲಿ ನಡೆಯಿತು. ಗಾಂಧಿ–ಇರ್ವಿನ್ ಒಪ್ಪಂದದಂತೆ ಗಾಂಧೀಜಿಯವರು ಈ ಸಮ್ಮೇಳನದಲ್ಲಿ ಭಾಗವಹಿಸಿದರು. ಸಂಪೂರ್ಣ ಸ್ವಾತಂತ್ರ್ಯ, ವರ್ಣಬೇಧ ಸಮಸ್ಯೆ ಮುಂತಾದವುಗಳಿಗೆ ಈ ಸಮ್ಮೇಳನದಲ್ಲಿ ಯಾವುದೇ ಪರಿಹಾರ ಸಿಗಲಿಲ್ಲ. ಆದ್ದರಿಂದ ಗಾಂಧೀಜಿಯವರು ಅತಿ ಬೇಸರಗೊಂಡು ಭಾರತಕ್ಕೆ ಹಿಂದಿರುಗಿದರು. ಗಾಂಧೀಜಿಯವರು ದೇಶಕ್ಕೆ ಹಿಂತಿರುಗಿದೊಡನೆ ಬಂಧಿಸಲ್ಪಟ್ಟರು.



ಎರಡನೇ ದುಂಡು ಮೇಜಿನ ಸಮ್ಮೇಳನ

ಕಾಂಗ್ರೆಸ್ ಪಕ್ಷಕ್ಕೆ ತಡೆ ಹಾಕಲಾಯಿತು. ಇದರಿಂದ ಕಾನೂನು ಭಂಗ ಚಳುವಳಿಯು ಭಾರತದಲ್ಲಿ ಪುನ: ಪ್ರಾರಂಭವಾಯಿತು.

ಕೋಮುವಾರು ಪ್ರಾತಿನಿಧ್ಯ ಪ್ರಕಟಣೆ ಮತ್ತು ಪೂನಾ ಒಪ್ಪಂದ _ 1932

ಎರಡನೇ ದುಂಡುಮೇಜಿನ ಸಮ್ಮೇಳನದ ಕೊನೆಯಲ್ಲಿ ಇಂಗ್ಲೆಂಡಿನ ಪ್ರಧಾನಿ ರಾಮ್ಸೆ ಮೇಕ್‌ಡೋನಾಲ್ಡ್ ಕೋಮುವಾರು ಪ್ರಾತಿನಿಧ್ಯ ವರದಿಯನ್ನು 1932ರಲ್ಲಿ ಪ್ರಕಟಿಸಿದನು. ಆ ವರದಿಯಲ್ಲಿ ಅಲ್ಪಸಂಖ್ಯಾತರಿಗೂ, ಪರಿಶಿಷ್ಟ ಜನಾಂಗದವರಿಗೂ ಪ್ರತ್ಯೇಕ ಮೀಸಲಾತಿಯನ್ನು ನೀಡಲಾಗುವುದೆಂದು ಪ್ರಕಟಿಸಲಾಯಿತು. ಆ ಯೋಜನೆಯನ್ನು ಪರಿಶಿಷ್ಟ ಜನರ ನೇತಾರರಾದ ಡಾ॥ ಬಿ.ಆರ್. ಅಂಬೇಡ್ಕರ್ ಸ್ವಾಗತಿಸಿದರು.ಇದನ್ನು ಒಪ್ಪದೆ ನಿರಾಕರಿಸಿದ ಗಾಂಧೀಜಿಯವರು ಆಮರಣಾಂತ ಉಪವಾಸ ಸತ್ಯಾಗ್ರಹವನ್ನು ಕೈಗೊಂಡರು. 1932ರಲ್ಲಿ ಅಂಬೇಡ್ಕರ್‌ರೊಂದಿಗೆ ಏರ್ಪಟ್ಟ ಪೂನಾ ಒಪ್ಪಂದದ ನಂತರ ತಮ್ಮ ಸತ್ಯಾಗ್ರಹವನ್ನು ಕೈಬಿಟ್ಟರು. ಈ ಒಪ್ಪಂದದಂತೆ ಅಸ್ಪೃಶ್ಯರಿಗೆ ಪ್ರತ್ಯೇಕ ಸ್ಥಾನ ಮೀಸಲಾತಿಯನ್ನು ಕೈಬಿಡಲಾಯಿತು. ಶಾಸನ ಸಭೆಯಲ್ಲಿ ಪರಿಶಿಷ್ಟ ಜನಾಂಗದವರಿಗೆ ಅಧಿಕ ಸಂಖ್ಯೆಯ ಸ್ಥಾನಗಳನ್ನು ನೀಡಲು ಒಪ್ಪಿಕೊಳ್ಳಲಾಯಿತು. ಇದರ ಮೂಲಕ ಹಿಂದೂಗಳಿಂದ ಅಸ್ಪೃಶ್ಯರನ್ನು ಪ್ರತ್ಯೇಕಿಸುವ ಬ್ರಿಟಿಷರ ಉಪಾಯಕ್ಕೆ ಸೋಲುಂಟಾಯಿತು.

ಮೂರನೇ ದುಂಡು ಮೇಜಿನ ಸಮ್ಮೇಳನ_1932

1932ರಲ್ಲಿ ಮೂರನೇ ದುಂಡು ಮೇಜಿನ ಸಮ್ಮೇಳನವು ಲಂಡನ್ನಿನಲ್ಲಿ ನಡೆಯಿತು. ಕಾಂಗ್ರೆಸ್ಸಿನ ನಾಯಕರು ಈ ಸಮ್ಮೇಳನದಲ್ಲಿ ಭಾಗವಹಿಸಲಿಲ್ಲ. ಆದ್ದರಿಂದಲೇ ಈ ಸಮ್ಮೇಳನವು ಸೋಲಿನಲ್ಲಿ ಮುಕ್ತಾಯವಾಯಿತು.

1935ರ ಭಾರತ ಸರ್ಕಾರದ ಕಾಯಿದೆ

ಭಾರತ ಸರ್ಕಾರದ ಕಾಯಿದೆಯು 1935ರಲ್ಲಿ ಜಾರಿಗೆ ಬಂದಿತು. ಈ ಕಾಯಿದೆಯು ಸೈಮನ್ ಸಮಿತಿಯ ವರದಿ ಮತ್ತು ಮೂರು ದುಂಡು ಮೇಜಿನ ಸಮ್ಮೇಳನಗಳಲ್ಲಿ ಕೈಗೊಂಡ ತೀರ್ಮಾನಗಳ ಆಧಾರದ ಮೇಲೆ ರಚಿಸಲ್ಪಟ್ಟಿತು. ಈ ಕಾಯಿದೆಯು ಹಲವಾರು ಬದಲಾವಣೆಗಳನ್ನು ಪರಿಚಯಿಸಿತು.

1.ಪ್ರಾಂತ್ಯಗಳಲ್ಲಿ ಸ್ವಯಂ ಆಡಳಿತ ಪರಿಚಯಿಸಲ್ಪಟ್ಟಿತು.

2. ಪ್ರಾಂತ್ಯಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ದ್ವಿ ಆಡಳಿತವು ಕೊನೆಗೊಂಡಿತು.

3. ಕೇಂದ್ರದಲ್ಲಿ ಒಕ್ಕೂಟ ಸರ್ಕಾರವನ್ನು ರಚಿಸಲಾಯಿತು.

4. ರಾಜ್ಯಗಳ ನಡುವೆ ಏರ್ಪಡುವ ಸಮಸ್ಯೆಗಳನ್ನು ಪರಿಹರಿಸಲು ಒಕ್ಕೂಟ ನ್ಯಾಯಾಲಯವು (ಸುಪ್ರೀಂ ಕೋರ್ಟು) ಸ್ಥಾಪಿಸಲ್ಪಟ್ಟಿತು.

5. ಫೆಡರಲ್ ರಿಸರ್ವ್ ಬ್ಯಾಂಕ್ ಸ್ಥಾಪನೆ. _ ಇತ್ಯಾದಿಗಳಾಗಿವೆ.

ಎರಡನೇ ಮಹಾಯುದ್ಧ 1939 _ 1945

1935ರಲ್ಲಿ ಭಾರತ ಸಂವಿಧಾನದಂತೆ, 1937ರಲ್ಲಿ ರಾಜ್ಯಗಳಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಿತು. ಈ

ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು 9 ರಾಜ್ಯಗಳಲ್ಲಿ ಜಯಗಳಿಸಿ, ಮಂತ್ರಿ ಮಂಡಲವನ್ನು ರಚಿಸಿತು. ಕಾಂಗ್ರೆಸ್ ಮಂತ್ರಿ ಮಂಡಲವು ಸಾರ್ವಜನಿಕರ ಹಿತಕ್ಕಾಗಿ ಹಲವು ಯೋಜನೆಗಳನ್ನು ರೂಪಿಸಿ ಅವುಗಳನ್ನು ಜಾರಿಗೊಳಿಸಿ ಬಹುತೇಕ ಯಶಸ್ಸನ್ನು ಕಂಡಿತು. ಆದರೆ ಈ ಯೋಜನೆಗಳೆಲ್ಲವೂ 1939ರಲ್ಲಿ ಎರಡನೇ ಮಹಾಯುದ್ಧವು ಪ್ರಾರಂಭವಾಗುವವರೆಗೆ ಶಾಂತಿಯುತವಾಗಿ ಕಾರ್ಯಗತಗೊಳಿಸಲ್ಪಟ್ಟವು.

ಇಂತಹ ಪರಿಸ್ಥಿತಿಯಲ್ಲಿ ಬ್ರಿಟಿಷ್ ಸರ್ಕಾರವು ಕಾಂಗ್ರೆಸ್ ನಾಯಕರೊಡನೆ ಸಮಾಲೋಚಿಸದೆ ಭಾರತವನ್ನು ಎರಡನೇ ಮಹಾಯುದ್ಧದಲ್ಲಿ ಭಾಗವಹಿಸುವಂತೆ ಮಾಡಿತು. ಭಾರತವನ್ನು ಯುದ್ಧದಲ್ಲಿ ಭಾಗವಹಿಸುವಂತೆ ಮಾಡಿದುದು ಕಾಂಗ್ರೆಸ್‌ಗೆ ಇಷ್ಟವಾಗಲಿಲ್ಲ. ಹೀಗಾಗಿ ತಮ್ಮ ವಿರೋಧವನ್ನು ವ್ಯಕ್ತಪಡಿಸುವ ರೀತಿಯಲ್ಲಿ 1939ರಲ್ಲಿ ಕಾಂಗ್ರೆಸ್ 8 ರಾಜ್ಯಗಳಲ್ಲಿ ಮಂತ್ರಿ ಮಂಡಲಗಳಿಗೆ ರಾಜೀನಾಮೆ ನೀಡಿತು. ಕಾಂಗ್ರೆಸ್ ಪಕ್ಷವು ರಾಜೀನಾಮೆ ಸಲ್ಲಿಸಿದುದನ್ನು ಮುಸ್ಲಿಂ ಲೀಗ್ ಪಕ್ಷದ ಅಧ್ಯಕ್ಷ ಮಹಮದ್ ಅಲಿ ಜಿನ್ನಾ ಸ್ವಾಗತಿಸಿ, ಉತ್ಸಾಹದಿಂದ ಕೊಂಡಾಡಿದರು. ಅವರು ಆ ದಿನವಾದ 1939ರ ಡಿಸೆಂಬರ್, 22ರ ದಿನವನ್ನು ಸ್ವಾತಂತ್ರ್ಯ ದಿನವನ್ನಾಗಿ ಆಚರಿಸಿದರು. ಇದಾದ ನಂತರ ಅವರು ಹಿಂದೂ ಮತ್ತು ಮುಸಲ್ಮಾನರು ಒಂದಾಗಿ ಇರಲು ಸಾಧ್ಯವಿಲ್ಲವೆಂದೂ, ಅವರುಗಳಿಗೆ ಪ್ರತ್ಯೇಕವಾಗಿ ಎರಡು ರಾಷ್ಟ್ರಗಳು ಅಗತ್ಯವೆಂದೂ ಹೇಳಿದರು.

ಪಾಕಿಸ್ಥಾನದ ಬೇಡಿಕೆ _ 1940

ಮಹಮದ್ ಅಲಿ ಜಿನ್ನಾ 1940ರಲ್ಲಿ ಲಾಹೋರಿನಲ್ಲಿ ನಡೆದ ಮುಸ್ಲೀಂ ಲೀಗ್ ಪಕ್ಷದ ಅಧಿವೇಶನದಲ್ಲಿ ತಮ್ಮ ಪ್ರತ್ಯೇಕ ರಾಷ್ಟ್ರದ ಬೇಡಿಕೆಯನ್ನು ಮುಂದಿಟ್ಟರು. ತಮ್ಮ ಎರಡು ದ್ವಿರಾಷ್ಟ್ರ ತತ್ವದ ಮೂಲಕ ಭಾರತ ದೇಶವನ್ನು ಹಿಂದೂಗಳಿಗೆ ಭಾರತ ಎಂದೂ, ಮುಸ್ಲೀಮರಿಗೆ ಪಾಕಿಸ್ಥಾನ ಎಂದೂ ವಿಭಾಗಿಸಬೇಕೆಂದು ಒತ್ತಾಯಿಸಿದರು. ಮುಸಲ್ಮಾನರ ತಾಯಿನಾಡು ಪಾಕಿಸ್ಥಾನವಾಗಬೇಕೆಂದೂ, ಮುಸಲ್ಮಾನರು ಅಧಿಕವಾಗಿ ವಾಸಿಸುವ ರಾಜ್ಯಗಳು ಪಾಕಿಸ್ಥಾನದೊಡನೆ ಸೇರಬೇಕೆಂದೂ ಪ್ರಕಟಿಸಿದರು.

ಆಗಸ್ಟ್ ಕೊಡುಗೆ _ 1940

ಬ್ರಿಟಿಷ್ ಸರ್ಕಾರದ ಪ್ರತಿನಿಧಿ ಲಿನ್‌ಲಿತ್‌ಗೋ ಭಾರತೀಯರನ್ನು ಎರಡನೇ ಮಹಾಯುದ್ಧದಲ್ಲಿ ಭಾಗವಹಿಸುವಂತೆ ಮಾಡಿದನು. ಇದನ್ನು ಕಾಂಗ್ರೆಸ್ ಪಕ್ಷವು ವಿರೋಧಿಸಿತು. ಕಾಂಗ್ರೆಸ್ ಪಕ್ಷವು ಆಡಳಿತ ನಡೆಸುವ ರಾಜ್ಯಗಳಲ್ಲಿ ಅಧಿಕಾರವನ್ನು ತ್ಯಜಿಸಿತು. ಇದರಿಂದ ಕಾಂಗ್ರೆಸ್ಸನ್ನು ತೃಪ್ತಿ ಪಡಿಸಲು ಕೆಲವು ಭರವಸೆಗಳನ್ನು ಲಿನ್‌ಲಿತ್‌ಗೋ ನೀಡಿದನು. ಇದರಂತೆ ಮಹಾಯುದ್ಧವು ಮುಗಿದ ತಕ್ಷಣವೇ ಭಾರತಕ್ಕೆ ನಿರ್ವಾಹಕ ಸಭೆಯನ್ನು ರಚಿಸಲು ಒಂದು ಸಮಿತಿಯನ್ನು ನೇಮಕ ಮಾಡಲಾಗುವುದೆಂದೂ, ಸರ್ಕಾರದ ಪ್ರತಿನಿಧಿಯ ನಿರ್ವಾಹಕ ಸಮಿತಿಯಲ್ಲಿ ಭಾರತೀಯರಿಗೆ ಸ್ಥಾನ ನೀಡಲಾಗುವುದೆಂದೂ ಭರವಸೆ ನೀಡಿದನು. ಇದು ಆಗಸ್ಟ್ ಕೊಡುಗೆ ಎಂದು ಕರೆಯಲ್ಪಟ್ಟಿತು. ಇದನ್ನು ಕಾಂಗ್ರೆಸ್ ಪಕ್ಷವು ಸಂಪೂರ್ಣವಾಗಿ ನಿರಾಕರಿಸಿತು.

ಕ್ರಿಪ್ಸ್ ರಾಯಭಾರ ಸಮಿತಿ _ 1942

ಎರಡನೇ ಮಹಾಯುದ್ಧದಲ್ಲಿ ಜಪಾನ್ ಇಂಗ್ಲೆಂಡ್ ವಿರುದ್ಧವಾಗಿ ಯುದ್ಧದಲ್ಲಿ ತೊಡಗಿತು. ಇಂಗ್ಲೆಂಡ್ ಯುದ್ಧದಲ್ಲಿ ಜಯಗಳಿಸಲು ಭಾರತದ ಸಹಕಾರವು ಅಗತ್ಯವಾಯಿತು. ಆದ್ದರಿಂದಲೇ ಕಾಂಗ್ರೆಸ್ಸಿನ ಸಹಕಾರವನ್ನು ಪಡೆಯಲು ಮತ್ತು ಭಾರತದ ರಾಜಕೀಯ ಸಮಸ್ಯೆಗಳಿಗೆ ಪರಿಹಾರ ಕಾಣಲು 1942ರಲ್ಲಿ ಸರ್ ಸ್ಟಾಫೋರ್ಡ್ ಕ್ರಿಪ್ಸ್ ಎಂಬುವವರ ನಾಯಕತ್ವದಲ್ಲಿ ರಾಯಭಾರ ಸಮಿತಿಯೊಂದನ್ನು ಭಾರತಕ್ಕೆ ಕಳುಹಿಸಿತು. ಈ ಸಮಿತಿಯು ಕ್ರಿಪ್ಸ್ ರಾಯಭಾರ ಸಮಿತಿ ಎಂದು ಕರೆಯಲ್ಪಟ್ಟಿತು.

ಈ ಸಮಿತಿಯು ಎರಡನೇ ಮಹಾಯುದ್ಧದಲ್ಲಿ ಬ್ರಿಟಿಷರಿಗೆ ಸಹಾಯ ಹಸ್ತವಾಗಿ ಭಾರತ ಇರಬೇಕೆಂದು ಪ್ರಕಟಿಸಿತು. ಯುದ್ಧದ ನಂತರ ಭಾರತೀಯರಿಗೆ ಡೊಮಿನಿಯನ್ ಅಂತಸ್ತು ನೀಡಲಾಗುವುದೆಂದು, ಭಾರತ ಸಂವಿಧಾನ ರಚನೆಗೆ ಹೊಸ ಯೋಜನೆಯನ್ನು ಪ್ರಕಟಿಸಲಾಗುವುದೆಂದೂ ಘೋಷಿಸಿತು. ಆದರೆ ಭಾರತಕ್ಕೆ ಸಂಪೂರ್ಣ ಸ್ವಾತಂತ್ರ್ಯ ನೀಡುವುದರ ಬಗ್ಗೆ ಯಾವುದೇ ಸೂಚನೆಯನ್ನು ನೀಡಲಿಲ್ಲ. ಆದ್ದರಿಂದಲೇ ಗಾಂಧೀಜಿಯವರು ಕ್ರಿಪ್ಸ್ ರಾಯಭಾರ ಸಮಿತಿಯ ದೃಢ ಹೇಳಿಕೆಯನ್ನು "ದಿವಾಳಿಯಾಗುತ್ತಿರುವ ಬ್ಯಾಂಕಿಗೆ ಮುಂದಿನ ದಿನಾಂಕದ ಚೆಕ್ಕನ್ನು ನೀಡಿದಂತೆ" ಎಂದೂ ಟೀಕಿಸಿದರು. ಕ್ರಿಪ್ಸ್ ರಾಯಭಾರ ಸಮಿತಿಗೆ ಸೋಲುಂಟಾಯಿತು.

ಬಿಳಿಯರೇ (ಬ್ರಿಟಿಷರೇ) ಭಾರತ ಬಿಟ್ಟು ತೊಲಗಿ ಚಳುವಳಿ _ 1942


ಕ್ರಿಪ್ಸ್ ರಾಯಭಾರ ಸಮಿತಿಯ ಸೋಲು ಗಾಂಧೀಜಿಯವರ ಧೋರಣೆಯಲ್ಲಿ ಕೆಲವು ಬದಲಾವಣೆಗಳನ್ನು ತಂದಿತು. ಅದುವರೆಗೆ ಅವರು ಅನುಸರಿಸುತ್ತಿದ್ದ ಅಹಿಂಸಾ ಮಾರ್ಗಗಳು ಯಾವುದೇ ಪ್ರತಿಫಲವನ್ನು ನೀಡಲಿಲ್ಲ. ಎಂಬುದನ್ನು ಅರಿತರು. ಆದ್ದರಿಂದಲೇ ಅವರು ಬ್ರಿಟಿಷರು ಭಾರತವನ್ನು ಬಿಟ್ಟು ತೊಲಗಬೇಕೆಂದು ಕೋರಿದರು.

ಎರಡನೇ ಮಹಾಯುದ್ಧದಲ್ಲಿ ಜಪಾನ್ ಸತತವಾಗಿ ಜಯಗಳಿಸಿಕೊಂಡೇ ಬಂದಿತು. ಆದ್ದರಿಂದಲೇ ಬ್ರಿಟಿಷರು ಇನ್ನೂ ಭಾರತದಲ್ಲಿದ್ದರೆ ಜಪಾನ್ ಭಾರತದ ಮೇಲೆ ದಂಡೆತ್ತಿ ಬರಬಹುದು ಎಂದು ಕಾಂಗ್ರೆಸ್ ನಾಯಕರು ಭಾವಿಸಿದರು. ಇದರಿಂದಾಗಿ 1942ರ ಆಗಸ್ಟ್ 8ರಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಬ್ರಿಟಿಷರು ಭಾರತವನ್ನು ಬಿಟ್ಟು ತಕ್ಷಣವೇ ಹೊರ ಹೋಗಬೇಕೆಂಬ ತೀರ್ಮಾನವನ್ನು ಮುಂದಿಟ್ಟಿತು. ಮುಂಬೈಯಲ್ಲಿ ನಡೆದ ಕಾರ್ಯಕಾರಿ ಸಭೆಯಲ್ಲಿ ಗಾಂಧೀಜಿಯವರು ಆಡಿದ ಮರೆಯಲಾಗದ ಸವಿ ಮಾತುಗಳ ನಂತರ ಆ ತೀರ್ಮಾನವು ನೆರವೇರಿಸಲ್ಪಟ್ಟಿತು. " ಸಂಪೂರ್ಣ ಸ್ವಾತಂತ್ರ್ಯದ ಹೊರತು ಬೇರೆ ಯಾವುದರಿಂದಲೂ ನಾನು ತೃಪ್ತಿ ಹೊಂದಲಾರೆ. ನಾವುಗಳು ಅದಕ್ಕಾಗಿ ಮಾಡಬೇಕು ಇಲ್ಲವೇ ಮಡಿಯಬೇಕು. ಭಾರತವನ್ನು ಸ್ವತಂತ್ರಗೊಳಿಸೋಣ ಅಥವಾ ಅದಕ್ಕಾಗಿ ಸಾಯೋಣ" ಎಂಬುದಾಗಿ ಕರೆ ಕೊಟ್ಟರು. ನಿಜವಾಗಿಯೂ ಅವರ ಮಾತು ಅತಿ ದೊಡ್ಡ ಪ್ರಮಾಣದ ಶಸ್ತ್ರಾಸ್ತ್ರವಿಲ್ಲದ ಕ್ರಾಂತಿಗೆ ಪ್ರಚೋದನ ಧ್ವನಿಯಾಯಿತು. ಮರುದಿನವೇ ಗಾಂಧೀಜಿ, ನೆಹರೂಜಿ, ಅಬುಲ್ ಕಲಾಂ ಆಜಾದ್ ಮತ್ತು ಪ್ರಮುಖ ಕಾಂಗ್ರೆಸ್ ನಾಯಕರೆಲ್ಲರೂ ಬಂಧನಕ್ಕೊಳಗಾದರು. ಸರಿಯಾದ ಮಾರ್ಗದರ್ಶನದ ಕೊರತೆಯಿಂದಾಗಿ ದೇಶದಾದ್ಯಂತ ಗಲಭೆಗಳು, ಹಿಂಸಾಚಾರಗಳು ತಲೆದೋರಿದವು.

ಎರಡನೇ ಮಹಾಯುದ್ಧವು 1945ರಲ್ಲಿ ಮುಕ್ತಾಯಗೊಂಡಿತು. ಯುದ್ಧದ ನಂತರ ಇಂಗ್ಲೆಂಡಿನಲ್ಲಿ ಲೇಬರ್ ಪಕ್ಷವು ಜಯಗಳಿಸಿ ಕ್ಲೈಮೆಟ್ ಅಟ್ಲಿ ಅಧ್ಯಕ್ಷತೆಯಲ್ಲಿ ಸರ್ಕಾರವು ರಚನೆಯಾಯಿತು. ಲೇಬರ್ ಪಕ್ಷದ ಅಧ್ಯಕ್ಷ ಅಟ್ಲಿಯು ಭಾರತ ಸ್ವಾತಂತ್ರ್ಯ ಹೋರಾಟಕ್ಕೆ ಪ್ರೋತ್ಸಾಹ ನೀಡಿದನು. ಅವನು ಇಂಗ್ಲೆಂಡಿನ ಪ್ರಧಾನಿಯಾದನು. ಅವನು ಕಾಂಗ್ರೆಸ್ ಪಕ್ಷದ ಮೇಲೆ ಬ್ರಿಟಿಷ್ ಸರ್ಕಾರವು ಹೇರಿದ್ದ ನಿಷೇದಾಜ್ಞೆಗಳನ್ನು ರದ್ದುಗೊಳಿಸಿದನು. ಅಟ್ಲಿ ಭಾರತದ ಸಮಸ್ಯೆಗಳನ್ನು ಬಗೆಹರಿಸಲು ಸಮಿತಿಯೊಂದನ್ನು ಭಾರತಕ್ಕೆ ಕಳುಹಿಸಿದನು. ಈ ಸಮಿತಿಯು ಭಾರತಕ್ಕೆ ಸ್ವಾತಂತ್ರ್ಯ ನೀಡಲು ಶಿಫಾರಸ್ಸು ಮಾಡಿತು.

ಸುಭಾಷ್ ಚಂದ್ರ ಬೋಸ್ _ ಭಾರತ ರಾಷ್ಟ್ರೀಯ ಸೇನೆ (INA) 1942

ನೇತಾಜಿ (ನಾಯಕ) ಎಂದು ಕರೆಯಲ್ಪಡುವ ಸುಭಾಷ್ ಚಂದ್ರ ಬೋಸ್ ಹೆಸರಾಂತ ರಾಷ್ಟ್ರ ನಾಯಕರಲ್ಲಿ ಒಬ್ಬರಾಗಿದ್ದಾರೆ. ಅವರು 1927ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷವನ್ನು ಸೇರಿದರು. ಜವಹರಲಾಲ್ ನೆಹರೂ ರವರೊಡನೆ ಒಂದುಗೂಡಿ ಕಾರ್ಯ ನಿರ್ವಹಿಸಿದರು. ನೇತಾಜಿಯವರು ಯುವಕರೂ, ಸಾರ್ವಜನಿಕರೂ ರಾಷ್ಟ್ರೀಯ ಭಾವನೆಯನ್ನು ಹೊಂದಲು ಕಾರಣರಾದರು. ಅಪಾರ ಸಂಖ್ಯೆಯ ಯುವಕರನ್ನು ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸುವಂತೆ ಮಾಡಿದರು.



ಸುಭಾಷ್ ಚಂದ್ರ ಬೋಸ್

1938ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷರಾದರು. ಇವರು 1939ರಲ್ಲಿ ಫಾರ್ವರ್ಡ್ ಬ್ಲಾಕ್ ಪಕ್ಷವನ್ನು ಸ್ಥಾಪಿಸಿದರು. ಹಲವು ದೇಶಗಳಲ್ಲಿ ಸಂಚರಿಸಿ,

ಭಾರತದ ಬಗ್ಗೆ ವಿದೇಶಿಯರಿಂದ ಸಹಾನುಭೂತಿಗಳಿಸುವಲ್ಲಿ ಯಶಸ್ವಿಯಾದರು. ಅವರನ್ನು ಕೆಲಕಾಲ ಗೃಹ ಬಂಧನದಲ್ಲಿರಿಸಿದ್ದರು. ಅವರು ಅಫ್ಘಾನಿಯರಂತೆ ಮಾರುವೇಷ ಧರಿಸಿ ಭಾರತದಿಂದ ತಪ್ಪಿಸಿಕೊಂಡು ಜರ್ಮನಿಯನ್ನು ತಲುಪಿ ಹಿಟ್ಲರನ್ನು ಭೇಟಿ ಮಾಡಿ ಸಹಾಯ ಕೋರಿದರು. ನಂತರ 1942ರಲ್ಲಿ ಬರ್ಮಾ ದೇಶಕ್ಕೆ ತೆರಳಿದರು. ಜಪಾನಿಯರಿಂದ ಬರ್ಮಾ ಆಕ್ರಮಿಸಲ್ಪಟ್ಟಿತು. ಆ ಸಮಯದಲ್ಲಿ ಬ್ರಿಟಿಷರ ಹಿಡಿತದಲ್ಲಿದ್ದ ಅಪಾರ ಸಂಖ್ಯೆಯ ಭಾರತದ ಖೈದಿಗಳನ್ನು ಜಪಾನ್ ವಶಪಡಿಸಿಕೊಂಡ ನಂತರ 20,000ಕ್ಕೂ ಅಧಿಕ ಖೈದಿಗಳನ್ನು ಬಿಡುಗಡೆಮಾಡಿತು. ಜಪಾನ್ ಸರ್ಕಾರದೊಡನೆ ಒಂದುಗೂಡಿ ಸುಭಾಷ್ ಚಂದ್ರ ಬೋಸ್ ಭಾರತೀಯರಿಗಾಗಿ ಭಾರತೀಯ ರಾಷ್ಟ್ರೀಯ ಸೇನೆಯನ್ನು ಸ್ಥಾಪಿಸಿದರು. 1943ರಲ್ಲಿ ಸಿಂಗಪೂರ್‌ಗೆ ಹೋದರು. ಅಲ್ಲಿ ಭಾರತದ ಸ್ವಾತಂತ್ರ್ಯ ಚಳುವಳಿಯ ಪ್ರಮುಖ ಜವಾಬ್ದಾರಿಯನ್ನು ರಾಶ್‌ಬಿಹಾರಿ ಬೋಷ್ ಸುಭಾಷ್ ಚಂದ್ರ ಬೋಸರಿಗೆ ಒಪ್ಪಿಸಿದರು. ಆಜಾದ್ ಹಿಂದ್ ಫೌಜ್ ಎಂದು ಕರೆಯಲ್ಪಟ್ಟ ಭಾರತದ ರಾಷ್ಟ್ರೀಯ ಸೇನೆಯ ಮುಖ್ಯಸ್ಥರಾಗಿ ಸುಭಾಷ್ ಚಂದ್ರ ಬೋಸ್ ಜವಾಬ್ದಾರಿ ವಹಿಸಿಕೊಂಡರು. ಇದಾದ ನಂತರ ಸುಭಾಷ್ ಚಂದ್ರ ಬೋಸ್ 'ನೇತಾಜಿ' ಎಂದು ಕರೆಯಲ್ಪಟ್ಟರು. ನೇತಾಜಿ ಎಂದರೆ ನಾಯಕ ಎಂದರ್ಥ. ಭಾರತದ ರಾಷ್ಟ್ರೀಯ ಸೇನೆಯ ಮಹಿಳಾ ವಿಭಾಗವು ತಮಿಳುನಾಡಿಗೆ ಸೇರಿದ ಲಕ್ಷ್ಮಿ ಎಂಬ ಮಹಿಳೆಯ ನಾಯಕತ್ವದಲ್ಲಿ ಝಾನ್ಸಿ ರಾಣಿಯ ಹೆಸರಿನಲ್ಲಿ ರಚನೆಯಾಯಿತು. ಭಾರತೀಯ ರಾಷ್ಟ್ರೀಯ ಸೇನೆಯು ಬ್ರಿಟಿಷರ ವಿರುದ್ಧವಾಗಿ ಭಾರತದ ಸ್ವಾತಂತ್ರ್ಯಕ್ಕಾಗಿ ತೀವ್ರವಾಗಿ ಹೋರಾಡಿತು.


" ಜೈ ಹಿಂದ್ " ಎಂಬ ಸುಭಾಷ್ ಚಂದ್ರ ಬೋಸರ ಘೋಷಣೆಯು ಪ್ರಸಿದ್ಧಿ ಪಡೆದ ಘೋಷಣೆಯಾಗಿ ಬದಲಾಗಿ, ಭಾರತದಾದ್ಯಂತ ಪ್ರತಿಧ್ವನಿಸಿತು. 'ದೆಹಲಿ ಚಲೋ' ಎಂಬ ಮತ್ತೊಂದು ಪ್ರಸಿದ್ಧ ಘೋಷಣೆಯೂ ಸುಭಾಷ್ ಚಂದ್ರ ಬೋಸ್ ರವರದಾಗಿದೆ. ಎರಡನೇ ಮಹಾಯುದ್ಧದಲ್ಲಿ, 1945ರಲ್ಲಿ ಜಪಾನ್ ಶರಣಾಯಿತು. ಭಾರತ ರಾಷ್ಟ್ರೀಯ ಸೇನಾ ವೀರರು ಬಂಧಿಸಲ್ಪಟ್ಟು, ನೇತಾಜಿ ಬ್ಯಾಂಕಾಕ್ ನಿಂದ ಟೋಕಿಯೋಗೆ ತಪ್ಪಿಸಿಕೊಂಡು ಓಡಿ ಹೋದರು ಹೀಗೆ ಹೋಗುವ ಮಾರ್ಗ ಮಧ್ಯದಲ್ಲಿ ಅವರು ವಿಮಾನ ಅಪಘಾತದಲ್ಲಿ ಮರಣ ಹೊಂದಿದರೆಂದು ನಂಬಲಾಗಿದೆ.

ಮಂತ್ರಿ ಮಂಡಲ ರಾಯಭಾರ ಸಮಿತಿ _ 1946

1946ರಲ್ಲಿ ಫೆತಿಕ್ ಲಾರೆನ್ಸ್, ಎ.ವಿ. ಅಲೆಕ್ಸಾಂಡರ್ ಮತ್ತು ಸರ್. ಸ್ಟಾಫೋರ್ಡ್ ಕ್ರಿಪ್ಸ್ ಈ ಮೂವರನ್ನೊಳಗೊಂಡ ಸಮಿತಿಯು ಭಾರತಕ್ಕೆ ಆಗಮಿಸಿತು. ಅವರು ಮೂವರೂ ಬ್ರಿಟಿಷ್ ಮಂತ್ರಿ ಮಂಡಲದಲ್ಲಿ ಸದಸ್ಯರುಗಳಾಗಿದ್ದರು. ಆದ್ದರಿಂದಲೇ ಈ ಸಮಿತಿಯು ಕ್ಯಾಬಿನೆಟ್ ಅಥವಾ ಮಂತ್ರಿ ಮಂಡಲ ರಾಯಭಾರ ಸಮಿತಿ ಎಂದು ಕರೆಯಲ್ಪಟ್ಟಿತು. ಈ ಸಮಿತಿಯು ಭಾರತದ ನಾಯಕರಲ್ಲಿ ಆಡಳಿತದ ವರ್ಗಾವಣೆಯ ಬಗ್ಗೆ ಚರ್ಚೆ ನಡೆಸಿತು. ಈ ಸಮಿತಿಯು ಒಕ್ಕೂಟ ಸರ್ಕಾರ ರಚನೆಯ ಶಿಫಾರಸ್ಸನ್ನು ಮಾಡಿತು. ರಾಜಕೀಯ ನಿರ್ಣಯ ಸಭೆಯನ್ನು ಆಯ್ಕೆ ಮಾಡಿ ಭಾರತದ ಸಂವಿಧಾನದ ರಚನೆಯಾಗಬೇಕೆಂದು ಹಾಗೂ ಅದರ ರಚನೆಯಾಗುವವರೆಗೆ ಸರ್ವಪಕ್ಷಗಳ ಪ್ರತಿನಿಧಿಗಳನ್ನೊಳಗೊಂಡ ಮಧ್ಯಂತರ ಸರ್ಕಾರವೊಂದು ಕೇಂದ್ರದಲ್ಲಿ ರಚನೆಯಾಗಬೇಕೆಂದು ಶಿಫಾರಸು ಮಾಡಿತು.

ಮಧ್ಯಂತರ ಸರ್ಕಾರ _ 1946

ಜವಹರಲಾಲ್ ನೆಹರೂ ರವರನ್ನು ಪ್ರಧಾನಮಂತ್ರಿಯನ್ನಾಗಿಸಿ ಮಧ್ಯಂತರ ಸರ್ಕಾರವು 1946ರಲ್ಲಿ ರಚನೆಗೊಂಡಿತು. ಈ ಸರ್ಕಾರವನ್ನು ರಚಿಸಲು



ಜವಹರಲಾಲ್ ನೆಹರು

ನೆಹರೂ ಜಿನ್ನಾರವರ ಸಹಾಯವನ್ನು ಕೋರಿದರು. ಆದರೆ ಜಿನ್ನಾ ನಿರಾಕರಿಸಿದರು. ತಮ್ಮ ಪಾಕಿಸ್ಥಾನದ ಕೋರಿಕೆಯ ಬಿಗಿಪಟ್ಟನ್ನು ಸಡಿಲಿಸಲಿಲ್ಲ. ಆದ್ದರಿಂದಲೇ ಭಾರತದ ವಿಭಜನೆಯು ಅನಿವಾರ್ಯವಾಗಿತ್ತು.

ಲಾರ್ಡ್ ಮೌಂಟ್ ಬ್ಯಾಟನ್ ಯೋಜನೆ _ 1947

1947ರಲ್ಲಿ ಲಾರ್ಡ್ ಮೌಂಟ್ ಬ್ಯಾಟನ್ ಬ್ರಿಟಿಷ್ ಸರ್ಕಾರದ ಪ್ರತಿನಿಧಿಯಾಗಿ ಅಧಿಕಾರ ವಹಿಸಿಕೊಂಡರು. ಇವರೇ ಬ್ರಿಟಿಷ್ ಸರ್ಕಾರದ ಕೊನೆಯ ಗವರ್ನರ್ ಜನರಲ್.

ಇವರು ಭಾರತದ ರಾಜಕೀಯ ಸಮಸ್ಯೆಗಳಿಗೆ ಪರಿಹಾರ ಹುಡುಕಲು ಪ್ರಯತ್ನಿಸಿದರು. ಆದ್ದರಿಂದಲೇ ಲಾರ್ಡ್ ಮೌಂಟ್ ಬ್ಯಾಟನ್ 1947ರ ಜೂನ್ 3ರಂದು ಒಂದು ಪ್ರಮುಖ ಪ್ರಕಟಣೆಯನ್ನು ಹೊರಡಿಸಿದರು. ಅದು ಮೌಂಟ್ ಬ್ಯಾಟನ್ ಯೋಜನೆ ಅಥವಾ ಜೂನ್ 3ರ ಯೋಜನೆ ಎಂದು ಕರೆಯಲ್ಪಟ್ಟಿತು. ಈ ಯೋಜನೆಯಂತೆ ಭಾರತವು, ಭಾರತ ಯೂನಿಯನ್ ಎಂದೂ, ಪಾಕಿಸ್ಥಾನ ಯೂನಿಯನ್ ಎಂದೂ ಎರಡು ಭಾಗಗಳಾಗಿ ಎರಡು ರಾಷ್ಟ್ರಗಳಾಗಿ ವಿಂಗಡಿಸಲ್ಪಟ್ಟಿತು.



ಲಾರ್ಡ್ ಮೌಂಟ್ ಬ್ಯಾಟನ್

ಭಾರತದ ದೇಶೀಯ ಅರಸರು, ಈ ಎರಡು ರಾಷ್ಟ್ರಗಳಲ್ಲಿ ಯಾವುದಾದರೂ ಒಂದು ರಾಷ್ಟ್ರದೊಡನೆ ಸೇರಿಕೊಳ್ಳಲೋ ಅಥವಾ ಸ್ವತಂತ್ರವಾಗಿರಲೋ ಅವಕಾಶವಿದೆ ಎಂದು ಪ್ರಕಟಿಸಿತು. ಈ ಯೋಜನೆಯನ್ನು ಕಾಂಗ್ರೆಸ್ ಮತ್ತು ಮುಸ್ಲೀಮ್ ಲೀಗ್ ಪಕ್ಷಗಳು ಸ್ವೀಕರಿಸಿದವು.

ಭಾರತದ ಸ್ವಾತಂತ್ರ್ಯ ಕಾಯಿದೆ _ 1947

ಮೌಂಟ್ ಬ್ಯಾಟನ್ ಯೋಜನೆಯ ಆಧಾರದಲ್ಲಿ, ಇಂಗ್ಲೆಂಡ್ ಸರ್ಕಾರವು 1947ರ ಜುಲೈ ತಿಂಗಳು ಭಾರತದ ಸ್ವಾತಂತ್ರ್ಯ ಕಾಯಿದೆಯನ್ನು ಜಾರಿಗೊಳಿಸಿತು. ಈ ಕಾಯಿದೆಯಂತೆ ಭಾರತದ ವಿಭಜನೆಯನ್ನು 1947ರಲ್ಲಿ ಜಾರಿಗೆ ತರಲಾಯಿತು. ಬ್ರಿಟಿಷ್ ಸರ್ಕಾರದಿಂದ ಅಧಿಕಾರಗಳು ಭಾರತ ಮತ್ತು ಪಾಕಿಸ್ಥಾನ ದೇಶಗಳಿಗೆ ವರ್ಗಾಯಿಸಲಾಯಿಸಲ್ಪಟ್ಟವು. ಹೊಸ ರಾಷ್ಟ್ರವಾದ ಪಾಕಿಸ್ಥಾನವು ಮುಸಲ್ಮಾನರು ಅಧಿಕವಾಗಿ ವಾಸಿಸುವ ಭಾಗಗಳಾದ ಪಶ್ಚಿಮ ಪಂಜಾಬ್, ಸಿಂಧೂ, ವಾಯುವ್ಯ ಗಡಿಯ ಪ್ರಾಂತ್ಯ ಮತ್ತು ಪೂರ್ವ ಬಂಗಾಳ, ಅಸ್ಸಾಂ ರಾಜ್ಯದಲ್ಲಿರುವ ಸಿಲ್ಹಟ್ ಜಿಲ್ಲೆಯನ್ನೊಳಗೊಂಡಿದೆ. ಇನ್ನುಳಿದ ಭಾಗಗಳು ಭಾರತದಲ್ಲಿ ಸ್ಥಾನ ಪಡೆದವು.


ಭಾರತವು 1947ರಲ್ಲಿ ಆಗಸ್ಟ್ 15ರಂದು ಸ್ವಾತಂತ್ರ್ಯ ಪಡೆಯಿತು. ದೆಹಲಿಯಲ್ಲಿರುವ ಇತಿಹಾಸ ಪ್ರಸಿದ್ಧ ಕೆಂಪುಕೋಟೆಯಲ್ಲಿ ಇಂಗ್ಲೆಂಡಿನ ಧ್ವಜ (ಯೂನಿಯನ್ _ ಜಾಕ್) ಕೆಳಗಿಳಿಸಿ, ಭಾರತದ ತ್ರಿವರ್ಣ ಧ್ವಜವನ್ನು ಹಾರಿಸಲಾಯಿತು. ಲಾರ್ಡ್ ಮೌಂಟ್ ಬ್ಯಾಟನ್ ಸ್ವತಂತ್ರ ಭಾರತದ ಪ್ರಥಮ ಗವರ್ನರ್ ಜನರಲ್ ಆಗಿಯೂ, ಪಂಡಿತ ಜವಹರಲಾಲ್ ನೆಹರು ಪ್ರಥಮ ಪ್ರಧಾನಿಯಾಗಿಯೂ ಅಧಿಕಾರ ಸ್ವೀಕರಿಸಿದರು. ಆನಂತರ ಸಿ. ರಾಜಗೋಪಾಲಚಾರಿಯವರು ಸ್ವತಂತ್ರ ಭಾರತದ ಪ್ರಥಮ ಮತ್ತು ಕೊನೆಯ ಭಾರತೀಯ ಗವರ್ನರ್ ಜನರಲ್ ಆಗಿ ಅಧಿಕಾರ ಸ್ವೀಕರಿಸಿದರು.

ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ರಾಷ್ಟ್ರ ನಾಯಕರಿಗೆ ನಾವು ಅಪಾರ ಕೃತಜ್ಞತೆಗಳೊಡನೆ ಚಿರ ಋಣಿಗಳಾಗಿದ್ದೇವೆ. ಅದರಲ್ಲೂ ಮಹಾತ್ಮ ಗಾಂಧೀಜಿಯವರೊಡನೆ ಹೋಲಿಸಲು ಯಾರೊಬ್ಬರೂ ಇಲ್ಲ. ಭಾರತವು ವಿಭಜನೆಯಾದಾಗ, ಹಿಂದೂ _ ಮುಸ್ಲೀಮ್ ಕೋಮು ಗಲಭೆಗಳು ಹಲವು ಸ್ಥಳಗಳಲ್ಲಿ ಕಂಡು ಬಂದವು. ಗಾಂಧೀಜಿಯವರು ಈ ಕೋಮು ಗಲಭೆಗಳನ್ನು ತಡೆದು ಹಿಂದೂ ಮುಸಲ್ಮಾನರ ನಡುವೆ ಶಾಂತಿ ಸಮಾಧಾನವನ್ನೂ, ಏಕತೆಯನ್ನೂ ಉಂಟು ಮಾಡಿದರು. 1948ರ ಜನವರಿ 30ರಂದು ಗಾಂಧೀಜಿಯವರು ಸುಟ್ಟು ಕೊಲ್ಲಲ್ಪಟ್ಟರು. ಇದನ್ನು ಜವಹರ್‌ಲಾಲ್ ನೆಹರು "ನಮ್ಮ ಜೀವನದಲ್ಲಿ ಜ್ಯೋತಿ ಮರೆಯಾಗಿ ಎಲ್ಲೆಲ್ಲೂ ಕತ್ತಲೆಯು ಆವರಿಸಿಕೊಂಡಿತು" ಎಂದು ಹೇಳಿದರು.

ಸ್ವದೇಶಿ ಸಂಸ್ಥಾನಗಳ ವಿಲೀನ

ಭಾರತದ ಸಂಸ್ಥಾನಗಳನ್ನು ವಿಲೀನಗೊಳಿಸಿದುದು ಸರ್ದಾರ್ ವಲ್ಲಭಾಯ್ ಪಟೇಲರ ಮಹತ್ವದ ಸಾಧನೆಯಾಗಿದೆ. ಭಾರತವು ಸ್ವಾತಂತ್ರ್ಯವನ್ನು ಪಡೆದಾಗ ದೇಶದಲ್ಲಿ ಸುಮಾರು 565 ಸ್ವದೇಶಿ ಸಂಸ್ಥಾನಗಳಿದ್ದವು. ಅವುಗಳನ್ನು ನವಾಬರು, ಅರಸರು, ಮತ್ತು ನಿಜಾಮರು

ಭಾರತದ ವಿಭಜನೆ _ 1947



ಆಳ್ವಿಕೆ ನಡೆಸುತ್ತಿದ್ದರು. ಈ ಸಂಸ್ಥಾನಗಳನ್ನು ಭಾರತದೊಡನೆ ವಿಲೀನಗೊಳಿಸುವ ಜವಾಬ್ದಾರಿಯು ಸರ್ದಾರ್ ವಲ್ಲಭಾಯ್ ಪಟೇಲ್‌ರವರಿಗೆ ವಹಿಸಲ್ಪಟ್ಟಿತು.

ಪ್ರಾರಂಭದಲ್ಲಿ ಸ್ವದೇಶಿ ರಾಜರುಗಳು ಹಲವರು ಪ್ರತ್ಯೇಕವಾಗಿರಲು ಬಯಸಿದರು. ಪಟೇಲರು ಅವರುಗಳನ್ನು ಭಾರತದ ಯೂನಿಯನ್ನಿನೊಡನೆ ಸೇರುವಂತೆ ಆಹ್ವಾನಿಸಿದರು. ಹಲವರು ಅವರ ಆಹ್ವಾನವನ್ನು ತಕ್ಷಣವೇ ಸ್ವೀಕರಿಸಿದರು. ಸುಮಾರು 562 ಸ್ವದೇಶಿ ಸಂಸ್ಥಾನಗಳು ಭಾರತದ ಯೂನಿಯನ್ನಿನೊಡನೆ ವಿಲೀನಗೊಂಡವು. ಆದರೆ ಕಾಶ್ಮೀರ, ಹೈದರಾಬಾದ್ ಮತ್ತು ಜುನಾಗಢ ಸಂಸ್ಥಾನಗಳು ಭಾರತದೊಡನೆ ವಿಲೀನವಾಗಲು ನಿರಾಕರಿಸಿದವು.



ವಲ್ಲಭಾಯ್ ಪಟೇಲ್

ಪಟೇಲರು ತಮ್ಮ ರಾಜಕೀಯ ಚಾಣಾಕ್ಷತನದಿಂದ ಹಾಗೂ ಕಠಿಣವಾದ ಕ್ರಮಗಳಿಂದಲೂ ಆ ಪ್ರಾಂತ್ಯಗಳನ್ನೂ ಭಾರತದ ಯೂನಿಯನ್ನಿನೊಡನೆ ವಿಲೀನಗೊಳಿಸಿ ಕೊಂಡರು. ಇದರಿಂದಾಗಿ "ಭಾರತದ ಬಿಸ್ಮಾರ್ಕ್" ಎಂದೂ, "ಭಾರತದ ಉಕ್ಕಿನ ಮನುಷ್ಯ" ಎಂದೂ ಕರೆಯಲ್ಪಟ್ಟರು.

ಫ್ರೆಂಚ್ ಭಾಗಗಳ ವಿಲೀನಗೊಳಿಸುವಿಕೆ _ 1954

ಫ್ರೆಂಚ್ ಸರಕಾರದ ಅನುಮತಿಯೊಡನೆ ಪಾಂಡಿಚೇರಿ, ಕಾರೈಕ್ಕಲ್, ಮಾಹೆ, ಏನಾಮ್ ಮತ್ತು ಚಂದ್ರನಾಗೂರ್ _ ಈ ಭಾಗಗಳು 1954ರಲ್ಲಿ ಭಾರತದ ಯೂನಿಯನ್ನಿನೊಡನೆ ವಿಲೀನಗೊಂಡವು.

ಪೋರ್ಚುಗೀಸರ ಭಾಗಗಳ ವಿಲೀನ _ 1961

ಗೋವಾ, ಡಿಯು ಮತ್ತು ಡಾಮನ್ ಭಾಗಗಳು ಪೋರ್ಚುಗೀಸರ ವಶದಲ್ಲಿದ್ದ ಭಾಗಗಳಾಗಿವೆ. ಆ ಭಾಗದ ಜನರು ಭಾರತದೊಡನೆ ವಿಲೀನವಾಗಲು ಇಚ್ಛಿಸಿದರು. ಆದ್ದರಿಂದಲೇ ಭಾರತ ಸರ್ಕಾರವು ತನ್ನ ಸೇನಾ ಕಾರ್ಯಾಚರಣೆಯ ಮೂಲಕ 1961ರಲ್ಲಿ ಆ ಭಾಗಗಳು ಭಾರತದೊಡನೆ ವಿಲೀನಗೊಂಡವು. ಇವು ಭಾರತದ ಒಕ್ಕೂಟದ ಭಾಗಗಳಾಗಿ ಬದಲಾದವು.

ನವಭಾರತ ನಿರ್ಮಾಣ

ಹಲವು ರಾಜಕೀಯ ನಾಯಕರು ಹಾಗೂ ನಿಪುಣರು ಒಂದುಗೂಡಿ ರಾಜಕೀಯ ನಿರ್ಣಯ ಸಭೆಯನ್ನು ಏರ್ಪಡಿಸಿ ಭಾರತದ ಸಂವಿಧಾನ ಕಾನೂನುಗಳನ್ನು ರೂಪಿಸಿದರು. ಭಾರತದ ಸಂವಿಧಾನದ ರಚನಾ ಸಭೆಗೆ ಡಾಕ್ಟರ್. ರಾಜೇಂದ್ರ ಪ್ರಸಾದ್ ರವರು ಅಧ್ಯಕ್ಷತೆ ವಹಿಸಿದ್ದರು. ಭಾರತ ಸಂವಿಧಾನದ ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿ ಡಾಕ್ಟರ್. ಬಿ.ಆರ್. ಅಂಬೇಡ್ಕರ್ ರವರು ಅಧಿಕಾರವಹಿಸಿದ್ದರು. ಈ ಸಮಿತಿಯು ಭಾರತದ ಸಂವಿಧಾನದ ಕಾನೂನುಗಳನ್ನು ರಚಿಸಿ ನೀಡಿತು. ಇದರಂತೆ 1950ರ ಜನವರಿ 26ರಂದು ಭಾರತವು ಗಣರಾಜ್ಯ ದೇಶವಾಗಿ ಘೋಷಿಸಲಾಯಿತು. ಅಂದಿನಿಂದ ಭಾರತದ ಸಂವಿಧಾನವು ಜಾರಿಗೆ ಬಂದಿತು. ಡಾಕ್ಟರ್. ರಾಜೇಂದ್ರ ಪ್ರಸಾದ್ ಸ್ವತಂತ್ರ ಭಾರತದ ಪ್ರಥಮ ರಾಷ್ಟ್ರಾಧ್ಯಕ್ಷರಾದರು.

ಕಾಲರೇಖೆ

1885 – ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆ

1890 –

1895 –

1900 –

1905	–	ಬಂಗಾಳದ ವಿಭಜನೆ, ಸ್ವದೇಶಿ ಚಳುವಳಿ
1906	–	ಮುಸ್ಲೀಂ ಲೀಗ್ ಪಕ್ಷದ ಸ್ಥಾಪನೆ
1907	–	ಸೂರತ್ ಒಡಕು
1908	–	
1909	–	ಮಿಂಟೋ _ ಮಾರ್ಲೆ ಸುಧಾರಣಾ ಕಾಯಿದೆ
1910	–	
1911	–	ಬಂಗಾಳದ ವಿಭಜನೆಯ ರದ್ದು
1912	–	
1913	–	
1914	–	ಮೊದಲನೆಯ ಮುಹಾಯುದ್ಧ ಆರಂಭ
1915	–	
1916	–	ಸ್ವದೇಶಿ ಚಳುವಳಿ (ಸ್ವಯಂ ಆಡಳಿತ)ಲಕ್ನೋ ಒಪ್ಪಂದ 1917 –
1917	–	ಆಗಸ್ಟ್ ಪ್ರಕಟಣೆ
1918	–	ಮೊದಲನೇ ಮಹಾಯುದ್ಧದ ಅಂತ್ಯ
1919	–	ಮಾಂಟೆಗೋ–ಚಮ್ಸ್‌ಫೋರ್ಡ್ ಸುಧಾರಣೆ, ರೌಲತ್‌ಶಾಸನ, ಜಲಿಯನ್ ವಾಲಾಬಾಗ್ ಕಗ್ಗೊಲೆ, ವರ್ಸೇಲ್ಸ್ ಒಪ್ಪಂದ
1920	–	ಖಿಲಾಫತ್ ಚಳುವಳಿ, ಅಸಹಕಾರ ಚಳುವಳಿ ಸಂಯುಕ್ತ ರಾಷ್ಟ್ರಗಳ ಸಂಘ ಸ್ಥಾಪನೆ,
1921	–	
1922	–	ಚೌರಿ ಚೌರಾ ಘಟನೆ, ಅಸಹಕಾರ ಚಳುವಳಿಯ ಕೈಬಿಡುವಿಕೆ
1923	–	ಸ್ವರಾಜ್ಯ ಪಕ್ಷದ ಸ್ಥಾಪನೆ
1924	–	
1925	–	
1926	–	
1927	–	ಸೈಮನ್ ಸಮಿತಿಯ ರಚನೆ

1928	–	ಸೈಮನ್ ಸಮಿತಿ ಭಾರತಕ್ಕೆ ಆಗಮಿಸಿದ್ದು
1929	–	ಲಾಹೋರ್ ಕಾಂಗ್ರೆಸ್ ಅಧಿವೇಶನ
1930	–	ಉಪ್ಪಿನ ಸತ್ಯಾಗ್ರಹ, ಕಾನೂನು ಭಂಗ ಚಳುವಳಿ, ದಂಡಿಯಾತ್ರೆ ಮೊದಲನೇ ದುಂಡು ಮೇಜಿನ ಸಮ್ಮೇಳನ
1931	–	ಗಾಂಧಿ–ಇರ್ವಿನ್ ಒಪ್ಪಂದ, ಎರಡನೇ ದುಂಡು ಮೇಜಿನ ಸಮ್ಮೇಳನ
1932	–	ಕೋಮುವಾರು ಪ್ರಾತಿನಿಧ್ಯ ಪ್ರಕಟಣೆ, ಪೂನಾ ಒಪ್ಪಂದ, 3ನೇ ದುಂಡುಮೇಜಿನ ಸಮ್ಮೇಳನ
1933		
1934		
1935	–	ಭಾರತ ಸರ್ಕಾರದ ಕಾಯಿದೆ
1936		
1937		
1938		
1939	–	ಎರಡನೇ ಮಹಾಯುದ್ಧದ ಆರಂಭ
1940	–	ಪಾಕಿಸ್ಥಾನದ ಪ್ರತ್ಯೇಕ ದೇಶದ ಕೋರಿಕೆ, ಆಗಸ್ಟ್ ಕೊಡುಗೆ
1941	–	
1942	–	ಕ್ರಿಪ್ಸ್ ರಾಯಭಾರ ಸಮಿತಿಯು ಭಾರತಕ್ಕೆ ಆಗಮಿಸಿದ್ದು, ಐ.ಎನ್.ಎ.ಸ್ಥಾಪನೆ, ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಚಳುವಳಿ
1944	–	
1945	–	ಎರಡನೇ ಮಹಾಯುದ್ಧದ ಅಂತ್ಯ, ವಿಶ್ವಸಂಸ್ಥೆಯ ಸ್ಥಾಪನೆ
1946	–	ಮಂತ್ರಿ ಮಂಡಲದ ರಾಯಭಾರ ಸಮಿತಿಯು ಭಾರತಕ್ಕೆ ಆಗಮಿಸಿದ್ದು ಮಧ್ಯಂತರ ಸರ್ಕಾರ
1947	–	ಮೌಂಟ್ ಬ್ಯಾಟನ್ ಯೋಜನೆ, ಭಾರತದ ಸ್ವಾತಂತ್ರ್ಯ ಕಾಯಿದೆ, ಭಾರತ ಸ್ವಾತಂತ್ರ್ಯ ಪಡೆದುದು
1948	–	ಗಾಂಧೀಜಿಯವರ ಮರಣ
1949	–	
1950	–	ಭಾರತದ ಸಂವಿಧಾನವು ಜಾರಿಗೆ ಬಂದದ್ದು–ಭಾರತ ಪ್ರಜಾಪ್ರಭುತ್ವದ ಗಣರಾಜ್ಯವಾಗಿ ಅರಳಿದುದು

ಅಭ್ಯಾಸ

ಅ. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1. ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿ ಉಪಯೋಗಿಸಿದ ಹೊಸ ತಂತ್ರ ವಿಧಾನ

ಅ) ಸತ್ಯಾಗ್ರಹ ಆ) ತತ್ವಗಳನ್ನು ಹರಡಲು ಅನುಸರಿಸಿದ ವಿಧಾನ

ಇ) ದೂರದ ಪ್ರಯಾಣ ಈ)ಹಿಂಸೆ

2. ಚಿತ್ತರಂಜನ್‌ದಾಸ್ ಮತ್ತು ಮೋತಿಲಾಲ್ ನೆಹರೂ ರವರು ಸ್ಥಾಪಿಸಿದ ಪಕ್ಷ

ಅ) ಖಾದಿ ಆ) ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷ

ಇ)ಸ್ವರಾಜ್ಯ ಈ) ಅಕಾಲಿದಳ

3. ಭಾರತದ ಸಂವಿಧಾನವು ಜಾರಿಗೆ ಬಂದದ್ದು

ಅ) ಜನವರಿ 26, 1950 ಆ) ಫೆಬ್ರವರಿ 26,1950

ಇ) ಆಗಸ್ಟ್ 26,1950 ಈ) ಮಾರ್ಚ್ 26, 1950

4. 1932ರಲ್ಲಿ ಬ್ರಿಟಿಷ್ ಸರ್ಕಾರವು ಪರಿಚಯಿಸಿದ ಯೋಜನೆ.

ಅ) ಮಧ್ಯಾಹ್ನದ ಉಪಹಾರ ಯೋಜನೆ ಆ) ಮುಕ್ತ ವಿಶ್ವವಿದ್ಯಾಲಯ

ಇ) ವಯಸ್ಕರ ಶಿಕ್ಷಣ ಈ) ಕೋಮುವಾದಿ ಪ್ರತಿನಿಧಿತ್ವ

5. ಎರಡನೇಯ ಮಹಾಯುದ್ಧದಲ್ಲಿ ಭಾರತೀಯರು ಭಾಗವಹಿಸುವಂತೆ ಮಾಡಿದವರು.

ಅ) ಲಾರ್ಡ್‌ಕ್ಯಾನಿಂಗ್ ಆ) ಲಾರ್ಡ್ ಡಾಲ್ ಹೌಸಿ

ಇ) ಲಿನ್‌ಲಿತ್‌ಗೋ ಈ) ಲಾರ್ಡ್ ಲಿಟ್ಟನ್.

6. ನೆಹರೂರವರು ಯಾರ ಸಹಾಯದೊಡನೆ ಮಧ್ಯಂತರ ಸರ್ಕಾರವನ್ನು ರಚಿಸಿದರು.

ಅ) ಅಬ್ದುಲ್ ಕಲಾಂ ಆ) ಜಿನ್ನಾ

ಇ) ಸಲೀಮುಲ್ಲಾಖಾನ್ ಈ)ಖಾನ್ ಅಬ್ದುಲ್ ಗಫರ್‌ಖಾನ್

7. ಭಾರತದ ಪ್ರಥಮ ಮತ್ತು ಕೊನೆಯ ಭಾರತದ ಗವರ್ನರ್ ಜನರಲ್

ಅ) ಲಾರ್ಡ್ ಮೌಂಟ್ ಬ್ಯಾಟನ್ ಆ) ನೆಹರು ಇ) ರಾಜಗೋಪಾಲಾಚಾರಿ ಈ) ಕಾಮರಾಜರ್

8. ಭಾರತದ ಸಂಸ್ಥಾನಗಳನ್ನು ವಿಲೀನಗೊಳಿಸುವ ಕಾರ್ಯಕ್ಕೆ ನಾಯಕತ್ವ ವಹಿಸಿಕೊಂಡಿದ್ದವರು.

ಅ) ಡಾಕ್ಟರ್ ಬಿ.ಆರ್.ಅಂಬೇಡ್ಕರ್ ಅ) ರಾಜೇಂದ್ರ ಪ್ರಸಾದ್

ಇ) ರಾಜಾಜಿ ಈ) ಸರ್ದಾರ ವಲ್ಲಭಾಯ್ ಪಟೇಲ್

9. ಭಾರತದ ಪ್ರಪ್ರಥಮ ರಾಷ್ಟ್ರಪತಿ

ಅ) ಡಾಕ್ಟರ್. ರಾಜೇಂದ್ರ ಪ್ರಸಾದ್ ಆ)ಗಾಂಧೀಜಿ ಇ) ಡಾಕ್ಟರ್. ರಾಧಾಕೃಷ್ಣನ್ ಈ) ಸತ್ಯಮೂರ್ತಿ

ಆ. ಹೊಂದಿಸಿ ಬರೆಯಿರಿ.

I

1. ಸರ್ದಾರ್ ವಲ್ಲಭಬಾಯ್ ಪಟೇಲ್	ಡಚ್ಚರ ಭಾಗ
2. ಪಾಂಡಿಚೇರಿ	ಕರಡು ರಚನಾ ಸಮಿತಿ
3. ಗೋವಾ	ಸ್ವತಂತ್ರ ಭಾರತದ ಪ್ರಥಮ ಗವರ್ನರ್ ಜನರಲ್
4. ಡಾಕ್ಟರ್ ಬಿ.ಆರ್.ಅಂಬೇಡ್ಕರ್	ಭಾರತದ ಬಿಸ್ಮಾರ್ಕ್
5. ಲಾರ್ಡ್ ಮೌಂಟ್ ಬ್ಯಾಟನ್	ಪೋರ್ಚುಗೀಸರ ಭಾಗಗಳು
	ಫ್ರೆಂಚ್‌ರ ಭಾಗಗಳು
	ಬ್ರಿಟಿಷ್ ಭಾಗಗಳು.

II

1. ಮೋತಿಲಾಲ್ ನೆಹರು	ಉತ್ತರ ಪ್ರದೇಶ
2. ಚೌರಿಚೌರಾ	ಸ್ವರಾಜ್ಯ ಪಕ್ಷ
3. ಪಂಜಾಬಿನ ಸಿಂಹ	ಖಾನ್ ಅಬ್ದುಲ್ ಗಫರ್‌ಖಾನ್
4. ಕೋಮುವಾರು ಪ್ರಾತಿನಿಧಿತ್ವ	ಲಾಲಾಲಜಪತ್‌ರಾಯ್
5. ಗಡಿನಾಡ ಗಾಂಧಿ	ರಾಮ್ಸೆ ಮೆಕ್‌ಡೊನಾಲ್ಡ್
	ಭಗತ್ ಸಿಂಗ್
	ಮುಸ್ಲೀಂ ಲೀಗ್

ಇ. ಸಂಕ್ಷಿಪ್ತವಾಗಿ ಉತ್ತರಿಸಿ.

1. 1935ರಲ್ಲಿ ಭಾರತ ಸರ್ಕಾರ ಶಾಸನವು ಏನೇನು ಬದಲಾವಣೆಗಳನ್ನು ಕೈಗೊಂಡಿತು?
2. ಲಾಹೋರ್ ಕಾಂಗ್ರೆಸ್ ಅಧಿವೇಶನದಲ್ಲಿ ಮುಸ್ಲೀಂ ಲೀಗಿನ ಮುಖ್ಯತ್ವವೇನು?
3. 1929ರ ಲಾಹೋರ್ ಕಾಂಗ್ರೆಸ್ ಅಧಿವೇಶನದಲ್ಲಿ ನೆರವೇರಿಸಿದ ತೀರ್ಮಾನಗಳು ಯಾವುವು?
4. ಮಂತ್ರಿ ಮಂಡಲ ರಾಯಭಾರ ಸಮಿತಿಯ ಬಗ್ಗೆ ಟಿಪ್ಪಣಿ ಬರೆಯಿರಿ.
5. ಪಾಕಿಸ್ಥಾನಕ್ಕೊಳಪಟ್ಟಿರುವ ರಾಜ್ಯಗಳ ಹೆಸರುಗಳನ್ನು ಬರೆಯಿರಿ.

ಈ. ಕೆಳಕಂಡ ಶೀರ್ಷಿಕೆಯಡಿಯಲ್ಲಿರುವ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ.

1. ಸೈಮನ್ ಸಮಿತಿ.

ಅ) ಸೈಮನ್ ಸಮಿತಿಯನ್ನು ಏಕೆ ನೇಮಿಸಲಾಯಿತು?

ಆ) ಭಾರತೀಯರು ಈ ಸಮಿತಿಯನ್ನು ಏಕೆ ನಿರಾಕರಿಸಿದರು?

ಇ) ಸೈಮನ್ ಸಮಿತಿಯು ಹೇಗೆ ಆಹ್ವಾನಿಸಲ್ಪಟ್ಟಿತು?

ಈ) ಸೈಮನ್ ಸಮಿತಿಯನ್ನು ವಿರೋಧಿಸುತ್ತಿದ್ದಾಗ ಸಾವನ್ನಪ್ಪಿದ ಭಾರತದ ನಾಯಕರನ್ನು ಹೆಸರಿಸಿ.

2. ಆಗಸ್ಟ್ ಕೊಡುಗೆ

ಅ) ಆಗಸ್ಟ್ ಕೊಡುಗೆಯನ್ನು ಯಾವಾಗ ಪ್ರಕಟಿಸಲಾಯಿತು?

ಆ) ಎರಡನೆಯ ಮಹಾಯುದ್ಧದ ನಂತರ ಭಾರತಕ್ಕೆ ಏನೆಂದು ಭರವಸೆ ನೀಡಲ್ಪಟ್ಟಿತು?

ಇ) ರಾಯಭಾರ ಸಮಿತಿಯನ್ನು ಏಕೆ ಕಳುಹಿಸಲಾಯಿತು?

ಈ) ರಾಯಭಾರ ಸಮಿತಿಯ ಪ್ರತಿನಿಧಿಯಾಗಿ ನೇಮಿಸಲ್ಪಟ್ಟವನು ಯಾರು?

3. ಮೌಂಟ್ ಬ್ಯಾಟನ್ ಯೋಜನೆ

ಅ) 1947ರಲ್ಲಿ ಭಾರತದ ಗವರ್ನರ್ ಗೌರವ ಪದವಿಯನ್ನು ವಹಿಸಿಕೊಂಡವರು ಯಾರು?

ಆ) ಬ್ರಿಟಿಷರ ಕೊನೆಯ ಗವರ್ನರ್ ಜನರಲ್ ಯಾರು?

ಇ) ಮೌಂಟ್ ಬ್ಯಾಟನ್ ಯೋಜನೆ ಎಂದರೇನು?

ಈ) ಮೌಂಟ್ ಬ್ಯಾಟನ್ ಯೋಜನೆಯಿಂದ ಕಾಂಗ್ರೆಸ್ ಮತ್ತು ಮುಸ್ಲೀಂ ಲೀಗಿನ ಪ್ರತಿಫಲವೇನು?

ಊ. ವಿವರವಾಗಿ ಉತ್ತರಿಸಿ.

1. 1920–22ರ ಅಸಹಕಾರ ಚಳುವಳಿಯ ಹಂತಗಳನ್ನು ವಿವರಿಸಿ. ಅಸಹಕಾರ ಚಳುವಳಿಯನ್ನು ಏಕೆ ಕೈಬಿಡಲಾಯಿತು?
2. ಉಪ್ಪಿನ ಸತ್ಯಾಗ್ರಹ – ವಿವರಿಸಿ.
3. ಮೂರು ದುಂಡು ಮೇಜಿನ ಸಮ್ಮೇಳನಗಳ ಪ್ರಾಮುಖ್ಯತೆಯನ್ನು ವಿವರಿಸಿ.
4. ಬಿಳಿಯರೇ ಭಾರತ ಬಿಟ್ಟು ತೊಲಗಿ ಚಳುವಳಿ– ವಿವರಿಸಿ.
5. ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸ್ ಮತ್ತು ಭಾರತೀಯ್ರ ರಾಷ್ಟ್ರೀಯ ಸೇನೆಯ ಪಾತ್ರವನ್ನು ವಿವರಿಸಿ.

ಋ. ಪ್ರಾಯೋಗಿಕ ಚಟುವಟಿಕೆ

1. 1930 ರಿಂದ 1950ರ ವರೆಗಿನ ಘಟನೆಗಳಿಗೆ ಸೂಕ್ತ ಕಾಲರೇಖೆಯನ್ನು ಬರೆಯಿರಿ.
2. ಭಾರತದ ಭೂಪಟದಲ್ಲಿ ಕೆಳಕಂಡ ಸ್ಥಳಗಳನ್ನು ಗುರುತಿಸಿ (ಪುಟ 81 ಮತ್ತು 93)

   1) ಅಮೃತಸರ 2) ಲಕ್ನೋ 3) ಚೌರಿಚೌರಾ 4) ಪೂನಾ 5) ಸೂರತ್

   6) ದಂಡಿ 7) ತೂತ್ತುಕುಡಿ 8) ವೇದಾರಣ್ಯ 9) ಚೆನ್ನೈ 10) ಬಾಂಬೆ
3. ಅ.ಪೋರ್ಚುಗೀಸರ ಭಾಗಗಳು – ಡಿಯೂ, ಡಾಮನ್, ಗೋವಾ

   ಆ. ಫ್ರೆಂಚರ ಭಾಗಗಳು– ಪಾಂಡಿಚೇರಿ, ಕಾರೈಕ್ಕಲ್, ಏನಂ, ಮಾಹೆ

   ಇ)ಪಶ್ಚಿಮ ಪಾಕಿಸ್ತಾನ ಈ) ಪೂರ್ವ ಪಾಕಿಸ್ಥಾನ ಉ) ಹೈದರಾಬಾದ್

   ಊ) ಜುನಾಗಢ ಋ) ಕಾಶ್ಮೀರ.

13. ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ತಮಿಳುನಾಡಿನ ಪಾತ್ರ

ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ತಮಿಳುನಾಡಿನ ಪಾತ್ರವು ಗಮನಾರ್ಹವಾದುದಾಗಿದೆ. ಈ ಚಳುವಳಿಯಲ್ಲಿ ಭಾಗವಹಿಸಿದ್ದ ನಾಯಕರುಗಳೆಂದರೆ ವೇಲುತಂಬಿ, ಪುಲಿದೇವರ್, ಕಟ್ಟಬೊಮ್ಮನ್, ಹಾಗೂ ಮರುದು ಸಹೋದರರು. ಇವರಿಗಿದ್ದ ದೇಶ ಭಕ್ತಿ, ಧೈರ್ಯ, ಸ್ವಾಭಿಮಾನ ಮತ್ತು ತ್ಯಾಗದ ಸಂಕೇತವಾಗಿದ್ದವು. ಬ್ರಿಟಿಷರ ಅಧಿಕಾರದ ವೇಳೆ ಇದ್ದಂತಹ ಮಹಾನ್ ನಾಯಕರು, ವಿದ್ವಾಂಸರು ಮತ್ತು ಸಾಮಾಜಿಕ ಸುಧಾರಕರೆಂದರೆ, ಜಿ.ಸುಬ್ರಹ್ಮಣ್ಯ ಅಯ್ಯರ್, ವಿ.ಒ.ಚಿದಂಬರಂ ಪಿಳ್ಳೈ, ಸುಬ್ರಹ್ಮಣ್ಯಂ ಭಾರತಿ, ಸಿ. ರಾಜ ಗೋಪಾಲಾಚಾರಿ, ಪೆರಿಯಾರ್ ಈ.ವಿ.ರಾಮಸ್ವಾಮಿ, ತಿರುಪ್ಪೂರ್ ಕುಮರನ್ , ಕೆ.ಕಾಮರಾಜರ್ ಮತ್ತು ಬಹಳಷ್ಟು ಜನರು ನಮ್ಮ ಸ್ವಾತಂತ್ರ್ಯ ಹೋರಾಟದ ಯಶಸ್ಸಿಗೆ ತಮ್ಮದೇ ಆದ ಸೇವೆ ಸಲ್ಲಿಸಿದರು.

ವೆಲ್ಲೂರು ಕ್ರಾಂತಿ 1806

ಹಿಂದೂ ಸೈನಿಕರು ತಮ್ಮ ಧಾರ್ಮಿಕ ವಿಧಿಗಳಂತೆ ಹಣೆಗೆ ತಿಲಕವಿಡುವುದು ಮತ್ತು ಮುಸ್ಲಿಮರು ಗಡ್ಡ ಬಿಡುವುದು ಹಾಗೂ ಮೀಸೆ ಕತ್ತರಿಸುವಂತಹ ಧಾರ್ಮಿಕ ಆಚರಣೆಗಳಿಗೆ ಬ್ರಿಟಿಷ್ ಆಡಳಿತ ನಿಷೇಧ ಮಾಡಿತು. ಇದರಿಂದಾಗಿ ಸೈನಿಕರಲ್ಲಿ ಅಸಮಾಧಾನವನ್ನುಂಟು ಮಾಡಿತು.

ವೆಲ್ಲೂರಿನಲ್ಲಿ ಬ್ರಿಟಿಷರ ಬಂಧನದಲ್ಲಿದ್ದ ಟಿಪ್ಪುವಿನ ಮಕ್ಕಳ ಪರವಾಗಿ ಬ್ರಿಟಿಷರ ವಿರುದ್ಧ ಈ ದಂಗೆ ನಡೆಯಿತು.

ಜುಲೈ 9, 1806ರಲ್ಲಿ ಟಿಪ್ಪು ಸುಲ್ತಾನನ ಮಗಳೊಬ್ಬಳ ಮದುವೆಯು ವೆಲ್ಲೂರಿನಲ್ಲಿ ನಡೆಯಿತು. ದಂಗೆಯಲ್ಲಿದ್ದ ಸೈನಿಕರು ಮದುವೆಯಲ್ಲಿ ಭಾಗವಹಿಸುವ ಸಲುವಾಗಿ ಕೋಟೆಯಲ್ಲಿ ಒಂದುಗೂಡಿದರು. ಮಧ್ಯರಾತ್ರಿಯ ನಂತರ ಎರಡು ಗಂಟೆಯ ವೇಳೆಗೆ ಜುಲೈ, 10 ರಂದು ಸೈನಿಕರು ಕೋಟೆಯನ್ನು ಸುತ್ತುವರಿದು ಯೂರೋಪಿನ್ನರನ್ನು ಕೊಂದು ಕೋಟೆಯ ಮೇಲೆ ಟಿಪ್ಪುವಿನ ಧ್ವಜವನ್ನು ಹಾರಿಸಿದರು. ಟಿಪ್ಪುವಿನ ಎರಡನೇ ಮಗ ಫತೇಹೈದರ್‌ನನ್ನು ರಾಜನೆಂದು ಪ್ರಕಟಿಸಿದರು, ಹೀಗಿದ್ದರೂ ದಂಗೆಯನ್ನು ಆಂಗ್ಲರು ಅಡಗಿಸಿದರು.

ಚೆನ್ನೈ ಮಹಾಜನ ಸಭಾ

ಮದ್ರಾಸ್ ಪ್ರೆಸಿಡೆನ್ಸಿ ಜನರ ಹಕ್ಕಿಗಾಗಿ ಚಳುವಳಿ ನಡೆಸಲು ಮದ್ರಾಸ್ ನೇಟಿವ್ ಅಸೋಷಿಯನ್ ಪ್ರಥಮವಾಗಿ ಜನರನ್ನು ಸಂಘಟಿಸಿತು. ಮದ್ರಾಸ್ ಮಹಾಜನ ಸಭಾ ಸಂಘ 1852ರಲ್ಲಿ ಲಕ್ಷ್ಮಿ ನರಸು ಶೆಟ್ಟಿಯಿಂದ ಸ್ಥಾಪಿಸಲ್ಪಟ್ಟಿತು. ಈ ಸಂಘವು ಈಸ್ಟ್ ಇಂಡಿಯಾ ಕಂಪನಿಯ ರಾಜಕೀಯದಲ್ಲಿ ಬಹಳ ಸಂಧಿಗ್ಧತೆಯನ್ನುಂಟು ಮಾಡಿತು. 1884ರಲ್ಲಿ ಮದ್ರಾಸ್ ನೇಟಿವ್ ಅಸೋಸಿಯೇಶನ್‌ನ ಎಸ್. ರಾಮಸ್ವಾಮಿ ಮುದಲಿಯಾರ್, ಪಿ.ಆನಂದ ಚಾರ್ಲು ಮತ್ತು ಪಿ.ರಂಗಯ್ಯನಾಯ್ಡು ಇವರುಗಳಿಂದ ಮದ್ರಾಸ್ ಮಹಾಜನ ಸಭಾದ ಜೊತೆ ಸೇರಿಸಿಕೊಳ್ಳಲಾಯಿತು. ಈ ಸಭೆಯು ಚೆನ್ನೈನ ಅಣ್ಣಾ ಸಾಲೈನ, ಎಲ್ಲಿಷ್ ರಸ್ತೆಯಲ್ಲಿರುವ "ದಿ ಹಿಂದು" ಕಛೇರಿಯಲ್ಲಿ ಕಾರ್ಯ ನಿರ್ವಹಿಸತೊಡಗಿತು.

ಚೆನ್ನೈ ಮಹಾಜನಸಭೆಯು ಪ್ರಥಮ ಅಧ್ಯಕ್ಷರಾಗಿ ಪಿ.ರಂಗಯ್ಯನಾಯ್ಡು ಚುನಾಯಿತರಾದರು. ಈ ಸಭೆಯು ಪ್ರಾರಂಭದ ದಿನಗಳಲ್ಲಿ ಆಧುನಿಕ ತತ್ವಗಳನ್ನು ಅಳವಡಿಸಿಕೊಂಡಿತು. ಭಾರತದ ವೈಸ್‌ರಾಯ್ ಲಾರ್ಡ್ ಎಲ್ಜಿನ್ 1895, ರಲ್ಲಿ ಮದ್ರಾಸಿಗೆ ಭೇಟಿ ನೀಡಿದಾಗ ಮದ್ರಾಸ್ ಮಹಾಜನ ಸಭಾದ ಸ್ವಾಗತ ಭಾಷಣವನ್ನು ತಿರಸ್ಕರಿಸಿದನು.

ಮದ್ರಾಸ್ ಮಹಾಜನ ಸಭಾ ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಅನುಸರಿಸಿದ ಮಾರ್ಗವು ಅದ್ವಿತೀಯವಾದುದಾಗಿದೆ. ಈ ಸಭೆಯು ಸ್ವದೇಶದ ಜನರ ಮೂಲಭೂತ ಹಕ್ಕುಗಳಿಗಾಗಿ ಧ್ವನಿ ಗೂಡಿಸಿತು. ಇದು 1920ರಿಂದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಜೊತೆ ನಿಕಟವಾದ ಸಂಬಂಧವನ್ನು ಬೆಳೆಸಿಕೊಂಡಿತು. ಇದರ ಫಲವಾಗಿ 1930ರಲ್ಲಿ ಮದ್ರಾಸ್‌ನ ಜಾರ್ಜ್ ಟೌನ್, ಯಾನೈಕವುಣಿ, ಹೈಕೋರ್ಟ್ ಮತ್ತು ಸಮುದ್ರ ತೀರದ ಭಾಗಗಳಲ್ಲಿ ಈ ಸಭೆಯು ಉಪ್ಪು ಸತ್ಯಾಗ್ರಹ ಚಳುವಳಿಯನ್ನು ಸಂಘಟಿಸಿತು. ಈ ಹೋರಾಟದಲ್ಲಿ ಭಾಗವಹಿಸಿದ ಸದಸ್ಯರುಗಳನ್ನು ಅಮಾನುಷವಾಗಿ ದಂಡಿಸಲಾಯಿತು. ಇದನ್ನು ವಿಚಾರಿಸಲು


ನ್ಯಾಯಮೂರ್ತಿ ಟಿ.ಆರ್.ರಾಮಚಂದ್ರ ಅಯ್ಯರ್‌ರವರ ನಾಯಕತ್ವದಲ್ಲಿ ಮೂವರು ಸದಸ್ಯರನ್ನೊಳಗೊಂಡ ಆಯೋಗ ವಿಚಾರಣೆಗೊಳಪಡಿಸಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದರು.

ಬ್ರಿಟಿಷ್ ಸರ್ಕಾರ ಕಾಂಗ್ರೆಸ್ ಪಕ್ಷಕ್ಕೆ ತಡೆ ನೀಡಿದುದರಿಂದ ಮದ್ರಾಸ್ ಮಹಾಜನ ಸಭೆಯು ಭಾರತೀಯರ ಹೃದಯದಲ್ಲಿ ದೇಶಭಕ್ತಿ ಭಾವನೆಯನ್ನು ಪ್ರೇರೇಪಿಸಲು ಅಸಂಖ್ಯಾತ ಪ್ರದರ್ಶನಗಳನ್ನು ನಡೆಸಿದರು. ಅಖಿಲ ಭಾರತ ಖಾದಿ ಪ್ರದರ್ಶನ ಮತ್ತು ಸ್ವದೇಶಿ ವಸ್ತುಪ್ರದರ್ಶನದ ಮೂಲಕ ಜನರ ಮನಸ್ಸಿನಲ್ಲಿ ದೇಶಾಭಿಮಾನ ಬೆಳೆಯಿತು.

ಅಕ್ಟೋಬರ್ 24, 1896ರಲ್ಲಿ ನಡೆದ ಮಹಾಜನ ಸಭಾದ ಸಮಾರಂಭದಲ್ಲಿ ಭಾರತದ ಪಿತಾಮಹಾ ಮಹಾತ್ಮ ಗಾಂಧೀಜಿ ಉಪನ್ಯಾಸ ನೀಡಿದರು. ಪಂಡಿತ್ ಜವಹರ್‌ಲಾಲ್ ನೆಹರೂ ಸಹ ಮಹಾಜನ ಸಭಾದ ಸುವರ್ಣಮಹೋತ್ಸವದಲ್ಲಿ ಭಾಗವಹಿಸಿದರು.

ವ.ಉ.ಚಿದಂಬರಂ ಪಿಳ್ಳೈ

ಗಾಣ ಎಳೆದ ಧುರೀಣ ಎಂದೂ, ಕಪ್ಪಲೋಟ್ಟಿಯ ತಮಿಳನ್ ಎಂದೂ ಕರೆಯಲ್ಪಡುವ ಚಿದಂಬರ ಪಿಳ್ಳೈ 1872ರ ಸೆಪ್ಟಂಬರ್ 5ರಂದು ಒಟ್ಟಪಿಡಾರಂನಲ್ಲಿ ಜನಿಸಿದರು.



ವ.ಉ.ಚಿದಂಬರಂ ಪಿಳ್ಳೈ

ಇವರು ತಿರುನಲ್ವೇಲಿಯಲ್ಲಿ ವಕೀಲರಾಗಿ ತಮ್ಮ ವೃತ್ತಿಯನ್ನು ಪ್ರಾರಂಭಿಸಿದರು. ವ.ಉ.ಚಿದಂಬರಂ ಪಿಳ್ಳೈ ವ್ಯಾಪಾರ ಸಂಘ ಮತ್ತು ಕಾರ್ಮಿಕ ಸಂಘಟನೆಗಳಿಗೆ ಪ್ರೋತ್ಸಾಹಿಸಿದರು. ಸ್ವದೇಶಿ ಧರ್ಮ ಸಂಘ, ನೇಕಾರರ ಸಂಘ ಮತ್ತು ಸ್ವದೇಶಿ ಸಹಕಾರ ಅಂಗಡಿಗಳನ್ನು ತೂತುಕುಡಿಯಲ್ಲಿ ಸ್ಥಾಪಿಸಿದರು, ನಂತರ ಸ್ವದೇಶಿ ಹಡಗು ಸಂಸ್ಥೆಯನ್ನು ಸ್ಥಾಪಿಸಿದರು. ತೂತುಕೂಡಿ–ಕೊಲಂಬೊ ನಡುವೆ ಹಡಗು ಸಂಚಾರವನ್ನು ಪ್ರಾರಂಭಿಸಿದರು. 1905ರ ಬಂಗಾಳದ ವಿಭಜನೆಯು ಇವರ ರಾಜಕೀಯ ಪ್ರವೇಶಿಸುವಂತೆ ಮಾಡಿತು. ತೂತುಕುಡಿ ಹತ್ತಿರದ ಹವಳ ಕಾರ್ಖಾನೆ ಕಾರ್ಮಿಕರ ಮುಷ್ಕರವನ್ನು ಸಂಘಟಿಸಿದರು. ಇದರ ಪರಿಣಾಮವಾಗಿ ಕಾರ್ಮಿಕರ ವೇತನ ಹೆಚ್ಚಳ ಮತ್ತು ಕಾರ್ಮಿಕರು ದುಡಿಯುವ ಅವಧಿಯು ಕಡಿಮೆಯಾಯಿತು. 1907ರಲ್ಲಿ ಸೂರತ್‌ನ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದರು. ಈ ಅಧಿವೇಶನದಲ್ಲಿ ಕಾಂಗ್ರೆಸ್ ಎರಡು ಬಣಗಳಾಗಿ ಒಡೆಯಿತು. ವ.ಉ.ಚಿ. ಬಾಲಗಂಗಾಧರ ತಿಲಕರನ್ನು ಹಿಂಬಾಲಿಸಿ ತೀವ್ರವಾದವನ್ನು ಬೆಂಬಲಿಸಿದರು. ತಮಿಳುನಾಡಿನಲ್ಲಿ ತೀವ್ರವಾದವನ್ನು ವೇಗವಾಗಿ ಹಬ್ಬಿಸಿದರು. ಇವರ ಮೇಲೆ ದೇಶ ದ್ರೋಹಿ ಅಪವಾದವನ್ನು ಹೊರಿಸಿ 40 ವರ್ಷಗಳ ಜೈಲು ಶಿಕ್ಷೆ ವಿಧಿಸಲಾಯಿತು. ಇವರ ಬಲದ ಕಾಲನ್ನು ಸರಪಳಿಯಿಂದ ಕಟ್ಟಿ ಎತ್ತಿನಂತೆ ಸೆರೆಯಲ್ಲಿ ಗಾಣ ಎಳೆದರು. ಇವರ ಮನವಿ ಮೇರೆಗೆ ಈ ಶಿಕ್ಷೆಯನ್ನು ಕಡಿಮೆ ಮಾಡಲಾಯಿತು.


ಸುಬ್ರಮಣ್ಯ ಶಿವ

ಸುಬ್ರಮಣ್ಯ ಶಿವ, ದಿಂಡುಗಲ್ ಜಿಲ್ಲೆಯ ವತ್ತಲಗುಂಡು ಗ್ರಾಮದಲ್ಲಿ ಜನಿಸಿದರು. ಇವರೊಬ್ಬ ಶ್ರೇಷ್ಠ ಸ್ವಾತಂತ್ರ್ಯ ಹೋರಾಟಗಾರರಾಗಿಯೂ, ಶ್ರೇಷ್ಠ ಬರಹಗಾರರಾಗಿಯೂ ಪ್ರಜ್ವಲಿಸಿದರು. ಬ್ರಿಟಿಷರಿಗೆ ವಿರುದ್ಧವಾಗಿ ನಡೆದುಕೊಂಡ ಕಾರಣ 1908–1921ವರೆಗೆ ಹಲವು ಬಾರಿ ಇವರನ್ನು ಬಂಧಿಸಲಾಯಿತು. ಜೈಲಿನಲ್ಲಿರುವಾಗಲೇ ಸಾಂಕ್ರಮಿಕರೋಗದ ತೊಂದರೆಗೊಳಗಾದರು. ಇವರಿಂದಾಗಿ ಸೇಲಂ ಜೈಲಿಗೆ ವರ್ಗಾಯಿಸಲಾಯಿತು, ನಡೆಯಲಾಗದ ಸ್ಥಿತಿ ಉಂಟಾಯಿತು. ಈ ನಡುವೆ ಬ್ರಿಟಿಷ್ ಸರಕಾರ ಸಾಂಕ್ರಾಮಿಕರೋಗದಿಂದ ಬಳಲುತ್ತಿರುವವರು ರೈಲಿನಲ್ಲಿ ಪ್ರಯಾಣ ಮಾಡಬಾರದೆಂದು ಕಾನೂನೊಂದನ್ನು ಜಾರಿಗೆ ತಂದರು. ಇದರ ಪರಿಣಾಮವಾಗಿ ಸುಬ್ರಮಣ್ಯಂ ಶಿವರವರ ದೇಹವು ಸಾಂಕ್ರಾಮಿಕರೋಗದಿಂದ ಕೂಡಿದ್ದು ತಮಿಳುನಾಡಿನಾದ್ಯಾಂತ ಪಾದಯಾತ್ರೆ ಮಾಡಿದರು.

ನಂತರ ನೋವಿನಿಂದ ಬಳಲಿ ಜುಲೈ 23,1925ರಲ್ಲಿ ಮರಣ ಹೊಂದಿದರು.

ಸುಬ್ರಹ್ಮಣ್ಯ ಭಾರತಿಯಾರ್

ಸುಬ್ರಹ್ಮಣ್ಯ ಭಾರತಿಯಾರ್ 1882ರ ಡಿಸೆಂಬರ್ 11ರಂದು, ತಮಿಳುನಾಡಿನ ತಿರುನಲ್‌ವೇಲಿ ಜಿಲ್ಲೆಯ ಎಟ್ಟಯ್ಯಪುರಂನಲ್ಲಿ ಜನಿಸಿದರು. ಇವರು ತಮಿಳು ಶಿಕ್ಷಕರಾಗಿ 1904 ರಲ್ಲಿ ಮಧುರೈಯಲ್ಲಿ ಸೇವೆ ಸಲ್ಲಿಸಿದರು.. ಅಲ್ಲದೆ ಸ್ವದೇಶಿ ಮಿತ್ರ ಪತ್ರಿಕೆಯ ಉಪ ಸಂಪಾದಕರಾಗಿಯೂ ಕಾರ್ಯನಿರ್ವಹಿಸಿದ್ದರು.



ಸುಬ್ರಹ್ಮಣ್ಯ ಭಾರತಿಯಾರ್

1907ರಲ್ಲಿ ಸೂರತ್‌ನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದ್ದರು. ಆ ಸಭೆಯಲ್ಲಿ ಭಾಗವಹಿಸಿ ತಿಲಕ್ ಮತ್ತು ಅವರೊಡಗೂಡಿ ಸ್ವರಾಜ್ಯದ ಬೇಡಿಕೆಗೆ ಬೆಂಬಲಿಸಿದರು. 1907ರಲ್ಲಿ ತಮಿಳು ವಾರಪತ್ರಿಕೆ "ಇಂಡಿಯಾ"ದ ಪತ್ರಿಕೆ ಸಂಪಾದಕರಾದರು ಆ ಸಮಯಲ್ಲಿ 'ಬಾಲಭಾರತ' ಎಂಬ ಇಂಗ್ಲೀಷ್ ಪತ್ರಿಕೆಯನ್ನು ಪ್ರಕಟಿಸಿದರು.

1908ರಲ್ಲಿ ಚೆನ್ನೈಯಲ್ಲಿ ಬೃಹತ್ ಸಭೆಯನ್ನು ನಡೆಸಿ ಸ್ವರಾಜ್ಯ ದಿನವನ್ನು ಆಚರಿಸಿದರು. ಅವರು ವಂದೇ ಮಾತರಂ, ಅಚ್ಚಮಿಲ್ಲೈ-ಅಚ್ಚಮಿಲ್ಲೈ, ತಂದೈಯುಂ ತಾಯುಂ, ಜಯಭಾರತಂ ಗೀತೆಗಳನ್ನು ಮುದ್ರಿಸಿ ತಮಿಳರಿಗೆ ಉಚಿತವಾಗಿ ನೀಡಿದರು.

1908ರಲ್ಲಿ. ವ.ಉ.ಸಿ.ಗೆ ವಿರುದ್ಧವಾದ ಮೊಕದ್ದಮೆಯಲ್ಲಿ ಸಾಕ್ಷಿ ಹೇಳಿದರು. ಇದರಿಂದ ಬ್ರಿಟಿಷ್ ಸರಕಾರ ಇವರನ್ನು ಬಂಧಿಸಲು ಆಜ್ಞೆ ಮಾಡಿತು. ಹೀಗಾಗಿ ಭಾರತಿಯಾರ್ ಫ್ರೆಂಚರ ನಿಯಂತ್ರಣದಿಂದ ತಪ್ಪಿಸಿಕೊಂಡು ಪಾಂಡಿಚೇರಿಗೆ ಓಡಿ ಹೋದರು. ಅಲ್ಲಿಂದಲೇ ದಿನ ಪತ್ರಿಕೆ, ವಾರ ಪತ್ರಿಕೆ ಮತ್ತು ಮಾಸ ಪತ್ರಿಕೆಗಳಲ್ಲಿ ತಮ್ಮ ಬರಹಗಳನ್ನು ಪ್ರಕಟಿಸಿದರು. ಆದರೆ ಬ್ರಿಟಿಷ್ ಸರಕಾರ 1909ರಲ್ಲಿ ಭಾರತೀಯಾರ್‌ರ ಬರಹಗಳಿಗೆ ತಡೆ ನೀಡಿತು.

ಮೊದಲನೆ ಮಹಾಯುದ್ಧದ ನಂತರ ನವೆಂಬರ್ 1918ರಲ್ಲಿ ಭಾರತಿಯಾರ್ ಕಡಲೂರಿಗೆ ಬಂದರು. ಆ ಸಂದರ್ಭದಲ್ಲಿ ಬ್ರಿಟಿಷ್ ಸರ್ಕಾರ ಅವರನ್ನು ಬಂಧಿಸಿ ಮೂರು ವಾರಗಳ ನಂತರ ಬಿಡುಗಡೆ ಮಾಡಿತು. ಭಾರತೀಯರು ಎದುರಿಸುತ್ತಿದ್ದ ಭೀಕರ ಸಮಸ್ಯೆಗಳು ಮತ್ತು ಬಡತನವನ್ನು ಎದುರಿಸಿ ನಂತರ ಮದರಾಸಿನಿಂದ ಪ್ರಕಟವಾಗುತ್ತಿದ್ದ ಸ್ವದೇಶಿ ಮಿತ್ರನ್ ಪತ್ರಿಕೆಯಲ್ಲಿ ಸಂಪಾದಕರಾಗಿ ಮತ್ತೆ ಸೇವೆ ಸಲ್ಲಿಸಿದರು. ಸೆಪ್ಟೆಂಬರ್ 11, 1921ರಲ್ಲಿ ಮರಣ ಹೊಂದಿದರು. ಸುಮಾರು 90 ವರ್ಷಗಳ ನಂತರವೂ ಭಾರತೀಯಾರ್ ತಮಿಳುನಾಡಿನ ಸ್ವಾಭಿಮಾನಿ, ದೇಶಪ್ರೇಮಿ, ಭಾಷಾಪ್ರೇಮಿಯೂ ಆಗಿದ್ದಾರೆ. ಇಷ್ಟೇ ಅಲ್ಲದೆ ಅವರು ಭಾರತದ ಏಕತೆಗಾಗಿ ಶ್ರಮಿಸಿದರು.

ವಾಂಜಿನಾಥನ್

ವಾಂಜಿನಾಥ್‌ನ್ ತಿರುವಿತಾಂಗೂರ್ ಸಂಸ್ಥಾನದಲ್ಲಿ ಸೇವೆ ಸಲ್ಲಿಸಿದರು. ತೀವ್ರಗಾಮಿಗಳ ಕಾರ್ಯ ಚಟುವಟಿಕೆಗಳು ಬ್ರಿಟಿಷ್ ಸರಕಾರವನ್ನು ಭಯ ಪಡಿಸಿತು. ತಿರುನಲ್ವೇಲಿ ಜಿಲ್ಲೆಯ ಜಿಲ್ಲಾಧಿಕಾರಿಯಾಗಿದ್ದ ಆಷ್‌ರವರು ನಾಲ್ಕು ಮಂದಿಯನ್ನು ತಿರುನಲ್ವೇಲಿಯಲ್ಲಿ ಗುಂಡುಹಾರಿಸಿ ಕೊಂದರು. ಈ ಕ್ರೂರಕೃತ್ಯಕ್ಕೆ ಪ್ರತಿಯಾಗಿ ವಾಂಜಿನಾಥನ್ ರಹಸ್ಯವಾಗಿ ಮಣಿಯಾಚ್ಚಿ ರೈಲು ನಿಲ್ದಾಣಕ್ಕೆ ಹೋಗಿ ಜೂನ್ 17, 1911 ರಲ್ಲಿ ಜಿಲ್ಲಾಧಿಕಾರಿ ಆಷ್‌ರವರನ್ನು ಗುಂಡುಹಾರಿಸಿಕೊಂದು ತಾನೂ ಸಹ ಆತ್ಮಹತ್ಯೆ ಮಾಡಿ ಕೊಂಡರು. ವಾಂಜಿನಾಥನ್‌ರ ಅಂಗಿಯ ಜೇಬಿನಲ್ಲಿ ಒಂದು ಪತ್ರವಿತ್ತು. ಆ ಪತ್ರದಲ್ಲಿ ಜಿಲ್ಲಾಧಿಕಾರಿ ಆಷ್‌ರ ಕೊಲೆ, ಚೆನ್ನೈಗೆ ಬರುವ ರಾಜ ಐದನೇ ಜಾರ್ಜ್ ಕೊಲೆ ಮಾಡುವುದಕ್ಕಾಗಿ ಮಾಡಿದ ತಾಲೀಮು ಆಗಿದೆ ಎಂದು ಬರೆಯಲಾಗಿತ್ತು.

ತಿರುಪ್ಪೂರ್ ಕುಮರನ್

ಈರೋಡು ಜಿಲ್ಲೆಯ ಚೆನ್ನಿಮಲೈಯಲ್ಲಿ ತಿರುಪ್ಪೂರ್ ಕುಮರನ್ 1904ರಲ್ಲಿ ಜನಿಸಿದರು. ಇವರು ಮಹಾನ್ ಕ್ರಾಂತಿಕಾರಿ.

ಇವರು ರಾಷ್ಟ್ರಧ್ವಜದ ವಿರುದ್ಧದ ಕ್ರಾಂತಿಯಲ್ಲಿ ಭಾಗವಹಿಸಿ ಪೊಲೀಸರ ದೌರ್ಜನ್ಯದಿಂದಾಗಿ ಮರಣ



ತಿರುಪ್ಪೂರ್ ಕುಮರನ್

ಹೊಂದಿದರು. ಸಾಯುವ ವೇಳೆ ರಾಷ್ಟ್ರಧ್ವಜವನ್ನು ಕೈಯಲ್ಲಿ ಹಿಡಿದು ತನ್ನಲ್ಲಿರುವ ದೇಶಪ್ರೇಮವನ್ನು ತೋರಿಸಿದರು. ಇವರು ತಮಿಳುನಾಡಿನ ಇತಿಹಾಸದಲ್ಲಿ 'ಧ್ವಜ ಕಾಪಾಡಿದ ಕುಮರನ್' ಎಂದು ಪ್ರಜ್ವಲಿಸಿದರು. ತಮಿಳುನಾಡು ಸರಕಾರ ತಿರುಪ್ಪೂರ್ ರೈಲು ನಿಲ್ದಾಣದ ಪಕ್ಕದಲ್ಲಿರುವ ಉದ್ಯಾನವನದಲ್ಲಿ ಇವರ ಪ್ರತಿಮೆಯನ್ನು ಪ್ರತಿಷ್ಠಾಪನೆ ಮಾಡಲಾಗಿದೆ.

ಎಸ್. ಸತ್ಯಮೂರ್ತಿ

ಸತ್ಯಮೂರ್ತಿಯವರು ದೇಶಪ್ರೇಮಿ, ರಾಷ್ಟ್ರಭಕ್ತ ಹಾಗೂ ಶ್ರೇಷ್ಠ ರಾಜಕಾರಣಿ. ಇವರು ಕೆ.ಕಾಮರಾಜರ್ ಅವರಿಗೆ ರಾಜಕೀಯ ಗುರುವೂ ಹೌದು. 1930ರಲ್ಲಿ ರಾಜಗೋಪಾಲಾಚಾರಿಯವರು, ಅವರ ನಂತರ ಸತ್ಯಮೂರ್ತಿಯನ್ನು ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ತಮಿಳುನಾಡಿನ ಘಟಕದ ಉತ್ತರಾಧಿಕಾರಿಯಾಗಿ ನಾಮಕರಣ ಮಾಡಿದರು. ಇವರು 1939ರಲ್ಲಿ ಮದ್ರಾಸಿನ ಮೇಯರ್ ಆಗಿಯೂ ಸೇವೆ ಸಲ್ಲಿಸಿದರು. ಇವರ ನೇತೃತ್ವದಲ್ಲಿ ದೇಶದ ನಾಗರೀಕರಿಗೆ ಉತ್ತಮ ಶಿಕ್ಷಣ, ನೀರಿನ ಸರಬರಾಜು ವ್ಯವಸ್ಥೆಯನ್ನು ಸುವ್ಯವಸ್ಥಿತವಾಗಿ ಮಾಡುವುದರಲ್ಲಿ ಯಶಸ್ವಿಯಾದರು.

ಎಸ್.ಸತ್ಯಮೂರ್ತಿಯವರು ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿದ್ದ ತಿರುಮೈಯಂನಲ್ಲಿ ಆಗಸ್ಟ್ 19, 1887ರಲ್ಲಿ ಜನಿಸಿದರು.



ಎಸ್.ಸತ್ಯಮೂರ್ತಿ

ಅವರು ಪ್ರಾರಂಭದಲ್ಲಿ ವಕೀಲ ವೃತ್ತಿಯ ಅಭ್ಯಾಸದಲ್ಲಿ ತೊಡಗಿಸಿಕೊಂಡಿದ್ದರು. ಅವರು ವಕೀಲ ವೃತ್ತಿಯನ್ನು ಪ್ರಾರಂಭಿಸಿದಾಗ ದೇಶದಾದ್ಯಾಂತ ರಾಷ್ಟ್ರೀಯ ಚಳುವಳಿ ನಡೆಯುತ್ತಿತ್ತು. ಅವರು ತಮ್ಮ ಕಿರಿಯ ವಯಸ್ಸಿನಲ್ಲೇ ರಾಜಕೀಯ ಪ್ರವೇಶಿಸಿದರು. ತಮ್ಮ ನಾಯಕರ ಗುಣ ಮತ್ತು ಹೋರಾಟದ ಮನೋಭಾವ ಮತ್ತು ಅವರಲ್ಲಿದ್ದ ಸಂಘಟನೆ ಚತುರತೆಯಿಂದಾಗಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಒಬ್ಬ ಪ್ರಮುಖ ಅಥವಾ ಶ್ರೇಷ್ಠ ನಾಯಕರಾಗಿ ಬೆಳಕಿಗೆ ಬಂದರು ಅಥವಾ ಗುರುತಿಸಿಕೊಂಡರು. 1919ರಲ್ಲಿ ಜಾರಿಗೆ ತರುತ್ತಿದ್ದ ಮಾಂಟೆಗೋ– ಚೆಲ್ಮ್ಸ್‌ಫೋರ್ಡ್ ಸುಧಾರಣೆ ಮತ್ತು ರೌಲತ್ ಕಾಯಿದೆಯನ್ನು ವಿರೋಧಿಸಲು ರಚಿಸಲಾಗಿದ್ದ ಸಮಿತಿಯಲ್ಲಿ ಒಬ್ಬ ಸದಸ್ಯರಾಗಿ ಕಾಂಗ್ರೆಸ್‌ನಿಂದ ನೇಮಕಗೊಂಡಿದ್ದರು.

1939ರಲ್ಲಿ ಸತ್ಯಮೂರ್ತಿಯವರು ಚೆನ್ನೈನ ಮೇಯರ್ ಆಗಿ ಅಧಿಕಾರದಲ್ಲಿದ್ದಾಗ ಶುದ್ಧ ಕುಡಿಯುವ ನೀರಿನ ಪೂರೈಕೆಯ ಅಭಾವ ತೀವ್ರವಾಗಿತ್ತು. ಜನರ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಮದ್ರಾಸಿನ ಪಶ್ಚಿಮ ಭಾಗದಲ್ಲಿ ಸುಮಾರು 50 ಕಿ.ಮೀ ದೂರದ ಪೂಂಡಿಯಲ್ಲಿ ಜಲಾಶಯ ನಿರ್ಮಿಸಲು ವ್ಯವಸ್ಥೆ ಮಾಡಿದರು. ಈ ಕುಡಿಯುವ ನೀರಿನ ಜಲಾಶಯವು ನಂತರ ಬಂದ ಕಾಮರಾಜರಿಂದ

ಉದ್ಘಾಟನೆ ಮಾಡಲಾಯಿತು. ಸತ್ಯಮೂರ್ತಿಯವರ ಜ್ಞಾಪಕಾರ್ಥಕವಾಗಿ "ಸತ್ಯಮೂರ್ತಿ ಸಾಗರ್" ಎಂದು ನಾಮಕರಣ ಮಾಡಲಾಯಿತು. ಸತ್ಯ ಮೂರ್ತಿಯರವರ ಈ ಸಾಧನೆಯನ್ನು ಗುರುತಿಸಿದ ತಮಿಳುನಾಡು ಕಾಂಗ್ರೆಸ್ ಕಮಿಟಿಯ ಮುಖ್ಯ ಕಛೇರಿಗೆ ಸತ್ಯಮೂರ್ತಿ ಭವನ ಎಂದು ನಾಮಕರಣ ಮಾಡಿತು.

ಇವರು ಸ್ವದೇಶಿ ಚಳುವಳಿ ಮತ್ತು ಬ್ರಿಟೀಷರೇ ಭಾರತ ಬಿಟ್ಟು ತೊಲಗಿ ಎಂಬ ಚಳುವಳಿಯಲ್ಲಿ ಭಾಗವಹಿಸಿ ಹಲವಾರು ಭಾರಿ ಸೆರೆವಾಸ ಅನುಭವಿಸಿದರು. ಇವರು ಸೇವಾ ಮನೋಭಾವ ಉತ್ತಮ ಗುಣವುಳ್ಳ ಅತ್ಯುತ್ತಮ ಶ್ರೇಷ್ಠ ರಾಜಕಾರಣಿ ಎಂಬ ಗೌರಕ್ಕೆ ಪಾತ್ರರಾಗಿದ್ದರು. ಇವರು ದೇಶಕ್ಕೆ ಸ್ವಾತಂತ್ರ್ಯ ಕೊಡಲು ಮತ್ತು ನ್ಯಾಯ ಒದಗಿಸಲು ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದರು. ಇಂತಹ ಉತ್ತಮ ಧೇಯೋದ್ಧೇಶಗಳನ್ನು ಹೊಂದಿದ್ದ ಉತ್ತಮ ವ್ಯಕ್ತಿತ್ವದ ಇವರು ಮಾರ್ಚ್ 28, 1943ರಲ್ಲಿ ನಿಧನರಾದರು.

ಸಿ.ರಾಜಗೋಪಾಲಾಚಾರಿ

ರಾಜಾಜಿ ಎಂದೇ ಕೀರ್ತಿಗಳಿಸಿದ ರಾಜಗೋಪಾಲಾಚಾರಿ, ಡಿಸೆಂಬರ್ 10, 1878ರಲ್ಲಿ ತೊರಪಳ್ಳಿಯಲ್ಲಿ ಜನಿಸಿದರು. ಅವರು ಕಾನೂನು ವ್ಯಾಸಂಗ ಮಾಡಿ ವಕೀಲರಾಗಿ ತಮ್ಮ ಜೀವನವನ್ನು ಪ್ರಾರಂಭಿಸಿದರು. ರಾಜಗೋಪಾಲಾಚಾರಿಯವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ಗೆ ಸೇರಿಕೊಂಡು 1906ರ ಕಲ್ಕತ್ತದ ಸಮ್ಮೇಳನದಲ್ಲಿ ಭಾಗವಹಿಸಿದರು. 1907ರ ಸೂರತ್ ಸಮ್ಮೇಳನದಲ್ಲಿ ಭಾಗವಹಿಸಿದರು. ರಾಜಾಜಿಯು ಗಾಂಧೀಜಿಯವರ ಕಟ್ಟಾ ಬೆಂಬಲಿಗರಾದರು. 1930ರಲ್ಲಿ ವೇದಾರಣ್ಯದಲ್ಲಿ ಉಪ್ಪು ಸತ್ಯಾಗ್ರಹದ ಮುಖಂಡರಾಗಿದ್ದರು.

ರಾಜಾಜಿಯವರು ಮಾರ್ಚ್‌ನಲ್ಲಿ 100 ಸ್ವಯಂ ಸೇವಕರೊಡನೆ ತಿರುಚ್ಚಿರಾಪಳ್ಳಿಯಿಂದ ವೇದಾರಣ್ಯಂಗೆ ಪ್ರಯಾಣಿಸಿ ಉಪ್ಪಿನ ಮೇಲೆ ಹೇರಿದ್ದ ತೆರಿಗೆಯನ್ನು ಉಲ್ಲಂಘಿಸಿದರು. ಇವರು 1937ರ ಪ್ರಾಂತೀಯ ಚುನಾವಣೆಯಲ್ಲಿ ಗೆದ್ದು, ಮದ್ರಾಸ್ ಪ್ರಾಂತ್ಯದ ಮುಖ್ಯಮಂತ್ರಿಯಾದರು. ಇವರ ಅಧಿಕಾರದ ಅವಧಿಯಲ್ಲಿ ಮದ್ಯಪಾನ ನಿಷೇಧವನ್ನು ಜಾರಿಗೆ ತಂದರು. ಆದಿದ್ರಾವಿಡರು ಮತ್ತು ಸಮಾಜದಲ್ಲಿ ತುಳಿತಕ್ಕೊಳಗಾದ ವರ್ಗಗಳ ಏಳಿಗೆಗಾಗಿ ಹಲವಾರು ಕಾನೂನುಗಳನ್ನು ಜಾರಿಗೆ ತಂದರು. ಇವರು ಶಾಲೆಗಳಲ್ಲಿ ಹಿಂದಿ ಭಾಷೆಯನ್ನು ಕಡ್ಡಾಯ ಭಾಷೆಯನ್ನಾಗಿ ಪರಿಚಯಿಸಿದರು. ಇದಕ್ಕೆ ತೀವ್ರ ವಿರೋಧ ಉಂಟಾಯಿತು. ಈ.ವೇ.ರಾಮಸ್ವಾಮಿಯವರ ನಾಯಕತ್ವದಲ್ಲಿ ಹಿಂದಿ ವಿರೋಧಿ ಚಳುವಳಿ ತೀವ್ರಗೊಂಡಿತು. ಬ್ರಿಟಿಷ್ ಸರ್ಕಾರವು ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಭಾರತೀಯರು ಮತ್ತು ಭಾರತದ ಸಂಪನ್ಮೂಲಗಳನ್ನು ಬಳಸಿಕೊಂಡಿದುದರ ವಿರುದ್ಧ ಇದರ ರಕ್ಷಣೆಗಾಗಿ 1939ರಲ್ಲಿ ರಾಜಾಜಿಯವರು ಮುಖ್ಯ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದರು.




ಸಿ.ರಾಜಗೋಪಾಲಾಚಾರಿ

ಸ್ವಾತಂತ್ರ್ಯ ಭಾರತದ ಮೊದಲ ಭಾರತದ ಗವರ್ನರ್ ಜನರಲ್ ಆಗಿ ಅಧಿಕಾರ ವಹಿಸಿಕೊಂಡರು ಮತ್ತು 1952ರಲ್ಲಿ ಪುನಃ ಎರಡನೇ ಭಾರಿ ತಮಿಳುನಾಡಿನ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡರು. 'ಕುಲ ಶಿಕ್ಷಣ' ಯೋಜನೆಯನ್ನು ತಮಿಳುನಾಡಿನಲ್ಲಿ ಪರಿಚಯಿಸಿದರು. ಆದರೆ ಕಾಮರಾಜರು ಮತ್ತು ಪೆರಿಯಾರ್‌ರವರು ಇದನ್ನು ವಿರೋಧಿಸಿದರು. ಅಂತಿಮವಾಗಿ ರಾಜಾಜಿಯವರು 1954ರಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಕಾಂಗ್ರೆಸ್ ಪಕ್ಷದಿಂದ ಹೊರ ಬಂದರು. ಸ್ವತಂತ್ರ ಪಕ್ಷವನ್ನು ಸ್ಥಾಪಿಸಿ ಯುವ ಭಾರತ ಎಂಬ ಪತ್ರಿಕೆಯನ್ನು ಪ್ರಕಟಿಸಿದರು. ಚಕ್ರವರ್ತಿ ತಿರುಮಗಳ್ (ರಾಮಾಯಣ) ವ್ಯಾಸರ ಹೊಸ ಬಗೆಯ ಕಾವ್ಯ (ಮಹಾಭಾರತ) ಇವರು ಬರೆದ ಗದ್ಯ ಕೃತಿಗಳಾಗಿವೆ. ಇವರು ಗೀತೆ ಮತ್ತು ಉಪನಿಷತ್ತುಗಳಿಗೆ ವ್ಯಾಖ್ಯಾನ ಬರೆದಿದ್ದಾರೆ. 1955ರಲ್ಲಿ ಇವರಿಗೆ 'ಭಾರತ ರತ್ನ' ಪ್ರಶಸ್ತಿ ನೀಡಲಾಯಿತು. ಇವರು

ಡಿಸೆಂಬರ್ 25, 1972ರಲ್ಲಿ ಮರಣ ಹೊಂದಿದರು. ಇವರ ರಾಜಕೀಯ ತಂತ್ರದ ಕಾರ್ಯಗಳಿಂದಾಗಿ ಒಬ್ಬ ಚಾಣಕ್ಯ ಎಂದು ಪ್ರಖ್ಯಾತರಾಗಿದ್ದಾರೆ.

ಕೆ.ಕಾಮರಾಜರ್

"ಕರ್ಮ ವೀರರ್" ಎಂದೇ ಪ್ರಖ್ಯಾತರಾದ ಕಾಮರಾಜ್ ರವರು ಜುಲೈ 15, 1903ರಲ್ಲಿ ವಿರುದುಪಟ್ಟಿಯಲ್ಲಿ (ಈಗಿನ ವಿರುದುನಗರದಲ್ಲಿ) ಜನಿಸಿದರು.



ಕೆ.ಕಾಮರಾಜರ್

ಇವರು ತಮಿಳುನಾಡಿನ ಶ್ರೇಷ್ಠ ಸ್ವಾತಂತ್ರ್ಯ ಹೋರಾಟಗಾರರು. ಇವರು ತಮಿಳುನಾಡಿನಲ್ಲಿ 1924ರಲ್ಲಿ ನಡೆಯುತ್ತಿದ್ದ ವೈಕಂ ಸತ್ಯಾಗ್ರಹದಲ್ಲಿ ಭಾಗವಹಿಸುವ ಮೂಲಕ ಸ್ವಾತಂತ್ರ್ಯ ಚಳವಳಿಗೆ ತಮ್ಮನ್ನು ತೊಡಗಿಸಿಕೊಂಡರು. ನಂತರ ಇವರು 1929ರಲ್ಲಿ ಕಾಂಗ್ರೆಸ್ ಪಕ್ಷದ ಪೂರ್ಣ ಕಾರ್ಯಕರ್ತರಾದರು.

1930ರಲ್ಲಿ ಗಾಂಧೀಜಿಯವರು ಕಾನೂನುಭಂಗ ಚಳವಳಿಯನ್ನು ಪ್ರಾರಂಭಿಸಿದ ಮೇಲೆ ತಮಿಳುನಾಡಿನಲ್ಲಿ ರಾಜಗೋಪಾಲಾಚಾರಿಯವರೊಂದಿಗೆ ವೇದಾರಣ್ಯಂ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಇವರನ್ನು ಬಂಧಿಸಿ ಎರಡು ವರ್ಷಗಳ ಕಾಲ ಜೈಲು ಶಿಕ್ಷೆ ವಿಧಿಸಿ ಅಲಿಪುರ ಸೆರೆಮನೆಯಲ್ಲಿಟ್ಟರು. ಗಾಂಧಿ–ಇರ್ವಿನ್ ಒಪ್ಪಂದದ ಪರಿಣಾಮವಾಗಿ ಇವರನ್ನು ಬಿಡುಗಡೆ ಮಾಡಿದರು.

1940ರಲ್ಲಿ ಗಾಂಧೀಜಿಯವರನ್ನು ಭೇಟಿಯಾಗಿ ಸತ್ಯಾಗ್ರಹ ಹೋರಾಟಗಳ ಯೋಜನೆಗಳಿಗೆ ಅನುಮತಿ ಪಡೆಯಲು ವಾರ್ಧಾಗೆ ಹೋಗಿದ್ದರು. ಇದನ್ನು ತಿಳಿದ ಬ್ರಿಟಿಷರು ಅವರನ್ನು ಬಂಧಿಸಿ ವೆಲ್ಲೂರಿನ ಜೈಲಿಗೆ ಕಳುಹಿಸಿದರು. ನಂತರ ಬಿಡುಗಡೆ ಮಾಡಿದರು. 1942ರಲ್ಲಿ ಬ್ರಿಟಿಷರೇ ಭಾರತ ಬಿಟ್ಟು ತೊಲಗಿ, ಚಳುವಳಿಯಲ್ಲಿ ಅವರ ಸಕ್ರಿಯ ಪಾತ್ರ ಮತ್ತು ಮಹತ್ವವನ್ನು ಕಂಡು ಬಂಧಿಸಿ ಮೂರು ವರ್ಷಗಳ ಕಾಲ ಅಮರಾವತಿ ಜೈಲಿನಲ್ಲಿಟ್ಟರು. 1947ರಲ್ಲಿ ಭಾರತ ಸ್ವಾತಂತ್ರ್ಯವಾದಾಗ ಸತ್ಯಮೂರ್ತಿಯವರ ಮನೆಯಲ್ಲಿ ಭಾರತದ ರಾಷ್ಟ್ರಧ್ವಜವನ್ನು ಹಾರಿಸಿದರು.

ಕಾಮರಾಜರು ತಮಿಳುನಾಡಿನ ಮುಖ್ಯಮಂತ್ರಿಗಳಾಗಿ 9 ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಇವರ ಆಡಳಿತಾವಧಿಯಲ್ಲಿ ಅನೇಕ ಜನಪರಕಾರ್ಯಗಳನ್ನು ಅನುಷ್ಠಾನಗೊಳಿಸಿದರು. ಅವುಗಳಲ್ಲಿ ಮಧ್ಯಾಹ್ನದ ಊಟದ ಯೋಜನೆ, ಹೊಸಶಾಲೆಗಳ ಪ್ರಾರಂಭ, ಉಚಿತ ಶಿಕ್ಷಣ ಕೊಡುವುದು, ವ್ಯವಸಾಯದ ಅನುಕೂಲ ಮತ್ತು ಅಭಿವೃದ್ಧಿಗಾಗಿ ಕಾಲುವೆಗಳು ಮತ್ತು ಜಲಾಶಯಗಳನ್ನು ನಿರ್ಮಿಸಿ ತಮಿಳುನಾಡಿನಲ್ಲಿ ಬಹಳಷ್ಟು ಹೊಸಕೈಗಾರಿಕೆಗಳನ್ನು ಸ್ಥಾಪನೆಮಾಡಿದರು. ಅಷ್ಟೇ ಅಲ್ಲದೆ ರಾಷ್ಟ್ರ ರಾಜಕಾರಣದಲ್ಲೂ ಪ್ರಮುಖ ಪಾತ್ರ ವಹಿಸಿದ್ದಾರೆ. ಇದರಿಂದ 'ರಾಜನನ್ನು ಸೃಷ್ಟಿಸುವವರು' ಎಂದು ಪ್ರಶಂಸೆ ಪಡೆದರು. 1964ರಲ್ಲಿ ಲಾಲ್‌ಬಹದ್ದೂರ್‌ಶಾಸ್ತ್ರಿ ಯವರು ಭಾರತದ ಪ್ರಧಾನಿಯಾಗಲು, ಅವರ ಮರಣದ ನಂತರ 1966ರಲ್ಲಿ ಇಂದಿರಾಗಾಂಧಿಯವರು ಭಾರತದ ಪ್ರಧಾನ ಮಂತ್ರಿಯಾಗಲು ಇವರು ಪ್ರಮುಖ ಪಾತ್ರ ವಹಿಸಿದ್ದರು. ಕಾಮರಾಜರ ಯೋಜನೆಯಂತೆ (ಕೆ.ಯೋಜನೆ) ಪಕ್ಷದ ಸೇವೆಗಾಗಿ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು. ಅಕ್ಟೋಬರ್2, 1975ರಲ್ಲಿ ಮರಣ ಹೊಂದಿದರು. ಇವರನ್ನು ಜನರು ಪ್ರೀತಿಯಿಂದ 'ಮಹಾನ್ ನಾಯಕ' ಹಾಗೂ 'ಕರ್ಮ ವೀರ' ಎಂದು ಕರೆದರು.

ಹೀಗೆ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ತಮಿಳುನಾಡು ಪ್ರಮುಖ ಪಾತ್ರವಹಿಸಿತು.

ಅಭ್ಯಾಸ

ಅ. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ

1. ವೆಲ್ಲೂರಿನಲ್ಲಿ ಭಾರತದ ಸಿಪಾಯಿಗಳನ್ನು ಬ್ರಿಟಿಷರ ವಿರುದ್ಧ ಕಾರ್ಯವೆಸಗಲು ಪ್ರಚೋದಿಸಿದವರು.
   ಅ) ಹೈದರ್ ಆಲಿ ಆ) ಟಿಪ್ಪು ಸುಲ್ತಾನನ ಪುತ್ರರು
   ಇ) ಶಿವಾಜಿ ಈ) ಷಾಜಹಾನ್
2. ಜನರ ಹಕ್ಕುಗಳನ್ನು ಶಾಶ್ವತಗೊಳಿಸಲು ಏರ್ಪಟ್ಟ ಮದ್ರಾಸ್ ಸಂಸ್ಥಾನದ ಪ್ರಥಮ ಸಂಘ
   ಅ) ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಆ) ಮುಸ್ಲಿಂ ಲೀಗ್
   ಇ) ಸ್ವರಾಜ್ಯ ಪಕ್ಷ ಈ) ಚೆನ್ನೈ ಸ್ವದೇಶಿ ಸಂಘ
3. ಮದ್ರಾಸ್ ಮಹಾಜನ ಸಭೆಯ ಪ್ರಥಮ ಅಧ್ಯಕ್ಷರು
   ಅ) ಪಿ.ರಂಗಯ್ಯ ನಾಯ್ಡು ಆ) ರಾಜಾಜಿ ಇ) ಕಾಮರಾಜರ್ ಈ) ಭಾರತಿಯಾರ್.
4. ವೇದಾರಣ್ಯ ಉಪ್ಪಿನ ಸತ್ಯಾಗ್ರಹವನ್ನು ನಡೆಸಿದವರು.
   ಅ) ಟಿ.ಎಸ್.ರಾಜನ್ ಆ)ಭಕ್ತವತ್ಸಲಂ
   ಇ)ರಾಜಗೋಪಾಲಾಚಾರಿ ಈ) ವ.ಉ.ಚಿದಂಬರ ಪಿಳ್ಳೈ.
5. 1908ರಲ್ಲಿ ಭಾರತೀಯಾರ್ ಚೆನ್ನೈಯಲ್ಲಿ ಬೃಹತ್ ಸಾರ್ವಜನಿಕ ಸಭೆಯನ್ನು ಸೇರಿಸಿಕೊಂಡಾಡಿದ ದಿನ.
   ಅ) ಸ್ವರಾಜ್ಯ ದಿನ ಆ) ಹುಟ್ಟಿದ ದಿನ ಇ)ಗಣರಾಜ್ಯದಿನ ಈ) ಸೇವೆಯ ದಿನ
6. ಬ್ರಿಟಿಷರ ಬಂಧನದ ಆಜ್ಞೆಗೆ ವಿರುದ್ಧವಾಗಿ ಭಾರತಿಯಾರ್ ತಪ್ಪಿಸಿಕೊಂಡು ಓಡಿಹೋದುದು.
   ಅ) ಚೆನ್ನೈ ಆ) ಬೆಂಗಳೂರು ಇ) ಹೈದರಾಬಾದ್ ಈ)ಪಾಂಡಿಚೇರಿ.
7. ತಮಿಳುನಾಡಿನ ಕಾಂಗ್ರೆಸ್ ಪಕ್ಷದ ಪ್ರಧಾನ ಕಛೇರಿಯ ಹೆಸರು.
   ಅ) ರಾಜಭವನ ಆ)ರಾಷ್ಟ್ರಪತಿ ಭವನ ಇ)ಸತ್ಯಮೂರ್ತಿಭವನ ಈ) ವಿಧಾನಸಭೆ.
8. 1940ರಲ್ಲಿ ಕಾಮರಾಜರು ವಾರ್ಧಾ ಎಂಬಲ್ಲಿಗೆ ಹೋಗಿ ಭೇಟಿಯಾಗಬೇಕಿದ್ದುದು.
   ಅ) ನೆಹರು ಆ) ಗಾಂಧೀಜಿ ಇ) ತಿಲಕರು ಈ) ಜಿನ್ನಾ
9. ತಮಿಳುನಾಡಿನಲ್ಲಿ ಕಾಮರಾಜರು ಮುಖ್ಯಮಂತ್ರಿಯಾಗಿ ಪದವಿ ವಹಿಸಿದ್ದುದು.
   ಅ) 9 ವರ್ಷಗಳು ಆ) 8 ವರ್ಷಗಳು ಇ) 10 ವರ್ಷಗಳು ಈ) 7 ವರ್ಷಗಳು
10. ಕಾಮರಾಜರ ಪ್ರಖ್ಯಾತಿಯಾದ ತತ್ವ
    ಅ) 'ಸಿ' ಯೊಜನೆ ಆ) 'ಕೆ' ಯೋಜನೆ ಇ) 'ಎಂ' ಯೋಜನೆ ಈ) 'ಜಿ'ಯೋಜನೆ

ಆ. ಹೊಂದಿಸಿರಿ.

1. ಸ್ವದೇಶಿ ವಸ್ತುಗಳ ಪ್ರದರ್ಶನ	ಸಿಪಾಯಿದಂಗೆ
2. ಚಾಣಕ್ಯ	ಕಾಮರಾಜರ್
3. ರಾಜನನ್ನು ಸೃಷ್ಟಿಸುವವರು	ಪೂಂಡಿಜಲಾಶಯ
4. ಸತ್ಯ ಮೂರ್ತಿ	ವೆಲ್ಲೂರು ಕ್ರಾಂತಿ
5. ಫತೇಹೈದರ್	ಪೆರಿಯಾರ್ ಈ.ವೇ.ರಾ
	ಚೆನ್ನೈ ಮಹಾಜನ ಸಭೆ
	ರಾಜಾಜಿ

ಇ. ಸಂಕ್ಷಿಪ್ತವಾಗಿ ಉತ್ತರಿಸಿ

1. ವೆಲ್ಲೂರು ಕ್ರಾಂತಿ– ಟಿಪ್ಪಣಿ ಬರೆಯಿರಿ.
2. ತಿರುಪ್ಪೂರ್ ಕುಮರನ್ ಬಗ್ಗೆ ನಿಮಗೇನು ತಿಳಿದಿದೆ?
3. ಸುಬ್ರಹ್ಮಣ್ಯ ಶಿವ –ಇವರ ಬಗ್ಗೆ ಬರೆಯಿರಿ.
4. ಸ್ವಾತಂತ್ರ್ಯ ಹೋರಾಟದಲ್ಲಿ ವಾಂಜಿನಾಥನ್ ಬಗ್ಗೆ ಬರೆಯಿರಿ.
5. 1907 ರಲ್ಲಿ ಭಾರತಿಯಾರ್ ಪ್ರಕಟಿಸಿದ ಪತ್ರಿಕೆಗಳನ್ನು ಹೆಸರಿಸಿ.
6. ಸುಬ್ರಹ್ಮಣ್ಯ ಭಾರತಿಯಾರರ ಕೆಲವು ಹಾಡುಗಳನ್ನು ಬರೆಯಿರಿ.
7. ಮೇಯರ್ ಆಗಿ ಸತ್ಯಮೂರ್ತಿಯವರ ಸೇವೆಗಳೇನು?
8. ಕಾಮರಾಜರ ಒಳ್ಳೆಯ ಯೋಜನಾ ಕಾರ್ಯಗಳ ಬಗ್ಗೆ ಟಿಪ್ಪಣಿ ಬರೆಯಿರಿ.
9. ರಾಜರನ್ನು ರೂಪಿಸುವವರು' ಎಂದು ಕಾಮರಾಜರನ್ನು ಏಕೆ ಭಾವಿಸಲಾಗಿದೆ?

ಈ. ಕೆಳಕಂಡ ಪ್ರತಿಯೊಂದು ಶೀರ್ಷಿಕೆಯಲ್ಲಿರುವ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ.

1. ಸಿ.ರಾಜಗೋಪಾಲಾಚಾರಿ.

   ಅ) ರಾಜಗೋಪಾಲಾಚಾರಿಯವರು ಎಲ್ಲಿ ಜನಿಸಿದರು?

   ಆ) 1939ರಲ್ಲಿ ತಮ್ಮ ಮುಖ್ಯ ಮಂತ್ರಿ ಪದವಿಗೆ ಏಕೆ ರಾಜೀನಾಮೆ ನೀಡಿದರು?

   ಇ) ಇವರು ತಮ್ಮ ಎರಡನೇ ಭಾರಿಯ ಆಳ್ವಿಕೆ ಕಾಲದಲ್ಲಿ ಪರಿಚಯಿಸಿದ ಯೋಜನೆ ಯಾವುದು?

   ಈ) ಚಾಣಕ್ಯರೆಂದು ಕರೆಯಲ್ಪಡುವುದೇಕೆ?

2. ಕೆ.ಕಾಮರಾಜರ್

   ಅ) ಕಾಮರಾಜರು ಹೇಗೆ ರಾಜಕೀಯ ಪ್ರವೇಶಿಸಿದರು?

   ಆ) 1930ರಲ್ಲಿ ಎಲ್ಲಿ ಸೆರೆಯಲ್ಲಿ ಬಂಧಿಸಲ್ಪಟ್ಟರು?

   ಇ) 1947ರಲ್ಲಿ ಭಾರತದ ರಾಷ್ಟ್ರಧ್ವಜವನ್ನು ಎಲ್ಲಿ ಹಾರಿಸಿದರು?

   ಈ) ಕಾಮರಾಜರು ಯಾವಾಗ ಮರಣ ಹೊಂದಿದರು?

ಗಿ. ವಿವರವಾಗಿ ಉತ್ತರಿಸಿ.

1. ಚೆನ್ನೈ ಮಹಾಜನ ಸಭೆಯ ಕಾರ್ಯಗಳನ್ನು ವಿವರಿಸಿ.
2. ಭಾರತೀಯಾರ್ ಒಬ್ಬ ಸ್ವಾತಂತ್ರ್ಯ ಹೋರಾಟಗಾರರು – ನಿರೂಪಿಸಿ.

---

14. ತಮಿಳುನಾಡಿನಲ್ಲಿ ಸಾಮಾಜಿಕ ಬದಲಾವಣೆಗಳು

19 ಮತ್ತು 20ನೇ ಶತಮಾನದಲ್ಲಿ ಮಹಾತ್ಮಗಾಂಧಿ, ಜವಹರ್‌ಲಾಲ್ ನೆಹರು, ಬಾಲಗಂಗಾಧರತಿಲಕ್, ರಾಜಾಜಿ ಇವರುಗಳಂತಹ ರಾಷ್ಟ್ರ ನಾಯಕರು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸಂಪೂರ್ಣವಾಗಿ ತಮ್ಮನ್ನು ಸಮರ್ಪಿಸಿಕೊಂಡು ಕಾರ್ಯ ನಿರ್ವಹಿಸಿದರು. ತಮಿಳುನಾಡಿನಲ್ಲಿ ಹಲವಾರು ನಾಯಕರು ರಾಜಕೀಯ ಸ್ವಾತಂತ್ರ್ಯಕ್ಕಾಗಿ ಮಾತ್ರವಲ್ಲದೆ ಸಾಮಾಜಿಕ ಬಿಡುಗಡೆಗಾಗಿ ಹೋರಾಟ ನಡೆಸಿದರು. ರಾಜಕೀಯ ಸ್ವಾತಂತ್ರ್ಯ ಎನ್ನುವುದು ಸಾಮಾಜಿಕ ನ್ಯಾಯ, ಸ್ವಾಭಿಮಾನ ಮತ್ತು ಗೌರವವಿಲ್ಲದಿದ್ದರೆ ಅರ್ಥ ರಹಿತವಾದುದೆಂದು ಅವರು ಅಭಿಪ್ರಾಯ ಪಟ್ಟರು.

ಜಸ್ಟೀಸ್ ಪಕ್ಷ (ನೀತಿ ಪಕ್ಷ)

ದಕ್ಷಿಣ ಭಾರತದ ಇತಿಹಾಸದಲ್ಲಿ ಇಪ್ಪತ್ತನೇ ಶತಮಾನದ ಪೂರ್ವಾರ್ಧದಲ್ಲಿ ಚೆನ್ನೈ ಪ್ರಾಂತ್ಯದಲ್ಲಿ ಜಸ್ಟೀಸ್ ಪಕ್ಷವು ಅಧಿಕಾರಕ್ಕೆ ಬಂದಿತು. ಈ ಪಕ್ಷವು ಶಿಕ್ಷಣ ಮತ್ತು ಉದ್ಯೋಗದಲ್ಲಿ ಬ್ರಾಹ್ಮಣರ ಅಧಿಕ್ಯದ (ಹಕ್ಕು) ವಿರುದ್ಧವಾಗಿ ಬ್ರಾಹ್ಮಣರಲ್ಲದವರಿಂದ ಪ್ರಾರಂಭಿಸಿದ ಸಾಮಾಜಿಕ ಸಂಘಟನೆಯಾಗಿದೆ.



ಟಿ.ಎಮ್.ನಾಯರ್

ಜಸ್ಟೀಸ್ ಪಕ್ಷವೆಂದು ಕರೆಯಲ್ಪಡುವ ದಕ್ಷಿಣ ಭಾರತದ ಕಲ್ಯಾಣ ಹಕ್ಕು ನಿಗಮ ಬ್ರಿಟಿಷರ ಅಧಿಕಾರದಲ್ಲಿ ಚೆನ್ನೈ ಪ್ರಾಂತ್ಯದಲ್ಲಿ ಉದಯಿಸಿದ ರಾಜಕೀಯ ಪಕ್ಷವಾಗಿದೆ. ಈ ಪಕ್ಷವು 1916ರಲ್ಲಿ ಟಿ.ಎಮ್.ನಾಯರ್ ಮತ್ತು ತ್ಯಾಗರಾಯಚೆಟ್ಟಿಯವರಿಂದ ಪ್ರಾರಂಭಿಸಲ್ಪಟ್ಟಿತು. ಜಸ್ಟೀಸ್ ಪಕ್ಷದ ಆರಂಭ ಕಾಲದಲ್ಲಿ ಮನವಿ ಅರ್ಜಿಗಳ ಮೂಲಕ ಬ್ರಾಹ್ಮಣರಲ್ಲದವರಿಗೆ ಆಡಳಿತದಲ್ಲಿ ಹೆಚ್ಚಿನ ಪ್ರಾತಿನಿಧ್ಯತೆಯನ್ನು ಕೋರಿತು. ಈ ಪಕ್ಷ ತಮಿಳಿನಲ್ಲಿ 'ದ್ರಾವಿಡನ್' ತೆಲುಗಿನಲ್ಲಿ "ಆಂಧ್ರ ಪ್ರಕಾಶಿಕ" ಮತ್ತು ಆಂಗ್ಲ ಭಾಷೆಯಲ್ಲಿ "ಜಸ್ಟೀಸ್" ಎಂಬ ಪತ್ರಿಕೆಯನ್ನು ಮುದ್ರಿಸಿ ಪ್ರಕಟಿಸಿತು. ಈ ಪಕ್ಷವನ್ನು ಜಸ್ಟೀಸ್ ಪಾರ್ಟಿ (ನೀತಿ ಪಕ್ಷ) ಎಂದು ಕರೆಯಲ್ಪಟ್ಟಿತು.



ತ್ಯಾಗರಾಯ ಚೆಟ್ಟಿಯಾರ್

ಜಸ್ಟೀಸ್ ಪಕ್ಷದ ಅಧಿಕಾರ

1920ರಲ್ಲಿ ನಡೆದ ಚುನಾವಣೆಯಲ್ಲಿ ಜಸ್ಟೀಸ್ ಪಕ್ಷ ಬಹುಮತಕ್ಕೆ ಅಗತ್ಯವಾದಷ್ಟು ಸ್ಥಾನಗಳನ್ನು ಗೆದ್ದು ಶ್ರೀ ಸುಬ್ಬರಾಯಲು ನಾಯಕತ್ವದಲ್ಲಿ ಅಧಿಕಾರ ರಚಿಸಿತು. 1923 ರಲ್ಲಿ ನಡೆದ ಚುನಾವಣೆಯಲ್ಲಿ ಜಸ್ಟೀಸ್ ಪಕ್ಷ ಮತ್ತೆ ಜಯಗಳಿಸಿ ಅಧಿಕಾರ ರಚಿಸಿತು. 1926 ರಲ್ಲಿ ಚುನಾವಣೆಯಲ್ಲಿ ಸ್ವರಾಜ್ಯ ಪಕ್ಷ ಜಯಗಳಿಸಿತು. ಆದರೆ ಸರಕಾರ ರಚನೆಯನ್ನು ತಿರಸ್ಕರಿಸಿತು. ಹೀಗಾಗಿ ಸ್ವತಂತ್ರ್ಯ ಅಭ್ಯರ್ಥಿಯಾದ ಶ್ರೀ

ಸುಬ್ಬರಾಯಲು ಸ್ವರಾಜ್ಯ ಪಕ್ಷದ ಸಹಾಯದಿಂದ ಸರಕಾರ ರಚಿಸಿದರು. 1930ರಲ್ಲಿ ನಡೆದ ಚುನಾವಣೆಯಲ್ಲಿ ನೀತಿ ಪಕ್ಷ ಮತ್ತೆ ಜಯಗಳಿಸಿ ಪಳನಿಸ್ವಾಮಿ ಅಧ್ಯಕ್ಷತೆಯಲ್ಲಿ ಸರಕಾರ ರಚಿಸಿತು. ಆದರೆ 1932ರಲ್ಲಿ ಇವರನ್ನು ಹುದ್ದೆಯಿಂದ ತೆಗೆದು ಹಾಕಿ ಬೋಭಿಲಿ ರಾಜ ಅಧಿಕಾರಕ್ಕೆ ಬಂದರು. 1934ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಜಯಗಳಿಸಿತು. ಆದರೆ ಸರಕಾರ ರಚನೆಯನ್ನು ತಿರಸ್ಕರಿಸಿತು. ಹೀಗಾಗಿ ಜಸ್ಟೀಸ್ ಪಕ್ಷ ಮತ್ತೆ ಸರಕಾರ ರಚಿಸಿತು. 1937ರಲ್ಲಿ ನಡೆದ ಚುನಾವಣೆಯಲ್ಲಿ ಸೋತು ಮತ್ತೆ ಮೇಲೇಳಲಿಲ್ಲ. ಪೆರಿಯಾರ್ ಮತ್ತು ಅವರ ಸ್ವಾಭಿಮಾನ ಚಳುವಳಿಯ ನಿಯಂತ್ರಣದಲ್ಲಿ ಅಲ್ಪಕಾಲದವರೆಗೆ ಜಸ್ಟೀಸ್ ಪಕ್ಷವು ಕಾರ್ಯ ನಿರ್ವಹಿಸಿತು.

1944ರಲ್ಲಿ ಸೇಲಂನಲ್ಲಿ ನಡೆದ ಸಮ್ಮೇಳನದಲ್ಲಿ ಪೆರಿಯಾರ್ ಜಸ್ಟೀಸ್ ಪಕ್ಷದ ಹೆಸರನ್ನು ದ್ರಾವಿಡರ್ ಕಳಗಂ ಎಂದು ಬದಲಿಸಿ ಅದನ್ನು ಒಂದು ಸಾಮಾಜಿಕ ಚಳುವಳಿಯನ್ನಾಗಿ ಬದಲಾಯಿಸಿದರು. ಇದರ ಮೂಲಕ ಜಸ್ಟೀಸ್ ಪಕ್ಷವು ರಾಜಕೀಯ ಸಂಘಟನೆಯಿಂದ ಬಿಡುಗಡೆಯಾಯಿತು.

ಜಸ್ಟೀಸ್ ಪಕ್ಷದ ಸಾಧನೆಗಳು

ಜಸ್ಟೀಸ್ ಪಕ್ಷದ ಅಧಿಕಾರವು ಜಾತಿ ಆಧಾರದಲ್ಲಿ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಮತ್ತು ಸುಧಾರಣೆಯು ಎಲ್ಲರಿಂದಲು ಸ್ಮರಿಸಲ್ಪಡುತ್ತದೆ. ಭಾರತದ ರಾಜಕೀಯದಲ್ಲಿ ಒಂದು ಸಂಧಿಗ್ಧಸ್ಥಿತಿಯಲ್ಲಿ ಈ ಪಕ್ಷ ಅಧಿಕಾರಕ್ಕೆ ಬಂದು ಕೆಲವು ಸಮಸ್ಯೆಗಳನ್ನು ದೃಢ ಮನಸ್ಸಿನಿಂದ ಎದುರಿಸಿತು. ಕೆಲಕಾಲ ಒಳ್ಳೆಯ ಅಧಿಕಾರ ಕೊಟ್ಟಿತು. ಆರ್ಥಿಕ ಮತ್ತು ಸಾಮಾಜಿಕ ಸುಧಾರಣೆಗಳ ಮೂಲಕ ಗ್ರಾಮಗಳ ಅಭಿವೃದ್ಧಿ ಯುಗವನ್ನು ಪ್ರಾರಂಭಿಸಿತು.

ಜಸ್ಟೀಸ್ ಪಕ್ಷದ ಸರಕಾರವು ಸಮಾಜದಲ್ಲಿ ಎಲ್ಲಾ ಧರ್ಮದವರೂ ಸಮನಾದ ಪ್ರಾತಿನಿಧ್ಯ ಪಡೆಯಲು ಅವಕಾಶ ಮಾಡಿಕೊಟ್ಟಿತು. ದಲಿತರ ಸ್ಥಿತಿಯನ್ನು ಸುಧಾರಿಸಿತು.

ಸಮುದಾಯದ ಕೋಮುವಾರಿನ ಸರ್ಕಾರಿ ಆದೇಶ 1921 ಮತ್ತು 1922ರ ಪ್ರಕಾರ ಬ್ರಾಹ್ಮಣರಲ್ಲದವರಿಗೆ ಶಿಕ್ಷಣ ಮತ್ತು ಸ್ಥಳೀಯ ಸಂಸ್ಥೆಗಳ ನೇಮಕಾತಿಯಲ್ಲಿ ಮೀಸಲಾತಿಯ ಅವಕಾಶ ಮಾಡಿಕೊಟ್ಟಿದೆ.

ಸ್ವಜನಪಕ್ಷಪಾತ ಮತ್ತು ಶ್ರೀಮಂತರಿಗೆ ಅನುಕೂಲಕರವಾದ ಆಯ್ಕೆ ಪದ್ಧತಿಯನ್ನು ತಪ್ಪಿಸಲು 1924ರಲ್ಲಿ ಸಿಬ್ಬಂದಿ ಆಯ್ಕೆ ಮಂಡಲಿಯನ್ನು ರಚಿಸಿತು. ಇದು 1929ರಲ್ಲಿ ಸಾರ್ವಜನಿಕ ಸೇವಾ ಆಯೋಗವಾಗಿ ಬದಲಾಯಿತು.

ಉನ್ನತ ಶಿಕ್ಷಣ ಸಂಸ್ಥೆಗಳನ್ನು ಮಿತಿಗೊಳಿಸಲು ಎಲ್ಲಾ ಸಮುದಾಯದವರ ಅನುಕೂಲ ಪಡೆಯಲು ಕಾಲೇಜು ಮಂಡಳಿಯನ್ನು ರಚಿಸಿತು.

1925ರಲ್ಲಿ ಆಂಧ್ರ ವಿಶ್ವವಿದ್ಯಾನಿಲಯ ಮತ್ತು 1929ರಲ್ಲಿ ಅಣ್ಣಾಮಲೈ ವಿಶ್ವ ವಿದ್ಯಾನಿಲಯವನ್ನು ಪ್ರಾರಂಭಿಸಿತು.

ದೇವಸ್ಥಾನಗಳ ಆದಾಯ – ವೆಚ್ಚದ ಲೆಕ್ಕಗಳನ್ನು ಕ್ರಮ ಪಡಿಸಲು, ದೇವಸ್ಥಾನ ಮಂಡಳಿಗಳನ್ನು ರಚಿಸಿತು. 1926ರಲ್ಲಿ ಹಿಂದು ಧರ್ಮ ದತ್ತಿ ಕಾನೂನು (ಮಸೂದೆ) ಜಾರಿಗೊಳಿಸಿತು.

1921ರಲ್ಲಿ ಮಹಿಳೆಯರಿಗೆ ಮತ ಹಾಕುವ ಹಕ್ಕು ಕೊಡಲಾಯಿತು. ದೇವದಾಸಿ ಪದ್ಧತಿಯನ್ನು ನಿರ್ಮೂಲನಗೊಳಿಸಲಾಯಿತು. ಮಹಿಳೆಯರ ಕೆಟ್ಟ ಅನ್ಯಾಯ ತಡೆ ಕಾಯಿದೆ ಮತ್ತು ಕಾರ್ಮಿಕ ಕಲ್ಯಾಣ ಕಾಯಿದೆಗಳನ್ನು ಅಂಗೀಕರಿಸಿತು.

ಬಡವರಿಗೆ ಉಚಿತಮನೆ, ನಿವೇಶನ, ಪಟ್ಟಾ ಕೊಡುವಯೋಜನೆಗಳನ್ನು ಪರಿಚಯಿಸಲಾಯಿತು.

ಚೆನ್ನೈನ ಆಯಿರವಿಳಕ್ಕು ಭಾಗದಲ್ಲಿ ತ್ಯಾಗರಾಯ ಚೆಟ್ಟಿಯವರಿಂದ ಉಚಿತ ಮಧ್ಯಾಹ್ನದ ಊಟದ ಯೋಜನೆ ಪರಿಚಯಿಸಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಲಾಯಿತು.

ಈ ಪಕ್ಷವು ಆಯುರ್ವೇದ, ಸಿದ್ಧವೈದ್ಯಕೀಯ ಮತ್ತು ಯುನಾನಿ ವೈದ್ಯಕೀಯ ಶಿಕ್ಷಣಕ್ಕೆ ಪ್ರೋತ್ಸಾಹಿಸಿತು.

ಜಸ್ಟೀಸ್ ಪಕ್ಷದ ಅವನತಿ

1937ರಲ್ಲಿ ನಡೆದ ಚುನಾವಣೆಯಲ್ಲಿ ಜಸ್ಟೀಸ್ ಪಕ್ಷವು ಸೋಲಲ್ಪಟ್ಟಿತು. ರಾಜಾಜಿಯವರ ನಾಯಕತ್ವದಲ್ಲಿ ಕಾಂಗ್ರೆಸ್ ಪಕ್ಷ ಜಯಗಳಿಸಿ ಮಂತ್ರಿ ಮಂಡಲವನ್ನು ರಚಿಸಿತು. ಜಸ್ಟೀಸ್ ಪಕ್ಷವು ಅದರ ಸೋಲಿನಿಂದ ಮೇಲೇಳಲಿಲ್ಲ, ಇದಕ್ಕೆ ಹಲವು ಕಾರಣಗಳಿವೆ.

ಜಗತ್ತಿನಲ್ಲಿ ಆರ್ಥಿಕ ಕುಸಿತ ಉಂಟಾಗಿದ್ದ ಸಮಯದಲ್ಲಿ ಈ ಪಕ್ಷವು ಅಧಿಕಾರಕ್ಕೆ ಬಂದಿತು. ಇದರಿಂದ ಈ ಪಕ್ಷವು ಸ್ಥಿರವಾಗಿರಲು ಸಾಧ್ಯವಾಗಲಿಲ್ಲ.

ರಾಷ್ಟ್ರೀಯ ಚಳುವಳಿ ತೀವ್ರವಾಗಿ ನಡೆದುಕೊಂಡಿದ್ದುದರಿಂದ ಇದರ ಸಾಮರ್ಥ್ಯ ಕುಸಿಯ ತೊಡಗಿತು.


ಗಾಂಧೀಜಿಯವರ ನಾಯಕತ್ವದಲ್ಲಿ ಕಾಂಗ್ರೆಸ್ ಪಕ್ಷವು ಬಲವರ್ಧನೆಗೊಂಡು ಏಳಿಗೆಯಾದುದು ಈ ಪಕ್ಷಕ್ಕೆ ಒಂದು ಸವಾಲಾಗಿ ಪರಿಣಮಿಸಿತು. ಹೀಗಾಗಿ ಜಸ್ಟೀಸ್ ಪಕ್ಷದ ಪ್ರಾಬಲ್ಯ ಕಡಿಮೆಯಾಗಿ ಸೋಲುಂಟಾಯಿತು.

ಸ್ವಾಭಿಮಾನ ಚಳುವಳಿ

ಈ.ವೇ.ರಾಮಸ್ವಾಮಿ ತಮಿಳುನಾಡಿನ ಮಹಾನ್ ಶ್ರೇಷ್ಠ ಧಾರ್ಮಿಕ ಸುಧಾರಕರಾಗಿದ್ದಾರೆ. ಇವರು ಸ್ವಾಭಿಮಾನ, ವಿಚಾರವಾದಿ, ಮಹಿಳೆ ಆಂದೋಲನ, ಸಾಮಾಜಿಕ ಸಮಾನತೆಯನ್ನು ಜನರ ಮನಸ್ಸಿನಲ್ಲಿ ನಾಟುವಂತೆ ಮಾಡಿದರು.

ಈ.ವೇ.ರಾಮಸ್ವಾಮಿ ಸೆಪ್ಟಂಬರ್ 17, 1879ರಲ್ಲಿ, ಈರೋಡಿನ ಶ್ರೀಮಂತ ಹಿಂದು ಕುಟುಂಬದಲ್ಲಿ ಜನಿಸಿದರು. ತಮ್ಮ 13ನೇ ವಯಸ್ಸಿನಲ್ಲಿ ಮದುವೆ ಮಾಡಿಕೊಂಡ ಪೆರಿಯಾರ್, ತಮ್ಮ 19ನೇ ವಯಸ್ಸಿನಲ್ಲಿ ಕುಟುಂಬ (ವಿವಾಹ) ಜೀವನವನ್ನು ತ್ಯಜಿಸಿದರು. ಕಾವಿ ಉಡುಗೆ ಧರಿಸಿ ಹಲವು ಪವಿತ್ರ ಸ್ಥಳಗಳಿಗೆ ಹೋಗಿ ಬಂದರು. ಇವರು ಕಾಶಿಗೆ ಹೋಗಿದ್ದಾಗ ಬ್ರಾಹ್ಮಣರು, ಬ್ರಾಹ್ಮಣರಲ್ಲದವರನ್ನು ಹೀನ ಸ್ಥಿತಿಯಲ್ಲಿ ನಡೆಸಿಕೊಳ್ಳುವ ರೀತಿಯನ್ನು ನೇರವಾಗಿ ಕಂಡು ಅದನ್ನು ಕಟುವಾಗಿ ಖಂಡಿಸಿದರು. ನಂತರ ತಮಿಳುನಾಡಿಗೆ ಹಿಂದಿರುಗಿ, ತಮ್ಮ ತತ್ವ ಸಿದ್ಧಾಂತವನ್ನು ಕಾಂಚಿಪುರದಲ್ಲಿ ನಡೆದ ಕಾಂಗ್ರೆಸ್ ಸಮ್ಮೇಳನದಲ್ಲಿ ಬ್ರಾಹ್ಮಣರಲ್ಲದವರುಗಳಿಗೆ ಸರ್ಕಾರ ಸೇವೆಯಲ್ಲಿ ಮೀಸಲಾತಿ ಕೊಡುವ ತೀರ್ಮಾನವನ್ನು ತೆಗೆದುಕೊಂಡರು. ಕಾಂಗ್ರೆಸ್ ಪಕ್ಷ ಅದನ್ನು ಒಪ್ಪದೆ ತಿರಸ್ಕರಿಸಿತು. ಪೆರಿಯಾರ್ ಆ ಸಮ್ಮೇಳನದಿಂದ ಹೊರ ನಡೆದರು. ತಮ್ಮ ಸಿದ್ಧಾಂತವನ್ನು ಹರಡಲು ಅದನ್ನು ಜಾರಿಗೊಳಿಸುವುದಕ್ಕಾಗಿ 1919ರಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರಿದರು. 1921ರಲ್ಲಿ ಮದ್ರಾಸ್ ರಾಜ್ಯ ಕಾಂಗ್ರೆಸ್ ಸಮಿತಿಯ ಪ್ರಧಾನ ಆಡಳಿತಗಾರರಾಗಿ ಚುನಾಯಿಸಲ್ಪಟ್ಟರು. ಅನಂತರ 1923ರಲ್ಲಿ ಅಧ್ಯಕ್ಷರಾದರು.

ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿದರು. 1924ರಲ್ಲಿ ಕೇರಳದ ವೈಕಂನಲ್ಲಿ ನಡೆದ ಸತ್ಯಾಗ್ರಹ ಹೋರಾಟದಲ್ಲಿ ಭಾಗವಹಿಸಿ ಹಿಂದುಳಿದ ವರ್ಗದವರ ದೇವಾಲಯ ಪ್ರವೇಶ ತಡೆ ಕಾಯಿದೆಯನ್ನು ವಿರೋಧಿಸಿ ಹೋರಾಟ ನಡೆಸಿದರು. ಅಂತಿಮವಾಗಿ ತಿರುವಾಂಕೂರ್ ಸರಕಾರ ದೇವಾಲಯ ಪ್ರವೇಶ ತಡೆ ಕಾಯಿದೆಯನ್ನು ಸಡಿಲಗೊಳಿಸಿ ಎಲ್ಲರೂ ದೇವಾಲಯದೊಳಗೆ ಪ್ರವೇಶಿಸಬಹುದು ಎಂದು ಪ್ರಕಟಿಸಿತು. ಈ ಕಾರಣದಿಂದಾಗಿ ಪೆರಿಯಾರ್‌ರವರಿಗೆ "ವೈಕ್ಕಂ ವೀರ" ಎಂಬ ಬಿರುದನ್ನು ನೀಡಲಾಯಿತು.



ಈ.ವೇ.ರಾಮಸ್ವಾಮಿ

ಕಾಂಗ್ರೆಸ್ಸಿನ ಧನ ಸಹಾಯದೊಂದಿಗೆ ಚೇರನ್‌ಮಾಂದೇವಿ ಎಂಬಲ್ಲಿ ನಡೆಸುತ್ತಿದ್ದ ಗುರುಕುಲ ಶಾಲೆಗೆ ಪೆರಿಯಾರ್ ರವರು ಭೇಟಿ ನೀಡಿದರು. ಆ ಶಾಲೆಯಲ್ಲಿ ಬ್ರಾಹ್ಮಣರು ಮತ್ತು ಬ್ರಾಹ್ಮಣರಲ್ಲದ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ಭೋಜನ ಮತ್ತು ಕುಡಿಯುವ ನೀರನ್ನು ಕೊಡಲಾಗುತ್ತಿತ್ತು. ಇದನ್ನು ನೋಡಿ ಕೆಂಡಮಂಡಲವಾದ ಪೆರಿಯಾರ್ ರವರು ಈ ಯೋಜನೆಯನ್ನು ವಿರೋಧಿಸುವುದರೊಂದಿಗೆ ತಮ್ಮ ಮದ್ರಾಸ್ ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಪದವಿಗೆ ರಾಜಿನಾಮೆ ನೀಡಿದರು. ಕಾಂಚಿಪುರದಲ್ಲಿ ನಡೆದ ಕಾಂಗ್ರೆಸ್ ರಾಜ್ಯ ಸಮ್ಮೇಳನದಲ್ಲಿ ಬ್ರಾಹ್ಮಣರಲ್ಲದವರಿಗೆ ಸರಕಾರಿ ಉದ್ಯೋಗದಲ್ಲಿ ಸ್ಥಾನ ಮೀಸಲಾತಿ ಒದಗಿಸುವ ತೀರ್ಮಾನವನ್ನು ಜಾರಿಗೊಳಿಸಿದರು. ಕಾಂಗ್ರೆಸ್ ಪಕ್ಷವು ಇದನ್ನು ಒಪ್ಪಿಕೊಳ್ಳಲು ನಿರಾಕರಿಸಿದುದರಿಂದ ಪೆರಿಯಾರ್‌ರವರು ಆ ಸಮ್ಮೇಳನದಿಂದ ಹೊರನಡೆದರು. ತಮ್ಮ ಸಿದ್ಧಾಂತಗಳನ್ನು ಹರಡುವುದು, ಅದನ್ನು ಕಾರ್ಯಗತಗೊಳಿಸುವುದಕ್ಕಾಗಿ 1925ರಲ್ಲಿ ಸ್ವಾಭಿಮಾನ ಚಳುವಳಿಯನ್ನು ಪ್ರಾರಂಭಿಸಿದರು.

ಗುರಿಗಳು

ಸ್ವಾಭಿಮಾನ ಚಳುವಳಿ ಜಾತಿ, ಮತ, ರಾಜಕೀಯ ಮತ್ತು ಸಮಾಜದಲ್ಲಿ ಬ್ರಾಹ್ಮಣರ ಅಧಿಪತ್ಯವನ್ನು ಕ್ರೂರವಾಗಿ ವಿರೋಧಿಸಿತು.

ಮೂಢನಂಬಿಕೆಗಳನ್ನು, ಸಂಪ್ರದಾಯಗಳನ್ನು ನಿರ್ಮೂಲನೆಗೊಳಿಸಲು ಶ್ರಮಪಟ್ಟರು.

ಮಹಿಳಾ ಶಿಕ್ಷಣ, ವಿಧವೆಯರ ಮರು ವಿವಾಹ, ಅಂತರ್‌ಜಾತಿ ವಿವಾಹ ಮತ್ತು ಬಾಲ್ಯವಿವಾಹ ಪದ್ಧತಿಯ ನಿರ್ಮೂಲನೆಗಾಗಿ ಧ್ವನಿಗೂಡಿಸಿದರು.

ಸಾಧನೆಗಳು

ಪೆರಿಯಾರ್, ಅರ್ಥರಹಿತ ಸಿದ್ಧಾಂತಗಳು, ಮೂಢನಂಬಿಕೆಗಳು ಮತ್ತು ನಂಬಿಕೆಗೆ ಅರ್ಹವಲ್ಲದ ಪುರಾಣ ಕಥೆಗಳನ್ನು ಖಂಡಿಸಿ ಸಾರ್ವಜನಿಕ ವೇದಿಕೆಗಳಲ್ಲಿ ಮಾತನಾಡಿದರು. ತನ್ನ ಸ್ವಾಭಿಮಾನ ಸಿದ್ಧಾಂತಗಳನ್ನು ಪ್ರಜಾಪ್ರಭುತ್ವ ಕ್ರಾಂತಿ ಮತ್ತು ಸ್ವಾತಂತ್ರ್ಯ ಮುಂತಾದ ಪತ್ರಿಕೆಗಳ ಮೂಲಕ ಪ್ರಚಾರ ಮಾಡಿದರು. ಇವರು ಸಮಾಜದಲ್ಲಿ ನೆಲೆಸಿದ್ದ ಪಿಡುಗುಗಳ ಬಗ್ಗೆ ಹಲವು ಪುಸ್ತಕಗಳನ್ನು ಪ್ರಕಟಿಸಿದರು.

ಪೆರಿಯಾರ್ ಯೂರೋಪಿನ ಹಲವು ದೇಶಗಳಿಗೆ ಪ್ರವಾಸ ಮಾಡಿ ಅವರ ಜೀವನ ಪದ್ಧತಿಗಳನ್ನು ಅಧ್ಯಯನ ಮಾಡಿದರು. ಸಮಾಜದಲ್ಲಿ ಕಾಣಿಸುವ ಎಲ್ಲಾ ಕೆಡಕುಗಳಿಗೆ ಬಡತನವೇ ಕಾರಣ ಎನ್ನುವುದನ್ನು ತಿಳಿದುಕೊಂಡರು. ಸ್ವದೇಶಕ್ಕೆ ಹಿಂದಿರುಗಿದ ನಂತರ, 14 ಅಂಶಗಳ ಸಮಾಜವಾದಿ ಘೋಷಣೆಗಳನ್ನು ಪ್ರಕಟಿಸಿದರು. ಜಸ್ಟೀಸ್ ಪಕ್ಷ ಅದನ್ನು ಒಪ್ಪಿಕೊಂಡಿತು.


ಹೆಚ್ಚುತ್ತಿರುವ ಜನಸಂಖ್ಯೆಯನ್ನು ನಿಯಂತ್ರಿಸಲು ಜನರ ಆರೋಗ್ಯ ಜೀವನಕ್ಕಾಗಿ ಕುಟುಂಬ ಕಲ್ಯಾಣ ಯೋಜನೆಯನ್ನು ಸಲಹೆ ಮಾಡಿದರು. ತಮಿಳು ಅಕ್ಷರಗಳ ಸುಧಾರಣೆಗೆ ಸಲಹೆ ಮಾಡಿದುದು ಮಾತ್ರವಲ್ಲದೆ ಸುಲಭವಾಗಿ ಶಿಕ್ಷಣ ಕಲಿಯಲು ರೋಮನ್ ಅಕ್ಷರಗಳನ್ನು ಅನುಸರಿಸುವಂತೆ ಒತ್ತಾಯಿಸಿದರು. ಚೆನ್ನೈನಲ್ಲಿ ನಡೆದ ಮಹಿಳೆಯರ ಸಮ್ಮೇಳನದಲ್ಲಿ ಇವರಿಗೆ "ಪೆರಿಯಾರ್" ಎಂಬ ಬಿರುದನ್ನು ಕೊಡಲಾಯಿತು.

1937ರಲ್ಲಿ ನಡೆದ ಚುನಾವಣೆಯಲ್ಲಿ ಜಸ್ಟೀಸ್ ಪಕ್ಷಕ್ಕೆ ಸೋಲು ಉಂಟಾಯಿತು. ಇದರಿಂದ ಜಸ್ಟೀಸ್ ಪಕ್ಷದ ಅವನತಿಯನ್ನು ತಡೆಯಲಾಗಲಿಲ್ಲ. 1944ರಲ್ಲಿ "ದ್ರಾವಿಡರ ಕಳಗಂ" ಎಂದು ಹೆಸರು ಬದಲಾವಣೆ ಮಾಡಲಾಯಿತು.

ಪೆರಿಯಾರ್‌ರವರ ಬಯಕೆಗಳನ್ನು ದ್ರಾ.ಮು.ಕ. ಮತ್ತು ಅ.ದ್ರಾ.ಮು.ಕ. ಪಕ್ಷಗಳು ಪೂರ್ತಿಗೊಳಿಸುತ್ತಾ ಬಂದಿವೆ.

ಸಿ.ಎನ್.ಅಣ್ಣಾದೊರೈ.

ತಮಿಳುನಾಡಿನ ಜನರು ಪ್ರೀತಿಯಿಂದ ಮಹಾಜ್ಞಾನಿ (ಪೇರರಿಜ್ಞರ್‌ಅಣ್ಣಾ) ಎಂದು ಕರೆಯಲ್ಪಡುವ ಸಿ.ಎನ್.ಅಣ್ಣಾದೊರೈ, ಸೆಪ್ಟಂಬರ್ 15, 1909ರಲ್ಲಿ ಕಾಂಚಿಪುರದಲ್ಲಿ ಜನಿಸಿದರು. ಇವರು ತಮ್ಮ ಎಂ.ಎ.ಪದವಿಯನ್ನು ಚೆನ್ನೈನ ಪಚ್ಚೈಯಪ್ಪನ್ ಕಾಲೇಜಿನಲ್ಲಿ ಮುಗಿಸಿದರು. ಇವರು ದ್ರಾವಿಡ ಮುನ್ನೇಟ್ರ ಕಳಗಂ ಪಕ್ಷದ ಸ್ಥಾಪಕರು. ಅಣ್ಣಾ ಜಸ್ಟೀಸ್ ಪಕ್ಷದ ಮೂಲಕ ರಾಜಕೀಯ ಪ್ರವೇಶಿಸಿದರು. ಸಮಾಜವನ್ನು ಪ್ರಗತಿಗೊಳಿಸಬೇಕೆಂಬ ಬಯಕೆಯೇ ಇವರನ್ನು ಜಸ್ಟೀಸ್ ಪಕ್ಷಕ್ಕೆ ವಿಲೀನಗೊಳಿಸಿತು. ಇವರು ಜಾತಿರಹಿತ ಮತ್ತು ವರ್ಗರಹಿತ ಸಮಾಜವನ್ನಾಗಿ ಮಾಡಬೇಕೆಂಬ ಉದ್ದೇಶದಿಂದ ಜಸ್ಟೀಸ್ ಪಕ್ಷದೊಡನೆ ವಿಲೀನ ಮಾಡಿಕೊಂಡರು.



ಸಿ.ಎನ್.ಅಣ್ಣಾದೊರೈ

ಅಣ್ಣಾ ಒಬ್ಬ ಶ್ರೇಷ್ಠ ಭಾಷಣಕಾರರು. ಆ ಕಾಲದಲ್ಲಿ ಪ್ರಸಿದ್ಧ ಭಾಷಣಕಾರರಲ್ಲಿ ಒಬ್ಬರಾಗಿ

ಪ್ರಕಾಶಿಸಿದರು. ಜಸ್ಟೀಸ್ ಪಕ್ಷದಲ್ಲಿ ವಿಲೀನವಾದಾಗ ಪೆರಿಯಾರರ ನಾಯಕತ್ವದ ಕೆಳಗೆ ಸೇವೆ ಸಲ್ಲಿಸುವ ಭಾಗ್ಯ ಸಿಕ್ಕಿತು. ಜಸ್ಟೀಸ್ ಪಕ್ಷ ಇವರಿಗೆ ಸರಿಯಾದ ಮಾರ್ಗದರ್ಶನ ತೋರಿಸಿ, ಸ್ವಾಭಿಮಾನ ಚಳುವಳಿಯಲ್ಲಿ ಭಾಗವಹಿಸುವಂತೆ ಮಾಡಿತು. ಇದರ ಮೂಲಕ ಸಮಾಜದಲ್ಲಿ ಕಾಣಿಸಿದ ಅಸಮಾನತೆಯನ್ನು ಹೊರಹಾಕುವ ಕಾರ್ಯವನ್ನು ಪ್ರಾರಂಭಿಸಿದರು.

ತಮಿಳು ಭಾಷೆಯ ಮೇಲೆ ಅಧಿಕವಾಗಿ ಅವಲಂಬಿತರಾದ ಅಣ್ಣಾ, ಕಾಂಚಿಪುರದಲ್ಲಿ ಪೆರಿಯಾರ್‌ರವರಿಂದ ಆರಂಭಿಸಿದ ಹಿಂದಿ ವಿರೋಧ ಸಮ್ಮೇಳನದಲ್ಲಿ ಭಾಗವಹಿಸಿ ಹಿಂದಿ ಭಾಷೆಯ ವಿರುದ್ಧ ಧ್ವನಿ ಎತ್ತಿದರು. ಉತ್ತಮ ಪ್ರಗತಿ ಹೊಂದಿದ ತಮಿಳಿನ ಸ್ಥಾನವನ್ನು ಹಿಂದಿ ಒಮ್ಮೆಯೂ ತೆಗೆದುಕೊಳ್ಳಲಾಗದು ಎಂದು ಒತ್ತಿ ಹೇಳಿದರು.

1944ರಲ್ಲಿ ಸೇಲಂನಲ್ಲಿ ನಡೆದ ಸಮ್ಮೇಳನದಲ್ಲಿ ಜಸ್ಟೀಸ್ ಪಕ್ಷದ ಹೆಸರನ್ನು ದ್ರಾವಿಡರ್ ಕಳಗಂ ಎಂದು ಬದಲಾಯಿಸುವ ತೀರ್ಮಾನವನ್ನು ತಂದರು. ಇದರ ಮೂಲಕ ಅಣ್ಣಾದೊರೈ ಪೆರಿಯಾರ್‌ರಿಗೆ ತುಂಬಾ ಹತ್ತಿರವಾದರು. 1947ರಲ್ಲಿ ನಡೆದ ಪೆರಿಯಾರ್–ಮಣಿಯಮ್ಮೈ ವಿವಾಹ ದ್ರಾವಿಡ ಪಕ್ಷಕ್ಕೆ ಒಂದು ದೊಡ್ಡ ಕಂಪನವನ್ನುಂಟು ಮಾಡಿತು. ಈ ವಿವಾಹಕ್ಕೆ ವಿರೋಧ ವ್ಯಕ್ತಪಡಿಸಿ ಅಣ್ಣಾರವರು ಆ ಪಕ್ಷವನ್ನು ತ್ಯಜಿಸಿ 1949ರಲ್ಲಿ ಸೆಪ್ಟೆಂಬರ್ 17 ರಂದು ದ್ರಾವಿಡ ಮುನ್ನೇಟ್ರ ಕಳಗಂ ಎಂಬ ಹೊಸ ಪಕ್ಷವನ್ನು ಆರಂಭಿಸಿದರು. ಅಣ್ಣಾ, ದ್ರಾವಿಡ ಮುನ್ನೇಟ್ರ ಕಳಗಂನ ಉದ್ದೇಶ ಮತ್ತು ಸಿದ್ಧಾಂತಗಳನ್ನು ವಿವರಿಸಿದರು. ಇವರು ಮಹಾ ಕಾರ್ಯದರ್ಶಿಯಾದರು.

1967ರಲ್ಲಿ ನಡೆದ ಚುನಾವಣೆಯಲ್ಲಿ ಜಯಗಳಿಸಿ ಅಣ್ಣಾ ತಮಿಳುನಾಡಿನ ಮುಖ್ಯಮಂತ್ರಿ ಹುದ್ದೆಗೇರಿದರು. ತಮ್ಮ ಅಧಿಕಾರದ ಅವಧಿಯಲ್ಲಿ ಪಡಿ (ಒಂದು ಅಳತೆ) ಅಕ್ಕಿ ಯೋಜನೆಯನ್ನು ಪರಿಚಯಿಸಿದರು.(ಒಂದು ರೂಪಾಯಿಗೆ ಒಂದು ಕೆ.ಜಿ.ಅಕ್ಕಿ) ಆದರೆ ಆರ್ಥಿಕ ಮುಗ್ಗಟ್ಟಿನಿಂದಾಗಿ ಈ ಯೋಜನೆಯನ್ನು ತಮಿಳುನಾಡಿನಾದ್ಯಂತ ಕಾರ್ಯಗತ ಮಾಡಲಾಗಲಿಲ್ಲ. ಅಣ್ಣಾ ತಮಿಳು ಭಾಷಾ ಬೆಳವಣಿಗೆಗೆ ಯೋಜನೆಯನ್ನು ಪರಿಚಯಿಸಿದರು.

ಚೈತ್ರ ಮಾಸದ ಮೊದಲ ದಿನವನ್ನು ತಮಿಳು ಹೊಸ ವರ್ಷದ ದಿನವನ್ನಾಗಿ ಪ್ರಕಟಿಸಿದರು. (14.04.1967) 1967 ರಲ್ಲಿ ಏಪ್ರಿಲ್ 16 ರಂದು ಚೆನ್ನೈ ರಾಜ್ಯ ಎಂಬುದನ್ನು ತಮಿಳುನಾಡು ಸರ್ಕಾರ ಅಥವಾ ತಮಿಳಗಂ ಎಂದು ಹೆಸರು ಬದಲಾಯಿಸಿದರು.

ಸೈಂಟ್ ಜಾರ್ಜ್ ಕೋಟೆಯಲ್ಲಿ ನಿರ್ಮಾಣಗೊಂಡಿರುವ ಸೆಕ್ರೇಟರಿಯೆಟ್ ಎನ್ನುವುದನ್ನು ತಲಮೈಸೆಯಲಗಂ (ಪ್ರಧಾನ ಕಾರ್ಯಸೌಧ) ಎಂದು ಹೆಸರನ್ನು ಬದಲಾಯಿಸಿದರು. ಅದೇ ದಿನಾಂಕದಂದು "ಸತ್ಯಮೇವ ಜಯತೇ"ಎಂಬ ರಾಷ್ಟ್ರೀಯ ಧ್ಯೇಯವಾಕ್ಯವನ್ನು ವಾಯ್‌ಮೈಯೇ ವೆಲ್ಲುಂ ಎಂದು ಬದಲಿಸಿ ಪ್ರಕಟಿಸಿದರು. ಶ್ರೀ,ಶ್ರೀಮತಿ ಮತ್ತು ಕುಮಾರಿ ಎಂಬಂತಹ ಸಂಸ್ಕೃತ ಪದಗಳಿಗೆ ಬದಲಾಗಿ ತಿರು, ತಿರುಮತಿ ಮತ್ತು ಸೆಲ್ವಿ ಎಂಬ ತಮಿಳು ಪದಗಳನ್ನು ಪ್ರಕಟಿಸಿದರು.

ಅಣ್ಣಾರವರ ನಾಯಕತ್ವ, ಆಡಳಿತ, ಪ್ರಾಮಾಣಿಕತೆ,ರಾಜಕೀಯ ಮುಂತಾದವುಗಳನ್ನು ಗೌರವಿಸುವ ರೀತಿಯಲ್ಲಿ, ಅಣ್ಣಾ ಮಲೈ ವಿಶ್ವವಿದ್ಯಾನಿಲಯ 1968ರಲ್ಲಿ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿ ಅಣ್ಣಾರವರನ್ನು ಸನ್ಮಾನಿಸಿತು. ಇಂತಹ ಕೀರ್ತಿವಂತರಾದ ಅಣ್ಣಾದೊರೈ, 1969ರ ಫೆಬ್ರವರಿ 3ರಂದು, ಮರಣ ಹೊಂದಿದರು.

ಸಾಮಾಜಿಕ ಬದಲಾವಣೆಯಲ್ಲಿ ಮಹಿಳೆಯರ ಪಾತ್ರ

ಸುಧಾರಣೆ ಎಂಬುದು ಸಮಾಜದಲ್ಲಿ ಹಲವು ಶತಮಾನಗಳಿಂದಲೂ ಬೇರೂರಿರುವ ಸಾಮಾಜಿಕ ಕೆಡಕುಗಳನ್ನು ನಿರ್ಮೂಲನೆ ಮಾಡುವುದಾಗಿದೆ. ಈ ಸುಧಾರಣೆಗಳು ಒಂದು ದೇಶದ ಪ್ರಗತಿಗೆ ಅಡಚಣೆಯಾಗಿವೆ.

ಇಂತಹ ಸಾಮಾಜಿಕ ಬದಲಾವಣೆಯನ್ನು ಉಂಟು ಮಾಡಲು ಪುರುಷರು ಮಾತ್ರವಲ್ಲದೆ ಮಹಿಳೆಯರೂ ಸಹ ಪ್ರಮುಖ ಪಾತ್ರವಹಿಸಿದ್ದಾರೆ. ಅವರುಗಳಲ್ಲಿ ಕೆಲವು ಮಹಿಳಾ ಸುಧಾರಕರ ಪಾತ್ರವು ವಿಶೇಷವಾದುದಾಗಿದೆ.

ಡಾಕ್ಟರ್ ಮುತ್ತುಲಕ್ಷ್ಮಿ ರೆಡ್ಡಿ

ಸಾಮಾಜಿಕ ಬದಲಾವಣೆಯಲ್ಲಿ ತಮಿಳುನಾಡು ಅಗ್ರಸ್ಥಾನದಲ್ಲಿ ಪ್ರಕಾಶಿಸುತ್ತದೆ. ಮಹಾನ್ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ತಮಿಳುನಾಡಿನಲ್ಲಿ ಕಪ್ಪು ಚುಕ್ಕಿಯಂತೆ ಕಾಣಿಸಿಕೊಂಡ ಕೆಲವು ಕೆಡಕುಗಳನ್ನು

ನಾಶಪಡಿಸಲಾಯಿತು. ಅವುಗಳಲ್ಲಿ ಒಂದು ದೇವದಾಸಿ ಪದ್ಧತಿಯಾಗಿದೆ. ಇಂತಹ ಸಾಮಾಜಿಕ ಪಿಡುಗನ್ನು ಹೋಗಲಾಡಿಸಲು ಡಾಕ್ಟರ್ ಮುತ್ತುಲಕ್ಷ್ಮಿರೆಡ್ಡಿಯವರು ತೀವ್ರವಾಗಿ ಹೋರಾಡಿದ ಪ್ರಮುಖ ಮಹಿಳಾ ಮಣಿಗಳಲ್ಲಿ ಒಬ್ಬರಾಗಿದ್ದಾರೆ.



ಡಾಕ್ಟರ್ ಮುತ್ತುಲಕ್ಷ್ಮಿರೆಡ್ಡಿ

ಡಾಕ್ಟರ್ ಮುತ್ತುಲಕ್ಷ್ಮಿರೆಡ್ಡಿ 1886ರ ಜುಲೈ 30ರಂದು, ಮದುಕೋಟೆಯಲ್ಲಿ ಜನಿಸಿದರು. ಭಾರತದ ಪ್ರಥಮ ಮಹಿಳಾ ವೈದ್ಯರಾಗಿದ್ದಾರೆ. 1923ರಲ್ಲಿ ಅವರ ತಂಗಿ ಕ್ಯಾನ್ಸರ್ ರೋಗಪೀಡಿತರಾಗಿ ಮರಣ ಹೊಂದಿದರು. ಇದರಿಂದ ಕ್ಯಾನ್ಸರ್ ರೋಗವನ್ನು ಬುಡ ಸಹಿತ ನಿರ್ಮೂಲನೆ ಮಾಡಬೇಕೆಂದು ಪ್ರತಿಜ್ಞೆ ಮಾಡಿದರು. ಹೀಗಾಗಿ 1949ರಲ್ಲಿ ಕ್ಯಾನ್ಸರ್ ನಿವಾರಣಾ ಆಸ್ಪತ್ರೆಯನ್ನು ಪ್ರಾರಂಭಿಸಿದರು. ಇವರ ಸಣ್ಣ ಪ್ರಯತ್ನದಿಂದಾಗಿ ಚೆನ್ನೈ ಅಡೆಯಾರ್ ಕ್ಯಾನ್ಸರ್ ಸಂಶೋಧನಾ ಸಂಸ್ಥೆಯನ್ನು ಪ್ರಾರಂಭಿಸಿದರು. ಭಾರತದ ಪ್ರಧಾನಿ ಜವಹರಲಾಲ್ ನೆಹರುರವರು ಈ ಆಸ್ಪತ್ರೆಗೆ ಶಂಕುಸ್ಥಾಪನೆ ನೆರವೇರಿಸಿದರು.

ಡಾಕ್ಟರ್ ಮುತ್ತುಲಕ್ಷ್ಮಿ ಆಸ್ಪತ್ರೆ ಮಾತ್ರವಲ್ಲದೆ ರಾಜಕೀಯ ಮತ್ತು ಸಾಮಾಜಿಕ ಸುಧಾರಣೆಗಳಲ್ಲೂ ಆಸಕ್ತಿ ಹೊಂದಿದ್ದರು. ತಮಿಳು ನಾಡಿನಲ್ಲಿ ಕಾಣಿಸಿಕೊಂಡ ಕೆಟ್ಟ ಆಚರಣೆಯಾದ ದೇವದಾಸಿ ಪದ್ಧತಿಯನ್ನು ನಾಶ ಪಡಿಸಲು ತಮ್ಮ ಜೀವನವನ್ನೇ ಸಮರ್ಪಿಸಿದರು.

ದೇವದಾಸಿ ಪದ್ಧತಿಯನ್ನು ನಾಶಪಡಿಸಲು ಆಸಕ್ತಿ ವಹಿಸುತ್ತಿದ್ದುದರಿಂದ, ಮಹಾತ್ಮಗಾಂಧಿ ಇವರ ಸಮಾಜ ಸೇವೆಗಳನ್ನು ಹೊಗಳಿದರು.

ದೇವದಾಸಿ ಪದ್ಧತಿಯನ್ನು ತೊಲಗಿಸಲು ಇವರು ತಲ್ಲೀನರಾಗಿದ್ದುದರ ಪರಿಣಾಮ 1929ರಲ್ಲಿ ತಮಿಳುನಾಡು ವಿಧಾನ ಪರಿಷತ್ ಸದಸ್ಯರನ್ನಾಗಿ ನೇಮಿಸಲ್ಪಟ್ಟರು. ಕಂದೆ ಪೆರಿಯಾರ್, ಶ್ರೀ.ವಿ.ಕಲ್ಯಾಣಸುಂದರಂ ಅಂತಹವರುಗಳು ಇವರ ಅಭಿಪ್ರಾಯವನ್ನು ತೀವ್ರವಾಗಿ ಬೆಂಬಲಿಸಿದರು. ದೇವದಾಸಿ ಪದ್ಧತಿಯ ನಿರ್ಮೂಲನೆ ಕಾಯಿದೆಯನ್ನು ಜಾರಿಗೊಳಿಸಿದರು.

1930ರಲ್ಲಿ ಪೂನಾದಲ್ಲಿ ರಾಷ್ಟ್ರೀಯ ಮಹಿಳೆಯರ ಸಮ್ಮೇಳನವನ್ನು ನಡೆಸಿದರು. 1933 ರಿಂದ 1947ರ ನಡುವೆ ಎರಡು ವರ್ಷಗಳನ್ನು ಹೊರತು ಪಡಿಸಿ ಮುಂದುವರಿದಂತೆ ಭಾರತದ ಮಹಿಳಾ ಸಂಘದ ಅಧ್ಯಕ್ಷರಾಗಿದ್ದರು. ನಿರಾಶ್ರಿತರಿಗೆ ಪುನರ್ ಜೀವನ ಕೊಡುವುದಕ್ಕಾಗಿ 'ಅವ್ವೈ ಇಲ್ಲಮ್' ಎಂಬ ಆಶ್ರಮವನ್ನು ಸಾಂತೋಮಿನಲ್ಲಿ ಆರಂಭಿಸಿದರು. ಈವಾಗ ಈ ಮಂದಿರ ಚೆನ್ನೈನ ಅಡ್ಯೆಯಾರಿನಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಕಠಿಣ ಶ್ರಮಕ್ಕೆ ಸೋಲಿಲ್ಲ ಎಂಬುದನ್ನು ನಿರೂಪಿಸಿದ ಡಾಕ್ಟರ್ ಮುತ್ತುಲಕ್ಷ್ಮಿರೆಡ್ಡಿ 1968ರಂದು ತಮ್ಮ 82ನೇ ವಯಸ್ಸಿನಲ್ಲಿ ಮರಣ ಹೊಂದಿದರು.

ಡಾಕ್ಟರ್ ಎಸ್.ಧರ್ಮಮ್ಮಾಳ್

ಶಿಕ್ಷಣ, ಶಕ್ತಿ, ಐಶ್ವರ್ಯ ಮತ್ತು ಅಂತಸ್ತು ಇವುಗಳಾವುವೂ ಇಲ್ಲದೇ, ಜನರಿಗೆ ಸೇವೆಸಲ್ಲಿಸುವುದರ ಮೂಲಕ ಮಾನವೀಯತೆಯ ಗುಣದಿಂದ ಹಲವರು ಪ್ರಸಿದ್ಧರಾಗಿದ್ದಾರೆ. ಅವರುಗಳಲ್ಲಿ ಡಾಕ್ಟರ್, ಎಸ್.ಧರ್ಮಮ್ಮಾಳ್ ರವರು ಒಬ್ಬರೆಂದು ಅಭಿಪ್ರಾಯ ಪಡುತ್ತಾರೆ. ಸಮಾಜ ಸೇವೆಯಲ್ಲಿ ಅಧಿಕವಾಗಿ ತೊಡಗಿಸಿಕೊಂಡ ಧರ್ಮಮ್ಮಾಳ್ ಸಿದ್ಧ ಆಸ್ಪತ್ರೆಯನ್ನು ಪ್ರಾರಂಭಿಸಿದರು. ನಂತರ ಸಾರ್ವಜನಿಕ ಸೇವೆಯಲ್ಲಿ ತಲ್ಲೀನರಾದರು. ತಂಜಾವೂರಿನ ಪಕ್ಕದಲ್ಲಿರುವ ಕರುಣ್ ತಟ್ಟಾಂಗುಡಿ ಎಂಬ ಸ್ಥಳದಲ್ಲಿ ಜನಿಸಿದರು.

ಕಂದೆ ಪೆರಿಯಾರರ ತತ್ವಗಳಿಂದ

ಆಕರ್ಷಿತರಾದ ಇವರು ವಿಧವೆಯರ ಮರು ವಿವಾಹ, ಅಂತರ್ ಜಾತಿ ವಿವಾಹ ಮತ್ತು ಮಹಿಳಾ ಶಿಕ್ಷಣ ಮುಂತಾದವುಗಳಲ್ಲಿ ಆಸಕ್ತಿ ತೋರಿಸಿದರು.

ತಮಿಳು ಸಾಹಿತ್ಯ ಬೆಳವಣಿಗೆಯಲ್ಲೂ, ತಮಿಳು ಸಂಗೀತ ಬೆಳವಣಿಗೆಯಲ್ಲೂ ಹೆಚ್ಚಿನ ಆಸಕ್ತಿ ಹೊಂದಿದ್ದರು. ಹಿಂದಿ ವಿರೋಧ ಹೋರಾಟದಲ್ಲಿ ಭಾಗವಹಿಸಿ ಹಲವು ಭಾರಿ ಜೈಲು ವಾಸ ಅನುಭವಿಸಿದರು. 1940ರ ವರೆಗೆ ಸಮಾಜದಲ್ಲಿ ತಮಿಳು ಶಿಕ್ಷಕರಿಗೆ ಗೌರವವಿರಲಿಲ್ಲ.ವೇತನವನ್ನು ಹೆಚ್ಚಿಸಲಿಲ್ಲ. ಹೀಗಾಗಿ, ಇಳವು ವಾರಮ್ ಎಂಬ ಹೋರಾಟವನ್ನು ಆರಂಭಿಸಿದರು. ಇದರ ಪರಿಣಾಮವಾಗಿ ಶಿಕ್ಷಣ ಸಚಿವರಾಗಿದ್ದ ಶ್ರೀ ಅವಿನಾಶಿಲಿಂಗಂ ಚೆಟ್ಟಿಯಾರ್ ಇತರ ಶಿಕ್ಷಕರಿಗೆ ಸಮಾನವಾದ ವೇತನವನ್ನು ತಮಿಳು ಶಿಕ್ಷಕರಿಗೂ ಕೊಡುವಂತೆ ಆದೇಶಿಸಿದರು.

ತಮಿಳು ನಾಡಿನಾದ್ಯಂತ ಇರುವ ಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳಲ್ಲಿ ತಮಿಳು ಜ್ಞಾನವನ್ನು ಬೆಳೆಸುವುದಕ್ಕಾಗಿ ಸರಕಾರದ ಪರೀಕ್ಷೆಗಳಲ್ಲಿ ಅವರು ಒಳ್ಳೆಯ ಅಂಕಗಳನ್ನು ಪಡೆಯಲು ಚರ್ಚಾ ಸಾಮರ್ಥ್ಯ, ಬರವಣಿಗೆ ಸಾಮರ್ಥ್ಯ ಬೆಳೆಸಿಕೊಳಲು ಚೆನ್ನೈ ವಿದ್ಯಾರ್ಥಿಗಳ ಸಭೆ ಸ್ಥಾಪಿಸಲ್ಪಟ್ಟಿತು. ಈ ಸಭೆಯ ಅಧ್ಯಕ್ಷರಾಗಿ ಹತ್ತು ವರ್ಷಗಳ ಕಾಲ ಸೇವೆ ಸಲ್ಲಿಸಿದರು.

ಇವರು ತಮಿಳು ಭಾಷೆ ಮತ್ತು ತಮಿಳು ಸಾಹಿತ್ಯಗಳಿಗೆ ಸಲ್ಲಿಸಿದ ಸೇವೆಯನ್ನು ಹೊಗಳಿ 'ವೀರತ್ತಮಿಳನ್ನೈ' ಎಂಬ ಬಿರುದನ್ನು ಕೊಡಲಾಯಿತು. ಈ ಬಿರುದು ಪಡೆದ ಧರ್ಮಮ್ಮಾಳ್, ಈ.ವೆ.ರಾಮಸ್ವಾಮಿ ನಾಯಕರಿಗೆ 'ಪೆರಿಯಾರ್' ಎಂಬ ಬಿರುದನ್ನು ಎಂ.ಕೆ.ತ್ಯಾಗರಾಜ ಭಾಗವತರಿಗೆ 'ಸಪ್ತ ಸಂಗೀತಗಳ ರಾಜ' ಎಂಬ ಬಿರುದನ್ನು ಕೊಟ್ಟರು.

ತಮ್ಮ ಶ್ರಮ, ಚಿಂತನೆಗಳೆಲ್ಲವನ್ನೂ ತಮಿಳು ಜನರು, ತಮಿಳುಭಾಷೆ, ತಮಿಳು ಸಂಗೀತ, ತಮಿಳುಜನರು ಇವುಗಳಿಗಾಗಿ ತ್ಯಾಗ ಮಾಡಿದ ಧರ್ಮಮ್ಮಾಳ್ 69ನೇ ವಯಸ್ಸಿನಲ್ಲಿ 1959ರಲ್ಲಿ ಮರಣ ಹೊಂದಿದರು.

ಮೂವಲೂರು ರಾಮಾಮೃತಮ್

ಇಪ್ಪತ್ತನೇ ಶತಮಾನದ ಪ್ರಾರಂಭದಲ್ಲಿ ತಮಿಳುನಾಡಿನಲ್ಲಿ ಉದಯಿಸಿದ ಮಹಿಳಾ ಕ್ರಾಂತಿಕಾರಿಗಳಲ್ಲಿ ಬಹುತೇಕರು ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡರು. ಇವರಲ್ಲಿ ಕೆಲವರು ದೇಶ ಸ್ವಾತಂತ್ರ್ಯಕ್ಕಾಗಿ ತಮ್ಮನ್ನು ಸಮರ್ಪಿಸಿಕೊಂಡರು. ಇವರಲ್ಲಿ ಕೆಲವರು ದೇಶ ಸ್ವಾತಂತ್ರ್ಯ ಹಾಗೂ ಸಾಮಾಜಿಕ ಸುಧಾರಣೆಗಾಗಿ ಹೋರಾಟ ಮಾಡಿದರು.

ಅವರುಗಳಲ್ಲಿ ಬಹು ಮುಖ್ಯರಾದವರು ಮೂವಲೂರು ರಾಮಾಮೃತ ಅಮ್ಮನವರು. 1883ರಂದು ತಿರುವಾರೂರಿನಲ್ಲಿ ಜನಿಸಿದ ಇವರು ಮಯಿಲಾಡುದುರೈಗೆ ಪಕ್ಕದಲ್ಲಿರುವ ಮೂವಲೂರು ಗ್ರಾಮದಲ್ಲಿ ಬೆಳೆದರು. ಹೀಗಾಗಿ ಮೂವಲೂರ್ ರಾಮಾಮೃತಮ್ ಎಂದು ಕರೆಯಲ್ಪಟ್ಟರು.

ಇವರು ಸಂಗೀತವೇಳಾಳರ್ ಜಾತಿಗೆ (ಸಮುದಾಯ) ಸೇರಿದವರು. ಹಳೆಯ ಕಾಲದಲ್ಲಿ ಈ ಜಾತಿಗೆ ಸೇರಿದ ಹೆಣ್ಣು ಮಕ್ಕಳನ್ನು ದೇವರ ಸೇವೆ ಮತ್ತು ದೇವಾಲಯದ ಸೇವೆಗಾಗಿಯೇ ತ್ಯಾಗ ಮಾಡಲಾಯಿತು. ಈ ಸಮುದಾಯವು ಕಾಲ ಚಕ್ರದಲ್ಲಿ ಸಿಲುಕಿ ನಶಿಸಿ ಹೋಯಿತು. ಭೂ ಮಾಲೀಕರು ಮತ್ತು ಜಮೀನುದಾರರಿಂದ ಅವಮಾನಿಸಲ್ಪಟ್ಟರು.

ತಮ್ಮ ಜಾತಿಯ ಮಹಿಳೆಯರು ಹಿಂದುಳಿದ ಸ್ಥಿತಿಯಲ್ಲಿರುವುದು, ಹಲವಾರು ರೀತಿಯಲ್ಲಿ ಹಿಂಸಿಸುವುದನ್ನು ತಿಳಿದು ರಾಮಾಮೃತ ಅಮ್ಮನವರು ಅವರ ಬಿಡುಗಡೆಗಾಗಿ ತಮ್ಮ ಜೀವನವನ್ನು ತ್ಯಾಗ ಮಾಡಲು ತೀರ್ಮಾನಿಸಿದರು. ರಾಜ್ಯದಾದ್ಯಂತ ತಮ್ಮ ವರ್ಗದ ಹೆಣ್ಣು ಮಕ್ಕಳಿಗಾಗುವ ಅನ್ಯಾಯಗಳನ್ನು ತಿಳಿಸಿದಾಗ ಅವರ ಗೆಲುವಿಗೆ ಹಲವಾರು ನಾಯಕರು ಬೆಂಬಲಿಸಿದರು.

ಇವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸೇರಿದರು. 1925ರಲ್ಲಿ ಮಯಿಲಾಡುದುರೈನಲ್ಲಿ ಸಂಗೀತ ವೇಳಾಳರ್ ಸಮ್ಮೇಳನವನ್ನು ಸಂಘಟಿಸಿದರು. ಈ ಸಮ್ಮೇಳನದಲ್ಲಿ ಹಲವಾರು ಮಹಾನ್ ನಾಯಕರುಗಳು ಭಾಗವಹಿಸಿದ್ದರು. ಅವರುಗಳೆಂದರೆ ಶ್ರೀ

ವಿ.ಕೆ.ಪೆರಿಯಾರ್, ಮಯೂರಮಣಿ ಚಿನ್ನಯ್ಯಪಿಳ್ಳೈ, ಎಸ್.ರಾಮನಾದನ್ ಇವರುಗಳು ದೇವದಾಸಿ ಪದ್ಧತಿಯ ವಿರುದ್ಧ ಧ್ವನಿ ಎತ್ತಿದರು. ಇದರ ಪರಿಣಾಮವಾಗಿ ಡಾಕ್ಟರ್ ಮುತ್ತುಲಕ್ಷ್ಮಿ ರೆಡ್ಡಿ, ದೇವದಾಸಿ ಪದ್ಧತಿ ನಿರ್ಮೂಲನ ಕಾಯಿದೆಯನ್ನು ಸರಕಾರ ಜಾರಿಗೊಳಿಸಿತು.

ಅವರ ದೇವದಾಸಿ ಪದ್ಧತಿ ವಿರೋಧಿ ಹೋರಾಟವು ತಮಿಳುನಾಡಿನ ಮಹಿಳೆಯರಿಗೆ ಮಾತ್ರವಲ್ಲದೆ ರಾಷ್ಟ್ರ ಮಟ್ಟದಲ್ಲಿ ಮಹಿಳೆಯರನ್ನು ಜಾಗೃತಿಗೊಳಿಸಲು ನೆರವಾಯಿತು.

ಸಮಾಜ ಸೇವೆಯಲ್ಲದೆ ರಾಷ್ಟ್ರೀಯ ಸಂಘಟನೆಗಳಲ್ಲೂ ಸೇರಿಕೊಂಡ ಅಮ್ಮನವರು ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ರಾಷ್ಟ್ರೀಯ ಸಂಘಟನೆಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸಿದರು. ತಂದೆ ಪೆರಿಯಾರ್, ರಾಜಾಜಿ, ಶ್ರೀ ವಿ.ಕ. ಅವರುಗಳ ಬೆಂಬಲದಿಂದ ಇವರು ವಿಶೇಷವಾಗಿ ಕಾರ್ಯ ನಿರ್ವಹಿಸಿದರು.

ಅವರ ಬೆಲೆ ಕಟ್ಟಲಾಗದ ಶ್ರಮ, ತ್ಯಾಗದ ಜ್ಞಾಪಕಾರ್ಥವಾಗಿ ತಮಿಳುನಾಡು ಸರಕಾರವು ಮಹಿಳೆಯರ ವಿವಾಹಕ್ಕೆ ಧನ ಸಹಾಯ ಮಾಡಲು ಒಂದು ಸಾಮಾಜಿಕ ಯೋಜನೆಯನ್ನು ಸ್ಥಾಪಿಸಿ ಅದಕ್ಕೆ 'ಮೂವಲೂರ್ ರಾಮಾಮೃತಂ ಅಮ್ಮಾಳ್ ಸ್ಮರಣೆ ವಿವಾಹ ನೆರವು ಯೋಜನೆ' ಎಂದು ಹೆಸರಿಸಿ ಇವರನ್ನು ಗೌರವಿಸಿತು.

ಯಾವ ಉನ್ನತ ಉದ್ದೇಶಕ್ಕಾಗಿ ಸಾರ್ವಜನಿಕರ ಜೀವನದಲ್ಲಿ ತಮ್ಮನ್ನು ತೊಡಗಿಸಿಕೊಂಡರೋ ಆ ಉದ್ದೇಶವು ಸಂಪೂರ್ಣವಾಗಿ ಯಶಸ್ವಿಯಾದುದನ್ನು ಕಣ್ಣಾರೆ ಕಂಡು ಅನುಭವಿಸಿದ ನಂತರ 1962ರ ಜೂನ್27ರಂದು, ಇಹ ಲೋಕವನ್ನು ತ್ಯಜಿಸಿದರು.

ಪರಂಪರೆ ಪರಂಪರೆಯಾಗಿ ಬರುವ ಪದ್ಧತಿಗಳಿಂದ ತುಂಬಿದ ತಮಿಳು ಸಮುದಾಯವು ಇಂದಿಗೂ ಸಹ ಹಳೆಯ ಮೌಲ್ಯಗಳನ್ನು ಒಳಗೊಂಡಿದೆ. 1856ರಲ್ಲಿ ವಿಧವಾ ಮರುವಿವಾಹ ಕಾಯಿದೆ ಜಾರಿಗೊಳಿಸಿದ್ದರೂ ಇಂದಿಗೂ ವಿಧವೆಯರು ಸಮಾಜದಲ್ಲಿ ನಡೆಯುವ ಉತ್ಸವಗಳಲ್ಲಿ ನಿರ್ಲಕ್ಷ್ಯಕ್ಕೊಳಗಾಗುತ್ತಿದ್ದಾರೆ. 20ನೇ ಶತಮಾನದಲ್ಲಿ ಜಸ್ಟೀಸ್ ಪಕ್ಷ ಮತ್ತು ಸ್ವಾಭಿಮಾನ ಚಳುವಳಿಗಳು ಅಳವಡಿಸಿಕೊಂಡಿದ್ದ ಸಾಮಾಜಿಕ ಬೆಳವಣಿಗೆಯ ಸಿದ್ಧಾಂತಗಳ ಕಾಯಿದೆಗಳ ಮೂಲಕ ವಿಧವೆ ಮರು ವಿವಾಹ ಉದ್ದೇಶವನ್ನು ತಮಿಳು ನಾಡು ಒಪ್ಪಿಕೊಂಡಿತು. ಸತಿ ಪದ್ಧತಿ, ವಿಧವೆ ವಿವಾಹ ಮತ್ತು ಬಾಲ್ಯ ವಿವಾಹ ನಿರ್ಮೂಲನೆ ಮುಂತಾದವುಗಳು ತಮಿಳು ನಾಡಿನ ಇತಿಹಾಸದಲ್ಲಿ ಒಂದು ಗಮನಾರ್ಹ ಬದಲಾವಣೆಯಾಗಿದೆ. ಜಾತಿ ಅಸಮಾನತೆಯು ತಮಿಳುನಾಡಿನ ಮತ್ತೊಂದು ಸಾಮಾಜಿಕ ಪಿಡುಗಾಗಿದೆ. ದೇವಾಲಯ ಪ್ರವೇಶ ಚಳುವಳಿಯು ಇದಕ್ಕೆ ಒಂದು ಸೂಕ್ತವಾದ ನಿದರ್ಶನವಾಗಿದೆ.

ದೇವಸ್ಥಾನಗಳು ಒಂದು ಕಾಲದಲ್ಲಿ ಮೇಲ್ಜಾತಿಯವರಿಗೆ (ವರ್ಗ) ಮಾತ್ರ ಭಾದ್ಯವಾಗಿತ್ತು. ದೇವಸ್ಥಾನಗಳಲ್ಲಿ ಕೀಳು ಜಾತಿಯವರಿಗೆ ಪ್ರವೇಶವನ್ನು ನಿರಾಕರಿಸಲಾಗಿತ್ತು. ಹಲವು ಸಮಾಜ ಸುಧಾರಕರಾದ ಈ.ವೆ.ರಾಮಸ್ವಾಮಿ, ಡಾಕ್ಟರ್ ಮುತ್ತುಲಕ್ಷ್ಮಿ ರೆಡ್ಡಿ, ವಳ್ಳಲಾರ್, ಭಾರತಿಯಾರ್, ಭಾರತಿದಾಸನ್, ಮೂವಲೂರು ರಾಮಮೃತಮ್ಅಮ್ಮಾಳ್ ಅಂತಹವರು ಇಂತಹ ಸಮಾಜದ ಕೆಟ್ಟ ಸಂಪ್ರದಾಯಗಳನ್ನು ನಿರ್ಮೂಲನೆ ಮಾಡಲು ಹೋರಾಡಿದರು. ಈ ರೀತಿಯಾಗಿ ಮಹಿಳೆಯರು ತಮಿಳುನಾಡಿನ ಸಾಮಾಜಿಕ ಬದಲಾವಣೆಗೆ ಪ್ರಮುಖ ಪಾತ್ರ ವಹಿಸಿದ್ದಾರೆ. ಸ್ವಾರ್ಥವಿಲ್ಲದ ಸೇವೆಯನ್ನು ಇತಿಹಾಸ ಎಂದಿಗೂ ಮರೆಯುವುದಿಲ್ಲ.

ಅಭ್ಯಾಸ.

ಅ. ಸರಿಯಾದ ಉತ್ತರ ಆರಿಸಿ ಬರೆಯಿರಿ.

1. ದಕ್ಷಿಣ ಭಾರತದ ಕಲ್ಯಾಣ ಹಕ್ಕು ನಿಗಮವು _____ ನಂತರ ಹೀಗೆ ಕರೆಯಲಾಯಿತು.

ಅ) ದ್ರಾವಿಡ ಪಕ್ಷ ಆ) ಜನತಾ ಪಕ್ಷ ಇ) ತೆಲುಗುದೇಶಂ ಈ) ಜಸ್ಟೀಸ್ ಪಕ್ಷ

2. ಜಸ್ಟೀಸ್ ಪಕ್ಷವು ಪೆರಿಯಾರ್ ರಿಂದ ಹೀಗೆ ಬದಲಾಯಿಸಲ್ಪಟ್ಟಿತು.

ಅ) ಅಕಾಲಿದಳ ಆ) ಪಾಟ್ಟಾಳಿ ಮಕ್ಕಳ್ ಪಕ್ಷ ಇ) ದ್ರಾವಿಡ ಕಳಗಂ ಇ) ಸ್ವದೇಶ ಪಕ್ಷ

3. ತಮಿಳುನಾಡಿನ ಸುಪ್ರಸಿದ್ಧ ಸಮಾಜ ಸುಧಾರಕರು

ಅ) ಈ.ವೇ.ರಾಮಸ್ವಾಮಿ ಪೆರಿಯಾರ್ ಆ) ನೆಹರು

ಇ) ಗಾಂಧೀಜಿ ಈ)ರಾಜಾಮರಾಮ್ ಮೋಹನ್ ರಾಯ್

4. 'ವೈಕ್ಕಂ' ಎಂಬ ಸ್ಥಳ ಇಲ್ಲಿದೆ

ಅ) ತಮಿಳುನಾಡು ಆ) ಆಂಧ್ರ ಪ್ರಧೇಶ ಇ) ಕರ್ನಾಟಕ ಈ) ಕೇರಳ

5. ಸಿ.ಎನ್.ಅಣ್ಣಾದುರೈಯವರನ್ನು ಪ್ರೀತಿಯಿಂದ ಹೀಗೆ ಕರೆಯಲ್ಪಡುವರು

ಅ) ಚಾಚಾ ನೆಹರು ಆ) ರಾಷ್ಟ್ರಪತಿ ಇ) ಅರಿಜ್ಞರ್ ಅಣ್ಣಾ ಈ) ಪೆರಿಯಾರ್

6. ದ್ರಾವಿಡ ಮುನ್ನೇಟ್ರ ಕಳಗಂ ಇವರಿಂದ ಸ್ಥಾಪಿಸಲ್ಪಟ್ಟಿತು.

ಅ)ಸಿ.ಎನ್.ಅಣ್ಣಾದುರೈ ಆ) ಕಾಮರಾಜರ್ ಇ) ಕರುಣಾನಿಧಿ ಈ) ಎಂ.ಜಿ.ಆರ್.

7. ಅಣ್ಣಾದುರೈಗೆ ವಿದ್ವಾಂಸ ಪದವಿಯನ್ನು ನೀಡಿದ ವಿಶ್ವವಿದ್ಯಾನಿಲಯ.

ಅ) ಅಣ್ಣಾ ವಿಶ್ವವಿದ್ಯಾನಿಲಯ ಆ) ಅಣ್ಣಾಮಲೈ ವಿಶ್ವ ವಿದ್ಯಾನಿಲಯ

ಇ) ಮಣಿಪಾಲ ವಿಶ್ವವಿದ್ಯಾನಿಲಯ ಈ) ಭಾರತಿಯಾರ್ ವಿಶ್ವ ವಿದ್ಯಾನಿಲಯ.

8. ಡಾಕ್ಟರ್ ಮುತ್ತುಲಕ್ಷ್ಮಿ ರೆಡ್ಡಿಯವರ ಬಹಳ ಪ್ರಯತ್ನದಿಂದಾಗಿ ಕ್ಯಾನ್ಸರ್ ರೋಗದ ಚಿಕಿತ್ಸಾ ಕೇಂದ್ರವನ್ನು ಇಲ್ಲಿ ಪ್ರಾರಂಭಿಸಿದರು.

ಅ) ಅಣ್ಣಾನಗರ ಆ)ಚೆಂಗಲ್ ಪಟ್ಟು ಇ) ಕಾಂಚಿಪುರ ಈ) ಅಡ್ಯೆಯಾರು.

9. ಅಖಿಲ ಭಾರತ ಮಹಿಳಾ ಸಮ್ಮೇಳನವನ್ನು ನಡೆಸಿದ ಸ್ಥಳ

ಅ) ಪೂನಾ ಆ) ಮುಂಬೈ ಇ) ಥಾಣಾ ಈ) ಸತಾರ

10. ಮುತ್ತು ಲಕ್ಷ್ಮಿ ರೆಡ್ಡಿಯವರಿಂದ ಸ್ಥಾಪಿಸಲ್ಪಟ್ಟ ಅನಾಥಾಶ್ರಮದ ಹೆಸರು

ಅ) ಅನ್ಪು ಇಲ್ಲಮ್(ಆಶ್ರಮ) ಆ) ಸರಸ್ವತಿ ಇಲ್ಲಮ್ ಇ) ಅವ್ವೈ ಇಲ್ಲಮ್ ಈ) ಲಕ್ಷ್ಮಿ ಇಲ್ಲಮ್

11. ತಮಿಳು ಶಿಕ್ಷಕರಿಗೆ ಡಾಕ್ಟರ್ ಧರ್ಮಮ್ಮಾಳ್ ನಡೆಸಿದ ಹೋರಾಟ.

ಅ) ಒಳ್ಳೆಯ ವಾರ ಆ) ಹಿಂದಿ ವಾರ ಇ) ತಮಿಳು ವಾರ ಈ) ಇಳವು ವಾರ

12. ಮೂವಲೂರು ರಾಮಾಮೃತಮ್ ಜನಿಸಿದ ವರ್ಷ.

ಅ) 1885 ಆ) 1887 ಇ) 1889 ಈ)1883.

ಆ. ಹೊಂದಿಸಿರಿ.

1.	ಜಸ್ಟೀಸ್	ಈ.ವೇ.ರಾಮಸ್ವಾಮಿ ಪೆರಿಯಾರ್
2.	ವೈಕ್ಕಂ ವೀರರ್	ಡಾಕ್ಟರ್ ಎಸ್.ಧರ್ಮಾಮ್ಬಾಳ್
3.	ದೇವದಾಸಿ ಪದ್ಧತಿ	ಪೂಂಡಿಜಲಾಶಯ
4.	ವೀರತ್ತಮಿಳನ್ನೈ	ಟಿ.ಎಂ.ನಾಯರ್.
5.	ಜಸ್ಟೀಸ್ ಪಕ್ಷ	ಸತ್ಯಮೂರ್ತಿ
		ಆಂಗ್ಲ ಪತ್ರಿಕೆ
		ಡಾಕ್ಟರ್ ಮುತ್ತುಲಕ್ಷ್ಮಿ ರೆಡ್ಡಿ.

ಇ. ಸಂಕ್ಷಿಪ್ತವಾಗಿ ಉತ್ತರಿಸಿ.

1. ಜಸ್ಟೀಸ್ ಪಕ್ಷದ ಆಳ್ವಿಕೆಯ ಬಗ್ಗೆ ಬರೆಯಿರಿ.
2. ಸ್ವಾಭಿಮಾನ ಚಳುವಳಿಯ ತತ್ವಗಳೇನು?
3. ಪೆರಿಯಾರ್ ರವರನ್ನು 'ವೈಕ್ಕಂ ವೀರರ್' ಎಂದು ಏಕೆ ಕರೆಯಲ್ಪಡುವರು?
4. ತಮಿಳುನಾಡಿನ ಮುಖ್ಯಮಂತ್ರಿಯಗಿ ಅಣ್ಣಾದುರೈ ಮಾಡಿದ ಸೇವೆಗಳು ಯಾವುವು?
5. ದೇವದಾಸಿ ಪದ್ಧತಿಗೆ ಖಂಡನಾ ಪತ್ರಿಭಟನೆಯಲ್ಲಿ ಡಾಕ್ಟರ್ ಮುತ್ತು ಲಕ್ಷ್ಮಿ ರೆಡ್ಡಿಯವರ ಪಾತ್ರವೇನು?
6. ತಮಿಳು ಶಿಕ್ಷಕರಿಗೆ ಡಾಕ್ಟರ್ ಎಸ್.ಧರ್ಮಾಮ್ಬಾಳ್ ಏನು ಮಾಡಿದರು?
7. ಮೂವಲೂರು ರಾಮಾಮೃತಮ್ ತಮ್ಮ ಸಮಾಜಕ್ಕೆ ಮಾಡಿದ ಸೇವೆಗಳನ್ನು ಬರೆಯಿರಿ.

ಈ. ಪ್ರತಿಯೊಂದು ಶೀರ್ಷಿಕೆಯಡಿಯಲ್ಲಿ ಕೊಟ್ಟಿರುವ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ.

1. ಜಸ್ಟೀಸ್ ಪಕ್ಷ

   ಅ) ಜಸ್ಟೀಸ್ ಪಕ್ಷವನ್ನು ಯಾರು ಸ್ಥಾಪಿಸಿದರು?

   ಆ) ಜಸ್ಟೀಸ್ ಪಕ್ಷವು ಯಾವಾಗ ಆಳ್ವಿಕೆಗೆ ಬಂದಿತು?

   ಇ) ಅದು ಯಾವಾಗ ಸೋಲಿಸಲ್ಪಟ್ಟಿತು?

   ಈ) ಜಸ್ಟೀಸ್ ಪಕ್ಷದ ಸಾಧನೆಗಳಲ್ಲಿ ಯಾವುದಾದರೂ ಎರಡನ್ನು ತಿಳಿಸಿರಿ.

2. ಸ್ವಾಭಿಮಾನ ಚಳುವಳಿ

   ಅ) ಸ್ವಾಭಿಮಾನ ಚಳುವಳಿಯನ್ನು ಯಾರು ಪ್ರಾರಂಭಿಸಿದರು?

   ಆ) ಅದು ಯಾವಾಗ ಪ್ರಾರಂಭಿಸಲ್ಪಟ್ಟಿತು?

   ಇ) ಅವರು ಏಕೆ ಅದನ್ನು ಪ್ರಾರಂಭಿಸಿದರು?

   ಈ) ಸ್ವಯಂ ಗೌರವದ ಚಳುವಳಿಯ ಸತತ ಹೋರಾಟದ ಫಲವಾಗಿ ಸರ್ಕಾರವು ರಚಿಸಿದ ಕಾನೂನುಗಳನ್ನು ತಿಳಿಸಿರಿ.

ಉ. ಒಂದು ಪುಟದ ಪ್ರಶ್ನೆಗಳು

1. ನೀತಿ ಪಕ್ಷದ ಸ್ಥಾಪನೆ ಮತ್ತು ಸಾಧನೆಗಳ ಬಗ್ಗೆ ಬರೆಯಿರಿ.
2. ತಮಿಳ್ ಸಮುದಾಯಕ್ಕೆ ಡಾಕ್ಟರ್ ಮುತ್ತುಲಕ್ಷ್ಮಿರೆಡ್ಡಿಯವರು ಸಲ್ಲಿಸಿದ ಸೇವೆ ಮಹತ್ತರವಾದುದು–ನಿರೂಪಿಸಿ.
3. "ಮೂವಲೂರು ರಾಮಾಮೃತಮ್" ಸ್ವಾತಂತ್ರ್ಯ ಹೋರಾಟಗಾರ್ತಿಯಲ್ಲದೆ ಸಮಾಜ ಸುಧಾರಕಿಯೂ ಆಗಿದ್ದರು–ವಿವರಿಸಿ.

ಭೂಗೋಳಶಾಸ್ತ್ರ

1. ಭಾರತದ ಸನ್ನಿವೇಶ ಮತ್ತು ನೈಸರ್ಗಿಕ ರಚನೆ


ಸನ್ನಿವೇಶ

ಭಾರತ ದೇಶವು ಏಷ್ಯಾಖಂಡದ ದಕ್ಷಿಣಭಾಗದಲ್ಲಿದೆ. ಇದು ಶ್ರೀಮಂತಿಕೆಯು ನಾಗರೀಕತೆಯಿಂದ ಕೂಡಿದ ಒಂದು ಬೃಹತ್ ರಾಷ್ಟ್ರವಾಗಿದೆ. ಇದು ಪಾರಂಪರ್ಯವುಳ್ಳ ಧರ್ಮಸಹಿಷ್ಣುತೆ, ವಾಸಕ್ಕನುಗುಣವಾದ ಪರಿಸರ, ಅನಾದಿಕಾಲದಿಂದಲೂ ಬಂದಿರುವ ಸಂಪ್ರದಾಯಗಳನ್ನು ಕಾಪಾಡಿಕೊಂಡು ಬರುವುದು, ಈ ಎಲ್ಲಾ ಅಂಶಗಳಿಂದಲೂ ವಿಶ್ವದ ಇತರ ರಾಷ್ಟ್ರಗಳನ್ನು ತನ್ನತ್ತ ಆಕರ್ಷಿಸಿ ವಿಸ್ಮಯಗೊಳಿಸುತ್ತಿದೆ. ಭಾರತದ ಸಂಸ್ಕೃತಿಯ ಪ್ರಭಾವವು ಭಾರತದ ಎಲ್ಲೆಯನ್ನು ದಾಟಿ ಬಹು ಹಿಂದಿನ ಕಾಲದಿಂದಲೇ ಪೂರ್ವ ಏಷ್ಯಾ, ಆಗ್ನೇಯ ಏಷ್ಯಾ ದೇಶಗಳನ್ನು ತಲುಪಿದೆ.

ಪ್ರಪಂಚದ ಅಭಿವೃದ್ಧಿಹೊಂದಿದ ದೇಶಗಳು ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳ ನಡುವೆ ಭಾರತವು ಒಂದು ಸಂಪರ್ಕ ಸೇತುವೆಯಂತೆ ಪೌರ್ವಾತ್ಯ ರಾಷ್ಟ್ರಗಳು ಮತ್ತು ಪಾಶ್ಚಿಮಾತ್ಯ ರಾಷ್ಟ್ರಗಳನ್ನು ಒಂದುಗೂಡಿಸುವುದು.

ಭಾರತ ತನ್ನ ಸಂಸ್ಕೃತಿಯಿಂದ ಎಷ್ಟು ಬಲಹೊಂದಿದೆಯೋ ಅಷ್ಟೇ ಬಲವನ್ನು ತನ್ನ ಭೌಗೋಳಿಕ ರಚನೆಯಿಂದಲೂ ಹೊಂದಿದೆ. ಇತಿಹಾಸ ಕಾಲದಲ್ಲಿ ಇಂಡಿಯಾ 'ಭಾರತ' ಎಂದೂ, 'ಹಿಂದೂಸ್ಥಾನ' ಎಂದೂ ಕರೆಯಲ್ಪಟ್ಟಿತು. ಪ್ರಾಚೀನ ಕಾಲದಲ್ಲಿ ಬಲಿಷ್ಠ ಚಕ್ರವರ್ತಿಯಾಗಿದ್ದ 'ಭರತ' ಎಂಬುವವರನ್ನು ಆಧಾರವಾಗಿಸಿಕೊಂಡು ಇಂಡಿಯಾವನ್ನು "ಭಾರತ" ಎಂದೂ, ಸಿಂಧೂ ನದಿಯ ಹೆಸರಿನಿಂದ 'ಹಿಂದೂಸ್ಥಾನ' ಎಂದೂ ಕರೆಯಲಾಯಿತು. ಇದರ ನಂತರ ಬಂದ ಯೂರೋಪಿಯನ್ನರು 'ಸಿಂಧು' ಎಂಬ ಪದದ ಆಧಾರದಿಂದಲೇ 'ಇಂಡಿಯಾ' ಎಂದು ಹೆಸರಿಸಿದರು. ಈಗ 'ಇಂಡಿಯಾ' ಎಂಬ ಹೆಸರಿನಿಂದ ಇತರ ರಾಷ್ಟ್ರಗಳಿಂದ ಕರೆಯಲಾಗುತ್ತಿದೆ.

ಪ್ರಪಂಚದಲ್ಲಿ ಭಾರತದ ಸನ್ನಿವೇಶ



ಭಾರತ– ಒಂದು ಉಪಖಂಡ

ಒಂದು ಖಂಡ ಎಂಬುದು ಹಲವು ಬಗೆಯ ಗುಣಲಕ್ಷಣಗಳನ್ನು ಹೊಂದಿದೆ. ಅವುಗಳೆಂದರೆ,

1. ನೈಸರ್ಗಿಕ ರಚನೆಯ ವಿಭಾಗಗಳು
2. ವಾಯುಗುಣಗಳು
3. ಸ್ವಾಭಾವಿಕ ಸಸ್ಯವರ್ಗಗಳು
4. ಸಾಂಸ್ಕೃತಿಕ ವಿಭಾಗಗಳು
5. ಹಲವು ಜನಾಂಗ ಮತ್ತು ಭಾಷೆಗಳು
6. ಬಹು ವಿಸ್ತಾರವಾದ ಭೂಭಾಗಗಳು

ಇವುಗಳೆಲ್ಲವನ್ನೂ ಒಳಗೊಂಡಿರುತ್ತದೆ.

ಒಂದು ಖಂಡಕ್ಕಿರುವ ಗುಣಲಕ್ಷಣಗಳೆಲ್ಲವೂ ಭಾರತದಲ್ಲಿ ಕಂಡುಬರುವುದರಿಂದ ಭಾರತವನ್ನು 'ಒಂದು ಉಪಖಂಡ' ಎಂದು ಕರೆಯುತ್ತೇವೆ.

ಸ್ಮರಿಸಿಕೊಳ್ಳೋಣ!


ಅಕ್ಷಾಂಶ ಮತ್ತು ರೇಖಾಂಶಗಳು ಒಂದು ಸ್ಥಳದ ಸನ್ನಿವೇಶವನ್ನು ತಿಳಿಯಲು ಸಹಾಯಕವಾಗುತ್ತವೆ.

ಸನ್ನಿವೇಶ ಮತ್ತು ವಿಸ್ತೀರ್ಣ

ಭಾರತ $8^{0}4'$ ಉತ್ತರ ಅಕ್ಷಾಂಶದಿಂದ $37^{0}6'$ ಉತ್ತರ ಅಕ್ಷಾಂಶದವರೆಗೂ ಮತ್ತು $68^{0}7'$ ಪೂರ್ವ ರೇಖಾಂಶದಿಂದ $97^{0}25'$ ಪೂರ್ವ ರೇಖಾಂಶದವರೆಗೂ ವ್ಯಾಪಿಸಿದೆ. $23\ 1/2^{0}$ ಉತ್ತರ ಅಕ್ಷರೇಖೆಯಾದ ಕರ್ಕಾಟಕ ಸಂಕ್ರಾಂತಿ ವೃತ್ತವು ಭಾರತದ ನಡುವೆ ಹಾದುಹೋಗಿ ಭಾರತವನ್ನು ಉಷ್ಣವಲಯ ಮತ್ತು ಸಮಶೀತೋಷ್ಣವಲಯ ಎಂದು ಎರಡು ಭಾಗಗಳಾಗಿ ವಿಂಗಡಿಸುತ್ತದೆ.

ಭಾರತ 32,87,263 ಕಿಲೋಮೀಟರ್‌ಗಳ ವಿಸ್ತೀರ್ಣವನ್ನು ಹೊಂದಿದೆ. 2011ರ ಜನಗಣತಿಯಂತೆ 1.2 ಬಿಲಿಯನ್ ಜನಸಂಖ್ಯೆಯನ್ನು ಹೊಂದಿತ್ತು.

ಭಾರತ ಮತ್ತು ಅದರ ಎಲ್ಲೆಗಳು



ಭಾರತ ಉತ್ತರದಲ್ಲಿ ಕಾಶ್ಮೀರದಿಂದ ದಕ್ಷಿಣದ ಕನ್ಯಾಕುಮಾರಿಯವರೆಗೆ ಸುಮಾರು 3,214 ಕಿಲೋಮೀಟರ್ ಉದ್ದ ಮತ್ತು ಪಶ್ಚಿಮದಲ್ಲಿ ಗುಜರಾತಿನಿಂದ ಈಶಾನ್ಯದ ಅರುಣಾಚಲಪ್ರದೇಶದವರೆಗೆ ಸುಮಾರು 2,933 ಕಿಲೋಮೀಟರ್ ಅಗಲವನ್ನು ಹೊಂದಿದೆ. ಭಾರತದ ಕರಾವಳಿ ಬಯಲು ಪ್ರದೇಶದ ಉದ್ದ 6100 ಕಿಲೋಮೀಟರ್. ಅಂಡಮಾನ್ ನಿಕೋಬಾರ್, ಲಕ್ಷದ್ವೀಪಗಳ ಕರಾವಳಿಯನ್ನೂ ಒಟ್ಟುಗೂಡಿ 7516 ಕಿ.ಮೀ. ಉದ್ದವನ್ನು ಹೊಂದಿದೆ.

ಯೂರೋಪ್ ರಾಷ್ಟ್ರಗಳೊಡನೆ ಸುಯೇಜ್ ಕಾಲುವೆ ಮಾರ್ಗವಾಗಿಯೂ, ಚೀನಾ, ಜಪಾನ್ ಮತ್ತು ಆಸ್ಟ್ರೇಲಿಯಾ ದೇಶಗಳೊಡನೆ ಮಲಾಕ್ಕಾ ಜಲಸಂಧಿ ಮಾರ್ಗವಾಗಿಯೂ, ವಾಣಿಜ್ಯ ಮತ್ತು ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಭಾರತದ ಸನ್ನಿವೇಶವು ಅನುಕೂಲಕರವಾಗಿದೆ.

ಭಾರತದ ಗಾತ್ರವನ್ನು ಸ್ಮರಿಸಿಕೋ!

ಭಾರತ ಏಷ್ಯಾದಲ್ಲಿಯೇ ಎರಡನೇ ಅತಿದೊಡ್ಡ ರಾಷ್ಟ್ರ. ಇದು ಪಾಕಿಸ್ತಾನದ ಗಾತ್ರಕ್ಕಿಂತ 4 ಪಟ್ಟು ದೊಡ್ಡದು. ಜಪಾನಿಗಿಂತ 8 ಪಟ್ಟು ದೊಡ್ಡದು. ಇಂಗ್ಲೆಂಡಿಗಿಂತ 12 ಪಟ್ಟು ದೊಡ್ಡದು. ಆದರೆ ಅಮೆರಿಕ ಸಂಯುಕ್ತ ಸಂಸ್ಥಾನಕ್ಕಿಂತ 3 ಪಟ್ಟು ಚಿಕ್ಕದು.

ಭಾರತೀಯ ಪ್ರಮಾಣಿತ ವೇಳೆ (Indian Standard Time)

ರೇಖಾಂಶಗಳು ಒಂದು ಸ್ಥಳದ ಸಮಯವನ್ನು ಲೆಕ್ಕಹಾಕಲು ಉಪಯೋಗವಾಗಿವೆ. ಭಾರತದ ಮಧ್ಯಭಾಗದಲ್ಲಿ ಅಲಹಾಬಾದ್ ಮೂಲಕ ಹಾದು ಹೋಗುವ 82°30' ಪೂರ್ವ ರೇಖಾಂಶವು ಭಾರತದ ಪ್ರಮಾಣಿತ ವೇಳೆಯನ್ನು ಲೆಕ್ಕಹಾಕಲು ಸಹಾಯಕವಾಗುವ ರೇಖಾಂಶವಾಗಿ ತೆಗೆದುಕೊಳ್ಳಲಾಗಿದೆ. ಭಾರತದ ಪ್ರಮಾಣಿತ ವೇಳೆಯು 0° ಗ್ರೀನ್‌ವಿಚ್ ರೇಖಾಂಶಕ್ಕಿಂತ 5 ಗಂಟೆ 30 ನಿಮಿಷಗಳಷ್ಟು ಮುಂದಿರುತ್ತದೆ.

1947ರ ಭಾರತದ ಸ್ವಾತಂತ್ರ್ಯ ನಂತರ ಭಾರತ ಸರ್ಕಾರವು ದೇಶದಲ್ಲಿ ಸಂಪೂರ್ಣವಾಗಿ ಕಛೇರಿಯ ವೇಳೆಯನ್ನಾಗಿ ಭಾರತದ ಪ್ರಮಾಣಿತ ವೇಳೆಯನ್ನೇ ನಿಗಧಿಗೊಳಿಸಲಾಗಿದೆ.

ಭಾರತದ ಪ್ರಮಾಣಿತ ವೇಳೆಯನ್ನು ಅನುಸರಿಸಲು ಕಾರಣಗಳೇನು ಎಂಬುದು ನಿಮಗೆ ತಿಳಿದಿದೆಯೇ?

ಭಾರತದ ಪೂರ್ವ–ಪಶ್ಚಿಮದ ವಿಸ್ತೀರ್ಣ ಸುಮಾರು 29° ರೇಖಾಂಶಗಳನ್ನೊಂದಿದೆ. ಈ ಅತಿ ದೊಡ್ಡ ರೇಖಾಂಶದ ವಿಸ್ತಾರದಿಂದಾಗಿ ಸೂರ್ಯನು ಭಾರತದ ಪಶ್ಚಿಮ ಭಾಗಕ್ಕಿಂತಲೂ ಪೂರ್ವಭಾಗದಲ್ಲಿ 1 ಗಂಟೆ 56 ನಿಮಿಷಗಳ ಕಾಲ ಮೊದಲೇಉದಯಿಸುತ್ತದೆ. ಅಥವಾ ಅಸ್ತಂಗತವಾಗುತ್ತದೆ. ಇದರಿಂದ ನಮ್ಮ ದೇಶದಲ್ಲಿ ಒಂದೊಂದು ಸ್ಥಳದಲ್ಲೂ ಒಂದೊಂದು ಸಮಯವಿದ್ದರೆ ಗೊಂದಲ ಉಂಟಾಗುತ್ತದೆ. ಇದನ್ನು ತಪ್ಪಿಸುವ ಸಲುವಾಗಿ ರಾಷ್ಟ್ರದ ನಡುವೆ ಹಾದು ಹೋಗುವ 82°30' ಪೂರ್ವ ರೇಖಾಂಶವನ್ನು ಆಯ್ಕೆ ಮಾಡಿ ಆ ಭಾಗದಲ್ಲಿ ಕಂಡುಬರುವ ಸಮಯವನ್ನೇ ನಮ್ಮ ದೇಶದಾದ್ಯಂತ ಪ್ರಮಾಣಿತ ವೇಳೆಯ(IST)ನ್ನಾಗಿ ಬಳಸಲ್ಪಡುವುದು.

ಭಾರತ ಮತ್ತು ಅದರ ನೆರೆಹೊರೆಯ ರಾಷ್ಟ್ರಗಳು

ಭಾರತದ ಪೂರ್ವದಲ್ಲಿರುವ ಅರಕ್ಕೋಮ ಪರ್ವತ ಶ್ರೇಣಿ ಭಾರತವನ್ನು ಮಯನ್ಮಾರ್‌ನಿಂದ ಬೇರ್ಪಡಿಸುತ್ತವೆ. ಭಾರತದ ದಕ್ಷಿಣಕ್ಕಿರುವ ಶ್ರೀಲಂಕಾವನ್ನು ಪಾಕ್ ಜಲಸಂಧಿಯು ಭಾರತದಿಂದ ಬೇರ್ಪಡಿಸಲ್ಪಟ್ಟಿದೆ. ಹಿಮಾಲಯ ಪರ್ವತ ಶ್ರೇಣಿಗಳು ಭಾರತದ ಉತ್ತರದ ಸ್ವಾಭಾವಿಕ ಎಲ್ಲೆಯಾಗಿದೆ.

ಭಾರತದ ನೆರೆಹೊರೆಯ ರಾಷ್ಟ್ರಗಳು ಯಾವುವೆಂದರೆ. 1.ಪಶ್ಚಿಮದಲ್ಲಿ ಪಾಕಿಸ್ತಾನ.2.ವಾಯುವ್ಯದಲ್ಲಿಅಫ್ಘಾನಿಸ್ತಾನ, 3.ಈಶಾನ್ಯದಲ್ಲಿ ನೇಪಾಳ, ಭೂತಾನ್ ಮತ್ತು ಚೀನಾ. 4. ಪೂರ್ವದಲ್ಲಿ ಬಾಂಗ್ಲಾದೇಶ ಮತ್ತು ಮಯನ್ಮಾರ್.

ಭಾರತವು ನೈರುತ್ಯ ದಿಕ್ಕಿನಲ್ಲಿ ಅರಬ್ಬೀಸಮುದ್ರದಿಂದಲೂ, ಪೂರ್ವ ಮತ್ತು ಅದರ ಆಗ್ನೇಯ ದಿಕ್ಕಿನಲ್ಲಿ ಬಂಗಾಳ ಕೊಲ್ಲಿಯಿಂದಲೂ, ದಕ್ಷಿಣದಲ್ಲಿ ಹಿಂದೂ ಮಹಾಸಾಗರದಿಂದಲೂ ಸುತ್ತುವರಿದಿದೆ. ಭಾರತದ ಪರ್ಯಾಯ ದ್ವೀಪದ ದಕ್ಷಿಣದ ತುತ್ತತುದಿಯಲ್ಲಿ ಕನ್ಯಾಕುಮಾರಿಯಿದೆ.

ಬಂಗಾಳ ಕೊಲ್ಲಿಯಲ್ಲಿರುವ ಅಂಡಮಾನ್ ನಿಕೋಬಾರ್ ದ್ವೀಪಗಳು, ಅರಬ್ಬೀ ಸಮುದ್ರದಲ್ಲಿರುವ ಲಕ್ಷದ್ವೀಪಗಳು ಭಾರತದ ಕೇಂದ್ರಾಡಳಿತ ಪ್ರದೇಶಗಳಾಗಿವೆ.

ವೈವಿಧ್ಯತೆಯಲ್ಲಿ ಏಕತೆ

1. ಭಾರತವು ಅತಿದೊಡ್ಡ ಪರ್ವತ ಶಿಖರಗಳಿಂದ ಪ್ರಾರಂಭಿಸಿ, ಅತಿ ಸಣ್ಣ ಬಯಲು ಪ್ರದೇಶಗಳವರೆಗೆ ಸ್ವಾವಲಂಬನೆಯ ಭೂರಚನೆಗಳನ್ನು ಹೊಂದಿದೆ.

ಪ್ರಪಂಚದ ಅತ್ಯಂತ ಎತ್ತರವಾದ ಶಿಖರ ಯಾವುದು?

ಪ್ರಪಂಚದ ಅತ್ತಂತ ಎತ್ತರವಾದ ಶಿಖರ ಎವರೆಸ್ಟ್, ಹಿಮಾಲಯ ಪರ್ವತದಲ್ಲಿದೆ. ಇದು ನೇಪಾಳ ಮತ್ತು ಚೀನಾದ ಗಡಿಯಲ್ಲಿದೆ. ಇದರ ಎತ್ತರ ಸಮುದ್ರ ಮಟ್ಟದಿಂದ 8848 ಮೀಟರ್‌ಗಳಾಗಿದೆ.

2. ಕಟಕ ರೇಖೆಯಿಂದ ಉತ್ತರಕ್ಕೆ ಸಮಶೀತೋಷ್ಣ ವಾಯುಗುಣ, ಮತ್ತು ದಕ್ಷಿಣಕ್ಕೆ ಉಷ್ಣವಲಯ ವಾಯುಗುಣ ಹೊಂದಿದೆ. ಭಾರತದ ಅತ್ಯಧಿಕ ಮಳೆ ಪಡೆಯುವ ಪ್ರದೇಶವಾದ ಮೇಘಾಲಯದಲ್ಲಿರುವ ಚಿರಾಪುಂಜಿಯೂ ಮತ್ತು ಅತ್ಯಂತ ಕಡಿಮೆ ಮಳೆ ಪಡೆಯುವ ಥಾರ್ ಮರುಭೂಮಿಯೂ ಇಲ್ಲಿ ಕಂಡುಬರುತ್ತವೆ.

3. ಪಶ್ಚಿಮ ಘಟ್ಟಗಳಲ್ಲಿ ಅತಿ ಹೆಚ್ಚು ತೇವಾಂಶವುಳ್ಳ ದಟ್ಟವಾದ ಉಷ್ಣವಲಯದ ಕಾಡುಗಳು, ಪಶ್ಚಿವ ಬಂಗಾಳದಲ್ಲಿ ಮ್ಯಾಂಗ್ರೋವ್ ಮರಗಳನ್ನೊಳಗೊಂಡ ಸುಂದರವನಗಳು ಮತ್ತು ಥಾರ್ ಮರುಭೂಮಿಯಲ್ಲಿ ಮುಳ್ಳು ಪೊದರುಗಳು ಅಲ್ಲಲ್ಲಿ ಕಂಡುಬರುತ್ತವೆ.

4. ವಿವಿಧ ಸ್ವಾಭಾವಿಕ ಪರಿಸರ ಮತ್ತು ವಾಯುಗುಣಗಳು ಭಾರತವನ್ನು ಹಲವಾರು ಬಗೆಯ ಸಸ್ಯವರ್ಗ ಮತ್ತು ಪ್ರಾಣಿವರ್ಗಗಳಿಗೂ ವಾಸಿಸಲು ಅನುಗುಣವಾದ ವಾಸಸ್ಥಳ (Bio-Diversity) ವನ್ನಾಗಿ ಮಾಡಿವೆ.

5. ಭಾರತ ಯಾವ ದೇವರನ್ನಾದರೂ ಆರಾಧಿಸುವ ಪೂರ್ಣ ಸ್ವಾತಂತ್ರ್ಯ ನೀಡಿರುವ ಒಂದು ಜಾತ್ಯಾತೀತ ರಾಷ್ಟ್ರವಾಗಿದೆ.

6. ಹಲವಾರು ಸಾಂಸ್ಕೃತಿಕ ವೈವಿಧ್ಯತೆಗಳೊಡನೆ ಭಾರತೀಯರು ಹಿಂದೂ, ಕ್ರೈಸ್ತ, ಇಸ್ಲಾಂ, ಸಿಖ್, ಬೌದ್ಧ, ಜೈನ ಮತ್ತು ಜೊರಾಸ್ಟ್ರಿಯನ್ ಮುಂತಾದ ಧರ್ಮಗಳನ್ನು ಅನುಸರಿಸುತ್ತಿದ್ದಾರೆ. ಹೀಗೆ ಭಾರತದಲ್ಲಿ ಹಲವು ವೈವಿಧ್ಯಗಳಿಂದ ಕೂಡಿದ ಸ್ವಾಭಾವಿಕ ಪರಿಸರ, ಧರ್ಮಗಳು, ಜನಾಂಗಗಳಿದ್ದರೂ 'ಭಾರತೀಯ ಸಂಸ್ಕೃತಿಯು' ಎಲ್ಲಾ ಜನರನ್ನೂ ಒಂದುಗೂಡಿಸುತ್ತದೆ. ಆದ್ದರಿಂದಲೇ ಭಾರತವು "ವೈವಿಧ್ಯತೆಯಲ್ಲಿ ಏಕತೆಯುಳ್ಳ ದೇಶ" ಎಂದು ಕರೆಯಲ್ಪಡುತ್ತದೆ.

ಸಮಸ್ಯೆಗಳು ಯಾವಾಗ ಕಂಡುಬಂದರೂ ಆಗ ಜನರು ತಮ್ಮಲ್ಲಿರುವ ವೈವಿಧ್ಯತೆಗಳನ್ನು ಬದಿಗೊತ್ತಿ ಒಂದಾಗಿ ನಿಂತು ಸಮಸ್ಯೆಗಳನ್ನು ಎದುರಿಸುವರು. ಇದಕ್ಕೆ ಉತ್ತಮ ಉದಾಹರಣೆಗಳಾಗಿ ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ, ಪ್ರಕೃತಿ ವಿಕೋಪಗಳಾದ ಸುನಾಮಿ ಮತ್ತು ಪ್ರವಾಹ ಉಂಟಾದಾಗಲೂ ಜನರು ಒಂದುಗೂಡಿದುದನ್ನು ಸ್ಮರಿಸಬಹುದು.

ನಮ್ಮ ಸಾಂಸ್ಕೃತಿಕ ವೌಲ್ಯಗಳನ್ನು ಕಾಪಾಡಿಕೊಂಡು ಬರುವುದೂ ಅವುಗಳನ್ನು ನಮ್ಮ ಭಾರತೀಯರು ಇನ್ನೊಂದು ತಲೆಮಾರಿನವರಿಗೆ ಎತ್ತಿ ಹಿಡಿದು ಅವುಗಳನ್ನು ಅನುಸರಿಸುವಂತೆ ಹೇಳುವುದೂ ಸಹ ಎಲ್ಲರ ಕರ್ತವ್ಯವಾಗಿದೆ. ಅದರ ಜೊತೆಗೆ ಹೆಮ್ಮೆಯಿಂದ ನಾವೆಲ್ಲರೂ ಭಾರತೀಯರು ಎಂಬುದನ್ನು ನಿರೂಪಿಸುವುದೂ ಸಹ ನಮ್ಮ ಕರ್ತವ್ಯವಾಗಿದೆ.

ಭಾರತ–ರಾಜಕೀಯ ವಿಭಾಗಗಳು

ಭಾರತವು ಭಾಷೆಯ ಆಧಾರದ ಮೇಲೆ **29** ರಾಜ್ಯಗಳು ಮತ್ತು 7 ಕೇಂದ್ರಾಡಳಿತ ಪ್ರದೇಶಗಳಾಗಿ ವಿಂಗಡಿಸಲ್ಪಟ್ಟಿದೆ.

ಭಾರತದ ನೈಸರ್ಗಿಕ ರಚನೆ

ಒಂದು ದೇಶದ ನೈಸರ್ಗಿಕ ಭೂರಚನೆಗಳ ಬಗ್ಗೆ ವಿವರಿಸುವುದೇ ನೈಸರ್ಗಿಕ ರಚನೆಯಾಗಿದೆ. ಭಾರತವು ಒಂದು ದೊಡ್ಡ ವೈವಿಧ್ಯಮಯವಾದ ಭೂರಚನೆಗಳನ್ನು ಹೊಂದಿದ ದೇಶವಾಗಿದೆ. ಭೂಮಿಯಲ್ಲಿರುವ ಅತ್ಯಂತ ಸ್ಥಿರವಾದ ಮತ್ತು ಪ್ರಾಚೀನ ಶಿಲೆಗಳ ರಚನೆಗಳಲ್ಲೊಂದಾಗಿ ಕಂಡುಬರುತ್ತದೆ.

ಭಾರತ– ರಾಜಕೀಯ ವಿಭಾಗಗಳು



ರಾಜ್ಯಗಳ ಬಗ್ಗೆ ಮಾಹಿತಿಗಳು

ಕ್ರ. ಸಂ	ರಾಜ್ಯಗಳು	ರಾಜಧಾನಿ	ವಿಸ್ತೀರ್ಣ ಚ.ಕಿ.ಮೀ	ಜನಸಂಖ್ಯೆ	2011ರ ಜನಸಂಖ್ಯೆ ಜನಸಾಂದ್ರತೆ /ಚ.ಕಿ.ಮೀ
1	ಆಂಧ್ರಪ್ರದೇಶ ತೆಲಂಗಾಣ (29)	ಹೈದರಾಬಾದ್	275045	84665533	308
2	ಅರುಣಾಚಲಪ್ರದೇಶ	ಇಟಾನಗರ್	83743	1382611	17
3	ಅಸ್ಸಾಂ	ದಿಸ್‌ಪುರ್	78438	31169272	397
4	ಬಿಹಾರ	ಪಾಟ್ನಾ	94163	103804637	1102
5	ಚತ್ತೀಸ್‌ಘಢ್	ರಾಯ್‌ಪುರ್	135191	25540196	189
6	ಗೋವಾ	ಪಣಜಿ	3702	1457723	394
7	ಗುಜರಾತ್	ಗಾಂಧಿನಗರ	196024	60383628	308
8	ಹರಿಯಾಣ	ಚಂಡಿಘರ್	44212	25353081	573
9	ಹಿಮಾಚಲಪ್ರದೇಶ	ಸಿಮ್ಲಾ	55673	6856509	123
10	ಜಮ್ಮು–ಕಾಶ್ಮೀರ	ಶ್ರೀನಗರ, ಜಮ್ಮು	222236	12548926	56
11	ಜಾರ್ಖಂಡ್	ರಾಂಚಿ	79714	32966238	414
12	ಕರ್ನಾಟಕ	ಬೆಂಗಳೂರು	191791	61130704	319
13	ಕೇರಳ	ತಿರುವನಂತಪುರಂ	38863	33387677	859
14	ಮಧ್ಯಪ್ರದೇಶ	ಭೋಪಾಲ್	308245	72597565	236
15	ಮಹಾರಾಷ್ಟ್ರ	ಮುಂಬೈ	307713	112372972	365
16	ಮಣಿಪುರ	ಇಂಫಾಲ್	22327	2721756	122
17	ಮೇಘಾಲಯ	ಶಿಲ್ಲಾಂಗ್	22429	2964007	132
18	ಮಿಜೋರಾಂ	ಐಜ್ವಾಲ್	21081	1091014	52
19	ನಾಗಲ್ಯಾಂಡ್	ಕೊಹೀಮಾ	16579	1980602	119
20	ಒಡಿಸ್ಸಾ	ಭುವನೇಶ್ವರ	155707	41947358	269
21	ಪಂಜಾಬ್	ಚಂಡೀಘರ್	50362	27704236	550
22	ರಾಜಸ್ತಾನ್	ಜೈಪುರ	342239	68621012	201
23	ಸಿಕ್ಕಿಂ	ಗ್ಯಾಂಗ್‌ಟಕ್	7096	607688	86
24	ತಮಿಳುನಾಡು	ಚೆನ್ನೈ	130058	72138958	555
25	ತ್ರಿಪುರ	ಅಗರ್ತಲಾ	10486	3671032	350
26	ಉತ್ತರಾಖಂಡ್	ಡೆಹರಾಡೂನ್	53483	10116752	189
27	ಉತ್ತರಪ್ರದೇಶ	ಲಕ್ನೋ	240928	199581477	828
28	ಪಶ್ಚಿಮ ಬಂಗಾಳ	ಕೋಲ್ಕತ್ತಾ	88752	91347736	1029
	ಕೇಂದ್ರಾಡಳಿತ ಪ್ರದೇಶಗಳು				
1	ದೆಹಲಿ	ದೆಹಲಿ	1483	16753235	11297
2	ಅಂಡಮಾನ್–ನಿಕೋಬಾರ್ ದ್ವೀಪಗಳು	ಪೋರ್ಟ್ ಬ್ಲೇರ್	8249	379944	46
3	ಚಂಡೀಘರ್	ಚಂಡೀಘರ್	114	1054686	9252
4	ದಾದರ್–ನಾಗರ್‌ಹವೇಲಿ	ಸಿಲ್ವಾಸಾ	491	342853	698
5	ದಾಮನ್–ದಿಯೂ	ದಾಮನ್	112	242911	2169
6	ಲಕ್ಷದ್ವೀಪಗಳು	ಕವರತ್ತಿ	32	64429	2013
7	ಪಾಂಡಿಚೇರಿ	ಪಾಂಡಿಚೇರಿ	479	1244464	2598

ಭಾರತದ ನೈಸರ್ಗಿಕ ರಚನೆಯ ವಿಭಾಗಗಳು

ಭಾರತದ ಭೂಭಾಗವು ಹಲವು ವೈವಿಧ್ಯಮಯವಾದ ಭೌಗೋಳಿಕ ಭೂರಚನೆಗಳನ್ನು ಹೊಂದಿದೆ. ಭೂರಚನೆಗಳ ಆಧಾರದ ಮೇಲೆ ಭಾರತದ ನೈಸರ್ಗಿಕ ರಚನೆಯನ್ನು ಐದು ದೊಡ್ಡ ಭಾಗಗಳಾಗಿ ವಿಂಗಡಿಸಬಹುದು. ಅವುಗಳು ಯಾವುವೆಂದರೆ

1. ಉತ್ತರದ ಪರ್ವತ ಶ್ರೇಣಿಗಳು
2. ಉತ್ತರ ಮಹಾಮೈದಾನಗಳು
3. ಪರ್ಯಾಯ ದ್ವೀಪ ಪೀಠಭೂಮಿ
4. ಕರಾವಳಿ ಬಯಲು ಪ್ರದೇಶಗಳು
5. ದ್ವೀಪಗಳು

ತಿಳಿದುಕೊಳ್ಳೋಣ

ಭಾರತದ ಭೂವಿಸ್ತೀರ್ಣದಲ್ಲಿ ಶೇ. 29.3 ರಷ್ಟು ಪರ್ವತಗಳು ಮತ್ತು ಬೆಟ್ಟಗಳು ಶೇ. 27.7ರಷ್ಟು ಪೀಠಭೂಮಿಗಳು ಶೇ. 43ರಷ್ಟು ಮೈದಾನ ಪ್ರದೇಶಗಳು ಕಂಡುಬಂದಿದೆ.

1. ಹಿಮಾಲಯ ಪರ್ವತಗಳು (ಉತ್ತರದ ಪರ್ವತ ಶ್ರೇಣಿಗಳು)


ಉತ್ತರದ ಪರ್ವತಗಳು ಎಂಬುವು ಹಿಮಾಲಯ ಪರ್ವತಗಳನ್ನು ಸೂಚಿಸುವುದಾಗಿವೆ. ಇದು ಪ್ರಪಂಚದಲ್ಲಿಯೇ ಅತಿ ಎತ್ತರದ ಪರ್ವತಗಳು ಈ ಪರ್ವತಗಳ ಎತ್ತರದ ಇಳಿಜಾರು ಭಾಗಗಳು ಸದಾಕಾಲ ನಿರಂತರವಾದ ಇಬ್ಬನಿಯಿಂದ ಆವರಿಸಲ್ಪಟ್ಟಿರುವುದರಿಂದ ಹಿಮಾಲಯ ಪರ್ವತಗಳನ್ನು **ಇಬ್ಬನಿಯ ಬೀಡು** ಎಂದು ಕರೆಯುವರು.

ಹಿಮಾಲಯ ಪರ್ವತಗಳು **ಕಮಾನು** ಆಕಾರದಲ್ಲಿ 2500 ಕಿ.ಮೀಟರ್‌ಗಳ ಉದ್ದದಷ್ಟು ಪಶ್ಚಿಮದಿಂದ ಪೂರ್ವಕ್ಕೆ ಹರಡಿವೆ. ಪಶ್ಚಿಮದ ಜಮ್ಮು-ಕಾಶ್ಮೀರದ ಸಿಂಧೂ ಕಣಿವೆಯಿಂದ ಪೂರ್ವಕ್ಕೆ ಅರುಣಾಚಲ ಪ್ರದೇಶದಲ್ಲಿರುವ ಬ್ರಹ್ಮಪುತ್ರ ಕಣಿವೆಯವರೆಗೆ ಹರಡಿವೆ. ಇಲ್ಲಿರುವ ಹಲವು ಪರ್ವತಗಳು ಸಮುದ್ರ ಮಟ್ಟದಿಂದ 8000 ಮೀಟರ್‌ಗಳಿಗಿಂತಲೂ ಹೆಚ್ಚು ಎತ್ತರದಿಂದ ಕೂಡಿವೆ. ಹಿಮಾಲಯ ಪರ್ವತಗಳು ಜಮ್ಮು-ಕಾಶ್ಮೀರ, ಹಿಮಾಚಲ ಪ್ರದೇಶ, ಉತ್ತರಪ್ರದೇಶ, ಉತ್ತರಾಂಚಲ, ಪಶ್ಚಿಮ ಬಂಗಾಳ, ಸಿಕ್ಕಿಂ ಮತ್ತು ಅರುಣಾಚಲಪ್ರದೇಶ ರಾಜ್ಯಗಳಲ್ಲಿ ಹರಡಿವೆ.

ಹಿಮಾಲಯ ಪರ್ವತಗಳು ಉಂಟಾದ ಬಗೆ

ಹಿಮಾಲಯ ಪರ್ವತಗಳು, ಮುಂದುವರಿದ ಪರ್ವತಗಳಲ್ಲ. ಆದರೆ ಕೆಲವು ಪರ್ವತಗಳು ಹೆಚ್ಚು ಕಡಿಮೆ ಸಮಾನಾಂತರವಾಗಿಯೂ ಕಣಿವೆಗಳಿಂದಲೂ, ಪೀಠಭೂಮಿಗಳಿಂದಲೂ ಬೇರ್ಪಡಿಸಲ್ಪಟ್ಟಿವೆ. ಇವು ಹೇಗೆ ಉಂಟಾದವು ಎಂಬುದನ್ನು ನೋಡೋಣ.

ಹಲವು ಮಿಲಿಯನ್ ವರ್ಷಗಳ ಹಿಂದೆ ಭೂಮಿಯು ಒಂದೇ ಒಂದು ಭೂಭಾಗ ಮಾತ್ರ



ಇದ್ದಿತು. ಇದನ್ನು ಮಹಾಸಾಗರಗಳು ಸುತ್ತುವರಿದಿದ್ದವು. ಈ ರೀತಿಯಾಗಿದ್ದ ಒಂದು ಭೂಭಾಗಕ್ಕೆ **'ಪೇಂಜಿಯಾ'** ಎಂದೂ 'ಪೇಂಜಿಯಾ'ವನ್ನು ಸುತ್ತುವರಿದಿದ್ದ ದೊಡ್ಡ ಸಮುದ್ರ **'ಪೇನ್‌ತಲಾಸ್'** ಎಂದೂ ಕರೆಯಲಾಯಿತು. ಹೀಗೆ ಹರಡಿದ ಭೂಭಾಗ ಎರಡು ಭಾಗಗಳಾಗಿ ಬೇರ್ಪಟ್ಟವು. ಉತ್ತರ ಭಾಗವನ್ನು **'ಅಂಗಾರ'(ಲಾರಶಿಯಾ)** ಎಂದೂ, ದಕ್ಷಿಣ ಭಾಗವನ್ನು **'ಗೊಂಡಾವನ'** ಎಂದೂ ಹೆಸರಿಸಲಾಯಿತು. ಈ ಎರಡೂ ಭೂಭಾಗವನ್ನು ಬೇರ್ಪಡಿಸುವ ನೀರಿನ ಭಾಗಗಳನ್ನು **'ಟೆಥೀಸ್ ಸಮುದ್ರ'** ಎಂದು ಕರೆಯಲ್ಪಟ್ಟಿತು. ಈ ಸಮುದ್ರವು

ಪೂರ್ವ–ಪಶ್ಚಿಮವಾಗಿ ಹರಡಿದ್ದಿತು. 'ಅಂಗಾರ' ಮತ್ತು 'ಗೊಂಡಾವನ' ಈ ಎರಡೂ ಭೂಭಾಗಗಳಿಂದ ಉಗಮವಾಗುವ ನದಿಗಳಿಂದ ಸಾಗಿಸಲ್ಪಟ್ಟ ಕೆಸರು ಟೆಥೀಸ್ ಸಮುದ್ರದಲ್ಲಿ ಶೇಖರಿಸಲ್ಪಟ್ಟಿತು. ಬಹಳ ಕಾಲದ ನಂತರ ಒತ್ತಡದಿಂದಾಗಿ ಎತ್ತರವಾಗಿ ಹಿಮಾಲಯ ಪರ್ವತಗಳೆಂದು ಕರೆಯಲ್ಪಡುವ ಮಡಿಕೆ ಮಡಿಸಲ್ಪಟ್ಟು ಹಿಮಾಲಯ ಎಂಬ ಮಡಿಕೆ ಪರ್ವತಗಳು ಉಂಟಾದವು.

ಹಿಮಾಲಯ ಪರ್ವತಗಳನ್ನು ಪಶ್ಚಿಮದಿಂದ ಪೂರ್ವಕ್ಕೆ ಇನ್ನೂ ಮೂರು ವಿಭಾಗಗಳಾಗಿ ವಿಂಗಡಿಸಬಹುದು. ಅವುಗಳೆಂದರೆ

ಅ. ಪಶ್ಚಿಮ ಹಿಮಾಲಯ

ಆ. ಮಧ್ಯ ಹಿಮಾಲಯ

ಇ. ಪೂರ್ವ ಹಿಮಾಲಯ

ಅ. ಪಶ್ಚಿಮ ಹಿಮಾಲಯ

ವಾಯುವ್ಯ ಭಾರತದಲ್ಲಿರುವ ಪಾಮೀರ್ ಗ್ರಂಥಿಯಿಂದ ಪೂರ್ವಕ್ಕೆ ಕಾರಕೋರಂ ಪರ್ವತ ಶ್ರೇಣಿಯವರೆಗೆ ಹರಡಿವೆ. ನೈರುತ್ಯ ಕಾಶ್ಮೀರದಲ್ಲಿ ಕಂಡುಬರುವ ಈ ಪರ್ವತಗಳು ಅಫ್ಘಾನಿಸ್ತಾನ ಮತ್ತು ಚೀನಾಗಳ ನಡುವೆ ಭಾರತದ ಎಲ್ಲೆಗಳಾಗಿವೆ. ಪ್ರಪಂಚದ ಎರಡನೇ ಎತ್ತರವಾದ K2 ಎಂದು ಕರೆಯಲ್ಪಡುವ ಗಾಡ್ವಿನ್ ಆಸ್ಟಿನ್(8611 ಮೀಟರ್) ಶಿಖರವು ಈ ಪಶ್ಚಿಮ ಹಿಮಾಲಯ ಪರ್ವತಗಳಲ್ಲಿ ಕಂಡುಬರುತ್ತದೆ. ಈಗ ಕಾರಕೋರಂ ಕಣಿವೆ ಮಾರ್ಗವು ವಿಶೇಷ ಪ್ರಾಮುಖ್ಯತೆಯನ್ನು ಪಡೆದಿದೆ. ಬಾಲ್ತಾರೊ ಮತ್ತು ಸಿಯಾಚಿನ್ ಎಂಬ ಎರಡು ಪ್ರಮುಖ ಹಿಮನದಿಗಳು ಕಾರಕೋರಂ ಪರ್ವತಗಳ ದಕ್ಷಿಣ ಭಾಗದಲ್ಲಿ ಕಂಡುಬರುತ್ತವೆ. ಜಾಸ್ಕರ್ ಮತ್ತು ಲಡಾಖ್ ಪರ್ವತಗಳು ಕಾರಕೋರಂ ಪರ್ವತ ಶ್ರೇಣಿಗಳಿಗೆ ಸಮಾನಾಂತರವಾಗಿ ಹಬ್ಬಿವೆ. ಲಡಾಖ್ ಪರ್ವತ ಶ್ರೇಣಿಯು 'ಲಡಾಖ್ ಪೀಠಭೂಮಿ' ಎಂದೂ, ಅದು ಭಾರತದಲ್ಲಿರುವ ಅತ್ಯಂತ ಎತ್ತರವಾದ ಪೀಠಭೂಮಿಯಾಗಿದ್ದು ಇದು ಕಾಶ್ಮೀರದ ವಾಯುವ್ಯ ಭಾಗದಲ್ಲಿ ಕಂಡುಬರುತ್ತದೆ.

ಆ. ಮಧ್ಯ ಹಿಮಾಲಯ

ಪಾಮೀರ್ ಗ್ರಂಥಿಯಿಂದ ಆಗ್ನೇಯ ದಿಕ್ಕಿಗೆ ಹಬ್ಬಿರುವ ಹಿಮಾಲಯ ಪರ್ವತಗಳನ್ನು ಮಧ್ಯ ಹಿಮಾಲಯ ಎಂದು ಕರೆಯುವರು. ಮಧ್ಯ ಹಿಮಾಲಯ ಪರ್ವತಗಳ ಉತ್ತರದಿಂದ ದಕ್ಷಿಣಕ್ಕೆ ಮೂರು ಸಮಾನಾಂತರ ಪರ್ವತ ಶ್ರೇಣಿಗಳನ್ನು ಕಾಣಬಹುದು.

1. ಹಿಮಾದ್ರಿ
2. ಹಿಮಾಚಲ್
3. ಸಿವಾಲಿಕ್


1. ಹಿಮಾದ್ರಿ (ಅಥವಾ) ದೊಡ್ಡ ಹಿಮಾಲಯ

ಹಿಮಾಲಯ ಪರ್ವತದ ಉತ್ತರದ ಶ್ರೇಣಿಯನ್ನು 'ಹಿಮಾದ್ರಿ' ಎಂದು ಕರೆಯುವರು ಇದರ ಸರಾಸರಿ ಎತ್ತರ 6000 ಮೀಟರ್ ಆಗಿದೆ. ಈ ಪರ್ವತ ಶ್ರೇಣಿಗಳ ಉತ್ತರದಲ್ಲಿ ಸಿಂಧೂ ಕಣಿವೆಯಿಂದ ಈಶಾನ್ಯದಲ್ಲಿ ಬ್ರಹ್ಮಪುತ್ರ ನದಿ ಕಣಿವೆಯವರೆಗೆ ವ್ಯಾಪಾಕವಾಗಿ ಹಬ್ಬಿವೆ. ಪ್ರಪಂಚದ ಅತ್ಯಂತ ಎತ್ತರವಾದ ಶಿಖರಗಳಲ್ಲಿ ಹಲವು ಈ ಪರ್ವತ ಶ್ರೇಣಿಗಳಲ್ಲಿ ಕಂಡುಬರುತ್ತವೆ. ಪ್ರಪಂಚದಲ್ಲಿಯೇ ಅತ್ಯಂತ ಎತ್ತರವಾದ 8848 ಮೀಟರ್ ಎತ್ತರವಿರುವ ಎವರೆಸ್ಟ್ ಶಿಖರವು ಇಲ್ಲಿ ಕಂಡುಬರುತ್ತದೆ. ಕಾಂಚನಗಂಗ(8598 ಮೀ), ನಂಗ ಪರ್ವತ(8126 ಮೀ) ಧವಳಗಿರಿ(8167 ಮೀ) ನಂದಾದೇವಿ(7817 ಮೀ) ಶಿಖರಗಳು ಈ ಪರ್ವತಶ್ರೇಣಿಗಳಲ್ಲಿವೆ. ಇಲ್ಲಿ ಹಲವು ನದಿಗಳ ಉಗಮಕ್ಕೆ ಆಧಾರವಾಗಿ ಕಂಡುಬರುವ ಹಿಮನದಿಗಳಿವೆ. ಉದಾ: ಗಂಗಾ ನದಿಯ ಉಗಮಸ್ಥಳವಾದ ಗಂಗೋತ್ರಿ ಹಿಮನದಿ ಮತ್ತು ಯಮುನಾ ನದಿಯ ಉಗಮಸ್ಥಳವಾದ ಯಮುನೋತ್ರಿ ಹಿಮನದಿ.ಪರ್ವತಗಳ ಅಡ್ಡಲಾಗಿ ಕಾಣುವ ಸ್ವಾಭಾವಿಕ ಮಾರ್ಗಗಳನ್ನು ಕಣಿವೆಗಳು ಎನ್ನುತ್ತೇವೆ. ಅವುಗಳು ನೆರೆಹೊರೆಯ ರಾಷ್ಟ್ರಗಳಿಗೆ ಹೋಗಲು ಮಾರ್ಗಗಳಾಗಿವೆ.ಉದಾಹರಣೆಗೆ ಕಾಶ್ಮೀರದಲ್ಲಿರುವ ಸೊಜಿಲಾ ಕಣಿವೆ, ಹಿಮಾಚಲಪ್ರದೇಶದಲ್ಲಿರುವ ಶಿಪ್ಕಿಲಾ ಕಣಿವೆ, ಸಿಕ್ಕಿಂನಲ್ಲಿರುವ ನಾದುಲಾ ಮತ್ತು ಜಲಪ್ಲುಲಾ ದಂತಹವುಗಳು ಹಿಮಾದ್ರಿಯಲ್ಲಿರುವ ಮುಖ್ಯ ಕಣಿವೆಗಳಾಗಿವೆ.


2. ಹಿಮಾಚಲ್ (ಅಥವಾ) ಚಿಕ್ಕ ಹಿಮಾಲಯ

ಹಿಮಾಚಲ್ ಪರ್ವತಗಳು ಉತ್ತರದಲ್ಲಿ ಹಿಮಾದ್ರಿ ಪರ್ವತಗಳಿಗೂ ಮತ್ತು ದಕ್ಷಿಣದಲ್ಲಿ ಸಿವಾಲಿಕ್ ಪರ್ವತಗಳಿಗೂ ನಡುವೆ ಕಂಡುಬರುತ್ತವೆ. ಅಗಲ 80 ಕಿ.ಮೀಟರ್‌ಗಳಾಗಿವೆ. ಇದರ ಸರಾಸರಿ ಎತ್ತರ 3700 ಮೀಟರ್‌ನಿಂದ 4500 ಮೀಟರ್‌ಗಳವರೆಗೆ ವ್ಯತ್ಯಾಸದಿಂದ ಕೂಡಿದೆ. ಇದು ಬೆಟ್ಟಗುಡ್ಡಗಳು,ತುಂಡು

ಭಾರತ– ನೈಸರ್ಗಿಕ ವಿಭಾಗಗಳು



ಉತ್ತರದ ಪರ್ವತಗಳು



ಪರ್ವತ ಶಿಖರಗಳು

1. Mt.k2(8611 ಮೀಟರ್)
2. ನಂಗ ಪರ್ವತ(8126 ಮೀ)
3. ಕಾಮೆಡ್(7756 ಮೀ)
4. ನಂದಾದೇವಿ(7817 ಮೀ)
5. ಧವಳಗಿರಿ(8172 ಮೀ)
6. ಎವರೆಸ್ಟ್(8848 ಮೀ)
7. ಕಾಂಚನಗಂಗಾ(8586 ಮೀ)
8. ನಮ್ಸಪರ್ವತ (7756 ಮೀ)

ತುಂಡಾಗಿ ಕತ್ತರಿಸಲ್ಪಟ್ಟ ಎತ್ತರದ ಭಾಗಗಳು ಮತ್ತು ಅತ್ಯಂತ ವಿಕೃತ ಸ್ವರೂಪಗಳಿಂದ ಕೂಡಿದೆ. ಈ ಭಾಗಗಳಲ್ಲಿರುವ ಅತೀ ಉದ್ದವಾದ ಪರ್ವತಶ್ರೇಣಿಯಾಗಿ ಕಾಶ್ಮೀರದ **ಪೀರ್‌ಪಂಜಾಲ್** ಪರ್ವತ ಶ್ರೇಣಿಯಿದೆ. ಹಿಮಾಚಲ ಪ್ರದೇಶದಲ್ಲಿ ಜಮ್ಮು–ಕಾಶ್ಮೀರದಿಂದ ಬರುವ **ಧೌಲಾದರ್** ಪರ್ವತ ಶ್ರೇಣಿಯು ಹಬ್ಬಿದೆ. ಈ ಪರ್ವತ ಶ್ರೇಣಿಗಳ ನಡುವೆ ಕಾಶ್ಮೀರ, ಖಾಂಗ್ರಾ ಮತ್ತು ಕುಲು ಕಣಿವೆಗಳಿವೆ. ಇಲ್ಲಿ ಪ್ರಸಿದ್ಧ ಗಿರಿಧಾಮಗಳಾದ ಶ್ರೀನಗರ, **ಪಾಹೆಲ್‌ಗಂ, ಗುಲ್ಮಾರ್ಕ್, ಮುಸ್ಸೋರಿ, ಸಿಮ್ಲಾ** ಮತ್ತು **ನೈನಿತಾಲ್**ಗಳಿವೆ. ಪವಿತ್ರ ಯಾತ್ರಾ ಸ್ಥಳಗಳಾದ **ಅಮರನಾಥ್, ಕೇದಾರ್‌ನಾಥ್, ಬದರಿನಾಥ್** ಮತ್ತು **ವೈಷ್ಣವಿದೇವಿ** ದೇವಾಲಯಗಳಂತಹ ಅತ್ಯಂತ ವೈಶಿಷ್ಟ್ಯವುಳ್ಳ ಸ್ಥಳಗಳನ್ನು ಹಿಮಾಚಲ್ ಪರ್ವತಶ್ರೇಣಿಗಳಲ್ಲಿ ಕಾಣಬಹುದು.

3. ಸಿವಾಲಿಕ್ (ಅಥವಾ) ಹೊರ ಹಿಮಾಲಯ

ಹಿಮಾಲಯ ಪರ್ವತಗಳ ದಕ್ಷಿಣದ ಹೆಚ್ಚಿನ ಭಾಗದಲ್ಲಿ ಸಿವಾಲಿಕ್ ಪರ್ವತಗಳು ಕಂಡುಬರುತ್ತವೆ. ಇದರ ಸರಾಸರಿ ಎತ್ತರ 1000ಮೀಟರ್‌ಗಳು. ಇದು ಜೇಡಿಮಣ್ಣು ಮತ್ತು ಮೃದು ಶಿಲೆಗಳಿಂದ ಕೂಡಿದ ನಿರಂತರವಲ್ಲದ ಪರ್ವತಗಳಾಗಿವೆ. ಸಮತಟ್ಟಾದ ಕಿರಿದಾದ ಕಣಿವೆಗಳಾದ **'ಡೂನ್ಸ್'(Duns)** ಎಂದು ಕರೆಯಲ್ಪಡುವ ಕಣಿವೆಗಳು ಸಿವಾಲಿಕ್ ಪರ್ವತಗಳಲ್ಲಿ ಕಂಡುಬರುತ್ತವೆ. ಉತ್ತಮ ಉದಾಹರಣೆ: **ಡೆಹರಾಡೂನ್**. ನದಿಗಳಿಂದ ಸಾಗಿಸಿ ತಂದ ಮಣ್ಣು ಮತ್ತು ಸ್ಫಟಿಕಶಿಲೆಗಳು ಸಿವಾಲಿಕ್ ಪರ್ವತಗಳ ತಪ್ಪಲುಗಳಲ್ಲಿ ಶೇಖರಣೆಯಾಗುತ್ತವೆ. ಸಿವಾಲಿಕ್ ಪರ್ವತಗಳ ದಕ್ಷಿಣ ಭಾಗದಲ್ಲಿ ಅಧಿಕ ಫಲವತ್ತಾದ ಮಣ್ಣಿನಿಂದ ಕೂಡಿದ **'ತೆರೈ'** ಮೈದಾನವನ್ನುಂಟುಮಾಡಿದೆ. ಇದು ದಟ್ಟವಾದ ಕಾಡುಗಳು ಬೆಳೆಯಲು ಮತ್ತು ಜೌಗು ಭೂಮಿಗಳನ್ನಾಗಿ ರೂಪಿಸಲು ನೆರವಾಗುತ್ತದೆ.

ಇ. ಪೂರ್ವ ಹಿಮಾಲಯಗಳು(ಪೂರ್ವಾಂಚಲ್)

ಬ್ರಹ್ಮಪುತ್ರ ನದಿಯು ಹಿಮಾಲಯ ಪರ್ವತದ ಪೂರ್ವದ ಅಧಿಕ ಭಾಗದ ಭೌಗೋಳಿಕ ಎಲ್ಲೆಯಾಗಿದೆ. ಭಾರತದ ಪೂರ್ವದ ಎಲ್ಲೆಗಳೊಡನೆ ಇರುವ ಈ ಪರ್ವತಗಳನ್ನು **'ಪೂರ್ವಾಂಚಲ್'** ಎಂದು ಕರೆಯುತ್ತೇವೆ. ಉತ್ತರದಲ್ಲಿ **ಪಟ್ಕಾಯ್** ಬೆಟ್ಟಗಳು ಮತ್ತು **ನಾಗಾ** ಬೆಟ್ಟಗಳು ಹಾಗೂ ದಕ್ಷಿಣದಲ್ಲಿ **ಮಿಜೋ** ಬೆಟ್ಟಗಳೂ ಪೂರ್ವ ಹಿಮಾಲಯದಲ್ಲಿ ಸೇರಿಕೊಂಡಿವೆ

2. ಉತ್ತರದ ಮಹಾಮೈದಾನಗಳು

ಉತ್ತರದ ಮಹಾಮೈದಾನಗಳು ಹಿಮಾಲಯ ಪರ್ವತದ ದಕ್ಷಿಣ ಭಾಗದಲ್ಲಿ ವ್ಯಾಪಿಸಿವೆ. ಇವುಗಳು ಸಿಂಧೂ, ಗಂಗಾ ಮತ್ತು ಬ್ರಹ್ಮಪುತ್ರ ನದಿಗಳು ತಮ್ಮ ಮೇಲ್ಕಣಿವೆಯಲ್ಲಿ ಹರಿಯುವಾಗ ಸವೆಸಿ ಸಾಗಿಸಿ ತಂದ ಮೆಕ್ಕಲನ್ನು ಕೆಳಕಣಿವೆಯ ಪಾತ್ರದಲ್ಲಿ ಸಂಚಯಿಸುವುದರಿಂದ ಈ ಫಲವತ್ತಾದ ಮೈದಾನಗಳು ರಚನೆಯಾಗಿವೆ. ಈ ಮೈದಾನಗಳು 2400 ಕಿಲೋಮೀಟರ್ ಉದ್ದವಾಗಿವೆ. ಹೆಚ್ಚು ಕಡಿಮೆ 7 ಲಕ್ಷ ಚದುರ ಕಿಲೋಮೀಟರ್‌ಗಳವರೆಗೆ ವಿಸ್ತರಿಸಿದೆ. ಹಿಮಾಲಯ ಪರ್ವತಗಳಲ್ಲಿ, ನದಿಗಳು ಸವೆಸಿ ಸಾಗಿಸಿ ಸಂಚಯಿಸಿದ ಮಣ್ಣು ಮತ್ತು ಮಡ್ಡಿಗಳಿಂದ ರಚನೆಗೊಂಡಿರುವ ವಿಕೃತ ಸ್ವರೂಪದ ಮೆಕ್ಕಲಾದ **'ಭಾಬರ್'** ಎಂಬುದು, **ತೆರೈ**(Terai) ಎಂಬ ಜೌಗು ಭಾಗಗಳು, **ಭಾಂಗರ್** ಎಂಬ ಪುರಾತನ ಮೆಕ್ಕಲು, ಇತ್ತೀಚಿನ ವರ್ಷಗಳಲ್ಲಿ ಸಂಚಯನಗೊಂಡ ಹಾಗೂ ತಗ್ಗು ಭಾಗಗಳಲ್ಲಿ ನಿರ್ಮಾಣಗೊಂಡ **'ಖಾದ್ದರ್'** ಎಂಬ ಮೆಕ್ಕಲು ಇವುಗಳು ರಚನೆಯಾಗಿದೆ. ಬಾಬರ್ ಮೆಕ್ಕಲು ಬೆಟ್ಟದ ತಪ್ಪಲುಗಳಲ್ಲಿ ಸುಮಾರು 8 ರಿಂದ 16 ಕಿಲೋಮೀಟರ್ ಅಗಲದವರೆಗೆ ವ್ಯಾಪಿಸಿದೆ. ಪರ್ವತಗಳಿಂದ ಹರಿಯುವ ನದಿಗಳು ತಾವು ಹೊತ್ತು ತರುವ ಮೆಕ್ಕಲುಮಣ್ಣನ್ನು ಫಲವತ್ತಾದ ಭಾಗಗಳನ್ನಾಗಿ ಮಾಡಿ ಪರ್ವತಗಳ ತಪ್ಪಲಿನಲ್ಲಿ ಶೇಖರಿಸುತ್ತವೆ. ಈ ಮೆಕ್ಕಲು ಮಣ್ಣಿನಲ್ಲಿ ಅಧಿಕವಾದ ಸೂಕ್ಷ್ಮರಂಧ್ರಗಳಿರುವುದರಿಂದ, ಅವುಗಳ ಮೂಲಕ ಹರಿಯುವ ನದಿಗಳು ಹೀರಲ್ಪಟ್ಟು ಅಂತರ್ಜಲವಾಗಿ ಹರಿಯತ್ತವೆ. ಇದರಿಂದ ನದಿಯ ಮೇಲ್ಭಾಗವು ಒಣ ನದಿ ಪ್ರದೇಶವಾಗಿ ಕಂಡುಬರುತ್ತದೆ.

ತೆರೈ

ತೆರೈ ಎಂಬುದು ಹಿಮಾಲಯ ಪರ್ವತದ ತಪ್ಪಲಿನಲ್ಲಿ ಕಂಡುಬರುವ ಕೆಸರು ಮತ್ತು ಜವುಳುಭೂಮಿಯನ್ನೊಳಗೊಂಡ ಒಂದು ಭೂಭಾಗವಾಗಿ ಭಾಬರ್ ಮೆಕ್ಕಲಿನಲ್ಲಿ ಮರೆಯಾಗಿ ನದಿಗಳು ಪುನಃ ಈ ಭಾಗಗಳಲ್ಲಿ ಕಂಡುಬರುತ್ತವೆ. ಇದು ಭಾಬರ್ ಭಾಗದ ದಕ್ಷಿಣದಲ್ಲಿ ಕಂಡುಬರುತ್ತದೆ. ಇದು ಸುಮಾರು 15 ಕಿಲೋಮೀಟರ್‌ನಿಂದ 30 ಕಿಲೋಮೀಟರ್ ಅಗಲವುಳ್ಳದ್ದಾಗಿದೆ. ಇದು ತೇವಾಂಶಭರಿತ ಭಾಗವಾಗಿದೆ. ಇವುಗಳು ಕಾಡುಗಳ ಬೆಳವಣಿಗೆಗೆ ಕಾಡುಪ್ರಾಣಿಗಳು ಜೀವಿಸಲೂ



ಸಹಾಯಕವಾಗಿವೆ. ಬಹುತೇಕ ತೆರೈ ಭಾಗವು ತೋಟಗಾರಿಕೆಯ ಭೂಮಿಗಳಾಗಿ ಬದಲಾವಣೆಯಾಗುತ್ತಿವೆ.

ಭಾಂಗರ್

ಭಾಂಗರ್ ಎಂಬುದು ಫಲವತ್ತಾದ ಮೆಕ್ಕಲು ಮಣ್ಣಿನಿಂದಾದ ಭೂಭಾಗವಾಗಿದೆ. ಇಲ್ಲಿರುವ ಮೆಕ್ಕಲು ಎಲ್ಲವೂ ಪುರಾತನ ಮೆಕ್ಕಲು ಮಣ್ಣಿನ ಭಾಗವಾಗಿದೆ. ಇವುಗಳು ಪ್ರವಾಹಭರಿತ ಮೈದಾನಗಳಲ್ಲಿ ಕಂಡುಬರುವ ಪುರಾತನ ಫಲವತ್ತಾದ ಮೆಕ್ಕಲು ಮಣ್ಣಿನಿಂದಾಗಿವೆ. ಇವುಗಳು ಪ್ರಮುಖವಾಗಿ ಜೇಡಿ ಮಣ್ಣಿನಿಂದ ರಚಿತಗೊಂಡಿವೆ.

ಖಾದ್ದರ್

ಖಾದ್ದರ್ ಎಂಬುದು ನದಿಗಳಿಂದ ಹೊತ್ತು ತರುವ ಮಣ್ಣಿನ ಭೂಭಾಗವಾಗಿದೆ. ಇದು ಪ್ರವಾಹಭರಿತ ಮೈದಾನಗಳ ಎರಡೂ ದಡಗಳ ಮೇಲೆ ಸಂಗ್ರಹಿಸಲ್ಪಟ್ಟ ಭಾಗವಾಗಿದೆ. ಇದು ಪ್ರತಿ ಬಾರಿಯು ಪ್ರವಾಹ ಉಂಟಾಗುವ ಸಂದರ್ಭದಲ್ಲಿ ಶೇಖರಿಸಲ್ಪಟ್ಟ ಮೆಕ್ಕಲು ಮಣ್ಣಿನಿಂದ ಆದುದಾಗಿದೆ. ಈ ಮೆಕ್ಕಲುಗಳೆಲ್ಲಾ ಸಾಮಾನ್ಯವಾಗಿ ಈಗಿರುವ ನದಿಭಾಗಗಳಲ್ಲಿಯೇ ಕಂಡುಬರುತ್ತದೆ.

ಉತ್ತರ ಭಾರತದ ಮೈದಾನಗಳನ್ನು 4 ಭಾಗಗಳಾಗಿ ವಿಂಗಡಿಸಬಹುದು. ಅವುಗಳು ಯಾವುವೆಂದರೆ

1. ರಾಜಸ್ತಾನ ಮೈದಾನ
2. ಪಂಜಾಬ್–ಹರಿಯಾಣ ಮೈದಾನಗಳು
3. ಗಂಗಾ ಮೈದಾನ
4. ಬ್ರಹ್ಮಪುತ್ರ ಮೈದಾನ

1. ರಾಜಸ್ತಾನ ಮೈದಾನ

ರಾಜಸ್ತಾನ ಮೈದಾನವು ಅರಾವಳಿ ಪರ್ವತ ಶ್ರೇಣಿಗಳ ಪಶ್ಚಿಮದಲ್ಲಿ ಕಂಡುಬರುತ್ತದೆ. ಇದರ ಅಗಲ ಸುಮಾರು 300 ಕಿಲೋಮೀಟರ್, ಸುಮಾರು 640 ಕಿಲೋಮೀಟರ್ ದೂರದವರೆಗೆ ವಿಸ್ತರಿಸಿದೆ. 2/3 ರಷ್ಟು ಭಾಗದಷ್ಟು ಮರುಭೂಮಿಯು ಪಶ್ಚಿಮ ರಾಜಸ್ತಾನ್ ಬಯಲಿನಲ್ಲಿ ವ್ಯಾಪಿಸಿದೆ. ಇದು ಸಮುದ್ರ ಮಟ್ಟದಿಂದ ಸುಮಾರು 300 ಮೀಟರ್ ಎತ್ತರದಲ್ಲಿದೆ. ಸಾಮಾನ್ಯವಾಗಿ ಮರುಭೂಮಿಯ ಪೂರ್ವಭಾಗವು ಶಿಲೆಗಳಿಂದ ಕೂಡಿದ್ದು, ಪಶ್ಚಿಮ ಭಾಗವು ಚಲಿಸುವ ಮರಳು ದಿಬ್ಬಗಳಾಗಿಯೂ ಇವೆ.

ಅರಾವಳಿ ಪರ್ವತ ಶ್ರೇಣಿಗಳಿಂದ ಉಂಟಾಗುವ ಹಲವು ಬಗೆಯ ಋತುಗಳ ಕಾಲುವೆಗಳು ಈ ಬಯಲಿನಲ್ಲಿ ಕಂಡುಬರುತ್ತವೆ. ಈ ಭಾಗದ ಮುಖ್ಯನದಿ ಲೂನಿ ನದಿ. ಇದು ಕಚ್ ಕೊಲ್ಲಿಯಲ್ಲಿ ಸೇರುತ್ತದೆ. ಲೂನಿ ನದಿಯ ಉತ್ತರ ಭಾಗದಲ್ಲಿ ದೇಶೀಯ ಕಾಲುವೆಗಳನ್ನು ಅಧಿಕವಾಗಿ ಕಾಣಬಹುದು. ಇಲ್ಲಿ ಹಲವಾರು ಬರಡು ನದಿ ದಡಗಳು ಕಂಡುಬರುತ್ತವೆ.

ನದಿ ಹೇಗೆ ಮರೆಯಾಗುವುದು?

ಇತ್ತೀಚಿನ ಭೌಗೋಳಿಕ ರಚನೆಯ ಇತಿಹಾಸದಲ್ಲಿ ಹಲವು ನದಿಗಳು ಮರೆಯಾಗಿಹೋದವು. ಕೆಲವು ನದಿಗಳು ತಮ್ಮ ಮಾರ್ಗವನ್ನು ಬದಲಾಯಿಸಿಕೊಂಡವು. ಕೆಲವು ನದಿಗಳು ಸಂಪೂರ್ಣವಾಗಿ ಮರೆಯಾಗಿ ಹೋದವು. ವೇದಗಳ ಕಾಲದಲ್ಲೂ, ವೇದ ಪೂರ್ವಕಾಲದಲ್ಲೂ ದೊಡ್ಡ ನದಿಯಾಗಿದ್ದ ಸರಸ್ವತಿ ನದಿಯು ಅಧಿಕವಾಗುತ್ತಿರುವ ಮರುಭೂಮಿಯ ವ್ಯಾಪ್ತಿಯೊಳಗೆ ಚಿಕ್ಕ ಚಿಕ್ಕದಾಗಿ ಮರೆಯಾಯಿತು. ಈಗಿರುವ ಗಾಗ್ರಾ ನದಿಯು ಮರೆಯಾಗಿ ಹೋದ ಸರಸ್ವತಿ ನದಿಯ ಮುಂದುವರಿಯುವಿಕೆ ಎಂದು ನಂಬಲಾಗಿದೆ.

ರಾಜಸ್ತಾನದ ಮೈದಾನದಲ್ಲಿ ಹಲವು ಉಪ್ಪಿನ ಸರೋವರಗಳಿವೆ. ಅವುಗಳಲ್ಲಿ ಜೈಪುರದ ಪಶ್ಚಿಮಕ್ಕೆ ಸುಮಾರು 65 ಕಿಲೋಮೀಟರ್ ದೂರದಲ್ಲಿರುವ 'ಸಾಂಬಾರ್ ಸರೋವರ' (Pushkar Lake)ವು ಅತಿ ದೊಡ್ಡ ಉಪ್ಪಿನ ಸರೋವರವಾಗಿದೆ.

2. ಪಂಜಾಬ್–ಹರಿಯಾಣ ಮೈದಾನಗಳು

ಭಾರತದ ಮಹಾಮರುಭೂಮಿಯು ಈಶಾನ್ಯದಲ್ಲಿರುವ ಮೈದಾನಗಳು ಸಂಪದ್ಭರಿತ ಪಂಜಾಬ್–ಹರಿಯಾಣ ಮೈದಾನಗಳಿಂದ ಇವು ಉತ್ತರದಿಂದ ನೈರುತ್ಯಕ್ಕೆ ಸುಮಾರು 640 ಕಿಲೋಮೀಟರ್ ದೂರದವರೆಗೂ, ಪಶ್ಚಿಮದಿಂದ ಪೂರ್ವಕ್ಕೆ ಸುಮಾರು 300 ಕಿಲೋಮೀಟರ್ ದೂರದವರೆಗೂ ವ್ಯಾಪಿಸಿದೆ. ದೆಹಲಿಯು ಬದುವು(Ridge) ಪಂಜಾಬ್–ಹರಿಯಾಣ ಮೈದಾನಗಳನ್ನು ಗಂಗಾ ಮೈದಾನದಿಂದ ಬೇರ್ಪಡಿಸುತ್ತದೆ.

ಪಂಜಾಬ್–ಹರಿಯಾಣ ಮೈದಾನವು ಸಟ್ಲೆಜ್, ಬಿಯಾಸ್, ರಾವಿ ನದಿಗಳಿಂದ ಉಂಟಾಗುವ ಫಲವತ್ತಾದ ಮೆಕ್ಕಲು ಮಣ್ಣಿನಿಂದ ಆದುದಾಗಿದೆ. ರಾಜಸ್ತಾನ ಮೈದಾನವನ್ನು ಹೊಂದಿಕೊಂಡಂತೆ ಈ ಮೈದಾನದ ಆಗ್ನೇಯ ಭಾಗದಲ್ಲಿ ಮರಳು ಭಾಗಗಳಾಗಿಯೂ ಮತ್ತು ಚಲಿಸುವ ಮರಳು ದಿಬ್ಬಗಳಾಗಿಯೂ ಕೂಡಿದೆ. ಹರಿಯಾಣದಲ್ಲಿರುವ ಗಾಗ್ರಾ ನದಿಯ ಯಮುನಾ ನದಿಯ ಮಧ್ಯದ ಭೂಭಾಗವೇ ಹರಿಯಾಣ ಮೈದಾನವಾಗಿದೆ.

3. ಗಂಗಾ ಮೈದಾನ

ಗಂಗಾ ಮೈದಾನವು ಅತಿವಿಸ್ತಾರವಾದ ಮೈದಾನವಾಗಿದೆ. ಇದು ಪಶ್ಚಿಮದಲ್ಲಿರುವ ಯಮುನಾ ನದಿಯಿಂದ ಪೂರ್ವದಲ್ಲಿರುವ ಬಾಂಗ್ಲಾದೇಶದವರೆಗೆ ಸುಮಾರು 1500 ಕಿಲೋಮೀಟರ್ ದೂರದವರೆಗೂ ಸುಮಾರು 300 ಕಿಲೋಮೀಟರ್ ಅಗಲದವರೆಗೂ ವಿಸ್ತರಿಸಿದೆ. ಇದು ಉತ್ತರಪ್ರದೇಶ, ಬಿಹಾರ, ಪಶ್ಚಿಮ ಬಂಗಾಳ ಮುಂತಾದ ರಾಜ್ಯಗಳಲ್ಲಿ ಹಬ್ಬಿದೆ. ರಾಮಗಂಗಾ, ಗೋಮತಿ, ಗಾಗ್ರ, ಗಂಡಕಿ, ಕೋಸಿ, ಯಮುನಾ ಮುಂತಾದ ನದಿಗಳು ಉತ್ತರದಿಂದಲೂ ಸೋನ್, ಚಂಬಲ್, ಬೆಟ್ವಾ ಮುಂತಾದ ನದಿಗಳು ಉಗಮವಾಗಿ ಗಂಗಾನದಿಯ ಉಪನದಿಗಳಾಗಿ ಗಂಗಾನದಿಯೊಡನೆ ಸೇರುತ್ತವೆ. ಈ ನದಿಗಳು ಕ್ರಮವಾಗಿ ಪರ್ವತಗಳಿಂದಲೂ ಪೀಠಭೂಮಿಗಳಿಂದಲೂ ಅಧಿಕ ಪ್ರಮಾಣದಲ್ಲಿ ಮರಳನ್ನೂ ಫಲವತ್ತಾದ ಮೆಕ್ಕಲು ಮಣ್ಣನ್ನು ಸಂಗ್ರಹಿಸಿ ಬಹುದೊಡ್ಡ ಮೈದಾನವನ್ನು ಉಂಟುಮಾಡುತ್ತವೆ. ಗಂಗಾ ಮೈದಾನದ ಇಳಿಜಾರು ಪೂರ್ವ ಮತ್ತು ಆಗ್ನೇಯದ ಕಡೆಗೆ ಸಾಮಾನ್ಯ ಇಳಿಜಾರಿನಿಂದ ಕೂಡಿದೆ. ಸಮುದ್ರ ಮಟ್ಟದಿಂದ ಇದರ ಸರಾಸರಿ ಎತ್ತರ 200 ಮೀಟರ್ ಆಗಿದೆ.

ಈ ಮೈದಾನದ ಪಶ್ಚಿಮ ಭಾಗದಲ್ಲಿ ಗಂಗಾ–ಯಮುನಾ ನದಿಗಳ ನಡುವಣ ಫಲವತ್ತಾದ ಪ್ರದೇಶ(ದೋ–ಅಬ್) ಕಂಡುಬರುತ್ತದೆ.

ಈ ಮೈದಾನದ ಪೂರ್ವಕ್ಕೆ ರೋಹಿಲ್‌ಖಂಡ್ ತಗ್ಗುಪ್ರದೇಶವನ್ನು ರೂಪಿಸಿದೆ. ನದಿ ಮಾರ್ಗದ ಮಧ್ಯಭಾಗದಲ್ಲಿ ಕೆಸರು ತುಂಬಿರುವುದರಿಂದ ನದಿ ನೀರಿನ ಮಾರ್ಗವು ಬದಲಾವಣೆಯಾಗುತ್ತಲೇ ಬರುತ್ತಿದೆ. ಇದರಿಂದಾಗಿ ಆಗಾಗ್ಗೆ ಈ ಭಾಗದಲ್ಲಿ ಪ್ರವಾಹ ಸಂಭವಿಸುವ ಅವಕಾಶವಿರುತ್ತದೆ.

ಹಿಂದೂ ಧರ್ಮವನ್ನು ಅನುಸರಿಸುವ ಜನರು ಗಂಗಾ ಮತ್ತು ಯಮುನಾ ನದಿಗಳನ್ನು ಪವಿತ್ರ ನದಿಗಳೆಂದು ಭಾವಿಸುವರು. ಆದ್ದರಿಂದ ಈ ಪವಿತ್ರ ನದಿಗಳ ತೀರ ಪ್ರದೇಶಗಳಲ್ಲಿ ಹರಿದ್ವಾರ, ಮಥುರಾ, ವಾರಣಾಸಿ, ಅಲಹಾಬಾದ್ ಮುಂತಾದ ಪುಣ್ಯಕ್ಷೇತ್ರಗಳು ಹೆಚ್ಚೆಚ್ಚು ಅಭಿವೃದ್ಧಿ ಹೊಂದಿ ಶಿಕ್ಷಣ, ಸಂಸ್ಕೃತಿ ಮತ್ತು ಪ್ರವಾಸ ಸ್ಥಳಗಳಾಗಿಯೂ ಇವೆ.

ಬಿಹಾರದ ದುಃಖನದಿ ಎಂದು ಕರೆಯಲ್ಪಡುವ ಕೋಸಿ ನದಿಯು ತನ್ನ ಕಾರ್ಯವಿಧಾನವನ್ನು ಸಮೀಪಕಾಲದಲ್ಲಿ ಸುಮಾರು 100 ಕಿಲೋಮೀಟರ್‌ವರೆಗೆ ಬದಲಾಯಿಸಿಕೊಂಡಿದೆ.

ಗಂಗಾ ಮೈದಾನದ ತಗ್ಗು ಪ್ರದೇಶದಲ್ಲಿ ಗಂಗಾ–ಬ್ರಹ್ಮಪುತ್ರ ನದಿಗಳು ಹಲವಾರು ಉಪನದಿಗಳಾಗಿ ಬೇರ್ಪಟ್ಟು ಪ್ರಪಂಚದಲ್ಲಿಯೇ ಅತಿದೊಡ್ಡ ಮುಖಜ ಭೂಮಿಯನ್ನು ಉಂಟುಮಾಡಿವೆ. ಈ ಮುಖಜ ಭೂಮಿಯ ತಗ್ಗುಪ್ರದೇಶವನ್ನು ಸುಂದರವನ ಎಂದು ಕರೆಯುವರು. ಈ ಪ್ರದೇಶವು ದಟ್ಟವಾದ ಉಬ್ಬರವಿಳಿತದಿಂದಾಗಿ ಮ್ಯಾನ್‌ಗ್ರೋವ್ ಕಾಡುಗಳನ್ನೊಳಗೊಂಡಿದೆ. ಈ ಮೈದಾನವು ಅಳಿವೆಗಳು, ಮ್ಯಾನ್‌ಗ್ರೋವ್ ಕಾಡುಗಳು, ಮರಳು ದಿಬ್ಬಗಳು ಮತ್ತು ದ್ವೀಪಗಳನ್ನೊಳಗೊಂಡಿದೆ.

4. ಬ್ರಹ್ಮಪುತ್ರ ಮೈದಾನ

ಉತ್ತರದ ಮಹಾಮೈದಾನದ ಪೂರ್ವದ ಹೆಚ್ಚಿನ ಭಾಗವು ನದಿ ಮತ್ತು ಅದರ ಹಲವಾರು ಉಪನದಿಗಳನ್ನೊಳಗೊಂಡಿದೆ. ಬ್ರಹ್ಮಪುತ್ರ ನದಿ

ಸಾಂಗ್‌ಪೋ ಎಂಬ ಹೆಸರಿನಿಂದ ಉಂಟಾಗಿದೆ. ಭಾರತಕ್ಕೆ ಪ್ರವೇಶಿಸುವ ಮೊದಲು 'ತಿಹಾಂಗ್' ಆಳ ಕಣಿವೆಯನ್ನು ನಿರ್ಮಿಸಿ ಅಸ್ಸಾಂ ಕಣಿವೆಯಲ್ಲಿ ಪ್ರವೇಶಿಸುತ್ತದೆ.

ಈಶಾನ್ಯದಲ್ಲಿರುವ ಅಸ್ಸಾಂ ಬೆಟ್ಟಗಳಿಂದ ಹಲವಾರು ಉಪನದಿಗಳು ಉಗಮವಾಗಿ ಬ್ರಹ್ಮಪುತ್ರ ನದಿಯನ್ನು ಸೇರಿ ಫಲವತ್ತಾದ ಮೆಕ್ಕಲು ಭಾಗಗಳನ್ನು ಉಂಟುಮಾಡುತ್ತವೆ. ಇಲ್ಲಿ ಜೇಡಿಮಣ್ಣಿನಿಂದ ಕೂಡಿದ ಜೌಗು ನೆಲಗಳನ್ನು ಅಧಿಕ ಪ್ರಮಾಣದಲ್ಲಿ ಕಾಣಬಹುದು.

ಫಲವತ್ತಾದ ಮೆಕ್ಕಲು ಭಾಗಗಳು 'ತೆರೈ' ಎಂಬ ಜೌಗು ನೆಲಗಳನ್ನು ಉಂಟುಮಾಡುತ್ತವೆ.



ಬ್ರಹ್ಮಪುತ್ರ ನದಿ–ಅಸ್ಸಾಂ

3. ಪರ್ಯಾಯ ದ್ವೀಪದ ಪೀಠಭೂಮಿಗಳು

ಪರ್ಯಾಯ ದ್ವೀಪದ ಪೀಠಭೂಮಿಯು ಉತ್ತರದ ಮಹಾವ್ಯೆದಾನಗಳ ದಕ್ಷಿಣದಲ್ಲಿ ಕಂಡುಬಂದಿದೆ. ಇದು ತ್ರಿಕೋನಾಕಾರದಲ್ಲಿದೆ. ಸುಮಾರು 16 ಲಕ್ಷ ಚದುರ ಕಿಲೋಮೀಟರ್ ವಿಸ್ತಾರವನ್ನು ಹೊಂದಿದೆ. ಇದನ್ನು ಉತ್ತರದಲ್ಲಿ ಅರಾವಳಿ, ವಿಂದ್ಯಾ, ಸಾತ್ಪುರ, ರಾಜ್‌ಮಹಲ್ ಪರ್ವತ ಶ್ರೇಣಿಗಳೂ, ಪಶ್ಚಿಮದಲ್ಲಿ ಪಶ್ಚಿಮ ಘಟ್ಟಗಳೂ ಪೂರ್ವದಲ್ಲಿ ಪೂರ್ವಘಟ್ಟಗಳೂ ಸುತ್ತುವರಿದಿವೆ. ಈ ಪೀಠಭೂಮಿಯು ಉತ್ತರ ದಕ್ಷಿಣವಾಗಿ ಸುಮಾರು 1600 ಕಿಲೋಮೀಟರ್ ಮತ್ತು ಪೂರ್ವ ಪಶ್ಚಿಮವಾಗಿ ಸುಮಾರು 1400 ಕಿಲೋಮೀಟರ್ ದೂರ ವಿಸ್ತರಿಸಿದೆ. ಇದು ಸಮುದ್ರ ಮಟ್ಟದಿಂದ ಸರಾಸರಿಯಾಗಿ 600ರಿಂದ 900 ಮೀಟರ್ ಎತ್ತರವನ್ನು ಹೊಂದಿದೆ. ಇದು ಪಶ್ಚಿಮದಿಂದ ಪೂರ್ವಕ್ಕೆ ಇಳಿಜಾರಾಗಿದೆ. ನರ್ಮದ–ತಪತಿ ನದಿ ಭಾಗಗಳಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಇಳಿಜಾರಾಗಿದೆ. ನರ್ಮದ ನದಿಯು ಪರ್ಯಾಯ ದ್ವೀಪ ಪೀಠಭೂಮಿಯನ್ನು ಎರಡು ಅಸಮಾನ ಭಾಗಗಳಾಗಿ ವಿಂಗಡಿಸುತ್ತದೆ. ಇದರ ಉತ್ತರ ಭಾಗವನ್ನು ಮಧ್ಯ ಎತ್ತರದ ಪ್ರದೇಶಗಳು ಎಂದೂ, ದಕ್ಷಿಣ ಭಾಗವನ್ನು ದಖ್ಖನ್ ಪೀಠಭೂಮಿ ಎಂದೂ ಕರೆಯುವರು.

ಅ. ಮಧ್ಯ ಎತ್ತರದ ಪ್ರದೇಶಗಳು

1. ಮಾಳ್ವ ಪೀಠಭೂಮಿ

ಮಾಳ್ವ ಪೀಠಭೂಮಿಯು ಅರಾವಳಿ ಬೆಟ್ಟ, ವಿಂದ್ಯಾಪರ್ವತ ಮತ್ತು ಬಂದೇಲ್‌ಖಂಡ್ ಮುಂತಾದವುಗಳಿಂದ ಆವರಿಸಿದೆ. ಚಂಬಲ್ ನದಿ ಮತ್ತು ಅದರ ಉಪನದಿಗಳು ಸೇರಿ ಪೀಠಭೂಮಿಯ ಉತ್ತರ ಭಾಗವು ಹಲವು ಕಮರಿಗಳನ್ನು (Ravines) ಉಂಟುಮಾಡಿವೆ.

2. ಬಂದೇಲ್‌ಖಂಡ್ ಎತ್ತರ ಪ್ರದೇಶ

ಬಂದೇಲ್‌ಖಂಡ್ ಎತ್ತರ ಪ್ರದೇಶವು ಯಮುನಾನದಿಯ ದಕ್ಷಿಣ ಭಾಗದಲ್ಲಿದೆ. ಇದು ಅಗ್ನಿ ಶಿಲೆಗಳು ಮತ್ತು ರೂಪಾಂತರ ಶಿಲೆಗಳಿಂದ ಆದುದಾಗಿದೆ. ಇದರ ಉತ್ತರ ಭಾಗದಲ್ಲಿ ಗಂಗಾ ಮತ್ತು ಯಮುನಾ ನದಿಗಳು ಫಲವತ್ತಾದ ಮಣ್ಣನ್ನು ಸಂಗ್ರಹಿಸುತ್ತವೆ. ಇದರ ಬೆಟ್ಟಪ್ರದೇಶವು ಮರಳ್ಗಲ್ಲುಗಳಿಂದ ಮತ್ತು ಗ್ರಾನೈಟ್‌ಗಳಿಂದಾದುದಾಗಿದೆ. ಬೆಟ್ವಾ ಮತ್ತು ಕೆನ್ ನಂತಹ ನದಿಗಳು ಆಳವಾದ ಕಮರಿಗಳನ್ನುಂಟುಮಾಡುತ್ತವೆ.

3. ಬಘಲ್‌ಖಂಡ್

ಬಘಲ್‌ಖಂಡ್ ಮೈಕ್ಕಾಲ ಪರ್ವತಶ್ರೇಣಿಯ ಪೂರ್ವದಲ್ಲಿ ಕಾಣಬರುತ್ತದೆ. ಇದು ಪಶ್ಚಿಮದಲ್ಲಿ ಮರಳುಗಲ್ಲುಗಳು ಮತ್ತು ಸುಣ್ಣದಕಲ್ಲುಗಳಿಂದಲೂ ಪೂರ್ವದಲ್ಲಿ ಗ್ರಾನೈಟ್‌ಗಳಿಂದಲೂ ಆದುದಾಗಿದೆ. ಪೀಠಭೂಮಿಯ ಮಧ್ಯಭಾಗವು ಸೋನ್ ನದಿ ಮತ್ತು ಮಹಾನದಿಗಳ ನಡುವೆ ನೀರು ಬೇರ್ಪಡಿಸುವ ದಿಣ್ಣೆಯಾಗಿ ಪಾತ್ರ ವಹಿಸುತ್ತಿದೆ.

4. ಚೋಟಾನಾಗಪುರ ಪೀಠಭೂಮಿ

ಚೋಟಾನಾಗಪುರ ಪೀಠಭೂಮಿಯು ಮಧ್ಯ ಎತ್ತರ ಪ್ರದೇಶಗಳ ಈಶಾನ್ಯ ಭಾಗದಲ್ಲಿದೆ. ದಾಮೋದರ,

ಸ್ವರ್ಣರೇಖಾ, ಕೋಯಲ್ ಮತ್ತು ಬಾರಕರ್ ನದಿಗಳು ಇದರ ಮೂಲಕ ಹರಿಯುತ್ತವೆ. ಈ ಭಾಗದ ಮಧ್ಯದಲ್ಲಿ ದಾಮೋದರ ನದಿ ಪಶ್ಚಿಮದಿಂದ ಪೂರ್ವಕ್ಕೆ ಹರಿಯುತ್ತದೆ. ಈ ಭಾಗವು ಪೀಠಭೂಮಿಗಳಿಂದಲೂ, ಬೆಟ್ಟಗಳಿಂದಲೂ ಆವೃತವಾಗಿದೆ. ಹಜಾರಿಬಾಗ್ ಪೀಠಭೂಮಿಯು ದಕ್ಷಿಣದಲ್ಲಿಯೂ ಮತ್ತು ರಾಜಮಹಲ್ ಬೆಟ್ಟವು ಈಶಾನ್ಯಭಾಗದಲ್ಲಿಯೂ ಕಂಡುಬರುತ್ತದೆ.

ಆ. ದಖ್ಖನ್ ಪೀಠಭೂಮಿ

ದಖ್ಖನ್ ಪೀಠಭೂಮಿಯು ಸುಮರು 5 ಲಕ್ಷ ಚದರ ಕಿಲೋಮೀಟರ್ ವಿಸ್ತೀರ್ಣವನ್ನು ಹೊಂದಿದೆ. ಇದು ಲಾವಾ ಎಂಬ ಜ್ವಾಲಾರಸದಿಂದ ಏರ್ಪಟ್ಟ ಕಪ್ಪು ಮಣ್ಣಿನಿಂದಾದ ಭಾಗವಾಗಿದೆ. ಪಶ್ಚಿಮದಲ್ಲಿ ವಿಂದ್ಯಾ ಮತ್ತು ಸಾತ್ಪುರ ಪರ್ವತ ಶ್ರೇಣಿಗಳನ್ನೂ ಉತ್ತರದಲ್ಲಿ ಮಹಾದೇವ ಮತ್ತು ಮೈಕಲ ಪರ್ವತ ಶ್ರೇಣಿಗಳನ್ನೂ, ಪಶ್ಚಿಮದಲ್ಲಿ ಪಶ್ಚಿಮ ಘಟ್ಟಗಳನ್ನೂ, ಪೂರ್ವದಲ್ಲಿ ಪೂರ್ವಘಟ್ಟಗಳನ್ನೂ ಎಲ್ಲೆಗಳಾನ್ನಾಗಿಸಿಕೊಂಡಿದೆ. ದಖ್ಖನ್ ಪೀಠಭೂಮಿಯು ಪಶ್ಚಿಮದಿಂದ ಪೂರ್ವಕ್ಕೆ ಇಳಿಜಾರಾಗಿದೆ. ಆದ್ದರಿಂದ ಮಹಾನದಿ, ಗೋದಾವರಿ, ಕೃಷ್ಣಾ ಮತ್ತು ಕಾವೇರಿ ನದಿಗಳು ಪೂರ್ವಾಭಿಮುಖವಾಗಿ ಹರಿದು ಬಂಗಾಳಕೊಲ್ಲಿಯನ್ನು ಸೇರುತ್ತವೆ. ದಖ್ಖನ್ ಪೀಠಭೂಮಿಯ ಉತ್ತರಭಾಗವು ಅಗ್ನಿಶಿಲೆಗಳನ್ನೂ, ಕಪ್ಪುಮಣ್ಣನ್ನೂ ಹೊಂದಿದೆ. ಈ ಪೀಠಭೂಮಿಯ ದಕ್ಷಿಣಭಾಗವಾದ ಕರ್ನಾಟಕ ಪೀಠಭೂಮಿಯು ನೀಲಗಿರಿಬೆಟ್ಟಗಳೊಡನೆ ಒಂದುಗೂಡುತ್ತದೆ. ತೆಲಂಗಾಣ ಪೀಠಭೂಮಿ ಮಾರ್ಗವಾಗಿ ಗೋದಾವರಿ, ಕೃಷ್ಣಾ ಮತ್ತು ಪೆನ್ನಾರು ನದಿಗಳು ಹರಿಯುತ್ತವೆ.

ಪರ್ಯಾಯದ್ವೀಪ ಭಾರತದಲ್ಲಿರುವ ಪರ್ವತಶ್ರೇಣಿಗಳು

1. ಅರಾವಳಿ ಪರ್ವತ ಶ್ರೇಣಿ

ಅರಾವಳಿ ಪರ್ವತಶ್ರೇಣಿಯು ಪ್ರಪಂಚದಲ್ಲಿಯೇ ಅತ್ಯಂತ ಹಳೆಯದಾದ ಮಡಿಕೆ ಪರ್ವತಗಳಾಗಿವೆ. ಇದು ಈಶಾನ್ಯದಿಂದ ನೈರುತ್ಯದವರೆಗೆ ಸುಮಾರು 800 ಕಿಲೋಮೀಟರ್‌ವರೆಗೆ ವ್ಯಾಪಿಸಿದೆ. ಉತ್ತರದಲ್ಲಿ ಸರಾಸರಿ ಸುಮಾರು 400 ಮೀಟರ್ ಎತ್ತರ ಮತ್ತು ದಕ್ಷಿಣದಲ್ಲಿ 900 ಮೀಟರ್ ಎತ್ತರವನ್ನು ಹೊಂದಿದೆ. ಅರಾವಳಿ ಪರ್ವತಶ್ರೇಣಿಯ ಅತ್ಯಂತ ಎತ್ತರದ ಶಿಖರವಾದ ಗುರು ಶಿಖರ(1722 ಮೀಟರ್) ಅಬು ಬೆಟ್ಟದಲ್ಲಿದೆ. ಅರಾವಳಿ ಪರ್ವತಶ್ರೇಣಿಯು ಕತ್ತರಿಸಲ್ಪಟ್ಟಂತೆ ಮತ್ತು ವಿಭಜಿಸಲ್ಪಟ್ಟಂತೆ ಕಂಡುಬರುತ್ತದೆ.ಇದು ಹೊತ್ತುಕೊಂಡಿರುವ ಶಿಖರಕ್ಕೆ (Relic Mountain) ಉದಾಹರಣೆಯಾಗಿದೆ.

2. ವಿಂದ್ಯಾ ಪರ್ವತ ಶ್ರೇಣಿ

ವಿಂದ್ಯಾ ಪರ್ವತ ಶ್ರೇಣಿಯು ನರ್ಮದಾ ನದಿ ಕಣಿವೆಯಂಚು ಮೇಲ್ಭಾಗದ ಇಳಿಜಾರಿನಂತೆ (Escarpment) ಎತ್ತರವಾಗಿ ಕಂಡುಬರುತ್ತದೆ. ಇದು ನರ್ಮದಾ ನದೀ ಕಣಿವೆಗೆ ಸಮಾನಾಂತರವಾಗಿ ಪೂರ್ವದಿಂದ ಪಶ್ಚಿಮ ದಿಕ್ಕಿಗೆ ಸುಮಾರು 1200 ಕಿಲೋಮೀಟರ್‌ವರೆಗೆ ಹಬ್ಬಿದೆ. ಈ ಪರ್ವತ ಶ್ರೇಣಿಯು ಮರಳುಗಲ್ಲುಗಳು, ಸುಣ್ಣದಕಲ್ಲು ಮತ್ತು ಕಪ್ಪು ಮಣ್ಣಿನಿಂದಲೂ ಕೂಡಿದುದಾಗಿದೆ. ಈ ಪರ್ವತ ಶ್ರೇಣಿಗಳು ಗಂಗಾ ನದಿಭಾಗಗಳಿಗೂ ದಕ್ಷಿಣ ಭಾರತದ ನದಿಗಳಿಗೂ ನಡುವೆ ನೀರು ಬೇರ್ಪಡಿಸುವ ದಿಣ್ಣೆಯಾಗಿವೆ.

3. ಸಾತ್ಪುರ ಪರ್ವತ ಶ್ರೇಣಿ

ಸಾತ್ಪುರ ಪರ್ವತ ಶ್ರೇಣಿಯು ನರ್ಮದ ಮತ್ತು ತಪತಿ ನದಿಗಳ ನಡುವೆ ಇದೆ. ಇದು ಏಳು ಪರ್ವತಗಳಿಂದ ಮುಂದುವರಿದುದಾಗಿದೆ. ಇದು ಸುಮಾರು 900 ಕಿಲೋಮೀಟರ್‌ವರೆಗೆ ವಿಸ್ತರಿಸಿದೆ. ಸಾತ್ಪುರ ಪರ್ವತದ ಎತ್ತರ 900 ಮೀಟರ್‌ಗಳಿಗಿಂತಲೂ ಅಧಿಕವಾಗಿದೆ.

ಇ. ಪಶ್ಚಿಮ ಘಟ್ಟಗಳು

ಪಶ್ಚಿಮ ಘಟ್ಟಗಳು ಉತ್ತರ ದಕ್ಷಿಣಾಭಿಮುಖವಾಗಿ ವ್ಯಾಪಿಸಿ ದಖ್ಖನ್ ಪೀಠಭೂಮಿಗೆ ಪಶ್ಚಿಮದೆಲ್ಲೆಯಾಗಿ ರೂಪಿತವಾಗಿದೆ. ಇವು ಉತ್ತರದಲ್ಲಿ ತಪತಿ ನದಿಯಿಂದ ದಕ್ಷಿಣದ ಕನ್ಯಾಕುಮಾರಿಯವರೆಗೂ ಸುಮಾರು 1600 ಕಿಲೋಮೀಟರ್‌ವರೆಗೆ ಹರಡಿದೆ. ಪಶ್ಚಿಮ ಘಟ್ಟಗಳು ಪಶ್ಚಿಮ ಕರಾವಳಿ ಪ್ರದೇಶದಲ್ಲಿ ಲಂಬವಾಗಿ ಎತ್ತರವಾಗಿ ಕಂಡುಬರುತ್ತದೆ. ಆದ್ದರಿಂದ ಪಶ್ಚಿಮದಲ್ಲಿ ನದಿಗಳು ವೇಗವಾಗಿ ಹರಿಯುತ್ತವೆ. ಅಲ್ಲದೆ ಶರಾವತಿ ನದಿಯಲ್ಲಿ ಕಂಡುಬರುವ ಜೋಗ್ ಜಲಪಾತ(270ಮೀಟರ್)ದಂತಹ ಹಲವಾರು ಜಲಪಾತಗಳನ್ನುಂಟುಮಾಡುತ್ತವೆ. ಈ ಘಟ್ಟಗಳ

ಪೂರ್ವಭಾಗ ಸಾಮಾನ್ಯ ಇಳಿಜಾರಾಗಿ ಕಂಡುಬರುತ್ತದೆ. ಗೋದಾವರಿ, ಕೃಷ್ಣ ಮತ್ತು ಕಾವೇರಿ ನದಿಗಳು ಪೂರ್ವ ಇಳಿಜಾರಿನಲ್ಲಿ ಉಗಮವಾಗಿ ಪೂರ್ವಕ್ಕೆ ಹರಿದು ಬಂಗಾಳಕೊಲ್ಲಿಯನ್ನು ಸೇರುತ್ತವೆ.

ಥಾಲ್‌ಘಾಟ್, ಬೋರ್‌ಘಾಟ್ ಮತ್ತು ಪಾಲ್‌ಘಾಟ್(ಪಾಲಕ್ಕಾಡು) ಕಣಿವೆಗಳು ಪಶ್ಚಿಮ ಘಟ್ಟಗಳ ಮೂರು ಮುಖ್ಯ ಕಣಿವೆಗಳಾಗಿವೆ. ಪಶ್ಚಿಮದಲ್ಲಿ ಕೊಂಕಣ ತೀರಪ್ರದೇಶ ಮತ್ತು ಪೂರ್ವದಲ್ಲಿ ದಖ್ಖನ್ ಪೀಠಭೂಮಿಗಳ ನಡುವೆ ರಸ್ತೆ ಮತ್ತು ರೈಲು ಸಾರಿಗೆಗೂ ಈ ಕಣಿವೆಗಳು ಅತ್ಯಂತ ಉಪಯೋಗವಾಗಿವೆ.

ಪೂರ್ವಘಟ್ಟಗಳು ಮತ್ತು ಪಶ್ಚಿಮ ಘಟ್ಟಗಳು ನೀಲಗಿರಿ ಬೆಟ್ಟದಲ್ಲಿ ಒಂದುಗೂಡುತ್ತವೆ. ಇಲ್ಲಿ ಅತ್ಯಂತ ಎತ್ತರದ ಶಿಖರವಾದ ದೊಡ್ಡಬೆಟ್ಟ (2637 ಮೀಟರ್) ಶಿಖರವಿದೆ.

ಪಶ್ಚಿಮ ಘಟ್ಟಗಳ ದಕ್ಷಿಣ ಭಾಗದಲ್ಲಿರುವ ಪಾಲಕ್ಕಾಡು ಕಣಿವೆಯು ಕೇರಳದ ಸಮುದ್ರ ತೀರವನ್ನು ತಮಿಳುನಾಡಿನೊಡನೆ ರಸ್ತೆಗಳು ಮತ್ತು ರೈಲುಮಾರ್ಗಗಳ ಮೂಲಕ ಜೋಡಿಸಲ್ಪಡುತ್ತದೆ. ದಕ್ಷಿಣ ಭಾರತದ ಅತ್ಯಂತ ಎತ್ತರವಾದ ಶಿಖರ ಆನೈಮುಡಿ (2695 ಮೀಟರ್) ಆಗಿದೆ. ಇದರ ಉತ್ತರದಲ್ಲಿ ಆನೈಮಲೈ, ಈಶಾನ್ಯದಲ್ಲಿ ಪಳನಿಬೆಟ್ಟ ಮತ್ತು ದಕ್ಷಿಣದಲ್ಲಿ ಏಲಮಲೈಯೂ ಬೇರ್ಪಟ್ಟು ಹರಡಿವೆ.



ಪಶ್ಚಿಮ ಘಟ್ಟಗಳು

ಗಿರಿಧಾಮವಾದ ಕೋಡೈಕೆನಾಲ್ ಪಳನಿ ಬೆಟ್ಟದ ದಕ್ಷಿಣದ ತುದಿಯಲ್ಲಿದೆ. ಪಶ್ಚಿಮ ಘಟ್ಟಗಳು ಕನ್ಯಾಕುಮಾರಿಯ 20 ಕಿಲೋಮೀಟರ್ ಅಂತರದಲ್ಲಿ ಮುಕ್ತಾಯವಾಗುತ್ತವೆ.

ಪೂರ್ವಘಟ್ಟಗಳು

ಪೂರ್ವಘಟ್ಟಗಳು ಬಹುತೇಕವಾಗಿ ಪೂರ್ವ ಕರಾವಳಿಗೆ ಸಮಾನಾಂತರವಾಗಿ ಹರಡಿವೆ. ಇವು ಒರಿಸ್ಸಾದ ಮಹಾನದಿ ಮತ್ತು ತಮಿಳುನಾಡಿನ ವೈಗೈ ನದಿಗಳ ನಡುವೆ ವಿಭಾಗವಾಗಿ ಬೆಟ್ಟಗಳಂತೆ ಕಾಣುತ್ತವೆ. ಇವು ನಿರಂತರ ಪರ್ವತ ಶ್ರೇಣಿಗಳಲ್ಲ ಗೋದಾವರಿ ಮತ್ತು ಕೃಷ್ಣಾ ನದಿಗಳ ಮಧ್ಯಭಾಗದಲ್ಲಿ ಪೂರ್ವ ಘಟ್ಟಗಳು ಕಂಡುಬರುವುದಿಲ್ಲ. ಗೋದಾವರಿ ನದಿ ಕಣಿವೆಯ ಪೂರ್ವಘಟ್ಟಗಳನ್ನು ಉತ್ತರಭಾಗ ಮತ್ತು ದಕ್ಷಿಣ ಭಾಗವೆಂದು ಎರಡು ವಿಭಾಗಗಳಾಗಿ ವಿಂಗಡಿಸುತ್ತದೆ. ಇದರ ಉತ್ತರ ಭಾಗ 200 ಕಿಲೋಮೀಟರ್ ಅಗಲವನ್ನು, ದಕ್ಷಿಣ ಭಾಗ 100 ಕಿಲೋಮೀಟರ್ ಅಗಲವನ್ನು ಹೊಂದಿದೆ. ಇದರ ಉತ್ತರಭಾಗದಲ್ಲಿ ಅತ್ಯಂತ ಎತ್ತರವಾದ ಶಿಖರ 'ಮಹೇಂದ್ರಗಿರಿ' (1501 ಮೀಟರ್) ಇದೆ. ದಕ್ಷಿಣ ಭಾಗದಲ್ಲಿ 'ನಲ್ಲಮಲ' ಎಂಬ ಪ್ರಸಿದ್ಧಿ ಪಡೆದ ಪರ್ವತವಿದೆ. ಇದು ಸ್ಫಟಿಕಶಿಲೆ ಮತ್ತು ಜೇಡಿಮಣ್ಣಿನ ಒಂದು ಬಗೆಯಾದ ಪಾಳಿಕಲ್ಲು(ಸ್ಲೇಟು) ಗಳಿಂದಾದುದು. ಪೂರ್ವಘಟ್ಟಗಳ ದಕ್ಷಿಣಭಾಗದಲ್ಲಿರುವ ಬೆಟ್ಟಗಳು ಮತ್ತು ಪೀಠಭೂಮಿಗಳು ಕಡಿಮೆ ಎತ್ತರಹೊಂದಿ ಮುಂದೆ ದಕ್ಷಿಣದಲ್ಲಿ ಪೂರ್ವಘಟ್ಟಗಳು ಪಶ್ಚಿಮ ಘಟ್ಟಗಳೊಡನೆ ನೀಲಗಿರಿಯಲ್ಲಿ ಒಂದುಗೂಡುತ್ತವೆ.

ಪರ್ಯಾಯ ದ್ವೀಪದ ಪೀಠಭೂಮಿಗಳ ಗಿರಿಧಾಮಗಳು ಉದಕಮಂಡಲ(ಊಟಿ), ಕೋಡೈಕಾನೆಲ್, ಪಚ್ಚಮಾರ್ಗಿ(ಮ.ಪ್ರ.), ಮಹಾಬಲೇಶ್ವರ, ಕಾಂಡ್ಲಾ ಇತ್ಯಾದಿ.

4. ಕರಾವಳಿ ಬಯಲು ಪ್ರದೇಶಗಳು

ಪರ್ಯಾಯ ದ್ವೀಪ ಪೀಠಭೂಮಿಯನ್ನು ಸುತ್ತುವರಿದಿರುವ ಕರಾವಳಿ ಬಯಲು ಪ್ರದೇಶಗಳು ವ್ಯತ್ಯಾಸವಾದ ಅಗಲವನ್ನು ಹೊಂದಿವೆ. ಇದು ಪಶ್ಚಿಮದಲ್ಲಿ ಕಚ್‌ಕೊಲ್ಲಿಯಿಂದ ಪೂರ್ವಕ್ಕೆ ಗಂಗಾ–ಬ್ರಹ್ಮಪುತ್ರ ನದಿ ಬಯಲುಗಳವರೆಗೆ ಸುಮಾರು 6000 ಕಿಲೋಮೀಟರ್ ದೂರ ವಿಸ್ತರಿಸಿದೆ. ಪಶ್ಚಿಮ ಘಟ್ಟಗಳಿಗೂ ಅರಬ್ಬೀ ಸಮುದ್ರಕ್ಕೂ ನಡುವೆ ಇರುವ ಭೂಭಾಗವನ್ನು ಪಶ್ಚಿಮ ಕರಾವಳಿ ಬಯಲು ಪ್ರದೇಶ ಎನ್ನುತ್ತಾರೆ.

ಪೂರ್ವಘಟ್ಟಗಳಿಗೂ ಬಂಗಾಳಕೊಲ್ಲಿಗೂ ನಡುವೆ ಇರುವ ಭೂಭಾಗವನ್ನು ಪೂರ್ವಕರಾವಳಿ ಬಯಲುಪ್ರದೇಶ ಎನ್ನುತ್ತಾರೆ. ಈ ಎರಡೂ ಕರಾವಳಿ ಬಯಲು ಪ್ರದೇಶಗಳೂ ಭಾರತದ ದಕ್ಷಿಣದ ತುದಿಯಲ್ಲಿರುವ ಕನ್ಯಾಕುಮಾರಿಯಲ್ಲಿ ಸಂಧಿಸುತ್ತವೆ.

ಅ. ಪಶ್ಚಿಮ ಕರಾವಳಿ ಬಯಲು ಪ್ರದೇಶ

ಪಶ್ಚಿಮ ಕರಾವಳಿ ಬಯಲು ಪ್ರದೇಶವು ಉತ್ತರದಲ್ಲಿ ಕಚ್‌ಕೊಲ್ಲಿಯಿಂದ ದಕ್ಷಿಣದ ಕನ್ಯಾಕುಮಾರಿವರೆಗೆ ಹಬ್ಬಿದೆ. ಇದು ಗುಜರಾತನ್ನು ಬಿಟ್ಟು ಉಳಿದೆಲ್ಲಾ ಭಾಗಗಳಲ್ಲಿ ಕಿರಿದಾಗಿದೆ. ಇದರ ಸರಾಸರಿ ಅಗಲ ಸುಮಾರು 65 ಕಿಲೋಮೀಟರ್.

ಗುಜರಾತ್ ಬಯಲು ಪ್ರದೇಶ

ಗುಜರಾತ್ ಬಯಲು ಪ್ರದೇಶವು ಪೂರ್ವ ಕಚ್ ಮತ್ತು ಕಾಥೇವಾಡ ಭಾಗಗಳನ್ನು ಹೊಂದಿಕೊಂಡಂತೆ ನರ್ಮದ, ತಪತಿ, ಮಾಹಿ ಮತ್ತು ಸಾಬರಮತಿ ನದಿಗಳಿಂದ ರಚಿತವಾಗಿದೆ. ಈ ನದಿಗಳು ಪಶ್ಚಿಮ ಕರಾವಳಿ ಭಾಗಗಳಲ್ಲಿ ಡೆಲ್ಟಾಗಳನ್ನು ಉಂಟುಮಾಡುವುದಿಲ್ಲ. ಇದು ಗುಜರಾತಿನ ದಕ್ಷಿಣ ಭಾಗ ಮತ್ತು ಕ್ಯಾಂಬೆ ಕೊಲ್ಲಿಯ ಕರಾವಳಿ ಭಾಗಗಳನ್ನು ಒಳಗೊಂಡಿದೆ. ಇದು ಜೌಗು ನೆಲಗಳ ಮುಂದುವರಿಕೆಯಾಗಿದ್ದು, ಸಮುದ್ರದಲ್ಲಿ ಉಬ್ಬರದ ಅಲೆಗಳಿದ್ದಾಗ ಕರಾವಳಿಯಲ್ಲಿ ಪ್ರವಾಹ ಉಂಟಾಗುತ್ತದೆ.

ಕೊಂಕಣ ಬಯಲು ಪ್ರದೇಶ

ಗುಜರಾತಿನ ದಕ್ಷಿಣದಿಂದ ಗೋವಾವರೆಗೆ ಸುಮಾರು 500 ಕಿಲೋಮೀಟರ್‌ವರೆಗೆ ವ್ಯಾಪಿಸಿದೆ. ಇದರ ಅಗಲ ಸುಮಾರು 50ರಿಂದ 80 ಕಿಲೋಮೀಟರ್ ಇಲ್ಲಿ ಸಮುದ್ರದ ಅಲೆಯ ಕೊರೆತದಿಂದಾಗಿ ಉಂಟಾದ ಕಡಿದಾದ ಬಂಡೆಗಳು, ಒಂದು ಬಗೆಯ ಹವಳದಬಂಡೆಗಳು(ಬಂಡೆಸಾಲುಗಳು) ಮತ್ತು ದ್ವೀಪಗಳು ಮುಂಬೈನ ದಕ್ಷಿಣದಲ್ಲಿ ಕಂಡುಬರುತ್ತವೆ. ಕೊಂಕಣ ಕರಾವಳಿಯು ಕೊಲ್ಲಿಗಳ ಮತ್ತು ಮರಳಿನ ದಂಡೆಗಳ ಮುಂದುವರಿಕೆಯಾಗಿದೆ. ಇದರ ಉತ್ತರ ಭಾಗವು ಸಂಪೂರ್ಣವಾಗಿ ಮರಳಿನಿಂದ ಆವೃತವಾಗಿದ್ದು ದಕ್ಷಿಣ ಭಾಗವು ವಿಕೃತ ಸ್ವರೂಪದ ಬಂಡೆಗಳಿಂದ ಕೂಡಿದೆ.

ಕರ್ನಾಟಕ ಬಯಲು ಪ್ರದೇಶ

ಕರ್ನಾಟಕ ಬಯಲುಪ್ರದೇಶವು ಗೋವಾದಿಂದ ಮಂಗಳೂರಿನವರೆಗೆ ವ್ಯಾಪಿಸಿದೆ. ಇದರ ಸರಾಸರಿ ಅಗಲ ಸುಮಾರು 30ರಿಂದ 50 ಕಿಲೋಮೀಟರ್‌ವರೆಗಿದೆ. ಈ ಬಯಲು ಪ್ರದೇಶವು ಕೆಲವು ಸ್ಥಳಗಳಲ್ಲಿ ಕಿರಿದಾದ ಇಳಿಜಾರುಗಳಿರುವುದರಿಂದ ಜಲಪಾತಗಳನ್ನುಂಟುಮಾಡುತ್ತದೆ.


ಮಲಬಾರ್ ಬಯಲು ಪ್ರದೇಶ

ಮಲಬಾರ್ ಬಯಲು ಪ್ರದೇಶವು ಮಂಗಳೂರು–ಕನ್ಯಾಕುಮಾರಿಗಳ ನಡುವೆಯಿದೆ. ಇದು 50 ಕಿಲೋಮೀಟರ್ ಉದ್ದವನ್ನು ಮತ್ತು 25ರಿಂದ 100 ಕಿಲೋಮೀಟರ್‌ವರೆಗಿನ ವ್ಯತ್ಯಾಸವಾದ ಅಗಲವನ್ನು ಹೊಂದಿದೆ. ಇಲ್ಲಿ ವಿಶೇಷ ಲಕ್ಷಣಗಳಾಗಿ ಸರೋವರಗಳು, ಉಪ್ಪು ತಯಾರಿಸುವ ಬಯಲುಗಳು ಮತ್ತು ಕಡಲಿನ ಹಿನ್ನೀರು(Back Water) ಪ್ರದೇಶಗಳನ್ನು ಕಾಣಬಹುದು. ವೇಂಬನಾಡು ಸರೋವರವು ಕೇರಳದ ಅತಿದೊಡ್ಡ ಸರೋವರವಾಗಿದೆ. ಅನೇಕವಾಗಿ ಹಿನ್ನೀರು ಪ್ರದೇಶಗಳು ಕರಾವಳಿ ಬಯಲು ಪ್ರದೇಶಗಳಿಗೆ ಸಮನಾಗಿವೆ. ಉಪ್ಪು ತಯಾರಿಸುವ ಬಯಲು ಮತ್ತು ಹಿನ್ನೀರು ಬಯಲು ಪ್ರದೇಶಗಳು ಕಾಲುವೆಗಳಿಂದ ಸಂಪರ್ಕಿಸಲ್ಪಟ್ಟು ಸಣ್ಣ ಹಡಗುಗಳಿಂದ ಸುಲಭವಾದ ಜಲಸಂಚಾರಕ್ಕೆ ನೆರವಾಗಿವೆ.

ಆ. ಪೂರ್ವ ಕರಾವಳಿ ಬಯಲು ಪ್ರದೇಶ

ಪೂರ್ವ ಕರಾವಳಿ ಬಯಲು ಪ್ರದೇಶವು ಪಶ್ಚಿಮ ಬಂಗಾಳದ ನದಿ ಮುಖಜಭೂಮಿಯಿಂದ ಕನ್ಯಾಕುಮಾರಿವರೆಗೆ ವ್ಯಾಪಿಸಿದೆ. ಇದು ಪೂರ್ವಘಟ್ಟಗಳ ಮತ್ತು ಬಂಗಾಳ ಕೊಲ್ಲಿಯ ನಡುವೆ ಕಂಡುಬರುತ್ತದೆ. ಪೂರ್ವ ಕರಾವಳಿ ಬಯಲು ಪ್ರದೇಶವು ವಿಸ್ತಾರವಾಗಿ ವ್ಯಾಪಿಸಿದೆ. ಪಶ್ಚಿಮ ಕರಾವಳಿ ಬಯಲು ಪ್ರದೇಶಕ್ಕಿಂತ ಅಗಲವಾಗಿಯೂ ಕಂಡುಬರುತ್ತದೆ. ಪರ್ಯಾಯ ದ್ವೀಪ ಪೀಠಭೂಮಿ ಪರ್ವತ ಶ್ರೇಣಿ ಪರ್ವತ ಶಿಖರ ಪರ್ವತ ಕಣಿವೆ ಇದರ ಸರಾಸರಿ ಅಗಲ 120 ಕಿಲೋಮೀಟರ್. ಆದರೆ ಮುಖದ್ವಾರಗಳಲ್ಲಿ ಇದರ ಅಗಲ ಸುಮಾರು 200 ಕಿಲೋಮೀಟರ್‌ವರೆಗೆ ಕಂಡುಬರುತ್ತದೆ. ಇದು ನೇರವಾಗಿ ಕರಾವಳಿಯನ್ನು ಮತ್ತು ಅತ್ಯಂತ ಸುಂದರ ರಮಣೀಯವಾದ ಚೆನ್ನೈನ ಸಮುದ್ರ ದಡದಂತಹ ಬಯಲು ಪ್ರದೇಶಗಳನ್ನು ಹೊಂದಿದೆ. ಮಹಾನದಿ ಮತ್ತು

ಪರ್ಯಾಯ ದ್ವೀಪ ಭಾರತದ ನೈಸರ್ಗಿಕ ರಚನೆ



ಕೃಷ್ಣಾ ನದಿಗಳ ನಡುವೆ ಇರುವ ಕರಾವಳಿಯನ್ನು ಚೋಳಮಂಡಲ ಕರಾವಳಿ ಬಯಲು ಪ್ರದೇಶವೆಂದು ಕರೆಯಲಾಗುತ್ತದೆ.

ಉತ್ಕಲ್ ಕರಾವಳಿ ಬಯಲು ಒರಿಸ್ಸಾ ಸಮುದ್ರ ತೀರದಿಂದ 400 ಕಿ.ಮೀ ದೂರದವರೆಗೆ ವ್ಯಾಪಿಸಿ ಮಹಾನದಿ ಬಯಲನ್ನು ಒಳಗೊಂಡಿದೆ. ಇದರ ಕರಾವಳಿಯು ನೇರವಾಗಿಯೂ ಮತ್ತು ಮರಳು ದಿಬ್ಬಗಳನ್ನು ಎಲ್ಲೆಗಳನ್ನಾಗಿಯೂ ಮಾಡಿಕೊಂಡಿದೆ. ಮಹಾನದಿಯ ದಕ್ಷಿಣಕ್ಕಿರುವ 'ಚಿಲ್ಕಾ ಸರೋವರ'ವು ಭಾರತದ ಅತಿ ದೊಡ್ಡ ಸರೋವರವಾಗಿದೆ.

ಆಂಧ್ರ ಕರಾವಳಿ ಬಯಲು ಬೆರ್‌ಹಂಪೂರ್ ಮತ್ತು ಪಳವೇರ್ಕಾಡು (ಪುಲಿಕಾಟ್) ಸರೋವರದ ನಡುವೆ ಇರುವ ಭಾಗವಾಗಿದೆ. ಈ ಕರಾವಳಿ ಬಯಲು ಗೋಧಾವರಿ, ಕೃಷ್ಣಾ ನದಿ ಕರಾವಳಿ ಬಯಲುಗಳಿಂದಾದುದಾಗಿದೆ. ಆಂಧ್ರ ಕರಾವಳಿ ಬಯಲುಪ್ರದೇಶವು ನೇರವಾಗಿಯೂ, ಉತ್ತಮ ಬಂದರುಗಳ ನಿರ್ಮಾಣಕ್ಕೆ ಯೋಗ್ಯವಾದುದಾಗಿಯೂ ಇದೆ. ವಿಶಾಖಪಟ್ಟಣ ಮತ್ತು ಮಚಲಿಪಟ್ಟಣ ಇವುಗಳು ಉತ್ತಮ ಬಂದರುಗಳಿಗೆ ಉದಾಹರಣೆಗಳಾಗಿವೆ. ಆಂಧ್ರ ಕರಾವಳಿ ಬಯಲಿನಲ್ಲಿ ಕೊಲ್ಲೇರು ಸರೋವರ ಇದೆ.

ತಮಿಳುನಾಡು ಕರಾವಳಿ ಬಯಲು ಪುಲಿಕಾಟ್ ಸರೋವರದಿಂದ ಕನ್ಯಾಕುಮಾರಿವರೆಗೆ 1076 ಕಿ.ಮೀ ದೂರದವರೆಗೆ ವ್ಯಾಪಿಸಿದೆ. ಇದರ ಸರಾಸರಿ ಅಗಲ ಸುಮರು 100 ಕಿ.ಮೀ ಆಗಿದೆ. ಫಲವತ್ತಾದ ಮಣ್ಣು ಮತ್ತು ಅಭಿವೃದ್ಧಿಪಡಿಸಿದ ನೀರಾವರಿ ವಸತಿಗಳು ಕಾವೇರಿ ನದಿ ಬಯಲುಪ್ರದೇಶವನ್ನು 'ದಕ್ಷಿಣ ಭಾರತದ ಕಣಜ'ವನ್ನಾಗಿಸಿದೆ.

5. ಭಾರತದ ದ್ವೀಪಗಳು

ಭಾರತದ ಕೇಂದ್ರಾಡಳಿತ ಪ್ರದೇಶಗಳಾದ ಅಂಡಮಾನ್ – ನಿಕೋಬಾರ್ ದ್ವೀಪಗಳು ಬಂಗಾಳಕೊಲ್ಲಿಯಲ್ಲಿಯೂ, ಲಕ್ಷದ್ವೀಪಗಳು ಅರಬ್ಬೀ ಸಮುದ್ರದಲ್ಲಿಯೂ ಇವೆ.

ಅವುಗಳು ಭಾರತದ ಭೂಭಾಗದಿಂದ ಬಹುದೂರದಲ್ಲಿವೆ. ಅಂಡಮಾನ್–ನಿಕೋಬಾರ್ ದ್ವೀಪಗಳು 6° ಉತ್ತರ ಅಕ್ಷಾಂಶದಿಂದ 14° ಉತ್ತರ ಅಕ್ಷಾಂಶದವರೆಗೂ ಮತ್ತು 90° ಪೂರ್ವ ರೇಖಾಂಶದಿಂದ 94° ಪೂರ್ವ ರೇಖಾಂಶದವರೆಗೂ ಕಂಡುಬರುತ್ತವೆ. ಇವು ಚಿಕ್ಕದಾದ ಮತ್ತು ದೊಡ್ಡದಾದ ಸುಮಾರು 572 ದ್ವೀಪಗಳನ್ನು ಹೊಂದಿವೆ. ಇವುಗಳಲ್ಲಿ 38 ದ್ವೀಪಗಳು ಮಾತ್ರ ಜನರ ವಾಸಸ್ಥಳಗಳಾಗಿವೆ. ಇದರ ಒಟ್ಟು ವಿಸ್ತೀರ್ಣ 8249 ಚದುರ ಕಿ.ಮೀ ಅಂಡಮಾನ್ ದ್ವೀಪಸಮೂಹಗಳು ನಿಕೋಬಾರ್ ದ್ವೀಪಸಮೂಹಗಳಿಂದ 10° ಕಾಲುವೆಯಿಂದ ಪ್ರತ್ಯೇಕಿಸಲ್ಪಟ್ಟಿವೆ.




ಅಂಡಮಾನ್ ದ್ವೀಪಗಳು

ಅಂಡಮಾನ್–ನಿಕೋಬಾರ್‌ನ ದಕ್ಷಿಣದ ತುದಿಯನ್ನು 'ಇಂದಿರಾ ಪಾಯಿಂಟ್' ಎನ್ನುವರು. ಅಂಡಮಾನ್ ದ್ವೀಪಗಳು ಒಂದರೊಡನೊಂದು ಸೇರಿದಂತೆ ತೋರುತ್ತವೆ.

ಅದರಲ್ಲಿರುವ 25 ದ್ವೀಪಗಳಲ್ಲಿ ಮಾತ್ರ ಜನರು ವಾಸಿಸಿದ್ದಾರೆ. ನಿಕೋಬಾರ್ ದ್ವೀಪಸಮೂಹಗಳಲ್ಲಿಯೂ 13 ದ್ವೀಪಗಳಲ್ಲಿ ಮಾತ್ರ ಜನರು ವಾಸಿಸಿದ್ದಾರೆ. ದ್ವೀಪ ಸಮೂಹಗಳು ಹಲವು ಮರಳುಗಲ್ಲುಗಳು ಸುಣ್ಣದ ಕಲ್ಲು ಮತ್ತು ಜೇಡಿಮಣ್ಣಿನಿಂದಾಗಿವೆ. ಇಲ್ಲಿರುವ ದ್ವೀಪಗಳಲ್ಲಿ ಅತಿ ಹೆಚ್ಚಿನವು ಜ್ವಾಲಾಮುಖಿಗಳಿಂದ ಮತ್ತು ಕೆಲವು ಹವಳದ ಬಂಡೆಗಳ ಸಾಲುಗಳಿಂದಾದುದಾಗಿವೆ.

ಕೆಲವು ದ್ವೀಪಗಳು ಗರಿಷ್ಠ 750 ಮೀಟರ್ ಎತ್ತರವುಳ್ಳ ಪರ್ವತಗಳಾಗಿಯೂ ಇವೆ. ಇಲ್ಲಿ ಅಧಿಕ ಉಷ್ಣಾಂಶ ಮತ್ತು ಅಧಿಕ ತೇವಾಂಶದಿಂದ ಕೂಡಿದವಾಯುಗುಣವಿರುವುದರಿಂದ ದಟ್ಟವಾದ ಕಾಡುಗಳು ಮತ್ತು ತೆಂಗಿನ ತೋಪುಗಳು ಕಂಡುಬರುತ್ತವೆ.

ಅರಬ್ಬೀ ಸಮುದ್ರದಲ್ಲಿರುವ ಲಕ್ಷದ್ವೀಪ ಸಮೂಹಗಳಲ್ಲಿರುವ 27 ದ್ವೀಪಗಳಲ್ಲಿ 11 ದ್ವೀಪಗಳಲ್ಲಿ ಮಾತ್ರ ಜನರು ವಾಸಿಸುವರು. ಲೇಕ್ಕಡೀವ್ಸ್, ಮಿನಿಕಾಯ್ ಮತ್ತು ಅಮಿನ್‌ದಿವಿ ದ್ವೀಪಸಮೂಹಗಳನ್ನು 1973ರಲ್ಲಿ ಲಕ್ಷದ್ವೀಪ(ಒಂದು ಲಕ್ಷ ದ್ವೀಪಗಳು) ಎಂದು ಪುನರ್‌ನಾಮಕರಣವಾಯಿತು. ಲಕ್ಷದ್ವೀಪ ಸಮೂಹಗಳು 110 ಚ.ಕಿ.ಮೀ ವಿಸ್ತಾರದಲ್ಲಿ ಅಲ್ಲಲ್ಲಿ ಹಂಚಿಕೆಯಾಗಿ



ಕಂಡುಬರುತ್ತವೆ. ಲಕ್ಷದ್ವೀಪಗಳು ಕೇರಳ ಕರಾವಳಿಯ ನೈರುತ್ಯದಲ್ಲಿ 200ರಿಂದ 500 ಕಿ.ಮೀ ದೂರದಲ್ಲಿವೆ. ಇವೆಲ್ಲವೂ ಹವಳದ ಬಂಡೆಗಳ ಸಾಲುಗಳಿಂದ ಉಂಟಾದವುಗಳಾಗಿವೆ.

ಭಾರತದ ಭೂರಚನೆಯ ಪ್ರಾಮುಖ್ಯತೆ

ಉತ್ತರದ ಪರ್ವತಗಳು

i) ಭಾರತದ ಉತ್ತರ ಭಾಗದಲ್ಲಿರುವ ಹಿಮಾಲಯ ಪರ್ವತಗಳು ನೈರುತ್ಯ ಮಾರುತವನ್ನು ತಡೆದು, ಧಾರಾಳವಾದ ಮಳೆ ಮತ್ತು ಇಬ್ಬನಿಯನ್ನು ನಮಗೆ ತರುತ್ತವೆ. ಈ ಪರ್ವತಗಳಿಲ್ಲದಿದ್ದರೆ ಭಾರತದ ಉಪಖಂಡದ ಬಹುತೇಕ ಭಾಗವು ಉಷ್ಣದಿಂದ ಕೂಡಿದ ಶುಷ್ಕ ಮರುಭೂಮಿಯಾಗಿ ಬದಲಾವಣೆಯಾಗುತ್ತಿತ್ತು.

ii) ಹಿಮಾಲಯ ಪರ್ವತಗಳು ಭಾರತದ ಉಪಖಂಡದ ನೈಸರ್ಗಿಕ ಎಲ್ಲೆಯಾಗಿವೆ. ಇವುಗಳನ್ನು ಇಬ್ಬನಿಯು ಸದಾಕಾಲ ಆವರಿಸಿಕೊಂಡಿರುವುದರಿಂದ ವಿದೇಶಿ ದಾಳಿಯನ್ನು ತಡೆಯುತ್ತದೆ.

iii) ಹಿಮಾಲಯ ಪರ್ವತಗಳು ಗಂಗಾ ಹಾಗೂ ಬ್ರಹ್ಮಪುತ್ರ ಗಳಂತಹ ಬತ್ತಿಹೋಗದ ನದಿಗಳ ಉಗಮಸ್ಥಳವಾಗಿ ರಚನೆಯಾಗಿದೆ.

iv) ಇದು ಹಲವು ಬೇಸಿಗೆ ವಾಸಸ್ಥಳಗಳು ಹಾಗೂ ಪುಣ್ಯಕ್ಷೇತ್ರಗಳನ್ನೂ ಹೊಂದಿದೆ.

v) ಇದು ಅರಣ್ಯ ಆಧಾರಿತ ಕೈಗಾರಿಕೆಗಳಿಗೆ ಕಚ್ಚಾವಸ್ತುಗಳನ್ನು ಪೂರೈಸುತ್ತದೆ.

ಉತ್ತರದ ಮಹಾಮೈದಾನಗಳು

ಉತ್ತರದ ಮಹಾಮೈದಾನಗಳು ಆರ್ಥಿಕ ಮತ್ತು ಸಾಮಾಜಿಕವಾಗಿ ಪ್ರಮುಖವಾದವು. ಏಕೆಂದರೆ ಅದರ ಫಲವತ್ತಾದ ಮೆಕ್ಕಲು ಮಣ್ಣು, ಸಮತಟ್ಟಾದ ಭೂರಚನೆ, ನಿಧಾನವಾಗಿ ಹರಿಯುವ ಬತ್ತಿಹೋಗದ ನದಿಗಳು, ಸಾಧ್ಯವಾದ ವಾಯುಗುಣ ಮುಂತಾದವುಗಳಿಂದಾಗಿ ವ್ಯವಸಾಯ ಮತ್ತು ವ್ಯಾಪಾರವು ಉನ್ನತವಾಗಿ ಕಂಡುಬರುತ್ತವೆ.

ಪರ್ಯಾಯದ್ವೀಪ ಪೀಠಭೂಮಿ

ಪರ್ಯಾಯ ಪೀಠಭೂಮಿಯು ಅಧಿಕವಾದ ಖನಿಜ ಸಂಪನ್ಮೂಲಗಳನ್ನು ಹೊಂದಿದೆ. ಕಬ್ಬಿಣ, ಮ್ಯಾಂಗನೀಸ್, ತಾಮ್ರ, ಬಾಕ್ಸೈಟ್, ಮೈಕಾ, ಕ್ರೋಮಿಯಂ ಮತ್ತು ಸುಣ್ಣದ ಕಲ್ಲುಗಳನ್ನು ಅಧಿಕ ಪ್ರಮಾಣದಲ್ಲಿ ಹೊಂದಿದೆ.

ಕರಾವಳಿ ಬಯಲುಪ್ರದೇಶಗಳು

ದೊಡ್ಡ ಮತ್ತು ಚಿಕ್ಕ ಬಂದರುಗಳು ಕರಾವಳಿ ಭಾಗಗಳಲ್ಲಿ ಅಧಿಕ ಪ್ರಮಾಣದಲ್ಲಿ ಅಭಿವೃದ್ಧಿ ಹೊಂದಿದೆ. ಇವು ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ವ್ಯಾಪಾರದ ಅಭಿವೃದ್ಧಿಯಲ್ಲಿ ಬಹುಮುಖ್ಯಪಾತ್ರ ವಹಿಸಿವೆ.

ಕಾಲುವೆ–ನದಿಗಳು ಮತ್ತು ಸರೋವರಗಳು

ನದಿಗಳು ಮತ್ತು ಅದರ ಉಪನದಿಗಳೂ ಭೂಭಾಗದ ಪ್ರಮುಖವಾದ ಕಾಲುವೆಗಳಾಗಿವೆ. ನದಿಗಳು ನಮಗೆ ಹಲವು ರೀತಿಯಲ್ಲಿ ಉಪಯೋಗವಾಗುತ್ತವೆ. ಅದು ಗೃಹ ಬಳಕೆಗೆ ಬೇಕಾದ ನೀರನ್ನೂ, ನೀರಾವರಿಗೂ, ಸಂಚಾರಕ್ಕೂ ಮತ್ತು ಜಲಕ್ರೀಡೆಗಳಿಗೂ ಅಗತ್ಯವಾದ ನೀರನ್ನು ಕೊಡುವುದರೊಂದಿಗೆ, ಬೆಟ್ಟಗಳಿಂದ ಮೆಕ್ಕಲು ಮಣ್ಣನ್ನು ಮೈದಾನ ಪ್ರದೇಶಗಳಿಂದಲೂ ನದಿ ಬಯಲು ಪ್ರದೇಶಗಳಿಂದಲೂ ಹೊತ್ತು ತರುತ್ತದೆ. ಈ ಭಾಗದಲ್ಲಿರುವ ಫಲವತ್ತಾದ ಮೆಕ್ಕಲು ಮಣ್ಣು ಪ್ರತಿಯೊಂದು ಬಾರಿಯೂ ಪ್ರವಾಹ ಸಂಭವಿಸುವಾಗ ನವೀಕರಿಸುತ್ತದೆ. ಆದ್ದರಿಂದಲೇ ನದಿಗಳು ಮಾನವ ಜನಾಂಗಕ್ಕೂ ಮತ್ತು ಇತರ ಜೀವರಾಶಿಗಳಿಗೂ ಮಹಾ ವರಪ್ರಸಾದವೆಂಬುದಾಗಿ ಭಾವಿಸಲ್ಪಟ್ಟಿವೆ.


ನದಿಗಳ ಉಗಮ ಮತ್ತು ಸನ್ನಿವೇಶ

ಪರ್ವತಗಳು ಅತ್ಯಧಿಕವಾಗಿ ಮಳೆಯನ್ನು ಪಡೆಯುತ್ತವೆ. ಇದರಿಂದ ಬಹುತೇಕ ನದಿಗಳು ಅಲ್ಲಿ ಉಗಮವಾಗಿ ಉಪನದಿಗಳೊಡನೆ ಸೇರಿ ಪ್ರಮುಖ ನದಿಯಾಗಿ ರೂಪತಾಳಿ ಅವುಗಳು ಬೇರೆಬೇರೆ ಸ್ಥಳಗಳಲ್ಲಿ ಅದರ ಮಾರ್ಗದಲ್ಲಿ ಹರಿದು ಸಮುದ್ರವನ್ನು ಸೇರುತ್ತವೆ. ಇದರಲ್ಲಿ ಪ್ರಧಾನವಾದವುಗಳನ್ನು ನದಿಗಳೆಂದೂ, ಇನ್ನಿತರ ನದಿಗಳನ್ನು ಉಪನದಿಗಳೆಂದೂ ಕರೆಯುವರು. ಇವು ಒಂದುಗೂಡಿ ನದಿಗಳ ರಚನೆಯಾಗುವುದು ಕಾಲುವೆಯ ರಚನೆಯು ನೀರಿನ ಪ್ರಮಾಣ, ನೀರಿನ ವೇಗ ಇವುಗಳನ್ನಾಧರಿಸಿ ಸಮುದ್ರದಲ್ಲೋ ಅಥವಾ ಒಳನಾಡು ಸರೋವರಗಳಲ್ಲೋ ಸೇರುತ್ತವೆ.

ಒಳನಾಡು ಕಾಲುವೆ

ಅರಾವಳಿ ಪರ್ವತಶ್ರೇಣಿಯ ಪಶ್ಚಿಮದಲ್ಲಿ ಒಳನಾಡು ಕಾಲುವೆ ಕಂಡುಬರುತ್ತದೆ. ಈ ಭಾಗದಲ್ಲಿ ಲೂನಿ ನದಿ ಹರಿಯುತ್ತದೆ. ಈ ನದಿಯು ಅಜ್ಮೀರಿನ ನೈರುತ್ಯದಲ್ಲಿ ಅರಾವಳಿ ಪರ್ವತ ಶ್ರೇಣಿಗಳಲ್ಲಿ ಉಗಮವಾಗಿದೆ. ಹೀಗೆ ಗೋವಿಂದ್‌ಗರ್ ಎಂಬ ಸ್ಥಳವನ್ನು ದಾಟಿ ಸರಸ್ವತಿ ನದಿಯೊಡನೆ ಬಂದು ಸೇರುತ್ತದೆ. ಈ ಸರಸ್ವತಿ ನದಿಯು ಪುಷ್ಕರ್ ಸರೋವರದಲ್ಲಿ ಉಗಮವಾಗಿದೆ. ಇದಕ್ಕೆ ಎರಡು ಉಪನದಿಗಳಿವೆ. ಅವು ಅರಾವಳಿ ಪರ್ವತ ಶ್ರೇಣಿಗಳಲ್ಲಿ ಉಗಮವಾಗಿವೆ. ಇವು ಸುಖ್ರೀನದಿ ಮತ್ತು ಜವ್ವಾಯ್ ನದಿಗಳಾಗಿವೆ. ಸುಮಾರು 320 ಕಿ.ಮೀ ದೂರದವರೆಗೆ ಹರಿದ ನಂತರ ಲೂನಿ ನದಿಯು ಗುಜರಾತಿನ ಕಚ್ ಕೊಲ್ಲಿಯಲ್ಲಿರುವ ರಾನ್ ಮುಖ್ಯಭಾಗದಲ್ಲಿ ಫಲವತ್ತಾದ ಭೂಭಾಗದಲ್ಲಿ ಮರೆಯಾಗುತ್ತದೆ. ಈ ನದಿಯು ಬರಡಾದ ದಕ್ಷಿಣ ರಾಜಸ್ಥಾನದ ಭಾಗಕ್ಕೆ ಹೆಚ್ಚು ಅನುಕೂಲಗಳನ್ನು ಮಾಡಿಕೊಡುತ್ತದೆ. ಲೂನಿ ನದಿಯ ನೀರು ಬಾಲೋಟ್ರಾದ ವರೆಗೆ ರುಚಿಕರವಾಗಿದ್ದಾಗ್ಯೂ ಕಚ್‌ಕೊಲ್ಲಿಯಲ್ಲಿರುವ ರಾನ್ ಭಾಗದಲ್ಲಿ ಲವಣಯುಕ್ತದೊಡನೆ ಕಂಡುಬರುತ್ತದೆ.

ಭಾರತ–ನದಿಗಳು


ಉ
ಪ
ಪೂ
ದ
ಸಿಂಧೂ
ಉಲಾರ್ ಸರೋವರ
ಸಿಂಧೂ
ಜೀಲಂ
ಚೀನಾಬ್
ರಾವಿ
ಬಿಯಾಸ್
ಸಟ್ಲೆಜ್
ಗೋವಿಂದ ಸಾಗರ
ಸಾಂಗ್ಪೋ
ಗಂಗಾ
ಸಾರದ
ಗಾಗ್ರಾ
ಗಂಡಕಿ
ಕೋಸಿ
ಬ್ರಹ್ಮಪುತ್ರ
ಸಾಂಬಾರ್ ಉಪ್ಪು ಸರೋವರ
ಯಮುನಾ
ಚಂಬಲ್
ರಾಣಾ ಪ್ರತಾಪ್ ಸಾಗರ
ಶ್ರೀ ಗಂಗಾ
ಗಾಂಧಿ ಸಾಗರ
ಬೆಟ್ವಾ
ಗೋವಿಂದ ವಲ್ಲಭ ಪಂತ್ ಸಾಗರ
ನರ್ಮದಾ
ತಪತ್ರಿ
ಪೆನಗಂಗಾ
ಮಹಾನದಿ
ಗೋದಾವರಿ
ಚಿಲ್ಕಾ ಸರೋವರ
ಅರಬ್ಬೀ ಸಮುದ್ರ
ವಿಜಾಂ ಸಾಗರ
ಬಂಗಾಳ ಕೊಲ್ಲಿ
ಕೃಷ್ಣಾ
ನಾಗರ್ಜುನ ಸಾಗರ
ಕೊಲ್ಲೇರು ಸರೋವರ
ಲಿಂಗನಮಕ್ಕಿ ಜಲಾಶಯ
ತುಂಗಭದ್ರಾ
ಕೃಷ್ಣರಾಜಸಾಗರ ಜಲಾಶಯ
ಪುಲಿಕಾಟ್ ಸರೋವರ
ಕಾವೇರಿ
ವೇಂಬನಾಡು ಸರೋವರ
ಲಕ್ಷ ದ್ವೀಪಗಳು
ಶ್ರೀಲಂಕಾ
ಹಿಂದೂ ಮಹಾಸಾಗರ

ಭಾರತ–ನದಿಗಳು

ಹೆಸರು	ಉದ್ದ ಕಿ.ಮೀ	ವಿಸ್ತೀರ್ಣ ಚ.ಕಿ.ಮೀ	ನದಿಯ ಉಗಮಸ್ಥಾನ	ಸೇರುವ ಸ್ಥಳ	ಪ್ರಯೋಜನ ಪಡೆಯುವ ಭಾಗ
ಸಿಂಧೂ	3100	3,21,290	ಕೈಲಾಶ್ ಪರ್ವತ ಶ್ರೇಣಿ	ಅರಬ್ಬೀ ಸಮುದ್ರ	ಭಾರತ, ಪಾಕಿಸ್ತಾನ
ಗಂಗಾ	2480	3,37,000	ಅಲಕಾನಂದ	ಬಂಗಾಳ ಕೊಲ್ಲಿ	ಉತ್ತರ ಪ್ರದೇಶ, ಬಿಹಾರ್, ಪಶ್ಚಿಮ ಬಂಗಾಳ
ಯಮುನಾ	1370	3,59,000	ಯಮುನೇತ್ರಿ	ಬಂಗಾಳ ಕೊಲ್ಲಿ	ದೆಹಲಿ, ಹರಿಯಾಣ, ಉತ್ತರಪ್ರದೇಶ
ಬ್ರಹ್ಮಪುತ್ರ	725	2,40,000	ಸಮಾಯುಂಗ್ ಹಿಮನದಿ	ಬಂಗಾಳ ಕೊಲ್ಲಿ	ಈಶಾನ್ಯ ರಾಜ್ಯಗಳು
ಕಾವೇರಿ	805	87,900	ಕೊಡಗು ಬೆಟ್ಟ	ಬಂಗಾಳ ಕೊಲ್ಲಿ	ಕರ್ನಾಟಕ, ತಮಿಳುನಾಡು
ಗೋದಾವರಿ	1465	3,12,812	ನಾಸಿಕ್ ಬೆಟ್ಟಗಳು	ಬಂಗಾಳ ಕೊಲ್ಲಿ	ಆಂಧ್ರಪ್ರದೇಶದ ಆಗ್ನೇಯ ಭಾಗ
ಕೃಷ್ಣ	1400	2,59,000	ಮಹಾಬಲೇಶ್ವರ್	ಬಂಗಾಳ ಕೊಲ್ಲಿ	ಮಹಾರಾಷ್ಟ್ರ, ಆಂಧ್ರಪ್ರದೇಶ
ನರ್ಮದಾ	1312	98,796	ಅಮರ್‌ಕಂಟಕ್ ಬೆಟ್ಟ	ಅರಬ್ಬೀ ಸಮುದ್ರ	ಮಧ್ಯ ಪ್ರದೇಶ, ಮಹಾರಾಷ್ಟ್ರ
ತಪತಿ	724	65,145	ಪಚ್‌ಮರಿ ಬೆಟ್ಟ	ಅರಬ್ಬೀ ಸಮುದ್ರ	ಮಧ್ಯ ಪ್ರದೇಶ, ಮಹಾರಾಷ್ಟ್ರ
ಗೋಮತಿ	805	30,437	ಹಿಮಾಲಯ ಪರ್ವತ	ಬಂಗಾಳ ಕೊಲ್ಲಿ	ಉತ್ತರ ಪ್ರದೇಶ
ಗಾಗ್ರಾ	1080	1,27,500	ಸಿವಾಲಿಕ್ ಪರ್ವತ ಶ್ರೇಣಿ	ಥಾರ್ ಮರುಭೂಮಿ ಭಾಗಗಳಲ್ಲಿ ಮರೆಯಾಗುವುದು	ಹರಿಯಾಣ, ಪಂಜಾಬ್, ಉತ್ತರ ಪ್ರದೇಶ
ಮಹಾನದಿ	858	1,41,600	ಸಾತ್ಪುರ ಪರ್ವತ ಶ್ರೇಣಿ	ಬಂಗಾಳ ಕೊಲ್ಲಿ	ಚತ್ತಿಸ್‌ಘರ್, ಜಾರ್ಖಂಡ್
ವೈಗೈ	240	7,000	ಏಲಗಿರಿ ಬೆಟ್ಟ	ಬಂಗಾಳ ಕೊಲ್ಲಿ	ತಮಿಳುನಾಡು
ಪೆರಿಯಾರ್	244	5,398	ಏಲಗಿರಿ ಬೆಟ್ಟ	ಬಂಗಾಳ ಕೊಲ್ಲಿ	ತಮಿಳುನಾಡು, ಕೇರಳ
ತಾಮ್ರಪರ್ಣಿ	123	4400	ಅಗಸ್ತಿಯರ್ ಬೆಟ್ಟ	ಮನ್ನಾರ್ ಕೊಲ್ಲಿ	ತಮಿಳುನಾಡಿನ ತಿರುನಲ್ವೇಲಿ

ಹಿಮಾಲಯ ಪರ್ವತದಲ್ಲಿ ಉಗಮವಾಗುವ ನದಿಗಳಿಗೂ ಮತ್ತು ಪರ್ಯಾಯ ದ್ವೀಪದ ನದಿಗಳಿಗೂ ಇರುವ ವ್ಯತ್ಯಾಸಗಳು

ಹಿಮಾಲಯ ಪರ್ವತದಲ್ಲಿ ಉಗಮವಾಗುವ ನದಿಗಳು	ಪರ್ಯಾಯ ದ್ವೀಪದ ನದಿಗಳು
⌖ ಹಿಮಾಲಯದಲ್ಲಿ ಉಗಮವಾಗುವ ಸಿಂಧೂ, ಗಂಗಾ, ಬ್ರಹ್ಮಪುತ್ರ ನದಿಗಳು ಇಬ್ಬನಿ ಘನೀಕರಿಸಿದ ಪರ್ವತಗಳಲ್ಲಿ ಉಗಮವಾಗಿವೆ.	⌖ ಪರ್ಯಾಯ ದ್ವೀಪದ ನದಿಗಳಾದ ಮಹಾನದಿ ಗೋದಾವರಿ, ಕೃಷ್ಣ, ಕಾವೇರಿ,ನರ್ಮದಾ ಮತ್ತು ತಪತಿ ನದಿಗಳು ಪರ್ಯಾಯ ದ್ವೀಪ ಪೀಠಭೂಮಿಯಲ್ಲಿ ಉಗಮವಾಗಿವೆ.
⌖ ಇವು ದೊಡ್ಡ ನದಿ(Basin) ರೇವುಗಳನ್ನು (Catchment) ಹೊಂದಿವೆ	⌖ ಇವು ಚಿಕ್ಕ ನದಿ ರೇವುಗಳನ್ನು ಚಿಕ್ಕ ನದಿಗಳನ್ನೂ ಹೊಂದಿವೆ.
⌖ ಇವು ಆಳವಾದ 'I' ಆಕಾರದ ಕಡಿದಾದ ಕಣಿವೆಗಳ ಮೂಲಕ ಹರಿಯುತ್ತವೆ	⌖ ಇವು ಅಗಲವಾದ ಆಳವಿರದ ಕಣಿವೆಗಳ ಮೂಲಕ ಹರಿಯುತ್ತವೆ.
⌖ ಈ ನದಿಗಳು ಬತ್ತಿಹೋಗದ ನದಿಗಳಾಗಿವೆ ಇವು ಮಾನ್ಸೂನ್ ಮಾರುತದ ಮಳೆಯಿಂದಲೂ ಇಬ್ಬನಿ ಘನೀಕರಿಸುವುದರಿಂದಲೂ ನೀರನ್ನು ಪಡೆಯುತ್ತವೆ.	⌖ ಈ ನದಿಗಳು ಮಾನ್ಸೂನ್ ಮಾರುತದ ಮಳೆಯ ಸಮಯಗಳಲ್ಲಿ ಮಾತ್ರ ಹರಿಯುತ್ತವೆ. ಮಾನ್ಸೂನ್ ಮಾರುತದ ಮಳೆಯನ್ನೇ ನಂಬಿ ನೀರನ್ನು ಪಡೆಯುತ್ತವೆ.
⌖ ಇವುಗಳು ಬತ್ತಿಹೋಗದ ನದಿಗಳಾಗಿರುವುದರಿಂದ ಅನುಕೂಲವಾಗಿವೆ.	⌖ ಮಾನ್ಸೂನ್ ಮಾರುತದ ಮಳೆಯಿಂದ ನೀರನ್ನು ಪಡೆವುದರಿಂದ ನೀರಾವರಿಗೆ ಉಪಯೋಗವಾಗುವುದಿಲ್ಲ
⌖ ಈ ನದಿಗಳು ಮೈದಾನಗಳಲ್ಲಿ ಹರಿಯುವುದರಿಂದ ಸಂಚಾರಕ್ಕೆ ನೆರವಾಗುತ್ತವೆ.	⌖ ಇವು ಅವ್ಯವಸ್ಥಿತವಾದ ಪೀಠಭೂಮಿಯಲ್ಲಿ ಹರಿಯುವುದರಿಂದ ಸಂಚಾರಕ್ಕೆ ನೆರವಾಗುವುದಿಲ್ಲ.
⌖ ಗಂಗಾ– ಬ್ರಹ್ಮಪುತ್ರ ನದಿಗಳು ನದಿ ಮುಖಜ ಭೂಮಿಗಳಲ್ಲಿ ದೊಡ್ಡ ಫಲವತ್ತಾದ ಬಯಲು ಪ್ರದೇಶಗಳನ್ನು ಉಂಟುಮಾಡುತ್ತವೆ.	⌖ ಪಶ್ಚಿಮಕ್ಕೆ ಹರಿಯುವ ನದಿಗಳು ಚಿಕ್ಕ ಮುಖಜಭೂಮಿಗಳು ಮತ್ತು ಚಿಕ್ಕ ಫಲವತ್ತಾದ ಬಯಲುಪ್ರದೇಶಗಳನ್ನು ಉಂಟುಮಾಡುತ್ತವೆ.

ಉಪನದಿಗಳು (Tributary)	ಒಂದು ನದಿಯು ಸಮೀಪದಲ್ಲಿರುವ ಬೆಟ್ಟ ಪ್ರದೇಶದಲ್ಲಿ ಉಗಮವಾಗಿ ಅದು ಮುಖ್ಯ ನದಿಯೊಡನೆ ಒಂದುಗೂಡುತ್ತದೆ. ಉದಾಹರಣೆಗೆ ಯಮುನಾ ನದಿಯು ಗಂಗಾನದಿಯ ಉಪನದಿ. ಭವಾನಿ, ಅಮರಾವತಿ, ನೊಯ್ಯಾಲ್ ನದಿಗಳು ಕಾವೇರಿ ನದಿಯ ಉಪನದಿಗಳು.
ಶಾಖಾನದಿಗಳು (Distributary)	ಒಂದು ನದಿಯು, ಒಂದು ಮುಖ್ಯ ನದಿಯಿಂದ ಹಲವು ಶಾಖೆಗಳಾಗಿ ಹಂಚಿಕೆಯಾಗಿ ಪುನಃ ಅದರ ಮುಖ್ಯ ನದಿಯನ್ನು ಸೇರದೇ ಸಮುದ್ರವನ್ನು ಅಥವಾ ಸರೋವರವನ್ನು ಸೇರುತ್ತದೆ. ಉದಾ : ಹೂಗ್ಲಿ ನದಿ.
ನದೀ ಬಯಲುಗಳು (Delta)	ನದೀ ಮುಖಜ ಭೂಮಿಯಲ್ಲಿ ಕಂಡುಬರುವ ತ್ರಿಕೋನಾಕಾರದ ಫಲವತ್ತಾದ ಮೆಕ್ಕಲು ಬಯಲನ್ನು ನದೀ ಬಯಲುಗಳೆನ್ನುತ್ತಾರೆ.
ಅಳಿವೆ (Estuary)	ನದೀ ಮುಖಜ ಭೂಮಿಯಲ್ಲಿ ಉಬ್ಬರವಿಳಿತಗಳ ಕಾರಣದಿಂದಾಗಿ ನದಿಯ ಶುದ್ಧ ನೀರು ಮತ್ತು ಸಮುದ್ರದ ಉಪ್ಪು ನೀರು ಒಂದಾಗುತ್ತವೆ. ಈ ಭಾಗವು ನದೀ ಬಯಲಿನಂತಿರದೇ ಆಳವಾಗಿರುತ್ತದೆ. ಉದಾಹರಣೆಗೆ ನರ್ಮದಾ ನದಿಯ ಅಳಿವೆ.

ಅಭ್ಯಾಸ

ಅ. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1. ಭಾರತದ_____ ದಿಕ್ಕಿನಲ್ಲಿ ಬಂಗಾಳಕೊಲ್ಲಿ ಇದೆ.

   ಅ) ಪಶ್ಚಿಮ ಆ) ದಕ್ಷಿಣ ಇ) ಪೂರ್ವ ಮತ್ತು ಆಗ್ನೇಯ ಈ) ನೈರುತ್ಯ

2. ಪಾಕ್ ಜಲಸಂಧಿಯು_____ನ್ನು ಭಾರತದಿಂದ ಬೇರ್ಪಡಿಸುತ್ತದೆ.

   ಅ) ಶ್ರೀಲಂಕಾ ಆ) ಮಯನ್ಮಾರ್ ಇ) ಮಾಲ್ಡೀವ್ಸ್ ದ್ವೀಪಗಳು ಈ) ಲಕ್ಷದ್ವೀಪಗಳು

3. ಭಾರತದ ಮಧ್ಯಭಾಗದಲ್ಲಿ ಹಾದುಹೋಗುವ ಅತಿಮುಖ್ಯವಾದ ರೇಖಾಂಶವು_____ಮೂಲಕ ಹಾದುಹೋಗುತ್ತದೆ

   ಅ) ಅಹಮದಾಬಾದ್ ಆ) ಅಲಹಾಬಾದ್ ಇ) ಹೈದರಾಬಾದ್ ಈ) ಔರಂಗಬಾದ್

4. ಪ್ರಪಂಚದ ಅತ್ಯಂತ ಎತ್ತರವಾದ ಶಿಖರ_____.

   ಅ) ಎವರೆಸ್ಟ್ ಶಿಖರ ಆ) ನಂದಾದೇವಿ ಇ) ಕಾಂಚನಗಂಗ ಈ) ದವಳಗಿರಿ

5. ಗಂಗಾನದಿಯ ಉಗಮಸ್ಥಾನ_____

   ಅ) ಯಮುನೋತ್ರಿ ಆ) ಸಿಯಾಚಿನ್ ಇ) ಗಂಗೋತ್ರಿ ಈ) ಕಾರಕೋರಂ

6. ಹಿಮಾಲಯ ಪರ್ವತಗಳು_____ ಎಂದು ಕರೆಯಲ್ಪಡುತ್ತವೆ.

   ಅ) ಹಿಮದ ಬೀಡು ಆ) ಹಿಮಾಚಲ್ ಇ) ಸಿವಾಲಿಕ್ಸ್ ಈ) ಹಿಮಾದ್ರಿ

ಆ . ಹೊಂದಿಸಿ ಬರೆಯಿರಿ

1.	ಪವಿತ್ರ ಯಾತ್ರಾಸ್ಥಳ	ಸಹ್ಯಾದ್ರಿ
2.	ತೆರೈ	ವೇಂಬನಾಡು
3.	ಕರ್ನಾಟಕದಲ್ಲಿರುವ ಪಶ್ಚಿಮ ಘಟ್ಟಗಳು	ದಖ್ಖನ್
4.	ಲಾವಾ ಪೀಠಭೂಮಿ	ಕೇದಾರನಾಥ್
5.	ಕೇರಳದ ದೊಡ್ಡ ಸರೋವರ	ಜವುಳು ಭೂಮಿ
		ಚಿಲ್ಕಾ ಸರೋವರ
		ಸ್ಯಾಂಗ್‌ಪೋ

ಇ . ವ್ಯತಾಸಗಳನ್ನು ತಿಳಿಸಿ.

1. ಗ್ರೀನ್‌ವಿಚ್ ರೇಖಾಂಶ ವೇಳೆ(GMT) – ಭಾರತದ ಪ್ರಮಾಣಿತ ವೇಳೆ(IST)
2. ಪಶ್ಚಿಮ ಘಟ್ಟಗಳು – ಪೂರ್ವ ಘಟ್ಟಗಳು
3. ಪಶ್ಚಿಮ ಕರಾವಳಿ ಬಯಲು ಪ್ರದೇಶ – ಪೂರ್ವ ಕರಾವಳಿ ಬಯಲು ಪ್ರದೇಶ

ಈ. ಸಂಕ್ಷಿಪ್ತವಾಗಿ ಉತ್ತರಿಸಿ.

1. ಭಾರತದ ಪ್ರಮುಖ ನೈಸರ್ಗಿಕ ರಚನೆಯ ವಿಭಾಗಗಳು ಯಾವುವು?

2. ಹಿಮಾಲಯ ಪರ್ವತದ ಪ್ರಾಮುಖ್ಯತೆಯಲ್ಲಿ ಯಾವುದಾದರೂ ಎರಡನ್ನು ತಿಳಿಸಿ.

3. ಭಾರತದ ಉತ್ತರದ ಪರ್ವತಗಳಲ್ಲಿರುವ ಎರಡು ಪ್ರಮುಖ ಪವಿತ್ರಯಾತ್ರಾ ಸ್ಥಳಗಳನ್ನು ತಿಳಿಸಿರಿ.

4. ಪಶ್ಚಿಮ ಕರಾವಳಿ ಬಯಲು ಪ್ರದೇಶದಲ್ಲಿ ನದಿ ಬಯಲುಗಳನ್ನು ಉಂಟುಮಾಡದ ನದಿಗಳನ್ನು ತಿಳಿಸಿರಿ.

5. ಭಾರತದಲ್ಲಿ ಕಂಡುಬರುವ ದ್ವೀಪಗಳು ಯಾವುವು?

ಉ. ಒಂದು ಪುಟದಲ್ಲಿ ಉತ್ತರಿಸಿ.

1. "ಭಾರತ ಒಂದು ಉಪಖಂಡ" – ತೀರ್ಮಾನಿಸು ಅಥವಾ ಕಾರಣ ತಿಳಿಸು

2. "ವೈವಿಧ್ಯತೆಯಲ್ಲಿ ಏಕತೆ" – ವಿವರಿಸಿ.

3. ಹಿಮಾಲಯ ಪರ್ವತಗಳು ಉಂಟಾದ ಬಗೆಯನ್ನು ವಿವರಿಸಿ.

4. ಹಿಮಾಲಯ ಪರ್ವತಗಳ ಪ್ರಾಮುಖ್ಯತೆಯನ್ನು ವಿವರಿಸಿ.

5. ಉತ್ತರ ಭಾರತದ ಮಹಾಮೈದಾನಗಳ ಬಗ್ಗೆ ಟಿಪ್ಪಣಿ ಬರೆಯಿರಿ.

6. ಪರ್ಯಾಯ ದ್ವೀಪ ಪೀಠಭೂಮಿಯ ಬಗ್ಗೆ ಟಿಪ್ಪಣಿ ಬರೆಯಿರಿ.

ಊ. ಭಾರತದ ರಾಜಕೀಯ ಭೂಪಟದಲ್ಲಿ ಕೆಳಗೆ ಕೊಟ್ಟಿರುವವುಗಳನ್ನು ಗುರುತಿಸಿ.

1. ಭಾರತದ ನೈಸರ್ಗಿಕ ವಿಭಾಗಗಳು

2. ಥಾರ್ ಮರುಭೂಮಿ, ದಖ್ಖನ್ ಪೀಠಭೂಮಿ

3. ನದಿಗಳು – ಗಂಗಾ, ಬ್ರಹ್ಮಪುತ್ರ, ನರ್ಮದಾ, ಗೋದಾವರಿ, ಕೃಷ್ಣಾ

4. ಪರ್ವತಗಳು – ಸಿವಾಲಿಕ್, ಕಾರಕ್ಕೋರಂ, ಲಡಾಕ್, ಕೈಲಾಸ್, ಪಟ್ಕಾಯ್, ನೀಲಗಿರಿ, ಪಶ್ಚಿಮ ಘಟ್ಟಗಳು, ಸಾತ್ಪುರ, ಅರಾವಳಿ ಪರ್ವತ ಶ್ರೇಣಿಗಳು.

5. ಎವರೆಸ್ಟ್ ಶಿಖರ , K2 ಶಿಖರ, ಪಾಕ್ ಜಲಸಂಧಿ, ಮನ್ನಾರ್ ಕೊಲ್ಲಿ, ಉತ್ತರ ಸರ್ಕಾರ, ಚೋಳಮಂಡಲ ತೀರಪ್ರದೇಶ, ಕೊಂಕಣತೀರಪ್ರದೇಶ, ಅಂಡಮಾನ್–ನಿಕೋಬಾರ್ ದ್ವೀಪಗಳು, ಕಚ್‌ಕೊಲ್ಲಿ, ಕಾಂಬೆ ಕೊಲ್ಲಿ, ಚೋಟಾನಾಗಪುರ, ಸುಂದರವನ, ರಾನ್ ಆಫ್ ಕಚ್, ಮಾಳವ ಪೀಠಭೂಮಿ, ಪಾಮೀರ್ ಗ್ರಂಥಿ.

ಋ. ಚಟುವಟಿಕೆ

1. ಭಾರತದ ಅತಿ ದೊಡ್ಡ ರಾಜ್ಯ ಯಾವುದು?

2. ನಮ್ಮ ದೇಶದ ಅತಿ ಚಿಕ್ಕ ರಾಜ್ಯ ಯಾವುದು?

3. ಅಧಿಕ ಜನಸಾಂದ್ರತೆ ಹೊಂದಿದ ರಾಜ್ಯ, ವಿರಳ ಜನಸಾಂದ್ರತೆ ಹೊಂದಿದ ರಾಜ್ಯ ಯಾವುದು?

4. ಏಳು ಸಹೋದರಿಗಳು ಎಂದು ಕರೆಯಲ್ಪಡುವ ಈಶಾನ್ಯ ಭಾರತದಲ್ಲಿರುವ ಏಳು ರಾಜ್ಯಗಳನ್ನು ಪಟ್ಟಿ ಮಾಡಿರಿ.

2. ಭಾರತ–ವಾಯುಗುಣ

ನೈಸರ್ಗಿಕ ಪರಿಸರದಲ್ಲಿ ವಾಯುಗುಣವು ಒಂದು ಮೂಲ ಘಟಕ. ಇದು ಒಂದು ಸ್ಥಳದ ಭೂಮೇಲ್ಮೈ ಮಣ್ಣು ಸಸ್ಯವರ್ಗ ಮತ್ತು ಕೃಷಿಯನ್ನು ನಿರ್ಧರಿಸುತ್ತದೆ. ನಾವು ವಾಸಿಸುವ ಮನೆ, ನಾವು ಧರಿಸುವ ಬಟ್ಟೆ, ನಾವು ಸೇವಿಸುವ ಆಹಾರವು ವಾಯುಗುಣದೊಂದಿಗೆ ಅವಿನಾಭಾವ ಸಂಬಂಧ ಹೊಂದಿದೆ.ಆದರೆ ವಾಯುಗುಣವು ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸವಾಗಿರುತ್ತದೆ. ಭಾರತದ ತದ್ವಿರುದ್ಧದ ಭೂ ಮೇಲ್ಮೈಲಕ್ಷಣಗಳು ವೈವಿಧ್ಯಮಯ ವಾಯುಗುಣವನ್ನು ಸೃಷ್ಟಿಸಿದೆ.ಉಷ್ಣಾಂಶ,ಮಳೆ ಇತ್ಯಾದಿ ವಾಯುಗುಣಗಳಲ್ಲಿ ಉತ್ತರ ಭಾರತವು ದಕ್ಷಿಣ ಭಾರತಕ್ಕಿಂತ ವ್ಯತ್ಯಾಸ ಹೊಂದಿದೆ.ಭಾರತದ ವೈವಿಧ್ಯಮಯ ವಾಯುಗುಣವನ್ನು ಮತ್ತು ಅದನ್ನು ನಿರ್ಧರಿಸುವ ಅಂಶಗಳನ್ನು ಗಮನಿಸೋಣ.

ಹವಾಮಾನ ಮತ್ತು ವಾಯುಗುಣಗಳ ವ್ಯತ್ಯಾಸ ತಿಳಿಸುವಿರಾ?

ಯಾವುದೇ ಒಂದು ಸ್ಥಳದ ದೈನಂದಿನ ವಾತಾವರಣದ ಉಷ್ಣಾಂಶ ಗಾಳಿಯ ಒತ್ತಡ, ಆರ್ದ್ರತೆ ಮತ್ತು ಮಳೆ ಯನ್ನು ಹವಾಮಾನ ಎನ್ನುತ್ತೇವೆ.

ಯಾವುದೇ ಒಂದು ಸ್ಥಳದ ದೀರ್ಘಾವಧಿ ಕಾಲದ ಸರಾಸರಿ ಹವಾಮಾನವನ್ನು ವಾಯುಗುಣ ಎನ್ನುತ್ತೇವೆ. ಇದರ ಸರಾಸರಿ ಪಡೆಯಲು ಕನಿಷ್ಠ 35 ವರ್ಷಗಳ ಹವಾಮಾನ ದಾಖಲೆಗಳು ಅಗತ್ಯವಾಗಿರುತ್ತದೆ.

ಒಂದು ಸ್ಥಳದ ವಾಯುಗುಣವನ್ನು ಈ ಕೆಳಗಿನ ಅಂಶಗಳು ನಿರ್ಧರಿಸುತ್ತವೆ.

1. ಅಕ್ಷಾಂಶ
2. ಎತ್ತರ
3. ಸಮುದ್ರದಿಂದಿರುವ ದೂರ
4. ಮಾರುತಗಳು
5. ಪರ್ವತಗಳ ಸ್ಥಾನ

1. ಅಕ್ಷಾಂಶ

ಭಾರತವು 8^{0} 4' ಉತ್ತರದಿಂದ 37^{0} 6' ಉತ್ತರ ಅಕ್ಷಾಂಶಗಳ ನಡುವೆ ಇದೆ. 23^{0} 30' ಉತ್ತರ ಅಕ್ಷಾಂಶರೇಖೆಯಾದ ಕರ್ಕಾಟಕ ಸಂಕ್ರಾಂತಿ ವೃತ್ತವು ದೇಶದ ಮಧ್ಯ ಹಾದು ಹೋಗುತ್ತದೆ. ಕರ್ಕಾಟಕ ಸಂಕ್ರಾಂತಿಯ ದಕ್ಷಿಣದ, ಭೂಮಧ್ಯ ರೇಖೆಗೆ ಸಮೀಪವಿರುವ ಭಾರತ ದೇಶದ ಭಾಗಗಳು ವರ್ಷ ಪೂರ್ತಿ ಹೆಚ್ಚು ಉಷ್ಣಾಂಶದಿಂದ ಕೂಡಿರುತ್ತವೆ. ಇನ್ನೊಂದು ಕಡೆ ಕರ್ಕಾಟಕ ಸಂಕ್ರಾಂತಿ ವೃತ್ತದ ಉತ್ತರಕ್ಕಿರುವ ಭೂಮಧ್ಯರೇಖಾ ಪ್ರದೇಶವು ಬೆಚ್ಚಗಿನ ಉಷ್ಣಾಂಶ ವಲಯವಾಗಿದೆ. ಆದುದರಿಂದಲೇ ಇವು ಚಳಿಗಾಲದಲ್ಲಿ ಅತಿ ಕಡಿಮೆ ಉಷ್ಣಾಂಶವನ್ನು ಹೊಂದಿರುತ್ತದೆ. ಉದಾಹರಣೆಗೆ ನವಂಬರ್ ತಿಂಗಳ ಅವಧಿಯಲ್ಲಿ 38^{0} ಉತ್ತರದಲ್ಲಿರುವ ನವದೆಹಲಿಯು 23^{0} ಉಷ್ಣಾಂಶ 8^{0} ಉತ್ತರ ಅಕ್ಷಾಂಶದಲ್ಲಿರುವ ಕನ್ಯಾಕುಮಾರಿಯು ಇದೇ ತಿಂಗಳು 32^{0} ಉಷ್ಣಾಂಶ ಹೊಂದಿರುತ್ತದೆ.

2. ಎತ್ತರ

ಭೂಮೇಲ್ಮೈನಿಂದ 165 ಮೀ ಎತ್ತರಕ್ಕೆ ಹೋದಂತೆಲ್ಲಾ 1^{0}C ನಷ್ಟು ಉಷ್ಣಾಂಶವು ಕಡಿಮೆಯಾಗುತ್ತದೆ. ಆದುದರಿಂದ ಎತ್ತರ ಸ್ಥಳಗಳಲ್ಲಿರುವ ಪ್ರದೇಶಗಳು ಮೈದಾನ ಪ್ರದೇಶಗಳಿಗಿಂತ ತಂಪಾಗಿರುತ್ತವೆ. ಉದಾಹರಣೆಗೆ : ಜೂನ್ ತಿಂಗಳ ಅವಧಿಯಲ್ಲಿ ಅಂದರೆ ಸಮುದ್ರ ಮಟ್ಟದಿಂದ 239 ಮೀ ಎತ್ತರದ ಮೈದಾನ ಪ್ರದೇಶದಲ್ಲಿರುವ ನವದೆಹಲಿಯಲ್ಲಿ 40.2^{0} C ಉಷ್ಣಾಂಶವಿರುತ್ತದೆ. ಅದೇ ಸಮಯದಲ್ಲಿ 2205 ಮೀ ಎತ್ತರದಲ್ಲಿನ ಸಿಮ್ಲಾದಲ್ಲಿ 23.5^{0} C ಉಷ್ಣಾಂಶವಿರುತ್ತದೆ.

3. ಸಮುದ್ರದಿಂದಿರುವ ದೂರ

ಕರ್ಕಾಟಕ ಸಂಕ್ರಾಂತಿ ವೃತ್ತದಿಂದ ಉತ್ತರಕ್ಕಿರುವ ಪ್ರದೇಶಗಳು " ಖಂಡಾಂತರ ವಾಯುಗುಣ" ವನ್ನು ಹೊಂದಿರುತ್ತದೆ. ಉದಾಹರಣೆಗೆ : ನವದೆಹಲಿಯಲ್ಲಿ ಬೇಸಿಗೆಕಾಲದಲ್ಲಿ 47^{0} C

ಉಷ್ಣಾಂಶವಿರುತ್ತದೆ. ಇಲ್ಲಿ ಬೇಸಿಗೆಯು ತೀವ್ರ ಉಷ್ಣಾಂಶದಿಂದಲೂ, ಚಳಿಗಾಲವು ತೀವ್ರ ಚಳಿಯಿಂದಲೂ ಕೂಡಿರುತ್ತದೆ. ಈ ಪ್ರದೇಶಗಳು ಸಮುದ್ರದಿಂದ ದೂರದಲ್ಲಿರುವುದರಿಂದ ಈ ರೀತಿಯ ವಾಯುಗುಣವನ್ನು ಹೊಂದಿದೆ.

ಕಟಕ ರೇಖೆಗೆ ದಕ್ಷಿಣದಲ್ಲಿರುವ ಸ್ಥಳಗಳು ಪಶ್ಚಿಮದಲ್ಲಿ ಅರಬ್ಬಿ ಸಮುದ್ರದಿಂದಲೂ, ಪೂರ್ವದಲ್ಲಿ ಬಂಗಾಳ ಕೊಲ್ಲಿಯಿಂದಲೂ, ದಕ್ಷಿಣದಲ್ಲಿ ಹಿಂದೂ ಮಹಾಸಾಗರದಿಂದಲೂ ಸುತ್ತುವರಿದಿರುವುದರಿಂದ ಸಮುದ್ರತೀರ ಪ್ರದೇಶಗಳಲ್ಲಿ ಸಮಾನಾಂತರ ವಾಯುಗುಣ ಕಂಡುಬರುತ್ತದೆ.

4. ಮಾರುತಗಳು

ಸಮುದ್ರ ಭಾಗದಿಂದ ಭೂಭಾಗದ ಕಡೆಗೆ ಬೀಸುವ ಗಾಳಿಯನ್ನು ಸಮುದ್ರ ಗಾಳಿ ಎಂದು ಕರೆಯಲಾಗುವುದು. ಭೂ ಭಾಗದಿಂದ ಸಮುದ್ರ ಭಾಗದ ಕಡೆಗೆ ಬೀಸುವ ಗಾಳಿಯನ್ನು ಭೂಗಾಳಿ ಎಂದು ಕರೆಯಲಾಗುತ್ತದೆ. ಸಮುದ್ರ ಗಾಳಿಯು ಸ್ವಲ್ಪ ಚಳಿಯಾಗಿಯೂ, ಭೂಗಾಳಿಯು ಸ್ವಲ್ಪ ಉಷ್ಣವಾಗಿಯೂ ಇರುತ್ತದೆ. ಆದ್ದರಿಂದ ಬೇಸಿಗೆ ಕಾಲದಲ್ಲಿ ಸಮುದ್ರ ಕರಾವಳಿ ಪ್ರದೇಶಗಳು ಒಳನಾಡಿನ ಪ್ರದೇಶಗಳಿಗಿಂತ ಸ್ವಲ್ಪ ಮಿತವಾದ ಚಳಿಯಿಂದ ಕೂಡಿರುತ್ತವೆ.

ಜೆಟ್ ಬಿರುಗಾಳಿ

ವಾಯುಮಂಡಲದ ಮೇಲಿನ ಪದರಗಳಲ್ಲಿ ಕಂಡುಬರುವ ವಾಯು ಪ್ರವಾಹವನ್ನು ಜೆಟ್ ಬಿರುಗಾಳಿ ಎನ್ನುತ್ತೇವೆ. ಇವು ಭಾರತದಲ್ಲೂ ಮಾನ್ಸೂನ್ ಮಾರುತಗಳ ಪ್ರವೇಶ ಮತ್ತು ನಿರ್ಗಮನವನ್ನು ನಿರ್ಧರಿಸುತ್ತದೆ.

5. ಪರ್ವತಗಳ ಸ್ಥಾನ

ಅ) ಉತ್ತರ ಭಾರತದ ಹಿಮಾಲಯ ಪರ್ವತ ಸರಣಿಯು ಮಧ್ಯ ಏಷ್ಯಾದ ತೀವ್ರ ಚಳಿಗಾಳಿಯನ್ನು ತಡೆಯುತ್ತದೆ.

ಆ) ಹಿಮಾಲಯವು ನೈರುತ್ಯ ಮಾನ್ಸೂನ್ ಮಾರುತಗಳನ್ನು ತಂದು, ಈಶಾನ್ಯ ಮತ್ತು ಗಂಗಾನದಿ ಮೈದಾನ ಪ್ರದೇಶಕ್ಕೆ ಭಾರಿ ಮಳೆಯನ್ನು ತರುತ್ತದೆ.

ಇ) ಅರಾವಳಿ ಪರ್ವತ ಶ್ರೇಣಿಯು ನೈರುತ್ಯ ಮಾರುತಗಳಿಗೆ ಸಮಾನಾಂತರವಾಗಿರುವುದರಿಂದ ಇದರ ಪಶ್ಚಿಮ ಭಾಗವು ಅತಿ ಕಡಿಮೆ ಮಳೆ ಪಡೆದು ಮರುಭೂಮಿಯಾಗಿ ಕಂಡುಬಂದಿದೆ.

ಎಲ್–ನಿನೋ (EL-NINO) ಇದೊಂದು ಸಂಕೀರ್ಣ ಬಗೆಯ ಹವಾಮಾನವಾಗಿದೆ. ಇದು 5 ರಿಂದ 10 ವರ್ಷಕ್ಕೊಮ್ಮೆ ಕಾಣಿಸಿಕೊಳ್ಳುತ್ತದೆ. ಇದರಿಂದಾಗಿ ಜಗತ್ತಿನ ವಿವಿಧ ಭಾಗಗಳಲ್ಲೂ ಬರ, ಪ್ರವಾಹ ಮತ್ತಿತ್ತರ ತೀಕ್ಷ್ಣ ಹವಾಮಾನ ಉಂಟುಮಾಡುತ್ತದೆ. ಇದಲ್ಲದೆ ಇದರಿಂದಾಗಿ ಭಾರತಕ್ಕೆ ನೈರುತ್ಯ ಮಾರುತಗಳ ಪ್ರವೇಶ ನಿಧಾನವಾಗುತ್ತದೆ.

ಭಾರತದ ವಾಯುಗುಣ

ಭಾರತವು ವೈವಿಧ್ಯಮಯ ಮತ್ತು ಏರಿಳಿತದಿಂದ ಕೂಡಿದ ಭೂಮೇಲ್ಮೈ ಮತ್ತು ವಾಯುಗುಣ ಹೊಂದಿದ್ದರೂ ಮಾನ್ಸೂನ್ ಮಾರುತಗಳಲ್ಲಿ ಮಾತ್ರ ಏಕತೆಯನ್ನು ಕಾಣಬಹುದು. 'ಮಾನ್ಸೂನ್' ಪದವು ಅರೇಬಿಯನ್ ಪದ 'ಮೌಸ್ಸಿನ್' ನಿಂದ ಹುಟ್ಟಿದೆ. ಮೌಸ್ಸಿನ್ ಎಂದರೆ ಋತುಗಳು ಎಂದರ್ಥ. ಈ ಪದವನ್ನು ಹಲವಾರು ಶತಮಾನಗಳ ಹಿಂದೆ ಮನುಷ್ಯರು ಅರಬ್ಬೀಸಮುದ್ರದ ಮಾರುತಗಳ ಏರಿಳಿತಗಳನ್ನು ವಿವರಿಸಲು ಬಳಸುತ್ತಿದ್ದರು. ಈ ಮಾರುತಗಳು 6 ತಿಂಗಳು ನೈರುತ್ಯ ಭಾಗದಿಂದ ಬೀಸುವುದು ಕಾಣಿಸಿದರೆ, ಮತ್ತೆ 6 ತಿಂಗಳು ಈಶಾನ್ಯ ದಿಕ್ಕಿನಿಂದ ಬೀಸುತ್ತವೆ. ಬೇಸಿಗೆ ಮತ್ತು ಚಳಿಗಾಲಗಳ ನಡುವೆ ತನ್ನ ದಿಕ್ಕನ್ನು ಸಂಪೂರ್ಣವಾಗಿ ನಿರ್ಗಮನವಾಗುವ ಮಾರುತಗಳನ್ನೇ ಮಾನ್ಸೂನ್ ಮಾರುತಗಳು ಎನ್ನುತ್ತೇವೆ. ಭಾರತವು ಉಷ್ಣವಲಯ ಮಾನ್ಸೂನ್ ವಾಯುಗುಣವನ್ನು ಹೊಂದಿದೆ.

ಉಷ್ಣವಲಯ ಮಾನ್ಸೂನ್ ಮಾರುತಗಳ ಲಕ್ಷಣಗಳು :

1) ಮಾನ್ಸೂನ್ ಮಾರುತಗಳನ್ನು ಅವು ಬೀಸುವ ದಿಕ್ಕನ್ನು ಆಧರಿಸಿ ನೈರುತ್ಯ ಮಾನ್ಸೂನ್ ಮತ್ತು ಈಶಾನ್ಯ ಮಾನ್ಸೂನ್ ಎಂದು ವರ್ಗೀಕರಿಸಲಾಗಿದೆ.

2) ಇವು ಭೂಮಿ ಮತ್ತು ಸಮುದ್ರದಲ್ಲಾಗುವ ಉಷ್ಣಾಂಶದ ಏರಿಳಿತದಿಂದ ಉಂಟಾಗುತ್ತದೆ.

3) ಮಾನ್ಸೂನ್ ಮಾರುತಗಳ ಮುಖ್ಯ ಲಕ್ಷಣಗಳೆಂದರೆ ಋತುಮಾನಿಕ ಬದಲಾವಣೆಗಳು ಭಾರತದ ವಾಯುಗುಣವನ್ನು ನಿರ್ಧರಿಸುವುದು.

ಋತುಗಳು

ಹವಾಮಾನ ಶಾಸ್ತ್ರಜ್ಞರು ಮಾನ್ಸೂನ್ ಮಾರುತಗಳ ಏರಿಳಿತವನ್ನು ಆಧರಿಸಿ ಭಾರತದ ವಾಯುಗುಣವನ್ನು ವಿವಿಧ ಋತುಮಾನಗಳಾಗಿ ವಿಂಗಡಿಸಿದ್ದಾರೆ.

1) ಬೇಸಿಗೆಕಾಲ (ಮಾರ್ಚ್ ನಿಂದ ಮೇ ವರೆಗೆ)

2) ನೈರುತ್ಯ ಮಾನ್ಸೂನ್ (ಜೂನ್ ನಿಂದ ಸೆಪ್ಟೆಂಬರ್ ವರೆಗೆ)

3) ಈಶಾನ್ಯ ಮಾನ್ಸೂನ್ (ಅಕ್ಟೋಬರ್ ನಿಂದ ನವೆಂಬರ್ ವರೆಗೆ)

4) ಚಳಿಗಾಲ (ಡಿಸೆಂಬರ್ ನಿಂದ ಫೆಬ್ರವರಿ ವರೆಗೆ)

1) ಬೇಸಿಗೆ ಕಾಲ (ಮಾರ್ಚ್ ನಿಂದ ಮೇ ವರೆಗೆ)

ಬೇಸಿಗೆ ಕಾಲವು ಮಾರ್ಚ್ ನಿಂದ ಆರಂಭವಾಗಿ ಮೇ ತಿಂಗಳವರೆಗೆ ಮುಂದುವರೆಯುತ್ತದೆ. ಈ ಅವಧಿಯಲ್ಲಿ ಸೂರ್ಯನ ಕಿರಣ ' ಕರ್ಕಾಟಕ ಸಂಕ್ರಾಂತಿ' ರೇಖೆಯ ಮೇಲೆ ನೇರವಾಗಿ ಬೀಳುತ್ತದೆ. ಆದುದರಿಂದ ಭಾರತದ ಉತ್ತರ ಭಾಗದಲ್ಲಿ ಉಷ್ಣಾಂಶ ಜಾಸ್ತಿ. ಉತ್ತರಭಾಗದ ಕೆಲವು ಸ್ಥಳಗಳಲ್ಲಿ ಹಗಲಿನ ಉಷ್ಣಾಂಶವು $50^{0}C$ ನಷ್ಟು ಹೆಚ್ಚುತ್ತದೆ. ಈ ರೀತಿಯ ಅಧಿಕ ಉಷ್ಣಾಂಶದಿಂದಾಗಿ ಉತ್ತರ ಭಾರತದಲ್ಲಿ ಕಡಿಮೆ ಒತ್ತಡ ಪ್ರದೇಶದ ಪರಿಸ್ಥಿತಿ ಉಂಟಾಗುತ್ತದೆ.

ಇದಕ್ಕೆ ತದ್ವಿರುದ್ಧವಾಗಿ ದಕ್ಷಿಣ ಭಾರತವು ಸಮುದ್ರಕ್ಕೆ ಸಮೀಪವಿರುವುದರಿಂದ ಸಾಧಾರಣ ಹವಾಮಾನ ಪರಿಸ್ಥಿತಿ ಇರುತ್ತದೆ. ಇಲ್ಲಿ ಗರಿಷ್ಠ ಸರಾಸರಿ ಉಷ್ಣಾಂಶವು $26^{0}C$ ನಿಂದ $35^{0}C$ ವರೆಗೆ ಏರಿಳಿತದಿಂದ ಕೂಡಿರುತ್ತದೆ. ಉತ್ತರ ಭಾರತಕ್ಕೆ ಹೋಲಿಸಿದಾಗ ಇಲ್ಲಿ ಕಡಿಮೆ ಉಷ್ಣಾಂಶವಿರುವುದರಿಂದ ಅಧಿಕ ಒತ್ತಡ ಪ್ರದೇಶ ನಿರ್ಮಾಣವಾಗುತ್ತದೆ.

ವಾಯುವ್ಯ ಭಾರತದ ಒತ್ತಡದ ಪರಿಸ್ಥಿತಿಯಿಂದಾಗಿ ಅರಬ್ಬೀಸಮುದ್ರ ಮತ್ತು ಬಂಗಾಳಕೊಲ್ಲಿ ಮಾರುತಗಳು ನೈರುತ್ಯದಿಂದ ಈಶಾನ್ಯ ದಿಕ್ಕಿಗೆ ಬೀಸುತ್ತದೆ. ಇವು ಪಶ್ಚಿಮ ಕರಾವಳಿಗೆ ಪೂರ್ವ ಮಾನ್ಸೂನ್ ಮಳೆಯನ್ನು ತರುತ್ತದೆ. ಅಲ್ಲಲ್ಲಿ ಗುಡುಗು ಸಹಿತ ಮಳೆಯು ಬೀಳುತ್ತದೆ. ಇದನ್ನು 'ಮ್ಯಾಂಗ್ರೋ ಮಳೆ' (Mango showers) ಎನ್ನಲಾಗುತ್ತದೆ. ಇದು ಕೇರಳ ಮತ್ತು ಕರ್ನಾಟಕ ಕರಾವಳಿಯಲ್ಲಿ ಮಾವು ಶೀಘ್ರ ಮಾಗುವುದಕ್ಕೆ ಸಹಕಾರಿಯಾಗಿದೆ.ಈಶಾನ್ಯ ಭಾರತದ ಭಾಗದಲ್ಲಿ ಬೀಸುವ ಸ್ಥಳೀಯ ಗಾಳಿ 'ನಾರ್ ವೆಸ್ಟರ್' (Norwesters) ಎಂದು ಕರೆಯಲ್ಪಡುತ್ತದೆ. ಈ ಗಾಳಿಯು 'ಕಾಲ್‌ಬೈಸಾಗಿ' (Kalbaisagi) (ಬೈಸಾಗಿ ತಿಂಗಳ ನಾಶ) ಎಂಬುದಾಗಿ ಪಂಜಾಬಿನಲ್ಲಿ ಕರೆಯಲಾಗುತ್ತದೆ.

ಭಾರತದ ಉತ್ತರ ಮತ್ತು ವಾಯುವ್ಯ ಭಾಗದಲ್ಲಿ ಬೇಸಿಗೆ ಕಾಲದಲ್ಲಿ ಪ್ರಬಲವಾದ ಬಿಸಿಗಾಳಿಯು "ಲೂ ಮಾರುತಗಳು" ಎನ್ನಲಾಗುತ್ತದೆ

2) ನೈರುತ್ಯ ಮಳೆ ಮಾರುತ (ಜೂನ್ ನಿಂದ ಸೆಪ್ಟೆಂಬರ್ ವರೆಗೆ)

ಬೇಸಿಗೆ ಕಾಲದ ನಂತರ ನೈರುತ್ಯ ಮಾನ್ಸೂನ್ ಆರಂಭವಾಗುವ ಮೂಲಕ ಮಳೆಗಾಲ ಪ್ರಾರಂಭವಾಗುತ್ತದೆ. ಅತಿಯಾದ ಉಷ್ಣಾಂಶವು ಕಡಿಮೆ ಒತ್ತಡ ಪ್ರದೇಶ ನಿರ್ಮಾಣವಾಗಲು ಕಾರಣವಾಗುತ್ತದೆ. ವಾಯುವ್ಯ ಭಾರತದ ಕೆಲವು ಪ್ರದೇಶಗಳಲ್ಲಿ ಈ ಅವಧಿಯಲ್ಲಿ ಕಡಿಮೆ ಒತ್ತಡ ಪ್ರದೇಶ ಉಂಟಾಗುತ್ತದೆ. ಇದೇ ವೇಳೆಯಲ್ಲಿ ಸಾಗರಗಳು ತಂಪಾಗಿ, ಅಧಿಕ ಒತ್ತಡ ಪ್ರದೇಶ ರಚನೆಯಾಗುತ್ತದೆ. ಮಾರುತಗಳು ಅಧಿಕ ಒತ್ತಡ ಪ್ರದೇಶದಿಂದ ಕಡಿಮೆ ಒತ್ತಡ ಪ್ರದೇಶದ ಕಡೆಗೆ ಬೀಸುತ್ತದೆ ಎಂಬುದು ನಮಗೆ ಈಗಾಗಲೇ ತಿಳಿದಿದೆ. ಆದುದರಿಂದ ಮಾರುತಗಳು ಸಾಗರಗಳ ಕಡೆಯಿಂದ ಭಾರತದ ಭೂಮೇಲ್ಮೈನ ಕಡೆಗೆ ಬೀಸಲಾರಂಭಿಸುತ್ತದೆ. ಈ ಮಾರುತಗಳನ್ನೇ ನೈರುತ್ಯ ಮಾರುತಗಳು ಎಂದು ಕರೆಯುತ್ತೇವೆ.

ಈ ಮಾರುತಗಳು ಸಮಭಾಜಕ ವೃತ್ತವನ್ನು ದಾಟಿದ ನಂತರ ತನ್ನ ದಿಕ್ಕನ್ನು ಬದಲಾಯಿಸಿ ನೈರುತ್ಯ ಭಾಗದಿಂದ ಬೀಸಲು ಆರಂಭಿಸುತ್ತದೆ. ಇದು ಹಿಂದು ಮಹಾಸಾಗರದಲ್ಲಿ ಹುಟ್ಟುವುದರಿಂದ ತೇವಾಂಶಭರಿತವಾಗಿರುತ್ತದೆ. ಇದು ಕೇರಳದ ದಕ್ಷಿಣ ಭಾಗಕ್ಕೆ ಬಂದಾಗ ಗುಡುಗು ಮಿಂಚು ಸಹಿತ ಭಾರಿ ಮಳೆಯಾಗುತ್ತದೆ. ಇದು ಮಾನ್ಸೂನ್

ಆರಂಭವಾಗುವುದರ ಸೂಚನೆಯಾಗಿದೆ. ನೈರುತ್ಯ ಮಾನ್ಸೂನ್ ಪ್ರಸ್ಥಭೂಮಿಯ ಆಕಾರದಿಂದಾಗಿ ಸಹಜವಾಗಿ ಎರಡು ಭಾಗಗಳಾಗುತ್ತದೆ. ಅವುಗಳೆಂದರೆ, 1) ಅರಬ್ಬೀಸಮುದ್ರ ಶಾಖೆ 2) ಬಂಗಾಳಕೊಲ್ಲಿಯ ಶಾಖೆ.

1) ಅರಬ್ಬೀಸಮುದ್ರ ಶಾಖೆ


ಅರಬ್ಬೀ ಸಮುದ್ರದಿಂದ ಬೀಸುವ ಮಾನ್ಸೂನ್ ಹೆಚ್ಚು ಶಕ್ತಿಯುತವಾಗಿದ್ದು, ಭಾರಿ ಮಳೆಯನ್ನು ತರುತ್ತದೆ. ಅರಬ್ಬೀಸಮುದ್ರದಿಂದ ಬೀಸುವ ಗಾಳಿಯು ಮೊದಲು ಪಶ್ಚಿಮ ಘಟ್ಟಗಳಿಗೆ ಅಪ್ಪಳಿಸುತ್ತದೆ. ಈ ತೇವಾಂಶಭರಿತ ಗಾಳಿಯು ಕಣಿವೆಗಳ ಮೂಲಕ ಮೇಲೇರಿ ಘನೀಕರಣ ಹೊಂದಿ ಪಶ್ಚಿಮ ಕರಾವಳಿ ಪ್ರದೇಶಕ್ಕೆ ಭಾರಿ ಮಳೆ ಸುರಿಸುತ್ತದೆ. ಗಾಳಿಗೆ ಅಭಿಮುಖವಾಗಿರುವ ಮುಂಬೈ 150 ಸೆಂ.ಮೀ. ಮಳೆ ಪಡೆದರೆ, ಗಾಳಿಗೆ ವಿಮುಖವಾಗಿರುವ ಪುಣೆ 50 ಸೆಂ.ಮೀ. ಮಳೆಯನ್ನು ಪಡೆಯುತ್ತದೆ. ಇದು ಪಶ್ಚಿಮ ಘಟ್ಟದ ಮಳೆನೆರಳಿನ ಪ್ರದೇಶ.

ಮಾರುತದ ಅಭಿಮುಖವಾದ (ಏರುವ) ಕಡೆ

ಪರ್ವತದಲ್ಲಿ ಗಾಳಿ ಬೀಸುವ ದಿಕ್ಕನ್ನು ಗಾಳಿಗೆ ಅಭಿಮುಖವಾದ ಕಡೆ ಎನ್ನುತ್ತೇವೆ. ಇದು ಅಪಾರ ಮಳೆಯನ್ನು ಪಡೆಯುತ್ತದೆ.

ಮಾರುತದ ವಿಮುಖವಾದ (ಇಳಿಯುವ) ಕಡೆ.

ಪರ್ವತದ ಇನ್ನೊಂದು ಕಡೆಯನ್ನು ಅಂದರೆ ಗಾಳಿಗೆ ಅಡ್ಡಲಾಗಿರುವ ಭಾಗವನ್ನು ಗಾಳಿ ವಿಮುಖಭಾಗ ಎನ್ನುತ್ತೇವೆ.



ಪರ್ವತದ ಗಾಳಿಗೆ ಅಭಿಮುಖವಾದ ಭಾಗ, ಗಾಳಿಗೆ ವಿಮುಖವಾದ ಭಾಗ


ಈ ಮಾರುತದ ಎರಡನೇ ಶಾಖೆಯು ವಿಂಧ್ಯಾ – ಸಾತ್ಪುರ ಸರಣಿಗಳಿಗೆ ವಿರುದ್ಧದ ರಾಜ್‌ಮಹಲ್ ಬೆಟ್ಟಗಳಿಗೆ ಬಡಿದು ಚೋಟಾನಾಗಪುರ್ ಮೈದಾನ ಪ್ರದೇಶದಲ್ಲಿ ಭಾರಿ ಮಳೆಯನ್ನು ಸುರಿಸುತ್ತದೆ.

ಈ ಮಾರುತದ ಮೂರನೇ ಭಾಗವು ಈ ಗಾಳಿಗೆ ಸಮನಾಂತರವಾಗಿ ನಿಂತಿರುವ ಅರಾವಳಿ ಪರ್ವತದ ಕಡೆಗೆ ಬೀಸುತ್ತದೆ. ಆದುದರಿಂದಲೆ ಇದಕ್ಕೆ ಪರ್ವತದ ವಿರುದ್ಧ ಬೀಸುವ ಸಾಮರ್ಥ್ಯವಿರುವುದಿಲ್ಲ. ಆದ್ದರಿಂದಲೆ ಇದು ರಾಜಸ್ಥಾನಕ್ಕೆ ಯಾವುದೇ ಮಳೆ ಸುರಿಸುವುದಿಲ್ಲ. ಈ ಕಾರಣದಿಂದಲೇ ಪಶ್ಚಿಮ ರಾಜಸ್ಥಾನವು ಮಳೆ ಪಡೆಯದೇ ಮರುಭೂಮಿಯಾಗಿಯೇ ಉಳಿದಿದೆ. ಈ ಗಾಳಿಯು ಹಿಮಾಚಲ ಪ್ರದೇಶ ತಲುಪಿ ನಂತರ ಬಂಗಾಳಕೊಲ್ಲಿ ವಿಭಾಗವನ್ನು ಸೇರುತ್ತದೆ. ಈ ಮಾರುತವು ಶಿವಾಲಿಕ್ ಬೆಟ್ಟಗಳಿಂದ ತಡೆಯುವುದರಿಂದ ಈ ಪ್ರದೇಶದ ತಳ ಬೆಟ್ಟಗಳು ಉತ್ತಮ ಮಳೆಯನ್ನು ಪಡೆಯುತ್ತವೆ.

2) ಬಂಗಾಳಕೊಲ್ಲಿಯ ಶಾಖೆ.

ಮಾನ್ಸೂನ್ ಮಾರುತದ ಈ ವಿಭಾಗವು ಬಂಗಾಳ ಕೊಲ್ಲಿಯಿಂದ ತೇವಾಂಶಭರಿತವಾಗಿ ಬೀಸುತ್ತದೆ. ಇದು ಕಾಶಿ, ಗಾರೋ ಮತ್ತು ಜಾಂತಿಯಾ ಬೆಟ್ಟಗಳ ವಿರುದ್ಧ ಬೀಸುತ್ತದೆ. ಈ ತೇವಾಂಶಭರಿತ ಮಾರುತವು ಆಲಿಕೆ ಆಕಾರದ ಬೆಟ್ಟಗಳಲ್ಲಿ ತಕ್ಷಣ ಮೇಲಕ್ಕೇರಿ ಭಾರತದಲ್ಲೆ ಅತಿ ಹೆಚ್ಚು ಮಳೆ ಬೀಳುವ ಪ್ರದೇಶವಾದ ಮೌಸಿನ್‌ರಾಮ್ ಪ್ರದೇಶದಲ್ಲಿ ಭಾರಿ ಮಳೆ ಸುರಿಸುತ್ತದೆ. ಈ ಮಾರುತದ ಇನ್ನೊಂದು ವಿಬಾಗವು ಪಶ್ಚಿಮ ದಿಕ್ಕಿಗೆ ಬೀಸಿ ಗಂಗಾ ನದಿ ಬಯಲು ಪ್ರದೇಶಕ್ಕೆ ಮಳೆ ತರುತ್ತದೆ.ಇದು ಇನ್ನೂ ಮುಂದೆ ಪಶ್ಚಿಮಾಭಿಮುಖವಾಗಿ ಬೀಸಿ ಪಂಜಾಬ್ ಮತ್ತು ಹರಿಯಾಣಗಳಿಗೆ ವಿರಳವಾದ ಮಳೆ ತರುತ್ತದೆ. ಅಂತಿಮವಾಗಿ ಈ ಮಾರುತವು ಹಿಮಾಲಯದ ಶಿವಾಲಿಕ್ ಪರ್ವತದ ತಳಬೆಟ್ಟಗಳ ಬುಡಗಳ ಬಳಿ ಅರಬ್ಬೀಸಮುದ್ರ ವಿಭಾಗವನ್ನು ಜೊತೆಗೂಡಿ ಭಾರಿ ಮಳೆ ಸುರಿಸುತ್ತದೆ. ಈ ವೇಳೆಯಲ್ಲಿ ತಮಿಳುನಾಡು

ಭಾರತ
ನೈರುತ್ಯ ಮಾನ್ಸೂನ್ ಮಾರುತ ಅಥವಾ ಮುಂಗಾರು ಮಳೆ



ಈ ಭೂಪಟದಲ್ಲಿರುವ ರೇಖೆಗಳು ನಮ್ಮದೇಶದಲ್ಲಿ ಜೂನ್1ರಿಂದ ಜೂನ್15ರ ವರಗೆ ಬೀಸುವ ಮಳೆ ಮಾರುತವನ್ನು ಸೂಚಿಸುತ್ತದೆ.

ಮಳೆಯಿಲ್ಲದೆ ಒಣ ಹವೆಯನ್ನು ಅನುಭವಿಸುತ್ತಿರುತ್ತದೆ. ಏಕೆಂದರೆ ಇದು ಅರಬ್ಬೀಸಮುದ್ರದ ಮಳೆ ನೆರಳಿನ ಪ್ರದೇಶದಲ್ಲಿದೆ. ಮತ್ತು ಬಂಗಾಳಕೊಲ್ಲಿಗೆ ಸಮನಾಂತರದಲ್ಲಿರುವುದರಿಂದ ಇಲ್ಲಿ ಮಳೆ ಬರುವುದಿಲ್ಲ.

.3). ಈಶಾನ್ಯ ಮಾನ್ಸೂನ್ ಮಾರುತಗಳು (ಅಕ್ಟೋಬರ್ ನಿಂದ ನವಂಬರ್ ವರೆಗೆ)

ಸೂರ್ಯನು ಕರ್ಕಾಟಕ ಸಂಕ್ರಾಂತಿ ವೃತ್ತಕ್ಕೆ ವಿರುದ್ಧವಾಗಿ ಚಲಿಸುವುದರಿಂದ ಸೆಪ್ಟೆಂಬರ್ ಎರಡನೇ ವಾರದಲ್ಲಿ ನೈರುತ್ಯ ಮಾನ್ಸೂನ್ ಉತ್ತರ ಭಾರತದಿಂದ ಹಿಂದಿರುಗಲು ಆರಂಭಿಸುತ್ತದೆ.

ಭಾರತದ **ಭೂರಾಶಿಯು** ಉಷ್ಣತೆಯನ್ನು ಕಳೆದುಕೊಳ್ಳಲಾರಂಭಿಸುತ್ತದೆ. ಆದರೆ ಸಮುದ್ರಗಳು ಇನ್ನೂ ಬೆಚ್ಚನೆಯ ಸ್ಥಿತಿಯಲ್ಲಿಯೇ ಇರುತ್ತವೆ. ಇದರಿಂದಾಗಿ ಭೂಮೇಲ್ಮೈ ಮೇಲೆ ಅಧಿಕ ಒತ್ತಡ ಪ್ರದೇಶವು ಸಮುದ್ರದ ಮೇಲೆ ಕಡಿಮೆ ಒತ್ತಡ ಪ್ರದೇಶವು ಬೆಳವಣಿಗೆಯಾಗುತ್ತದೆ. ಆದುದರಿಂದ ಮಾರುತಗಳು ಭೂಮಿಯ ಕಡೆಯಿಂದ ಸಮುದ್ರಕ್ಕೆ ಬೀಸುತ್ತವೆ. ಇದು ಒಣ ಶೀತ ಮಾರುತಗಳಾದ್ದರಿಂದ ಭೂರಾಶಿಗೆ ಯಾವುದೇ ಮಳೆ ತರುವುದಿಲ್ಲ. ಆದರೆ ಇದು ಬಂಗಾಳಕೊಲ್ಲಿಯನ್ನು ದಾಟಿದ ನಂತರ ತೇವಾಂಶವನ್ನು ಹೀರಿಕೊಂಡು ಕೋರಮಂಡಲ ಕರಾವಳಿಗಳಿಗೆ ಭಾರೀ ಮಳೆ ಸುರಿಸುತ್ತದೆ. ಆದ್ದರಿಂದ ಆಂಧ್ರಪ್ರದೇಶ ಮತ್ತು ತಮಿಳುನಾಡು ಚಳಿಗಾಲದಲ್ಲಿ ಉತ್ತಮ ಮಳೆಯನ್ನು ಪಡೆಯುತ್ತವೆ. ಬಂಗಾಳ ಕೊಲ್ಲಿಯಲ್ಲಿ ಆಗಾಗ್ಗೆ ರಚನೆಯಾಗುವ ಚಂಡ ಮಾರುತವು (ಸೈಕ್ಲೋನ್) ಕೋರಮಂಡಲ ಕರಾವಳಿಯ ಉದ್ದಕ್ಕೂ ಪ್ರಾಣ ಮತ್ತು ಆಸ್ತಿಯನ್ನು ಹಾನಿಮಾಡುತ್ತದೆ.

4) ಚಳಿಗಾಲ (ಡಿಸೆಂಬರ್ ನಿಂದ ಫೆಬ್ರವರಿ ವರೆಗೆ)

ಚಳಿಗಾಲದಲ್ಲಿ ಸೂರ್ಯನ ಕಿರಣಗಳು ಮಕರ ಸಂಕ್ರಾಂತಿ ರೇಖೆಗಳ ಮೇಲೆ ಬೀಳುವುದರಿಂದ, ಉತ್ತರ ಭಾರತದ ಭೂರಾಶಿಯ ಉಷ್ಣಾಂಶವು 21^0 C ಗಿಂತಲೂ ಕಡಿಮೆಯಾಗುತ್ತದೆ. ಹಗಲು ಮತ್ತು ರಾತ್ರಿ ಉಷ್ಣಾಂಶದಲ್ಲೂ ವ್ಯತ್ಯಾಸಗಳು ಕಾಣುವುದಿಲ್ಲ.ಇದೇ ವೇಳೆಯಲ್ಲಿ ಭಾರತದ ವಾಯುವ್ಯ ಭಾಗದಲ್ಲಿ ಕನಿಷ್ಠ ತಾಪಮಾನದಿಂದಾಗಿ ಅಧಿಕ ಒತ್ತಡ ಪ್ರದೇಶ ಉಂಟಾಗುತ್ತದೆ. ಇದಕ್ಕೆ ತದ್ವಿರುದ್ದವಾಗಿ ದಕ್ಷಿಣ ಭಾರತದ ಅರಬ್ಬೀಸಮುದ್ರ ಮತ್ತು ಬಂಗಾಳಕೊಲ್ಲಿಗಳಲ್ಲೂ ಕಡಿಮೆ ಒತ್ತಡ ಪ್ರದೇಶ ರಚನೆಯಾಗುತ್ತದೆ. ಇದರ ಪರಿಣಾಮವಾಗಿ ಅಧಿಕ ಒತ್ತಡ ಪ್ರದೇಶದಿಂದ ದಕ್ಷಿಣ ಭಾರತದ ಕಡೆಗೆ ಮಾರುತಗಳು ಬೀಸುತ್ತವೆ. ಇದಕ್ಕೆ ನಿರ್ಗಮನ ಮಾನ್ಸೂನ್ ಎಂದು ಕರೆಯಲಾಗುತ್ತದೆ. ಇದು ಭೂಮಿಯಿಂದ ಸಮುದ್ರದ ಕಡೆಗೆ ಬೀಸುವುದರಿಂದ ಇದು ಅಧಿಕ ಮಳೆಯನ್ನು ತರುವುದಿಲ್ಲ.ಆದರೆ ಈ ಮಾರುತಗಳು ಬಂಗಾಳ ಕೊಲ್ಲಿಯನ್ನು ದಾಟುವಾಗ ಸ್ವಲ್ಪ ತೇವಾಂಶವನ್ನು ಹೀರಿಕೊಳ್ಳುವುದರಿಂದ ಇದು ತಮಿಳುನಾಡು ಮತ್ತು ಆಂಧ್ರಪ್ರದೇಶದ ದಕ್ಷಿಣದ ಭಾಗಗಳಿಗೆ ಚಳಿಗಾಲದ ಮಳೆಯನ್ನು ತರುತ್ತದೆ. ಇದು ನಿರ್ಗಮನ ಮಾನ್ಸೂನ್‌ಗಳ ಪ್ರಮುಖ ಲಕ್ಷಣವಾಗಿದೆ.

ಭಾರತದಲ್ಲಿ ಚಳಿಗಾಲದಲ್ಲಿ ಮೆಡಿಟರೇನಿಯನ್ ಸಮುದ್ರದಲ್ಲಿ ಕಡಿಮೆ ಒತ್ತಡ ಪ್ರದೇಶ ಹುಟ್ಟಿ, ಅದು ಪೂರ್ವದ ಕಡೆಗೆ ಚಲಿಸಿ ಇರಾನ್ ಮತ್ತು ಅಫ್ಘಾನಿಸ್ತಾನ್ ಮೂಲಕ ಭಾರತ ತಲುಪುತ್ತದೆ. ಈ ಕಡಿಮೆ ಒತ್ತಡ ವಾಯುಭಾರ ಕುಸಿತವನ್ನು **'ಪಶ್ಚಿಮ ಕ್ಷೋಭೆ'** ಎನ್ನಲಾಗುತ್ತದೆ. ಈ ಕ್ಷೋಭೆಯನ್ನು ಭಾರತಕ್ಕೆ ತರುವಲ್ಲಿ ಒಂದು ಜೆಟ್ ಪ್ರವಾಹ ಪ್ರಧಾನ ಪಾತ್ರ ವಹಿಸುತ್ತದೆ. ಈ ಕ್ಷೋಭೆಯು ಪಂಜಾಬ್, ಹರಿಯಾಣ ಮತ್ತು ಹಿಮಾಚಲ ಪ್ರದೇಶಗಳಲ್ಲಿ ಗೋಧಿ ಕೃಷಿಗೆ ಉಪಯುಕ್ತವಾದ ಮಳೆಯನ್ನು ತರುತ್ತದೆ. ಅಲ್ಲದೆ ಜಮ್ಮು ಮತ್ತು ಕಾಶ್ಮೀರ್‌ನಲ್ಲಿ ಹಿಮಮಳೆಯನ್ನು ತರುತ್ತದೆ.


ಮಾನ್ಸೂನ್‌ನ ಲಕ್ಷಣಗಳು

1. ವರ್ಷದಾದ್ಯಂತ ಮಳೆಯ ಅಸಮಾನ ಹಂಚಿಕೆ :

ನೈರುತ್ಯ ಮಾನ್ಸೂನ್ ಶೇ. 80 ರಷ್ಟು ಮಳೆಯನ್ನು ಜೂನ್ ನಿಂದ ಸೆಪ್ಟೆಂಬರ್‌ವರೆಗೆ ಸುರಿಸುತ್ತವೆ.

ಭಾರತ

ಈಶಾನ್ಯ ಮಾನ್ಸೂನ್ ಮಾರುತ ಅಥವಾ ಹಿಂಗಾರು ಮಳೆ



ಮಾನ್ಸೂನ್ ಸಾಮಾನ್ಯ ಅವಧಿಯು ಎರಡರಿಂದ ನಾಲ್ಕು ತಿಂಗಳು ಹೆಚ್ಚು ಕಡಿಮೆಯಾಗುತ್ತಿರುತ್ತದೆ. ಸೆಪ್ಟೆಂಬರ್ ತಿಂಗಳ ಅವಧಿಯಲ್ಲಿ ಸಾಮಾನ್ಯ ನೈರುತ್ಯ ಮಾರುತದ ನಿರ್ಗಮನವಾಗುತ್ತದೆ ಮತ್ತು ದೇಶದ ಇನ್ನುಳಿದ ಕೆಲವು ಭಾಗಗಳಲ್ಲಿ ಅಕ್ಟೋಬರ್‌ನಲ್ಲಿ ಮತ್ತೆ ಕೆಲವು ಭಾಗಗಳಲ್ಲಿ ನವಂಬರ್ ನಲ್ಲಿ ಈ ಮಾರುತಗಳು ನಿರ್ಗಮನವಾಗುತ್ತದೆ.

2. ಪರ್ವತಗಳ ಪ್ರಭಾವ

ಪರ್ವತಗಳ ಲಕ್ಷಣಗಳಿಂದ ಮಳೆಯು ತುಂಬಾ ಪ್ರಭಾವಿತವಾಗಿರುತ್ತದೆ. ಗುಜರಾತ್ ಮತ್ತು ರಾಜಸ್ತಾನ್ ಮೂಲಕ ಈ ಮಾರುತಗಳು ಹಾಯ್ದು ಹೋದರೂ ಸಹ ಪರ್ವತಗಳಿಲ್ಲದೇ ಇರುವುದರಿಂದ ತುಂಬಾ ಕಡಿಮೆ ಮಳೆ ತರುತ್ತವೆ. ಪಶ್ಚಿಮ ಕರಾವಳಿ ಉದ್ದಕ್ಕೂ, ಮಾರುತಗಳಿಗೆ ಅಭಿಮುಖವಾದ ಪಶ್ಚಿಮ ಘಟ್ಟಗಳಿಗೆ ಈ ಮಾರುತಗಳು ತುಂಬಾ ಮಳೆ ತರುತ್ತದೆ. ಉದಾಹರಣೆಗೆ ಶಿಲ್ಲಾಂಗ್ ಪೀಠಭೂಮಿ ವಾರ್ಷಿಕ 1270 ಸೆಂ.ಮೀ. ಮಳೆಯನ್ನು ಪಡೆದರೆ ಮಳೆನೆರಳಿನ ಪ್ರದೇಶದಲ್ಲಿರುವ ಅಸ್ಸಾಂ ಕಣಿವೆಯ ಮಧ್ಯಭಾಗವು ವಾರ್ಷಿಕ 163.7 ಸೆ.ಮೀ ಮಳೆಯನ್ನು ಪಡೆಯುತ್ತವೆ.

3. ಉಷ್ಣವಲಯ ಚಂಡಮಾರುತಗಳು

ಬಂಗಾಳಕೊಲ್ಲಿಯ ಉತ್ತರ ಭಾಗದಲ್ಲಿ ಹುಟ್ಟಿ ದೇಶದ ಪಶ್ಚಿಮ ಮತ್ತು ವಾಯುವ್ಯ ದಿಕ್ಕಿಗೆ ಹೋಗುವ ಉಷ್ಣವಲಯ ಚಂಡಮಾರುತಗಳ ಸರಣಿಯು ಮಳೆಯ ತೀವ್ರತೆ ಮತ್ತು ಹಂಚಿಕೆಯನ್ನು ನಿರ್ಧರಿಸುತ್ತದೆ. ಜೂನ್–ಸೆಪ್ಟೆಂಬರ್ ಗಳ ನಡುವೆ ಬಂಗಾಳ ಕೊಲ್ಲಿಯಿಂದ ಸರಾಸರಿ, ಇಂತಹ ಎಂಟು ಚಂಡಮಾರುತಗಳು ಹಾದು ಹೋಗುತ್ತವೆ.

ಚಂಡಮಾರುತ

"ಚಂಡಮಾರುತವೆಂಬುದು ಸಮುದ್ರದಲ್ಲಿ ಉಂಟಾಗುವ ಚಿಕ್ಕದಾದ ಆದರೆ ತೀವ್ರವಾದ ಕಡಿಮೆ ಒತ್ತಡ ಪ್ರದೇಶವಾಗಿದೆ. ಇದರಿಂದ ತೀವ್ರವಾದ ಗಾಳಿಯೂ, ಭಾರೀ ಮಳೆಯೂ ಉಂಟಾಗುತ್ತದೆ".

4. ಮಳೆಯ ಅನಿಶ್ಚಿತ ಸ್ವರೂಪ :

ಮಳೆಯು ಯಾವುದಾದರೂ ಒಂದು ಸಾಮಾನ್ಯ ಸ್ಥಿತಿಯಲ್ಲಿ ಇರುತ್ತದೆ ಎಂದು ವ್ಯಾಖ್ಯಾನಿಸುವುದು ಕಷ್ಟಕರ. ಏಕೆಂದರೆ ಒಂದೇ ಪ್ರದೇಶವು ಒಂದು ಋತು ಮಾನದಲ್ಲಿ ಭಾರಿ ಮಳೆ ಪಡೆದರೆ, ಮತ್ತೊಂದು ಋತು ಮಾನದಲ್ಲಿ ಬರಗಾಲವನ್ನು ಅನುಭವಿಸಬಹುದು. ಮಳೆಗಾಲದ ಆರಂಭವು ನಿಧಾನವಾಗಬಹುದು . ಜುಲೈ–ಆಗಸ್ಟ್ ಗಳ ನಡುವೆ ಮಾನ್ಸೂನ್ ವಾರಕ್ಕೂ ಹೆಚ್ಚು ದಿನಗಳು ಬಿಟ್ಟು ಬರಬಹುದು . ಮಾನ್ಸೂನ್ ಕೆಲವು ವೇಳೆ ಬೇಗ ನಿರ್ಗಮನವಾದರೆ ,ಮತ್ತೆ ಕೆಲವು ವೇಳೆ ಧೀರ್ಘಕಾಲದವರೆಗೆ ಮಳೆ ಬರುತ್ತದೆ.

5. ಭಾರತದ ಆರ್ಥಿಕತೆಯ ಮೇಲೆ ಮಾನ್ಸೂನ್ ಮಳೆಯು ತುಂಬಾ ಪ್ರಭಾವ ಬೀರುತ್ತದೆ .

ಭಾರತದ ಸಂಪತ್ತು ಮನ್ಸೂನ್ ಮಳೆಯ ಸಫಲತೆ ಅಥವಾ ವಿಫಲತೆಯನ್ನು ಅವಲಂಭಿಸಿದೆ.

ಮಳೆ ತರುವ ಮಾರುತಗಳಲ್ಲಿ ಸಣ್ಣ ಅದಲು ಬದಲುಗಳಾದರೂ, ಜಲಭರಿತ ಪ್ರದೇಶಗಳೂ ಮರುಭೂಮಿಗಳಂತೆ ಪರಿವರ್ತನೆಗಳಾಗಬಹುದು. ಉದಾಹರಣೆಗೆ, ದಖ್ಖನ್ ಪ್ರಸ್ಥಭೂಮಿ ಮತ್ತು ಗುಜರಾತ್‌ನ ಬರಪೀಡಿತಪ್ರದೇಶಗಳು ಕಡಿಮೆ ಮಳೆ ಬಿದ್ದ ವರ್ಷಗಳಲ್ಲಿ ಜಲ ವಿದ್ಯುತ್ ಕೇಂದ್ರಗಳು ತೀವ್ರ ವಾದ ಪರಿಣಾಮವನ್ನು ಎದುರಿಸುತ್ತವೆ.

ಕೈಗಾರಿಕೆಗಳಿಗೆ ಪೂರೈಸುವ ವಿದ್ಯುಚ್ಛಕ್ತಿಯನ್ನು ಕಡಿತಗೊಳಿಸುವುದರಿಂದ ಆರ್ಥಿಕತೆಗೆ ಅಪಾರ ನಷ್ಟವನ್ನುಂಟು ಮಾಡುತ್ತದೆ.

ಬೇಸಿಗೆ ಕಾಲದ ಮಳೆ

ಚಿರಾಪುಂಜಿಯಿಂದ 16 ಕಿ.ಮಿ ಪಶ್ಚಿಮಕ್ಕಿರುವ ಮೌಸಿನ್‌ರಾಮ್ ವಾರ್ಷಿಕ ಸರಾಸರಿ 1187 ಸೆ.ಮೀ. ಮಳೆ ಪಡೆದಿರುತ್ತದೆ. ಇದು ಪ್ರಪಂಚದಲ್ಲೆ ಹೆಚ್ಚು ಮಳೆಯಾಗಿದೆ. ರಾಜಸ್ತಾನದ ಥಾರ್ ಮರುಭೂಮಿಯು 25 ಸೆ.ಮೀ.ಗಿಂತಲು ಕಡಿಮೆ ಮಳೆ ಪಡೆಯುತ್ತದೆ. ಅಂದರೆ ವಾರ್ಷಿಕ ಸರಾಸರಿ 1187 ಸೆ.ಮೀ.ನಿಂದ 25 ಸೆ.ಮೀ. ವರೆಗೆ ಮಳೆಯು ಏರಿಳಿತ ಪಡೆದಿರುತ್ತದೆ.

ಅನಿಶ್ಚಿತ ಮಾನ್ಸೂನ್ ಸ್ವರೂಪವು ಊಹಾತೀತ ಮಳೆ ತಂದು ಭಾರಿ ನಷ್ಟವನ್ನುಂಟು ಮಾಡುತ್ತದೆ.

ಚಳಿಗಾಲದ ಮಳೆ

ಚಳಿಗಾಲದ ಮಳೆಯು ಅಕ್ಟೋಬರ್‌ನಲ್ಲಿ ಬಂಗಾಳ ಕೊಲ್ಲಿಯಲ್ಲಿ ಹುಟ್ಟಿ, ತೇವಾಂಶಭರಿತ ಆರ್ದ್ರ ನಿರ್ಗಮನ ಮಾನ್ಸೂನ್‌ನನ್ನು ಭೇಟಿಯಾಗುತ್ತದೆ. ಈ ಗಾಳಿಯು ಬಂಗಾಳ ಕೊಲ್ಲಿಯಲ್ಲಿಯೇ ಸುತ್ತುತ್ತಾ ತಮಿಳುನಾಡಿನ ಕರಾವಳಿಯ ಕಡೆಗೆ ನೇರವಾಗಿ ಬೀಸಿ, ಆ ಪ್ರದೇಶವನ್ನು ತೇವ ಭರಿತವಾಗಿ ಮಾಡುವುದಲ್ಲದೆ ಇಡೀ ವರ್ಷದ ಹವಾಮಾನಕ್ಕೆ ಅಡ್ಡಿ ಪಡಿಸುತ್ತದೆ. (ಮುಖ್ಯವಾಗಿ ಅಕ್ಟೋಬರ್ ಮತ್ತು ನವಂಬರ್ ಅವಧಿಯಲ್ಲಿ) ಈ ವೇಳೆಯಲ್ಲಿ ಬೀಳುವ ಮಳೆಯು ಭಾರೀಹಾನಿಯನ್ನುಂಟು ಮಾಡುತ್ತದೆ.

ಅದೇ ರೀತಿ ನಾಗಪಟ್ಟಣಂ 100 ಸೆ.ಮೀ. ಮಳೆಯನ್ನು ತಾನು ಪಡೆಯುವ ಚಳಿಗಾಲದ ಮಳೆಯಲ್ಲಿ ಒಟ್ಟು 140 ಸೆ.ಮೀ.ನಲ್ಲಿ ಸರಾಸರಿ ಈ ವೇಳೆಯಲ್ಲೇ ಪಡೆಯುತ್ತದೆ. ಮಳೆಯ ಪ್ರಮಾಣವು ಒಳನಾಡಿಗಿಂತ ಕರಾವಳಿಯಲ್ಲಿ ಅತಿ ಹೆಚ್ಚು, ಒಳನಾಡಿಗೆ ಹೋದಂತೆಲ್ಲಾ ಕಡಿಮೆಯಾಗುತ್ತಾ ಹೋಗುತ್ತದೆ. ಅಂದರೆ ಕರ್ನಾಟಕದ ಮೈಸೂರು ಮೈದಾನವು 3 ಅಥವಾ 4 ಸೆ.ಮಿ. ಮಳೆ ಪಡೆಯುತ್ತದೆ.

ಮಳೆಯ ಹಂಚಿಕೆ

ಈಗಾಗಲೇ ನಾವು ಗುರುತಿಸಿರುವಂತೆ ಮಳೆಯ ಹಂಚಿಕೆಯು ಎರಡು ಮುಖ್ಯವಾದ ಅಂಶಗಳಿಂದ ನಿರ್ಧಾರವಾಗುತ್ತದೆ. ಅವುಗಳೆಂದರೆ,

1. ಮಳೆತರುವ ಮಾರುತಗಳ ದಿಕ್ಕು.
2. ಪರ್ವತ ಸರಣಿಗಳ ಸ್ಥಾನ.

ಈ ಅಂಶಗಳಿಂದ ನಮ್ಮ ದೇಶದ 30 ರಷ್ಟು 15 ರಿಂದ 80 ಸೆಂ.ಮೀ. ಮಳೆ ಪಡೆದರೆ, 40 ರಷ್ಟು 80 ರಿಂದ 120 ಸೆಂ.ಮೀ.ಮಳೆ ಪಡೆಯುತ್ತದೆ, 20 ರಷ್ಟು 120 ರಿಂದ 180 ಸೆಂ.ಮೀ. ಮಳೆ ಪಡೆದರೆ 10 ರಷ್ಟು ಮಾತ್ರ 200 ಸೆಂ.ಮೀ. ಗಿಂತಲೂ ಅಧಿಕ ಮಳೆ ಪಡೆಯುತ್ತದೆ.

ನಮ್ಮ ದೇಶವು ಪಡೆಯುವ ಮಳೆಯ ಪ್ರಮಾಣದ ಆಧಾರದ ಮೇಲೆ 4 ಮಳೆ ಪ್ರದೇಶವಾಗಿ ವಿಭಾಗಿಸ ಬಹುದು.

1) ಅತ್ಯಧಿಕ ಮಳೆ ಬೀಳುವ ಪ್ರದೇಶ

300ಸೆಂ.ಮೀ.ಗಿಂತಲೂ ಅಧಿಕ ಮಳೆ ಪಡೆಯುವ ಹಿಮಾಲಯದ ಪೂರ್ವ ಭಾಗ, ಅಸ್ಸಾಂ, ಬಂಗಾಳ ಮತ್ತು ಕೊಂಕಣ ಹಾಗೂ ಮಲಬಾರ್ ಕರಾವಳಿಗಳನ್ನೊಳಗೊಂಡ ಪಶ್ಚಿಮ ಕರಾವಳಿ ಪ್ರದೇಶ.

2) ಅಧಿಕ ಮಳೆ ಬೀಳುವ ಪ್ರದೇಶ

200ರಿಂದ 300ಸೆಂ.ಮೀ.ನಡುವೆ ಮಳೆ ಬೀಳುವ ಮಧ್ಯ ಗಂಗಾ ಕಣಿವೆ, ಪಶ್ಚಿಮ ಘಟ್ಟಗಳು, ಪೂರ್ವ ಮಹಾರಾಷ್ಟ್ರ, ಮಧ್ಯಪ್ರದೇಶ ಮತ್ತು ಒಡಿಸ್ಸ ಪ್ರದೇಶಗಳು.

3) ಸಾಧಾರಣಾ ಮಳೆ ಬೀಳುವ ಪ್ರದೇಶಗಳು


100ರಿಂದ 200ಸೆಂ.ಮೀ.ಒಳಗೆ ಮಳೆ ಬೀಳುವ ಗಂಗಾಕಣಿವೆಯ ಮೇಲ್ಭಾಗ, ಪೂರ್ವ ರಾಜಸ್ಥಾನ ಮತ್ತು ಪಂಜಾಬ್,ದಕ್ಷಿಣ ದಖ್ಖನ್ ಪ್ರಸ್ಥಭೂಮಿಯ ಕರ್ನಾಟಕ, ಆಂಧ್ರಪ್ರದೇಶ ಮತ್ತು ತಮಿಳುನಾಡಿನ ಪ್ರದೇಶಗಳು.

4) ಕಡಿಮೆ ಮಳೆ ಬೀಳುವ ಪ್ರದೇಶಗಳು

50ಸೆಂ.ಮೀ.ಗಿಂತ ಕಡಿಮೆ ಮಳೆ ಪಡೆಯುವ ಕಾಶ್ಮೀರದ ಉತ್ತರ ಭಾಗ, ಪಶ್ಚಿಮ ರಾಜಸ್ಥಾನ್, ದಕ್ಷಿಣ ಪಂಜಾಬ್ ಮತ್ತು ಪಶ್ಚಿಮ ಘಟ್ಟಗಳ ಮಳೆ ನೆರಳಿನ ದಖ್ಖನ್ ಪ್ರಸ್ಥಭೂಮಿ ಪ್ರದೇಶಗಳು.

ಜಲ ನಿರ್ವಹಣೆ

ಜಲನಿರ್ವಹಣೆ ಎಂಬುದು ಲಭ್ಯವಿರುವ ಜಲಸಂಪನ್ಮೂಲವನ್ನು ಸನ್ಮಾರ್ಗದಲ್ಲಿ ಮಾನವನಿಗೆ ಉಪಯೋಗವಾಗುವಂತೆ ಮಾಡುವುದಾಗಿದೆ. ಇದು ಜಲಮಾಲಿನ್ಯ ಮತ್ತು ನೀರನ್ನು ಬರಿದು ಮಾಡುವುದನ್ನು ನಿಯಂತ್ರಿಸುವುದಲ್ಲದೆ ಭವಿಷ್ಯದ ಅಗತ್ಯಗಳಿಗೆ ಅನುಕೂಲವಾಗುವ ಕ್ರಮ ಕೈಗೊಳ್ಳುವುದು ಆಗಿದೆ. ನೀರು ಒಂದು ಅತ್ಯವಶ್ಯಕ ಮತ್ತು ಬಹುಉಪಯೋಗಿ ಸಂಪನ್ಮೂಲ. ಅಲ್ಲದೆ ನೀರು ಹಲವು ರೀತಿಯಲ್ಲಿ ಬಳಕೆಯಾಗುವುದು. ಆದ್ದರಿಂದ ಇಂದು ಮಣ್ಣು ಮತ್ತು ಜಲಸಂಪನ್ಮೂಲಗಳನ್ನು ಸಂಯುಕ್ತವಾಗಿ ನಿರ್ವಹಣೆ ಮಾಡುವುದು ಅತ್ಯಗತ್ಯವಾಗಿದೆ.



ಜಲನಿರ್ವಹಣೆಯನ್ನು ಎಲ್ಲಾ ಹಂತದಲ್ಲೂ ಅಳವಡಿಸಿಕೊಳ್ಳಬೇಕಾಗುತ್ತದೆ.

ಜಲ ಸಂರಕ್ಷಣೆಗೆ ಬೇಕಾದ ಮಾಲಭೂತ ಅವಶ್ಯಕತೆಗಳು

1) ಸ್ಥಳೀಯ ಜನರ ಸಹಕಾರ ಮತ್ತು ಭಾಗವಹಿಸುವಿಕೆ ಹಾಗೂ ಎಲ್ಲರೂ ಪಾಲ್ಗೊಳ್ಳುವುದು.

2) ಗೃಹ ಉಪಯೋಗಿ ನೀರಿನ ಅಗತ್ಯವನ್ನು ನಿಯಂತ್ರಿಸುವಲ್ಲಿ ಮಹಿಳೆಯ ಪಾತ್ರ.


3) ಜಲ ನಿರ್ವಹಣೆಯ ಮುಖ್ಯ ಅಂಶವೆಂದರೆ ನೀರು ಒಂದು ಆರ್ಥಿಕ ಮೌಲ್ಯವುಳ್ಳ ಸಂಪನ್ಮೂಲ. ಅದನ್ನು ತೃಪ್ತಿಕರ ಮತ್ತು ಲಾಭದಾಯಕ ರೀತಿಯಲ್ಲಿ ಬಳಸಿಕೊಳ್ಳುವ ಗುಣ.

4) ಈ ಆರ್ಥಿಕ ವಸ್ತುವಿನ ಹಂಚಿಕೆಯಲ್ಲಿ ಗುಣ್ಣಮಟ್ಟ ಮತ್ತು ಸಮಾನತೆಯನ್ನು ಕಾಪಾಡಿಕೊಳ್ಳುವುದು.

'ಮಳೆ ನೀರು ಶೇಖರಣೆ' ಮೂಲಕ ನಾವು ನೀರನ್ನು ಉಳಿತಾಯ ಮಾಡುವುದು.

ಮಳೆ ನೀರು ಶೇಖರಣೆ

ಭಾರತವು ಉಷ್ಣವಲಯ ಮಾನ್ಸೂನ್ ವಾಯುಗುಣವನ್ನು ಹೊಂದಿದೆ. ಇದು ಋತುಮಾನಿಕ ಮಳೆಯನ್ನು ತರುತ್ತದೆ. ಇದು ಅಸಮಾನವಾಗಿ ಮತ್ತು ಅನಿಯಮಿತವಾಗಿದೆ. ಬಹುಪಾಲು ವಿರಳ ಮಳೆಬೀಳುವುದರಿಂದ ಅದನ್ನು ಉಳಿತಾಯ ಮಾಡುವುದು ಅವಶ್ಯಕ. ನಾವು ಈ ನೀರನ್ನು ಭೂಗರ್ಭದಲ್ಲಿ ಇಂಗುವಂತೆ ಮಾಡಿ ಸಂಗ್ರಹಿಸಿ ಅಗತ್ಯ ಬಂದಾಗ ತೆಗೆದು ಕೊಳ್ಳುವಂತಿರಬೇಕು. ಭೂಮೇಲ್ಮೈಯಲ್ಲಿ ಹರಿದು ಹೋಗುವ ನೀರನ್ನು ತಡೆದು , ಅಂತರ್ಜಲವಾಗಿ ಸಂಗ್ರಹಿಸಿ, ಭವಿಷ್ಯದ ಗೃಹೋಪಯೋಗಕ್ಕೆ ಮತ್ತು ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳಿಗೆ ಬಳಸಿಕೊಳ್ಳಬಹುದು. ಆದುದರಿಂದ ಮಳೆ ನೀರಿನ ಸಂಗ್ರಹಣೆ ನಮ್ಮ ಉದ್ದೇಶಗಳಿಗಾಗಿ ನೀರನ್ನು ನೇರವಾಗಿ ಸಂಗ್ರಹಿಸುವುದಾಗಿದೆ. ಅಥವಾ ಅದನ್ನು ನಂತರ ತೆಗೆದುಕೊಳ್ಳುವಂತೆ ಪುನರ್ ಸಂಗ್ರಹಿಸಿಕೊಳ್ಳಬಹುದು. ಮಳೆ ನೀರಿನ ಶೇಖರಣೆಯ ಮೂಲಕ ಮಳೆಯ ನೈಜ ಮೌಲ್ಯ ತಿಳಿದುಕೊಂಡು ಅದನ್ನು ಸದ್ಬಳಕೆ ಮಾಡಿಕೊಳ್ಳಬಹುದು.



ಅಭ್ಯಾಸ

ಅ. ಸೂಕ್ತ ಉತ್ತರ ಆರಿಸಿ ಬರೆಯಿರಿ

1) ಭಾರತವು _____ವಾಯುಗುಣವನ್ನು ಹೊಂದಿದೆ.

ಅ)ಸಮಶೀತೋಷ್ಣ ವಾಯುಗುಣ ಆ)ಉಷ್ಣವಲಯ ಮಾನ್ಸೂನ್ ವಾಯುಗುಣ

ಇ)ಉಷ್ಣವಲಯ ವಾಯುಗುಣ ಈ)ಶೀತವಾಯುಗುಣ

2) ಕರಾವಳಿ ಪ್ರದೇಶವು _____ವಾಯುಗುಣವನ್ನು ಹೊಂದಿದೆ.

ಅ)ಖಂಡಾಂತರ ಆ)ಸಮಾನ

ಇ)ಆರ್ದ್ರತೆ ಈ)ಉಷ್ಣ

3) ಪಶ್ಚಿಮಭಾರತ ಅಡೆತಡೆಗಳಿಂದ ಮಳೆಯನ್ನು ಪಡೆಯುವ ಸ್ಥಳ_____

ಅ)ಪಂಜಾಬ್ ಆ)ಮುಂಬೈ

ಇ)ಅಲಹಾಬಾದ್ ಈ)ಚೆನ್ನೈ

4) ನೈರುತ್ಯ ಮಾನ್ಸೂನ್ ಮಾರುತಗಳಿಗೆ ಸಮಾಂತರ ದಿಕ್ಕಿನಲ್ಲಿರುವ ಪರ್ವತ_____

ಅ)ಅರಾವಳಿ ಆ)ಸಾತ್ಪುರ

ಇ)ವಿಂದ್ಯಾ ಈ)ಮೈಕಲ್ ಸರಣಿ

5) ಈಶಾನ್ಯ ಭಾರತದಲ್ಲಿ ಉಷ್ಣಹವಾಮಾನ ಕಾಲದಲ್ಲಿ ಬೀಸುವ ಸ್ಥಳೀಯ ಬಿರುಗಾಳಿಯನ್ನು_____ಎನ್ನುತ್ತೇವೆ.

ಅ) ನಾರ್'ವೆಸ್ಟರ್ಸ್ ಮಾರುತಗಳು ಆ) ಲೂ

ಇ) ಮ್ಯಾಂಗ್ರೋಶೋಯರ್ ಈ)ಮಾನ್ಸೂನ್ ಮಾರುತ

ಆ. ಹೊಂದಿಸಿ ಬರೆಯಿರಿ

1)	ಮಾನ್ಸೂನ್ ಮಳೆ ಆಗಮನ	ಡಿಸೆಂಬರ್ ನಿಂದ ಫೆಬ್ರವರಿವರೆಗೆ
2)	ನಾರ್'ವೆಸ್ಟರ್ಸ್	ಅಕ್ಟೋಬರ್ ನಿಂದ ನವಂಬರ್ ವರೆಗೆ
3)	ನೀರು ಶೇಖರಣಾ ಕ್ರಮಗಳು	ಭಾರತದ ಉತ್ತರ ಮತ್ತು ವಾಯುವ್ಯ ಭಾಗ
4)	ಈಶಾನ್ಯ ಮಾನ್ಸೂನ್ ಮಾರುತ ಕಾಲ	ಈಶಾನ್ಯ ಭಾರತದ ಸ್ಥಳೀಯ ಗಾಳಿ
5)	ಅಧಿಕ ಮಳೆ ಪಡೆಯುವ ಸ್ಥಳ	ಜೂನ್ ನಿಂದ ಸೆಪ್ಟೆಂಬರ್'ವರೆಗೆ
		ಮೌಸಿನ್ ರಾಮ್
		ಸ್ಥಳೀಯ ಜನರ ಭಾಗವಾಹಿಸುವಿಕೆ

ಇ. **ಇವುಗಳ ನಡುವಿನ ವ್ಯತ್ಯಾಸ ತಿಳಿಸಿ;**

1) ಪರ್ವತದ ಅಭಿಮುಖಕಡೆ ಮತ್ತು ವಿಮುಖ ಕಡೆ

2) ನೈರುತ್ಯಮಾನ್ಸೂನ್ ಮತ್ತು ಈಶಾನ್ಯ ಮಾನ್ಸೂನ್

3) ಪಶ್ಚಿಮ ಅಡೆತಡೆಗಳು ಮತ್ತು ಉಷ್ಣವಲಯ ಚಂಡಮಾರುತಗಳು

4) ಹವಾಮಾನ ಮತ್ತು ವಾಯುಗುಣ

5) ಲೂ ಮತ್ತು ನಾರ್'ವೆಸ್ಟರ್ಸ್ ಮಾರುತಗಳು

ಈ. **ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ**

1) ಭಾರತದ ವಾಯುಗುಣವನ್ನು ನಿರ್ಧರಿಸುವ ಅಂಶಗಳನ್ನು ಹೆಸರಿಸಿ.

2) ಮಾನ್ಸೂನ್ ಪದದ ಅರ್ಥವೇನು?

3) ಉಷ್ಣವಲಯ ಮಾನ್ಸೂನ್ ವಾಯುಗುಣದ ಮುಖ್ಯ ಲಕ್ಷಣಗಳು ಯಾವುವು?

4) ಜೆಟ್ ಬಿರುಗಾಳಿ ಎಂದರೇನು? ಅದು ಹೇಗೆ ಭಾರತದ ವಾಯುಗುಣದ ಮೇಲೆ ಪರಿಣಾಮ ಬೀರುತ್ತದೆ?

5) ಭಾರತದಲ್ಲಿ ಅತಿಹೆಚ್ಚು ಮಳೆ ಬೀಳುವ ಪ್ರದೇಶಗಳನ್ನು ಹೆಸರಿಸಿ,

6) ಮಾನ್ಸೂನ್ ಆಗಮನ ಎಂದರೇನು?

ಉ. **ಈ ಕೆಳಗಿನ ಪ್ರಶ್ನೆಗಳಿಗೆ ಟಿಪ್ಪಣಿ ಬರೆಯಿರಿ**

1) ಭಾರತದ ವಾಯುಗುಣವನ್ನು ನಿರ್ಧರಿಸುವ ಯಾವುದಾದರು 2 ಅಂಶಗಳನ್ನು ವಿಶ್ಲೇಷಿಸಿ.

2) ಮಾನ್ಸೂನ್ ಮಾರುತಗಳ ಗುಣಲಕ್ಷಣಗಳನ್ನು ಬರೆಯಿರಿ.

3) ನೈರುತ್ಯ ಮಾರುತದ ಯಾವುದಾದರೂ ಒಂದು ಶಾಖೆಯನ್ನು ವಿವರಿಸಿ.

4) ಮಳೆ ನೀರಿನ ಸಂಗ್ರಹಣೆಯನ್ನು ವಿವರಿಸಿ.

5) ಜಲ ನಿರ್ವಹಣೆ ಎಂದರೇನು? ಜಲ ಸಂರಕ್ಷಣೆಗೆ ಬೇಕಾದ ಮೂಲ ಅಗತ್ಯಗಳು ಯಾವುವು?

ಊ. **ಕೊಟ್ಟಿರುವ ಭಾರತದ ಭೂಪಟದಲ್ಲಿ ಈ ಕೆಳಕಂಡವುಗಳನ್ನು ಗುರುತಿಸಿ.**

1) ನೈರುತ್ಯ ಮಾನ್ಸೂನ್ ಮತ್ತು ಈಶಾನ್ಯ ಮಾನ್ಸೂನ್ ಮಾರುತಗಳು ಬೀಸುವ ದಿಕ್ಕು.

2) 200ಸೆಂಟಿಮೀಟರ್ ಗಿಂತಲೂ ಅಧಿಕ ಮಳೆ ಪಡೆಯುವ ಮತ್ತು 50ಸೆಂಟಿಮೀಟರ್ ಗಿಂತಲೂ ಕಡಿಮೆ ಮಳೆ ಪಡೆಯುವ ಪ್ರದೇಶಗಳನ್ನು ಗುರುತಿಸಿ.

3.ಭಾರತ – ಸ್ವಾಭಾವಿಕ ಸಂಪನ್ಮೂಲಗಳು

ನಮ್ಮ ದಿನನಿತ್ಯದ ಜೀವನಕ್ಕೆ ಸ್ವಾಭಾವಿಕ ಸಂಪನ್ಮೂಲಗಳು ಅತಿ ಮುಖ್ಯವಾದವುಗಳಾಗಿವೆ. ಒಂದು ದೇಶದ ಆರ್ಥಿಕ ಅಭಿವೃದ್ಧಿಯು ಆ ದೇಶದಲ್ಲಿ ದೊರಕುವ ಹಲವು ಬಗೆಯ ಸ್ವಾಭಾವಿಕ ಸಂಪನ್ಮೂಲಗಳು ಮತ್ತು ಅವುಗಳ ಪ್ರಮಾಣಗಳನ್ನು ಅವಲಂಬಿಸಿರುತ್ತವೆ. ಇಂತಹ ಸಂಪನ್ಮೂಲಗಳು ಸರಿಯಾದ ರೀತಿಯಲ್ಲಿ ಬಳಸಲ್ಪಡಬೇಕು. ಸ್ವಾಭಾವಿಕ ಸಂಪನ್ಮೂಲಗಳನ್ನು ಅತ್ಯಧಿಕವಾಗಿ ನಾವು ಬಳಸುವುದರಿಂದ ಅದು ಪರಿಸರಹಾನಿಯನ್ನುಂಟು ಮಾಡುವುದಲ್ಲದೆ, ಸಂಪನ್ಮೂಲಗಳು ತ್ವರಿತವಾಗಿ ನಾಶವಾಗುವುದಕ್ಕೂ ಕಾರಣವಾಗುತ್ತದೆ. ಭಾರತದಲ್ಲಿ ಪ್ರಮುಖವಾದ ಸಂಪನ್ಮೂಲಗಳನ್ನು, ಅವುಗಳನ್ನು ಸಂರಕ್ಷಿಸುವ ಅಗತ್ಯತೆಯ ಬಗ್ಗೆಯೂ ತಿಳಿಯೋಣ.

ಸ್ವಾಭಾವಿಕ ಸಂಪನ್ಮೂಲಗಳು

ದಿನ ನಿತ್ಯದ ಜೀವನದಲ್ಲಿ ಅವಶ್ಯಕವಾದವುಗಳನ್ನು ಈಡೇರಿಸುವ ಪ್ರಕೃತಿಯಿಂದ ಪಡೆಯುವ ಎಲ್ಲಾ ವಸ್ತುಗಳನ್ನು ಸಂಪನ್ಮೂಲಗಳು ಎನ್ನುತ್ತೇವೆ. ಭೂಮಿ, ಗಾಳಿ, ನೀರು, ಸೌರಶಕ್ತಿ, ಮಣ್ಣು ಸಂಪನ್ಮೂಲಗಳು,ಕಲ್ಲಿದ್ದಲು, ಪೆಟ್ರೋಲಿಯಂ, ಸಸ್ಯಗಳು ಮತ್ತು ಪ್ರಾಣಿಗಳು ಮುಂತಾದವುಗಳು ಸ್ವಾಭಾವಿಕ ಸಂಪ್ಮನೂಲಗಳಿಗೆ ಕೆಲವು ಉದಾಹರಣೆಗಳಾಗಿವೆ. ಮಾನವರು ತಮ್ಮ ಉಸಿರಾದ ಈ ಸಂಪನ್ಮೂಲಗಳನ್ನು ಪ್ರತ್ಯಕ್ಷವಾಗಿಯೋ ಅಥವಾ ಅಪ್ರತ್ಯಕ್ಷವಾಗಿಯೋ ಉಪಯೋಗಿಸುತ್ತಿದ್ದಾರೆ.

ಸ್ವಾಭಾವಿಕ ಸಂಪನ್ಮೂಲಗಳನ್ನು ಎರಡು ದೊಡ್ಡ ವಿಭಾಗಗಳಾಗಿ ವಿಂಗಡಿಸಬಹುದು. ಅವುಗಳೆಂದರೆ,

1. ನವೀಕರಿಸಬಹುದಾದ ಸಂಪನ್ಮೂಲಗಳು
2. ನವೀಕರಿಸಲಾಗದ ಸಂಪನ್ಮೂಲಗಳು

1. ನವೀಕರಿಸಬಹುದಾದ ಸಂಪನ್ಮೂಲಗಳು

ನವೀಕರಿಸಬಹುದಾದ ಸಂಪನ್ಮೂಲ ಎಂಬುದು ಸ್ವಾಭಾವಿಕ ಪಳೆಯುಳಿಕೆ ಸಂಪನ್ಮೂಲಗಳಾಗಿವೆ. ಈ ಸಂಪನ್ಮೂಲವು ಜೀವಿಗಳ ಸಂತಾನಾಭಿವೃದ್ಧಿಯು ಕಾರಣದಿಂದಾಗಿಯೂ ಅಥವಾ ಮತ್ತಿತರ ಪ್ರಾಕೃತಿಕ ಕಾರಣದಿಂದಾಗಿಯೂ ಲಭ್ಯವಾಗುವ ಸಮಯವನ್ನು ಅವಲಂಬಿಸಿ ಪುನಃ ದೊರಕುವಂತಾಗುತ್ತದೆ. ನವೀಕರಿಸಬಹುದಾದ ಸಂಪನ್ಮೂಲವು ಭೂಮಿಯ ಪ್ರಾಕೃತಿಕ ಪರಿಸರದ ಒಂದು ಭಾಗವಾಗಿ ಕಂಡುಬರುವುದಲ್ಲದೆ ಪರಿಸರದ ಪ್ರಮುಖವಾದ ಪ್ರಭಾವವಾಗಿಯೂ ಕಂಡುಬಂದಿದೆ, ರಚನೆಯಾಗಿದೆ. ಉದಾಹರಣೆಗೆ ಕೃಷಿ ಉತ್ಪನ್ನಗಳು ಪುನಃ ಉತ್ಪತ್ತಿಯಾಗಲು ಕಡಿಮೆ ಕಾಲಾವಧಿಯನ್ನು ತೆಗೆದುಕೊಳ್ಳುತ್ತವೆ.

2. ನವೀಕರಿಸಲಾಗದ ಸಂಪನ್ಮೂಲಗಳು

ಬಳಕೆಯ ನಂತರ ಮತ್ತೆ ದೊರಕಲಾಗದ ಸಂಪನ್ಮೂಲಗಳನ್ನು ನವೀಕರಿಸಲಾಗದ ಸಂಪನ್ಮೂಲಗಳು ಎನ್ನುವರು. ಇವು ಬಹಳ ಕಾಲದಿಂದ ಭೂಮಿಯಲ್ಲಿ ರೂಪುಗೊಂಡಿವೆ.

ಖನಿಜಗಳು ಮತ್ತು ಪಳಯುಳಿಕೆ ಇಂಧನಗಳು ಈ ಬಗೆಯಲ್ಲಿ ಸೇರುತ್ತವೆ. ಇವು ಅತೀ ನಿಧಾನವಾಗಿ ರಚನೆಯಾಗುವುದರಿಂದ ಸುಲಭವಾಗಿ ನವೀಕರಿಸಲು ಸಾಧ್ಯವಾಗುವುದಿಲ್ಲ. ಉದಾಹರಣೆಗೆ ಕಲ್ಲಿದ್ದಲು ಮತ್ತು ಪೆಟ್ರೋಲಿಯಂ. ಆದ್ದರಿಂದ ನವೀಕರಿಸಲಾಗದ ಸಂಪನ್ಮೂಲಗಳನ್ನು ನಿಯಮಿತವಾಗಿ ಬಳಸಬೇಕು ಎಂದು ನಾವು ಆಗಾಗ್ಗೆ ತಿಳಿಸುತ್ತಿರುತ್ತೇವೆ.

ಮಣ್ಣು ಸಂಪನ್ಮೂಲಗಳು

ಮಣ್ಣು ಒಂದು ಅತೀ ಮುಖ್ಯವಾದ ನವೀಕರಿಸಲಾಗುವ ಸಂಪನ್ಮೂಲವಾಗಿದೆ. ಇದು ಸಸ್ಯಗಳ ಬೆಳವಣಿಗೆಗೆ ಮಧ್ಯವರ್ತಿಯಾಗಿಯೂ ಭೂಮಿಯಲ್ಲಿರುವ ಹಲವಾರು ಬಗೆಯ ಜೀವರಾಶಿಗಳಿಗೆ ಆಧಾರವಾಗಿದೆ. ಭೂಮಿಯ ಮೇಲ್ವಲಯದಲ್ಲಿ

ಹರಡಿರುವ ತೆಳುವಾದ ಹಾಗೂ ಸಡಿಲವಾದ ಪದರವೇ "ಮಣ್ಣು". ಇದು ಅನಿರ್ಧಿಷ್ಟವಾದ ಮತ್ತು ಸ್ಥಿರವಾದ ಸಂಯುಕ್ತ ವಸ್ತುಗಳಾಗಿರುವುದಿಲ್ಲ. ಮುಖ್ಯವಾದ ಸಸ್ಯಗಳ ಮತ್ತು ಪ್ರಾಣಿಗಳ ಪಳಯುಳಿಕೆಗಳನ್ನೊಳಗೊಂಡಿದೆ ಮಣ್ಣಿನಲ್ಲಿರುವ ವಸ್ತುಗಳು ಯಾವುವೆಂದರೆ,

1. ಕೊಳೆತ ಸಸ್ಯಗಳು,
2. ಪ್ರಾಣಿಗಳ ಅವಶೇಷಗಳು.
3. ಸಿಲಿಕಾನ್. ಜೇಡಿಮಣ್ಣು. ಸುಣ್ಣ ಇನ್ನೂ ಮುಂತಾದ ಖನಿಜಗಳು.
4. ಅವಯವ ಎನ್ನಲ್ಪಡುವ ಹ್ಯೂಮಸ್.

ಮಣ್ಣಿನ ಫಲವತ್ತತೆ (Soil Fertility)

ಅಧಿಕ ಸತ್ವವನ್ನು ಹೊಂದಿರುವ ಸಂಪನ್ಮೂಲವಾಗಿರುವುದರಿಂದ ಇದು ಸಸ್ಯಗಳ ಬೆಳವಣಿಗೆಗೆ ಆಧಾರವಾಗಿದೆ. ಸಸ್ಯಗಳಬೆಳವಣಿಗೆಗೆ ಆಧಾರವಾಗಿರುವ ಮಣ್ಣಿನಲ್ಲಿರುವ ಸತ್ವಯುತವಾದ ವಸ್ತುಗಳಲ್ಲಿ ಪ್ರಮಾಣವನ್ನು ತಿಳಿಸುವುದನ್ನು ಮಣ್ಣಿನ ಸಾರ ಎನ್ನಲಾಗುತ್ತದೆ. ಸೂಕ್ಷ್ಮ ಪೋಷಕಗಳಾದ ಗಂಧಕ, ಕ್ಲೋರಿನ್, ತಾಮ್ರ, ಮ್ಯಾಂಗನೀಸ್, ಮಾಲಿಪ್‌ದೀನಮ್, ಬೋರಾನ್, ಕಬ್ಬಿಣ, ಕೋಬಾಲ್ಟ್, ಸತುಗಳೂ ಸಮಗ್ರ ಪೋಷಕಾಂಶಗಳಾದ ನೈಟ್ರೊಜನ್, ಪೊಟ್ಯಾಶಿಯಂ,ಮತ್ತು ರಂಜಕ ಮುಂತಾದವುಗಳು ಮಣ್ಣಿನಲ್ಲಿರಬೇಕಾದ ಸತ್ವಾಂಶಗಳಾಗಿವೆ. ಜೈವಿಕ ವಸ್ತುಗಳು ಹೆಚ್ಚಾಗುವುದರಿಂದ ಮಣ್ಣಿನ ಫಲವತ್ತತೆ ಹೆಚ್ಚಾಗುತ್ತದೆ. ಜೈವಿಕ ವಸ್ತುಗಳು ಎಂಬುವು ಸಸ್ಯ ಮತ್ತು ಪ್ರಾಣಿಗಳ ಅವಯವಗಳು ಮಣ್ಣಿಗೆ ಅಗತ್ಯವಾದ ಪೋಷಕಾಂಶವನ್ನುಕೊಡುವ ಪಳೆಯುಳಿಕೆ ಸಂಪನ್ಮೂಲಗಳಾಗಿವೆ.

ಭಾರತದ ಮಣ್ಣಿನ ವಿಧಗಳ ಹಂಚಿಕೆ ಮತ್ತು ಗುಣಗಳು:

ಭಾರತದಲ್ಲಿ ಕಂಡುಬರುವ ಮಣ್ಣನ್ನು ಆರು ವಿಧಗಳಾಗಿ ವಿಂಗಡಿಸಬಹುದು.

1. ಮೆಕ್ಕಲು ಮಣ್ಣು
2. ಕಪ್ಪು ಮಣ್ಣು
3. ಕೆಂಪು ಮಣ್ಣು
4. ಲ್ಯಾಟರೈಟ್ ಅಥವಾ ಜಂಬಿಟ್ಟಿಗೆ ಮಣ್ಣು
5. ಪರ್ವತ ಮಣ್ಣು
6. ಶುಷ್ಕ ಮತ್ತು ಮರುಭೂಮಿ ಮಣ್ಣು

1. ಮೆಕ್ಕಲು ಮಣ್ಣು

ಮೆಕ್ಕಲು ಮಣ್ಣು ನದಿ ದಂಡೆಗಳಲ್ಲಿ ಪ್ರವಾಹ ಮೈದಾನಗಳು, ಮುಖಜಭೂಮಿ ಮತ್ತು ಸಮುದ್ರ ಕರಾವಳಿ ಇನ್ನೂ ಮುಂತಾದವುಗಳಲ್ಲಿ ಸಂಚಯವಾಗಿರುತ್ತದೆ. ಈ ಮಣ್ಣು ಫಲವತ್ತಾಗಿರುವುದರಿಂದ ವ್ಯವಸಾಯಕ್ಕೆ ಬಹಳ ಅನುಕೂಲವಾಗಿದೆ. ಇದು ಭಾರತದ ವ್ಯವಸಾಯದ ವಸ್ತುಗಳ ಉತ್ಪಾದನೆಗೆ ಪ್ರಮುಖ ಪಾತ್ರವಹಿಸುತ್ತದೆ.


ಮೆಕ್ಕಲುಮಣ್ಣನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು. ಅವು ಖದರ್ ಮತ್ತು ಭಂಗರ್ ಗಳಾಗಿವೆ. ಖದರ್ ಇತ್ತೀಚೆಗೆ ಸಂಚಯವಾಗಿರುವ ಮಣ್ಣಾಗಿದೆ. ಭಂಗರ್ ಪುರಾತನ ಕಾಲದಲ್ಲಿ ಸಂಚಯತಗೊಂಡ ಮಣ್ಣಾಗಿರುವುದು. ಮೆಕ್ಕಲುಮಣ್ಣು ರಚನೆಗನುಗುಣವಾಗಿ ವ್ಯತ್ಯಾಸಗೊಂಡಿದೆ. ಇದು ಭತ್ತ, ಗೋಧಿ, ಕಬ್ಬು, ಹತ್ತಿ ಮತ್ತು ಎಣ್ಣೆ ಬೀಜಗಳ ಬೆಳೆಗಳಿಗೆ ಯೋಗ್ಯವಾದ ಮಣ್ಣಾಗಿದೆ. ಇದು ಗಂಗಾ ಬ್ರಹ್ಮಪುತ್ರ ಕಣಿವೆ ಪ್ರದೇಶಗಳ ತಗ್ಗು ಪ್ರದೇಶಗಳಲ್ಲಿ ಸೆಣಬು ಬೆಳೆಯಲು ಅನುಕೂಲವಾಗಿದೆ.

ಸಟ್ಲೇಜ್, ಗಂಗಾ, ಯಮುನ, ಗಂಡಕಿ, ಗಾಗ್ರ ಮತ್ತು ಹಲವು ನದಿ ಬಯಲುಗಳಲ್ಲಿ ಕಂಡು ಬರುತ್ತದೆ ಪಂಜಾಬ್, ಹರಿಯಾಣ, ಉತ್ತರಪ್ರದೇಶ, ಬಿಹಾರ್, ಪಶ್ಚಿಮಬಂಗಾಳ ಇನ್ನೂ ಮುಂತಾದ ಪ್ರದೇಶಗಳಲ್ಲಿ ಈ ಬಯಲಿನಲ್ಲಿ ಕಂಡುಬರುತ್ತದೆ.ಮಹಾನದಿ, ಗೋದಾವರಿ, ಕೃಷ್ಣ, ಕಾವೇರಿ ನದಿಗಳು ಅವುಗಳ ಬಯಲು ಪ್ರದೇಶಗಳಲ್ಲಿ ಮೆಕ್ಕಲು ಮಣ್ಣನ್ನು ಸಂಚಯನಗೊಳಿಸುತ್ತವೆ.

2. ಕಪ್ಪು ಮಣ್ಣು

ಇದು ಕಪ್ಪು ಶಿಲೆಗಳ ಶಿಥಿಲೀಕರಣದಿಂದ ಉತ್ಪತ್ತಿಯಾದುದು. ಈ ಮಣ್ಣು ಗೋದಾವರಿ, ನರ್ಮದಾ ಮತ್ತು ತಪತಿ ನದಿ ಬಯಲುಗಳಲ್ಲಿ ಕಂಡು ಬರುತ್ತದೆ. ಈ ಮಣ್ಣು ಸುಮಾರು 6 ಮೀಟರ್ ಆಳದವರೆಗೆ ಕಡುಕಪ್ಪುಬಣ್ಣದಿಂದ ಕಂದುಬಣ್ಣದವರೆಗೆ ಸಂಚಯಗೊಂಡು ಕಂಡು ಬರುತ್ತದೆ.

ಸಾಮಾನ್ಯವಾಗಿ ಸುಣ್ಣ, ಕಬ್ಬಿಣ, ಪೊಟ್ಯಾಷಿಯಂ, ಅಲ್ಯುಮಿನಿಯಂ, ಕ್ಯಾಲ್ಸಿಯಂ ಮತ್ತು ಮೆಗ್ನೀಷಿಯಂ ಕಾರ್ಬೊನೇಟುಗಳು ಈ ಮಣ್ಣಿನಲ್ಲಿ


ಭಾರತ
ಮಣ್ಣಿನ ವಿಧಗಳು
ಉ
ಪ
ಪೂ
ದ
ಅರಬ್ಬೀಸಮುದ್ರ
ಬಂಗಾಳಕೊಲ್ಲಿ
ಮುಖ್ಯ ಮಣ್ಣಿನ ವಿಧಗಳ ಹಂಚಿಕೆ
ಮೆಕ್ಕಲು ಮಣ್ಣು
ಕಪ್ಪು ಮಣ್ಣು
ಕೆಂಪು ಮಣ್ಣು
ಜಂಬಿಟ್ಟಿಗೆ ಮಣ್ಣು
ಪರ್ವತ ಮಣ್ಣು
ಶುಷ್ಕ ಮತ್ತು ಮರುಭೂಮಿ ಮಣ್ಣು
ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು
ಲಕ್ಷದ್ವೀಪಗಳು
ಹಿಂದೂಮಹಾಸಾಗರ

ಹೇರಳವಾಗಿರುತ್ತವೆ. ಆದರೆ ರಂಜಕ, ಸಾರಜನಕ, ಮತ್ತು ಜೈವಿಕಾಂಶಗಳ ಕೊರತೆಯಿದೆ. ಇದು ಹೆಚ್ಚು ಕಾಲ ಸಾಕಷ್ಟು ತೇವಾಂಶವನ್ನು ಹಿಡಿದಿಟ್ಟುಕೊಳ್ಳಬಲ್ಲ ವಿಶೇಷಸಾಮರ್ಥ್ಯ ಹೊಂದಿರುವುದರಿಂದ, ಹೊಗೆಸೊಪ್ಪು, ಎಣ್ಣೆ ಕಾಳುಗಳು ವಿಶೇಷವಾಗಿ, ಸಾಸಿವೆ, ಸೂರ್ಯಕಾಂತಿ, ಹಣ್ಣುಗಳು ಮತ್ತು ತರಕಾರಿಗಳನ್ನು ಬೆಳೆಯಲು ಯೋಗ್ಯವಾಗಿದೆ ಈ ಮಣ್ಣು ಹತ್ತಿ, ಗೋಧಿ, ಜೋಳ, ಸಣ್ಣಕಾಳಿನ ಧಾನ್ಯಗಳು ಮತ್ತು ಕಬ್ಬು ಮುಂತಾದ ಬೆಳೆಗಳನ್ನು ಬೆಳೆಯಲು ಅತ್ಯಂತಯೋಗ್ಯವಾಗಿದೆ. ಕಪ್ಪು ಮಣ್ಣು ಹೆಚ್ಚಾಗಿ ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶದ ಒಂದು ಭಾಗ, ಆಂಧ್ರ ಪ್ರದೇಶ ಮತ್ತು ತಮಿಳುನಾಡಿನ ದಕ್ಷಿಣ ಜಿಲ್ಲೆಗಳು ಮುಂತಾದ ಭಾಗಗಳನ್ನು ಒಳಗೊಂಡಿರುವ ದಖ್ಖನ್ ಪೀಠಭೂಮಿಯಲ್ಲಿ ಕಂಡುಬರುತ್ತದೆ.

3. ಕೆಂಪು ಮಣ್ಣು

ಪ್ರಾಚೀನಕಾಲದ ಸ್ಫಟಿಕ ಶಿಲೆಗಳು ಮತ್ತು ರೂಪಾಂತರ ಶಿಲೆಗಳ ಶಿಥಿಲೀಕರಣದಿಂದಾಗಿ ಉಂಟಾಗಿರುವುದೇ ಕೆಂಪುಮಣ್ಣು ಆಗಿದೆ. ಕಬ್ಬಿಣಾಂಶವು ಅಧಿಕವಾಗಿ ಕಂಡುಬರುವುದರಿಂದ ಕೆಂಪು ಮಣ್ಣು ಕೆಲವು ಬಣ್ಣದಿಂದ ಕೂಡಿರುತ್ತದೆ. ಈ ಮಣ್ಣಿನ ಬಣ್ಣವು ಕಂದು ಬಣ್ಣದಿಂದ ಹಳದಿ ಬಣ್ಣದವರೆಗೆ ವ್ಯಾಪಾರ್ಡಾಗ್ಯತ್ತದೆ. ಈ ಮಣ್ಣು ರಂಧ್ರಯುಕ್ತವಾಗಿರುವುದರಿಂದ ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೊಂದಿರುವುದಿಲ್ಲ. ಸುಣ್ಣದ ಅಂಶ, ಸಾರಜನಕ, ರಂಜಕ ಮುಂತಾದ ಅಂಶಗಳು ಈ ಮಣ್ಣಿನಲ್ಲಿ ಹೇರಳವಾಗಿದೆ, ಅದರೆ ಈ ಮಣ್ಣಿಗೆ ಸೂಕ್ತವಾದ ರಸಗೊಬ್ಬರ ವನ್ನು ಬಳಸಿದರೆ ಫಲವತ್ತಾದ ಮಣ್ಣನ್ನಾಗಿ ಮಾರ್ಪಡಿಸಬಹುದು. ಈ ಮಣ್ಣಿನಲ್ಲಿ ಗೋಧಿ, ಭತ್ತ, ಹತ್ತಿ, ಕಬ್ಬು ಮತ್ತು ಬೇಳೆ ಕಾಳುಗಳ ಬೆಳೆಗಳನ್ನು ಬೆಳೆಯಲಾಗುತ್ತದೆ. ತಮಿಳುನಾಡಿನ ಬಹುತೇಕ ಭಾಗಗಳು ಕರ್ನಾಟಕದ ದಕ್ಷಿಣ ಭಾಗ, ಗೋವಾ, ಆಂಧ್ರ ಪ್ರದೇಶದ ಈಶಾನ್ಯಭಾಗ, ಮಧ್ಯಪ್ರದೇಶ ಮತ್ತು ಒರಿಸ್ಸಾ ಗಳಲ್ಲಿ ಈ ಮಣ್ಣು ಹಂಚಿಕೆಯಾಗಿದೆ.

4. ಲ್ಯಾಟರೈಟ್ ಅಥವಾ ಜಂಬಿಟ್ಟಿಗೆ ಮಣ್ಣು

ಈ ಮಣ್ಣು ಉಷ್ಣವಲಯದ ವಾಯುಗುಣವುಳ್ಳ ಅಧಿಕ ಮಳೆಯಾಗುವ ಭಾಗಗಳಲ್ಲಿ ಕಂಡುಬರುತ್ತದೆ. ಇದು ಭಾರತದ ಪರ್ಯಾಯ ದ್ವೀಪ ಪೀಠಭೂಮಿಯಲ್ಲಿ ಹೆಚ್ಚಾಗಿ ಕಂಡುಬರುತ್ತದೆ ಜಂಬಿಟ್ಟಿಗೆ ಮಣ್ಣು ಸಿಲಿಕಾ ರಾಸಾಯನಿಕ ಕ್ರಿಯೆಯಿಂದಾಗಿ (Leaching - ಸವೆತ) ಹೊರಹಾಕಲ್ಪಡುತ್ತದೆ. ಕಬ್ಬಿಣದ ಆಕ್ಸೈಡ್‌ನಿಂದಾಗಿ ಈ ಮಣ್ಣು ಕೆಂಪಾಗಿರುತ್ತದೆ. ಈ ಮಣ್ಣಿನಲ್ಲಿ ಕಾಫಿ, ರಬ್ಬರ್, ಗೋಡಂಬಿಮತ್ತು ಮರಗೆಣಸು ಇನ್ನೂ ಮುಂತಾದ ಬೆಳೆಗಳನ್ನೂ ಬೆಳೆಯಬಹುದು. ಆಂಧ್ರಪ್ರದೇಶ ತಮಿಳುನಾಡು,ಪೂರ್ವಘಟ್ಟಗಳು ಮತ್ತು ಒರಿಸ್ಸಾ, ಕೇರಳ,ಮತ್ತು ಅಸ್ಸಾಂನ ಕೆಲವು ಭಾಗಗಳಲ್ಲಿ ಈ ಮಣ್ಣು ಕಂಡು ಬರುತ್ತದೆ.

5. ಪರ್ವತ ಮಣ್ಣು:

ಈ ಮಣ್ಣು ಪೂರ್ವ ಮತ್ತು ಪಶ್ಚಿಮ ಘಟ್ಟಗಳು, ಹಿಮಾಚಲ್ ಮತ್ತು ಸಿವಾಲಿಕ್ ಪರ್ವತ ಶ್ರೇಣಿಗಳಲ್ಲಿ ಕಂಡುಬರುತ್ತವೆ. ಈ ಮಣ್ಣಿನಲ್ಲಿ ಸಸ್ಯಾಂಶ ಮತ್ತು ಸಾರಜನಕಾಂಶವೂ ಅಧಿಕವಾಗಿವೆ. ಈ ಮಣ್ಣಿನಲ್ಲಿ ಚಹ, ಕಾಫಿ ಮತ್ತು ರಬ್ಬರ್ ಬೆಳೆಗಳನ್ನು ಬೆಳೆಯಲಾಗುವುದು. ಚಹ ಬೆಳೆಯುವುದರಲ್ಲಿ ಅಸ್ಸಾಂ ಮತ್ತು ಪಶ್ಚಿಮ ಬಂಗಾಳ ಪ್ರಧಾನವಾಗಿವೆ.

6. ಶುಷ್ಕ ಮತ್ತು ಮರುಭೂಮಿ ಮಣ್ಣು

ಮರುಭೂಮಿ ಮಣ್ಣು ಭಾರತದ ವಾಯುವ್ಯ ಭಾಗಗಳಾದ ರಾಜಸ್ತಾನ, ಗುಜರಾತ್(ಕಚ್) ಮತ್ತು ದಕ್ಷಿಣ ಪಂಜಾಬ್‌ನಭಾಗಗಳಲ್ಲಿ ಕಂಡುಬರುತ್ತದೆ. ಈ ಮಣ್ಣು ಸ್ವಾಭಾವಿಕವಾಗಿಯೇ ಮರಳು ಆಗಿದೆ. ಈಮಣ್ಣಿನಲ್ಲಿ ಉಪ್ಪಿನಾಂಶ ಹೆಚ್ಚಾಗಿರುತ್ತದೆ. ಸಾರಜನಕ ಮತ್ತು ಜೈವಿಕಾಂಶದ ಕೊರತೆ ಇರುತ್ತದೆ. ಆದರೆ ರಂಜಕ ಮತ್ತು ನೈಟ್ರೇಟುಗಳು ಹೇರಳವಾಗಿದ್ದು ಸೂಕ್ಷ್ಮ ರಂಧ್ರಗಳಿಂದ ಕೂಡಿರುವುದರಿಂದ ಬಹುಸಾಂದ್ರತೆಯುಳ್ಳದ್ದಾಗಿದೆ. ಈ ಮಣ್ಣು ಫಲವತ್ತತೆಯನ್ನು ಹೊಂದಿಲ್ಲದಿರುವುದರಿಂದ ನೀರಾವರಿ ಸೌಲಭ್ಯದೊಂದಿಗೆ ಕೆಲವು ಭಾಗಗಳಲ್ಲಿ ವ್ಯವಸಾಯವನ್ನು ಮಾಡಲಾಗುತ್ತದೆ. ಗೋಧಿ, ಭತ್ತ, ಬಾರ್ಲಿ, ದ್ರಾಕ್ಷಿ ಮತ್ತು ಕಲ್ಲಂಗಡಿಗಳಂತಹ ಬೆಳೆಗಳನ್ನು ಬೆಳೆಯಲಾಗುತ್ತದೆ.

ಮಣ್ಣಿನ ಸವೆತ

ಪ್ರಕೃತಿ ಮತ್ತು ಮಾನವನ ಕಾರ್ಯ ಚಟುವಟಿಕೆಗಳಿಂದ ಮಣ್ಣಿನಿಂದ ಹೊರ ಹಾಕುವ ಮಣ್ಣಿನ

ಸಂಪತ್ತನ್ನು ಮಣ್ಣಿನ ಸವೆತ ಎನ್ನಲಾಗುತ್ತದೆ. ಮಣ್ಣು ಸಂಪನ್ಮೂಲವನ್ನು ಸರಿಯಾಗಿ ಬಳಸಿ ಕೊಳ್ಳುವುದು ನಮ್ಮೆಲ್ಲರ ಬಹು ಮುಖ್ಯವಾದುದಾಗಿ ಭಾವಿಸಲಾಗಿದೆ. ಏಕೆಂದರೆ ಇದು ಪ್ರತ್ಯಕ್ಷವಾಗಿ ನಮ್ಮ ಆಹಾರ ಉತ್ಪಾದನೆಯಲ್ಲಿ ಬಾಧಿಸಲ್ಪಡುತ್ತದೆ. ಹರಿಯುವನೀರು, ಮಾರುತ ಮತ್ತು ಮಾನವ ಚಟುವಟಿಕೆಗಳು ಇನ್ನೂ ಮುಂತಾದವುಗಳು ಮಣ್ಣಿನ ಸವೆತಕ್ಕೆ ಮುಖ್ಯವಾದವುಗಳಾಗಿವೆ. ನಮ್ಮ ದೇಶದಲ್ಲಿ ಕೆಲವು ಪ್ರದೇಶಗಳಲ್ಲಿ ಉದಾಹರಣೆಗೆ ಉತ್ತರ ಪ್ರದೇಶ, ರಾಜಸ್ಥಾನ ಮತ್ತು ದಖ್ಖನ್ ಪೀಠಭೂಮಿಯ ಬಹು ಭಾಗಗಳು ಮಣ್ಣಿನ ಸವೆತದಿಂದ ಹೆಚ್ಚು ನಾಶವಾಗಿವೆ.

ಸಂರಕ್ಷಣಾಭಿವೃದ್ಧಿ

ಸಂರಕ್ಷಣಾಭಿವೃದ್ಧಿ ಎಂದರೆ ಪರಿಸರಕ್ಕೆ ಹಾನಿಯಾಗದಂತೆ ಅಭಿವೃದ್ಧಿ ಮತ್ತು ಪ್ರಸ್ತುತ ಅವಶ್ಯಕತೆಗಳನ್ನು ಪೂರೈಸುವುದರ ಮೂಲಕ ಭವಿಷ್ಯದ ಜನಾಂಗಕ್ಕೆ ಹಾನಿ ಉಂಟಾಗದಂತೆ ಅಭಿವೃದ್ಧಿ ಪಡಿಸುವುದಾಗಿದೆ. ಉದಾಹರಣೆಗೆ ಸತತವಾಗಿ ಬೆಳೆ ಬೆಳೆಯುವುದು, ಮಣ್ಣಿನ ಸಾರವು ಕಡಿಮೆಯಾಗುವುದು, ಮಣ್ಣಿನ ಸಾರವನ್ನು ಕಾಪಾಡಲು ಪರ್ಯಾಯ ಬೆಳೆ ಬೆಳೆಯುವುದು, ಒಡ್ಡುಗಳನ್ನು ನಿರ್ಮಿಸುವುದು, ಮುಂತಾದ ವಿಧಾನಗಳನ್ನು ಅನುಸರಿಸಬೇಕು. ಈ ವಿಧಾನದಿಂದ ಮುಂದಿನ ಜನಾಂಗಕ್ಕೆ ಅನುಕೂಲವಾಗುತ್ತದೆ.

ಮಣ್ಣಿನ ಸಂರಕ್ಷಣೆ

ಮಾನವನು ಮಣ್ಣಿನ ಸವೆತವನ್ನು ನಿಯಂತ್ರಿಸುವುದು ಹಾಗೂ ಮಣ್ಣಿನ ಸಾರವು ಹಾಳಾಗುವುದನ್ನು ತಡೆಗಟುವುದಕ್ಕೆ "ಮಣ್ಣಿನ ಸಂರಕ್ಷಣೆ" ಎನ್ನುವರು. ಇದರಿಂದ ಮಣ್ಣಿನ ಸವೆತವನ್ನು ಸಂಪೂರ್ಣವಾಗಿ ತಡೆಯಲು ಸಾಧ್ಯವಿಲ್ಲ. ಆದ್ದರಿಂದ ಸೂಕ್ತ ಕ್ರಮಗಳನ್ನು ತೆಗೆದು ಕೊಳ್ಳುವುದರ ಮೂಲಕ ಮಣ್ಣಿನ ಸವೆತದ ಪ್ರಮಾಣವನ್ನು ಕಡಿಮೆಗೊಳಿಸಬಹುದು.

ಮಣ್ಣಿನ ಸವೆತವನ್ನು ತಡೆಗಟ್ಟಲು ತೆಗೆದು ಕೊಂಡಿರುವ ಕೆಲವು ಕ್ರಮಗಳು .

1. ಅಣೆಕಟ್ಟುಗಳ ನಿರ್ಮಾಣ ಅಥವಾ ತಡೆ ಅಣೆಕಟ್ಟುಗಳನ್ನು (check dams) ನದಿಗಳಿಗೆ ಅಡ್ಡಲಾಗಿ ನಿರ್ಮಿಸುವುದು.

2. ಇಳಿಜಾರಿಗೆ ಅಡ್ಡಲಾಗಿ ಉಳುಮೆ ಮಾಡುವುದು.

3. ಅಡ್ಡಬದುಗಳನ್ನು ನಿರ್ಮಿಸುವುದು.

4. ಅತಿಯಾಗಿ ಮೇಯಿಸುವುದನ್ನು ತಡೆಗಟ್ಟುವುದು.

5. ಮರಗಳು ಗಾಳಿಯ ವೇಗವನ್ನು ಕಡಿಮೆಗೊಳಿಸಿ ಮಣ್ಣಿನ ಕಣಗಳು ಗಾಳಿಯಲ್ಲಿ ಕೊಚ್ಚಿ ಹೋಗದಂತೆ ತಡೆಗಟ್ಟುತ್ತವೆ.

6. ಮರಗಳು, ಗಿಡಗಳು, ಹುಲ್ಲುಗಳು ಮುಂತಾದವುಗಳು ಬೇರುಗಳು ಬಿಡುವುದರಿಂದ ಮಣ್ಣು ಸಂಗ್ರಹವಾಗಿರುತ್ತದೆ. ಆದ್ದರಿಂದ ಮರಗಳನ್ನು ಕಡಿಯುವುದನ್ನು ಕಡಿಮೆಮಾಡಿ .ಮರಗಳನ್ನು ಬೆಳೆಸುವುದನ್ನು ಹೆಚ್ಚಿಸಬೇಕು.

7. ಮರಗಳ ಬೇರುಗಳು ಮತ್ತು ಹುಲ್ಲುಗಳು ಹರಿಯುವ ನೀರಿನ ವೇಗವನ್ನು ನಿಯಂತ್ರಿಸುತ್ತವೆ. ಆದ್ದರಿಂದ ಸಸ್ಯವರ್ಗವನ್ನು ನಾಶಪಡಿಸಬಾರದು. ಯಾವ ಸ್ಥಳದಲ್ಲಿ ಮರಗಳು ಇಲ್ಲವೋ ಅಂತಹ ಸ್ಥಳಗಳಲ್ಲಿ ಸಸ್ಯಗಳನ್ನು ಬೆಳೆಸಲು ಪ್ರಯತ್ನಿಸಬೇಕು.

8. ಕೃತಕ ರಾಸಾಯನಿಕ ಗೊಬ್ಬರಗಳನ್ನು ಕೃಷಿ ಭೂಮಿಗಳಿಗೆ ಉಪಯೋಗಿಸದೆ ಸ್ವಾಭಾವಿಕ ಗೊಬ್ಬರಗಳನ್ನು ನಿರಂತರವಾಗಿ ಬಳಸುವುದು ಅತ್ಯಂತ ಮುಖ್ಯವಾದ ಮಣ್ಣಿನ ಸಂರಕ್ಷಣೆಯ ವಿಧಾನವಾಗಿದೆ.

ಸ್ವಾಭಾವಿಕ ಸಸ್ಯವರ್ಗ

ಸ್ವಾಭಾವಿಕ ಸಸ್ಯವರ್ಗವೆಂಬುದು ಭೂಮಿಯ ಮೇಲ್ಭಾಗದಲ್ಲಿ ಸ್ವಾಭಾವಿಕವಾಗಿ ಬೆಳೆಯುವ ಸಸ್ಯವರ್ಗದ ಸಮೂಹವಾಗಿದೆ. ಇವು ವಾಯುಗುಣ, ಮಣ್ಣು ಮತ್ತು ಜೈವಿಕ ಪರಿಸ್ಥಿತಿಯನ್ನು ಆಧರಿಸಿರುತ್ತದೆ. ಮಾನವನಿಗೆ ದೊರಕುವ ಸ್ವಾಭಾವಿಕ ಸಂಪನ್ಮೂಳಗಳಲ್ಲಿ ಅರಣ್ಯ ಸಂಪತ್ತು ಅತ್ಯುತ್ತಮ ಸಂಪನ್ಮೂಲಗಳಲ್ಲಿ ಒಂದಾಗಿದೆ. ಹೀಗಿದ್ದರೂ ಇದರ ಪ್ರಮಾಣವು ಹಲವು ಶತಮಾನಗಳಿಂದಲೂ ಕಡಿಮೆಯಾಗುತ್ತಾ ಬಂದಿದೆ.



ಕಾಡುಗಳು

ಜನಸಂಖ್ಯೆಯ ಹೆಚ್ಚಳದಿಂದಾಗಿ ಅರಣ್ಯಗಳ ವಿಸ್ತಾರವಾದ ಪ್ರದೇಶದಲ್ಲಿ ಅರಣ್ಯ ಉತ್ಪನ್ನಗಳಿಗಾಗಿಯೂ ಬೇಸಾಯ ಮಾಡುವುದಕ್ಕಾಗಿಯೂ ನಾಶಪಡಿಸಲಾಗುತ್ತದೆ. ಇದನ್ನು ಅರಣ್ಯ ಸಂಪನ್ಮೂಲಗಳ ಅಭಿವೃದ್ಧಿಗಾಗಿ ನಿಯಂತ್ರಿಸಬೇಕು.

ಭಾರತದ ಅರಣ್ಯ ಸಂಪನ್ಮೂಲಗಳು

ಭಾರತದ ಅರಣ್ಯ ಸಂಪತ್ತು ಒಂದು ಅನನ್ಯವಾದುದಾಗಿದೆ. ಏಕೆಂದರೆ ಒಣಹವೆಯನ್ನು ತಡೆದುಕೊಳ್ಳುವ ಕುರುಚಲು ಸಸ್ಯವರ್ಗದಿಂದ ಉಷ್ಣವಲಯದ ನಿತ್ಯಹರಿದ್ವರ್ಣದ ಅರಣ್ಯದ ವರೆಗೆ ಬಹಳಷ್ಟು ಸಸ್ಯವರ್ಗದ ಬಗೆಗಳು ಇಲ್ಲಿ ಕಂಡುಬರುತ್ತವೆ. ಭಾರತದ ಅರಣ್ಯಗಳ ಒಟ್ಟು ವಿಸ್ತೀರ್ಣ ಸುಮಾರು 68 ಮಿಲಿಯನ್ ಹೆಕ್ಟೇರ್. ಭಾರತದ ಒಟ್ಟು ವಿಸ್ತೀರ್ಣದಲ್ಲಿ ಸುಮಾರು ಶೇಕಡ 20 ರಷ್ಟಿದ್ದು ವಿಶ್ವದ ಬಹಳಷ್ಟು ರಾಷ್ಟ್ರಗಳ ಅರಣ್ಯದ ವಿಸ್ತೀರ್ಣಕ್ಕೆ ಹೋಲಿಸಿದಾಗ ತುಂಬಾ ಕಡಿಮೆಯಾಗಿರುವುದು ಕಂಡುಬರುತ್ತದೆ. ಹೀಗಿದ್ದರೂ ಈ ಅರಣ್ಯಗಳ ವಿಸ್ತೀರ್ಣವು ಸಮನಾಗಿ ಹಂಚಿಕೆಯಾಗಿರುವುದಿಲ್ಲ. ಕೆಲವು ರಾಜ್ಯಗಳಲ್ಲಿನ ಒಟ್ಟು ವಿಸ್ತೀರ್ಣದಲ್ಲಿ ಶೇಕಡ 60 ರಷ್ಟು ಅರಣ್ಯಗಳಿದ್ದು ಕೆಲವು ರಾಜ್ಯಗಳಲ್ಲಿ ಶೇಕಡ 3 ರಷ್ಟು ಮಾತ್ರ ಅರಣ್ಯಗಳು ಕಂಡುಬರುತ್ತವೆ. ಜನಸಂಖ್ಯೆಯ ಹೆಚ್ಚಳದಿಂದಾಗಿ ವ್ಯವಸಾಯದ ಭೂಮಿಯ ಅವಶ್ಯಕತೆ ಹೆಚ್ಚಾಗುತ್ತದೆ. ನಗರೀಕರಣದಿಂದಾಗಿಯೂ ಮತ್ತು ನವ ನಗರಗಳ ಉಗಮದಿಂದಾಗಿ ಅರಣ್ಯಗಳ ವಿಸ್ತೀರ್ಣವು ಕುಗ್ಗುತ್ತದೆ.

ಸ್ವಾಭಾವಿಕ ಸಸ್ಯವರ್ಗದ ವಿಧಗಳು

ಭಾರತದ ಸ್ವಾಭಾವಿಕ ಸಸ್ಯವರ್ಗಗಳ ಬೆಳವಣಿಗೆಯನ್ನು ವಾಯುಗುಣ, ಉಷ್ಣಾಂಶ, ಮಳೆ, ಭೂಸ್ವರೂಪ ಮತ್ತು ಮಣ್ಣಿನಂತಹ ಭೌಗೋಳಿಕಾಂಶಗಳು ನಿರ್ಧರಿಸುತ್ತವೆ. ಈ ಅಂಶಗಳ ಆಧಾರದ ಮೇಲೆ ಭಾರತದ ಸಸ್ಯವರ್ಗಗಳನ್ನುಈ ಕೆಳಕಂಡಂತೆ ಎಂಗಡಿಸಬಹುದು. ಅವುಗಳೆಂದರೆ,

1. ಉಷ್ಣವಲಯದ ನಿತ್ಯಹರಿದ್ವರ್ಣದ ಕಾಡುಗಳು
2. ಉಷ್ಣವಲಯದ ಮಾನ್ಸೂನ್ ಕಾಡುಗಳು (ಎಲೆ ಉದುರುವ ಕಾಡುಗಳು)
3. ಮುಳ್ಳು ಗಿಡಗಳು ಮತ್ತು ಪೊದೆ ಸಸ್ಯವರ್ಗ
4. ಮರುಭೂಮಿ ಸಸವರ್ಗ
5. ಮ್ಯಾಂಗ್ರೋವ್ (ಸುಂದರಬನ) ಕಾಡುಗಳು
6. ಪರ್ವತ ಕಾಡುಗಳು

1. ಉಷ್ಣವಲಯದ ನಿತ್ಯಹರಿದ್ವರ್ಣದಕಾಡುಗಳು

ವಾರ್ಷಿಕ 200 ಸೆಂ.ಮೀ.ಗಿಂತಲೂ ಹೆಚ್ಚಾಗಿ ಮಳೆ ಬೀಳುವ ಪ್ರದೇಶಗಳಲ್ಲಿ ಈ ಕಾಡುಗಳು ಕಂಡು ಬರುತ್ತವೆ. ಈ ಮಾದರಿಯ ಕಾಡುಗಳು ವರ್ಷವೆಲ್ಲಾ ಸದಾ ಹಸಿರಾಗಿ ಕಂಡುಬರುತ್ತವೆ. ಈ ಕಾಡುಗಳು ದಟ್ಟವಾಗಿರುವುದರಿಂದ 60 ಮೀಟರ್ ಎತ್ತರ ದವರೆಗೆ ಬೆಳೆಯುತ್ತವೆ. ಮರಗಳ ದಟ್ಟಣೆಯಿಂದಾಗಿ ಸೂರ್ಯನ ಕಿರಣ ಭೂಮಿಯನ್ನು ತಲುಪುವುದಿಲ್ಲ. ಇದರಿಂದ ಮರಗಳ ತಳದಲ್ಲಿಯೂ ಪೊದೆಗಳಂತಹ ಸಸ್ಯಗಳಾದ ಬಿದಿರು, ಬೆತ್ತ, ತಾಳೆಯಂತಹ ಇತ್ಯಾದಿ ಮರಗಳು ಬೆಳೆಯುತ್ತವೆ. ವಾರ್ಷಿಕಮಳೆ ಪ್ರಮಾಣ 200 ಸೆಂ. ಮೀ. ಗಿಂತಲೂ ಅಧಿಕವಾಗಿ ಮಳೆ ಬೀಳುವ ಪ್ರದೇಶಗಳಲ್ಲಿ ನಿತ್ಯ ಹರಿದ್ವರ್ಣದ ಕಾಡುಗಳು ಕಂಡು ಬರುತ್ತವೆ.

ಬೀಟೆ, (ರೋಸ್‌ಮರ) ಎಬನಿ, ಮಹಾಗನಿ, ರಬ್ಬರ್, ಸಿಂಕೋನ, ಬಿದಿರು ಮತ್ತು ಲಯಾನಸ್ ಮರಗಳು ಈ ಕಾಡುಗಳಲ್ಲಿ ಕಂಡುಬರುತ್ತವೆ.

ನಿತ್ಯಹರಿದ್ವರ್ಣದ ಕಾಡುಗಳು ಅನೇಕವಾಗಿ ಪಶ್ಚಿಮಘಟ್ಟಗಳ ಪಶ್ಚಿಮ ಭಾಗದಲ್ಲಿ ಮತ್ತು ಅಂಡಮಾನ್ ಮತ್ತು ನಿಕೋಬರ್ ದ್ವೀಪಗಳಲ್ಲೂ ಪರ್ವತದ ತಗ್ಗಾದ

ಇಳಿಜಾರು ಭಾಗಗಳು, ಅಸ್ಸಾಂ, ಒಡಿಸ್ಸಾದ ಕೆಲವು ಭಾಗಗಳಲ್ಲಿ ಕಂಡುಬರುತ್ತವೆ.

2. ಉಷ್ಣವಲಯದ ಮಾನ್ಸೂನ್ ಕಾಡುಗಳು

70 ಸೆಂ. ಮೀ ನಿಂದ 200ಸೆಂ.ಮೀ ವರಗೆ ವಾರ್ಷಿಕ ಸರಾಸರಿ ಮಳೆ ಬೀಳುವ ಪ್ರದೇಶಗಳಲ್ಲಿ ಉಷ್ಣವಲಯದ ಮಾನ್ಸೂನ್ ಕಾಡುಗಳು ಕಂಡುಬರುತ್ತವೆ. ಈ ಕಾಡುಗಳಲ್ಲಿ ಕಂಡುಬರುವ ಮರಗಳು ಬೇಸಿಗೆಯ ಪ್ರಾರಂಭ ಹಾಗೂ ವಸಂತ ಕಾಲದಲ್ಲಿ ಸುಮಾರು 6 ರಿಂದ 8 ವಾರಗಳ ನಡುವೆ ನೀರಿನ ಕೊರತೆಯಿಂದಾಗಿ ಎಲೆಗಳು ಉದುರಿಹೋಗುತ್ತವೆ. ಆದ್ದರಿಂದ ಇವುಗಳನ್ನು ಎಲೆಉದುರುವ ಕಾಡುಗಳು ಎಂದು ಕರೆಯುವರು.

. ಉಷ್ಣವಲಯದ ಮಾನ್ಸೂನ್ ಕಾಡುಗಳು ವಾಣಿಜ್ಯದ ದೃಷ್ಟಿಯಲ್ಲಿ ಹೆಚ್ಚು ಪ್ರಾಮುಖ್ಯತೆ ಪಡೆದಿವೆ. ಏಕೆಂದರೆ ಇವು ಬೆಲೆಬಾಳುವ ಮರಗಳನ್ನು ಹಲವಾರು ರೀತಿಯ ಅರಣ್ಯ ಉತ್ಪನ್ನಗಳನ್ನು ನಮಗೆ ನೀಡುತ್ತವೆ. ಈ ಕಾಡುಗಳಲ್ಲಿ ಮುಖ್ಯವಾದ ಮರಗಳು ತೇಗ, ಸಾಲ್, ಸೀಸಂ, ಗಂಧ, ವ್ಯಾಟ್ಲ್ ಮತ್ತು ಬೇವಿನ ಮರಗಳು ಮುಖ್ಯವಾದುವುಗಳಾಗಿವೆ.

ಉಷ್ಣವಲಯದ ಮಾನ್ಸೂನ್ ಕಾಡುಗಳು ವಾಣಿಜ್ಯದಿಂದಾಗಿ ಅತ್ಯಧಿಕವಾಗಿ ಕಟಾಯಿಸಲಾಗುತ್ತದೆ ಈ ಮಾದರಿಯ ಕಾಡುಗಳು ಅತಿಯಾಗಿ ಮರಗಳನ್ನು ಕಟಾವುಮಾಡುವುದು, ಮಿತಿಮೀರಿ ಮೇಯಿಸುವುದು, ಕಾಡ್ಗಿಚ್ಚು ಮುಂತಾದ ಜೈವಿಕ ಅಂಶಗಳಿಂದ ಹೆಚ್ಚು ಬಾಧಿಸಲ್ಪಡುತ್ತವೆ. ಕೇವಾಂಶಭರಿತ ಮಾನ್ಸೂನ್ ಕಾಡುಗಳನ್ನು ಈಶಾನ್ಯ ರಾಜ್ಯಗಳಲ್ಲಿಯೂ, ಹಿಮಾಲಯ ತಪ್ಪಲಿನಲ್ಲಿಯೂ, ಜಾರ್ಖಂಡ್, ಒಡಿಸ್ಸಾದ ಪಶ್ಚಿಮಭಾಗ, ಛತ್ತೀಸ್‌ಘಡ್ ಮತ್ತು ಪಶ್ಚಿಮಘಟ್ಟಗಳ ಪೂರ್ವ ಇಳಿಜಾರಿನಲ್ಲಿ ಕಂಡುಬರುತ್ತವೆ. ಶುಷ್ಕಮಾನ್ಸೂನ್ ಕಾಡುಗಳನ್ನು ಪಂಜರ್ಾಂಯ ದ್ವೀಪಪೀಠ ಭೂಮಿಯಲ್ಲಿಯೂ ಬಿಹಾರ ಮತ್ತು ಉತ್ತರ ಪ್ರದೇಶಗಳ ಮೈದಾನದಲ್ಲಿಯೂ ಕಾಣಬಹುದು.

3. ಮುಳ್ಳು ಗಿಡಗಳು ಮತ್ತು ಪೊದರು ಸಸ್ಯವರ್ಗ

ಈ ಮಾದರಿಯ ಸಸ್ಯವರ್ಗ ವಾರ್ಷಿಕ ಸರಾಸರಿ 75 ಸೆಂ.ಮೀ ಗಿಂತಲೂ ಕಡಿಮೆ ಮಳೆ ಬೀಳುವ ಅಧಿಕವಾದ ಒಣ ಪ್ರದೇಶಗಳಲ್ಲಿ ಪ್ರಮುಖವಾಗಿ ಕಂಡುಬರುತ್ತದೆ. ಈಕಾಡುಗಳಲ್ಲಿ ಮರಗಳು ಅಲ್ಲಲ್ಲಿ ಕಂಡುಬರುತ್ತವೆ. ಈ ಕಾಡುಗಳಲ್ಲಿ ಮರಗಳು ಭೂಮಿಯ ಅತೀ ಆಳದಲ್ಲಿರುವ ನೀರನ್ನು ಹೀರಲು ನೀಳವಾದ ಬೇರುಗಳನ್ನು ಹೊಂದಿದವುಗಳಾಗಿವೆ. ನೀರು ಆವಿಯಾಗುವುದನ್ನು ಕಡಿಮೆ ಮಾಡಲು ಚದುರಿದ ಚಿಕ್ಕ ಎಲೆಗಳನ್ನು ಈ ಮರಗಳು ಹೊಂದಿರುತ್ತವೆ. ಇವುಗಳು ಮುಳ್ಳು ಮತ್ತು ದಟ್ಟವಾದ ಪಟ್ಟೆಗಳನ್ನು ಹೊಂದಿರುತ್ತವೆ.

ಇಲ್ಲಿ ಕಂಡುಬರುವ ಮರಗಳು ಅಕೇಶಿಯಾ, ತಾಳೆ,ಮತ್ತು ಪಾಪಸುಕಳ್ಳಿಗಳಾಗಿವೆ. ಇನ್ನಿತರ ಮುಖ್ಯವಾದ ಮರಗಳು ಖೈರ್, ಬಾಬುಲ್, ಪಾಲಾಸ್, ಘಗ್ರಿ ಮತ್ತು ಕಜೀರಿ ಗಳಾಗಿವೆ. ಇಂತಹ ಸಸ್ಯವರ್ಗಗಳು ಮುಖ್ಯವಾಗಿ ದೇಶದ ವಾಯುವ್ಯಭಾಗ, ಗುಜರಾತಿನ ಅರೆಶುಷ್ಕ ಪ್ರದೇಶ, ರಾಜಸ್ತಾನ, ಮಧ್ಯಪ್ರದೇಶ, ಉತ್ತರಪ್ರದೇಶ, ಪಂಜಾಬಿನನೈರುತ್ಯ ಭಾಗ, ಮತ್ತು ಪಶ್ಚಿಮಹರಿಯಾಣ ಗಳಲ್ಲಿ ಕಂಡುಬರುತ್ತವೆ. ಇಂತಹ ಕಾಡುಗಳು ಪಶ್ಚಿಮ ಘಟ್ಟಗಳ ಮಳೆ ನೆರಳಿನ ಪ್ರದೇಶವಾದ ಮಹಾರಾಷ್ಟ್ರ, ಕರ್ನಾಟಕ, ಆಂಧ್ರಪ್ರದೇಶ ಮತ್ತು ತಮಿಳುನಾಡು ಗಳಲ್ಲಿ ಇವೆ


4. ಮರುಭೂಮಿ ಸಸ್ಯವರ್ಗ

ವಾರ್ಷಿಕ ಸರಾಸರಿ ಮಳೆ 25 ಸೆಂ. ಮೀ. ಗಿಂತಲೂ ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿ ಇಂತಹ



ಮರುಭೂಮಿ ಸಸ್ಯವರ್ಗ

ಸಸ್ಯವರ್ಗವು ಕಂಡುಬರುತ್ತವೆ. ಈ ಸಸ್ಯವರ್ಗವು ಹೆಚ್ಚಾಗಿ ಮುಳ್ಳಿನ ಪೊದರುಗಳನ್ನೂ ,ಅಕೇಶಿಯಾ, ಈಚಲು ಮತ್ತು ಬಬೂಲ್ ಮರಗಳನ್ನೂ ಒಳಗೊಂಡಿದೆ. ಇಲ್ಲಿ ಮರಗಳು 6ರಿಂದ 10ಮೀಟರ್ ವರೆಗೆ ಎತ್ತರ ಹಾಗೂ ಆಳವಾದ ಬೇರುಗಳನ್ನು ಹೊಂದಿದ್ದು ಮತ್ತು ಮಂದವಾದ ಮುಳ್ಳುಗಳಿಂದ, ಪ್ರಾಣಿಗಳಿಂದ ತಮ್ಮನ್ನೂ ರಕ್ಷಿಸಿಕೊಳ್ಳುತ್ತವೆ.


ಭಾರತ
ಸ್ವಾಭಾವಿಕ ಸಸ್ಯವರ್ಗ
ಉ
ಪ
ಪೂ
ದ
ಅರಬ್ಬೀಸಮುದ್ರ
ಬಂಗಾಳಕೊಲ್ಲಿ
ಉಷ್ಣವಲಯದ ನಿತ್ಯಹರಿದ್ವರ್ಣದ ಕಾಡುಗಳು
ಉಷ್ಣವಲಯದ ಮಾನ್ಸೂನ್ ಕಾಡುಗಳು
ಮುಳ್ಳು ಗಿಡಗಳು ಮತ್ತು ಪೊದೆ ಸಸ್ಯವರ್ಗ
ಮ್ಯಾಂಗ್ರೋವ್ ಕಾಡುಗಳು
ಪರ್ವತ ಸಸ್ಯವರ್ಗ
ಲಕ್ಷದ್ವೀಪಗಳು
ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು
ಹಿಂದೂಮಹಾಸಾಗರ

ಬಬೂಲ್ ಮರದ ಅಂಟು ಮತ್ತು ಅದರ ಮರ ಪಟ್ಟಿಗಳನ್ನು ಚರ್ಮವನ್ನು ಹದಗೊಳಿಸಲು ಬಳಸುತ್ತಾರೆ. ಇಂತಹ ಸಸ್ಯ ವರ್ಗವು ರಾಜಸ್ಥಾನ ಗುಜರಾತಿನ ಕಚ್ ಮತ್ತು ಸೌರಾಷ್ಟ್ರ, ಪಂಜಾಬಿನ ನೈರುತ್ಯ ಭಾಗ ಮತ್ತು ದಖ್ಖನ್ ಪೀಠಭೂಮಿಯಲ್ಲಿ ಕಂಡುಬರುತ್ತವೆ.

5. ಮ್ಯಾಂಗ್ರೋವ್ ಕಾಡುಗಳು

ಮ್ಯಾಂಗ್ರೋವ್ ಕಾಡುಗಳು ಸಮುದ್ರದ ಉಬ್ಬರವಿಳಿತಗಳ ಪ್ರದೇಶದಲ್ಲಿ ಅಂದರೆ ನದಿ ಮುಖಜಭೂಮಿಗಳು ಮತ್ತು ನದಿಗಳ ಅಳಿವೆಗಳ ಪ್ರದೇಶಗಳಲ್ಲಿ ಕಂಡುಬರುತ್ತವೆ. ಇವುಗಳಲ್ಲಿ ಕೆಲವು ಕಾಡುಗಳು ಬಹಳ ದಟ್ಟವಾಗಿಯೂ ಅಭೇದ್ಯವಾಗಿಯೂ ಇವೆ. ಈ ಮರಗಳ ಅಡಿಭಾಗಗಳನ್ನು ಉಬ್ಬರ ಅಲೆಗಳ ಸಮಯದಲ್ಲಿ ನೀರಿನ ತಳಭಾಗದಲ್ಲಿ ಕಂಡುಬರುವ ಅಸಂಖ್ಯಾತ ಬೇರುಗಳು ತಡೆದುಕೊಳ್ಳುತ್ತವೆ. ಈ



ಮ್ಯಾಂಗ್ರೋವ್ ಕಾಡುಗಳು

ಬೇರುಗಳನ್ನು ಕಡಿಮೆ ಅಲೆಗಳ ಸಮಯದಲ್ಲಿ ನಾವು ಕಾಣಲು ಸಾಧ್ಯ. ಈ ಬಗೆಯ ಕಾಡುಗಳು ಗಂಗಾ, ಮಹಾನದಿ, ಗೋದಾವರಿ, ಕೃಷ್ಣಾ, ಮತ್ತು ಕಾವೇರಿ ನದಿಗಳ ಮುಖಜಭೂಮಿಗಳಲ್ಲೂ, ಅಂಡಮಾನ್ ನಿಕೋಬರ್ ದ್ವೀಪಗಳ ತೀರ ಪ್ರದೇಶಗಳಲ್ಲೂ ಅತ್ಯಧಿಕವಾಗಿ ಕಂಡು ಬರುತ್ತವೆ. ಪಶ್ಚಿಮ ಕರಾವಳಿಯ ಕೆಲವು ಭಾಗಗಳಲ್ಲೂ ಈ ಬಗೆಯ ಕಾಡುಗಳು ಕಂಡು ಬರುತ್ತವೆ. ಪಶ್ಚಿಮ ಬಂಗಾಳದಲ್ಲಿ ಈ ಕಾಡುಗಳನ್ನು "ಸುಂದರಬನ" ಎಂದು ಕರೆಯುತ್ತಾರೆ. ಈ ಕಾಡುಗಳ ಮರಗಳು ಕಠಿಣವಾದುದಾಗಿಯೂ ಗಟ್ಟಿಯಾಗಿಯೂ ದೀರ್ಘಕಾಲ ಬಾಳಿಕೆ ಬರುವುದರಿಂದಲೂ ಇವುಗಳನ್ನು ಹಡಗುಗಳನ್ನು ನಿರ್ಮಿಸುವುದಕ್ಕೆ ಬಳಸುತ್ತಾರೆ. ಈ ಕಾಡುಗಳು ಅತ್ಯಮೂಲ್ಯವಾದ ಇಂಧನಕ್ಕೆ ಆಧಾರವಾಗಿವೆ.

6. ಪರ್ವತ ಸಸ್ಯವರ್ಗ

ಪರ್ವತ ಸಸ್ಯವರ್ಗದಲ್ಲಿ ಕಂಡುಬರುವ ಸ್ವಾಭಾವಿಕ ಸಸ್ಯವರ್ಗವು ಸಮುದ್ರ ಮಟ್ಟದಿಂದ ಎತ್ತರಕ್ಕೆ ಹೋದಂತೆಲ್ಲಾ ಕಡಿಮೆ ಯಾಗುವ ಉಷ್ಣಾಂಶದಿಂದ ಬೆಳೆಯುವಂತಹ ಸಸ್ಯವರ್ಗವಾಗಿದೆ. ಈ ಬಗೆಯ ಕಾಡುಗಳನ್ನು ಎರಡು ದೊಡ್ಡ ವಿಭಾಗಗಳನ್ನಾಗಿ ವಿಂಗಡಿಸಬಹುದು. ಅವುಗಳೆಂದರೆ

1. ಹಿಮಾಲಯದ ಸಸ್ಯ ವರ್ಗ.
2. ಪರ್ಯಾಯ ದ್ವೀಪ ಪೀಠಭೂಮಿ ಮತ್ತು ಅದರಲ್ಲಿರುವ ಪರ್ವತ ಶ್ರೇಣಿಗಳ ಸಸ್ಯವರ್ಗ.

1. ಹಿಮಾಲಯದ ಸಸ್ಯವರ್ಗ

ಹಿಮಾಲಯ ಪರ್ವತ ಶ್ರೇಣಿಯಲ್ಲಿ 1000ಮೀ ಎತ್ತರದಿಂದ 2000ಮೀ ಎತ್ತರದವರೆಗೆ ಕಂಡು ಬರುತ್ತದೆ. ಇಲ್ಲಿ ಓಕ್, ಚೆಸ್ಟ್ ನಟ್ ಇನ್ನೂಮುಂತಾದ ಸದಾ ಹಸಿರಿನಿಂದ ಕೂಡಿದ ಅಗಲವಾದ ಎಲೆಗಳಿಂದಕೂಡಿದ ಸಸ್ಯವರ್ಗವು ಮುಖ್ಯವಾಗಿ ಕಂಡುಬರುತ್ತವೆ. 1500ಮೀ ನಿಂದ 3000ಮೀ ಎತ್ತರದವರೆಗಿನ ಪೈನ್, ದೇವದಾರು, ಸಿಲ್ವರ್ ಫರ್,



ಪರ್ವತ ಸಸ್ಯವರ್ಗ

ಸ್ಪ್ರೂಸ್ ಮತ್ತು ಸಿಡಾರ್ ಮುಂತಾದ ಸೂಜಿಮೊನೆ ಎಲೆಯ ಮರಗಳು ಕಂಡುಬರುತ್ತವೆ. ಸೂಜಿಮೊನೆಯ ಎಲೆಯ ಕಾಡುಗಳು ಹಿಮಾಲಯ ಪರ್ವತದ ದಕ್ಷಿಣದ ಇಳಿಜಾರುಗಳು ಮತ್ತು ಈಶಾನ್ಯ ಭಾರತ ಮುಂತಾದ ಭಾಗಗಳಲ್ಲಿ ಕಂಡುಬರುತ್ತವೆ. 3600ಮೀ ಗಿಂತ ಎತ್ತರದಲ್ಲಿ ಸೂಜಿಮೊನೆ ಎಲೆಯ ಕಾಡುಗಳು ಆಲ್ಪೈನ್ ಸಸ್ಯಗಳಾದ ಹುಲ್ಲು ಮತ್ತು ಕುರುಚಲು ಗಿಡಗಳು ಕಂಡು

ಬರುತ್ತವೆ. ಇಲ್ಲಿ ಸಿಲ್ವರ್‌ಫರ್, ಜೂನಿಪರ್ಸ್, ಪೈನ್, ಬರ್ಚ್ ಮುಂತಾದ ಸಾಮಾನ್ಯವಾದ ಬಗೆಯ ಮರಗಳು ಬೆಳೆಯುತ್ತವೆ. ಅತ್ಯಂತ ಎತ್ತರವಾದ ಪ್ರದೇಶಗಳಲ್ಲಿ ಮೋಸಸ್ ಮತ್ತು ಲಿಚ್ಚನ್ಸ್ ನಂತಹವುಗಳೇ ಸಸ್ಯವರ್ಗಗಳ ಪ್ರದೇಶವಾಗಿ ರಚನೆಯಾಗಿವೆ. ಪರ್ಯಾಯ ದ್ವೀಪ ಭಾರತದಲ್ಲಿ ಪರ್ವತ ಸಸ್ಯ ವರ್ಗಗಳು ಮೂರು ಬಗೆಗಳಾಗಿ ಕಂಡುಬರುತ್ತವೆ. ಅವುಗಳೆಂದರೆ

1. ಪಶ್ಚಿಮ ಘಟ್ಟಗಳು.
2. ವಿಂದ್ಯಾ ಪರ್ವತದ ಭಾಗ.
3. ನೀಲಗಿರಿ ಬೆಟ್ಟದ ಭಾಗ.

ನೀಲಗಿರಿ ಬೆಟ್ಟದಲ್ಲಿರುವ ಉಷ್ಣವಲಯದ ಕಾಡುಗಳನ್ನು ಸೋಲಾಸ್ ಎಂಬ ಸ್ಥಳೀಯ ಹೆಸರಿನಿಂದ ಕರೆಯಲ್ಪಡುವರು.

ಈ ಬಗೆಯ ಕಾಡುಗಳು ಸಾತ್ಪುರ ಮತ್ತು ಮೈಕ್ಕೇಲ ಪರ್ವತ ಶ್ರೇಣಿಗಳಲ್ಲಿ ಕಂಡುಬರುತ್ತವೆ. ಇಲ್ಲಿ ಬೆಳೆಯುವ ಮುಖ್ಯವಾದ ಮರಗಳು ಯಾವುವೆಂದರೆ ಮ್ಯಾಗ್ನೋಲಿಯಾ, ಲಾರಲ್, ಸಿಂಕೋನ ಮತ್ತು ವ್ಯಾಟ್ಲ್‌ಗಳಾಗಿವೆ.

ಹುಲ್ಲುಗಾವಲುಗಳು

ಭಾರತದಲ್ಲಿ ಬೆಳೆಯುವ ಹುಲ್ಲುಗಾವಲುಗಳನ್ನು ಸವನ್ನಾ ಅಥವಾ ಸ್ಟೆಪ್ಪೀಸ್ ಹುಲ್ಲುಗಾವಲುಗಳೊಂದಿಗೆ ಹೋಲಿಸಲು ಸಾಧ್ಯವಿಲ್ಲ. ಹೀಗಿದ್ದರೂ ಭಾರತದ ಹುಲ್ಲುಗಾವಲುಗಳು ತೇವಾಂಶವಿರುವ ಮಣ್ಣಿರುವ ಭೂ ಭಾಗಗಳಲ್ಲಿಯೂ, ಉಪ್ಪಿನ ಭಾಗಗಳಲ್ಲಿಯೂ ಮತ್ತು ಕೆಲವು ಪರ್ವತ ಪ್ರದೇಶಗಳಲ್ಲಿಯೂ ಕಂಡುಬರುತ್ತವೆ.

ಈ ಹುಲ್ಲುಗಾವಲುಗಳನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು.

1. ತಗ್ಗು ಪ್ರದೇಶದ ಹುಲ್ಲುಗಾವಲು.
2. ಎತ್ತರ ಪ್ರದೇಶದ ಹುಲ್ಲುಗಾವಲು.

1. ತಗ್ಗು ಪ್ರದೇಶದ ಹುಲ್ಲುಗಾವಲುಗಳು

ಇವು 30ಸೆಂ ಮೀ ನಿಂದ 200ಸೆಂ ಮೀ ವರೆಗೆ ವಾರ್ಷಿಕ ಸರಾಸರಿ ಮಳೆಬೀಳುವ ಬೇಸಿಗೆಯಲ್ಲಿ ಹೆಚ್ಚು ಉಷ್ಣಾಂಶವಿರುವ ಪ್ರದೇಶಗಳಲ್ಲಿ ಕಂಡು ಬರುತ್ತವೆ. ಈ ರೀತಿಯ ಹುಲ್ಲುಗಾವಲುಗಳು ವಿವಿಧ ಮಣ್ಣಿನಲ್ಲಿ ಬೆಳೆಯುತ್ತವೆ. ಈ ಹುಲ್ಲುಗಾವಲುಗಳು ಪಶುಪಾಲನೆಯ ಅಭಿವೃದ್ಧಿಗೆ ಸೂಕ್ತವಾದುದು.

ಭಾರತದ ಬಯಲು ಪ್ರದೇಶಗಳಲ್ಲಿ ಪಂಜಾಬ್, ಉತ್ತರಪ್ರದೇಶ, ಹರಿಯಾಣ, ಬಿಹಾರ ಮತ್ತು ಅಸ್ಸಾಂನ ವಾಯುವ್ಯ ಭಾಗಗಳಲ್ಲಿಯೂ ಕಂಡುಬರುತ್ತದೆ.

2. ಎತ್ತರ ಪ್ರದೇಶದ ಹುಲ್ಲುಗಾವಲುಗಳು:

ಈ ಹುಲ್ಲುಗಾವಲುಗಳು 1000ಮೀ ಎತ್ತರಕ್ಕಿಂತಲೂ ಹೆಚ್ಚಾಗಿರುವ ಹಿಮಾಲಯ ಪರ್ವತದ ಭಾಗಗಳಲ್ಲಿಯೂ ಕರ್ನಾಟಕದಲ್ಲಿರುವ ಪಶ್ಚಿಮ ಘಟ್ಟಗಳ ಕಾಡುಗಳು ವಿನಾಶಗೊಳ್ಳಲ್ಪಟ್ಟ ಭಾಗಗಳಲ್ಲಿಯೂ ಬೆಳೆಯುತ್ತವೆ. ದಕ್ಷಿಣ ಭಾರತದಲ್ಲಿ ಸೋಲಾ ಕಾಡುಗಳು ಚಿಕ್ಕ ಭಾಗಗಳಲ್ಲಿ ಕಂಡು ಬರುತ್ತದೆ.



ಎತ್ತರ ಪ್ರದೇಶದ ಹುಲ್ಲುಗಾವಲು.

ಕಾಡುಗಳ ಪ್ರಾಮುಖ್ಯತೆ :

1. ಕಾಡುಗಳು ಗೃಹೋಪಯೋಗಕ್ಕೂ ಅಗತ್ಯವಾದ ಹೆಚ್ಚು ಬೆಲೆಬಾಳುವ ಮರಗಳನ್ನು ಕೈಗಾರಿಕೆಗಳಿಗೆ ಅಗತ್ಯವಾದ ಕಚ್ಚಾ ವಸ್ತುಗಳನ್ನು ಒದಗಿಸುತ್ತವೆ.

2. ಇವು ಅರಗು, ಗೋಂದು, ಮರದ ಅಂಟು, ಚರ್ಮಹದಗೊಳಿಸುವ ವಸ್ತುಗಳು, ಔಷಧಿಗಳು, ಗಿಡಮೂಲಿಕೆಗಳು. ಜೇನು ಮತ್ತು ಮಸಾಲ ವಸ್ತುಗಳನ್ನು ಪೂರೈಸುತ್ತವೆ,

3. ಅರಣ್ಯ ವಸ್ತುಗಳನ್ನು ವಿದೇಶಗಳಿಗೆ ರಫ್ತು ಮಾಡುವುದರ ಮೂಲಕ ವಿದೇಶಿ ವಿನಿಮಯ ಗಳಿಸುತ್ತದೆ.

4. ಕಾಡುಗಳಲ್ಲಿ ಜಾನುವಾರುಗಳನ್ನು ಮೇಯಿಸುವುದರ ಮೂಲಕ ಹೈನುಗಾರಿಕಾ ವಸ್ತುಗಳ ಉತ್ಪನ್ನ ಗಳಿಗೆ ಸಹಾಯಕವಾಗಿವೆ.

5. ಹಲವು ಕಾಡುಗಳು ಪ್ರವಾಸಿ ಕೇಂದ್ರಗಳಾಗಿ ಬೆಳವಣಿಗೆಯಾಗುತ್ತವೆ.

6. ಕಾಡುಗಳು ವಾಯುಮಂಡಲದಲ್ಲಿರುವ ಕಾರ್ಬನ್ ಡೈ ಆಕ್ಸೈಡನ್ನು ಹೀರಿಕೊಂಡು ವಾಯುಮಾಲಿನ್ಯವನ್ನು ನಿಯಂತ್ರಿಸುತ್ತವೆ.

7. ಕಾಡುಗಳು ಮಣ್ಣಿನ ಸವೆತವನ್ನು ತಪ್ಪಿಸುತ್ತವೆ. ಅವುಗಳ ಎಲೆಗಳು ಹಾಗೂ ಬೇರುಗಳು ಪ್ರವಾಹಗಳನ್ನು ನಿಯಂತ್ರಣದಲ್ಲಿಡುತ್ತವೆ.

8. ನೀರು ಭೂಮಿಯ ಒಳಗೆ ಹೋಗಲು ಅದರ ಮೂಲಕ ಅಂತರಾಳಾದ ನೀರಿನ ಮಟ್ಟದ ನಿರ್ವಹಣೆಗೂ ಕಾಡುಗಳು ಸಹಾಯಕವಾಗಿವೆ.

9. ಮಾನವನಿಗೆ, ಪ್ರಾಣಿಗಳಿಗೆ, ಪಕ್ಷಿಗಳಿಗೆ ಪ್ರಾಕೃತಿಕವಾದ ಸ್ಥಳಗಳನ್ನು ಕಾಡುಗಳು ನೀಡುತ್ತವೆ.

10. ಕಾಡುಗಳು ವಾಯುಗುಣವನ್ನು ಸುಧಾರಿಸುವುದಲ್ಲದೆ ಉಷ್ಣಾಂಶ, ತೇವಾಂಶ ಮತ್ತು ಮಳೆ ಇವುಗಳಮೇಲೆ ಪ್ರಭಾವ ಬೀರುತ್ತವೆ.

11. ಕಾಡುಗಳು ದೇಶದ ಶೇಕಡ 40ರಷ್ಟು ಇಂಧನದ ಅವಶ್ಯಕತೆಯನ್ನು ಪೂರೈಸುತ್ತವೆ.

ಭಾರತದಲ್ಲಿರುವ ಅತ್ಯಧಿಕ ಕಾಡುಗಳು ಕಾಡು ಮೃಗಗಳಿಗೆ ರಕ್ಷಣೆಯಾಗಿ ಭಾರತ ಅರಣ್ಯಇಲಾಖೆಯಿಂದ ನಿರ್ವಹಿಸಲ್ಪಡುತ್ತವೆ. ಅವುಗಳು ಈ ಕೆಳಕಂಡಂತೆ ಎರಡು ಭಾಗಗಳಾಗಿ ವಿಂಗಡಿಸಲ್ಪಟ್ಟಿವೆ.

1. ಮೀಸಲು ಅರಣ್ಯ (Reserve forests).

2. ಸಂರಕ್ಷಿತ ಅರಣ್ಯ (Protect forests).

1. ಮೀಸಲು ಅರಣ್ಯಗಳು ಕಾಡುಗಳ ಒಟ್ಟು ವಿಸ್ತೀರ್ಣದಲ್ಲಿ ಅರ್ಧಕ್ಕಿಂತಲೂ ಹೆಚ್ಚಾಗಿ ಪೋಷಿಸಲ್ಪಟ್ಟ ಕಾಡುಗಳು ಎಂದು ಸರ್ಕಾರವು ಪ್ರಕಟಿಸಿದೆ. ಈ ಕಾಡುಗಳನ್ನು ಶಾಶ್ವತ ಕಾಡುಗಳು ಎಂದು ಕರೆಯುತ್ತಾರೆ. ಮೀಸಲು ಅರಣ್ಯಗಳು ಕಾಡುಗಳನ್ನೂ, ಪ್ರಾಣಿಗಳನ್ನೂ ರಕ್ಷಣೆ ಮಾಡುವುದರಿಂದ ಅತ್ಯಂತ ಬೆಲೆಬಾಳುವುದಾಗಿದೆ ಎಂದು ಅಭಿಪ್ರಾಯಪಡಲಾಗಿದೆ.

2. ಸಂರಕ್ಷಿತ ಅರಣ್ಯಗಳು:ಅರಣ್ಯ ಇಲಾಖೆಯ ಪ್ರಕಟಣೆಯ ಪ್ರಕಾರ ಕಾಡುಗಳ ಒಟ್ಟು ವಿಸ್ತೀರ್ಣದಲ್ಲಿ ಬಹುತೇಕ 1/3 ಭಾಗವು ಸಂರಕ್ಷಿತ ಕಾಡುಗಳಾಗಿವೆ.ಇಲ್ಲಿ ಮರಕಡಿಯಲು ಅನುಮತಿ ನೀಡಲಾಗುವುದಿಲ್ಲ.

ಕಾಡುಗಳ ರಕ್ಷಣೆ ಮತ್ತು ನಿರ್ವಹಣೆ

ಕಾಡುಗಳನ್ನು ನಾಶಮಾಡಿ ಕಾಡುಗಳನ್ನು ಕಡಿಮೆಗೊಳಿಸುವುದು ಹೆಚ್ಚಾಗುತ್ತಲೇ ಬಂದಿರುವುದರಿಂದ ಅತೀಹೆಚ್ಚು ವಿಸ್ತಾರವಾದ ಮಣ್ಣಿನ ಸವೆತ ಅನಿಶ್ಚಿತಮಳೆ ಮತ್ತು ಮತ್ತೆ ಮತ್ತೆ ಪ್ರವಾಹ ಸಂಭವಿಸುತ್ತವೆ.ಕಾಡುಗಳನ್ನು ನಾಶಗೊಳಿಸಿ ಕಾಡುಗಳನ್ನು ಅವಲಂಭಿಸದ ಕಾಡುಗಳ ಕಾರ್ಯಗಳಿಗೆ ಬಳಸಿಕೊಳ್ಳುವುದನ್ನು ನಿಲ್ಲಿಸಲು 1980 ರಲ್ಲಿ ಅರಣ್ಯ ರಕ್ಷಣಾ ಕಾಯಿದೆಯನ್ನು ರಚಿಸಲಾಯಿತು. 1988ರಲ್ಲಿ ಈ ಕಾಯಿದೆಯು ತಿದ್ದುಪಡಿಮಾಡಿ ಕಾಡುಗಳ ರಕ್ಷಣಾ ಕಾಯಿದೆಗೆ ವಿರುದ್ಧವಾಗಿ ನಡೆದುಕೊಳ್ಳುವವರಿಗೆ ನೀಡುವ ಕಠಿಣವಾದ ಶಿಕ್ಷೆಯ ಬಗ್ಗೆ ತಿಳಿಸುತ್ತದೆ. ಸರ್ಕಾರ ಗ್ರಾಮ ಸಮುದಾಯವನ್ನು ಸ್ವಯಂ ಸೇವಕರುಗಳನ್ನು ಸೇರಿಸಿಕೊಂಡು ನಾಶಗೊಳಿಸಲ್ಪಟ್ಟ ಅರಣ್ಯ ಭಾಗವನ್ನು ಮತ್ತೆ ಅರಣ್ಯವನ್ನು ಬೆಳೆಸುವ ಪ್ರಯತ್ನದಲ್ಲಿ ತೊಡಗಿಸಿಕೊಳ್ಳಬೇಕು.

ರಾಷ್ಟ್ರೀಯ ಅರಣ್ಯ ನೀತಿ

ರಾಷ್ಟ್ರೀಯ ಅರಣ್ಯ ನೀತಿಯು ಕಾಡುಗಳನ್ನು ರಕ್ಷಿಸಲು ನೀತಿಗಳನ್ನು ರೂಪಿಸಲು ಕೆಲವು ವಿಶ್ವರಾಷ್ಟ್ರಗಳಲ್ಲಿ ಭಾರತವು ಒಂದಾಗಿದೆ. ಭಾರತವು 1894 ರಲ್ಲಿ ರಾಷ್ಟ್ರೀಯ ಅರಣ್ಯ ನೀತಿಯೊಂದನ್ನು ರಚಿಸಿತು. ಪುನಃ 1952 ಮತ್ತು 1988 ರಲ್ಲಿಯೂ ಈ ನೀತಿಯನ್ನು ತಿದ್ದುಪಡಿಮಾಡಿ ರಚಿಸಲ್ಪಟ್ಟಿತು.

ರಾಷ್ಟ್ರೀಯ ಅರಣ್ಯ ನೀತಿಯ ಮುಖ್ಯ ಉದ್ದೇಶಗಳು

1. ಶೇಕಡ. 33 ರಷ್ಟು ಭೂಮಿಯನ್ನು ಕಾಡುಗಳಾಗಿ ಬದಲಾಯಿಸುವುದು (ಈಗ ಕಾಡುಗಳ ವಿಸ್ತೀರ್ಣಶೇಕಡ 20ರಷ್ಟಿದೆ).

2. ಪರಿಸರ ಸಮತೋಲನದಿಂದ ಬಾಧಿಸಲ್ಪಟ್ಟ ಪ್ರದೇಶಗಳಲ್ಲಿ ಪರಿಸರ ಸ್ಥಿರತೆ ನಿರ್ವಹಣೆ ಕೈಗೊಳ್ಳುವುದು.

3. ದೇಶದ ಜೀವ ವೈವಿಧ್ಯತೆಯ ರಕ್ಷಣೆ ಮಾಡುವುದು.

4. ಮಣ್ಣಿನ ಸವೆತ ಮತ್ತು ಮರುಭೂಮಿ ವಿಸ್ತಾರವನ್ನು ತಪ್ಪಿಸುವುದು. ಪ್ರವಾಹ ಮತ್ತು ಬರಗಾಲವನ್ನು ತಡೆಗಟ್ಟುವುದು.

5. ಸಾಮಾಜಿಕ ಅರಣ್ಯಗಳು ಮತ್ತು ಸಾಗುವಳಿ ಅರಣ್ಯಗಳ ಮೂಲಕ ಕಾಡುಗಳ ವಿಸ್ತಾರವನ್ನು ಹೆಚ್ಚಿಸುವುದು.

6.ಕಾಡುಗಳಿಂದ ಮರದ ದಿಮ್ಮಿಗಳು, ಇಂಧನ ಮತ್ತು ಜಾನುವಾರುಗಳ ಮೇವು ಮುಂತಾದವುಗಳ ಉತ್ಪತ್ತಿಯನ್ನು ಅಧಿಕಗೊಳಿಸುವುದು.

7. ಗಿಡಗಳನ್ನು ನೆಡುವುದು ಮತ್ತು ಮರ ಕತ್ತರಿಸುವುದನ್ನು ತಡೆಗಟ್ಟುವತಂಹ ಕಾರ್ಯಗಳಲ್ಲಿ ಮಹಿಳೆಯರನ್ನು ತೊಡಗಿಸಿಕೊಳ್ಳುವುದು.

ಹೀಗೆ ನಮ್ಮ ದೇಶದ ಸ್ವಾಭಾವಿಕ ಸಸ್ಯವರ್ಗವನ್ನು ರಕ್ಷಿಸುವುದು ನಮ್ಮೆಲ್ಲರ ಪ್ರಧಾನ ಕರ್ತವ್ಯವಾಗಿದೆ.

ಖನಿಜ ಸಂಪನ್ಮೂಲಗಳು

1. ಲೋಹಖನಿಜಗಳು.

2. ಅಲೋಹ ಖನಿಜಗಳು.

1. ಲೋಹಖನಿಜಗಳು

ಕಬ್ಬಿಣ, ತಾಮ್ರ, ಮ್ಯಾಂಗನೀಸ್, ಬಾಕ್ಸೈಟ್ ಮತ್ತು ಚಿನ್ನ ಇವುಗಳು ಲೋಹ ಖನಿಜಗಳಾಗಿವೆ. ಇವುಗಳನ್ನು ಕಬ್ಬಿಣಾಂಶವಿರುವ ಖನಿಜಗಳು ಮತ್ತು ಕಬ್ಬಿಣಾಂಶವಿರದ ಖನಿಜಗಳು ಎಂದು ಎರಡು ಭಾಗಗಳಾಗಿ ವಿಂಗಡಿಸಬಹುದು.

ಕಬ್ಬಿಣಾಂಶವನ್ನು ಹೊಂದಿದ ಖನಿಜಗಳು

ಈ ಬಗೆಯ ಖನಿಜಗಳಲ್ಲಿ ಕಬ್ಬಿಣಾಂಶವನ್ನು ಹೊಂದಿದ್ದರೆ ಅವುಗಳನ್ನು ಕಬ್ಬಿಣಾಂಶಗಳನ್ನೊಳಗೊಂಡ ಖನಿಜಗಳು ಎನ್ನುತ್ತೇವೆ. ಉದಾಹರಣೆಗೆ ಕಬ್ಬಿಣ, ಮ್ಯಾಂಗನೀಸ್, ನಿಕ್ಕಲ್, ಕೋಬಾಲ್ಟ್, ಟಂಗ್‌ಸ್ಟನ್ ಮುಂತಾದವುಗಳು.

ಕಬ್ಬಿಣಾಂಶವನ್ನು ಹೊಂದಿರದ ಖನಿಜಗಳು

ಖನಿಜಗಳಲ್ಲಿ ಕಬ್ಬಿಣ ಮಿಶ್ರಿತವಿಲ್ಲದಿದ್ದಲ್ಲಿ ಅವುಗಳನ್ನು ಕಬ್ಬಿಣಾಂಶ ಹೊಂದಿರದ ಖನಿಜಗಳು ಎನ್ನುತ್ತೇವೆ. ಉದಾಹರಣೆಗೆ ಚಿನ್ನ, ಬೆಳ್ಳಿ, ತಾಮ್ರ, ಬಾಕ್ಸೈಟ್ ಮುಂತಾದವುಗಳಾಗಿವೆ.

2. ಅಲೋಹ ಖನಿಜಗಳು

ಲೋಹವಲ್ಲದ ಖನಿಜಗಳು ಮೈಕಾ, ಸುಣ್ಣ, ಜಿಪ್ಸಂ, ಪೊಟ್ಯಾಷಿಯಂ, ಕಲ್ಲಿದ್ದಲು ಮತ್ತು ಪೆಟ್ರೋಲಿಯಂ ಆಗಿವೆ.

ಕೆಲವು ಮುಖ್ಯ ಖನಿಜಗಳು

ಕಬ್ಬಿಣದ ಅದಿರು

ದೇಶದ ಅಭಿವೃದ್ಧಿಗೆ ಆಧಾರವಾಗಿರುವ ಖನಿಜ ಕಬ್ಬಿಣದ ಅದಿರಾಗಿದೆ. ಕಬ್ಬಿಣವನ್ನು ನಾಗರಿಕತೆಯ ಬೆನ್ನೆಲುಬು ಎಂದು ವರ್ಣಿಸಲಾಗುತ್ತದೆ.



ಕಬ್ಬಿಣದ ಅದಿರು

ವಿಶ್ವದ ಒಟ್ಟು ಕಬ್ಬಿಣದ ಅದಿರು ನಿಕ್ಷೇಪದಲ್ಲಿ ಶೇಕಡ 20 ರಷ್ಟು ಕಬ್ಬಿಣದ ಅದಿರನ್ನು ಭಾರತವು ಪಡೆದಿದೆ. ಕಬ್ಬಿಣದ ಅದಿರು ನಿಕ್ಷೇಪದಲ್ಲಿ ರಷ್ಯಾದ ನಂತರ ಭಾರತ ಎರಡನೇ ಸ್ಥಾನವನ್ನು ಪಡೆದಿದೆ. ಭಾರತದ ಕಬ್ಬಿಣದ ಅದಿರು ಅತೀ ಶ್ರೇಷ್ಠ ದರ್ಜೆಯದಾಗಿದೆ.

ಭಾರತದಲ್ಲಿ ಕಬ್ಬಿಣದ ಅದಿರು ದೊರೆಯುವ ಸ್ಥಳಗಳು ಛತ್ತೀಸ್ ಗರ್ ರಾಜ್ಯದ ದುರ್ಗ್‌ಭಾಗ, ಜಾರ್ಖಂಡ್‌ನಲ್ಲಿರುವ ಸಿಂಗ್‌ಭೂಮ್ ಜಿಲ್ಲೆ, ಒಡಿಸ್ಸಾದ ಸುಂದರ್‌ಗರ್, ಮಯೂರ ಭಂಜ್, ಕಿಯೋಂಜರ್ ಜಿಲ್ಲೆಗಳಲ್ಲಿಯೂ, ಗೋವಾ, ಕರ್ನಾಟಕ, ತಮಿಳುನಾಡಿನ ಕೆಲವು ಜಿಲ್ಲೆಗಳ ಪ್ರದೇಶಗಳಲ್ಲಿಯೂ ಕಂಡು ಬರುತ್ತದೆ.

ಮ್ಯಾಂಗನೀಸ್



ಮ್ಯಾಂಗನೀಸ್

ಮ್ಯಾಗನೀಸ್ ಉತ್ಪಾದನೆಯಲ್ಲಿ ಭಾರತವು ಐದನೇ ಸ್ಥಾನವನ್ನು ಪಡೆದುಕೊಂಡಿದೆ. ಪ್ರಪಂಚದ

ಮ್ಯಾಂಗನೀಸ್ ಅದಿರಿನಲ್ಲಿ ಶೇಕಡ 20ರಷ್ಟು ಭಾರತದಲ್ಲಿದೆ ಎಂಬುದಾಗಿ ಲೆಕ್ಕಹಾಕಲಾಗಿದೆ. ಕಠಿಣವಾದ ತುಕ್ಕು ಹಿಡಿಯದ ಕಬ್ಬಿಣ ಉಕ್ಕನ್ನು ತಯಾರಿಸಲು ಮ್ಯಾಂಗನೀಸ್ ಅಗತ್ಯವಾಗಿರುವುದರಿಂದ ಕಬ್ಬಿಣ ಮತ್ತು ಉಕ್ಕು ಕೈಗಾರಿಕೆಗಳಲ್ಲಿ ಇದು ಮುಖ್ಯ ಪಾತ್ರವಹಿಸುತ್ತದೆ. ಶುಷ್ಕವಿದ್ಯುತ್ ಕೋಶಗಳನ್ನು ತಯಾರಿಸಲು ಮ್ಯಾಂಗನೀಸ್ ಡೈ ಆಕ್ಸೈಡನ್ನು ಬಳಸಲಾಗುವುದು. ಇವುಗಳನ್ನು ಬ್ಲೀಚಿಂಗ್ ಪೌಡರ್ ಮತ್ತು ಬಣ್ಣವನ್ನು ತಯಾರಿಸಲೂ ಸಹ ಉಪಯೋಗಿಸಲಾಗುತ್ತದೆ. ಮಧ್ಯ ಪ್ರದೇಶದಲ್ಲಿ ರುವ ಬಾಲಘಾಟ್, ಒರಿಸ್ಸಾದ ಕಿಯೋಂಜದಾರ್, ಬೂನೈಗರ್ ಭಾಗದಲ್ಲಿಯೂ, ಕರ್ನಾಟಕದ ಬಳ್ಳಾರಿ, ಚಿತ್ರದುರ್ಗ, ಶಿವಮೊಗ್ಗ ,ತಮಿಳುನಾಡು, ಮಹಾರಾಷ್ಟ್ರ, ಗುಜರಾತ್, ಬಿಹಾರ್‌ಗಳಲ್ಲಿಯೂ ದೊರೆಯುತ್ತದೆ.

ಬಾಕ್ಸೈಟ್

ಬಾಕ್ಸೈಟ್ ಅಲ್ಯುಮಿನಿಯಂ ಅದಿರಿನಿಂದಾಗಿ ಅಲ್ಯುಮಿನಿಯಂ ಸಿಲಿಕೇಟನ್ನು ಹೊಂದಿದ ಶಿಲೆಗಳಲ್ಲಿ ಪಸರಿಸಲ್ಪಟ್ಟು ದೊರೆಯುವ ಹಗುರವಾದ ಲೋಹವಾಗಿದೆ. ಇದು ಒಂದು ಒಳ್ಳೆಯ ವಿದ್ಯುತ್ ವಾಹಕವಾಗಿಯೂ ಇದು ಸುಲಭವಾಗಿ ವಿದ್ಯುತ್ ಹರಿಯಬಿಡುವ ಸಾಮರ್ಥ್ಯ ಹೊಂದಿರುವುದು. ಇದು ತುಂಬಾ ತೆಳುವಾಗಿವುದರಿಂದ ಅಧಿಕವಾಗಿ ಕೈಗಾರಿಕೆಗಳಲ್ಲಿ ಉಪಯೋಗಿಸಲಾಗುತ್ತದೆ.



ಬಾಕ್ಸೈಟ್

ಬಾಕ್ಸೈಟ್ ದೊರೆಯುವ ಮುಖ್ಯ ಸ್ಥಳಗಳು ಛತ್ತೀಸ್‌ಗರ್ ರಾಜ್ಯದ ಬಿಲಾಸ್‌ಪುರ, ಜಾರ್ಖಂಡ್ ರಾಜ್ಯದ ರಾಂಚಿ, ಒಡಿಸ್ಸಾದ ಚಂಬಲ್‌ಪುರ ಮತ್ತು ಕಾಲಹಂದಿ, ಗೋವಾ, ಗುಜರಾತ್, ಮಹಾರಾಷ್ಟ್ರದಲ್ಲಿ ರತ್ನಗಿರಿ ಮತ್ತು ರಾಯ್‌ಘಡ, ಕರ್ನಾಟಕ ಮತ್ತು ತಮಿಳುನಾಡು (ಸೇಲಂ, ಮಧುರೈ, ನೀಲಗಿರಿ) ಗಳಾಗಿವೆ.

ತಾಮ್ರ

ತಾಮ್ರವು ಉತ್ತಮವಾದ ಉಷ್ಣವಾಹಕವಾಗಿಯೂ, ವಿದ್ಯುತ್‌ವಾಹಕವಾಗಿಯೂ ಪ್ರಕೃತಿಯಲ್ಲಿ ದೊರೆಯುವ ಮತ್ತೊಂದು ಲೋಹವಾಗಿದೆ. ಇದು ವಿದ್ಯುತ್ ಉಪಕರಣಗಳನ್ನು ತಯಾರಿಸುವ ಕೈಗಾರಿಕೆಗಳಲ್ಲಿ ಪ್ರಧಾನ ಪಾತ್ರವಹಿಸುತ್ತದೆ. ತಾಮ್ರವನ್ನು ಇತರ ಲೋಹಗಳೊಡನೆ ಸೇರಿಸಿ ಮಿಶ್ರ ಲೋಹವನ್ನಾಗಿಸಲು ಬಳಸಲಾಗುತ್ತದೆ. ಜಾರ್ಖಂಡ್ ರಾಜ್ಯದಲ್ಲಿರುವ ಸಿಂಗಭೂಮ್, ಆಂಧ್ರಪ್ರದೇಶದ ಗುಂಟೂರ್ ಮತ್ತು ನೆಲ್ಲೂರು, ಮಧ್ಯಪ್ರದೇಶದಲ್ಲಿರುವ ಬಾಲ್‌ಘಾಟ್, ರಾಜಸ್ತಾನ ಮತ್ತು ಕರ್ನಾಟಕ ರಾಜ್ಯಗಳ ಕೆಲವು ಭಾಗಗಳಲ್ಲಿ ತಾಮ್ರವು ದೊರಕುತ್ತದೆ.


ಮೈಕಾ (ಅಭ್ರಕ)


ಇದು ಶಾಖ ನಿರೋಧಕ ಹಾಗೂ ಸ್ಥಿತಿಸ್ಥಾಪಕತ್ವ ಗುಣವನ್ನು ಹೊಂದಿರುವುದರಿಂದ ವಿದ್ಯುತ್ ಉಪಕರಣದ ತಯಾರಿಕೆಯಲ್ಲಿ ಇದನ್ನು ಬಳಸುತ್ತಾರೆ. ಪ್ರಪಂಚದ ಅಭ್ರಕದ ಉತ್ಪಾದನೆಯಲ್ಲಿ ಭಾರತ ಶೇಖಡ 60ರಷ್ಟು ಹೊಂದಿದೆ. ಆಂಧ್ರಪ್ರದೇಶ, ಜಾರ್ಖಂಡ್, ಬಿಹಾರ್ ಮತ್ತು ರಾಜಸ್ತಾನ ರಾಜ್ಯಗಳಲ್ಲಿ ಅಭ್ರಕವನ್ನು ಪ್ರಮುಖವಾಗಿ ಉತ್ಪಾದಿಸುತ್ತವೆ.


ಖನಿಜ ಸಂಪನ್ಮೂಲಗಳ ಸಂರಕ್ಷಣೆ


ಉಪಯೋಗಿಸಲಾಗುವ ಸ್ಥಿತಿಯಲ್ಲಿರುವ ಖನಿಜಗಳಲ್ಲಿ ಒಟ್ಟು ಅಳತೆಯಲ್ಲಿ ಭೂಮಿಯ ಮೇಲ್ಪದರದ ಒಟ್ಟು ಅಳತೆಯು ಶೇಕಡ ಒಂದರಷ್ಟು ಮಾತ್ರವೇ ಆಗಿದೆ.

ನಾವು ತೀವ್ರ ವೇಗವಾಗಿ ಖನಿಜ ಸಂಪನ್ಮೂಲಗಳನ್ನು ಉಪಯೋಗಿಸುತ್ತಿದ್ದೇವೆ. ಆದರೆ ಖನಿಜ ಸಂಪನ್ಮೂಲಗಳು ಭೌಗೋಳಿಕವಾಗಿ ಶೇಖರಗೊಳ್ಳವುದು ತುಂಬಾ ನಿಧಾನವಾಗುತ್ತದೆ. ಆದ್ದರಿಂದ ಖನಿಜ ಸಂಪನ್ಮೂಲಗಳು ನವೀಕರಿಸಲಾಗದ ಸಂಪನ್ಮೂಲಗಳಾಗಿವೆ. ಆದ ಕಾರಣ ಖನಿಜ ಸಂಪನ್ಮೂಲಗಳನ್ನು ಯೋಚಿಸಿ ಸರಿಯಾಗಿ ಬಳಸಿಕೊಳ್ಳಲು ಸತತ ಪ್ರಯತ್ನಗಳನ್ನು ಕೈಗೊಳ್ಳಬೇಕು. ಕಡಿಮೆ ಬೆಲೆಯಲ್ಲಿ ದೊರಕುವ ಕಡಿಮೆ ದರ್ಜೆಯ ಅದಿರುಗಳನ್ನು ಬಳಸಿ ಹೊಸ ತಂತ್ರಜ್ಞಾನ ವಿಧಾನಗಳಿಂದ ಉತ್ಪಾದಿಸಬೇಕು. ಇನ್ನೂ ಒಡೆದ


ಭಾರತ – ಬಾಕ್ಸೈಟ್ ಅದಿರು ದೊರೆಯುವ ಪ್ರದೇಶಗಳು
ಉ
ಕಚ್ಚಿಲಿಕ್
ಜಾಮ್‌ನಗರ
ಅಮ್ರೇಲಿ
ಪೇಡ
ಜುನಾಗಢ
ಜಾಮ್‌ನಗರ
ಕಚ್ಚ್
ಅಮರ್‌ಖಂಡ್
ಬಾಲ್ಘಾಟ್
ಮೈಕ್ಕಲಾ ಬೆಟ್ಟಗಳು
ಲೋಹರ್‌ದಗ
ರಾಂಚಿ
ಗುಮ್ಲಾ
ಸುಂದರ್‌ಗರ್
ಚಂಬಲ್‌ಮರ
ಬೊಲಂಗೀರ್
ಕಲಹಂಡಿ
ಗೂಮರಾಮರ
ವಿಶಾಖಪಟ್ಟಣ
ಅರಬ್ಬೀಸಮುದ್ರ
ಬೆಳಗಾವಿ
ಬಾಬಾಬುಡನ್‌ಗಿರಿ
ಕಣ್ಣೂರು
ಶೇರವರಾಯನ ಬೆಟ್ಟ
ಕೋತಗಿರಿ
ಪಳನಿ ಬೆಟ್ಟಗಳು
ಕೊಲ್ಲಂ
ಲಕ್ಷದ್ವೀಪಗಳು
ಬಂಗಾಳಕೊಲ್ಲಿ
ಅಂಡಮಾನ್ ನಿಕೋಬಾರ್ ದ್ವೀಪಗಳು
ಬಾಕ್ಸೈಟ್ ಅದಿರು ದೊರೆಯುವ ಪ್ರದೇಶಗಳು
ಹಿಂದೂಮಹಾಸಾಗರ
ಭಾರತ – ತೈಲ ಸಂಪನ್ಮೂಲಗಳು
ಉ
ನಿಂಗೂರ್ ಸಿಬ್ಸಾಗರ್
ಲಕಿಂಪೂರ್
ಡಿಗ್ಬಾಯ್
ಮೊರಾನ್
ಮಾಹೂಮ್
ನಹರ್‌ಕಾಟಿಯ
ಕಲೋಲ್
ಅಂಕಲೇಶ್ವರ್
ಬಲೋಲ್
ಕೊಯಾಲಿ
ಕಾಂಬೆ
ಬಾಂಬೆ–ಹೈ
ಬೇಸಿನ್
ಅರಬ್ಬೀಸಮುದ್ರ
ಮಿಯನ್ಮಾರ್
ಬಂಗಾಳಕೊಲ್ಲಿ
ತೈಲ ಸಂಪನ್ಮೂಲಗಳ ಹಂಚಿಕೆ
ತೈಲ ಬಾವಿಗಳು
ತೈಲ ಸಂಪನ್ಮೂಲಗಳನ್ನು ಹೊಂದಿರುವ ನಿಕ್ಷೇಪಗಳು
ಲಕ್ಷದ್ವೀಪಗಳು
ಅಂಡಮಾನ್ ನಿಕೋಬಾರ್ ದ್ವೀಪಗಳು
ಹಿಂದೂಮಹಾಸಾಗರ


ಭಾರತ – ಕಬ್ಬಿಣದ ಅದಿರು
ಉ
ಜುನಾಗಢ
ಭಾವನಗರ
ಬಾಲ್‌ಗಾಟ್
ಮೂಡ್ಲಾ
ಚಂಬಲ್‌ಪುರ
ಸುಂದರ್‌ಗರ್
ಬಲಾಮು
ಬಿಲಾಸ್‌ಪುರ
ದುರ್ಗ್
ರಾಯ್ಗರ್
ಕೆಂಡುಜಾರ್
ಕಿಯೋಂಜರ್
ಚಂದ್ರಪುರ
ಸತಾರ
ಕರೀಂನಗರ
ಕಮ್ಮಮ್
ಕೋರಪಟ್
ಗುಂಟೂರು
ರತ್ನಗಿರಿ
ಬಿಜಾಪುರ
ಗೋವಾ
ಬಳ್ಳಾರಿ
ಕಡಪ
ಅರಬ್ಬೀಸಮುದ್ರ
ಚಿತ್ರದುರ್ಗ
ನೆಲ್ಲೂರು
ಕುದುರೇಮುಖ
ತುಮಕೂರು
ಚಿಕ್ಕಮಗಳೂರು
ಬಂಗಾಳಕೊಲ್ಲಿ
ಸೇಲಂ
ಕೊಯಮತ್ತೂರು
ಮಧುರೈ
ಲಕ್ಷದ್ವೀಪಗಳು
ಕಬ್ಬಿಣದ ಅದಿರು ದೊರೆಯುವ ಪ್ರದೇಶಗಳು
ಹಿಂದೂಮಹಾಸಾಗರ


ಭಾರತ–ಮ್ಯಾಂಗನೀಸ್
ಉ
ಜಬಲ್‌ಪುರ
ಜಬುವಾ
ಚಿಂದ್‌ವಾರ
ಬಾಲ್‌ಘಾಟ್
ಸುಂದರ್‌ಗರ್
ಮಯೂರ್ ಬಂಜ್
ನಾಗ್ಪುರ
ಬಾಂದ್ರಾ
ಟಾಲ್‌ಚೆರ್
ಕಯೊಂಜರ್
ಬೊಲಂಗೀರ್
ಕಲಹಂಡಿ
ಕೊರಪಟ್
ಶ್ರೀಕಾಕುಲಂ
ವಿಶಾಖಪಟ್ಟಣ
ರತ್ನಗಿರಿ
ಬೆಳಗಾವಿ
ಗೋವಾ
ಬಳ್ಳಾರಿ
ಶಿವಮೊಗ್ಗ
ಚಿತ್ರದುರ್ಗ
ತುಮಕೂರು
ಅರಬ್ಬೀಸಮುದ್ರ
ಬಂಗಾಳಕೊಲ್ಲಿ
ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು
ಲಕ್ಷದ್ವೀಪಗಳು
ಮ್ಯಾಂಗನೀಸ್ ದೊರೆಯುವ ಪ್ರದೇಶಗಳು
ಹಿಂದೂಮಹಾಸಾಗರ


ಭಾರತ – ಕಲ್ಲಿದ್ದಲು ಸಂಪನ್ಮೂಲಗಳು
ಉ
ಪ
ಪೂ
ದ
1
2
3
4
5
6
7
8
9
10
11
ಅರಬ್ಬೀಸಮುದ್ರ
ಬಂಗಾಳಕೊಲ್ಲಿ
ಲಕ್ಷದ್ವೀಪಗಳು
ಹಿಂದೂಮಹಾಸಾಗರ
1. ಸಿಂಗ್ರೌಲಿ
2. ವಾರ್ಧಾ ಕಣಿವೆ
3. ಗೋದಾವರಿ ಕಣಿವೆ
4. ತಾಲ್‌ಚರ್
5. ಕೋರ್ಬಾ
6. ಜಾರ್ಖಂಡ್
7. ಬೊಕಾರೋ
8. ಜಾರಿಯಾ
9. ರಾಜ್‌ಮಹಲ್
10. ರಾಣಿಗಂಜ್
11. ನೈವೇಲಿ

ಲೋಹದ ಚೂರುಗಳನ್ನು ಆವರ್ತಚಕ್ರದ ಮೂಲಕ ಬಳಸುವುದರಿಂದಲೂ, ಪರ್ಯಾಯ ಲೋಹವನ್ನು ಬಳಸುವುದರಿಂದಲೂ ಭವಿಷ್ಯತ್ ಕಾಲಕ್ಕಾಗಿ ಖನಿಜ ಸಂಪನ್ಮೂಲಗಳನ್ನು ಸಂರಕ್ಷಿಸುವುದು ಅತ್ಯವಶ್ಯಕ.

ಶಕ್ತಿ ಸಂಪನ್ಮೂಲಗಳು

ನಮ್ಮ ನಿತ್ಯ ಜೀವನದಲ್ಲಿ ಶಕ್ತಿ ಸಂಪನ್ಮೂಲ ಒಂದು ಅವಶ್ಯಕವಾದ ಸಂಪನ್ಮೂಲವಾಗಿದೆ. ಇದು ಆರ್ಥಿಕ ಮತ್ತು ತಾಂತ್ರಿಕ ಅಭಿವೃದ್ಧಿಗೆ ಅವಶ್ಯಕವಾದುದಾಗಿದೆ. ಕಲ್ಲಿದ್ದಲು, ಪೆಟ್ರೋಲಿಯಂ, ಸ್ವಾಭಾವಿಕ ಅನಿಲ, ಸೌರಶಕ್ತಿ, ಪವನಶಕ್ತಿ ಮುಂತಾದವುಗಳು ಕೆಲವು ಶಕ್ತಿ ಸಂಪನ್ಮೂಲಗಳಾಗಿವೆ.

ಶಕ್ತಿ ಸಂಪನ್ಮೂಲಗಳನ್ನು ,

1. ನವೀಕರಿಸಲಾಗದ ಶಕ್ತಿ ಸಂಪನ್ಮೂಲಗಳು,
2. ನವೀಕರಿಸಲಾಗುವ ಶಕ್ತಿ ಸಂಪನ್ಮೂಲಗಳು

ಎಂಬುದಾಗಿ ವಿಂಗಡಿಸಬಹುದು.

1. ನವೀಕರಿಸಲಾಗದ ಶಕ್ತಿ ಸಂಪನ್ಮೂಲಗಳು

1.ಕಲ್ಲಿದ್ದಲು

ಭಾರತದಲ್ಲಿ ಕಲ್ಲಿದ್ದಲು ಮುಖ್ಯ ಶಕ್ತಿ ಸಂಪನ್ಮೂಲವಾಗಿದೆ. ದೇಶದ ಶೇ. 67ರಷ್ಟು ಇಂಧನವನ್ನು ಕಲ್ಲಿದ್ದಲು ಮೂಲಕ ಪೂರೈಸಿಕೊಳ್ಳಲಾಗುತ್ತಿದೆ. ಕಲ್ಲಿದ್ದಲು ಮುಖ್ಯವಾಗಿ ಕಬ್ಬಿಣ ಮತ್ತು ಉಕ್ಕು ಕೈಗಾರಿಕೆಯಲ್ಲಿ ಉಪಯೋಗಿಸಲಾಗುತ್ತದೆ. ಕಲ್ಲಿದ್ದಲನ್ನು ಕಪ್ಪು ಚಿನ್ನವೆಂತಲೂ ಕರೆಯುವರು. ಕಲ್ಲಿದ್ದಲಿನ ಗುಣಮಟ್ಟ ಮತ್ತು ಇಂಗಾಲದ ಪ್ರಭಾವವನ್ನು ಆಧರಿಸಿ ವಿವಿಧ ಬಗೆಗಳಾಗಿ ವರ್ಗೀಕರಿಸಲಾಗಿದೆ. ಅವುಗಳೆಂದರೆ ಆಂತ್ರಸೈಟ್, ಬಿಟುಮಿನಸ್, ಲಿಗ್ನೈಟ್ ಮತ್ತು ಇದ್ದಿಲು.

ಕಲ್ಲಿದ್ದಲಿನ ಗಣಿಗಳು ಭಾರತದ ಈಶಾನ್ಯ ಭಾಗದಲ್ಲಿ ಕಂಡುಬರುತ್ತವೆ. ಇದರಲ್ಲಿ ಮೂರನೇ ಎರಡು ಭಾಗ ಕಲ್ಲಿದ್ದಲು ಜಾರ್ಖಂಡ್, ಮಧ್ಯಪ್ರದೇಶ, ಛತ್ತೀಸ್‌ಗರ್ ಮತ್ತು ಒಡಿಸ್ಸಾದಲ್ಲಿ ಉತ್ಪತ್ತಿ ಮಾಡಲಾಗುತ್ತದೆ. ಇನ್ನುಳಿದ ಒಂದು ಭಾಗ ಕಲ್ಲಿದ್ದಲು ಆಂಧ್ರಪ್ರದೇಶ, ಪಶ್ಚಿಮ ಬಂಗಾಳ, ಉತ್ತರ ಪ್ರದೇಶದಿಂದ ದೊರೆಯುತ್ತದೆ. ತಮಿಳುನಾಡಿನಲ್ಲಿ ನೈವೇಲಿಯಲ್ಲಿ ಕಂದುಕಲ್ಲಿದ್ದಲು (ಲಿಗ್ನೈಟ್) ದೊರೆಯುತ್ತದೆ.

2. ಪೆಟ್ರೋಲಿಯಂ

ಖನಿಜ ತೈಲ ಎಂದು ಕರೆಯಲ್ಪಡುವ ಪೆಟ್ರೋಲಿಯಂನ್ನು ಪದರು ಶಿಲೆಗಳಿಂದ ಹೊರತೆಗೆಯಲಾಗುತ್ತದೆ. ಭಾರತವು 4000 ಮಿಲಿಯನ್ ಟನ್ ದಾಸ್ತಾನನ್ನು ಹೊಂದಿದೆ. ಆದರೆ ಶೇಕಡ 25ರಷ್ಟು ಮಾತ್ರ ಘೋಷಣೆಯಿಂದ ಕೋಡಿ ತೆಗೆಯಲಾಗುತ್ತದೆ. ಭಾರತದಲ್ಲಿ ವಾರ್ಷಿಕ 33 ಮಿಲಿಯನ್ ಟನ್ ಪೆಟ್ರೋಲಿಯಂನ್ನು ಮಾತ್ರ ತೈಲ ನಿಕ್ಷೇಪದಿಂದ ಪಡೆಯಲು ಸಾಧ್ಯ ಶೇಕಡ 63ರಷ್ಟು ಮುಂಬೈ– ಹೈಯಿಂದಲೂ, ಶೇಕಡ 18ರಷ್ಟು ಗುಜರಾತಿನಿಂದಲೂ, ಶೇಕಡ 16ರಷ್ಟು ಅಸ್ಸಾಂನಿಂದಲೂ, ಇನ್ನುಳಿದ ಶೇಕಡ 3ರಷ್ಟು ಮಾತ್ರ ಅರುಣಾಚಲ ಪ್ರದೇಶ, ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಿಂದ ದೊರೆಯುತ್ತದೆ.



ಮುಂಬೈ – ಹೈಯಲ್ಲಿ ತೈಲ ಹೊರತೆಗೆಯುವುದು

3.ನೈಸರ್ಗಿಕ ಅನಿಲ

ಇದು ಭೂಮಿಯ ಮೇಲ್ಭಾಗದಲ್ಲಿ ಪ್ರತ್ಯೇಕವಾಗಿಯೋ ಅಥವಾ ಪೆಟ್ರೋಲಿಯಂನೊಡನೆ ಬೆರೆತೋ ಕಂಡುಬರುತ್ತದೆ. ಭಾರತವು 23 ಬಿಲಿಯನ್ ಘನ ಮೀಟರ್ ನೈಸರ್ಗಿಕ ಅನಿಲವನ್ನು ಬಳಸುತ್ತದೆ. ಭಾರತದಲ್ಲಿ ನೈಸರ್ಗಿಕ ಅನಿಲದ ದಾಸ್ತಾನು 700 ಮಿಲಿಯನ್ ಘನ ಮೀಟರ್ ಮಾತ್ರವಾಗಿದೆ. ಆಂಧ್ರಪ್ರದೇಶ, ಮಹಾರಾಷ್ಟ್ರ, ಗುಜರಾತ್, ಅಸ್ಸಾಂ,

ಅಂಡಮಾನ್, ನಿಕೋಬಾರ್ ದ್ವೀಪಗಳಲ್ಲಿ ಅತ್ಯಧಿಕವಾಗಿ ನೈಸರ್ಗಿಕ ಅನಿಲದ ದಾಸ್ತಾನು ಕಂಡುಬರುತ್ತದೆ. ಅಂಡಮಾನ್ ದ್ವೀಪಗಳಲ್ಲಿ ಮಾತ್ರ 47.6 ಮಿಲಿಯನ್ ಕ್ಯೂಬಿಕ್ ಮೀಟರ್ ಅನಿಲ ನಿಕ್ಷೇಪವಿದೆ. ಇತ್ತೀಚೆಗೆ ಕೃಷ್ಣಾ, ಗೋಧಾವರಿ ನದಿ ಮುಖಜ ಭೂಮಿಯಲ್ಲಿ ಅತ್ಯಧಿಕ ಪ್ರಮಾಣದ ನೈಸರ್ಗಿಕ ಅನಿಲದ ನಿಕ್ಷೇಪವಿರುವುದಾಗಿ ಕಂಡು ಹಿಡಿಯಲಾಗಿದೆ.

ವಿದ್ಯುಚ್ಛಕ್ತಿ

ಒಂದು ದೇಶದ ಬೆಳವಣಿಗೆ ಮತ್ತು ಅಭಿವೃದ್ಧಿಯಲ್ಲಿ ಶಕ್ತಿ ಮತ್ತು ವಿದ್ಯುಚ್ಛಕ್ತಿಯ ಪಾತ್ರ ಮಹತ್ವದ್ದಾಗಿದೆ. ವಿದ್ಯುಚ್ಛಕ್ತಿಯು ಮೂರು ಮಾರ್ಗಗಳಲ್ಲಿ ಉತ್ಪಾದಿಸಲಾಗುತ್ತದೆ. ಅವುಗಳೆಂದರೆ,
1. ಶಾಖೋತ್ಪನ್ನ ವಿದ್ಯುಚ್ಛಕ್ತಿ. 2.ಜಲವಿದ್ಯುಚ್ಛಕ್ತಿ. 3.ಅಣು ವಿದ್ಯುಚ್ಛಕ್ತಿ.

1.ಶಾಖೋತ್ಪನ್ನ ವಿದ್ಯುಚ್ಛಕ್ತಿ

ಶಾಖೋತ್ಪನ್ನ ವಿದ್ಯುಚ್ಛಕ್ತಿಯು ಕಲ್ಲಿದ್ದಲು, ಪೆಟ್ರೋಲಿಯಂ, ನೈಸರ್ಗಿಕ ಅನಿಲ ಮುಂತಾದವುಗಳನ್ನು ಬಳಸಿಕೊಂಡು ಉತ್ಪಾದಿಸಲಾಗುತ್ತದೆ. ಅಸ್ಸಾಂ, ಜಾರ್ಖಂಡ್, ಉತ್ತರಪ್ರದೇಶ, ಪಶ್ಚಿಮ ಬಂಗಾಳ ಮತ್ತು ತಮಿಳುನಾಡು ಮುಂತಾದ ರಾಜ್ಯಗಳು ಶಾಖೋತ್ಪನ್ನ ವಿದ್ಯುಚ್ಛಕ್ತಿಯನ್ನು ಹೆಚ್ಚಾಗಿ ಅವಲಂಬಿಸಿದೆ. ಪಂಜಾಬ್, ಹರಿಯಾಣ, ರಾಜಸ್ತಾನ, ಕರ್ನಾಟಕ, ಕೇರಳ, ಒಡಿಸ್ಸಾ ಮತ್ತು ದೆಹಲಿ ರಾಜ್ಯಗಳಲ್ಲಿಯೂ ಶಾಖೋತ್ಪನ್ನ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲಾಗುತ್ತದೆ. ಭಾರತದ ಒಟ್ಟು ವಿದ್ಯುತ್ ಉತ್ಪಾದನೆಯಲ್ಲಿ ಶೇಕಡ 66ರಷ್ಟನ್ನು ಶಾಖೋತ್ಪನ್ನ ವಿದ್ಯುತ್ ಕೇಂದ್ರಗಳಿಂದ ಪಡೆಯಲಾಗುತ್ತದೆ.

2. ಜಲ ವಿದ್ಯುಚ್ಛಕ್ತಿ

ಭಾರತದಲ್ಲಿ ಮೊಟ್ಟ ಮೊದಲ ಜಲವಿದ್ಯುತ್ ಉತ್ಪಾದನಾ ಕೇಂದ್ರವನ್ನು 1897ರಲ್ಲಿ ಡಾರ್ಜಲಿಂಗ್ ನಲ್ಲಿ ಸ್ಥಾಪಿಸಲಾಯಿತು. ಮತ್ತೊಂದು ಕೇಂದ್ರವು 1902ರಲ್ಲಿ ಕಾವೇರಿ ಕಣಿವೆಯ ಶಿವನಸಮುದ್ರ ಜಲಪಾತದಲ್ಲಿ ಸ್ಥಾಪಿಸಲ್ಪಟ್ಟಿತು. ಪ್ರಸ್ತುತ ಭಾರತದ ಶೇಕಡ 21 ರಷ್ಟು ವಿದ್ಯುತ್ತನ್ನು ಜಲವಿದ್ಯುತ್ ಕೇಂದ್ರಗಳಿಂದ ಉತ್ಪಾದಿಸಲಾಗುತ್ತದೆ. ಜಲವಿದ್ಯುತ್ ಭಾರತದ ಆರ್ಥಿಕಾಭಿವೃದ್ಧಿಗೆ ಹೆಚ್ಚು ಸಹಾಯಕವಾಗಿದೆ. ಹಿಮಾಚಲಪ್ರದೇಶ, ಕರ್ನಾಟಕ, ಕೇರಳ, ಜಮ್ಮು ಕಾಶ್ಮೀರ, ತ್ರಿಪುರ, ಮೇಘಾಲಯ ಮತ್ತು ಸಿಕ್ಕಿಂ ಮುಂತಾದ ರಾಜ್ಯಗಳಲ್ಲಿ ಜಲವಿದ್ಯುಚ್ಛಕ್ತಿಯನ್ನು ಉತ್ಪಾದಿಸಲಾಗುತ್ತದೆ. ಕೇರಳವು ವಿದ್ಯುಚ್ಛಕ್ತಿ ಉತ್ಪಾದನೆಗೆ ಜಲವಿದ್ಯುತ್ ಯೋಜನೆಗಳನ್ನೇ ಅಧಿಕವಾಗಿ ಅವಲಂಬಿಸಿದೆ.

3. ಅಣು ವಿದ್ಯುಚ್ಛಕ್ತಿ

ಯುರೇನಿಯಂ ಮತ್ತು ಥೋರಿಯಂ ಮುಂತಾದ ಅದಿರುಗಳನ್ನು ಉಪಯೋಗಿಸಿ ಅಣುಶಕ್ತಿಯನ್ನು ಉತ್ಪಾದಿಸಲಾಗುವುದು. ಈ ಅದಿರುಗಳು ಜಾರ್ಖಂಡ್ ಮತ್ತು ಅರಾವಳಿ ಪರ್ವತ ಶ್ರೇಣಿಗಳಲ್ಲಿ ರಾಜಸ್ತಾನದಿಂದ ತೆಗೆಯಲ್ಪಡುತ್ತವೆ. ಕೇರಳ ತೀರ ಪ್ರದೇಶ ಮಣ್ಣಿನಲ್ಲಿರುವ ಮೋನೋಸೈಟಿನಿಂದ ಯುರೇನಿಯಂನ್ನು ಪಡೆಯಲಾಗುವುದು. ವಿಶ್ವದ ಥೋರಿಯಂ ನಿಕ್ಷೇಪಗಳಲ್ಲಿ ಭಾರತದಲ್ಲಿ ಶೇಕಡ 70ರಷ್ಟಿದೆ. ಭಾರತದಲ್ಲಿ ತಾರಾಪುರ (ಮಹಾರಾಷ್ಟ್ರ), ಕಲ್ಪಾಕಂ, ಕೂಡಂಗುಳಂ (ತಮಿಳು ನಾಡು), ರಾವತ್‌ಭಟ್ಟ (ಕೋಟಾ–ರಾಜಸ್ತಾನ), ನರೋರ (ಉತ್ತರ ಪ್ರದೇಶ), ಕಾಕ್ರಪಾರ (ಗುಜರಾತ್), ಕೈಗಾ (ಕಾರವಾರ – ಕರ್ನಾಟಕ) ಮುಂತಾದ ಸ್ಥಳಗಳಲ್ಲಿ ಅಣು ವಿದ್ಯುತ್ ಕೇಂದ್ರಗಳಿವೆ. ಭಾರತ ತನ್ನ ಒಟ್ಟು ವಿದ್ಯುತ್ ಉತ್ಪಾದನೆಯಲ್ಲಿ ವಾರ್ಷಿಕ ಶೇ. 3 ರಷ್ಟು ಅಣುವಿದ್ಯುತ್ ಮೂಲಕ ಉತ್ಪತ್ತಿ ಮಾಡುತ್ತದೆ.

2. ನವೀಕರಿಸಲಾಗುವ ಶಕ್ತಿ ಸಂಪನ್ಮೂಲಗಳು

ಶಕ್ತಿ ಸಂಪನ್ಮೂಲಗಳ ಬೇಡಿಕೆ ಹೆಚ್ಚಾದಂತೆಲ್ಲಾ ನವೀಕರಿಸಲಾಗುವ ಶಕ್ತಿ ಸಂಪನ್ಮೂಲಗಳಾದ ಸೌರಶಕ್ತಿ, ಪವನ ಶಕ್ತಿ, ಅಲೆಗಳು, ಜೈವಿಕ ಅನಿಲ ಮುಂತಾದವುಗಳ ಪ್ರಾಮುಖ್ಯತೆಯು ಅಧಿಕವಾಗುತ್ತಲೇ ಇರುತ್ತದೆ. ಭಾರತದಲ್ಲಿ ಶೇ. 10ರಷ್ಟು ವಿದ್ಯುತ್ ಉತ್ಪತ್ತಿಯು ನವೀಕರಿಸಬಹುದಾದ ಸಂಪನ್ಮೂಲಗಳ ಮೂಲಕ ಪಡೆಯುತ್ತದೆ. ಈ ಶಕ್ತಿಸಂಪನ್ಮೂಲಗಳ ಪ್ರಮುಖ ಅಂಶಗಳು ಯಾವುವೆಂದರೆ,

1. ಸುಲಭವಾಗಿ ದೊರೆಯುತ್ತವೆ.
2. ನವೀಕರಿಸಬಹುದಾದುದು.
3. ಪರಿಸರಕ್ಕೆ ಹಾನಿಯನ್ನುಂಟು ಮಾಡದುದು..
4. ಮಾಲಿನ್ಯತೆಯನ್ನು ಉಂಟು ಮಾಡದುದು.
5. ಕಡಿಮೆ ಉತ್ಪಾದನಾ ವೆಚ್ಚ.
6. ನಿರಂತರವಾಗಿ ದೊರಕುವಂತಹವು.

ಸೌರಶಕ್ತಿ

ಭಾರತವು ಉಷ್ಣವಲಯದಲ್ಲಿರುವುದರಿಂದ ಅಳತೆ ಮಾಡಲಾಗದಷ್ಟು ಸೌರಶಕ್ತಿಯನ್ನು ಪಡೆಯುತ್ತದೆ. ಸೂರ್ಯನ ಬೆಳಕನ್ನು ನೇರವಾಗಿ ಫೋಟೋ ವೋಲ್ಟಾಯಿಕ್ ತಂತ್ರಜ್ಞಾನದ ಮೂಲಕ ವರ್ಗಾಯಿಸಬಹುದು. ಈ ವಿಧಾನದ ಮೂಲಕ 20 ಮೆಗಾವ್ಯಾಟ್ ವಿದ್ಯುತ್‌ನ್ನು 1 ಚದರ ಕಿ.ಮೀ ವಿಸ್ತೀರ್ಣದೊಳಗೆ ಉತ್ಪಾದಿಸಬಹುದು. ಸಾಮಾನ್ಯವಾಗಿ ಅಡಿಗೆ ಮತ್ತು ದೀಪಗಳನ್ನು ಉರಿಸಲು ಸೌರಶಕ್ತಿಯನ್ನು ಬಳಸಲಾಗುವುದು ಅಧಿಕ ಪ್ರಮಾಣದಲ್ಲಿ ಸೌರಶಕ್ತಿಯಿಂದ ವಿದ್ಯುಚ್ಛಕ್ತಿಯನ್ನಾಗಿ ವರ್ಗಾಯಿಸುವ ಕೇಂದ್ರವು ಭಾರತದಲ್ಲಿ ಗುಜರಾತಿನ ಸೂರತ್‌ನಲ್ಲಿರುವ ಭುಜ್ ಸಮೀಪದಲ್ಲಿರುವ 'ಮಾದಾಪುರಿ'ಯಲ್ಲಿದೆ.

ಪವನ ಶಕ್ತಿ

ಪವನ ಶಕ್ತಿ ಕೇಂದ್ರಗಳು ನಮ್ಮ ದೇಶದ ಬಹುತೇಕ ಭಾಗಗಳಲ್ಲಿ ಸ್ಥಾಪಿಸಲ್ಪಟ್ಟಿವೆ. ಪವನ ಶಕ್ತಿ ಕೇಂದ್ರಗಳನ್ನು ಸ್ಥಾಪಿಸಲು ಗಾಳಿರಾಟೆಗಳನ್ನು ಅಳವಡಿಸಲು ಪ್ರಾರಂಭದಲ್ಲಿ ಅಧಿಕ ವೆಚ್ಚವಾಗುತ್ತದೆ. ಗಾಳಿಯ ವೇಗ 30 ನಾಟ್ಸ್ ಗಳಿಗಿಂತ ಹೆಚ್ಚಾಗಿದ್ದರೆ ಮಾತ್ರ ಪವನ ಶಕ್ತಿಯನ್ನು ಉತ್ಪತ್ತಿ ಮಾಡಲು ಸಾಧ್ಯ. ತಮಿಳುನಾಡು, ಆಂಧ್ರಪ್ರದೇಶ, ಕರ್ನಾಟಕ, ಗುಜರಾತ್, ಕೇರಳ, ಮಹಾರಾಷ್ಟ್ರ ಮುಂತಾದ ರಾಜ್ಯಗಳಲ್ಲಿಯೂ, ಲಕ್ಷ ದ್ವೀಪಗಳಲ್ಲಿಯೂ ಪವನ ಶಕ್ತಿ ಉತ್ಪಾದನಾ ಕೇಂದ್ರಗಳು ಸ್ಥಾಪಿಸ್ಪಲ್ಪಟ್ಟಿವೆ.



ಪವನ ಶಕ್ತಿ

ಜೈವಿಕ ಶಕ್ತಿ

ಮೊದರುಗಳು, ಧಾನ್ಯಗಳಿಂದ ಪಡೆಯುವ ತ್ಯಾಜ್ಯ ವಸ್ತುಗಳು,ಮತ್ತು ಮಾನವ ತ್ಯಾಜ್ಯಗಳು ಮುಂತಾದವುಗಳನ್ನು ಬಳಸಿಕೊಂಡು ಜೈವಿಕ ಶಕ್ತಿ ಪ್ರದೇಶಗಳಲ್ಲಿ ಗೃಹ ಬಳಕೆಗಾಗಿ ಉತ್ಪಾದಿಸಲಾಗುವುದು. ಸೀಮೆಎಣ್ಣೆ ಮತ್ತು ಮರದ ಇದ್ದಿಲುಗಳಿಗಿಂತಲೂ ಜೈವಿಕ ಶಕ್ತಿಯು ಹೆಚ್ಚು ಶಾಖವನ್ನು ಕೊಡುತ್ತವೆ.

ಉಬ್ಬರವಿಳಿತ ಶಕ್ತಿ

ಭಾರತವು 8000–9000 ಮೆಗಾವ್ಯಾಟ್ ಉಬ್ಬರವಿಳಿತ ಶಕ್ತಿಸಾಮರ್ಥ್ಯ ಹೊಂದಿರುವುದಾಗಿ ಅಂದಾಜಿಸಲಾಗಿದೆ. ಕ್ಯಾಂಬೆ ಕೊಲ್ಲಿ 7000 ಮೆಗಾವ್ಯಾಟ್ ಶಕ್ತಿ ಸಾಮರ್ಥ್ಯ ಹೊಂದಲು ಸೂಕ್ತವಾದ ಸ್ಥಳವಾಗಿದೆ. ಇದಲ್ಲದೆ ಕಚ್ ಕೊಲ್ಲಿ(1000 ಮೆಗಾವ್ಯಾಟ್) ಮತ್ತು ಸುಂದರಬನ ಭಾಗಗಳಲ್ಲಿ (100 ಮೆಗಾವ್ಯಾಟ್ ಶಕ್ತಿಯನ್ನು ಉತ್ಪತ್ತಿ ಮಾಡಬಹುದು.

ಅಲೆಗಳಶಕ್ತಿ

ಭಾರತ 40000 ಮೆಗಾವ್ಯಾಟ್ ಅಲೆಗಳ ಶಕ್ತಿ ಸಾಮರ್ಥ್ಯವನ್ನು ಹೊಂದಿರುವುದಾಗಿ ಲೆಕ್ಕ ಹಾಕಲಾಗಿದೆ. ತಿರುವನಂತಪುರದ ಹತ್ತಿದಲ್ಲಿರುವ 'ವಿಲಿಂಜಮ್' ಎಂಬ ಸ್ಥಳದಲ್ಲಿ 150 ಮೆಗಾವ್ಯಾಟ್ ಅಲೆಗಳ ಶಕ್ತಿ ಉತ್ಪಾದನಾ ಕೇಂದ್ರವನ್ನು ಸ್ಥಾಪಿಸಲಾಗಿದೆ.

ಶಕ್ತಿ ಸಂಪನ್ಮೂಲಗಳ ಸಂರಕ್ಷಣೆ

ಶಕ್ತಿಯು ಆರ್ಥಿಕಾಭಿವೃದ್ಧಿಗೆ ಮೂಲಭೂತವಾದುದಾಗಿದೆ. ದೇಶದ ಆರ್ಥಿಕ ಕ್ಷೇತ್ರಗಳಾದ ಕೃಷಿ, ಕೈಗಾರಿಕೆ, ಸಾರಿಗೆ, ವಾಣಿಜ್ಯ ಮುಂತಾದವುಗಳಿಗೆ ಗೃಹ ಉಪಯೋಗಕ್ಕಾಗಿಯೂ ಶಕ್ತಿ ಸಂಪನ್ಮೂಲಗಳ ತೊಡಗಿಸಿದ ವಸ್ತುವಾಗಿ ಅಗತ್ಯವಾಗಿರುತ್ತದೆ. ಸ್ವಾತಂತ್ರ್ಯಗಳಿಸಿದಂದಿನಿಂದ ನಮ್ಮ ದೇಶದಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳು ನಡೆಯುತ್ತಾ ಬಂದಿವೆ. ಇದರಿಂದ ದೇಶದ ಎಲ್ಲಾ ಭಾಗಗಳಲ್ಲಿ ಎಲ್ಲಾ ವಿಧವಾದ ಶಕ್ತಿಯನ್ನು ಉಪಯೋಗಿಸುವುದು ಹೆಚ್ಚಾಗುತ್ತಲೇ ಬಂದಿದೆ.

ಈ ರೀತಿಯ ಸಂದರ್ಭಗಳಲ್ಲಿ ಶಕ್ತಿ ಸಂಪನ್ಮೂಲಗಳನ್ನು ರಕ್ಷಿಸುವ ಅಗತ್ಯ ಬಂದಿದೆ. ಶಕ್ತಿ ಸಂಪನ್ಮೂಲಗಳ ಸಂರಕ್ಷಣೆ ಮತ್ತು ನವೀಕರಿಸಬಹುದಾದ ಶಕ್ತಿ ಸಂಪನ್ಮೂಲಗಳ ಉತ್ಪತ್ತಿಯ ಅಧಿಕ. ಈ ಎರಡೂ ಅಂಶಗಳು ಶಕ್ತಿ ನಿರ್ವಹಣೆಯ ಎರಡು ಭಾಗಗಳಾಗಿವೆ. ಭಾರತವು ವಿಶ್ವದಲ್ಲಿ ಕಡಿಮೆ ಪ್ರಮಾಣದ ಶಕ್ತಿ ಉತ್ಪಾದನೆ ಮಾಡುವ ದೇಶಗಳಲ್ಲಿ ಒಂದಾಗಿದೆ.

ನಾವು ಶಕ್ತಿ ಸಂಪನ್ಮೂಲಗಳನ್ನು ಕೆಳಕಂಡಂತಿರುವ ಮಾರ್ಗಗಳಲ್ಲಿ ರಕ್ಷಿಸಬಹುದು:

1. ವೈಯಕ್ತಿಕ ವಾಹನಗಳಿಗೆ ಬದಲಾಗಿ ಸಾರ್ವಜನಿಕ ಸಾರಿಗೆ ಪದ್ಧತಿಯನ್ನು ಬಳಸಿ ಕೊಳ್ಳುವುದು.
2. ಉಪಯೋಗವಿಲ್ಲದ ಸಂದರ್ಭದಲ್ಲಿ ವಿದ್ಯುತ್ತನ್ನು ನಿಲ್ಲಿಸುವುದು.
3. ಇಂಧನ ಉಳಿತಾಯ ಉಪಕರಣಗಳನ್ನು ಬಳಸುವುದು.
4. ಅಸಂಪ್ರದಾಯಿಕ ಸಂಪನ್ಮೂಲಗಳನ್ನು ಬಳಸುವುದು. ಏಕೆಂದರೆ ಶಕ್ತಿಯ ಉಳಿತಾಯ ಎಂಬುದು "ಶಕ್ತಿಯ ಉತ್ಪತ್ತಿ ಮಾಡುವುದು ಎಂಬುದಾಗಿದೆ.

ಸ್ವಾಭಾವಿಕ ಸಂಪನ್ಮೂಲಗಳ ಸಂರಕ್ಷಣೆಯ ಅವಶ್ಯಕತೆ

ಹೀಗೆ ನಾವು ಸತತವಾಗಿ ಸ್ವಾಭಾವಿಕ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಬರುತ್ತಿರುವುದರಿಂದಲೇ, ಭವಿಷ್ಯದಲ್ಲಿ ಯಾವ ವಿಧವಾದ ಸಂಪನ್ಮೂಲಗಳೂ ದೊರೆಯದೇ ಇರಬಹುದು. ಈಗ ಪ್ರಕೃತಿಯನ್ನು ರಕ್ಷಿಸುವುದು ತುರ್ತು ಅವಶ್ಯವಿದೆ. ಕೆಲವು ಅವಶ್ಯಗಳು ಈ ಕೆಳಕಂಡಂತಿವೆ.

1. ಜೀವಿಸಲು ಆಧಾರವಾಗಿರುವ ಪರಿಸರ ಸಮತೋಲನವನ್ನು ಕಾಪಾಡುವುದು.
2. ವಿವಿಧ ಬಗೆಯ ಜೀವರಾಶಿಗಳನ್ನು ರಕ್ಷಿಸುವುದು.
3. ಪ್ರಸ್ತುತ ಮತ್ತು ಭವಿಷ್ಯತ್ತಿನ ಜನಾಂಗಗಳಿಗೆ ಸಂಪನ್ಮೂಲಗಳು ದೊರೆಯುವುದಕ್ಕೆ ದಾರಿ ಮಾಡಿ ಕೊಡುವುದು.
4. ಮನುಕುಲ ಜೀವಿಸಲು ಭರವಸೆ ಕೊಡುವುದು.

ಅಭ್ಯಾಸ

ಅ) ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1. ಒಣಗಿದ ಭೂಭಾಗದಲ್ಲಿ ಕಂಡು ಬರುವ ಮಣ್ಣು ___ ಆಗಿದೆ.

   ಅ) ಮರುಭೂಮಿ ಮಣ್ಣು ಆ) ಲ್ಯಾಟರೆಟ್ ಮಣ್ಣು ಇ) ಕಪ್ಪು ಮಣ್ಣು ಈ) ಮೆಕ್ಕಲು ಮಣ್ಣು

2. ಉಷ್ಣವಲಯದ ಮಾನ್ಸೂನ್ ಕಾಡುಗಳನ್ನು ಹೀಗೆಂದು ಕರೆಯುತ್ತಾರೆ.

   ಅ) ಉಷ್ಣವಲಯದ ನಿತ್ಯಹರಿದ್ವರ್ಣದ ಕಾಡುಗಳು ಆ)ಎಲೆ ಉದುರುವ ಕಾಡುಗಳು.

   ಇ) ಮ್ಯಾಂಗ್ರೋವ್ ಕಾಡುಗಳು ಈ) ಪರ್ವತ ಕಾಡುಗಳು

3. ಮೋನೋಸೈಟ್ ಮರಳಿನಲ್ಲಿ ಕಂಡು ಬರುವ ಖನಿಜ

   ಅ) ತೈಲ ಆ) ಯುರೇನಿಯಂ ಇ) ಥೋರಿಯಂ ಈ) ಕಲ್ಲಿದ್ದಲು

ಆ) ಹೊಂದಿಸಿರಿ

1)	ಕಪ್ಪು ಮಣ್ಣು	ಪೆಟ್ರೋಲಿಯಂ
2)	ಲಿಗ್ನೈಟ್	ಹತ್ತಿ ಬೆಳೆ
3).	ಮ್ಯಾಂಗ್ರೋವ್ ಕಾಡುಗಳು	ನೈವೇಲಿ
4)	ನವೀಕರಿಸಲಾಗುವ ಸಂಪನ್ಮೂಲಗಳು	ಸುಂದರಬನ
5)	ನವೀಕರಿಸಲಾಗದ ಸಂಪನ್ಮೂಲಗಳು	ಸೂರ್ಯ
		ಭತ್ತದ ಬೆಳೆ
		ಒಂದು ವಿಧವಾದ ಕಬ್ಬಿಣ

ಇ. ವ್ಯತ್ಯಾಸ ತಿಳಿಸಿ.

1. ಉಷ್ಣವಲಯದ ನಿತ್ಯಹರಿದ್ವರ್ಣದ ಕಾಡುಗಳು ಮತ್ತು ಉಷ್ಣವಲಯದ ಮಾನ್ಸೂನ್ ಕಾಡುಗಳು.
2. ನವೀಕರಿಸಲಾಗುವ ಸಂಪನ್ಮೂಲ ಮತ್ತು ನವೀಕರಿಸಲಾಗದ ಸಂಪನ್ಮೂಲ.
3. ಪವನ ಶಕ್ತಿ ಮತ್ತು ಶಾಖೋತ್ಪನ್ನ ವಿದ್ಯುಚ್ಛಕ್ತಿ.

ಈ. ಕೆಳಕಂಡ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. 'ಸ್ವಾಭಾವಿಕ ಸಂಪನ್ಮೂಲ' ಎಂದರೇನು?
2. ಫಲವತ್ತಾದ ಮಣ್ಣಿನಲ್ಲಿ ಕಂಡು ಬರುವ ಅಂಶಗಳು ಯಾವುವು?
3. ಉಷ್ಣವಲಯದ ನಿತ್ಯಹರಿದ್ವರ್ಣ ಕಾಡುಗಳ ಯಾವುದಾದರೂ ನಾಲ್ಕು ಅಂಶಗಳನ್ನು ತಿಳಿಸಿ.
4. ಮುಳ್ಳು ಗಿಡಗಳು ಮತ್ತು ಪೊದರು ಸಸ್ಯವರ್ಗದ ಅರ್ಥವನ್ನು ತಿಳಿಸಿ.
5. ಭಾರತದಲ್ಲಿ ಮೈಕಾ (ಅಭ್ರಕ)ವನ್ನು ಉತ್ಪಾದಿಸುವ ಸ್ಥಳಗಳು ಯಾವುವು?

ಉ. ಈ ಕೆಳಕಂಡ ಪ್ರಶ್ನೆಗಳಿಗೆ ಒಂದು ಪುಟದಲ್ಲಿ ಉತ್ತರಿಸಿ.

1. ಕಾಡುಗಳ ಪ್ರಾಮುಖ್ಯತೆಯನ್ನು ಕುರಿತು ಬರೆಯಿರಿ.
2. ಸ್ವಾಭಾವಿಕ ಸಂಪನ್ಮೂಲಗಳನ್ನು ಸಂರಕ್ಷಿಸಬೇಕಾದ ಅವಶ್ಯಕತೆಯನ್ನು ವಿವರಿಸಿ

4. ಭಾರತ – ವ್ಯವಸಾಯ

ವ್ಯವಸಾಯವು ಭಾರತದ ಸಾಮಾಜಿಕ, ಆರ್ಥಿಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಮಾನವನು ಜೀವಿಸಲು ಅಗತ್ಯವಾದ ಆಹಾರ ಪದಾರ್ಥಗಳನ್ನು ವ್ಯವಸಾಯದಿಂದ ಪಡೆಯುತ್ತಾನೆ. ರಾಷ್ಟ್ರದ ಆದಾಯದಲ್ಲಿ ವ್ಯವಸಾಯ ಪ್ರಮುಖ ಪಾತ್ರ ವಹಿಸುತ್ತದೆ. ಭಾರತದಲ್ಲಿ ವೃತ್ತಿ ಕೌಶಲ್ಯ ಹೊಂದಿರುವ ಅರ್ಧಕ್ಕಿಂತ ಹೆಚ್ಚು ಜನರು ವ್ಯವಸಾಯವನ್ನು ತೊಡಗಿಸಿಕೊಂಡಿರುವರು. ಉದ್ಯೋಗ ಮತ್ತು ಸಾರಿಗೆ ಕ್ಷೇತ್ರಗಳ ಬೆಳವಣಿಗೆಯು ವ್ಯವಸಾಯದ ಅಭಿವೃದ್ಧಿಯನ್ನು ಅವಲಂಭಿಸಿವೆ.

ಭಾರತದ ಹಲವಾರು ಬಗೆಯ ಕೃಷಿ ವಿಧಾನಗಳು ಭೌಗೋಳಿಕ ಅಂಶಗಳನ್ನು ಅವಲಂಭಿಸಿವೆ. ನಾವು ಈಗ ಭೌಗೋಳಿಕ ಅಂಶಗಳಾದ ಕೃಷಿ ವಿಧಾನಗಳು ಹೇಗೆ ವ್ಯತ್ಯಾಸಗೊಂಡಿವೆ?. ವ್ಯವಸಾಯವು ರಾಷ್ಟ್ರದ ಆದಾಯಕ್ಕೆ ಯಾವ ರೀತಿ ಸಹಾಯಕವಾಗಿದೆ? ಎಂಬುದನ್ನು ತಿಳಿದುಕೊಳ್ಳೋಣ.

ವ್ಯವಸಾಯವನ್ನು ನಿರ್ಧರಿಸುವ ಅಂಶಗಳು

1. ಭೂಸ್ವರೂಪ
2. ಹವಾಮಾನ
3. ಮಣ್ಣಿನ ವಿಧಗಳು
4. ನೀರು.

1. ಭೂಸ್ವರೂಪ

ಭಾರತ ಹಲವು ಬಗೆಯ ಭೂಸ್ವರೂಪಗಳನ್ನು ಹೊಂದಿರುವ ರಾಷ್ಟ್ರ. ಪರ್ವತಗಳು, ಬಯಲುಗಳು, ಪೀಠಭೂಮಿಗಳೆಂಬುದಾಗಿ ಮೂರು ಬಗೆಯ ಭೂಸ್ವರೂಪಗಳಿವೆ. ಬಯಲುಗಳು ಬೆಳೆಗಳನ್ನು ಬೆಳೆಯಲು ಯೋಗ್ಯವಾದುದಾಗಿವೆ. ನದಿ ಬಯಲುಗಳಲ್ಲಿ ಕಂಡು ಬರುವ ಮೆಕ್ಕಲು ಮಣ್ಣು ವ್ಯವಸಾಯ ಉತ್ಪಾದನೆಯನ್ನು ಹೆಚ್ಚಿಸುತ್ತದೆ. ಉದಾ: ಗಂಗಾ ನದೀ ಬಯಲು ಮತ್ತು ಕಾವೇರಿ ನದೀ ಬಯಲು.

2. ವಾಯುಗುಣ

ಭಾರತದ ಅಧಿಕ ಭೂಭಾಗವು ಉಷ್ಣವಲಯದ ಪ್ರದೇಶವಾಗಿದೆ. ಉಷ್ಣವಲಯದ ಮಾನ್ಸೂನ್ ವಾಯುಗುಣವನ್ನು ಹೊಂದಿದೆ. ವರ್ಷದ ಎಲ್ಲಾ ಕಾಲದಲ್ಲಿಯೂ ಬೆಳೆ ಬೆಳೆಯಲು ಸರಿಯಾದ ಸೂರ್ಯನ ಶಾಖ ಇಲ್ಲಿ ಸಿಗುತ್ತದೆ. ಮಾನ್ಸೂನ್ ಮಳೆ ಹಾಗೂ ನೀರಾವರಿ ಸೌಲಭ್ಯಗಳಿಂದ ಎಲ್ಲಾ ಋತುಗಳಲ್ಲಿಯೂ ಬೆಳೆ ಬೆಳೆಯಲು ಅನುಕೂಲವಾಗಿದೆ. ಇಲ್ಲಿ ಬೀಳುವ ಮಳೆಯು ಬೆಳೆಯ ವಿಧಾನವನ್ನು ನಿರ್ಧರಿಸುತ್ತದೆ. ಉದಾ: ಗೋಧಿ ಬೆಳೆಗೆ ಸಾಧಾರಣ ಉಷ್ಣಾಂಶ ಅಗತ್ಯ. ಆದರೆ ಭತ್ತ ಬೆಳೆಯಲು ಅಧಿಕ ಉಷ್ಣಾಂಶ ಅಗತ್ಯ. ಆದ್ದರಿಂದ ಪಂಜಾಬ್ ರಾಜ್ಯದಲ್ಲಿ ಗೋಧಿಯನ್ನೂ, ತಮಿಳುನಾಡಿನಲ್ಲಿ ಭತ್ತವನ್ನೂ ಬೆಳೆಯಲಾಗುತ್ತದೆ.

3. ಮಣ್ಣಿನ ವಿಧಗಳು

ತಂತ್ರಜ್ಞಾನ ಬೆಳವಣಿಗೆ ಹೊಂದಿದ್ದರೂ, ಮಣ್ಣು ವ್ಯವಸಾಯದ ವಿಧಗಳನ್ನು ನಿರ್ಧರಿಸುವುದು ಬಹು ಮುಖ್ಯ ಭೌಗೋಳಿಕ ಅಂಶಗಳಲ್ಲಿ ಒಂದಾಗಿದೆ. ಫಲವತ್ತಾದ ಮಣ್ಣಿನಲ್ಲಿ ಬೆಳೆ ಬೆಳೆಯಲು, ಉತ್ಪಾದನೆ ಹೇರಳವಾಗಿ ಕಂಡು ಬರುತ್ತದೆ. ಭತ್ತ ಮತ್ತು ಕಬ್ಬು ಮೆಕ್ಕಲುಮಣ್ಣಿನಲ್ಲೂ, ಹತ್ತಿ ಕಪ್ಪುಮಣ್ಣಿನಲ್ಲೂ, ಹೊಗೆಸೊಪ್ಪು ಕೆಂಪುಮಣ್ಣಿನಲ್ಲೂ, ಹೇರಳವಾಗಿ ಬೆಳೆಯುತ್ತದೆ.

4. ನೀರಿನ ಸೌಲಭ್ಯ

ನೀರಿನ ಲಭ್ಯತೆಯು ವ್ಯವಸಾಯವನ್ನು ನಿರ್ಧರಿಸುವ ಮತ್ತೊಂದು ಪ್ರಮುಖ ಅಂಶವಾಗಿದೆ. ಮಾನ್ಸೂನ್ ಮಳೆಯ ಹಂಚಿಕೆಯು ಅಸಮಾನತೆಯಿಂದ ಕಂಡು ಬರುತ್ತದೆ. ನೀರಾವರಿ ಸೌಲಭ್ಯವನ್ನು ರಾಷ್ಟ್ರದ ಎಲ್ಲಾ ಭಾಗದಲ್ಲೂ ಪಡೆಯಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಹೆಚ್ಚು ಮಳೆ ಬೀಳುವ ಭಾಗಗಳಲ್ಲಿ ಹೆಚ್ಚು ನೀರು ಬೇಕಾಗಿರುವ ಬೆಳೆಗಳು, ಮಳೆ ಕಡಿಮೆ ಇರುವ ಭಾಗಗಳಲ್ಲಿ ನೀರಾವರಿ ಸೌಲಭ್ಯಗಳನ್ನು

ಒದಗಿಸಲಾಗುತ್ತದೆ. ಮಾನ್ಸೂನ್ ಮಳೆಯು ಭಾರತದ ಕೃಷಿಗೆ ಬೆಂಬಲವಾಗಿದೆ. ಆಹಾರದ ಅವಶ್ಯಕತೆಯ ಸಹಾಯದಿಂದ ವ್ಯವಸಾಯ ಮಾಡಲಾಗುತ್ತದೆ.

ಕೃಷಿ ವಿಧಗಳು

ನಮ್ಮ ದೇಶದಲ್ಲಿ ನಾಲ್ಕು ಬಗೆಯ ಕೃಷಿ ವಿಧಾನಗಳನ್ನು ಅನುಸರಿಸಲಾಗುತ್ತಿದೆ. ಅವುಗಳೆಂದರೆ

1. ಪುರಾತನ ಬೇಸಾಯ
2. ಜೀವನಾಧಾರ ಬೇಸಾಯ
3. ವಾಣಿಜ್ಯ ಬೇಸಾಯ
4. ತೋಟಗಾರಿಕೆ ಬೇಸಾಯ

1. ಪುರಾತನ ಬೇಸಾಯ

ಪುರಾತನ ಬೇಸಾಯ ಕ್ರಮವು ಅಧಿಕ ಮಳೆ ಪಡೆಯುವ ಅರಣ್ಯ ಪ್ರದೇಶಗಳ ಭಾಗದಲ್ಲಿ ರೂಢಿಯಲ್ಲಿದೆ. ಅರಣ್ಯದ ಒಂದು ಭಾಗದಲ್ಲಿ ಮರಗಳನ್ನು ಕತ್ತರಿಸಿ, ಸುಟ್ಟು ಬೂದಿಯನ್ನು ಗೊಬ್ಬರವನ್ನಾಗಿಸಿಕೊಂಡು ಬೆಳೆ ಬೆಳೆಯಲಾಗುವುದು. ಎರಡು ಅಥವಾ ಮೂರು ವರ್ಷಗಳ ನಂತರ ಮಣ್ಣಿನ ಫಲವತ್ತತೆ ಕಡಿಮೆಯಾಗುವುದರಿಂದ ಈ ವಿಧಾನವನ್ನು ಬುಡಕಟ್ಟು ಜನಾಂಗದವರು ಮಾತ್ರವೇ ಅನುಸರಿಸುವರು. ವ್ಯವಸಾಯವು ಈಶಾನ್ಯ ರಾಜ್ಯಗಳಲ್ಲಿಯೂ, ಮಧ್ಯಪ್ರದೇಶ, ಒಡಿಸ್ಸಾ, ಆಂಧ್ರ ಪ್ರದೇಶ, ಮತ್ತು ಕೇರಳ ರಾಜ್ಯಗಳಲ್ಲಿಯೂ ಸಣ್ಣ ಪ್ರಮಾಣದಲ್ಲಿ ಕಂಡು ಬರುತ್ತದೆ.

ಪುರಾತನ ಬೇಸಾಯ ಪದ್ಧತಿಯನ್ನು ಬೇರೆ ಬೇರೆ ಹೆಸರುಗಳಿಂದ ಕರೆಯುವರು. ಉದಾ: ಅಸ್ಸಾಂನಲ್ಲಿ ಝೂಂಮ್, ಕೇರಳದಲ್ಲಿ ಪೊನ್ನಮ್ ಒಡಿಸ್ಸಾ ಮತ್ತು ಆಂಧ್ರ ಪ್ರದೇಶದಲ್ಲಿ ಪೋಡು, ಮಧ್ಯ ಪ್ರದೇಶದಲ್ಲಿ ಮಾಸನ್ – ಇತ್ಯಾದಿ.

2. ಜೀವನಾಧಾರ ಬೇಸಾಯ

ಭಾರತದ ವ್ಯವಸಾಯ ಪದ್ಧತಿಯಲ್ಲಿ ಜೀವನಾಧಾರ ಬೇಸಾಯ ವಿಧಾನವು ಬಹುಮುಖ್ಯವಾದ ಬೇಸಾಯವಾಗಿದೆ. ಈ ಬೇಸಾಯದಿಂದ ದೊರೆಯುವ ಬೇಸಾಯ ಪದಾರ್ಥಗಳನ್ನು ಉತ್ಪಾದನೆಯಲ್ಲಿ ಸುಮಾರು ಅರ್ಧ ಭಾಗದಷ್ಟು ರೈತರ ಕುಟುಂಬದ ಅವಶ್ಯಕತೆಯನ್ನು ಪೂರೈಸುವುದರಿಂದ ಉಳಿದ ಭಾಗವು ಸಮೀಪದ ಮಾರುಕಟ್ಟೆಗಳಲ್ಲಿ ಮಾರಾಟವಾಗುತ್ತವೆ. ಭತ್ತ ಮತ್ತು ಗೋಧಿಯಂತಹ ಧಾನ್ಯಗಳನ್ನು ಅಧಿಕ ಪ್ರಮಾಣದಲ್ಲಿ ಬೆಳೆಯುವರು.

ಉದಾ: ಉತ್ತರದ ಗಂಗಾ ನದಿ ಬಯಲು, ದಕ್ಷಿಣದಲ್ಲಿ ಕಾವೇರಿ, ಕೃಷ್ಣಾ, ಮಹಾನದಿ ಮತ್ತು ಗೋದಾವರಿ ನದಿ ಬಯಲುಗಳಲ್ಲಿ ಈ ಜೀವನಾಧಾರ ಬೇಸಾಯ ಪದ್ಧತಿಯು ಕಂಡು ಬರುತ್ತದೆ.

ಸ್ವಾತಂತ್ರ್ಯದ ನಂತರ ಭಾರತದ ವ್ಯವಸಾಯವು ಬೃಹತ್ ಪ್ರಮಾಣದಲ್ಲಿ ಅಭಿವೃದ್ಧಿ ಹೊಂದಿದೆ. ಕಡಿಮೆ ಪ್ರಮಾಣದ ಭೂಮಿಯಲ್ಲಿ ಅಧಿಕ ಪ್ರಮಾಣದ ಉತ್ಪಾದನೆ ಮಾಡುವುದೇ ರೈತರ ಉದ್ದೇಶವಾಗಿದೆ. ಅದಕ್ಕೆ ಅವಶ್ಯಕವಾದ ಸುಧಾರಿತ ಬಿತ್ತನೆಗಳು, ರಾಸಾಯನಿಕ ಗೊಬ್ಬರಗಳು, ನೀರಾವರಿ ಸೌಲಭ್ಯ ಮತ್ತು ನೂತನ ಯಂತ್ರಗಳನ್ನು ಬಳಸಿ ಅಧಿಕ ಇಳುವರಿಯನ್ನು ಪಡೆಯಲು ಪ್ರಯತ್ನಿಸುತ್ತಿರುವರು.

ಪರ್ಯಾಯ ದ್ವೀಪ ಭಾರತದ ಪ್ರಮುಖ ಆಹಾರಧಾನ್ಯ ಭತ್ತ. ಸುಮಾರು 44 ಮಿಲಿಯನ್ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತದೆ. ಇದು ವಿಶ್ವದ ಭತ್ತ ಬೆಳೆಯುವ ಪ್ರದೇಶದಲ್ಲಿ ಅತೀ ದೊಡ್ಡ ಭೂಪ್ರದೇಶವಾಗಿದೆ. ಭಾರತವು 1977ರಲ್ಲಿ ಭತ್ತದ ಉತ್ಪಾದನೆಯಲ್ಲಿ ಸ್ವಾವಲಂಭನೆಯನ್ನು ಪಡೆಯಿತು. ಅತ್ಯುನ್ನತ ಮಟ್ಟದ ಬಾಸ್ಮತಿ ಅಕ್ಕಿಯನ್ನು ಕಡಿಮೆ ಪ್ರಮಾಣದಲ್ಲಿ ರಫ್ತು ಮಾಡಲಾಗುತ್ತಿದೆ.

ಈ ಪದ್ಧತಿಯ ಬೇಸಾಯವನ್ನು ತೀವ್ರ ಬೇಸಾಯ (Intensive Agriculture) ಎನ್ನುತ್ತೇವೆ. ಈ ಬೇಸಾಯ ಪದ್ಧತಿಯು ಬಹುತೇಕವಾಗಿ ಫಲವತ್ತಾದ ಮೆಕ್ಕಲು ಮಣ್ಣಿನ ಭಾಗಗಳಲ್ಲಿ ನಡೆಯುತ್ತದೆ.

3. ವಾಣಿಜ್ಯ ಬೇಸಾಯ

ಇತರರ ಬಳಕೆಗಾಗಿ ಹಾಗೂ ಮಾರಾಟ ಮಾಡುವುದಕ್ಕಾಗಿ ಬೆಳೆಯುವ ಕೃಷಿ ಬೇಸಾಯವನ್ನು ವಾಣಿಜ್ಯ ಬೇಸಾಯ ಎನ್ನುವರು. ಇಂತಹ ಬೇಸಾಯದಲ್ಲಿ ಬೆಳೆ ಅಧಿಕ ಪ್ರಮಾಣದಲ್ಲಿ ಉತ್ಪಾದನೆ ಮಾಡಿ, ವಿದೇಶಕ್ಕೆ ರಫ್ತು ಮಾಡಲಾಗುತ್ತದೆ. ರಫ್ತು ರಾಷ್ಟ್ರಕ್ಕೆ ಆದಾಯವನ್ನು ತಂದು ಕೊಡುತ್ತದೆ., ತಮಿಳುನಾಡು ಪಂಜಾಬ್, ಹರಿಯಾಣ, ಗುಜರಾತ್ ಮತ್ತು ಮಹಾರಾಷ್ಟ್ರಗಳಲ್ಲಿ ಇದನ್ನು ಅನುಸರಿಸಲಾಗುತ್ತಿದೆ.

ಇಂತಹ ಬೇಸಾಯವನ್ನು ವಿಸ್ತಾರ ಬೇಸಾಯವೆಂದೂ ಕರೆಯುವರು.

ಎಣ್ಣೆ ಬೀಜಗಳು, ಹತ್ತಿ, ಕಬ್ಬು, ಸೆಣಬು ಮುಂತಾದ ಕೃಷಿ ಆಧಾರಿತ ಕೈಗಾರಿಕೆಗಳಿಗೆ ಕಚ್ಚಾ ವಸ್ತುಗಳನ್ನು ಸರಬರಾಜು ಮಡುವುದಲ್ಲದೆ ರಫ್ತು ಮಾಡಲಾಗುತ್ತದೆ. ಉದಾ: ಧಾನ್ಯಗಳು, ಹತ್ತಿ , ಕಬ್ಬು, ಸೆಣಬು.

4. ತೋಟಗಾರಿಕೆ ಬೇಸಾಯ

ವಿಸ್ತಾರವಾದ ಸಾಗುವಳಿ ಭೂಮಿಯಲ್ಲಿ ಹಣಗಳಿಕೆಗಾಗಿ ಒಂದೇ ಬೆಳೆಯನ್ನು ಬೆಳೆಯುವುದನ್ನು ತೋಟಗಾರಿಕೆ ಬೇಸಾಯವೆಂದು ಕರೆಯುವರು. ಹೀಗೆ ಬೆಳೆದ ಬೆಳೆಯನ್ನು ಕೈಗಾರಿಕೆಗಳಿಗೆ ಕಚ್ಚಾ ವಸ್ತುಗಳಾಗಿ ಕಳುಹಿಸಲಾಗುತ್ತದೆ. ಬೆಳೆ ಹಾಕುವ ಈ ಭಾಗವು ಸಾಮಾನ್ಯವಾಗಿ ಖಾಸಗಿಯವರಿಗೆ ಸೇರಿದ್ದಾಗಿದೆ. ಟೀ, ಕಾಫಿ, ರಬ್ಬರ್ ನಂತಹವುಗಳು ತೋಟಗಾರಿಕೆ ಬೆಳೆಗಳಾಗಿವೆ. ಈ ಬೆಳೆಗಳು ಈಶಾನ್ಯ ರಾಜ್ಯಗಳ ಬೆಟ್ಟಗಳ ಇಳಿಜಾರುಗಳಲ್ಲೂ, ಪಶ್ಚಿಮ ಬಂಗಾಳ, ಹಾಗೂ ದಕ್ಷಿಣ ಭಾರತದ ನೀಲಗಿರಿ, ಆನೈಮಲೈ ಮತ್ತು ಏಲಮಲೈ ಬೆಟ್ಟಗಳಲ್ಲಿ ಬೆಳೆಯಲಾಗುವುದು.



ರಬ್ಬರ್ ಮರ

ಬೆಳೆ ಬೆಳೆಯುವ ವಿಧಾನಗಳು

ರೈತರು ಬೆಳೆ ಬೆಳೆಯುವ ವಿಧಾನವನ್ನು ನಿರ್ಧರಿಸುವರು. ಭಾರತದಲ್ಲಿ ಕೆಳಕಂಡ ಪಟ್ಟಿಯಲ್ಲಿರುವಂತೆ ಬೆಳೆ ಬೆಳೆಯುವ ವಿಧಾನವು ರೂಢಿಯಲ್ಲಿದೆ.

ಉಷ್ಣಾಂಶ,ಮಳೆಪ್ರಮಾಣ, ಮಣ್ಣಿನ ಬಗೆಗಳು ಮುಂತಾದವುಗಳನ್ನು ಅವಲಂಬಿಸಿ ಹಲವು ಬಗೆಯ ಆಹಾರ ಧಾನ್ಯಗಳನ್ನು ಬೆಳೆಯುವರು. ಭಾರತದ ಆಹಾರಧಾನ್ಯದ ಬಗೆಗಳು ಹೀಗಿವೆ:


ಏಕಬೆಳೆ ಪದ್ಧತಿ(Mono Cropping) ಎಂಬುದು ಒಂದು ಋತುವಿನಲ್ಲಿ ಅಥವಾ ಒಂದು ವರ್ಷದಲ್ಲಿ ಒಂದೇ ಬೆಳೆಯನ್ನು ಬೆಳೆಯುವುದಾಗಿದೆ. ದ್ವಿಬೆಳೆ ಪದ್ಧತಿ(Dual Cropping) ಎಂಬುದು ಒಂದು ವರ್ಷದಲ್ಲಿ ಒಂದೇ ಭೂಮಿಯಲ್ಲಿ ಎರಡು ಬಾರಿ ಬೆಳೆಯನ್ನು ಬೆಳೆಯುವುದಾಗಿದೆ. ಬಹುಬೆಳೆ ಪದ್ಧತಿ(Multiple Cropping) ಎಂಬುದು ಒಂದು ಭೂಮಿಯಲ್ಲಿ ಹಲವು ಬೆಳೆಗಳನ್ನು ಒಂದೇ ವರ್ಷದಲ್ಲಿ ಬೆಳೆಯುವುದಾಗಿದೆ. ಮಿಶ್ರಬೆಳೆ ಪದ್ಧತಿ(Mixed Cropping) ಎಂಬುದು ಒಂದೇ ಭೂಮಿಯಲ್ಲಿ ಒಂದೇ ಸಮಯದಲ್ಲಿ ಒಂದಕ್ಕಿಂತಲೂ ಹೆಚ್ಚು ಬೆಳೆಗಳನ್ನು ಬೆಳೆಯುವುದಾಗಿದೆ. ಆವರ್ತ ಬೆಳೆ ಪದ್ಧತಿ(Crop Rotation) ಎಂಬುದು ವಿವಿಧ ಬೆಳೆಗಳನ್ನು ಒಂದೇ ಭೂಮಿಯಲ್ಲಿ ಕ್ರಮವಾಗಿ ಒಂದೇ ವರ್ಷದಲ್ಲಿ ಬಿತ್ತನೆ ಮಾಡುವುದಾಗಿದೆ.


ಭಾರತದ ವ್ಯವಸಾಯದ ಋತುಗಳು

ವ್ಯವಸಾಯದ ಕ್ರಮಗಳು ಮಾನ್ಸೂನ್ ಮಳೆಯ ಜೂನ್ ತಿಂಗಳಿನ ಆರಂಭದಲ್ಲಿ ಪ್ರಾರಂಭವಾಗುತ್ತವೆ. ಭಾರತದ ವ್ಯವಸಾಯವು ವಾರ್ಷಿಕವಾಗಿ ಮೂರು ಬೆಳೆಗಳನ್ನು ಬೆಳೆಯಲ್ಪಡುತ್ತದೆ.

ಹೆಸರು	ಬಿತ್ತನೆ ಕಾಲ (ಋತು)	ಕೊಯ್ಲು ಕಾಲ	ಪ್ರಮುಖ ಬೆಳೆಗಳು
ಖಾರಿಫ್ ಬೆಳೆ	ಜೂನ್ (ಮಾನ್ಸೂನ್ ಮಾರುತಗಳ ಪ್ರಾರಂಭದ ಕಾಲ (ಮುಂಗಾರು)	ನವೆಂಬರ್ ತಿಂಗಳ ಪ್ರಾರಂಭ	ಭತ್ತ , ಜೋಳ , ಹತ್ತಿ ,ಸೆಣಬು, ನೆಲಗಡಲೆ, ಕಬ್ಬು ಇತ್ಯಾದಿ.
ರಾಬಿ ಬೆಳೆ	ನವೆಂಬರ್ (ಚಳಿಗಾಲ) ಪ್ರಾರಂಭ	ಮಾರ್ಚ್ (ಬೇಸಿಗೆ ಕಾಲ ಪ್ರಾರಂಭ)	ಗೋಧಿ, ಹೊಗೆಸೊಪ್ಪು, ಸಾಸಿವೆ, ಬೇಳೆ ಬಗೆಯ ಧಾನ್ಯಗಳು
ಸೈಯದ್ ಬೆಳೆ	ಮಾರ್ಚ್ ಬೇಸಿಗೆ ಕಾಲ ಪ್ರಾರಂಭ	ಜೂನ್ (ಮುಂಗಾರು ಮಳೆ ಪ್ರಾರಂಭ)	ಹಣ್ಣುಗಳು, ತರಕಾರಿಗಳು ಕಲ್ಲಂಗಡಿ, ಸೌತೆಕಾಯಿ.

ಭಾರತದ ವ್ಯವಸಾಯದ ಋತುಗಳು


ಭಾರತ – ಭತ್ತ ಬೆಳೆಯುವ ಪ್ರದೇಶಗಳು
ಉ
ಪ
ಪೂ
ದ
ಗಂಗಾ
ಮಹಾನದಿ
ಗೋದಾವರಿ
ಕೃಷ್ಣಾ
ಕಾವೇರಿ
ಬಂಗಾಳಕೊಲ್ಲಿ
ಅರಬ್ಬಿ ಸಮುದ್ರ
ಭತ್ತ
ಹಿಂದೂಮಹಾಸಾಗರ



ವ್ಯವಸಾಯದ ಋತುಗಳು

ಭತ್ತ

ಭತ್ತ ಭಾರತದ ಮುಖ್ಯವಾದ ಆಹಾರ ಧಾನ್ಯವಾಗಿದೆ. ಇಂದು ಭಾರತವು ಜಗತ್ತಿನ ಎರಡನೇ ಪ್ರಮುಖ ಭತ್ತ ಉತ್ಪಾದಿಸುವ ದೇಶವಾಗಿದೆ. ಚೀನಾವು ಜಗತ್ತಿನ ಭತ್ತ ಉತ್ಪಾಧನೆಯಲ್ಲಿ ಶೇ.90ರಷ್ಟು ಉತ್ಪಾದನೆ ಮಾಡುತ್ತದೆ. ಪಂಜಾಬ್ ಮತ್ತು ಹರಿಯಾಣ ರಾಜ್ಯಗಳಲ್ಲಿ ಮಳೆ ಕಡಿಮೆ ಬೀಳುವುದರಿಂದ ನೀರಾವರಿಯ ಸಹಾಯದಿಂದ ಭತ್ತ ಬೆಳೆಯಲಾಗುವುದು. ಬಿತ್ತುವುದು, ನಾಟಿ ಹಾಕುವುದು, ಕಳೆ ತೆಗೆಯುವುದು, ಕಟಾವು ಮಾಡುವಂತಹ ಕೆಲಸಗಳಿಗೆ ಸಾಕಷ್ಟು ಕಾರ್ಮಿಕರು ಬೇಕಾಗುವರು. ಸುಗಂಧ –5 ಸುಕ್ರಧಾರ–1 ದಂತಹ ಸುಧಾರಿತ ಬೀಜದ ವಿಧಗಳು ಹರಿಯಾಣ, ದೆಹಲಿ, ಜಮ್ಮು ಕಾಶ್ಮೀರ ಮತ್ತು ಎತ್ತರ ಪರ್ವತ ಪ್ರದೇಶ ಹಾಗೂ ಹಿಮಾಚಲ ಪ್ರದೇಶ, ಉತ್ತರಾಂಚಲ, ರಾಜ್ಯಗಳಲ್ಲಿ ಬೆಳೆಯಲಾಗುತ್ತದೆ.

ಉತ್ತರಭಾರತದಲ್ಲಿ ಪಶ್ಚಿಮಬಂಗಾಳವು ಭಾರತದಲ್ಲಿಯೇ ಅತಿ ಹೆಚ್ಚು ಭತ್ತ ಉತ್ಪಾದಿಸುವ ರಾಜ್ಯ. ಬಿಹಾರ್, ಉತ್ತರಪ್ರದೇಶ, ಪಂಜಾಬ್, ಒಡಿಸ್ಸ ಇವುಗಳು ಉತ್ತರಭಾರತದ ಇತರ ರಾಜ್ಯಗಳಾಗಿವೆ. ತಮಿಳುನಾಡು ಮತ್ತು ಆಂಧ್ರಪ್ರದೇಶ ದಕ್ಷಿಣ ಭಾರತದ ರಾಜ್ಯಗಳಾಗಿವೆ. ಅಧಿಕ ಜನಸಂಖ್ಯೆಯಿಂದಾಗಿ ಭತ್ತದ ಉತ್ಪಾದನೆ ದೇಶದ ಅವಶ್ಯಕತೆಯನ್ನು ಪೂರೈಸಲು ಸಾಕಾಗುವಷ್ಟಿದೆ. ಮಹಾನದಿ, ಗೋದಾವರಿ, ಕೃಷ್ಣ ಮತ್ತು ಕಾವೇರಿ ನದಿ ಮುಖಜ ಭೂಮಿಯಲ್ಲಿ ವರ್ಷದಲ್ಲಿ ಮೂರು ಬಾರಿ ಭತ್ತ ಬೆಳೆಯಲಾಗುತ್ತದೆ.

ಭಾರತೀಯ ಕೃಷಿ ಸಂಶೋಧನಾ ಮಂಡಳಿ (ICAR) 1929ರಲ್ಲಿ ಸ್ಥಾಪಿಸಲಾಯಿತು. ಈ ಮಂಡಳಿಯ ಧನ ಸಹಾಯದಿಂದ ಆಹಾರದ ಕೊರತೆಯನ್ನು ನೀಗಿಸಿ ಈಗ ಭಾರತ ಅವಶ್ಯಕತೆಗಿಂತ ಹೆಚ್ಚು ಆಹಾರ ಧಾನ್ಯಗಳನ್ನು ಉತ್ಪಾದಿಸುವ ರಾಷ್ಟ್ರವಾಗಿ ಬದಲಾಗಲು ಭಾರತ ಕೃಷಿ ಸಂಶೋಧನಾ ಮಂಡಳಿಯು ಪ್ರಮುಖ ಕಾರಣವಾಯಿತು. ಕೃಷಿ ತಂತ್ರಜ್ಞಾನ ಪದ್ಧತಿಯನ್ನು ಗದ್ದೆಗಳಲ್ಲಿ ತ್ವರಿತವಾಗಿ ಅಳವಡಿಸಲಾಯಿತು.

ತಮಿಳುನಾಡಿನಲ್ಲಿ ಭತ್ತದ ಉತ್ಪಾದನೆ


ತಮಿಳುನಾಡಿನ ಭತ್ತದ ಕಣಜ ಎಂದು ಕರೆಯುವ ತಂಜಾವೂರು ಜಿಲ್ಲೆ ಭತ್ತದ ಉತ್ಪಾದನೆಯಲ್ಲಿ ಕೆಲವು ವಿಶೇಷ ಅಂಶಗಳನ್ನು ಪಡೆದುಕೊಂಡಿದೆ.



ಭತ್ತದ ಗದ್ದೆ.

ಭತ್ತ ಬೆಳೆಯುಲು ತೆಗೆದುಕೊಳ್ಳುವ ಕಾಲಕ್ಕನುಗುಣವಾಗಿ ಸಂಬಾ, ಕುರುವೈ, ತಾಳಡಿ, ಹೀಗೆ ಒಂದು ವರ್ಷದಲ್ಲಿ ಮೂರು ಬಗೆಯಲ್ಲಿ ಭತ್ತ ಬೆಳೆಯಲಾಗುವುದು, ಸಂಬಾ ದೀರ್ಘಾವಧಿಯ ಬೆಳೆ. ಇದು ಐದರಿಂದ ಆರು ತಿಂಗಳವರೆಗೆ ಬೆಳೆಯುತ್ತದೆ. 'ಕುರುವೈ' ಇದು ಮೂರರಿಂದ ನಾಲ್ಕು ತಿಂಗಳಲ್ಲಿ ಬೆಳೆಯುತ್ತದೆ. ಮೊದಲು ಕೊಯ್ಲು ಮಾಡಿದ ಗದ್ದೆಗಳಲ್ಲಿರುವ ಭತ್ತದ ಕಾಂಡಗಳ ಜೊತೆ ಉದ್ದು ಬೆಳೆಯನ್ನು ಬೆಳೆಯುವುದು ತಾಳಡಿ ವಿಧಾನವಾಗಿದೆ. ತಾಳಡಿ ಸ್ಥಳೀಯ ಸಾಂಪ್ರದಾಯಿಕ ಪದದಲ್ಲಿ ತಿಳಿಸಲಾಗಿದೆ.

ಭಾರತ – ಗೋಧಿ ಬೆಳೆಯುವ ಪ್ರದೇಶಗಳು



ಕಾಮನಬಿಲ್ಲು ಕ್ರಾಂತಿ

ಮುಖ್ಯಾಂಶ	ಉತ್ಪಾದನೆಗೆ ಸಂಬಂಧಿಸಿದ್ದು
ಹಸಿರು ಕ್ರಾಂತಿ	ಕೃಷಿ ಉತ್ಪಾದನೆ
ಬಿಳಿಯ ಕ್ರಾಂತಿ	ಹಾಲು ಮತ್ತು ಹಾಲಿನ ಉತ್ಪನ್ನಗಳು
ಬೆಳ್ಳಿ ಕ್ರಾಂತಿ	ಮೊಟ್ಟೆಗಳು ಮತ್ತು ಕೋಳಿ ಸಾಕಾಣಿಕೆ
ಚಿನ್ನದ ಕ್ರಾಂತಿ	ಹಣ್ಣುಗಳ ಉತ್ಪಾದನೆ
ಅರಿಶಿಣ ಕ್ರಾಂತಿ	ಎಣ್ಣೆ ಬೀಜಗಳು
ನೀಲಿ ಕ್ರಾಂತಿ	ಸಮುದ್ರ ಉತ್ಪನ್ನಗಳು

ಭತ್ತ ಬೆಳೆಯುವ ಈ ವಿಧಾನವನ್ನು ಈಗಲೂ ಅನುಸರಿಸಲಾಗುತ್ತಿದೆ. ಆದರೂ, ನೂತನ ಬೆಳೆ ವಿಧಾನವು ಕೆಲವು ಬದಲಾವಣೆಗಳನ್ನು ಉಂಟು ಮಾಡಿದೆ. ಇದರಿಂದಾಗಿ ಕೊಯ್ಲು ಮಾಡುವ ಕಾಲವೂ ಸಹ ಬದಲಾವಣೆಯಾಗುತ್ತಿದೆ.

ಗೋಧಿ

ಗೋಧಿಯು ಪ್ರಮುಖ ಆಹಾರ ಬೆಳೆಯಾಗಿದೆ. ಭಾರತದ ಉತ್ತರ ಮತ್ತು ವಾಯುವ್ಯ ರಾಜ್ಯಗಳಲ್ಲಿ ಗೋಧಿಯು ಪ್ರಮುಖ ಆಹಾರ ಬೆಳೆಯಾಗಿದೆ. ಗೋಧಿ ಬೆಳೆ ಚಳಿಗಾಲ ಮತ್ತು ವಸಂತ ಕಾಲದ ಬೆಳೆಯಾಗಿಯೂ ಬೆಳೆಯಲಾಗುವುದು. ಅಧಿಕ ಪ್ರಮಾಣದಲ್ಲಿ ಉತ್ಪಾದಿಸುವ ರಾಜ್ಯಗಳು ಉತ್ತರ ಪ್ರದೇಶ, ರಾಜಸ್ಥಾನ್, ಮಧ್ಯಪ್ರದೇಶ, ಛತ್ತೀಸ್‌ಘಡ್, ಮಹಾರಾಷ್ಟ್ರ, ಗುಜರಾತ್ ಮತ್ತು ಆಂಧ್ರ ಪ್ರದೇಶಗಳಾಗಿವೆ.

ಪಂಜಾಬ್ ಮತು ಹರಿಯಾಣ ರಾಜ್ಯಗಳಲ್ಲಿ ಹಸಿರು ಕ್ರಾಂತಿಯ ಪರಿಣಾಮವಾಗಿ ಗೋಧಿ ಉತ್ಪಾದನೆಯು ಅಧಿಕವಾಗಿದೆ. ಈಗ ಭಾರತ ಗೋಧಿಯನ್ನು ರಫ್ತು ಮಾಡುವ ಹಂತವನ್ನು ತಲುಪಿದೆ.



ಗೋಧಿ

ಸಣ್ಣಕಾಳಿನ ಬಗೆಗಳು

ಆಹಾರದ ಅವಶ್ಯಕತೆಯನ್ನು ಪೂರೈಸುವುದರಲ್ಲಿ ಭತ್ತ ಮತ್ತು ಗೋಧಿಯ ನಂತರ ಸಣ್ಣ ಕಾಳಿನ ಧಾನ್ಯಗಳು ಪ್ರಮುಖ ಪಾತ್ರ ವಹಿಸುತ್ತವೆ. ಸಾರವಿಲ್ಲದ ಮಣ್ಣಿನಲ್ಲಿಯೂ, ಮಳೆಯನ್ನು ನಂಬಿ ಈ ಬೆಳೆಗಳನ್ನು ಬೆಳೆಯಲಾಗುತ್ತದೆ. ಜೋಳ, ರಾಗಿ, ಕಂಬು, ನವಣೆ ಇವುಗಳು ಸಣ್ಣ ಕಾಳಿನ ಧಾನ್ಯಗಳಾಗಿವೆ. ಇವು ಒಣ ಪ್ರದೇಶದ ಬೆಳೆಗಳಾಗಿವೆ. ಇವುಗಳು ಗೋಧಿ ಮತ್ತು ಭತ್ತಕ್ಕಿಂತಲು ಉತ್ತಮ ಪೌಷ್ಟಿಕಾಂಶದಿಂದ ಕೂಡಿದೆ. ಇವುಗಳ ಕಾಂಡಗಳು ಜಾನುವಾರುಗಳಿಗೆ ಮೇವನ್ನು ಒದಗಿಸುತ್ತವೆ. ಸಣ್ಣ ಕಾಳುಗಳು ಸಾಮಾನ್ಯವಾಗಿ ಎಲ್ಲಾ ರಾಜ್ಯಗಳಲ್ಲೂ ಕಂಡುಬಂದರೂ, ಮಧ್ಯಪ್ರದೇಶ, ಆಂಧ್ರಪ್ರದೇಶ, ತಮಿಳುನಾಡು, ಉತ್ತರ ಪ್ರದೇಶ, ಕರ್ನಾಟಕ, ಒಡಿಸ್ಸಾ, ಬಿಹಾರ್, ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳು ಪ್ರಮುಖವಾಗಿ ಸಣ್ಣ ಕಾಳುಗಳ ಧಾನ್ಯಗಳನ್ನು ಬೆಳೆಯುವ ರಾಜ್ಯಗಳಾಗಿವೆ.

ಬೇಳೆ ಬಗೆಗಳು


ಅಧಿಕ ಪ್ರೋಟಿನ್ ಹೊಂದಿರುವ ಬೆಳೆಗಳೇ ಬೇಳೆ ಬಗೆಗಳಾಗಿವೆ. ಸಾಧಾರಣ ಉಷ್ಣಾಂಶ ಅಥವಾ ಚಳಿಗಾಲದಲ್ಲಿ ಚೆನ್ನಾಗಿ ಬೆಳೆಯುತ್ತವೆ. ನೀರಾವರಿ ಸೌಲಭ್ಯ ಅಥವಾ ಒಣ ಪ್ರದೇಶದಲ್ಲಿ ನೀರಾವರಿಯಿಲ್ಲದೆ ಚೆನ್ನಾಗಿ ಬೆಳೆಯುತ್ತವೆ. ತೊಗರಿ ಬೇಳೆ, ಹೆಸರು ಬೇಳೆ, ಉದ್ದು , ಹುರುಳಿ, ಬಟಾಣಿ ಮುಂತಾದವು ಬೇಳೆ ಬಗೆಗಳಾಗಿವೆ. ಮಧ್ಯಪ್ರದೇಶ, ರಾಜಸ್ಥಾನ್, ಹರಿಯಾಣ, ಪಂಜಾಬ್, ಮಹಾರಾಷ್ಟ್ರ, ಗುಜರಾತ್, ಆಂಧ್ರ ಪ್ರದೇಶ ಮತು ತಮಿಳುನಾಡು ಮುಂತಾದವು ಬೇಳೆ ಬಗೆಗಳನ್ನು ಅಧಿಕ ಪ್ರಮಾಣದಲ್ಲಿ ಉತ್ಪಾದಿಸುವ ರಾಜ್ಯಗಳಾಗಿವೆ.

ಆರ್ಥಿಕ ಬೆಳೆಗಳು


ನಮ್ಮ ರಾಷ್ಟ್ರದಲ್ಲಿ ಆಹಾರ ಧಾನ್ಯಗಳ ಬೆಳೆಗಳನ್ನು ಮಾತ್ರವಲ್ಲದೆ ಹಲವಾರು ವಿಧದ ಬೆಳೆಗಳನ್ನು ಬೆಳೆಯಲಾಗುತ್ತವೆ. ಅಂತಹ ಬೆಳೆಗಳು ಕೈಗಾರಿಕೆಗಳಿಗೆ ಅಗತ್ಯವಾದ ಕಚ್ಚಾ ವಸ್ತುಗಳನ್ನು ಒದಗಿಸುತ್ತವೆ. ಕಬ್ಬು, ಹತ್ತಿ, ಸೆಣಬು, ಟೀ, ಕಾಫಿ, ಎಣ್ಣೆ ಕಾಳುಗಳು, ಹೊಗೆಸೊಪ್ಪು ಮತ್ತು ರಬ್ಬರ್ ನಂತಹವುಗಳೂ, ಆರ್ಥಿಕ ಬೆಳೆಗಳಾಗಿವೆ. ಈ ಬೆಳೆಗಳು ಕಚ್ಚಾ ವಸ್ತುಗಳನ್ನು ಉತ್ಪಾದಿಸುವುದಲ್ಲದೆ, ರಫ್ತಿನ ಮೂಲಕ ನಮ್ಮ ರಾಷ್ಟ್ರಕ್ಕೆ ವಿದೇಶಿ ವಿನಿಮಯವನ್ನು ಗಳಿಸಿಕೊಡುತ್ತವೆ. ಈ ಕಾರಣದಿಂದಾಗಿ ವಾಣಿಜ್ಯ ಬೆಳೆಗಳು ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರವಹಿಸಿವೆ.

ಕಬ್ಬು

ಕಬ್ಬು ಉಷ್ಣವಲಯದ ಬೆಳೆಯಾಗಿದೆ. ಇದು ಅಧಿಕ ಉಷ್ಣಾಂಶ ಮತ್ತು ತೇವಾಂಶವಿರುವ


ಭಾರತ –ಕಬ್ಬು ಬೆಳೆಯುವ ಪ್ರದೇಶಗಳು
ಉ
ಪ
ಪೂ
ದ
ಉತ್ತರ ಪ್ರದೇಶ
ಗುಜರಾತ್
ಮಹಾರಾಷ್ಟ್ರ
ಆಂಧ್ರಪ್ರದೇಶ
ಬಂಗಾಳಕೊಲ್ಲಿ
ಅರಬ್ಬಿ ಸಮುದ್ರ
ಕಬ್ಬು
ಹಿಂದು ಮಹಾಸಾಗರ

ಭಾರತ – ಹತ್ತಿ ಮತ್ತು ಸೆಣಬು ಬೆಳೆಯುವ ಪ್ರದೇಶಗಳು



ವಾತಾವರಣದಲ್ಲಿ ಉತ್ತಮವಾಗಿ ಬೆಳೆಯುತ್ತದೆ. ಭಾರತವು ಕಬ್ಬಿನ ಮೂಲಸ್ಥಾನವಾಗಿದೆ. ಕಬ್ಬು ಉತ್ಪಾದನೆಯಲ್ಲಿ ಬ್ರೆಜಿಲ್‌ನ ನಂತರದ 2ನೇ ಸ್ಥಾನದಲ್ಲಿ ಭಾರತವಿದೆ. ಉತ್ತರ ಪ್ರದೇಶ, ತಮಿಳುನಾಡು, ಆಂಧ್ರ ಪ್ರದೇಶ, ಕರ್ನಾಟಕ, ಗುಜರಾತ್, ಮಹಾರಾಷ್ಟ್ರ, ಬಿಹಾರ, ಪಂಜಾಬ್ ಮತ್ತು ಹರಿಯಾಣ ರಾಜ್ಯಗಳು ಪ್ರಮುಖವಾಗಿ ಕಬ್ಬು ಬೆಳೆಯುವ ರಾಜ್ಯಗಳಾಗಿವೆ.



ಕಬ್ಬು

ಹತ್ತಿ

ಹತ್ತಿ ಭಾರತದ ಅತ್ಯಂತ ಪ್ರಮುಖವಾದ ನಾರು ಬೆಳೆ. ಇದನ್ನು ಹತ್ತಿ ಬಟ್ಟೆ ಕೈಗಾರಿಕೆಯಲ್ಲಿ ಕಚ್ಚಾ ವಸ್ತುವಾಗಿ ಬಳಸಲಾಗುವುದು. ಹತ್ತಿಯು ಉಷ್ಣವಲಯ ಹಾಗೂ ಉಪಉಷ್ಣವಲಯದ ಬೆಳೆ. ಕಪ್ಪು ಮಣ್ಣು ಹತ್ತಿ ಬೆಳೆಗೆ ಸೂಕ್ತವಾದುದು. ಜಗತ್ತಿನ ಕಚ್ಚಾ ಹತ್ತಿ ಉತ್ಪಾದನೆಯಲ್ಲಿ ಭಾರತ ನಾಲ್ಕನೇ ಸ್ಥಾನದಲ್ಲಿದೆ. ಗುಜರಾತ್ ಮಹಾರಾಷ್ಟ್ರ, ಆಂಧ್ರಪ್ರದೇಶ, ಕರ್ನಾಟಕ, ತಮಿಳುನಾಡು, ಮಧ್ಯಪ್ರದೇಶ, ಪಂಜಾಬ್ ಮತ್ತು ಹರಿಯಾಣ ರಾಜ್ಯಗಳು ಪ್ರಮುಖವಾಗಿ ಹತ್ತಿ ಬೆಳೆಯುವ ರಾಜ್ಯಗಳಾಗಿವೆ.

ಸೆಣಬು

ಸೆಣಬು ಹತ್ತಿಯ ನಂತರ ಬಹು ಮುಖ್ಯವಾದ ನಾರು ಬೆಳೆಯಾಗಿದೆ. ಸೆಣಬು ಅಗ್ಗದ ಮತ್ತು ಪ್ರಮುಖವಾದ ವಾಣಿಜ್ಯ ಬೆಳೆಯಾಗಿದೆ. ಇದನ್ನು ಚಿನ್ನದ ನಾರಿನಬೆಳೆ ಎಂದೂ ಕರೆಯುತ್ತಾರೆ. ಏಕೆಂದರೆ ಇದರ ಮೃದುತ್ವ, ಶಕ್ತಿ, ಉದ್ದ ಮತ್ತು ಏಕ ರೂಪತೆ ಹೊಂದಿರುವುದರಿಂದ ಇದಕ್ಕೆ ಪ್ರಾಮುಖ್ಯತೆ ನೀಡಲಾಗಿದೆ.

ಇದರಿಂದ ಗೋಣಿ ಚೀಲಗಳು,ಜಮಖಾನೆ, ಹಗ್ಗ, ಹುರಿ, ಕಂಬಳಿಗಳು ಮತ್ತು ಸೆಣಬಿನ ಬಟ್ಟೆಗಳು ಮತ್ತು ಟಾರ್ಪಾಲಿನ್ ಮುಂತಾದವುಗಳನ್ನು ತಯಾರಿಸಲಾಗುವುದು.



ಸೆಣಬು ಬೆಳೆ (ಗಿಡ)

ಸೆಣಬು ಬೆಳೆ ಗಂಗಾ, ಬ್ರಹ್ಮಪುತ್ರ ನದೀ ಬಯಲುಗಳಲ್ಲಿರುವ ಪಶ್ಚಿಮ ಬಂಗಾಳ, ಬಿಹಾರ, ಒರಿಸ್ಸಾ, ಅಸ್ಸಾಂ ಮತ್ತು ಮೇಘಾಲಯದ ಬೆಳೆಯಾಗಿದೆ ಏಕೆಂದರೆ ಶಾಖ, ತಂಪಾದ ವಾಯುಗುಣ ಮತ್ತು ಪ್ರವಾಹ ಬಯಲುಗಳಲ್ಲಿ ಪ್ರತಿ ವರ್ಷದ ಹೊಸ ಮೆಕ್ಕಲು ಮಣ್ಣಿನ ಸಂಚಯದಲ್ಲಿ ಸೆಣಬು ಹುಲುಸಾಗಿ ಉತ್ತಮವಾಗಿ ಬೆಳೆಯುತ್ತದೆ.

ಹೊಗೆಸೊಪ್ಪು

ಹೊಗೆಸೊಪ್ಪನ್ನು ಮೊಟ್ಟ ಮೊದಲಿಗೆ 1508ರಲ್ಲಿ ಪೋರ್ಚುಗೀಸರು ಭಾರತಕ್ಕೆ ತೆಗೆದುಕೊಂಡು ಬಂದರು ಅಂದಿನಿಂದ ಈ ಬೆಳೆಯನ್ನು ಹಂತ ಹಂತವಾಗಿ ದೇಶದ ಎಲ್ಲಾ ಭಾಗಗಳಲ್ಲೂ ಬೆಳೆಯಲಾಗುತ್ತಿದೆ.

ಹೊಗೆಸೊಪ್ಪು ಉತ್ಪಾದನೆಯಲ್ಲಿ ಭಾರತ ಮೂರನೇ ದೊಡ್ಡ ರಾಷ್ಟ್ರವಾಗಿದೆ. ಇದಲ್ಲದೆ ಚೀನಾ ಮತ್ತು ಅಮೇರಿಕ ಸಂಯುಕ್ತ ಸಂಸ್ಥಾನಗಳು ಮೊದಲ ಎರಡು ಸ್ಥಾನದಲ್ಲಿವೆ, ತಮಿಳುನಾಡು, ಆಂಧ್ರಪ್ರದೇಶ, ಮತ್ತು ಕರ್ನಾಟಕ ರಾಜ್ಯಗಳು ಹೊಗೆ ಸೊಪ್ಪು ಉತ್ಪಾದಿಸುವ ರಾಜ್ಯಗಳಾಗಿವೆ.



ಹೊಗೆಸೊಪ್ಪು

ಎಣ್ಣೆ ಕಾಳುಗಳು

ಜಗತ್ತಿನಲ್ಲಿ ಎಣ್ಣೆಕಾಳುಗಳನ್ನು ಉತ್ಪಾದನೆ ಮಾಡುವ ರಾಷ್ಟ್ರಗಳಲ್ಲಿ ಭಾರತ ಒಂದು ಪ್ರಮುಖ ರಾಷ್ಟ್ರವಾಗಿದೆ. ಭಾರತದಲ್ಲಿ ತಾಳೆ ಎಣ್ಣೆ ಮತ್ತು ಆಲೀವ್ ಎಣ್ಣೆ ಹೊರತು ಪಡಿಸಿ ಎಲ್ಲಾ ವಿವಿಧ ಎಣ್ಣೆ ಕಾಳುಗಳನ್ನು ಬೆಳೆಯಲಾಗುತ್ತದೆ. ಎಣ್ಣೆ ಕಾಳುಗಳನ್ನು ಉಷ್ಣವಲಯ ಹಾಗೂ ಉಪ ಉಷ್ಣವಲಯ ಪ್ರದೇಶಗಳಲ್ಲಿ ಬೆಳೆಯಲಾಗುತ್ತದೆ. ನೆಲಗಡಲೆ, ಎಳ್ಳು, ಸಾಸಿವೆ, ಸೂರ್ಯಕಾಂತಿ, ಹರಳು, ತೆಂಗಿನಕಾಯಿ, ಸೋಯಾಬೀನ್ಸ್ ನಂತಹ ಎಣ್ಣೆ ಕಾಳುಗಳನ್ನು ಭಾರತದಲ್ಲಿ ಬೆಳೆಯಲಾಗುತ್ತದೆ. ಭಾರತದ ಆಹಾರ ಪದ್ಧತಿಯಲ್ಲಿ ಎಣ್ಣೆ ಪ್ರಮುಖ ಪಾತ್ರ ವಹಿಸುತ್ತದೆ. ಎಣ್ಣೆ ಕಾಳುಗಳು ಹಲವು ಉತ್ಪನ್ನಗಳ ತಯಾರಿಕೆಯಲ್ಲಿ ಕಚ್ಚಾ ವಸ್ತುವನ್ನಾಗಿ ಬಳಸಲಾಗುತ್ತದೆ ಮತ್ತು ಜಾನುವಾರುಗಳ ಮೇವು ಮತ್ತು ಗೊಬ್ಬರವನ್ನಾಗಿ ಬಳಸಲಾಗುತ್ತದೆ.

ಪ್ರಮುಖವಾಗಿ ಎಣ್ಣೆಕಾಳುಗಳನ್ನು ಉತ್ಪಾದಿಸುವ ರಾಜ್ಯಗಳು ಗುಜರಾತ್, ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶ, ಮಧ್ಯಪ್ರದೇಶ, ಒಡಿಸ್ಸ ಮತ್ತು ಕರ್ನಾಟಕ.

ತೋಟಗಾರಿಕೆ ಬೇಸಾಯ

ಚಹ

ಚಹ ಪ್ರಮುಖವಾದ ಪಾನೀಯ ಬೆಳೆಯಾಗಿದೆ. ಚಹವು ಉಷ್ಣವಲಯ ಮತ್ತು ಉಪ ಉಷ್ಣವಲಯದ ಬೆಳೆ. ಚಹ ಗಿಡಕ್ಕೆ ಫಲವತ್ತಾದ ಮಣ್ಣು, ನೀರು ಚಹ ಗಿಡದ ತಳದಲ್ಲಿ ನಿಲ್ಲದೆ ಸರಾಗವಾಗಿ ಹರಿದು ಹೋಗುವ ಇಳಿಜಾರು ಅವಶ್ಯಕ. ಸಾಮಾನ್ಯವಾಗಿ 3000–4000 ಅಡಿ ಎತ್ತರವುಳ್ಳ ಬೆಟ್ಟಗಳ ಇಳಿಜಾರುಗಳಲ್ಲಿ ಈ ಬೆಳೆಯನ್ನು ಬೆಳೆಯಲಾಗುವುದು.

ಅಸ್ಸಾಂ, ಪಶ್ಚಿಮಬಂಗಾಳ, ಕೇರಳ ಮತ್ತು ತಮಿಳುನಾಡು ಮುಂತಾದ ರಾಜ್ಯಗಳು ಚಹ ಉತ್ಪಾದನೆಯಲ್ಲಿ ಪ್ರಮುಖ ಸ್ಥಾನ ವಹಿಸುತ್ತವೆ.



ಚಹ (ಟೀ) ಸೊಪ್ಪು

ಕಾಫಿ

ಕಾಫಿಯು ಪ್ರಮುಖವಾದ ಪಾನೀಯ ಬೆಳೆ. ಭಾರತದಲ್ಲಿ ಬೆಳೆಯುವ ಕಾಫಿ ಗುಣ ಮಟ್ಟದಲ್ಲಿ ಹೆಸರುವಾಸಿಯಾಗಿದೆ.




ಕಾಫಿ

ಭಾರತದ ಕಾಫಿ ಉತ್ಪಾದನೆಯಲ್ಲಿ ಶೇ.60ರಷ್ಟನ್ನು ಕರ್ನಾಟಕದಲ್ಲಿ ಉತ್ಪಾದನೆ ಮಾಡಲಾಗುತ್ತಿದೆ. ಕಾಫಿ ಬೆಳೆಯುವ ಇತರ ರಾಜ್ಯಗಳೆಂದರೆ ತಮಿಳುನಾಡು ಮತ್ತು ಕೇರಳ.

ರಬ್ಬರ್

ರಬ್ಬರ್ ಮರದಿಂದ ತೆಗೆಯುವ ಹಾಲಿನಂತಹ ವಸ್ತುವಿನಿಂದ ರಬ್ಬರ್ ತಯಾರಿಸಲಾಗುತ್ತದೆ. ರಬ್ಬರ್ ಬೆಳೆಯುವ ಭೂ ವಿಸ್ತೀರ್ಣದಲ್ಲಿ ಭಾರತ ಆರನೇ ಸ್ಥಾನವನ್ನು, ರಬ್ಬರ್ ಉತ್ಪಾದನೆಯಲ್ಲಿ ಐದನೇ ಸ್ಥಾನವನ್ನು ಪಡೆದುಕೊಂಡಿದೆ. ರಬ್ಬರ್ ತೋಟಗಳು ದಕ್ಷಿಣಭಾರತದಲ್ಲಿ ಅಧಿಕವಾಗಿ ಕಂಡು ಬರುತ್ತವೆ. ಭೂ ವಿಸ್ತೀರ್ಣದಲ್ಲಿ ಶೇ.95 ರಷ್ಟು ಕೇರಳರಾಜ್ಯದಲ್ಲಿ, ಪಶ್ಚಿಮ ಘಟ್ಟದ ಇಳಿಜಾರುಗಳಲ್ಲಿ ಶೇ.5ರಷ್ಟು , ತಮಿಳುನಾಡು, ಕರ್ನಾಟಕ, ಮತ್ತು ಅಂಡಮಾನ್ ನಿಕೋಬಾರ್ ದ್ವೀಪಗಳಲ್ಲಿ ಕಂಡು ಬರುತ್ತದೆ.

ಭಾರತ – ಚಹ ಮತ್ತು ಕಾಫಿ ಬೆಳೆಯುವ ಪ್ರದೇಶಗಳು



ಹಣ್ಣುಗಳು ಮತ್ತು ತರಕಾರಿಗಳು

ಹಣ್ಣುಗಳು ಮತ್ತು ತರಕಾರಿಗಳು ಆಹಾರದಲ್ಲಿ ಪ್ರಮುಖ ಸ್ಥಾನವನ್ನು ಪಡೆದುಕೊಂಡಿದೆ. ಇವುಗಳು ಮಾನವನ ಆರೋಗ್ಯಕ್ಕೆ ಅಗತ್ಯವಾದ ವಿಟಮಿನ್, ಖನಿಜಗಳು ಮತ್ತು ನಾರಿನ ಪದಾರ್ಥಗಳನ್ನು ಒದಗಿಸುತ್ತವೆ. ಹಣ್ಣುಗಳು ಮತ್ತು ತರಕಾರಿಗಳ ಉತ್ಪಾದನೆಯಲ್ಲಿ ಭಾರತ ಎರಡನೇ ಸ್ಥಾನವನ್ನು ಹೊಂದಿದೆ. ಅವುಗಳಲ್ಲಿ ಬಾಳೆಹಣ್ಣು ಮತ್ತು ಮಾವಿನ ಹಣ್ಣುಗಳು ಬಹಳ ಮುಖ್ಯವಾದವುಗಳಾಗಿವೆ. ಸೇಬು ಹಿಮಾಚಲಪ್ರದೇಶ, ಕಾಶ್ಮೀರ ಮತ್ತು ಉತ್ತರಾಂಚಲ ರಾಜ್ಯಗಳಲ್ಲಿಯೂ, ಬಾಳೆಹಣ್ಣು ತಮಿಳುನಾಡು ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿಯೂ, ಕಿತ್ತಳೆಹಣ್ಣು ಮಹಾರಾಷ್ಟ್ರ, ಉತ್ತರಾಂಚಲ, ಹಿಮಾಚಲ ಪ್ರದೇಶ, ಜಮ್ಮು ಕಾಶ್ಮೀರ, ಆಂಧ್ರಪ್ರದೇಶ, ತಮಿಳುನಾಡು ಮತ್ತು ಕರ್ನಾಟಕ ರಾಜ್ಯಗಳಲ್ಲಿಯೂ, ದ್ರಾಕ್ಷಿಯನ್ನು ಉತ್ತರಾಂಚಲ, ಹಿಮಾಚಲ ಪ್ರದೇಶ, ಜಮ್ಮು ಕಾಶ್ಮೀರ, ಮಹಾರಾಷ್ಟ್ರ, ಆಂಧ್ರ ಪ್ರದೇಶ, ತಮಿಳುನಾಡು ಮತ್ತು ಕರ್ನಾಟಕ ರಾಜ್ಯಗಳಲ್ಲಿ ಅಧಿಕ ಪ್ರಮಾಣದಲ್ಲಿ ಉತ್ಪಾದಿಸಲಾಗುತ್ತದೆ. ಜಗತ್ತಿನ ತರಕಾರಿಯ ಒಟ್ಟು ಉತ್ಪಾದನೆಯಲ್ಲಿ ಭಾರತದ ಕೊಡುಗೆ ಶೇ.13 ರಷ್ಟಾಗಿದೆ.

ಪಶುಸಂಗೋಪನೆ ಮತ್ತು ಮೀನುಗಾರಿಕೆ

ಪಶುಸಂಗೋಪನೆ ಹಾಗೂ ಹಾಲು ಉತ್ಪಾದನೆಯೂ ರಾಷ್ಟ್ರದ ಸಾಮಾಜಿಕ ಆರ್ಥಿಕಾಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ವ್ಯವಸಾಯದ ಒಟ್ಟು ಉತ್ಪಾದನೆಯಲ್ಲಿ ಶೇ.25 ರಷ್ಟು ಪಶುಸಂಗೋಪನೆಯಿಂದ ದೊರೆಯುವುದೆಂದು ಅಂದಾಜಿಸಲಾಗಿದೆ. ಪಶುಸಂಗೋಪನೆಯು ಕುಟುಂಬದ ಆದಾಯ ಹಾಗೂ ಉದ್ಯೋಗಾವಕಾಶಕ್ಕೆ ದಾರಿ ಮಾಡಿಕೊಟ್ಟಿದೆ. ವಿಶೇಷವಾಗಿ ಭೂ ರಹಿತ ಬೇಸಾಯಗಳನ್ನು ಸಣ್ಣಬೇಸಾಯಗಾರರು ಮತ್ತು ಕೂಲಿ ಕಾರ್ಮಿಕರು, ಪಶು ಸಂಗೋಪನೆಯನ್ನು ಅವಲಂಬಿಸಿದ್ದಾರೆ. ಅವುಗಳ ಉತ್ಪಾದನೆ ಹೆಚ್ಚಳವೂ ಸಾಂಪ್ರದಾಯಕ ಪದ್ಧತಿಯಲ್ಲಿ ಉಂಟಾದ ಬೆಳವಣಿಗೆಯಿಂದಾಗಿ, ಅತ್ಯಂತ ಶ್ರೇಷ್ಠ ಕಾರ್ಯ ನಿರ್ವಹಣೆಯಿಂದ ಹಾಲು ಉತ್ಪಾದನೆ, ಕೋಳಿ ಸಾಕಾಣಿಕೆ ಮತ್ತು ಮೊಟ್ಟೆ ಉತ್ಪಾದನೆಯಲ್ಲಿ ಮಹತ್ವದ ಬದಲಾವಣೆ ಉಂಟಾಗಿದೆ.



ಹೈನುಗಾರಿಕೆ.

ಮೀನುಗಾರಿಕೆಯು ಒಂದು ಚಿಕ್ಕ ಕಸುಬಾಗಿದೆ. ಹೀಗಿದ್ದರೂ ಬಹು ಸಾಲು ಪದರು ಮೀನುಗಾರಿಕೆ (Multi layer fish culture) ಮೂಲಕ ಕಳೆದ ಹತ್ತು ವರ್ಷಗಳಲ್ಲಿ ಮೀನು ಉತ್ಪಾದನೆ ಅಧಿಕ ಬೆಳವಣಿಗೆ ಹೊಂದಿದೆ.

ಜೈವಿಕ ತಂತ್ರಜ್ಞಾನ ಬೆಳವಣಿಗೆ

1950ರಲ್ಲಿ ರಾಷ್ಟ್ರೀಯ ಜೈವಿಕ ತಂತ್ರಜ್ಞಾನ ಸಂಶೋಧನಾ ಕೇಂದ್ರವನ್ನು ಪ್ರಾರಂಭಿಸಲಾಯಿತು. ಇದು ಸಂಶೋಧನೆಗಳನ್ನು ಮಾಡುವುದು, ಅಣುಜೀವಶಾಸ್ತ್ರ (Molecular Biology) ಮತ್ತು ಜೈವಿಕ ತಂತ್ರಜ್ಞಾನವನ್ನು (Bio technology) ಬೋಧಿಸುವುದು ಮತ್ತು ತರಬೇತಿಯನ್ನು ನೀಡುತ್ತದೆ.1985ರಲ್ಲಿ ರಾಷ್ಟ್ರೀಯ ಸಂಶೋಧನಾ ಕೇಂದ್ರ ಪ್ರಾರಂಭವಾಯಿತು.

ಭಾರತದ ವ್ಯವಸಾಯದಲ್ಲಿರುವ ಸವಾಲುಗಳು

1. ಭಾರತದ ವ್ಯವಸಾಯವನ್ನು



ಮಾನ್ಸೂನ್ ಮಳೆ ಬೀಳುವಿಕೆ, ವಿಫಲತೆ

ಮಾನ್ಸೂನ್ ಮಾರುತಗಳ ಜೊತೆಗಿನ ಜೂಜಾಟ ಎಂದು ವರ್ಣಿಸಲಾಗಿದೆ. ಮಾನ್ಸೂನ್ ಮಾರುತಗಳು, ಸಕಾಲಕ್ಕೆ ಸರಿಯಾಗಿ ಬೀಸುವುದಿಲ್ಲ. ಇದರಿಂದಾಗಿ ವ್ಯವಸಾಯಕ್ಕೆ ಅನುಕೂಲಕರವಾದ ಪರಿಸ್ಥಿತಿಯನ್ನು ಉಂಟುಮಾಡುವುದಿಲ್ಲ.

2. ಹೆಚ್ಚುತ್ತಿರುವ ರಸ್ತೆಗಳು, ರೈಲುಮಾರ್ಗಗಳು, ಮತ್ತು ಕಾಲುವೆಗಳ ನಿರ್ಮಾಣದಿಂದಾಗಿ ಮಳೆ ನೀರು ಹರಿಯುವುದಕ್ಕೆ ತಡೆಯಾಗಿ ಪ್ರವಾಹಗಳು ಉಂಟಾಗುತ್ತದೆ. ಸ್ವಾಭಾವಿಕ ಕಾಲುವೆಗಳಲ್ಲಿ ನೀರಿನ ಚಲನೆ ತಡೆಯಾಗುತ್ತದೆ. ಮುಂಗಾರು ಬೆಳೆಗಳು ನಾಶವಾಗುತ್ತವೆ. ಅಲ್ಲದೆ ಚಳಿಗಾಲದ ಪೈರು ಹಾಕುವುದರಲ್ಲಿಯೂ ತಡವಾಗುತ್ತದೆ.

3. ಕೈಗಾರಿಕೆಗಳು, ವಸತಿ ಗೃಹಗಳ ನಿರ್ಮಾಣದಿಂದಾಗಿ ಕೃಷಿಭೂಮಿಯು ಕಡಿಮೆಯಾಗುತ್ತಲೇ ಬರುತ್ತಿದೆ.



ನಗರೀಕರಣ

4. ಜಾಗತಿಕ ವಾಯುಗುಣದ ಬದಲಾವಣೆ ಬೆಳೆಗಳು, ಮಣ್ಣು ಪಶುಸಂಗೋಪನೆ ಮತ್ತು ಕೀಟಗಳ ಮೂಲಕ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಕೃಷಿ ಮೇಲೆ ಪರಿಣಾಮ ಬೀರುತ್ತದೆ.

5. ಅಧಿಕ ವ್ಯವಸಾಯದ ಉತ್ಪಾದನೆಗಾಗಿ ಇದುವರೆಗೂ ಅನುಸರಿಸಿದ ವಿಧಾನಗಳಿಂದಾಗಿ ಪರಿಸರ ಮತ್ತು ಸ್ವಾಭಾವಿಕ ಸಂಪನ್ಮೂಲಗಳು ನಾಶವಾಗುತ್ತಿರುವುದರಿಂದ ದೊಡ್ಡ ಸಮಸ್ಯೆಗಳು ಎದುರಾಗಿದೆ. ಭವಿಷ್ಯದಲ್ಲಿ ಬೆಳೆಯುವ ಪದಾರ್ಥಗಳ ಪ್ರಮಾಣವನ್ನು ಹೆಚ್ಚಿಸುವುದು ಮಾತ್ರವಲ್ಲದೆ ಅವುಗಳ ಗುಣಮಟ್ಟವನ್ನು ದೃಢಪಡಿಸುವ ರೀತಿಯಲ್ಲಿ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಬೇಕು. ಇದರಿಂದ ವ್ಯವಸಾಯದ ಉತ್ಪಾದನೆಯಲ್ಲಿ ಸ್ಥಿರವಾದ ಬೆಳವಣಿಗೆಯನ್ನು ಹೊಂದಬಹುದಾಗಿದೆ.

ಈಗ ಭಾರತದ ಆಹಾರದ ಉತ್ಪಾದನೆಯಲ್ಲಿ ಸ್ವಾವಲಂಬನೆ ಹೊಂದಿದೆ ಎಂದು ಹೇಳಬಹುದು. ಆದರೆ ಕೈಗಾರಿಕೆಗಳು ಮತ್ತು ಸೇವಾ ಕ್ಷೇತ್ರಗಳಿಗೆ ಹೋಲಿಸಿದರೆ ವ್ಯವಸಾಯ ಕ್ಷೇತ್ರದಲ್ಲಿನ ಬೆಳವಣಿಗೆ ಕಡಿಮೆಯಾಗಿದೆ.

ಭವಿಷ್ಯದಲ್ಲಿ ಭಾರತದ ಜನಸಂಖ್ಯೆ 2020ನೇ ವರ್ಷದೊಳಗೆ ಸುಮಾರು 1300 ಮಿಲಿಯನ್‌ಗಳಷ್ಟು ಹೆಚ್ಚಾಗುತ್ತದೆ. ಆ ಸಂದರ್ಭದಲ್ಲಿ ನೈಸರ್ಗಿಕ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಳ್ಳುವುದರಿಂದ, ರೈತರು ಮಾರುಕಟ್ಟೆಯನ್ನು ಹುಡುಕಿಕೊಂಡು ಹೋಗುವ ಸ್ಥಿತಿ ಹೆಚ್ಚುತ್ತಿರುವುದರಿಂದ ಸಾರ್ವಜನಿಕ ಶಿಕ್ಷಣ ಕೊಡುವುದರಿಂದ ಮಾತ್ರ ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸಬಹುದಾಗಿದೆ.

ಅಭ್ಯಾಸ

ಅ. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1. ಭತ್ತ ಬೆಳೆಯಲು ಯೋಗ್ಯವಾದ ಮಣ್ಣು_____

ಅ) ಕಪ್ಪು ಮಣ್ಣು ಈ)ಜಂಬಿಟ್ಟಿಗೆ ಮಣ್ಣು ಇ)ಮೆಕ್ಕಲುಮಣ್ಣು ಆ) ಕೆಂಪು ಮಣ್ಣು

2. ಚಹ ಮತ್ತು ಕಾಫಿ ಬೆಳೆ ಅಧಿಕವಾಗಿ ಬೆಳೆಯುವ ಪ್ರದೇಶ_____

ಅ) ಬೆಟ್ಟದ ಇಳಿಜಾರು ಅ)ಬಯಲು ಇ)ಕರಾವಳಿಮೈದಾನ ಈ)ನದಿ ಕಣಿವೆಗಳು

3. ಬರಗಾಲದಲ್ಲಿ ಬೆಳೆಯುವ ಬೆಳೆ _____

ಅ) ಭತ್ತ ಆ) ಗೋಧಿ ಇ) ಸೆಣಬು ಈ) ಸಣ್ಣ ಕಾಳುಗಳು

4. ಹತ್ತಿ ಒಂದು _____ .

ಅ) ಆಹಾರ ಬೆಳೆ ಆ) ವಾಣಿಜ್ಯ ಬೆಳೆ ಇ) ತೋಟಗಾರಿಕೆ ಬೆಳೆ ಈ) ಸಣ್ಣಕಾಳುಗಳ ಬೆಳೆ

5. ಸ್ಥಿರವಾದ ಆಹಾರದ ಬೆಳೆಗಳು_____

ಅ)ಭತ್ತ ಮತ್ತು ಗೋಧಿ ಆ) ಕಾಫಿ ಮತ್ತು ಚಹ

ಇ)ಹತ್ತಿ ಮತ್ತು ಸೆಣಬು ಈ) ಹಣ್ಣುಗಳು ಮತ್ತು ತರಕಾರಿ.

ಆ. ಹೊಂದಿಸಿ ಬರೆಯಿರಿ.

1.	ಗೋಧಿ	ಪಶ್ಚಿಮ ಬಂಗಾಳ
2.	ಕಬ್ಬು	ಕೇರಳ
3.	ಸೇಬು	ಉತ್ತರ ಪ್ರದೇಶ
4.	ರಬ್ಬರ್	ಪಂಜಾಬ್
5.	ಸೆಣಬು	ಹಿಮಾಚಲ ಪ್ರದೇಶ

ಇ. ವ್ಯತ್ಯಾಸಗಳನ್ನು ಬರೆಯಿರಿ.

1. ಜೀವನಾಧಾರ ಮತ್ತು ವಾಣಿಜ್ಯ ಬೇಸಾಯ
2. ಖಾರಿಫ್ ಮತ್ತು ರಾಬಿ ಬೆಳೆಗಳು
3. ಏಕ ಬೆಳೆ ಮತ್ತು ದ್ವಿ ಬೆಳೆ ಬೇಸಾಯ

ಈ. ಸಂಕ್ಷಿಪ್ತವಾಗಿ ಉತ್ತರಿಸಿ.

1. ವ್ಯವಸಾಯವನ್ನು ನಿರ್ಧರಿಸುವ ಅಂಶಗಳಾವುವು?
2. ವ್ಯವಸಾಯದ ವಿಧಗಳಾವುವು?
3. ಭಾರತದ ವ್ಯವಸಾಯದ ಕಾಲಗಳಾವುವು?
4. ಸಣ್ಣ ಕಾಳಿನ ಬೆಳೆಗಳನ್ನು ಎಲ್ಲಿ ಏಕೆ ಬೆಳೆಯಲಾಗುತ್ತದೆ?
5. ಹತ್ತಿ ಬೆಳೆಯುವ ಪ್ರದೇಶಗಳನ್ನು ಹೆಸರಿಸಿ.
6. ತೋಟಗಾರಿಕೆ ಬೆಳೆಗಳಾವುವು?

ಉ. ಒಂದು ಪುಟದಲ್ಲಿ ಉತ್ತರಿಸಿ.

1. ಜೈವಿಕ ತಂತ್ರಜ್ಞಾನ ಬಳಕೆಯಿಂದ ಉಂಟಾಗುವ ಅನುಕೂಲಗಳಾವುವು?

2. ಭಾರತದ ವ್ಯವಸಾಯದಲ್ಲಿರುವ ಯಾವುದಾದರು ಮೂರು ಸಮಸ್ಯೆಗಳನ್ನು ವಿವರಿಸಿ.

ಊ. ಭಾರತದ ಭೂಪಟದಲ್ಲಿ ಕೆಳಗೆ ಕೊಟ್ಟಿರುವ ಬೆಳೆಗಳನ್ನು ಬೆಳೆಯುವ ಪ್ರದೇಶಗಳನ್ನು ಗುರುತಿಸಿ.

1. ಹತ್ತಿ 2. ಸೆಣಬು 3. ಭತ್ತ

4. ಚಹ ಮತ್ತು ಕಾಫಿ 5. ಗೋಧಿ

ಚಟುವಟಿಕೆಗಳು

ಭತ್ತ ಬೆಳೆಯುವ ಪ್ರದೇಶ ಆಥವಾ ಚಹ ತೋಟಕ್ಕೆ ಭೇಟಿ ನೀಡಿ ಅಲ್ಲಿ ಬೆಳೆ ಬೆಳೆಯುವ ವಿಧಾನವನ್ನು ವೀಕ್ಷಿಸಿ ವರದಿಯನ್ನು ತಯಾರಿಸಿ.

5. ಭಾರತ – ಕೈಗಾರಿಕೆಗಳು

ಒಂದು ದೇಶದ ನೈಸರ್ಗಿಕ ಸಂಪನ್ಮೂಲಗಳನ್ನು ಉಪಯುಕ್ತ ವಸ್ತುಗಳನ್ನಾಗಿ ಪರಿವರ್ತಿಸುವುದನ್ನೇ ಉತ್ಪತ್ತಿ ಎಂದು ಕರೆಯುವರು. ಆದುದರಿಂದ ಒಂದು ದೇಶದ ಆರ್ಥಿಕಾಭಿವೃದ್ಧಿಯು ಕೈಗಾರಿಕೆಯನ್ನು ಅವಲಂಭಿಸುತ್ತದೆ. ಭಾರತವು ಅತ್ಯಧಿಕ ನೈಸರ್ಗಿಕ ಸಂಪನ್ಮೂಲಗಳನ್ನು ಹೊಂದಿದ ರಾಷ್ಟ್ರ. ಈ ಸಂಪನ್ಮೂಲಗಳು ಅರಣ್ಯ ಉತ್ಪನ್ನ, ಕೃಷಿ ಉತ್ಪನ್ನಗಳು ಮತ್ತು ಖನಿಜ ಸಂಪನ್ಮೂಲಗಳನ್ನು ಒಳಗೊಂಡಿದೆ. ಇವುಗಳಲ್ಲಿ ಕೆಲವು ಸಂಪನ್ಮೂಲಗಳನ್ನು ನೇರವಾಗಿ ಬಳಸಬಹುದು. ಆದರೆ ಕೆಲವು ಸಂಪನ್ಮೂಲಗಳನ್ನು ಶುದ್ಧೀಕರಿಸಬೇಕು. ಉದಾಹರಣೆಗೆ ಹತ್ತಿಯನ್ನು ಕ್ರಮಬದ್ಧಗೂಳಿಸಿ ಸಿದ್ಧವಸ್ತುಗಳಾಗಿ ಪರಿವರ್ತಿಸಿದ ನಂತರವೇ ಉಪಯೋಗಿಸಲು ಸಾಧ್ಯ. ಆದುದರಿಂದ ಹತ್ತಿಯು ಬೇಸಾಯದ ಮೂಲವಸ್ತುವಾಗಿದೆ . ಅದೇ ರೀತಿ ಕಚ್ಚಾ ತೈಲವನ್ನು ಕ್ರಮಬದ್ಧವಾಗಿ ಶುದ್ಧೀಕರಿಸುವುದರ ಮೂಲಕ ಪೆಟ್ರೋಲ್, ಡೀಸಲ್, ಸೀಮೆಎಣ್ಣೆ ಮತ್ತು ಗ್ಯಾಸೊಲಿನ್ (Gasoline) ನಂತಹ ವಸ್ತುಗಳನ್ನು ಪಡೆಯಬಹುದು.

ಭಾರತೀಯರ ಪ್ರಧಾನ ಕಸಬು ವ್ಯವಸಾಯವೇ ಆಗಿದ್ದರೂ ಪಂಚವಾರ್ಷಿಕ ಯೋಜನೆಗಳ ಮೂಲಕ ಕೈಗಾರಿಕೆಗಳು ಅದ್ಭುತವಾದ ಬೆಳವಣಿಗೆಯಾಗಿರುವುದರ ಜೊತೆಗೆ ಜನರಿಗೆ ಅಪಾರ ಸಂಖ್ಯೆಯ ಉದ್ಯೋಗಾವಕಾಶವನ್ನು ಕಲ್ಪಿಸಿದೆ. ಇದರಿಂದ ಜನರ ಜೀವನ ಮಟ್ಟವು ಅಭಿವೃದ್ಧಿಯಾಗುತ್ತ ಬರುತ್ತದೆ.

ಕೈಗಾರಿಕಾ ಸ್ಥಾಪನೆಗೆ ಪ್ರಭಾವ ಬೀರುವ ಅಂಶಗಳು

ಕೈಗಾರಿಕೆ ಸ್ಥಾಪನೆಯನ್ನು ನಿರ್ಧರಿಸುವ ಅಂಶಗಳೆಂದರೆ ಮೂಲವಸ್ತುಗಳು, ಶಕ್ತಿಸಂಪನ್ಮೂಲ, ಸಾರಿಗೆ, ಸಂಪರ್ಕ, ಮಾನವ ಸಂಪನ್ಮೂಲ, ಜಲ ಸಂಪತ್ತು, ಮಾರುಕಟ್ಟೆ , ಮತ್ತು ಸರ್ಕಾರದ ನೀತಿಗಳು.

ಮೂಲವಸ್ತುಗಳು

ಕೈಗಾರಿಕೆಗಳು ಮೂಲವಸ್ತುಗಳು ದೊರೆಯುವ ಪ್ರದೇಶಗಳಿಗೆ ಅನುಗುಣವಾಗಿ ಸ್ಥಾಪನೆಯಾಗುತ್ತವೆ. ಉದಾಹರಣೆಗೆ ಸಕ್ಕರೆ ಕಾರ್ಖಾನೆ ಮೂಲವಸ್ತುಗಳು(ಕಬ್ಬು ಬೆಳೆಯುವ ಪ್ರದೇಶ) ದೊರೆಯುವ ಪ್ರದೇಶಗಳ ಸಮೀಪದಲ್ಲಿಯೇ ಸ್ಥಾಪನೆಯಾಗಿವೆ. ಏಕೆಂದರೆ ಕಬ್ಬು ತೂಕ ಕಡಿಮೆಯಾಗುವ ವಸ್ತುವಾಗಿದೆ, ಅಲ್ಲದೆ ಕಬ್ಬನ್ನು ಕ್ರಮಬದ್ಧಗೊಳಿಸುವಾಗ ಅದರ ತೂಕದಲ್ಲಿ ಶೇಕಡ 10 ರಷ್ಟು ಮಾತ್ರ ಸಕ್ಕರೆಯು ದೊರೆಯುತ್ತದೆ.

ಶಕ್ತಿ ಸಂಪನ್ಮೂಲ

ಬಹುತೇಕ ಕೈಗಾರಿಕೆಗಳು ಮೂಲವಸ್ತುಗಳು ದೊರೆಯುವ ಪ್ರದೇಶದ ಸಮೀಪದಲ್ಲಿ ಸ್ಥಾಪನೆಯಾಗತ್ತವೆ. ಮೂಲವಸ್ತುಗಳನ್ನು ಕ್ರಮಬದ್ಧಗೊಳಿಸುವುದಕ್ಕೆ ಶಕ್ತಿಸಂಪನ್ಮೂಲಗಳು ಅವಶ್ಯಕವಾಗಿರುತ್ತದೆ. ಉದಾಹರಣೆಗೆ ಸಾಮಾನ್ಯವಾಗಿ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳು ಕಲ್ಲಿದ್ದಲು ಗಣಿ ಸಮೀಪದಲ್ಲಿವೆ. ಏಕೆಂದರೆ 1ಟನ್ ಕಬ್ಬಿಣದ ಅದಿರನ್ನು ಕರಗಿಸಲು 5ಟನ್ ಕಲ್ಲಿದ್ದಲು ಬೇಕಾಗುತ್ತದೆ.



ದಾಮೋದರ ನದಿಕಣಿವೆ

ಸಾರಿಗೆಸಂಪರ್ಕ

ಮೂಲವಸ್ತುಗಳನ್ನು ಕೈಗಾರಿಕೆಗಳಿಗೂ ಸಿದ್ಧವಸ್ತುಗಳನ್ನು ಮಾರುಕಟ್ಟೆಗಳಿಗೂ ಸಾಗಿಸಲು ಸಾರಿಗೆಸಂಪರ್ಕವು ಒಂದು ಪ್ರಮುಖವಾದ ಅಂಶವಾಗಿ ಕಾರ್ಯನಿರ್ವಹಿಸುತ್ತದೆ. ಉದಾಹರಣೆಗೆ ಕಬ್ಬಿಣ, ಉಕ್ಕಿನ ಕೈಗಾರಿಕೆ ಮತ್ತು ಎಣ್ಣೆ ಶುದ್ಧೀಕರಣ ಕೇಂದ್ರ ರೈಲ್ವೆನಿಲ್ದಾಣದ ಸಮೀಪದಲ್ಲಿ ಅಥವಾ ಬಂದರುಗಳ ಸಮೀಪದಲ್ಲಿ ಸ್ಥಾಪಿಸುವ ಕಾರಣದಿಂದ ಅವುಗಳನ್ನು

ಸಾಗಾಣಿಕೆ ಮಾಡುವ ಸಾರಿಗೆಯು ವೆಚ್ಚ ಕಡಿಮೆಯಾಗುತ್ತದೆ.



ತೈಲ ಶುದ್ಧೀಕರಣ ಕೇಂದ್ರ

ಮಾನವಶಕ್ತಿ

ತರಬೇತಿ ಕೌಶಲ್ಯವಿರುವವರು ಮತ್ತು ತರಬೇತಿ ಕೌಶಲ್ಯವಿಲ್ಲದ ಮಾನವ ಶಕ್ತಿ ಎಂಬುದು ಕೈಗಾರಿಕಾ ಸ್ಥಾಪನೆಗಳಿಗೆ ಒಂದು ಪ್ರಮುಖವಾದ ಅಂಶವಾಗಿದೆ. ಸಾಕಷ್ಟು ಕೌಶಲ್ಯ ಮತ್ತು ಕಡಿಮೆ ಕೌಶಲ್ಯ ಹೊಂದಿದ ಕಾರ್ಮಿಕರು ನಗರ ಪ್ರದೇಶದಲ್ಲಿ ದೊರಕುವುದಕ್ಕೆ ಕಾರಣವೇನೆಂದರೆ, ಗ್ರಾಮಗಳಿಂದ ಮಹಾನಗರಗಳಿಗೆ ಹೋಗಿ ನೆಲೆಸುವುದಾಗಿದೆ. ಉದಾಹರಣೆಗೆ ಮುಂಬೈ ಮತ್ತು ಚೆನ್ನೈ ಯಂತಹ ಮಹಾನಗರಗಳು ಸಮೀಪದಲ್ಲಿರುವ ನಗರಗಳಿಂದ ಮಾನವಶಕ್ತಿ ಸಂಪನ್ಮೂಲವನ್ನು ಪಡೆದುಕೊಳ್ಳುತ್ತವೆ.

ಜಲಸಂಪನ್ಮೂಲ

ನೀರು ಉಕ್ಕು, ನೇಯ್ಗೆ ಕೈಗಾರಿಕೆ, ರೇಯಾನ್ ಮತ್ತು ಕಾಗದ ಮೊದಲಾದ ಕೈಗಾರಿಕೆಗಳಿಗೆ ಅತ್ಯಾವಶ್ಯಕವಾದುದು. ಉದಾಹರಣೆಗೆ, ಒಂದು ಟನ್ ಉಕ್ಕನ್ನು ತಂಪುಮಾಡಲು 300 ಟನ್ ನೀರು ಬೇಕಾಗುತ್ತದೆ.1ಟನ್ ರೇಯಾನನ್ನು ಶುದ್ಧೀಕರಿಸಲು 100ಟನ್ ನೀರು ಬೇಕಾಗುತ್ತದೆ. ಆದುದರಿಂದ ಮೇಲ್ಕಂಡ ಕೈಗಾರಿಕೆಗಳನ್ನು ನದಿಗಳು, ಕಾಲುವೆಗಳು ಅಥವಾ ಸರೋವರಗಳ ಸಮೀಪದಲ್ಲಿ ಸ್ಥಾಪಿಸಲಾಗುತ್ತದೆ.

ಮಾರುಕಟ್ಟೆ

ಅಧಿಕ ಬೇಡಿಕೆ ಮತ್ತು ಕೊಂಡುಕೊಳ್ಳುವ ಸಾಮರ್ಥ್ಯ ಎರಡನ್ನು ಮಾರುಕಟ್ಟೆಯು ನಿರ್ಧರಿಸುತ್ತದೆ. ಆದುದರಿಂದ ಬಹುತೇಕ ಕೈಗಾರಿಕೆಗಳು ಅನುಭೋಗಿಗಳು ಅಧಿಕವಾಗಿರುವ ಪ್ರದೇಶಗಳಲ್ಲಿ ಕಂಡುಬರುತ್ತವೆ. ಏಕೆಂದರೆ ಸಾಗಾಣಿಕೆ ವೆಚ್ಚ ಕಡಿಮೆಯಾಗುವುದಲ್ಲದೆ ಕಡಿಮೆ ಬೆಲೆಯಲ್ಲಿ ವಸ್ತುಗಳು ದೊರೆಯುತ್ತವೆ.

ಸರ್ಕಾರದ ನೀತಿಗಳು

ಅನೇಕವಾಗಿ ಪ್ರತಿಯೊಂದು ದೇಶದಲ್ಲೂ ಆಯಾ ದೇಶದ ಸರ್ಕಾರದ ನೀತಿಯು ಕಾರ್ಖಾನೆಗಳ ಸ್ಥಾಪನೆಯಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತದೆ. ಪ್ರಾದೇಶಿಕ ಅಸಮತೋಲನವನ್ನು ಹೋಗಲಾಡಿಸುವ ಸಲುವಾಗಿ ರಾಜ್ಯ ಸರ್ಕಾರವು ನಿರ್ದಿಷ್ಟ ಪ್ರದೇಶಗಳನ್ನು ಕೈಗಾರಿಕಾ ವಲಯವನ್ನಾಗಿ ಗುರುತಿಸಿದೆ. ಈ ವಲಯಗಳು ಸರ್ಕಾರದ ಸವಲತ್ತು ಪಡೆದುಕೊಳ್ಳುವುದರೊಡನೆ ಹಿಂದುಳಿದ ಪ್ರದೇಶಗಳಲ್ಲಿ ಕೈಗಾರಿಕೆಯನ್ನು ಅಭಿವೃದ್ಧಿ ಹೊಂದಲು ಸಹಾಯಮಾಡುತ್ತದೆ.

ಇತ್ತೀಚಿನ ದಿನಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯಿಂದ ಭೌಗೋಳಿಕ ಅಂಶಗಳು ಮಾನವ ಸಂಪನ್ಮೂಲ ಮತ್ತು ಶಕ್ತಿ ಸಂಪನ್ಮೂಲಗಳು ಕಾರ್ಖಾನೆಗಳನ್ನು ಸ್ಥಾಪಿಸುವುದರಲ್ಲಿ ಇವುಗಳ ಪ್ರಾಮುಖ್ಯತೆ ಕಡಿಮೆ. ಆದುದರಿಂದ ಜಾಗತೀಕರಣ ಮತ್ತು ಮಾರುಕಟ್ಟೆಯಲ್ಲಿ ಸ್ಪರ್ಧಿಸಬೇಕಾಗಿದೆ. ಆ ಸ್ಥಳದಲ್ಲಿ ಹೊಸ ಅಂಶಗಳಾದ ಕೌಶಲ್ಯ, ನಿರ್ವಹಣೆ, ಬಂಡವಾಳ ಮತ್ತು ಉತ್ತಮವಾದ ಉತ್ಪನ್ನಗಳ ರಫ್ತು ಮೊದಲಾದವುಗಳು ಪ್ರಮುಖ ಪಾತ್ರ ವಹಿಸುತ್ತವೆ.

ಕೈಗಾರಿಕೆಗಳ ಬಗೆಗಳು

ಮೂಲವಸ್ತುಗಳನ್ನು ಆಧಾರವಾಗಿಟ್ಟುಕೊಂಡು ಕೈಗಾರಿಕೆಗಳನ್ನು ಕೃಷಿಆಧಾರಿತ ಕೈಗಾರಿಕೆಗಳು, ಅರಣ್ಯಾಧಾರಿತ ಕೈಗಾರಿಕೆಗಳು, ಖನಿಜಾಧಾರಿತ ಕೈಗಾರಿಕೆಗಳೆಂದು ವಿಂಗಡಿಸಬಹುದು.

ಕೃಷಿ ಆಧಾರಿತ ಕೈಗಾರಿಕೆಗಳು

ಇವು ಕೃಷಿ ಉತ್ಪನ್ನಗಳನ್ನು ಮೂಲವಸ್ತುಗಳನ್ನಾಗಿ ಉಪಯೋಗಿಸಿಕೊಳ್ಳುತ್ತವೆ. ಉದಾಹರಣೆಗೆ ಹತ್ತಿಬಟ್ಟೆ ಕೈಗಾರಿಕೆ, ಸೆಣಬು ಕೈಗಾರಿಕೆ, ಸಕ್ಕರೆ ಕೈಗಾರಿಕೆ ಮೊದಲಾದುವುಗಳು.

ಹತ್ತಿಬಟ್ಟೆಕೈಗಾರಿಕೆಗಳು

ಹತ್ತಿ ಕೈಗಾರಿಕೆಗಳು ನಮ್ಮ ದೇಶದಲ್ಲಿ ಬೆಳೆಯುವ ಹತ್ತಿಯನ್ನು ಮೂಲವಸ್ತುವನ್ನಾಗಿ ಉಪಯೋಗಿಸುತ್ತವೆ. ಹತ್ತಿ ಕೈಗಾರಿಕೆಗಳು ಶೇಕಡಾ 14 ರಷ್ಟು ಉತ್ಪಾದನಾ ವಸ್ತುಗಳನ್ನು 35 ಮಿಲಿಯನ್ ಕಾರ್ಮಿಕರಿಗೆ ಉದ್ಯೋಗಾವಕಾಶವನ್ನು ಕಲ್ಪಿಸುತ್ತವೆ.

ರಾಷ್ಟ್ರದ ಒಟ್ಟು ಉತ್ಪಾದನೆಯಲ್ಲಿ ಶೇಕಡಾ 4 ರಷ್ಟು ಪಾಲನ್ನು ಹೊಂದಿದೆ.



ಹತ್ತಿಬಟ್ಟೆ ಕೈಗಾರಿಕೆ

ಮಹಾರಾಷ್ಟ್ರದಲ್ಲಿರುವ ಮುಂಬೈ ಹತ್ತಿ ಬಟ್ಟೆ ಕೈಗಾರಿಕೆಯಲ್ಲಿ ಪ್ರಥಮ ಸ್ಥಾನವನ್ನು ಹೊಂದಿದೆ. ಆಲ್ಲದೆ ಇದನ್ನು ಭಾರತದ ಮ್ಯಾಂಚೆಸ್ಟರ್ ಎಂದು ಕರೆಯುತ್ತಾರೆ.

ಈ ಕೆಳಕಂಡ ಅಂಶಗಳು ಮುಂಬೈ ಹತ್ತಿ ಕೈಗಾರಿಕೆಗಳಿಗೆ ಸಹಾಯಕವಾಗಿದೆ.

- ಬಂದರುಗಳ ನಿರ್ಮಾಣವು ಉತ್ಪಾದಿಸಿದ ವಸ್ತು ಗಳನ್ನು ರಫ್ತುಮಾಡಲು ಅನುಕೂಲವಾಗಿದೆ.
- ಹತ್ತಿ ಬೆಳೆಯುವ ಪ್ರದೇಶಗಳಿಗೂ ಕಾರ್ಖಾನೆಗಳಿಗೂ ನಡುವೆ ಅವಶ್ಯಕವಾದ ರೈಲ್ವೆ ಮತ್ತು ರಸ್ತೆ ಸಾರಿಗೆಯು ಅನುಕೂಲವಾಗಿದೆ.
- ನೂಲಿನ ಉತ್ಪಾದನೆಗೆ ಅವಶ್ಯಕವಾದ ತೇವಾಂಶಭರಿತವಾದ ವಾಯುಗುಣವು ಸಹಾಯಕವಾಗಿದೆ.
- ಬಂಡವಾಳ ಸರಕುಗಳು ಮತ್ತು ಹಣಕಾಸಿನ ಸೌಲಭ್ಯವಿದೆ.
- ಅಧಿಕ ಸಂಖ್ಯೆಯ ಕಾರ್ಮಿಕರು ದೊರೆಯುತ್ತಾರೆ.

ಹತ್ತಿ ಬಟ್ಟೆ ಕೈಗಾರಿಕೆಗಳು ಪ್ರಮುಖವಾಗಿ ಕಂಡುಬರುವ ರಾಜ್ಯಗಳಾದ ಮಹಾರಾಷ್ಟ್ರ, ಗುಜರಾತ್, ಪಶ್ಚಿಮಬಂಗಾಳ, ಉತ್ತರಪ್ರದೇಶ ಮತ್ತು ತಮಿಳುನಾಡು. ತಮಿಳುನಾಡಿನಲ್ಲಿ ಕೊಯಮತ್ತೂರು, ಈರೋಡು, ತಿರುಪ್ಪೂರ್, ಕರೂರ್, ಚೆನ್ನೈ, ತಿರುನಲ್ವೇಲಿ, ಮಧುರೈ, ತೂತ್ತುಕುಡಿ, ಸೇಲಂ ಮತ್ತು ವಿರುದುನಗರ ಮೊದಲಾದುವು ಹತ್ತಿ ಬಟ್ಟೆಯ ಕೈಗಾರಿಕಾ ಕೇಂದ್ರಗಳಾಗಿವೆ.

ವಿಶ್ವದಲ್ಲಿ ಹತ್ತಿ ಬಟ್ಟೆಯನ್ನು ಉತ್ಪಾದಿಸುವ ದೇಶಗಳಲ್ಲಿ ಭಾರತ ಮೂರನೇ ಸ್ಥಾನವನ್ನು, ರಫ್ತಿನಲ್ಲಿ ಎರಡನೇ ಸ್ಥಾನವನ್ನು, ಭಾರತದ ಕೈಗಾರಿಕೆಯಲ್ಲಿ ಮೂರನೇ ಸ್ಥಾನವನ್ನು ಪಡೆದುಕೊಂಡಿದೆ.

ಸೆಣಬು ಕೈಗಾರಿಕೆ

ಸೆಣಬು ಉತ್ಪತ್ತಿ ಭಾರತದ ಆರ್ಥಿಕತೆಯಲ್ಲಿ ಪ್ರಮುಖವಾದ ಪಾತ್ರವಹಿಸುತ್ತದೆ. ಇದು ಕೃಷಿ ಮತ್ತು ಕೈಗಾರಿಕೆ ಎರಡರಲ್ಲೂ ಅಧಿಕ ಪ್ರಮಾಣದ ಉದ್ಯೋಗಾವಕಾಶವನ್ನು ನೀಡುತ್ತದೆ. 4 ಮಿಲಿಯನ್ ಬೇಸಾಯಗಾರರು ಸೆಣಬಿನ ಬೇಸಾಯದಲ್ಲಿ ನಿರತರಾಗಿದ್ದಾರೆ.



ಸೆಣಬಿನ ಕೈಗಾರಿಕೆ

ಸೆಣಬಿನ ಉತ್ಪತ್ತಿಯಲ್ಲಿ ಭಾರತವು ಪ್ರಥಮ ಸ್ಥಾನವನ್ನು ಪಡೆದುಕೊಂಡಿದೆ. ರಫ್ತಿನಲ್ಲಿ ಬಾಂಗ್ಲಾದೇಶದ ನಂತರದ ಸ್ಥಾನವನ್ನು ಪಡೆದಿದೆ. ಸೆಣಬಿನ ಉತ್ಪನ್ನ, ಸೆಣಬಿನ ಚೀಲಗಳು, ಗೂಢಾಚಾರಕ್ಕೆ ಬಳಸುವ ಮಂದವಾದ ಬಟ್ಟೆ, ಲಕೋಟೆ ತಯಾರಿಸಲು ಬಳಸುವ ತೆಳುವಾದ ಹಾಳೆಗಳು, ಬಲೆಯಂತಹ ಚೀಲಗಳು, ಗೋಣಿಚೀಲಗಳು, ಗಟ್ಟಿಯಾದ ಬಟ್ಟೆ, ಪ್ರಸ್ತುತ ದಿನಗಳಲ್ಲಿ ಬಳಸುವ ಪ್ಲಾಸ್ಟಿಕ್ ಪೀಠೋಪಕರಣಗಳು, ವಿದ್ಯುಚ್ಛಕ್ತಿಯಿಂದ ರಕ್ಷಿಸುವುದಕ್ಕಾಗಿ ಬಳಸುವ ರಬ್ಬರ್ ತಯಾರಿಕೆ, ಉಣ್ಣೆಯೊಡನೆ ಸೆಣಬನ್ನು ಮಿಶ್ರಣ ಮಾಡಿ ಬಟ್ಟೆಗಳನ್ನು ತಯಾರಿಸುವರು. ಹತ್ತಿನೂಲಿನೊಡನೆ ಮಿಶ್ರಣಮಾಡಿ ಜಮಖಾನೆ ಮತ್ತು ಹಾಸುಗಂಬಳಿಗಳನ್ನು ತಯಾರಿಸುತ್ತಾರೆ.

ಸುಮಾರು ಶೇಕಡಾ 90 ರಷ್ಟು ಸೆಣಬಿನ ಕೈಗಾರಿಕೆಗಳು ಪಶ್ಚಿಮಬಂಗಾಳದ ಹೂಗ್ಲಿ ನದಿತೀರದಲ್ಲಿ ಸ್ಥಾಪನೆಯಾಗಿವೆ. ಇತ್ತೀಚಿನ ದಿನಗಳಲ್ಲಿ ಉತ್ತರ ಪ್ರದೇಶ, ಒಡಿಸ್ಸ, ಬಿಹಾರ ಮತ್ತು ಆಂಧ್ರಪ್ರದೇಶ ಮೊದಲಾದ ರಾಜ್ಯಗಳಲ್ಲಿ ಸೆಣಬಿನ ಕೈಗಾರಿಕೆಗಳು ವಿರಳವಾಗಿ ಕಂಡುಬರುತ್ತವೆ.

ಸಕ್ಕರೆ ಕೈಗಾರಿಕೆಗಳು

*ಭಾರತದ ಸಕ್ಕರೆ ಕೈಗಾರಿಕೆಗಳು ಭಾರತದ ಎರಡನೆಯ ದೊಡ್ಡ ಕೈಗಾರಿಕೆಗಳಾಗಿವೆ. ಸಕ್ಕರೆ ಕೈಗಾರಿಕೆಯು ಕಬ್ಬು ಬೆಳೆಯುವ ಪ್ರದೇಶಗಳಲ್ಲಿ ಸ್ಥಾಪನೆಯಾಗಿವೆ. ಏಕೆಂದರೆ,



ಸಕ್ಕರೆ ಕಾರ್ಖಾನೆಗಳು

- ಕಬ್ಬು ತೂಕವನ್ನು ಕಳೆದುಕೊಳ್ಳುವ ವಸ್ತುವಾಗಿದೆ.
- ಕಬ್ಬಿನಲ್ಲಿರುವ ಸಕ್ಕರೆ ಅಂಶವು ಕಡಿಮೆಯಾಗುವುದರಿಂದ ದೀರ್ಘಕಾಲ ಸಂಗ್ರಹಿಸಿಡಲು ಸಾಧ್ಯವಾಗುವುದಿಲ್ಲ.
- ಅತ್ಯಂತ ದೂರದವರೆಗೆ ಸಾಗಾಣಿಕೆಮಾಡಲು ಸಾಧ್ಯವಿಲ್ಲ.
- ಕಬ್ಬನ್ನು ಕಟಾವು ಮಾಡುವುದು ಮತ್ತು ಅರೆಯುವುದು, ನಿರ್ದಿಷ್ಟ ಕಾಲದಲ್ಲಿ ಮುಗಿದು ಹೋಗುವುದರಿಂದ ಉಳಿದ ದಿನಗಳಲ್ಲಿ ಸಕ್ಕರೆ ಕೈಗಾರಿಕೆಗಳು ಕಾರ್ಯನಿರತವಾಗಿರುವುದಿಲ್ಲ.

ಭಾರತದ ಸಕ್ಕರೆ ಉತ್ಪತ್ತಿಯಲ್ಲಿ ಶೇಕಡಾ. 70 ರಷ್ಟು ಸಕ್ಕರೆಯನ್ನು ಉತ್ತರಪ್ರದೇಶ ಮತ್ತು ಬಿಹಾರ್ ರಾಜ್ಯಗಳು ಮಾತ್ರ ಉತ್ಪಾದಿಸುತ್ತವೆ. ಆದುದರಿಂದ ಈ ಪ್ರದೇಶವನ್ನು ಸಕ್ಕರೆಯ ಕಣಜ ಎಂದು ಕರೆಯುತ್ತಾರೆ. ಮಹಾರಾಷ್ಟ್ರ, ಪಂಜಾಬ್, ಹರಿಯಾಣ, ಕರ್ನಾಟಕ, ತಮಿಳುನಾಡು ಮತ್ತು ಆಂಧ್ರಪ್ರದೇಶ ಮೊದಲಾದ ರಾಜ್ಯಗಳಲ್ಲಿ ಸಕ್ಕರೆ ಕೈಗಾರಿಕೆಗಳು ಅಧಿಕವಾಗಿ ಕಂಡುಬರುತ್ತವೆ. ತಮಿಳುನಾಡಿನಲ್ಲಿ ನೆಲ್ಲಿಕುಪ್ಪಮ್, ಪುಗಲೂರ್, ಕೊಂಬುವುತ್ತೂರು ಮತ್ತು ಪಾಂಡಿಯರಾಜಪುರಂ ಸಕ್ಕರೆ ಉತ್ಪತ್ತಿಗೆ ಪ್ರಸಿದ್ಧಿಯಾದ ಸ್ಥಳಗಳಾಗಿವೆ.

ಭಾರತ ಸರ್ಕಾರವು ಸಕ್ಕರೆ ಮಾರಾಟದಲ್ಲಿ ದ್ವಿಬೆಲೆ ನೀತಿಯನ್ನು ಅನುಸರಿಸುತ್ತದೆ. ಸಕ್ಕರೆ ಕೈಗಾರಿಕೆಯು ತನ್ನ ಉತ್ಪತ್ತಿಯಲ್ಲಿ ಶೇಕಡಾ 40 ರಷ್ಟನ್ನು ಸರ್ಕಾರಕ್ಕೆ ನಿಗಧಿ ಮಾಡಿದ ಬೆಲೆಯಲ್ಲಿ ಕೊಡಬೇಕಾಗುತ್ತದೆ. ಇದನ್ನು ಸರ್ಕಾರವು ನ್ಯಾಯಬೆಲೆ ಅಂಗಡಿಯ ಮೂಲಕ ಮಾರಾಟ ಮಾಡುತ್ತದೆ. ಉಳಿದ ಶೇಕಡ 60 ರಷ್ಟು ಸಕ್ಕರೆ ಉತ್ಪಾದನೆಯನ್ನು ಮುಕ್ತ ಮಾರುಕಟ್ಟೆಯಲ್ಲಿ ಅಧಿಕ ಬೆಲೆಗೆ ಮಾರಾಟ ಮಾಡುತ್ತದೆ.

ಸಕ್ಕರೆ ಉತ್ಪಾದನೆಯಲ್ಲಿ ಪ್ರಪಂಚದಲ್ಲಿ ಭಾರತ ನಾಲ್ಕನೇ ಸ್ಥಾನದಲ್ಲಿದೆ. ಇತರೆ ಮೂರು ರಾಷ್ಟ್ರಗಳು ಕ್ಯೂಬಾ, ಬ್ರೆಜಿಲ್ ಮತ್ತು ರಷ್ಯ. ಭಾರತವು ಹೆಚ್ಚುವರಿಯಾದ ಸಕ್ಕರೆಯನ್ನು ಅಮೇರಿಕಾ, ಮಲೇಷಿಯ, ಇರಾನ್ ಮತ್ತು ಶ್ರೀಲಂಕಾ ಮೊದಲಾದ ದೇಶಗಳಿಗೆ ರಫ್ತುಮಾಡುತ್ತದೆ.

ಅರಣ್ಯ ಆಧಾರಿತ ಕೈಗಾರಿಕೆಗಳು

ಭಾರತ ಅರಣ್ಯ ಸಂಪತ್ತನ್ನು ಹೊಂದಿದ ರಾಷ್ಟ್ರವಾಗಿದೆ. ಈ ಅರಣ್ಯ ಸಂಪತ್ತನ್ನು ಮೂಲವಸ್ತುಗಳಾಗಿ ಉಪಯೋಗಿಸಿಕೊಳ್ಳುವ ಹೆಚ್ಚಿನ ಸಂಖ್ಯೆಯ ಕೈಗಾರಿಕೆಗಳಿವೆ. ಅವುಗಳಲ್ಲಿ ಕಾಗದದ ಕೈಗಾರಿಕೆಗಳು ಬಹುಮುಖ್ಯವಾದುವುಗಳಲ್ಲಿ ಒಂದಾಗಿದೆ.

ಕಾಗದ ಕೈಗಾರಿಕೆ

ಕಾಗದ ಕೈಗಾರಿಕೆಯು ಎಲ್ಲಾ ದೇಶಗಳಿಗೂ ಅತ್ಯಂತ ಅವಶ್ಯಕವಾದ ಒಂದು ಕೈಗಾರಿಕೆಯಾಗಿದೆ.



ಕಾಗದದ ಕೈಗಾರಿಕೆ

ಮರದ ತಿರುಳು, ಬಿದಿರು ಮತ್ತು ಸಬಾಯ್‌ಹುಲ್ಲು, ಪ್ರಯೋಜನವಿಲ್ಲದ ಕಾಗದಗಳು.

ಕಬ್ಬಿನ ಸಿಪ್ಪೆ ಮೊದಲಾದವುಗಳನ್ನು ಮೂಲವಸ್ತುಗಳನ್ನಾಗಿ ಉಪಯೋಗಿಸಿಕೊಳ್ಳುತ್ತವೆ.


ಈ ಕೈಗಾರಿಕೆಯನ್ನು ಭಾರವಾದ ಮೂಲವಸ್ತುಗಳು ಅಧಿಕವಾಗಿಯು, ಮಾರುಕಟ್ಟೆಗೆ ಅತ್ಯಂತ ಸಮೀಪದಲ್ಲಿ ಸ್ಥಾಪನೆಯಾಗಿರುತ್ತವೆ. ಭಾರತವು ಕಾಗದದ ಉತ್ಪಾದನೆಯಲ್ಲಿ ಪ್ರಪಂಚದಲ್ಲಿರುವ ಹದಿನೈದು ರಾಷ್ಟ್ರಗಳಲ್ಲಿ ಒಂದಾಗಿದೆ. ಕಾಗದದ ಉತ್ಪಾದನೆಯಲ್ಲಿ ಅಗ್ರಸ್ಥಾನದಲ್ಲಿರುವ ರಾಜ್ಯಗಳು ಪಶ್ಚಿಮಬಂಗಾಳ, ಮಹಾರಾಷ್ಟ್ರ, ಮಧ್ಯಪ್ರದೇಶ, ಕರ್ನಾಟಕ ಮತ್ತು ಆಂಧ್ರಪ್ರದೇಶ.

ಖನಿಜ ಆಧಾರಿತ ಕೈಗಾರಿಕೆಗಳು

ಖನಿಜ ಸಂಪನ್ಮೂಲಗಳನ್ನು ಅವಲಂಬಿಸಿರುವ ಕೈಗಾರಿಕೆಗಳು ಲೋಹ ಮತ್ತು ಅಲೋಹ ವಸ್ತುಗಳನ್ನು ಮೂಲವಸ್ತುಗಳನ್ನಾಗಿ ಉಪಯೋಗಿಸಿಕೊಳ್ಳುತ್ತವೆ. ಖನಿಜ ಸಂಪತ್ತನ್ನು ಅವಲಂಬಿಸಿದ ಕೈಗಾರಿಕೆಗಳಲ್ಲಿ ಮುಖ್ಯವಾದುದು ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳಾಗಿವೆ.

ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳು

ಭಾರತದಲ್ಲಿ ಮುಖ್ಯವಾದ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳು ಕಲ್ಲಿದ್ದಲುಗಣಿಗಳ ಸಮೀಪದಲ್ಲಿ ಅಥವಾ ಕಬ್ಬಿಣದ ಅದಿರಿನ ಗಣಿಗಾರಿಕೆಯ ಸ್ಥಳಗಳ ಸಮೀಪದಲ್ಲಿ ಸ್ಥಾಪನೆಯಾಗಿವೆ. ಬಹುತೇಕವಾದ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳು ಚೋಟನಾಗಪುರ ಪೀಠಭೂಮಿ ಪ್ರದೇಶದಲ್ಲಿ ಸ್ಥಾಪನೆಯಾಗಬೇಕಾದರೆ ಕಾರಣಗಳು ಈ ಕೆಳಕಂಡಂತಿವೆ.



ಕಬ್ಬಿಣ ಕರಗಿಸುವ ಕಾರ್ಖಾನೆ

ಜಾರ್ಖಂಡ್‌ನಲ್ಲಿರುವ ಜಾರಿಂಬಾ, ಸಿಂಗ್‌ಬಮ್, ಪಶ್ಚಿಮ ಬಂಗಾಳದಲ್ಲಿರುವ ರಾಣಿಗಂಜ್ ಮೊದಲಾದ ಸ್ಥಳಗಳಲ್ಲಿ ಉತ್ತಮವಾದ ಕಲ್ಲಿದ್ದಲು ಹೇರಳವಾಗಿ ದೊರೆಯುತ್ತದೆ.

★ ಲೋಹವನ್ನು ಸುಲಭವಾಗಿ ಕರಗಿಸಲು ಉಪಯೋಗಿಸುವಂತಹ ಹೆಮಟೈಟ್ ಮತ್ತು ಮ್ಯಾಗ್ನಟೈಟ್ ಪಶ್ಚಿಮಬಂಗಾಳ ಮತ್ತು ಜಾರ್ಖಂಡ್ ರಾಜ್ಯಗಳಲ್ಲಿ ದೊರೆಯುತ್ತದೆ.

★ ರಾಂಚಿಯಿಂದ ಸುಣ್ಣದ ಕಲ್ಲು, ಜಬ್ಬಲ್‌ಪುರ ಮತ್ತು ತನ್‌ಬಾದ್‌ನಿಂದ ಸಿಲಿಕಾ, ಮಧ್ಯಪ್ರದೇಶದಿಂದ ಡೊಲೋಮೈಟ್, ಬಿಹಾರಿನಿಂದ ಸ್ಫಟಿಕಶಿಲೆ ಖನಿಜಗಳೆಲ್ಲವೂ ಸಮೀಪದಲ್ಲಿ ದೊರೆಯುತ್ತವೆ.

ಶ್ರೇಷ್ಠವಾದ ಕಬ್ಬಿಣದ ಅದಿರನ್ನು ಜಾರ್ಖಂಡ್, ಬಿಹಾರ್, ಒಡಿಸ್ಸಾ, ಮಧ್ಯಪ್ರದೇಶ, ಛತ್ತಿಸ್‌ಘರ್ ಮತ್ತು ಕರ್ನಾಟಕ ರಾಜ್ಯದಿಂದ ಪಡೆದುಕೊಳ್ಳುತ್ತವೆ.

ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳ ಹಂಚಿಕೆ

ಭಾರತದಲ್ಲಿ 11 ಸಮಗ್ರ ಉಕ್ಕು ಕೈಗಾರಿಕೆಗಳು, 150 ಸಣ್ಣ ಉಕ್ಕಿನ ಕೈಗಾರಿಕೆಗಳು, ಅತ್ಯಧಿಕ ಸಂಖ್ಯೆಯ ಅಸ್ಥಿರವಾದ ಕೈಗಾರಿಕೆಗಳಿವೆ.




ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ


1. ಟಾಟಾ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ (TISCO) - ಜೆಮ್‌ಷೆಡ್ಪುರ

1907ರಲ್ಲಿ ಟಾಟಾ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯು ಜೆಮ್‌ಷೆಡ್ಪುರದಲ್ಲಿ ಪ್ರಾರಂಭವಾಯಿತು. ಈಗ ಇದನ್ನು ಟಾಟಾ ಉಕ್ಕಿನ ಕಂಪನಿ ಎಂದು ಕರೆಯುತ್ತಾರೆ. ಇದು ಭಾರತದಲ್ಲಿ ಹಳೆಯದಾದ ಸಮಗ್ರ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯಾಗಿದೆ. ಟಾಟಾ ಉಕ್ಕಿನ ಸಂಸ್ಥೆಯು ಪ್ರಪಂಚದ ಕಬ್ಬಿಣ ಮತ್ತು ಉಕ್ಕಿನ ಉತ್ಪತ್ತಿಯಲ್ಲಿ 10ನೇ ಸ್ಥಾನವನ್ನು ಪಡೆದುಕೊಂಡಿದೆ.

ಭಾರತ – ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ



ಭಾರತ – ಕಬ್ಬು, ಹತ್ತಿ ಮತ್ತು ಸೆಣಬು ಕೈಗಾರಿಕೆಗಳು



2. ಭಾರತೀಯ ಕಬ್ಬಿಣ ಮತ್ತು ಉಕ್ಕಿನ ಕಂಪನಿ (IISCO) - ಬರ್ನಾಪುರ

ಕುಲ್ಡಿ, ಖಾನ್‌ಪುರ ಮತ್ತು ಹೀರಾಪುರ್ ಉಕ್ಕಿನ ಕೈಗಾರಿಕೆಗಳು ಒಂದಾಗಿ ಭಾರತೀಯ ಕಬ್ಬಿಣ ಮತ್ತು ಉಕ್ಕಿನ ಕಂಪನಿಯನ್ನು 1919ರಲ್ಲಿ ಬರ್ನಾಪುರದಲ್ಲಿ ಸ್ಥಾಪಿಸಲಾಯಿತು.

ಈ ಕಂಪನಿಯನ್ನು 1972 ರಲ್ಲಿ ರಾಷ್ಟ್ರೀಕರಣಗೊಳಿಸಿ ಭಾರತದ ಉಕ್ಕು ಪ್ರಾಧಿಕಾರ ನಿಯಮಿತದ ಅಧೀನಕ್ಕೆ ಒಳಪಡಿಸಲಾಯಿತು. (SAIL-STEEL AUTHORITY OF INDIA LTD.) ಇದು ಕಬ್ಬಿಣ ಮತ್ತು ಉಕ್ಕನ್ನು ತಯಾರಿಸುತ್ತದೆ.

3. ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ (VISL) - ಭದ್ರಾವತಿ

1923 ರಲ್ಲಿ (ಮೈಸೂರು ಉಕ್ಕು ಕಂಪನಿ) ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯು ಪ್ರಾರಂಭವಾಯಿತು. ಕರ್ನಾಟಕ ರಾಜ್ಯದ ಶಿವಮೊಗ್ಗ ಜಿಲ್ಲೆಯ ಭದ್ರಾವತಿ ಎಂಬ ಸ್ಥಳದಲ್ಲಿ ಈ ಕೈಗಾರಿಕೆಯನ್ನು ಸ್ಥಾಪಿಸಲಾಗಿದೆ. ಇದರ ಪ್ರಮುಖವಾದ ಉತ್ಪಾದನಾವಸ್ತುಗಳೆಂದರೆ ಮಿಶ್ರಲೋಹ ಮತ್ತು ಉತ್ತಮ ಗುಣಮಟ್ಟದ ಉಕ್ಕು.

4. ಅ) ಹಿಂದೂಸ್ಥಾನ್ ಸ್ಟೀಲ್ ಲಿಮಿಟೆಡ್– ಬಿಲಾಯ್ (HSL)

ಛತ್ತೀಸ್‌ಘಡ ರಾಜ್ಯದ ದುರ್ಗಾ ಜಿಲ್ಲೆಯ ಬಿಲಾಯ್ ಎಂಬ ಸ್ಥಳದಲ್ಲಿ 1959 ರಲ್ಲಿ ಬಿಲಾಯ್ ಕಂಪನಿಯು ಪ್ರಾರಂಭವಾಯಿತು. ಪ್ರಪಂಚದಲ್ಲಿ ಅತಿ ನವೀನವಾದ ಕಟ್ಟಡ ನಿರ್ಮಾಣವಸ್ತುಗಳು, ರೈಲ್ವೆ ಉಪಕರಣಗಳನ್ನು ಇಲ್ಲಿ ಅಧಿಕ ಪ್ರಮಾಣದಲ್ಲಿ ಉತ್ಪಾದಿಸುತ್ತಾರೆ. ಹಡಗು ಕಟ್ಟಲು ಅವಶ್ಯಕವಾದ ಉಕ್ಕಿನ ತಗಡುಗಳನ್ನು ತಯಾರಿಸುತ್ತಾರೆ.

ಆ) ಹಿಂದೂಸ್ತಾನ್ ಉಕ್ಕು ಕಂಪನಿ–ರೂರ್ಕೆಲಾ(HSL)

ಈ ಕಂಪನಿಯು 1965 ರಲ್ಲಿ ಒಡಿಸ್ಸಾ ರಾಜ್ಯದಲ್ಲಿರುವ ಸುಂದರ್‌ಗರ್ ಜಿಲ್ಲೆಯ ರೂರ್ಕೆಲಾ ಎಂಬ ಸ್ಥಳದಲ್ಲಿ ಪ್ರಾರಂಭಿಸಲಾಯಿತು, ಕಾಯಿಸಿದ ಮತ್ತು ತಂಪು ಮಾಡಿದ ಉಕ್ಕಿನ ಉರುಳೆಗಳು, ತಗಡು, ವಿದ್ಯುತ್ ಲೇಪನ ಮಾಡಿದ ತಗಡುಗಳು ಮತ್ತು ವಿದ್ಯುಚ್ಛಕ್ತಿಗೆ ಸಂಬಂಧಪಟ್ಟ ಉಕ್ಕಿನ ತಗಡುಗಳನ್ನು ಉತ್ಪಾದಿಸುತ್ತದೆ.

ಇ) ಹಿಂದೂಸ್ತಾನ್ ಉಕ್ಕು ಕಂಪನಿ– ದುರ್ಗಾಪುರ (HSL)

ದುರ್ಗಾಪುರ ಉಕ್ಕಿನ ಕಂಪನಿಯು ಪಶ್ಚಿಮಬಂಗಾಳದ ವರ್ಧಮಾನ್ ಜಿಲ್ಲೆಯಲ್ಲಿ 1959ರಲ್ಲಿ ಸ್ಥಾಪನೆಯಾಯಿತು. 1962ರಲ್ಲಿ ಉತ್ಪಾದನೆಯನ್ನು ಪ್ರಾರಂಭಿಸಲಾಯಿತು. ಈ ಕಂಪನಿಯು ಮಿಶ್ರಲೋಹದಿಂದ ತಯಾರಿಸಿದ ಕಟ್ಟಡ ನಿರ್ಮಾಣದ ವಸ್ತುಗಳು ಮತ್ತು ರೈಲ್ವೆಗೆ ಸಂಬಂಧಿಸಿದ ವಸ್ತುಗಳಾದ ಬಂಡಿಯ ಅಚ್ಚು ರೈಲ್ವೆಹಳಿಗಳನ್ನು ಭದ್ರವಾಗಿ ಹಿಡಿದುಕೊಳ್ಳಲು ಉಪಯೋಗಿಸುವ ಕಬ್ಬಿಣದ ಚೌಕಟ್ಟು ಮೊದಲಾದವುಗಳನ್ನು ಉತ್ಪಾದಿಸುವುದರಲ್ಲಿ ಪರಿಣತಿಯನ್ನು ಹೊಂದಿದೆ.

ಈ)ಹಿಂದೂಸ್ತಾನ್ ಉಕ್ಕು ಕಂಪನಿ – ಬೊಕಾರೋ (HSL)

ಈ ಕಂಪನಿಯು ಝಾರ್ಖಂಡ್ ರಾಜ್ಯದ ಹಜಾರಿಬಾಗ್ ಜಿಲ್ಲೆಯ ಬೊಕಾರೋದಲ್ಲಿ 1972 ರಿಂದ ಉತ್ಪಾದನೆ ಮಾಡುತ್ತಾ ಬಂದಿದೆ ಉಕ್ಕು ಉತ್ಪಾದಿಸುವಾಗ ಉಂಟಾಗುವ ತ್ಯಾಜ್ಯವಸ್ತುಗಳು (WASTE) ಸಿಂದ್ರಿ ರಸಗೊಬ್ಬರ ಕೈಗಾರಿಕೆಯಲ್ಲಿ ರಸಗೊಬ್ಬರವನ್ನು ಉತ್ಪಾದಿಸಲು ಉಪಯೋಗಿಸಿಕೊಳ್ಳಲಾಗುತ್ತದೆ.

5. ಹಿಂದೂಸ್ತಾನ್ ಉಕ್ಕು ಕಂಪನಿ –ಸೇಲಂ (HSL)

ತಮಿಳುನಾಡಿನ ಸೇಲಂನಲ್ಲಿ ಉಕ್ಕುಉತ್ಪಾದನಾ ಕಂಪನಿಯನ್ನು ಸ್ಥಾಪಿಸಿ 1982ರಲ್ಲಿ ಉಕ್ಕುಉತ್ಪಾದನೆಯನ್ನು ಮಾಡುತ್ತಾಬಂದಿದೆ. ಪ್ರಪಂಚದಲ್ಲೆ ಉತ್ತಮವಾದ ತುಕ್ಕು ಹಿಡಿಯದ ಉಕ್ಕು ಉತ್ಪಾದನೆಯಲ್ಲಿ ಪ್ರಮುಖ ಸ್ಥಾನವನ್ನು ಪಡೆದುಕೊಂಡಿದೆ. ಇಲ್ಲಿ ಉತ್ಪಾದನೆಯಾಗುವ ಉಕ್ಕು ಪಾಶ್ಚಿಮಾತ್ಯರಾಷ್ಟ್ರಗಳಿಗೆ ರಫ್ತು ಮಾಡಲಾಗುತ್ತಿದೆ.

6. ವಿಜಯ ನಗರ ಉಕ್ಕಿನ ಕೈಗಾರಿಕೆ – ತೋರಣಗಲ್

ಕರ್ನಾಟಕದಲ್ಲಿರುವ ಹೊಸಪೇಟೆ ಬಳಿಯ ತೋರಣಗಲ್ ಎಂಬ ಸ್ಥಳದಲ್ಲಿ ಉಕ್ಕಿನ ಕೈಗಾರಿಕೆಯು ಆರಂಭವಾಯಿತು.

7. ಹಿಂದೂಸ್ತಾನ್ ಉಕ್ಕು ಕೈಗಾರಿಕೆ – ವಿಶಾಖಪಟ್ಟಣ (HSL)

ವಿಶಾಖ ಪಟ್ಟಣದಲ್ಲಿ ಹಿಂದೂಸ್ತಾನ್ ಉಕ್ಕು ಕಂಪನಿಯು 1992ರಿಂದ ಉತ್ಪಾದನೆ

ಮಾಡುತ್ತಾಬಂದಿದೆ. ಇದು ಸಮುದ್ರದ ಕರಾವಳಿಯಲ್ಲಿ ಸ್ಥಾಪಿಸಲ್ಪಟ್ಟ ಪ್ರಥಮ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯಾಗಿದೆ. ನಮ್ಮ ರಾಷ್ಟ್ರದ ಅತ್ಯಾಧುನಿಕ, ಉತ್ತಮ ಆಧುನಿಕ ಸಂಯೋಜನೆಯಿಂದ ಕೂಡಿದ ಉಕ್ಕು ಕೈಗಾರಿಕೆಯಾಗಿದೆ. ಇದು ರಫ್ತು ಮಾಡುವ ಉದ್ದೇಶವನ್ನು ಹೊಂದಿದ ಕೈಗಾರಿಕೆಯಾಗಿದೆ.

ಸಣ್ಣ ಉಕ್ಕಿನ ಕೈಗಾರಿಕೆಗಳು

ಇವು ವಿಕೇಂದ್ರೀಕರಣಗೊಂಡಿರುವ ಎರಡನೆಯ ಹಂತದ ಕೈಗಾರಿಕೆಗಳಾಗಿವೆ. ಇವು 10,000 ಟನ್ ನಿಂದ 5ಲಕ್ಷ ಟನ್ ಉಕ್ಕನ್ನು ಉತ್ಪಾದಿಸುತ್ತದೆ. ಇವು ವಿದ್ಯುಚ್ಛಕ್ತಿಯ ಒಲೆ (ಕುಲುಮೆ) ಯನ್ನು ಉಪಯೋಗಿಸಿಕೊಂಡು ತ್ಯಾಜ್ಯ ಮತ್ತು ಹಳೆಯ ಕಬ್ಬಿಣವನ್ನು ಮೂಲವಸ್ತುವನ್ನಾಗಿ ಉಪಯೋಗಿಸಿಕೊಳ್ಳುವ ಸಣ್ಣ ಕೈಗಾರಿಕೆಗಳಾಗಿವೆ.

ಮೃದು ಉಕ್ಕು ಮತ್ತು ತುಕ್ಕುಹಿಡಿಯದ ಉಕ್ಕನ್ನು ಉತ್ಪಾದಿಸುತ್ತದೆ. ಸುಮಾರು 150 ಸಣ್ಣ ಕೈಗಾರಿಕೆಗಳು ಒಂದು ವರ್ಷಕ್ಕೆ 120ಲಕ್ಷ ಟನ್ ಉಕ್ಕನ್ನು ಉತ್ಪಾದಿಸುತ್ತವೆ. ಇವು ಕೈಗಾರಿಕೆಗಳು ಸ್ಥಾಪನೆಯಾಗಿರುವ ಸ್ಥಳದಿಂದ ಅತಿ ದೂರದಲ್ಲಿ ಸ್ಥಾಪನೆಯಾಗಿವೆ. ಆದುದರಿಂದ ಸ್ಥಳೀಯ ಅವಶ್ಯಕತೆಗಳನ್ನು ಸುಲಭವಾಗಿ ಪೂರ್ತಿ ಮಾಡಬಹುದು. ಅಲ್ಲದೆ ಇವುಗಳಿಗೆ ಕಡಿಮೆ ಪ್ರಮಾಣದ ಬಂಡವಾಳ ಅವಶ್ಯಕ ಇರುವುದರಿಂದ ಭಾರತದ ಆರ್ಥಿಕತೆಗೆ ಹೊಂದಾಣಿಕೆಯಾಗುತ್ತವೆ. ಇವು ಸಣ್ಣ ಪ್ರಮಾಣದ ಘಟಕಗಳಾಗಿರುವುದರಿಂದಲೇ ಇವುಗಳನ್ನು ಕೈಗಾರಿಕಾ ನಗರಗಳಲ್ಲಿ ಸ್ಥಾಪಿಸಲು ಅನುಕೂಲವಾಗಿದೆ.

ವಾಹನ ಕೈಗಾರಿಕೆ

ಭಾರತದ ಸ್ವಾತಂತ್ರ್ಯ ನಂತರ ವಾಹನ ಕೈಗಾರಿಕೆಗಳು ಅಭಿವೃದ್ಧಿಹೊಂದಲು ಪ್ರಾರಂಭಿಸಿದವು. ಪ್ರಥಮ ವಾಹನ ಕೈಗಾರಿಕೆಯು 1947ರಲ್ಲಿ ಮುಂಬೈಯ ಕುರ್ಲಾ ಪ್ರೀಮಿಯರ್ ಆಟೋಮೋಬೈಲ್ ಎಂಬ ಹೆಸರಿನಲ್ಲಿ ಕಂಪನಿಯು ಪ್ರಾರಂಭವಾಯಿತು. 1948ರಲ್ಲಿ ಹಿಂದೂಸ್ತಾನ್ ಮೋಟಾರ್ ಕಂಪನಿ ಉತ್ತರಪಾರ (ಕೊಲ್ಕತ್ತಾ)ದಲ್ಲಿ ಸ್ಥಾಪಿಸಲಾಯಿತು ವಾಹನಕೈಗಾರಿಕೆಯು ಕಳೆದ 30 ವರ್ಷಗಳಲ್ಲಿ ಅಮೂಲಾಗ್ರ ಬೆಳವಣಿಗೆಯನ್ನು ಸಾಧಿಸಿತು. ವಾಣಿಜ್ಯ ವಾಹನಗಳು, ಪ್ರಯಾಣಿಕರ ವಾಹನಗಳು, ದ್ವಿಚಕ್ರವಾಹನಗಳು, ಮೂರುಚಕ್ರವಾಹನಗಳನ್ನು ತಯಾರಿಸುತ್ತಾರೆ.



ವಾಹನ ಕೈಗಾರಿಕೆ


ವಾಹನಗಳ ಉತ್ಪಾದನಾ ಕೇಂದ್ರಗಳು ಮುಂಬೈ, ಚೆನ್ನೈ, ಕೊಲ್ಕತ್ತಾ, ದೆಹಲಿ, ಪುಣೆ ಅಹಮದಾಬಾದ್, ಲಕ್ನೋ, ಸತಾರ ಮತ್ತು ಮೈಸೂರು.

ಆರ್ಥಿಕ ಉದಾರೀಕರಣದ ನೀತಿಯಿಂದಾಗಿ ಹಲವಾರು ವಿದೇಶಿ ಬಂಡವಾಳಗಾರರ ಸಹಯೋಗದಿಂದ ವಾಹನಗಳ ಉತ್ಪಾದನೆಯಲ್ಲಿ ತೊಡಗಿದರು ವಿಶ್ವ ಪ್ರಸಿದ್ಧಿ ಪಡೆದ ಸುಜುಕಿ ಜನರಲ್ ಮೋಟಾರ್ಸ್, ಫೋರ್ಡ್, ಮಿಟ್ಸುಬಿಷಿ, ಹೋಂಡಾ, ದೇವು, ಮೆರ್ಸಿಡಸ್, ನಿಷಾನ್, ಮಹೀಂದ್ರ ಮತ್ತು ಮಹೀಂದ್ರ, ಮಿಲೇನಿಯಂ ಮೋಟಾರ್ಸ್ ಮೊದಲಾದುವು ವಾಹನಗಳ ಉತ್ಪತ್ತಿಯಲ್ಲಿ ತೊಡಗಿವೆ.

ವಿದ್ಯುನ್ಮಾನ (Electronic) ಕೈಗಾರಿಕೆ

ವಿದ್ಯುನ್ಮಾನ ಕೈಗಾರಿಕೆಯು ಪ್ರಥಮವಾಗಿ 1850ರಲ್ಲಿ ರೇಡಿಯೋ ಉತ್ಪಾದನೆಯನ್ನು ಆರಂಭಿಸಿತು. 1950ರಲ್ಲಿ ಭಾರತಕ್ಕೆ ಸಂಬಂಧಿಸಿದ ದೂರವಾಣಿ ಕೈಗಾರಿಕೆಯು ಬೆಂಗಳೂರಿನಲ್ಲಿ ಆರಂಭವಾದ ನಂತರ ಈ ಕೈಗಾರಿಕೆಯು ಪ್ರಗತಿ ಹೊಂದಿತು. ಈ ಕೈಗಾರಿಕೆಯು ಅಂಚೆ, ದೂರವಾಣಿ, ರಕ್ಷಣೆ, ರೈಲ್ವೆಸಂಚಾರ, ವಿದ್ಯುಚ್ಛಕ್ತಿ ಮತ್ತು ಹವಾಮಾಪನ ಇಲಾಖೆ ಮುಂತಾದವುಗಳಿಗೆ ಅವಶ್ಯಕವಾದ ವಸ್ತುಗಳನ್ನು ತಯಾರಿಸುತ್ತದೆ. ವಿದ್ಯುನ್ಮಾನ ಉಪಕರಣಗಳ ಉತ್ಪಾದನೆಯಲ್ಲಿ ಬೆಂಗಳೂರು ಪ್ರಥಮಸ್ಥಾನವನ್ನು ಪಡೆದುಕೊಂಡಿದೆ ಆದುದರಿಂದ ಬೆಂಗಳೂರನ್ನು ಭಾರತದ ವಿದ್ಯುನ್ಮಾನ ಪ್ರಧಾನ ನಗರ ಎಂದು ಕರೆಯುತ್ತಾರೆ. ವಿದ್ಯುನ್ಮಾನ ಕೈಗಾರಿಕೆಯು ಕಂಡುಬರುವ ಇತರ ಪಟ್ಟಣಗಳೆಂದರೆ ಹೈದರಾಬಾದ್,

ದೆಹಲ್ಲಿ, ಮುಂಬೈ, ಚೆನ್ನೈ, ಕೊಲ್ಕತ್ತಾ, ಕಾನ್ಪುರ, ಲಕ್ನೋ, ಜೈಪುರ ಮತ್ತು ಕೊಯಮತ್ತೂರು.



ವಿದ್ಯುನ್ಮಾನ ಉಪಕರಣಗಳು

ವಿದ್ಯುನ್ಮಾನ ಕೈಗಾರಿಕೆಯಲ್ಲಿ ಏರ್ಪಟ್ಟ ಕ್ರಾಂತಿ ಜನಜೀವನದಲ್ಲಿ ಅತಿ ಹೆಚ್ಚಿನ ಬದಲಾವಣೆಯನ್ನು ಮಾಡಿತು. ಅತ್ಯಂತ ಜನಪ್ರಿಯ ವಿದ್ಯುನ್ಮಾನ ವಸ್ತುಗಳಾದ ದೂರದರ್ಶನ, ಚಿಕ್ಕರೇಡಿಯೋ, ದೂರವಾಣಿ,ಸೆಲ್‌ಫೋನ್, ಕಂಪ್ಯೂಟರ್, ಸಿಡಿ ಪ್ಲೇಯರ್, ಐ–ಪಾಡ್, ಪೆನ್‌ಡ್ರೈವ್ ಮುತಾದವು.

ತಂತ್ರಾಂಶ ಕೈಗಾರಿಕೆ (Software Industry)


ತಂಕ್ರಾಂಶ ಕೈಗಾರಿಕೆಯು ಭಾರತದ ಆರ್ಥಿಕತೆಯಲ್ಲಿ ಪ್ರಮುಖ ಕೈಗಾರಿಕೆಯಾಗಿ ಬೆಳೆಯುತ್ತಾ ಬರುತ್ತಿದೆ. ನಮ್ಮ ದೇಶದಲ್ಲಿ ಕಡಿಮೆ ವೇತನಕ್ಕೆ ದೊರಕುವ ಕುಶಲತೆಯಿಂದ ಕೂಡಿದ ಯುವ ಪ್ರತಿಭಾನ್ವಿತ ಎಂಜಿನಿಯರ್‌ಗಳು ಈ ಕೈಗಾರಿಕೆಯ ಅಭಿವೃದ್ಧಿಗೆ ಕಾರಣವಾಗಿದೆ.

ವಿದ್ಯುನ್ಮಾನ ಇಲಾಖೆ (ಸುದ್ದಿ ಸಂಪರ್ಕ ಮತ್ತು ತಂತ್ರಜ್ಞಾನ ಸಚಿವಾಲಯ) ನಮ್ಮ ದೇಶದ ಹಲವಾರು ಕಡೆ ವಿದ್ಯುನ್ಮಾನ ಉದ್ಯಾನಗಳನ್ನು ಸ್ಥಾಪಿಸಿದೆ. ಪ್ರಮುಖವಾದ ಕೇಂದ್ರಗಳೆಂದರೆ ಚೆನ್ನೈ, ಕೊಯಮತ್ತೂರು, ತಿರುವನಂತಪುರ, ಬೆಂಗಳೂರು, ಮೈಸೂರು, ಹೈದರಾಬಾದ್, ವಿಶಾಖಪಟ್ಟಣ, ಮುಂಬೈ, ಪೂನಾ, ಭುವನೇಶ್ವರ, ಇಂದೂರ್, ಗಾಂಧೀನಗರ, ಜೈಪುರ, ಕೊಲ್ಕತ್ತಾ, ನೊಯ್‌ಡಾ, ಮೊಹಾಲಿ, ಮತ್ತು ಶ್ರೀನಗರ. ಪ್ರಸ್ತುತ 500 ಕ್ಕೂ ಹೆಚ್ಚು ಮೃದೂಪಕರಣ ಕೈಗಾರಿಕಾ ಕೇಂದ್ರಗಳು ನಮ್ಮ ದೇಶದಲ್ಲಿವೆ. ಇದು 2014ರಲ್ಲಿ 2.5ಮಿಲಿಯನ್ ಜನರಿಗೆಉದ್ಯೋಗಾವಕಾಶ, ಭಾರತದ ರಾಷ್ಟ್ರೀಯ ಒಟ್ಟು ಉತ್ಪತ್ತಿ ಪ್ರಮಾಣವನ್ನು ಶೇಖಡ 7.5ಕ್ಕೆ ಹೆಚ್ಚಿಸಿದೆ. ಪ್ರಸ್ತುತ ಮೃದೂಪಕರಣ ಕೈಗಾರಿಕೆಯು ಮೃದೂಪಕರಣ ಮತ್ತು ಸೇವೆಯನ್ನು ವಿಶ್ವದಾದ್ಯಂತ 95 ರಾಷ್ಟ್ರಗಳಿಗೆ ರಫ್ತು ಮಾಡುತ್ತದೆ. ಭಾರತಸರ್ಕಾರವು ಮೃದೂಪಕರಣ ಕೈಗಾರಿಕೆಯ ಬೆಳವಣಿಗೆಯಲ್ಲಿ ಮುಖ್ಯಪಾತ್ರ ವಹಿಸುತ್ತದೆ.



ಮೃದು ಉಪಕರಣ ಕೈಗಾರಿಕೆ ಉದ್ಯಾನ

ವೈಜ್ಞಾನಿಕ ತಾಂತ್ರಿಕ ಬೆಳವಣಿಗೆಯು ನಮ್ಮ ಜೀವನವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುತ್ತದೆ. ಅತಿಹೆಚ್ಚಿನ ಸೌಕರ್ಯಗಳೆಲ್ಲವನ್ನು ಸುಲಭವಾಗಿ ಪಡೆದುಕೊಳ್ಳುವಂತೆ ಮಾಡಿದೆ. ಆದರೆ ಅಭಿವೃದ್ಧಿ ಎಂಬ ಹೆಸರಿನಲ್ಲಿ ನಮ್ಮ ಜೀವನಾಧಾರವಾದ ನೈಸರ್ಗಿಕ ಸಂಪನ್ಮೂಲಗಳೆಲ್ಲ ಸಂಪೂರ್ಣವಾಗಿ ನಾಶವಾಗುವ ಮೊದಲೇ ಹಾನಿಯನ್ನುಂಟು ಮಾಡುವ ವಿಜ್ಞಾನ ತಂತ್ರಜ್ಞಾನದಿಂದ ಸನ್ನಿವೇಶಕ್ಕೆ ಹೊಂದುವಂತಹ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಮಾರ್ಪಾಡಾಗುವ ಮೂಲಕ ಪರಿಸರವನ್ನು ಸಂರಕ್ಷಿಸಬಹುದು.


ಭಾರತ – ತಂತ್ರಾಂಶ (ಮೃದೂಪಕರಣ)
ತಂತ್ರಜ್ಞಾನ ಉದ್ಯಾನಗಳು
ಉ
ಶ್ರೀನಗರ
ಮೊಹಾಲಿ
ನೊಯ್ಡಾ
ಜೈಪುರ
ಇಂದೂರ್
ಗಾಂಧೀನಗರ
ಕೊಲ್ಕತ್ತಾ
ಭುವನೇಶ್ವರ
ಮುಂಬೈ
ಪೂನಾ
ವಿಶಾಖಪಟ್ಟಣ
ಹೈದರಾಬಾದ್
ಬಂಗಾಳಕೊಲ್ಲಿ
ಬೆಂಗಳೂರು
ಚೆನ್ನೈ
ಮೈಸೂರು
ಕೊಯಮತ್ತೂರು
ತಿರುವನಂತಪುರ
ಹಿಂದೂಮಹಾಸಾಗರ

ಅಭ್ಯಾಸ

ಅ. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ

1) ಹತ್ತಿ ಕೈಗಾರಿಕೆಯು ಒಂದು----------.

ಅ) ವ್ಯವಸಾಯ ಆಧಾರಿತ ಕೈಗಾರಿಕೆ. ಆ) ಖನಿಜ ಆಧಾರಿತ ಕೈಗಾರಿಕೆ

ಇ) ಅರಣ್ಯ ಆಧಾರಿತ ಕೈಗಾರಿಕೆ ಈ) ಮೃದೂಪಕರಣ ಕೈಗಾರಿಕೆ

2) ಭಾರತದ ಮ್ಯಾಂಚೆಸ್ಟರ್ ಎಂದು ಕರೆಯಲ್ಪಡುವುದು ----------.

ಅ) ದೆಹಲಿ ಆ) ಚೆನ್ನೈ ಇ)ಮುಂಬೈ ಈ) ಕೊಲ್ಕತ್ತಾ

3. ಟಾಟಾ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ ಸ್ಥಾಪನೆಯಾಗಿರುವ ಸ್ಥಳ----------.

ಅ) ದುರ್ಗಾಪುರ ಆ) ಬಿಲಾಯ್ ಇ) ಜೆಮ್‌ಷೆಡ್ಪುರ ಈ) ಬರ್ನ್‌ಪೂರ್

4. ಚೋಟನಾಗಪುರ ಪೀಠಭೂಮಿಯು ----------ಸಂಪನ್ಮೂಲಗಳಿಗೆ ಹೆಸರುವಾಸಿಯಾಗಿದೆ.

ಅ) ಸ್ವಾಭಾವಿಕ ಸಸ್ಯವರ್ಗ ಆ) ಖನಿಜ ಸಂಪತ್ತು ಇ) ಮೆಕ್ಕಲು ಮಣ್ಣು ಈ) ಹತ್ತಿ

5. ವಿದ್ಯುನ್ಮಾನ ಪ್ರಧಾನ ನಗರ ಎಂದು ಕರೆಯಲ್ಪಡುವುದು ----------.

ಅ) ಕಾನ್ಪುರ ಆ) ದೆಹಲಿ ಇ) ಬೆಂಗಳೂರು ಈ) ಮಧುರೈ

ಆ. ಹೊಂದಿಸಿ ಬರೆಯಿರಿ

1.	ಸೆಣಬು ಕೈಗಾರಿಕೆ	ಚೆನ್ನೈ
2.	ವಾಹನ ಕೈಗಾರಿಕೆ	ಗುಜರಾತ್
3.	ಮೃದೂಪಕರಣ ಕೈಗಾರಿಕೆ	ಮುಂಬೈ
4.	ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆ	ಪಶ್ಚಿಮ ಬಂಗಾಳ
5.	ಭಾರತದ ಸಕ್ಕರೆ ಕಣಜ	ಚೋಟನಾಗಪುರ ವಲಯ
		ಬೆಂಗಳೂರು
		ಉತ್ತರಪ್ರದೇಶ ಮತ್ತು ಬಿಹಾರ

ಇ. ವ್ಯತ್ಯಾಸವನ್ನು ಬರೆಯಿರಿ

1. ಕೃಷಿಆಧಾರಿತ ಮತ್ತು ಖನಿಜಾಧಾರಿತ ಕೈಗಾರಿಕೆಗಳು
2. ಕಬ್ಬಿಣ ಮತ್ತು ಉಕ್ಕು ಕೈಗಾರಿಕೆ ಮತ್ತು ಮೃದೂಪಕರಣ ಕೈಗಾರಿಕೆ

ಈ. ಸಂಕ್ಷಿಪ್ತವಾಗಿ ಉತ್ತರಿಸಿ

1. ಉತ್ಪತ್ತಿ ಎಂದರೇನು ?
2. ಕೈಗಾರಿಕೆ ಸ್ಥಾಪನೆಯನ್ನು ನಿರ್ಧರಿಸುವ ಅಂಶಗಳು ಯಾವುವು ?

3. ಕೃಷಿ ಆಧಾರಿತ ಕೈಗಾರಿಕೆಗಳು ಎಂದರೇನು? ಉದಾಹರಣೆ ಕೊಡಿ.

4. ಯಾವುದಾದರೂ ಐದು ಮೃದೂಪಕರಣಗಳ ಕೇಂದ್ರಗಳನ್ನು ಹೆಸರಿಸಿ?

5. ಸೆಣಬಿನ ವಸ್ತುಗಳಾವುವು ?

ಊ. ಒಂದು ಪುಟದಲ್ಲಿ ಉತ್ತರಿಸಿ.

1. ಭಾರತದ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳನ್ನು ವಿವರಿಸಿ.

2. ಮುಂಬೈಯಲ್ಲಿ ಹತ್ತಿ ಕೈಗಾರಿಕೆಗಳ ಸ್ಥಾಪನೆಗೆ ಸಹಾಯಕವಾದ ಅಂಶಗಳು ಯಾವುವು?

3. ಭಾರತದ ಸಕ್ಕರೆ ಕೈಗಾರಿಕೆಗಳ ಬಗ್ಗೆ ವಿವರಿಸಿ.

4. ವಾಹನ ಕೈಗಾರಿಕೆಗಳು ಅಥವಾ ಮೃದೂಪಕರಣ ಕೈಗಾರಿಕೆಗಳ ಬಗ್ಗೆ ವಿವರಿಸಿ.

ಊ. ಭಾರತದ ಭೂಪಟದಲ್ಲಿ ಕೆಳಕಂಡವುಗಳನ್ನು ಗುರುತಿಸಿ.

1. ಪ್ರಮುಖ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳು

2. ಮೃದೂಪಕರಣ ಕೈಗಾರಿಕೆಗಳು

3. ಹತ್ತಿ ಕೈಗಾರಿಕೆಗಳು

4. ಸೆಣಬು ಕೈಗಾರಿಕೆಗಳು


5. ಸಕ್ಕರೆ ಕೈಗಾರಿಕೆಗಳು

ಎ. ಪ್ರಾಯೋಗಿಕ ಚಟುವಟಿಕೆ

ಯಾವುದಾದರು ಒಂದು ಕೃಷಿ/ಖನಿಜಗಳನ್ನು ಆಧರಿಸಿದ ಕೈಗಾರಿಕೆಯನ್ನು ನಿರ್ಧರಿಸುವ ಅಂಶಗಳನ್ನು ಪಟ್ಟಿಮಾಡಿ.

6. ಪರಿಸರದಲ್ಲಿ ಕಂಡುಬರುವ ಸಮಸ್ಯೆಗಳು

ಪರಿಸರ ಎಂಬ ಪದವು ಸಾಮಾನ್ಯವಾಗಿ ಪ್ರಕೃತಿಯ ಪರಿಸರವನ್ನು ವಿವರಿಸುವ ಪದವಾಗಿದೆ. ಪ್ರಕೃತಿಯು ಪರಿಸರ ಎಂಬುದು ನಮ್ಮನ್ನು ಸುತ್ತುವರಿದಿರುವ ಸಜೀವ ಮತ್ತು ನಿರ್ಜೀವ ವಸ್ತುಗಳನ್ನು ತಿಳಿಸುವುದಾಗಿದೆ.



ಪ್ರಕೃತಿಯ ಪರಿಸರ

ಪರಿಸರ ಯಾರದು?

ಪರಿಸರ ಪ್ರತಿಯೊಬ್ಬರಿಗೂ ಸ್ವಂತವಾದದ್ದು. ಪ್ರಕೃತಿಯು ಪ್ರತಿಯೊಬ್ಬರ ಅಗತ್ಯಗಳನ್ನು ಪೂರೈಸುವಂತಹದು.ಆದರೆ ಮಹದಾಸೆಗಳನ್ನು ತೃಪ್ತಿಪಡಿಸಲಾಗುವುದಿಲ್ಲ. ನಮ್ಮ ಹೆಚ್ಚುತ್ತಿರುವ ಮಹದಾಸೆಯು ನಮ್ಮನ್ನು ಕಠಿಣವಾದ ಅವಸ್ಥೆಗೆ ಕೊಂಡೊಯ್ಯುವುದು. ಭಾರತದಲ್ಲಿ ಪರಿಸರ ಸಮಸ್ಯೆಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಬರುತ್ತಿವೆ. ಅಭಿವೃದ್ಧಿ ಹೊಂದುತ್ತಿರುವ ಆರ್ಥಿಕತೆ ಮತ್ತು ವೇಗವಾಗಿ ಹೆಚ್ಚುತ್ತಿರುವ ಜನಸಂಖ್ಯೆಯು 1947ರಲ್ಲಿ 300 ಮಿಲಿಯನ್ ಇದ್ದದ್ದು 1210 ಮಿಲಿಯನ್‌ಗಿಂತಲೂ ಹೆಚ್ಚು ತಲುಪಿರುವ ಜನಸಂಖ್ಯೆಯು ಪರಿಸರಕ್ಕೂ, ಮೂಲಭೂತ ಸೌಕರ್ಯಗಳಿಗೂ ಮತ್ತು ದೇಶದ ನೈಸರ್ಗಿಕ ಸಂಪನ್ಮೂಲಗಳಿಗೂ ಅತಿ ಒತ್ತಡವನ್ನುಂಟುಮಾಡಿದೆ. ಕೈಗಾರಿಕೀಕರಣವೂ ಸಹ ಸಂಪನ್ಮೂಲಗಳನ್ನು ಹಾಳುಮಾಡುವುದರ ಮೂಲಕ ಪರಿಸರವನ್ನು ಮಲಿನ ಮಾಡುವುದರಿಂದ ಪ್ರಪಂಚದ ವಾಯುಗುಣದ ಮೇಲೆ ನೇರವಾಗಿ ಪರಿಣಾಮ ಬೀರಿದೆ. ಇಡೀ ವಿಶ್ವವೇ ಈ ಹಾನಿಯನ್ನು ಸುಧಾರಣೆಗೊಳಿಸಲು ತವಕಗೊಂಡಿದೆ. ನಾವೀಗ ಪರಿಸರದ ಮೇಲ್ಮೈಯನ್ನು ಬಾಧಿಸುತ್ತಿರುವ ಪ್ರಮುಖ ಸಮಸ್ಯೆಗಳನ್ನು ಚರ್ಚಿಸೋಣ.

ಪರಿಸರ ಮಾಲಿನ್ಯ

ಪರಿಸರಮಾಲಿನ್ಯ ಎಂಬುದು ಪರಿಸರವನ್ನು ಮಲಿನಗೊಳಿಸುವುದಾಗಿದೆ. ಇದರ ಕಾರಣದಿಂದಾಗಿ ವಸತಿಹೀನತೆ, ಅನಿಯಮಿತ ಅವ್ಯವಸ್ಥೆಯು ಸ್ಥಿತಿಯನ್ನುಂಟುಮಾಡುವುದರ ಜೊತೆಗೆ ಇವು ಅನೇಕ ಕೆಡಕುಗಳನ್ನು, ನಮ್ಮ ಭೌಗೋಳಿಕ ಪರಿಸರ ಮತ್ತು ಜೀವಿಸುವ ಜೀವ ರಾಶಿಗಳ ನಡುವೆ ಉಂಟುಮಾಡುತ್ತದೆ.

ಮಾಲಿನ್ಯವು ರಸಾಯನಿಕ ವಸ್ತುಗಳಿಂದಲೋ ಅಥವಾ ಶಬ್ದ, ಉಷ್ಣಾಂಶ ಮತ್ತು ಸೌರಶಕ್ತಿ ಮೂಲಕವಾಗಿಯೋ ಉಂಟಾಗಬಹುದು. ಈ ಮಾಲಿನ್ಯವು ಸುತ್ತಮುತ್ತಲಿನ ಪರಿಸರವನ್ನೇ ಬಾಧಿಸುತ್ತದೆ. ಅವುಗಳಲ್ಲಿ ಕೆಲವು ಹೀಗಿವೆ.

1. ವಾಯುಮಾಲಿನ್ಯ
2. ಜಲಮಾಲಿನ್ಯ
3. ಭೂ(ಮಣ್ಣು)ಮಾಲಿನ್ಯ
4. ಶಬ್ದಮಾಲಿನ್ಯ
5. ಜೈವಿಕ–ವೈದ್ಯಕೀಯ ತ್ಯಾಜ್ಯಗಳಿಂದ ಉಂಟಾಗುವ ಮಾಲಿನ್ಯ
6. ವಿದ್ಯುತ್ಕರಣ ತ್ಯಾಜ್ಯಗಳಿಂದ ಉಂಟಾಗುವ ಮಾಲಿನ್ಯ
7. ಗಣಿಗಾರಿಕೆಯಿಂದಾಗುವ ಮಾಲಿನ್ಯ

1. ವಾಯುಮಾಲಿನ್ಯ

ಹಾನಿಕರಗೊಳಿಸುವ ಪದಾರ್ಥಗಳನ್ನು ಹೊರಹಾಕುವುದರಿಂದ ವಾಯುಮಲಿನವಾಗುತ್ತದೆ. ಈ ವಾಯುಮಾಲಿನ್ಯದ ಸಮಸ್ಯೆಯು ಕಾಲಾಂತರದಿಂದಲೂ ಇರುವಂತಹದ್ದು. ಇದು ಜನರ ಉತ್ತಮ ಜೀವನವನ್ನು ಬಾಧಿಸುತ್ತದೆ. ಪ್ರತಿದಿನವೂ ಮಾನವನು ಸರಾಸರಿ 2,200 ಲೀಟರ್ ಗಾಳಿಯನ್ನು ಶ್ವಾಸಿಸುತ್ತಾನೆ. ಪ್ರತಿಸಲವೂ ಮಾಲಿನ್ಯವಾದ ಗಾಳಿಯನ್ನು ಶ್ವಾಸಿಸುತ್ತಾನೆ. ಹಾನಿಗೊಳಿಸುವಂತಹವು ವಾಯುವಾಗಿಯೋ ಅಥವಾ ಮಾಲಿನ್ಯವಾಗಿಯೋ ಇರಬಹುದು. ಗಾಳಿಯಲ್ಲಿರುವ ಮಾಲಿನ್ಯಗಳು ಪ್ರಕೃತಿಯಿಂದಲೂ ಮತ್ತು ಮಾನವನಿಂದಲೂ ಉಂಟುಮಾಡಲ್ಪಟ್ಟಿರುತ್ತವೆ.

ಪ್ರಕೃತಿಯಲ್ಲಿ ವಾಯು ಮಾಲಿನ್ಯವು ಅಧಿಕ ಪ್ರಮಾಣದಲ್ಲಿಲ್ಲ. ಅಲ್ಲದೆ ಇವುಗಳಿಂದಾಗುವ ತೊಂದರೆಗಳೂ ಕಡಿಮೆ. ಮಾನವನ ಆರೋಗ್ಯಕ್ಕೂ, ಪರಿಸರಕ್ಕೂ ಹಾನಿಯನ್ನುಂಟುಮಾಡುತ್ತವೆ.

ಜ್ವಾಲಾಮುಖಿ ಸ್ಫೋಟ, ಗಾಳಿಯಸವೆತ, ಮಕರಂದದ ಹರಡುವಿಕೆ, ರಸಾಯನಿಕ ವಸ್ತುಗಳು ಆವಿಯಾಗುವಿಕೆಯಿಂದ ಉಂಟಾಗುವ ಅನಿಲ, ಅಣುವಿದ್ಯುತ್ ಸ್ಥಾವರ ಮತ್ತು ಸ್ಫೋಟಕಗಳಿಂದಾಗುವ ವಿಕಿರಣಶೀಲ ವಸ್ತುಗಳು ಮತ್ತು ಅತಿ ಶಾಖದಿಂದ ವಾಯುವಮಾಲಿನ್ಯವಾಗುತ್ತದೆ. ಪ್ರಕೃತಿಯಿಂದ ವ್ಯಾಲಿನ್ವಾಗ್ಯವ್ ವಾಂವ್ಯು ಅಧಿಕ ಹಾನಿಯನ್ನುಂಟುಮಾಡುವುದಿಲ್ಲ.

ಇತ್ತೀಚೆಗೆ ಹೆಲೆನ್ ಜ್ವಾಲಾಮುಖಿ ಸ್ಫೋಟನೆಯಿಂದಾಗಿ ಹೊರಬಂದ ಹೊಗೆಯು ಒಂದು ಶಾಖೋತ್ಪನ್ನ ಘಟಕವು ಒಂದು ವರ್ಷದಲ್ಲಿ ಹೊರಸೂಸುವ ಹೊಗೆಯಷ್ಟಾಗಿತ್ತು.

ವಾಹನಗಳಿಂದ ಹೊರಬರುವ ಕಾರ್ಬನ್, ಅಣುವಿದ್ಯುತ್ ಸ್ಥಾವರಗಳಿಂದ ಹೊರಬರುವ ಕಾರ್ಬನ್ ಹೊಗೆ, ಕೈಗಾರಿಕೆಗಳು ಮತ್ತು ತೈಲ ಶುದ್ಧೀಕರಣ ಕೇಂದ್ರಗಳಿಂದ ಹೊರಬರುವ ಕಾರ್ಬನ್ ಇವೆಲ್ಲವೂ ಮಾನವನಿಂದ ಉಂಟಾಗುವ ವಾಯುಮಾಲಿನ್ಯವಾಗಿದೆ.

ವಾಯುಮಾಲಿನ್ಯಕ್ಕೆ ಶೇ.70ರಷ್ಟು ವಾಹನಗಳು ಹೊರಗೆಡಹುವ ಹೊಗೆಯೇ ಕಾರಣ. ವಾಹನಗಳು ವಾಯುಪರಿಸರಕ್ಕೆ ಹಾನಿಮಾಡದ ರೀತಿಯಲ್ಲಿ ತಯಾರಾಗಬೇಕು. ಇದಕ್ಕೆ ಭಾರತ್ II ಮತ್ತು ಭಾರತ್ III ಯೋಗ್ಯತಾ ಪ್ರಮಾಣಪತ್ರವನ್ನು ನೀಡಲಾಗುತ್ತದೆ.

ಭಾರತ್ I-IV ಹಂತ ವಾಹನ ಹೊಗೆಯ ಹಂತದ ವಿಧಿನಿಯಮಗಳು ಸ್ವಯಂಚಾಲಿತ ಮೋಟಾರು ವಾಹನಗಳಿಂದ ಹೊರಬರುವ ಮಾಲಿನ್ಯ ಮತ್ತು ಇತರ ವಾಹನಗಳಿಂದ ಹೊರಬರುವ ಮಾಲಿನ್ಯಗಳನ್ನು ಕ್ರಮಬದ್ಧಗೊಳಿಸಲು ಗಮನ ಹರಿಸಿದೆ.

ಕ್ಯಾಲ್ಸಿಯಂ ಕಾರ್ಬೋನೇಟ್ ಬಳಸುವ ವಿದ್ಯುಚ್ಛಕ್ತಿನಿಲಯಗಳಿಂದ ಗಂಧಕ-ಡೈ-ಆಕ್ಸೈಡ್ ಹೊರಬರುತ್ತದೆ. ಮೋಟಾರು ವಾಹನಗಳಿಂದ ನೈಟ್ರೋಜನ್ ಆಕ್ಸೈಡ್ ಹೊರಬರುವುದು. ಕೆಳಗೆ ಕೊಟ್ಟಿರುವುಗಳು ಪ್ರಮುಖ ವಾಯುಮಾಲಿನ್ಯಗಳಾಗಿವೆ.

ಗಂಧಕ-ಡೈ-ಆಕ್ಸೈಡ್, ನೈಟ್ರೋಜನ್ ಆಕ್ಸೈಡ್, ಕಾರ್ಬನ್ ಮೋನೋ ಆಕ್ಸೈಡ್ ಮತ್ತು ಸಾವಯವ ರಸಾಯನಿಕ ವಸ್ತುಗಳ ಆವಿಯಾಗುವಿಕೆ ಮೂಲಕ ವಾಯುಮಂಡಲಕ್ಕೆ ಪ್ರವೇಶಿಸುತ್ತವೆ. ಕಾರ್ಬನ್ ಹೊಗೆಯು ಅಧಿಕ ಪ್ರಮಾಣದಲ್ಲಿ ಉತ್ಪತ್ತಿಯಾಗುವ ದೇಶಗಳಲ್ಲಿ ಭಾರತವು 5ನೇ ಸ್ಥಾನದಲ್ಲಿದೆ.

ಪ್ರಪಂಚದಲ್ಲಿ ಸಂಭವಿಸಿದ ಕೈಗಾರಿಕಾ ವಿಕೋಪದಲ್ಲಿ, 1984ರ ಡಿಸೆಂಬರ್‌ನಲ್ಲಿ ನಡೆದ ಭೋಪಾಲ್ ಅನಿಲ ದುರಂತವು ಅತ್ಯಂತ ದುಃಖಕರವಾದ ಘಟನೆಯಾಗಿದೆ. ಇದರಲ್ಲಿ ಸುಮಾರು 8000 ಜನರು ಪ್ರಾಣ ಕಳೆದುಕೊಂಡರು.



ವಾಯುಮಾಲಿನ್ಯ

ವಾಯುವಿನಲ್ಲಿರುವ ಮಲಿನಗಳನ್ನು ನೇರವಾಗಿ ಶ್ವಾಸಿಸುವುದರ ಮೂಲಕ ಮಾನವನಿಗೆ ಹಾನಿಯುಂಟುಮಾಡುತ್ತವಲ್ಲದೆ ಅದರೊಡನೆ ಪರೋಕ್ಷವಾಗಿ ನೀರು, ಆಹಾರ ಮತ್ತು ಚರ್ಮದ ಮೂಲಕ ಒಳಹೊಕ್ಕು ಸಾಂಕ್ರಾಮಿಕ ರೋಗಗಳನ್ನುಂಟುಮಾಡುತ್ತವೆ. ವಾಯುಮಾಲಿನ್ಯಗಳು ರಕ್ತನಾಳ ಮತ್ತು ಶ್ವಾಸನಾಳಗಳ ಮೂಲಕ ಒಳಹೊಕ್ಕು ಮಾನವನಿಗೆ ಉಸಿರಾಟದ ತೊಂದರೆ, ಶ್ವಾಸನಾಳಗಳ ಊತ, ಅಲರ್ಜಿ, ಶ್ವಾಸಕೋಶದ ರೋಗಗಳು ಮತ್ತು ಹೃದ್ರೋಗ ಮುಂತಾದವುಗಳಿಗೆ ಕಾರಣವಾಗುತ್ತವೆ.

ವಾಯುಮಾಲಿನ್ಯದಿಂದ ಉಂಟಾಗುವ ಪರಿಣಾಮಗಳು

ಓಜೋನ್ ಪದರದ ಹಾನಿ

ಓಜೋನ್ ಪದರವು ವಾಯುಮಂಡಲದಲ್ಲಿ ಭೂಮಿಯ ಮೇಲ್ಭಾಗದಿಂದ ಸುಮಾರು 24–40 ಕಿ.ಮೀ ಎತ್ತರದವರೆಗೆ ತೆಳು ಪದರವಾಗಿ ಕಾಣಲ್ಪಡುತ್ತದೆ. ಓಜೋನ್ ಪದರವು ಜೀವರಾಶಿಗಳಿಗೆ ಹಾನಿಯನ್ನುಂಟುಮಾಡುವ ಸೂರ್ಯನ ನೇರಳಾತೀತ ಕಿರಣಗಳನ್ನು ಗ್ರಹಿಸುತ್ತದೆ. ಓಜೋನ್ ಪದರವನ್ನು ಶೈತ್ಯೀಕರಣ ಪೆಟ್ಟಿಗೆಗಳಲ್ಲಿ ಬಳಸುವ ಕ್ಲೋರೋಫ್ಲೋರೋ

ಕಾರ್ಬನ್ ಹಾನಿಯನ್ನುಂಟುಮಾಡುತ್ತಿದೆ.

ಅಂಟಾರ್ಟಿಕ ಖಂಡದಲ್ಲಿರುವ ಓಜೋನ್ ಮೇಲ್ವಿಚಾರಣಾ ನಿಲಯಗಳು ಸರಾಸರಿಯಾಗಿ ಶೇ.30–40 ಓಜೋನ್ ಪ್ರಮಾಣವನ್ನು ಕಳೆದುಕೊಂಡಿರುವಂತೆ ತಿಳಿಯುತ್ತದೆ. ಶೇ.1ರಷ್ಟು ಓಜೋನ್ ನಷ್ಟವು ಶೇ.2ರಷ್ಟು ನೇರಳಾತೀತ ಕಿರಣಗಳಿಗೆ ಕಾರಣವಾಗುತ್ತದೆ.

ಇದರ ಕಾರಣದಿಂದಾಗಿ ರೋಗನಿರೋಧಕ ಶಕ್ತಿ ಕಡಿಮೆ, ದೃಷ್ಟಿದೋಷ ಮತ್ತು ಚರ್ಮದ ಕ್ಯಾನ್ಸರ್ ರೋಗಗಳು ಉಂಟಾಗುತ್ತವೆ.

ಜಾಗತಿಕ ತಾಪಮಾನ

ಹಸಿರು ಮನೆ ಅನಿಲಗಳು ಎಂದು ಕರೆಯಲ್ಪಡುವ ಕಾರ್ಬನ್ ಡೈ ಆಕ್ಸೈಡ್, ಮೀಥೇನ್, ನೀರಾವಿ, ಕ್ಲೋರೋಫ್ಲೋರೋಕಾರ್ಬನ್(CFC) ಮುಂತಾದವುಗಳಿಂದ ವಾಯುಮಂಡಲದಲ್ಲಿ ಉಷ್ಣಾಂಶ ಶೇಖರಣೆಯಾಗುತ್ತದೆ.



ಜಾಗತಿಕ ತಾಪಮಾನ ಅಧಿಕವಾಗುವಿಕೆ

ಅಧಿಕವಾಗುತ್ತಾ ಬರುತ್ತಿರುವ ಉಷ್ಣಾಂಶದಿಂದಾಗಿ ಪ್ರಪಂಚದಲ್ಲಿ ಋತು ಬದಲಾವಣೆಗಳು ಉಂಟಾಗುತ್ತವೆ.

ಉಷ್ಣಾಂಶದ ಅಧಿಕವಾಗುವಿಕೆಯು ಧ್ರುವಗಳಲ್ಲಿರುವ ಇಬ್ಬನಿಯನ್ನು ಕರಗಿಸುತ್ತದೆ. ಇದರಿಂದ ಸಮುದ್ರ ಮಟ್ಟವು ಅಧಿಕವಾಗುತ್ತದೆ. ಸಮುದ್ರ ಮಟ್ಟವು ಅಧಿಕವಾಗುವುದರಿಂದ ಸಮುದ್ರ ತೀರದ ಸಮೀಪದಲ್ಲಿ ಭೂ ಉಪಯೋಗ ಬದಲಾಗುವುದು. ಕರಾವಳಿಯ ರಚನೆ, ಬಂದರು ವಸತಿ ಮತ್ತು ಜಲನಿರ್ವಹಣಾ ವಿಧಾನ ಮುಂತಾದವುಗಳಿಗೆ ಹಾನಿಯನ್ನುಂಟುಮಾಡುವುದು. ಜಾಗತಿಕ ತಾಪಮಾನ ಅಧಿಕವಾಗುವುದರಿಂದ ವ್ಯವಸಾಯ ಬಾಧಿಸುತ್ತದೆ.

ಆಮ್ಲಮಳೆ

ಆಮ್ಲಮಳೆಯನ್ನು ಮೊಟ್ಟಮೊದಲು 1852ರಲ್ಲಿ ಕಂಡುಹಿಡಿಯಲಾಯಿತು. ವಾಹನಗಳಿಂದಲೂ ಕಲ್ಲಿದ್ದಲನ್ನು ಉರಿಸುವುದರ ಮೂಲಕವೂ ಹೊರಹಾಕುವ ಕಣ್ಣಿಗೆ ಕಾಣದಂತಹ ಹೊಗೆಯ ಮೂಲಕ ಆಮ್ಲಮಳೆ ಉಂಟಾಗುತ್ತದೆ. ಇದು ಅತೀ ದೊಡ್ಡ ಪರಿಸರ ಸಮಸ್ಯೆಯಾಗಿದೆ.

ಆಮ್ಲಮಳೆಗೆ ಕಾರಣವಾದ ಅನಿಲಗಳು ಗಂಧಕ–ಡೈ–ಆಕ್ಸೈಡ್ ಮತ್ತು ನೈಟ್ರೋಜನ್ ಆಕ್ಸೈಡ್ ಆಗಿವೆ. ಇವು ನೀರಾವಿಯೊಡನೆ ಬೆರೆತು ಆಕ್ಸಿಜನ್ ಮತ್ತು ಸೂರ್ಯನ ಬೆಳಕಿನಿಂದ ತೆಳ್ಳಗಾಗಿ ಗಂಧಕ ಮತ್ತು ನೈಟ್ರಿಕ್ ಆಮ್ಲವಾಗಿ ಬದಲಾವಣೆಯಾಗುವುದು. ಈ ಮಿಶ್ರಣವು ಮಳೆಯಾಗುವಾಗ ಆಮ್ಲಮಳೆ ಎಂದು ಕರೆಯಲಾಗುವುದು. ಬೆಂಕಿ ಮತ್ತು ಸೂಕ್ಷ್ಮಜೀವಿಗಳ ಕೊಳೆಯುವಿಕೆಯಿಂದ ಉಂಟಾಗುವ ವಾಯುಗಳು ಸ್ವಾಭಾವಿಕ ಕಾರಣಗಳಾಗಿವೆ. ಇವು ಗಾಳಿಯಲ್ಲಿ ನೈಟ್ರೋಜನ್ ಆಕ್ಸೈಡನ್ನು ಅಧಿಕವಾಗಿಸುತ್ತವೆ.

ಆಮ್ಲಮಳೆಯಿಂದ ಭೌಗೋಳಿಕ ಪರಿಸರದಲ್ಲಿ ಉಂಟಾಗುವ ಹಾನಿಗಳು

ಆಮ್ಲಮಳೆಯಿಂದ ಸಮುದ್ರದಲ್ಲಿರುವ ಅತಿ ಸೂಕ್ಷ್ಮಜೀವಿಗಳಾದ ಪ್ಲಾಂಕ್ಟನ್ ಜೀವಿಸಲು ಸಾಧ್ಯವಿಲ್ಲ. ಮೀನಿನ ಆಹಾರವಾದ ಪ್ಲಾಂಕ್ಟನ್ ಇಲ್ಲದಿದ್ದಾಗ ಸಮುದ್ರದಲ್ಲಿ ವಾಸಿಸುವ ಜೀವಿಗಳು ಬಾಧಿಸಲ್ಪಡುತ್ತವೆ. ಅಲ್ಲದೆ ಆಹಾರ ಸರಪಳಿಯೂ ಬಾಧಿಸಲ್ಪಡುತ್ತದೆ.

ಸಮುದ್ರದ ಶಾಖವು ಹೆಚ್ಚಾದರೆ ಹವಳದಬಂಡೆಗಳ ಬೆಳವಣಿಗೆಯು ಬಾಧಿಸಲ್ಪಡುತ್ತದೆ. ಹವಳದ ಬಂಡೆಗಳು ಸಮುದ್ರದ ನೀರಿನಲ್ಲಿರುವ ಕಾರ್ಬನನ್ನು ಸುಣ್ಣದಕಟ್ಟುಗಳಾಗಿ ಬದಲಾಯಿಸಿ ಕಾರ್ಬನ್ನಿನ ಪ್ರಮಾಣವನ್ನು ನಿಯಂತ್ರಣದಲ್ಲಿಡಲಾಗಿವೆ. ಅಲ್ಲದೆ 10° ಸೆಲ್ಸಿಯಸ್‌ಗಿಂತ ಹೆಚ್ಚು ಉಷ್ಣಾಂಶದಲ್ಲಿ ಹವಳದ ಬಂಡೆಗಳು ಬೆಳೆಯುತ್ತವೆ.

ಇತರ ಪ್ರಾಕೃತಿಕ ಭಾಗಗಳಾದ ಕಾಡುಗಳು ಮತ್ತು ಮರುಭೂಮಿಗಳೂ ಸಹ ಆಮ್ಲಮಳೆಯಿಂದ ಬಾಧಿಸಲ್ಪಡುತ್ತವೆ. ಇದರಿಂದ ಜೈವಿಕ ವೈವಿಧ್ಯತೆಯ ಮತ್ತು ವಿರಳ ವರ್ಗಗಳ ನಾಶವಾಗುತ್ತದೆ.

ಮಣ್ಣಿನಲ್ಲಿ ಆಮ್ಲಮಳೆಯು ಬೀಳುವಾಗ ಮಣ್ಣಿನ ಸತ್ವವು ಸವೆಯಲ್ಪಡುತ್ತದೆ. ಹೀಗೆ ಇದು ಸ್ವಾಭಾವಿಕ ಸಸ್ಯವರ್ಗವನ್ನು ಬಾಧಿಸುತ್ತದೆ.

ಮಾಂಟ್ರಿಯಲ್ ಮತ್ತು ವಿಯನ್ನಾ ಸಭೆಯಲ್ಲಿ 30 ರಾಷ್ಟ್ರಗಳು ಭಾಗವಹಿಸಿ ಕ್ಲೋರೋಫ್ಲೋರೋ ಕಾರ್ಬನ್ ಬಳಕೆಯನ್ನು ಕಡಿಮೆಗೊಳಿಸಿ ಓಜೋನ್ ಪದರವನ್ನು ಸಂರಕ್ಷಿಸುವುದು ಎಂಬ ತೀರ್ಮಾನ ಕೈಗೊಳ್ಳಲಾಯಿತು.

ಎಲ್ಲಾ ಬಗೆಯ ಮಳೆಹನಿಯಲ್ಲಿಯೂ ಆಮ್ಲವು ಬೆರೆಯುವುದರಿಂದ ಪ್ರಕೃತಿ ಮತ್ತು ಮಾನವನಿಂದ ನಿರ್ಮಿಸಲ್ಪಟ್ಟ ಎಲ್ಲವೂ ಬಾಧಿಸಲ್ಪಟ್ಟು ನಾಶವಾಗುತ್ತವೆ.

ಕೆಡಕನ್ನುಂಟುಮಾಡುವ ಅನಿಲಗಳು ಮಳೆನೀರಿನೊಡನೆ ಭೂಮಿಗೆ ಬರುವಾಗ ಸಮುದ್ರದ ನೀರು, ಸರೋವರಗಳು, ಕೊಳಗಳು ಮುಂತಾದವುಗಳಲ್ಲಿ ಆಮ್ಲದ ಪ್ರಮಾಣವು ಅಧಿಕವಾಗಿಬಿಡುತ್ತದೆ. ಇದು ಜಲವಾಸಿ ಜೀವಿಗಳನ್ನು ಬಾಧಿಸುತ್ತದೆ. ಸಮುದ್ರದಲ್ಲಿ ಆಮ್ಲಮಳೆಯು ಬೀಳುವ ಕಾರಣದಿಂದ ಲಕ್ಷದ್ವೀಪ ಮತ್ತು ಅಂಡಮಾನ್ ದ್ವೀಪಗಳಲ್ಲಿರುವ ಶೇ.70ರಷ್ಟು ಹವಳದ ಶಿಲೆಗಳು ನಶಿಸಲ್ಪಟ್ಟಿವೆ. ಅರಣ್ಯಗಳ ಮೇಲೆ ಆಮ್ಲಮಳೆಯು ಬೀಳುವಾಗ ಅರಣ್ಯಗಳು ಬಾಧಿಸಲ್ಪಡುತ್ತವೆ.

ಆಮ್ಲಮಳೆಯನ್ನು ನಿಯಂತ್ರಿಸಲು ಕೈಗೊಳ್ಳುವ ಕ್ರಮಗಳು

ಗಂಧಕವನ್ನು ಶುದ್ಧೀಕರಿಸುವ ಯಂತ್ರಗಳನ್ನು ಕೈಗಾರಿಕೆಗಳಲ್ಲಿ ಸ್ಥಾಪಿಸುವುದರ ಮೂಲಕ ಮತ್ತು ಕಲ್ಲಿದ್ದಲನ್ನು ಬಳಸಲು ಹೊಸ ಮಾರ್ಗೋಪಾಯಗಳನ್ನು ಕಂಡುಹಿಡಿಯುವುದರ ಮೂಲಕವೂ ಆಮ್ಲಮಳೆಯನ್ನು ಕಡಿಮೆ ಮಾಡಬಹುದೆಂದು ಪರಿಸರವಾದಿಗಳು ಅಭಿಪ್ರಾಯಪಟ್ಟಿದ್ದಾರೆ.

ದಹನಶಕ್ತಿಯನ್ನು ಕಡಿಮೆಯಾಗಿ ಬಳಸುವುದರ ಮೂಲಕ ತ್ಯಾಜ್ಯಗಳನ್ನು ಕಡಿಮೆಗೊಳಿಸಬಹುದು. ತೊಂದರೆಯನ್ನುಂಟುಮಾಡದ ದಹನಶಕ್ತಿ ಉತ್ಪತ್ತಿಗೆ ಬದಲಾಗಬಹುದು.

ವಿಷಹೊಗೆ(Smog) (ಹೊಗೆ ಮಂಜು)

ಹೊಗೆ ಮತ್ತು **ಮಂಜು** ಬೆರೆತ ಮಿಶ್ರಣವೇ **ವಿಷಹೊಗೆ** (ಹೊಗೆ ಮಂಜು) ಎಂಬುದಾಗಿದೆ. ಇದು ಅತೀ ಕೆಡಕನ್ನುಂಟುಮಾಡುವ ಹೊಗೆಯಿಂದ ಮಿಶ್ರಣವಾದ ಮಂಜಾಗಿದೆ. ಇದು ಹೊಗೆ ಮತ್ತು ಕತ್ತಲೆಯಾದ ವಾಯುಮಂಡಲಕ್ಕೆ ಕಾರಣವಾಗಿದೆ. ದೃಷ್ಟಿದೋಷ ಮತ್ತು ತಾಮಸ ಪರಿಸರವನ್ನುಂಟುಮಾಡುತ್ತದೆ.



ವಿಷಹೊಗೆ

ಇದು ಹಲವು ಕಾರಣಗಳಿಂದ ಉಂಟಾಗುವುದು. ವಾಹನಗಳ ಹೊಗೆ, ಬೆಂಕಿ, ತ್ಯಾಜ್ಯಗಳ ಮೇಲ್ಮೈ, ತೈಲ ಉತ್ಪತ್ತಿ, ಕೈಗಾರಿಕೆಗಳ ತ್ಯಾಜ್ಯ, ಬಣ್ಣಗಳು ಮತ್ತು ಬಣ್ಣದ ಲೇಪನ ಇತ್ಯಾದಿಗಳು ಪ್ರಮುಖ ಕಾರಣಗಳಾಗಿವೆ. ಹೊಗೆ ಮಂಜಿನಲ್ಲಿರುವ ಮಾಲಿನ್ಯಗಳು ಕಾರ್ಬನ್ ಮೋನಾಕ್ಸೈಡ್, ಧೂಳು, ಕಸ ಮತ್ತು ಪ್ರಾಣವಾಯು ಮುಂತಾದವುಗಳಾಗಿವೆ. ಸೂರ್ಯನ ಬೆಳಕಿನಲ್ಲಿ ಹೈಡ್ರೋಕಾರ್ಬನ್ ಮತ್ತು ನೈಟ್ರಜನ್ ಆಕ್ಸೈಡ್ ಸೇರುವುದರಿಂದ ಇದು ಉಂಟಾಗುತ್ತದೆ.

ಹೊಗೆ ಮಂಜಿನಿಂದಾಗಿ ಶ್ವಾಸನಾಳ ಮತ್ತು ನಿಮೋನಿಯಾ ರೋಗಗಳು ಉಂಟಾಗುತ್ತವೆ. ಹೊಗೆ ಮಂಜು ನಗರಗಳಿಗೆ ಮಾತ್ರ ಸಮಸ್ಯೆಯಲ್ಲ. ಗಾಳಿಯಲ್ಲಿ ಇತರ ಭಾಗಗಳಿಗೂ ತೆಗೆದುಕೊಂಡು ಹೋಗಲಾಗುವುದು.

ಹೊಗೆಮಂಜಿನಿಂದಾಗಿ ವ್ಯವಸಾಯವೂ ಬಾಧಿಸಲ್ಪಡುವುದು.

ವಾಯು ಮಾಲಿನ್ಯವಾಗುವುದನ್ನು ಹೇಗೆ ಕಡಿಮೆಗೊಳಿಸಬಹುದು?

1. ವಾಹನಗಳನ್ನು ಬಳಸದೆ ಸಮೀಪದಲ್ಲಿರುವ ಅಂಗಡಿಗಳಿಗೆ ನಡೆದು ಹೋಗಬಹುದು.
2. ಸಾಧ್ಯವಾದಾಗಲೆಲ್ಲಾ ಬೈಸಿಕಲ್‌ಗಳನ್ನು ಬಳಸಬಹುದು.
3. ಸರ್ಕಾರಿ ಸಂಚಾರ–ಸಾರಿಗೆಯನ್ನು ಬಳಸಬಹುದು.
4. ಶಾಲೆಗೆ ಹೋಗಲು ಶಾಲಾ ವಾಹನಗಳನ್ನು

ವಿದ್ಯಾರ್ಥಿಗಳು ಬಳಸಬಹುದು.

5. ಕಛೇರಿಗೆ ಹೋಗಲು ಮತ್ತು ಬರಲು ಎಲ್ಲರೂ ಒಂದು ಗುಂಪಿನೊಂದಿಗೆ ಒಂದೇ ಕಾರಿನಲ್ಲಿ ಪ್ರಯಾಣಿಸಬಹುದು.
6. ಏರೋಸೋಲ್ (AEROSOL) ಉಪಯೋಗವನ್ನು ಕಡಿಮೆಗೊಳಿಸಬಹುದು.
7. ಮನೆಯ ಸುತ್ತಲೂ ಮರಗಳನ್ನು ಬೆಳೆಸಬಹುದು.
8. ಹವಾನಿಯಂತ್ರಿತ ಕೊಠಡಿಯನ್ನು ಕುಟುಂಬದ ಸದಸ್ಯರೊಂದಿಗೆ ಹಂಚಿಕೊಳ್ಳಬಹುದು.
9. ಅಗತ್ಯವಿಲ್ಲದಿದ್ದಾಗ ಶೈತ್ಯೀಕರಣ ಸಾಧನಗಳನ್ನು ನಿರುಪಯುಕ್ತಗೊಳಿಸಬಹುದು.
10. ಉದುರಿದ ಎಲೆಗಳನ್ನು ಸುಡದೆ ಗೊಬ್ಬರದ ಗುಂಡಿಯಲ್ಲಿ ಹಾಕಬಹುದು.
11. ನೀವು ಬಳಸುವ ವಾಹನಗಳನ್ನು ಆಗಾಗ್ಗೆ ಹೊಗೆ ಶೋಧನೆ ಮಾಡಬಹುದು.
12. ಸಂಸ್ಕರಿಸಲ್ಪಟ್ಟ ಪೆಟ್ರೋಲನ್ನು ಬಳಸಬಹುದು.
13. ಕಾರುಗಳಲ್ಲಿ ಕ್ರಿಯಾವರ್ಧಕ(CATALYST) ಸಾಧನಗಳನ್ನು ಅಳವಡಿಸಬಹುದು.

2. ಜಲಮಾಲಿನ್ಯ

ಜಲಮಾಲಿನ್ಯ ಎಂಬುದು ರಾಸಾಯನಿಕ, ಭೌತಿಕ ಮತ್ತು ಜೈವಿಕ ಬದಲಾವಣೆಯಾಗುವುದಾಗಿದೆ. ಶುದ್ಧ ನೀರಿನ ಗುಣಮಟ್ಟದಲ್ಲಿ ಉಂಟಾಗುವುದಾಗಿದೆ. ಅದನ್ನು ಬಳಸುವ ಅಥವಾ ಅದರಲ್ಲಿ ಜೀವಿಸುವ ಜೀವರಾಶಿಗಳಿಗೆ ಹಾನಿಯನ್ನುಂಟುಮಾಡುತ್ತದೆ.

ಮಳೆನೀರಿನ ಮಾಲಿನ್ಯಗಳು

ಜಲಮಾಲಿನ್ಯಕ್ಕೆ ಹಲವಾರು ಕಾರಣಗಳಿವೆ, ಅವುಗಳಲ್ಲಿ ಮೊದಲನೆಯದು ರೋಗಕಾರಕ ಅಂಶಗಳು. ಇವುಗಳು ಬ್ಯಾಕ್ಟೀರಿಯಾ, ವೈರಸ್‌ಗಳು, ಪ್ರೋಟೊಜೋವಾ ಮತ್ತು ಪರಾವಲಂಬಿ ಕೀಟಗಳಾಗಿವೆ. ಒಳಚರಂಡಿ ನೀರು ಮತ್ತು ಶುದ್ಧೀಕರಿಸದ ಕೊಳಚೆ ನೀರಿನ ಮೂಲಕವೂ ಹರಡುತ್ತವೆ.

ಎರಡನೆಯದಾಗಿ ಆಮ್ಲಜನಕ ಹೀರುವ ಬ್ಯಾಕ್ಟೀರಿಯಾ – ಇವುಗಳು ಪದಾರ್ಥಗಳನ್ನು ಕೊಳೆಯುವಂತೆ ಮಾಡುವುದರ ಮೂಲಕ ಆಮ್ಲಜನಕವನ್ನು ಹೆಚ್ಚಿಸುತ್ತವೆ. ಈ ಬಗೆಯ ಬ್ಯಾಕ್ಟೀರಿಯಾಗಳು ಅಧಿಕ ಪ್ರಮಾಣದಲ್ಲಿ ಕೆರೆ, ಸರೋವರಗಳಲ್ಲಿ ಕಂಡುಬರುತ್ತವೆ. ಇವು ಮೀನಿನಂತಹ ಜಲಜೀವಿಗಳ ಸಾವಿಗೆ ಕಾರಣವಾಗುತ್ತವೆ.

ಮೂರನೆಯದಾಗಿ ಜಲಮಾಲಿನ್ಯವು ನೀರಿನಲ್ಲಿ ಕರಗಲ್ಪಡುವ ಜೀವವಿಲ್ಲದ ಮಾಲಿನ್ಯಗಳು ಆಮ್ಲಗಳು, ಉಪ್ಪು ಮತ್ತು ವಿಷದ ಲೋಹಗಳಂತಹವುಗಳಾಗಿವೆ. ನೀರು ಅಸಂಖ್ಯಾತ ರಾಸಾಯನಿಕ ಸಂಯುಕ್ತ ವಸ್ತುಗಳಾದ ತೈಲ, ಪ್ಲಾಸ್ಟಿಕ್ ಮತ್ತು ಕ್ರಿಮಿನಾಶಕ ಮುಂತಾದವುಗಳಿಂದ ಮಾಲಿನ್ಯವಾಗುವ ನೀರು ಮಾನವ ಮತ್ತು ಜಲಪ್ರಾಣಿಸಂಕುಲಗಳಿಗೂ ಹಾನಿಯನ್ನುಂಟುಮಾಡುವುದಾಗಿದೆ.



ಜಲಮಾಲಿನ್ಯ

ನೀರು, ಮಲಿನವನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಬಹಳ ಸುಲಭವಾಗಿ ಕೊಂಡುಹೋಗುತ್ತದೆ. ಪ್ರತಿ ವರ್ಷವೂ 6,356,000 ಟನ್‌ಗಳಷ್ಟು ಕೊಳಚೆ ನೀರು, ಕಸ ಮತ್ತು ಕೆಸರುಗಳು ಪ್ರಪಂಚದಲ್ಲಿರುವ ಮಹಾಸಾಗರಗಳಲ್ಲಿ ಸೇರಿಸಲ್ಪಡುತ್ತವೆ. ಗಂಗಾ ನದಿ ಸಮೀಪ 400 ಮಿಲಿಯನ್ ಜನರು ವಾಸಿಸುವರು. 20,00,000 ಜನರು ಗಂಗಾನದಿಯಲ್ಲಿ ಪವಿತ್ರಸ್ನಾನ ಮಾಡುವರು. ಆದರೆ ಗಂಗಾನದಿಯಲ್ಲಿ ರಾಸಾಯನಿಕ ತ್ಯಾಜ್ಯಗಳು, ಕೊಳಚೆ ನೀರು, ಮಾನವ ಮತ್ತು ಪ್ರಾಣಿ ತ್ಯಾಜ್ಯಗಳೂ ಸಹ ತುಂಬಲ್ಪಡುತ್ತವೆ.

ರಾಷ್ಟ್ರೀಯ ಗಂಗಾ ನದಿ ಪಾತ್ರ ಪ್ರಾಧಿಕಾರವು 500 ಕೋಟಿ ರೂಪಾಯಿಗಳನ್ನು ರಾಷ್ಟ್ರೀಯ ಶುದ್ಧೀಕರಣ ಶಕ್ತಿ ನಿಧಿಯಿಂದ (NCEF) ಗಂಗಾನದಿಯನ್ನು ಶುದ್ಧೀಕರಿಸಲು ಬಳಸುತ್ತದೆ.

ಮಲಿನವಾದ ನೀರು ಜಲಮೂಲಗಳಲ್ಲಿರುವ ಪರಿಸರವನ್ನು ಬಾಧಿಸುತ್ತದೆ. ಸ್ವಾಭಾವಿಕ ಆಹಾರ

ಸರಪಳಿಯನ್ನು ಇದು ಬಾಧಿಸುತ್ತದೆ. ಕಾರಿಯಂ, ಕಾಡ್ಮಿಯಂನಂತಹ ಮಲಿನವನ್ನು ಸಣ್ಣ ಪ್ರಾಣಿಗಳು ಆಹಾರದೊಡನೆ ಸೇರಿಸಿ ತೆಗದುಕೊಳ್ಳುತ್ತವೆ. ನಂತರ ಈ ಸಣ್ಣ ಪ್ರಾಣಿಗಳು ಮೀನು ಮತ್ತು ಶೆಲ್ ಮೀನುಗಳಿಗೆ ಆಹಾರವಾಗುತ್ತವೆ. ಇವುಗಳನ್ನು ಮಾನವನು ತಿನ್ನುವುದರಿಂದ ಅಸಂಖ್ಯಾತ ರೋಗಗಳಿಗೆ ಒಳಗಾಗುತ್ತಾನೆ. ಹೀಗೆ ಆಹಾರ ಸರಪಳಿಯೊಳಗೆ ಮಾಲಿನ್ಯಗಳು ಒಳಹೊಕ್ಕುಬಿಡುತ್ತವೆ.

ವಿಷ ಪದಾರ್ಥಗಳು ಸರೋವರಗಳು, ಕೊಳಗಳು, ಸಾಗರಗಳಲ್ಲಿ ಕರಗಿ ಸೇರಿಕೊಳ್ಳುತ್ತವೆ. ಇವು ಜಲಮೂಲಗಳನ್ನು ಬಾಧಿಸುತ್ತವೆ. ಅಲ್ಲದೆ ನೆಲದಲ್ಲಿ ನುಸುಳಿ ಅಂತರ್ಜಲವನ್ನೂ ಸಹ ಕಲುಷಿತಗೊಳಿಸುತ್ತವೆ.

ಪೋಶಕಾಂಶ ಅಧಿಕರಿಸುವಿಕೆ (ಯೂಟ್ರೋಫಿಕೇಷನ್)

ಪೋಷಕಾಂಶ ಅಧಿಕರಿಸುವಿಕೆ ಎಂಬುದು ಪ್ರಾಕೃತಿಕ ಮತ್ತು ಕೃತಕ ವಸ್ತುಗಳು ಜಲಮೂಲಗಳಲ್ಲಿ ಮಿಶ್ರಣವಾಗುವುದಾಗಿದೆ. ರಾಸಾಯನಿಕ ವಸ್ತುಗಳಾದ ಪಾಸ್ಫೇಟುಗಳು, ಗೊಬ್ಬರಗಳು ಮತ್ತು ಪಾಚಿ ಮುಂತಾದವು ಜಲಮೂಲಗಳಲ್ಲಿ ಮಿಶ್ರಣವಾಗುವುದರಿಂದ ಜಲಪರಿಸರವು ಭಾದಿಸಲ್ಪಡುತ್ತದೆ.

ಇದರ ಪರಿಣಾಮವಾಗಿ ನೀರಿನಲ್ಲಿರುವ ಕಡಿಮೆ ವೀರ್ಯಾಣುವಿರುವ ಬ್ಯಾಕ್ಟೀರಿಯಾಗಳು ಅಧಿಕ ವೀರ್ಯಾಣುವನ್ನೊಂದಿ, ನೀರಿನಲ್ಲಿರುವ ಆಮ್ಲಜನಕವನ್ನು ಸಂಪೂರ್ಣವಾಗಿ ತೆಗೆದುಕೊಳ್ಳುತ್ತದೆ. ಅದರಿಂದ ನೀರಿನಲ್ಲಿರುವ ಜೀವರಾಶಿಗಳು ನಾಶವಾಗುವುದಲ್ಲದೇ ಉತ್ಪತ್ತಿಯ ಬೆಳವಣಿಗೆಯೂ ಕಡಿಮೆಯಾಗುತ್ತದೆ.

3. ಭೂ(ಮಣ್ಣು)ಮಾಲಿನ್ಯ

ನಗರಗಳ ತ್ಯಾಜ್ಯವಸ್ತುಗಳನ್ನು ಒಂದು ಸ್ಥಳದಲ್ಲಿ ಸುರಿಯುವುದರಿಂದಲೂ, ಎಲ್ಲೆಲ್ಲಿ ಒಳಚರಂಡಿಗಳು ಭರ್ತಿಯಾಗಿರುತ್ತವೆಯೋ ಆ ಎಲ್ಲಾ ಸ್ಥಳಗಳಲ್ಲಿಯೂ, ಕೀಟನಾಶಕ, ತೈಲ ಮತ್ತು ಇಂಧನಗಳನ್ನು ಸುರಿಯುವುದರಿಂದಲೂ, ಕೈಗಾರಿಕಾ ತ್ಯಾಜ್ಯಗಳನ್ನು ನೇರವಾಗಿ ಮಣ್ಣಿನಲ್ಲಿ ಮಿಶ್ರಣಮಾಡುವುದರಿಂದಲೂ ಭೂಮಿಯು ಮಲಿನವಾಗುತ್ತದೆ.



ಭೂ(ಮಣ್ಣು) ಮಾಲಿನ್ಯವಾಗುವುದು

ಭೂಮಾಲಿನ್ಯವನ್ನು ಹೇಗೆ ತಡೆಗಟ್ಟಬಹುದು?

ಮನೆಯ ತ್ಯಾಜ್ಯವಸ್ತುಗಳನ್ನು ಮರುಬಳಕೆ ಮತ್ತು ಮರು ಆವರ್ತ ಮಾಡಬಹುದು. ರಾಸಾಯನಿಕ ತ್ಯಾಜ್ಯಗಳನ್ನು ವಾಸಿಸುವ ಭಾಗಗಳಿಂದ ದೂರದಲ್ಲಿ ಸುರಿಯಬಹುದು. ರಾಸಾಯನಿಕ ತ್ಯಾಜ್ಯಗಳನ್ನೂ ಸಹ ಮರು ಆವರ್ತ ಮಾಡುವ ಮೂಲಕ ಬಳಸಬಹುದು.

4. ಶಬ್ಧಮಾಲಿನ್ಯ

ಮಾನವನಿಂದ ಅಥವಾ ಯಂತ್ರಗಳಿಂದ ಉಂಟಾಗುವ ಶಬ್ಧವು ಕಾರ್ಯಚಟುವಟಿಕೆಗಳಿಗೆ ಅಡಚಣೆಯಾಗಿವೆ. ಮಾನವನ ಮತ್ತು ಪ್ರಾಣಿಗಳ ಜೀವನವನ್ನು ಬಾಧಿಸುತ್ತದೆ. ಇದನ್ನು ಶಬ್ಧಮಾಲಿನ್ಯ ಎನ್ನುತ್ತೇವೆ.

ಅನಗತ್ಯ ಶಬ್ಧವು ಮಾನವನ ಆರೋಗ್ಯ ಮತ್ತು ಮನಃಸ್ಥಿತಿಯನ್ನು ಬಾಧಿಸುತ್ತದೆ. ಅಧಿಕ ಒತ್ತಡ, ಚಡಪಡಿಸುವಿಕೆ, ಶ್ರವಣ ಸಾಮರ್ಥ್ಯ ಕಡಿಮೆಯಾಗುವುದು. ಅಧಿಕ ಮಾನಸಿಕ ಒತ್ತಡ ಮುಂತಾದ ಕೆಡಕುಗಳನ್ನು ಅಧಿಕವಾದ ಶಬ್ದ ಉಂಟುಮಾಡುತ್ತದೆ.

ಶಬ್ಧಮಾಲಿನ್ಯವನ್ನು ನಿಯಂತ್ರಿಸುವುದು

1. ಹಸಿರು ವಲಯಗಳ ಸಸ್ಯವರ್ಗವನ್ನು ಅಭಿವೃದ್ಧಿಗೊಳಿಸಲು ಶಬ್ಧದ ಪ್ರಮಾಣವನ್ನು ಕಡಿಮೆಗೊಳಿಸಬಹುದು.
2. ಹೆದ್ದಾರಿಗಳ ಬದಿಗಳಲ್ಲಿಯೂ, ಜನಸಮೂಹ ಅಧಿಕವಿರುವ ಸ್ಥಳಗಳಲ್ಲಿಯೂ ಡೆಸಿಬಲ್ ಮೀಟರ್ ಸಾಧನಗಳನ್ನು ಅಳವಡಿಸಬಹುದು.
3. ಮನೆಗಳು, ಶಾಲೆಗಳು, ಆಸ್ಪತ್ರೆಗಳು ಮುಂತಾದ ಸ್ಥಳಗಳಲ್ಲಿ ಸುತ್ತುಗೋಡೆಗಳನ್ನು

ಹೊಂದಿಕೊಂಡಂತೆ ಮರಗಳನ್ನು ಬೆಳೆಸಬಹುದು.

5. ಜೈವಿಕ–ವೈದ್ಯಕೀಯ ತ್ಯಾಜ್ಯಗಳು

ಇವು ಜೀವಕ್ಕೆ ಅಪಾಯಕರವಾದ ರೋಗಗಳನ್ನು ಹರಡುವಂತಹವು. 2010ರ ಏಪ್ರಿಲ್ ತಿಂಗಳ ಪ್ರಾರಂಭದಲ್ಲಿ ದೆಹಲಿಯ ಆಸ್ಪತ್ರೆಯಲ್ಲಿ ರೇಡಿಯೋ ವಿಕಿರಣ ಚಿಕಿತ್ಸೆಗಾಗಿ ಬಳಸಲ್ಪಟ್ಟ ಯಂತ್ರವನ್ನು(COBALT-60-A) ನಗರದಲ್ಲಿ ತ್ಯಾಜ್ಯವಸ್ತುಗಳನ್ನು ಸುರಿಯುವ ಸ್ಥಳಕ್ಕೆ ಕಳುಹಿಸಲಾಯಿತು. ವಿಕಿರಣಕ್ರಿಯೆಯ ಯಂತ್ರದಿಂದಾಗಿ ಅಲ್ಲಿ ಕಾರ್ಯ ನಿರ್ವಹಿಸುತ್ತಿದ್ದವರಿಗೆ ಸಾವು ಸಂಭವಿಸಿತು.

6. ವಿದ್ಯುನ್ಮಾನ ತ್ಯಾಜ್ಯಗಳು

ಬಳಸಲಾಗದ ವಿದ್ಯುನ್ಮಾನ ವಸ್ತುಗಳನ್ನು ವಿದ್ಯುನ್ಮಾನ ತ್ಯಾಜ್ಯಗಳು ಎನ್ನುತ್ತೇವೆ.

ಭಾರತದಲ್ಲಿ 3,80,000 ಟನ್‌ಗಳು ವಿದ್ಯುನ್ಮಾನ ತ್ಯಾಜ್ಯಗಳು ಉತ್ಪತ್ತಿಯಾಗುತ್ತಿವೆ. ದೂರದರ್ಶನ ಪೆಟ್ಟಿಗೆಗಳು, ಕರವಾಣಿಗಳು, ಗಣಕಯಂತ್ರಗಳು, ಶೀತಲಯಂತ್ರ ಪೆಟ್ಟಿಗೆ, ಮುದ್ರಣ ಯಂತ್ರಗಳು ಮುಂತಾದವು ಇವುಗಳಲ್ಲಿ ಅಡಗಿವೆ.



ವಿದ್ಯುನ್ಮಾನ ಮಾಲಿನ್ಯ


7. ಗಣಿಗಾರಿಕೆಯ ತ್ಯಾಜ್ಯಗಳು

ಪರಿಸರ ಮಾಲಿನ್ಯಕ್ಕೆ ಗಣಿಗಾರಿಕೆಯೂ ಮುಖ್ಯ ಕಾರಣವಾಗಿದೆ. ಮಹಾನದಿ ಕಲ್ಲಿದ್ದಲು ಗಣಿಗಳು ದಿನವೊಂದಕ್ಕೆ 25ಕೋಟಿ ಲೀಟರ್ ನೀರನ್ನು ಬ್ರಾಹ್ಮಣಿ ನದಿಯಿಂದ ತೆಗೆದುಕೊಂಡು ಬಳಸಿದ ನಂತರ ಸಾವಿರಾರು ಗ್ಯಾಲನ್ ಕಲುಷಿತ ನೀರನ್ನು ನಾದಿರ್ ನದಿಗೆ ಬಿಡುತ್ತದೆ.

ಈ ಕಲುಷಿತ ನೀರಿನಲ್ಲಿ ಬೂದಿ, ತೈಲ, ಘನಲೋಹಗಳು, ಕೀಲೆಣ್ಣೆ, ರಂಜಕ, ಅಮೋನಿಯಂ, ಂ೦ಽೂರಿಂ೦ಽಾ ವಿ೦ತ್ತು ಗ೦ಧ೦ಕಾವ್ಲ ಮುಂತಾದವುಗಳಿರುತ್ತವೆ. ಅರಣ್ಯಗಳಲ್ಲಿ ಶೇ.90ರಷ್ಟು ರಾಜಸ್ತಾನ ಮತ್ತು ಹರಿಯಾಣಗಳಲ್ಲಿರುವ ಗಣಿಗಳಿಂದ ಮರಗಳು ಕತ್ತರಿಸಲ್ಪಡುತ್ತವೆ. ಬಾವಿಗಳು ಬತ್ತಿಹೋಗುತ್ತವೆ. ಕೃಷಿ ಬಾಧಿಸಲ್ಪಡುತ್ತದೆ.

ಜೀವ ವೈವಿಧ್ಯ

ವಿವಿಧ ಬಗೆಯ ಹಲವಾರು ಜೀವಿಗಳು ಒಂದಾಗಿ ಜೀವಿಸುವ ಪರಿಸರವನ್ನು ಜೀವ ವೈವಿಧ್ಯ ಎನ್ನುತ್ತೇವೆ. ಗ'ಣಿಗ'ಳಿಗೆ ಬ'ೂವಿಂ೦ಽನ್ನು ಸ್ವಾಧೀನಪಡಿಸಿಕೊಳ್ಳುವುದು ಜೀವ ವೈವಿಧ್ಯವನ್ನು ಬಾಧಿಸುತ್ತದೆ. ಜೀವ ವೈವಿಧ್ಯತೆಯ ಪ್ರಮಾಣವು ಆ ಪರಿಸರ ಭಾಗದಲ್ಲಿ ಜೀವಿಸುವ ಜೀವರಾಶಿಗಳನ್ನು ಅನುಸರಿಸಿಯೇ ರೂಪಿತವಾಗುತ್ತದೆ. ಈ ಭೂ ಗ್ರಹದಾದ್ಯಂತ ಪರಿಸರದಲ್ಲಿ ಉಂಟಾದ ಅತಿವೇಗದ ಬದಲಾವಣೆಗೆ ಗಣಿಗಳು ಮತ್ತು ಅಣೆಕಟ್ಟು ಕಟ್ಟುವುದು ಜೀವ ವೈವಿಧ್ಯದ ನಾಶಕ್ಕೆ ಕಾರಣವಾಗುತ್ತವೆ.



ಸುಸ್ಥಿರ ಬೆಳವಣಿಗೆ

ಭಾರತದ ಬಹುತೇಕ ಪರಿಸರ ಸಮಸ್ಯೆಗಳಿಗೆ ಅತ್ಯಧಿಕವಾದ ಜನಸಾಂದ್ರತೆಯೇ ಕಾರಣವಾಗಿದೆ. ಆದ್ದರಿಂದ ಇವುಗಳಿಗೆ ನಾವೆಲ್ಲರೂ ಹೊಣೆ. ಆದ್ದರಿಂದಲೇ ನಾವು ನಮ್ಮೆಲ್ಲರ ಪರಿಸರವನ್ನು ಸಂರಕ್ಷಿಸಿ ಆರೋಗ್ಯವನ್ನು ಸ್ಥಿರಗೊಳಿಸಬೇಕು.

ಇದು ಹೇಗೆ ಸಾಧ್ಯವಾಗುತ್ತದೆಂದರೆ ಸಮರ್ಥವಾಗಿ ಮತ್ತು ಪರಿಸರದೊಡನೆ ವಿಲೀನವಾಗಿ ಹೋಗುವ ಪರಿಸರ ಪ್ರೇಮಿ ತಾಂತ್ರಿಕತೆಯನ್ನು ಬಳಸಬೇಕು.

ನಾವು ನಮಗೆ ಸೂಕ್ತ ದೇಶೀಯ ಕೃಷಿ ವಿಧಾನಗಳನ್ನೂ ಹಾಗೂ ಮಣ್ಣು ಮತ್ತು ನೀರಿನ ಸಂರಕ್ಷಣಾ ವಿಧಾನಗಳನ್ನೂ ಅಳವಡಿಸಿಕೊಳ್ಳಬೇಕು.

ಪರಿಸರ ಸಂರಕ್ಷಣೆಯನ್ನು ಸುಸ್ಥಿರಗೊಳಿಸುವಲ್ಲಿ ಸಮುದಾಯದ ಪಾತ್ರ ಎಂಬುದು ಅತ್ಯಗತ್ಯವಾಗಿದೆ.

ಅಭ್ಯಾಸ

ಅ. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1. ಕೊಳಗಳು ಮತ್ತು ಸರೋವರಗಳಲ್ಲಿ ಸ್ವಾಭಾವಿಕ ಪೋಷಕಾಂಶ ಅಧಿಕಗೊಳಿಸುವುದು

   ಅ) ಜಲಮಾಲಿನ್ಯ ಆ) ಪೋಷಕಾಂಶ ಅಧಿಕರಿಸುವಿಕೆ ಇ) ವಾಯುಮಾಲಿನ್ಯ ಈ) ಶಬ್ಧಮಾಲಿನ್ಯ

2. ಸ್ವಾಭಾವಿಕ ವಾಯು ಮಾಲಿನ್ಯಕ್ಕೆ ಮುಖ್ಯ ಕಾರಣ

   ಅ) ವಾಹನದ ಹೊಗೆ ಆ) ಜ್ವಾಲಾಮುಖಿ ಸ್ಪೋಟ ಇ) ಅಣುವಿದ್ಯುಚ್ಛಕ್ತಿ ನಿಲಯ ಈ) ಪೋಷಕಾಂಶ ಅಧಿಕರಿಸುವಿಕೆ

3. ಭಾರತದ ಬಹುತೇಕ ಪರಿಸರ ಸಮಸ್ಯೆಗಳಿಗೆ ಕಾರಣ

   ಅ) ಮಿತ ಜನಸಾಂದ್ರತೆ ಆ) ಅಧಿಕ ಜನಸಾಂದ್ರತೆ ಇ) ಅತ್ಯಧಿಕ ಜನಸಾಂದ್ರತೆ ಈ) ಕಡಿಮೆ ಜನಸಾಂದ್ರತೆ

ಆ. ವ್ಯತ್ಯಾಸಗಳನ್ನು ಬರೆಯಿರಿ.

1. ಜಲಮಾಲಿನ್ಯ – ಭೂಮಾಲಿನ್ಯ
2. ವಾಯುಮಾಲಿನ್ಯ – ಶಬ್ಧಮಾಲಿನ್ಯ

ಇ. ಸಂಕ್ಷಿಪ್ತವಾಗಿ ಉತ್ತರಿಸಿ.

1. ಜಲಮಾಲಿನ್ಯ ಎಂದರೇನು?
2. ವಾಯುಮಲಿನಗಳನ್ನು ಪಟ್ಟಿಮಾಡಿ.
3. ಶಬ್ಧಮಾಲಿನ್ಯ ಎಂದರೇನು?
4. ಜಲಮಾಲಿನ್ಯಕ್ಕೆ ಪ್ರಮುಖ ಕಾರಣಗಳು ಯಾವುವು?
5. ಜೀವವೈವಿಧ್ಯ ಎಂದರೇನು?
6. ಜೈವಿಕ–ವೈದ್ಯಕೀಯ ತ್ಯಾಜ್ಯಗಳು ಮಾಲಿನ್ಯಕ್ಕೆ ಹೇಗೆ ಕಾರಣವಾಗಿವೆ?
7. ವಿದ್ಯುನ್ಮಾನ ತ್ಯಾಜ್ಯ ಎಂದರೇನು?

ಈ. ಒಂದು ಪುಟದಲ್ಲಿ ಉತ್ತರಿಸಿ.

1. ಆಮ್ಲಮಳೆಯ ಪರಿಣಾಮಗಳು ಯಾವುವು?
2. ವಿಷಹೊಗೆ (ಹೊಗೆಮಂಜು) ಎಂದರೇನು? ಅದರ ಪರಿಣಾಮಗಳು ಯಾವುವು?
3. ವಾಯುಮಾಲಿನ್ಯ ಕುರಿತು ವಿವರಿಸಿ.

7.ವ್ಯಾಪಾರ, ಸಾರಿಗೆ ಮತ್ತು ಸಂಪರ್ಕ

ಭಾರತ ಸುಂದರವಾದ ಭೂಮೇಲ್ಮೈಯನ್ನು, ಹೇರಳವಾದ ಸಂಪನ್ಮೂಲಗಳನ್ನು, ವಿಶಾಲವಾದ ಭೂವಿಸ್ತೀರ್ಣವನ್ನು ಹೊಂದಿರುವ ರಾಷ್ಟ್ರವಾಗಿದೆ. ಆದರೆ ಸಂಪನ್ಮೂಲಗಳು ಸಮಾನವಾಗಿ ಹಂಚಿಕೆಯಾಗಿಲ್ಲದಿರುವುದರಿಂದ ರಾಷ್ಟ್ರದ ಒಂದು ಭಾಗದಲ್ಲಿ ಹೇರಳವಾದ ಸಂಪನ್ಮೂಲಗಳು ಮತ್ತೊಂದು ಭಾಗದಲ್ಲಿ ಸಂಪನ್ಮೂಲಗಳ ಕೊರತೆ ಕಂಡುಬರುತ್ತದೆ. ಇದರಿಂದಾಗಿ ವ್ಯಾಪಾರದ ಮೂಲಕ ಹೆಚ್ಚುವರಿಯಾದ ವಸ್ತುಗಳನ್ನು ಕೊರತೆಯಿರುವ ಸ್ಥಳಗಳಿಗೆ ಸಾಗಿಸಲಾಗುತ್ತದೆ. ಹೀಗಾಗಿ ವ್ಯಾಪಾರವು ಸರಕುಗಳನ್ನು ಕೊಂಡುಕೊಳ್ಳುವುದು, ಮಾರಾಟಮಾಡುವುದು ಅಥವಾ ಸರಕುಗಳ ವಿನಿಮಯ ಮತ್ತು ಸೇವೆಗಳಾಗಿವೆ. ರಾಷ್ಟ್ರದ ಆರ್ಥಿಕಾಭಿವೃದ್ಧಿಗೆ ವ್ಯಾಪಾರದ ಬೆಳವಣಿಗೆಯು ಮಹತ್ವದ್ದಾಗಿದೆ. ಆದರೆ ವ್ಯಾಪಾರ ಬೆಳವಣಿಗೆಯು ಸುಸಜ್ಜಿತ ಸುವ್ಯವಸ್ಥಿತ ಮಾರುಕಟ್ಟೆ, ಉತ್ತಮ ಸಾರಿಗೆ ಮತ್ತು ಸಂಪರ್ಕ ವ್ಯವಸ್ಥೆಯನ್ನು ಅವಲಂಬಿಸಿರುತ್ತದೆ. ಹೀಗೆ ಇವುಗಳ ಬೆಳವಣಿಗೆಯು ಒಂದು ರಾಷ್ಟ್ರದ ಆರ್ಥಿಕಾಭಿವೃದ್ಧಿಗೆ ತಳಹದಿಯಾಗಿದೆ.

ಸಾಮಾನ್ಯವಾಗಿ ವ್ಯಾಪಾರದಲ್ಲಿ ಎರಡು ವಿಧಗಳಿವೆ. ಅವುಗಳೆಂದರೆ, ದೇಶೀಯ ವ್ಯಾಪಾರ ಮತ್ತು ಅಂತರ ರಾಷ್ಟ್ರೀಯ ವ್ಯಾಪಾರವಾಗಿವೆ. ಒಂದು ರಾಷ್ಟ್ರದ ಗಡಿಯೊಳಗೆ ನಡೆಯುವ ವ್ಯಾಪಾರವನ್ನು ದೇಶಿಯ ವ್ಯಾಪಾರ ಅಥವಾ ಸ್ಥಳೀಯ ವ್ಯಾಪಾರ ಎನ್ನುವರು. ದೇಶಿಯ ವ್ಯಾಪಾರದಲ್ಲಿ ಸಾರಿಗೆಯು ಪ್ರಮುಖ ಪಾತ್ರವಹಿಸುತ್ತದೆ. ಇದಲ್ಲದೆ ಈ ವ್ಯಾಪಾರ ಪದ್ಧತಿಯಲ್ಲಿ ಆ ರಾಷ್ಟ್ರದ ಕಾಗದದ ನೋಟುಗಳನ್ನು ಬಳಸಲಾಗುತ್ತದೆ. ಈ ವ್ಯಾಪಾರ ಪದ್ಧತಿಯು ರಾಷ್ಟ್ರದ ಪ್ರಾದೇಶಿಕ ಬೆಳವಣಿಗೆ ಉತ್ತಮವಾಗಿ ನಡೆಯಲು ಹಾದಿಮಾಡಿಕೊಟ್ಟಿದೆ.

. ಉದಾಹರಣೆಗೆ, ಅಸ್ಸಾಂ ನಿಂದ ಟೀ, ಕರ್ನಾಟಕದಿಂದ ಕಾಫಿ, ಕೇರಳದಿಂದ ಸಾಂಬಾರಪದಾರ್ಥಗಳು, ಜಾರ್ಖಂಡ್, ಒರಿಸ್ಸಾ, ಪಶ್ಚಿಮಬಂಗಾಳ ಗಳಿಂದ ಖನಿಜಗಳು ರಾಷ್ಟ್ರದ ಹಲವಾರು ಭಾಗಗಳಿಗೆ ಸರಬರಾಜಾಗುತ್ತದೆ.

ಅಂತರರಾಷ್ಟ್ರೀಯ ವ್ಯಾಪಾರ

ಎರಡು ಅಥವಾ ಅದಕ್ಕಿಂತ ಹೆಚ್ಚು ರಾಷ್ಟ್ರಗಳ ನಡುವೆ ನಡೆಯುವ ವ್ಯಾಪಾರ ಅಂತರರಾಷ್ಟ್ರೀಯ ವ್ಯಾಪಾರ ಅಥವಾ ಹೊರಗಿನ ವ್ಯಾಪಾರ. ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಜಲ ಸಾರಿಗೆಯು ಪ್ರಮುಖ ಪಾತ್ರವಹಿಸುತ್ತದೆ. ಇದಲ್ಲದೆ ಈ ವ್ಯಾಪಾರ ಪದ್ಧತಿಯಲ್ಲಿ ವಿದೇಶಿ ಚಲಾವಣೆಯನ್ನು ಬಳಸಲಾಗುತ್ತದೆ. ರಾಷ್ಟ್ರದ ತೀವ್ರ ಆರ್ಥಿಕ ಬೆಳವಣಿಗೆಯಾಗಲು ಅಂತರರಾಷ್ಟ್ರೀಯ ವ್ಯಾಪಾರ ಸಹಾಯ ಮಾಡುತ್ತದೆ. ಉದಾ: ಭಾರತ ಕಬ್ಬಿಣದ ಅದಿರನ್ನು ಜಪಾನಿಗೆ ಸರಬರಾಜುಮಾಡುತ್ತದೆ.

ಅಂತರರಾಷ್ಟ್ರೀಯ ವ್ಯಾಪಾರವನ್ನು ಎರಡು ವಿಭಾಗಗಳಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ 1. ದ್ವಿರಾಷ್ಟ್ರಗಳವ್ಯಾಪಾರ 2. ಬಹುರಾಷ್ಟ್ರಗಳ ವ್ಯಾಪಾರ

ದ್ವಿರಾಷ್ಟ್ರಗಳ ವ್ಯಾಪಾರ

ಎರಡು ರಾಷ್ಟ್ರಗಳು ಮಾಡಿಕೊಂಡಿರುವ ಒಪ್ಪಂದದಂತೆ ನಡೆಯುವ ವ್ಯಾಪಾರವನ್ನು ನೇರ ವ್ಯಾಪಾರ; ದ್ವಿರಾಷ್ಟ್ರಗಳ ವ್ಯಾಪಾರ ಎಂದು ಕರೆಯಲಾಗುತ್ತದೆ. ಒಂದು ರಾಷ್ಟ್ರ ತನಗೆ ಅಗತ್ಯವಾದ ವಸ್ತುಗಳನ್ನು ಬೇರೊಂದು ರಾಷ್ಟ್ರದಿಂದ ಆಮದು ಮಾಡಿಕೊಳ್ಳುತ್ತದೆ. ಅದಕ್ಕೆ ಬದಲಾಗಿ ತನ್ನಲ್ಲಿರುವ ಹೆಚ್ಚುವರಿ ಉತ್ಪಾದನಾ ವಸ್ತುಗಳನ್ನು ಅದೇ ರಾಷ್ಟ್ರಕ್ಕೆ ರಫ್ತುಮಾಡುತ್ತದೆ.

ಬಹುರಾಷ್ಟ್ರಗಳ ವ್ಯಾಪಾರ

ಹಲವು ರಾಷ್ಟ್ರಗಳ ನಡುವೆ ನಡೆಯುವ ವ್ಯಾಪಾರವನ್ನು ಬಹು ರಾಷ್ಟ್ರಗಳ ವ್ಯಾಪಾರ ಎನ್ನುವರು. ಒಂದು ರಾಷ್ಟ್ರ ತನ್ನಲ್ಲಿ ಹೆಚ್ಚುವರಿಯಾಗಿ ಇರುವ ವಸ್ತುವನ್ನು ಅಗತ್ಯವಿರುವ ರಾಷ್ಟ್ರಕ್ಕೆ ರಫ್ತುಮಾಡಿ ಬರುವ ಆದಾಯದಲ್ಲಿ ಬೇರೊಂದು ರಾಷ್ಟ್ರದಿಂದ ತನಗೆ ಅಗತ್ಯವಾದ ವಸ್ತುಗಳನ್ನು ಆಮದು ಮಾಡಿಕೊಳ್ಳುವುದನ್ನು ಬಹುರಾಷ್ಟ್ರೀಯ ವ್ಯಾಪಾರ ಎನ್ನುವರು. ಈ ವ್ಯಾಪಾರವನ್ನು ಸರಳಗೊಳಿಸಲು ಏಷ್ಯಾದ ಪೆಸಿಫಿಕ್ ಆರ್ಥಿಕ ಒಕ್ಕೂಟ(Asian Pacific

Economic Community- APEC), ಆಗ್ನೇಯ ಏಷ್ಯಾ ರಾಷ್ಟ್ರಗಳ ಒಕ್ಕೂಟ (Association of South East Asian Nations- ASEAN) ಮತ್ತು ದಕ್ಷಿಣ ಏಷ್ಯಾದ ಆದ್ಯತಾ ವ್ಯಾಪಾರ ಒಪ್ಪಂದ(South Asian Preferential Trade Agreement - SAPTA) ದಂತಹ ವ್ಯಾಪಾರ ಸಂಸ್ಥೆಗಳನ್ನು ಸ್ಥಾಪಿಸಲಾಯಿತು. ಈ ಪದ್ಧತಿಯು ಕಠಿಣವಾಗಿದ್ದರೂ ವ್ಯಾಪಾರದಲ್ಲಿ ತೊಡಗಿ ಎಲ್ಲಾ ರಾಷ್ಟ್ರಗಳು ವ್ಯಾಪಾರ ಒಪ್ಪಂದದಲ್ಲಿ ಸಹಿ ಹಾಕುವಾಗ ಒಂದು ಶ್ರೇಷ್ಠ ವ್ಯಾಪಾರವಾಗಿ ಸ್ಥಿರಗೊಳ್ಳುತ್ತದೆ.

ವ್ಯಾಪಾರದ ಸಾಧಕಗಳು

ರಫ್ತು ಮತ್ತು ಆಮದು ಇವೆರಡು ಸಹ ವ್ಯಾಪಾರದ ಮುಖ್ಯ ಸಾಧಕಗಳಾಗಿವೆ. ರಫ್ತು ರಾಷ್ಟ್ರದ ಹೆಚ್ಚುವರಿ ವಸ್ತುಗಳನ್ನು ಸೇವೆಗಳನ್ನು ವಿದೇಶಿ ಚಲಾವಣೆಗಾಗಿ ಹೊರ ದೇಶಕ್ಕೆ ಮಾರಾಟ ಮಾಡಲಾಗುತ್ತದೆ. ಭಾರತ ಹೆಚ್ಚು ಕಡಿಮೆ 7500 ವಿವಿಧ ವಸ್ತುಗಳನ್ನು ವಿಶ್ವದ ಸುಮಾರು 190 ರಾಷ್ಟ್ರಗಳಿಗೆ ರಫ್ತು ಮಾಡುತ್ತದೆ.

ಆಮದು, ತಮಗೆ ಬೇಕಾದ ವಸ್ತುಗಳನ್ನೂ, ಸೇವೆಗಳನ್ನೂ ಹೊರ ದೇಶಗಳಿಂದ ಪಡೆದುಕೊಳ್ಳುವುದಾಗಿದೆ. ಸುಮಾರು 6000 ವಿವಿಧ ವಸ್ತುಗಳನ್ನು 140 ರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುತ್ತದೆ. ಹಣದ ಮೌಲ್ಯಕ್ಕೆ ಆಮದಾಗುವ ವಸ್ತುಗಳ ಮೌಲ್ಯದ ನಡುವೆ ಇರುವ ವ್ಯತ್ಯಾಸವೇ ವ್ಯಾಪಾರ ಸಮಸ್ಥಿತಿಯಾಗಿದೆ. ರಫ್ತಾಗುವ ವಸ್ತುಗಳ ಮೌಲ್ಯಕ್ಕಿಂತ ಹೆಚ್ಚಾಗಿದ್ದರೆ ಅದನ್ನು ಅನುಕೂಲಕರವಾದ ವ್ಯಾಪಾರ ಸಮಸ್ಥಿತಿ ಎನ್ನುವ ಬದಲಾಗಿ ಆಮದಾಗುವ ವಸ್ತುಗಳ ಮೌಲ್ಯ ರಫ್ತಾಗುವ ವಸ್ತುಗಳ ಮೌಲ್ಯಕ್ಕಿಂತ ಹೆಚ್ಚಾಗಿದ್ದರೆ ಅನಾನುಕೂಲಕರ ವ್ಯಾಪಾರ ಸಮಸ್ಥಿತಿ ಎನ್ನುವರು. ಉದಾಹರಣೆಗೆ ಭಾರತ ಒಂದು ರಾಷ್ಟ್ರದ ಹಣದ ಮೌಲ್ಯ ಆ ರಾಷ್ಟ್ರದ ವ್ಯಾಪಾರ ಸಮಸ್ಥಿತಿಯನ್ನು ಅವಲಂಬಿಸಿರುತ್ತದೆ.

ಭಾರತದಿಂದ ರಫ್ತಾಗುವ ವಸ್ತುಗಳು

1. ವ್ಯವಸಾಯ ಉತ್ಪನ್ನಗಳು

ಧಾನ್ಯಗಳು, ದ್ವಿದಳಧಾನ್ಯಗಳು, ಟೀ, ಕಾಫಿ, ಸಾಂಬಾರ ವಸ್ತುಗಳು, ಕಾಯಿಗಳು ಮತ್ತು ಬೀಜಗಳು, ಸಕ್ಕರೆ ಮತ್ತು ಬೆಲ್ಲ, ಆಹಾರ ಪದಾರ್ಥಗಳು ಮಾಂಸ ಮತ್ತು ಮಾಂಸದ ಉತ್ಪನ್ನಗಳು.

2. ಅದಿರುಗಳು ಮತ್ತು ಖನಿಜಗಳು

ಕಬ್ಬಿಣದ ಅದಿರು, ಕಲ್ಲಿದ್ದಲು, ಮ್ಯಾಂಗನೀಸ್, ಮೈಕಾ, ಅಲ್ಯುಮಿನಿಯಂ ಮುಂತಾದವುಗಳು

3. ಚರ್ಮ ಮತ್ತು ಚರ್ಮದ ಉತ್ಪನ್ನಗಳು

ಚೀಲಗಳು, ಹಣದ ಚೀಲಗಳು, ಸಣ್ಣಚೀಲಗಳು, ಕೈಚೀಲಗಳು, ಸೊಂಟಪಟ್ಟಿಗಳು, ಪಾದರಕ್ಷೆ ಮತ್ತು ಕೈಚೀಲ ಮುಂತಾದವುಗಳು

4. ರಾಸಾಯನಿಕ ಉತ್ಪನ್ನಗಳು

ಔಷಧಿಗಳು, ಸೌಂದರ್ಯ ವರ್ಧಕಗಳು, ರಬ್ಬರ್ ಮತ್ತು ಗಾಜು ಮೊದಲಾದವುಗಳು.

5. ವಜ್ರದ ಅರಳುಗಳು ಮತ್ತು ಆಭರಣಗಳು

ಬೆಲೆಬಾಳುವ ಆಭರಣಗಳು, ಚಿನ್ನ, ಚಿನ್ನದ ಆಭರಣಗಳು, ಅಲಂಕಾರ ವಸ್ತುಗಳು ಮತ್ತು ಪ್ರಾಚೀನ ಆಭರಣಗಳು

6. ಯಂತ್ರೋಪಕರಣಗಳ ಸರಕುಗಳು

ಯಂತ್ರೋಪಕರಣಗಳು, ಕಬ್ಬಿಣ ಮತ್ತು ಉಕ್ಕು, ವಿದ್ಯುನ್ಮಾನ ಸರಕುಗಳು ಗಣಕಯಂತ್ರ ಮತ್ತು ತಂತ್ರಾಂಶ (ಸಾಫ್ಟ್‌ವೇರ್)

7. ಸಿದ್ಧಉಡುಪುಗಳು ಮತ್ತು ಕರಕುಶಲ ಉತ್ಪನ್ನಗಳು

ಸಿದ್ಧಉಡುಪುಗಳು, ಹತ್ತಿ, ನೂಲಿನ ಎಳೆ, ಜರಿಗೆ ಉತ್ಪನ್ನಗಳು

ಭಾರತ ಆಮದು ಮಾಡಿಕೊಳ್ಳುವ ವಸ್ತುಗಳು

ಸಾರಿಗೆ ಯಂತ್ರಗಳ ಸಾಧನ ಸಲಕರಣೆಗಳು, ಯಂತ್ರಗಳ ಬಿಡಿಭಾಗಗಳು, ವಿದ್ಯುನ್ಮಾನ ಮತ್ತು ವಿದ್ಯುತ್‌ಯಂತ್ರಗಳು, ಗೋಧಿ, ಔಷಧಿಗಳು ಮತ್ತು ಪೆಟ್ರೋಲಿಯಂ, ಗೊಬ್ಬರಗಳು ಮತ್ತು ವಾರ್ತಾ ಮುದ್ರಣಗಳಾಗಿವೆ.

1950–51ರಲ್ಲಿ ಭಾರತದ ರಫ್ತು ಮೌಲ್ಯ 607 ಕೋಟಿ ರೂಪಾಯಿಗಳಾಗಿಯೂ, 1950–51ರಲ್ಲಿ ಆಮದು ಮಾಡಿಕೊಂಡ ವಸ್ತುಗಳ ಮೌಲ್ಯ 580 ಕೋಟಿ ರೂಪಾಯಿಗಳಾಗಿದೆ. ಆದರೆ **2012-13** ರಲ್ಲಿ ಆಮದು ಮಾಡಿಕೊಂಡ ವಸ್ತುಗಳ ಮೌಲ್ಯ 590.6 ಬಿಲಿಯನ್

ಅಮೆರಿಕನ್ ಡಾಲರ್ ಹಾಗೂ ರಫ್ತು ಮಾಡಿದ ಮೌಲ್ಯ 464.2 ಬಿಲಿಯನ್ ಅಮೆರಿಕನ್ ಡಾಲರ್‌ಗಳಾಗಿವೆ.

ಭಾರತದ ಅಂತರ್‌ರಾಷ್ಟ್ರೀಯ ವ್ಯಾಪಾರ ವಿಶ್ವವಾಣಿಜ್ಯಕಟ್ಟೆಯಲ್ಲಿ ಭಾರತದಲ್ಲಿ ಆರ್ಥಿಕ ಬೆಳವಣಿಗೆಯಾಗುತ್ತಿರುವುದನ್ನು ಪ್ರತಿಬಿಂಬಿಸುತ್ತದೆ. ಭಾರತ ಅಂತರ್‌ರಾಷ್ಟ್ರೀಯ ವ್ಯಾಪಾರವನ್ನು ಹೆಚ್ಚಿಸುವ ಉದ್ದೇಶದಿಂದ 2004ರಿಂದ ಭಾರತ ಸರಕಾರ ಮುಕ್ತ ವ್ಯಾಪಾರ ನೀತಿಯನ್ನು ಅನುಸರಿಸುತ್ತಾ ಬಂದಿದೆ.

ಭಾರತದ ಅಂತರ ರಾಷ್ಟ್ರೀಯ ವ್ಯಾಪಾರ ನೀತಿ 2004ರ ವಿಶೇಷ ಅಂಶಗಳು

ಉತ್ಪನ್ನಗಳ ಮಾರಾಟ ಎರಡರಷ್ಟು ಹೆಚ್ಚಳವಾಗಿದೆ. ಉಪನಗರ ಪ್ರದೇಶಗಳಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿಯೂ ಉದ್ಯೋಗ ಸೃಷ್ಟಿಗೆ ಗಮನಹರಿಸಲಾಗುತ್ತಿದೆ. ವ್ಯಾಪಾರಕ್ಕೆ ಸಂಬಂಧಿಸಿದ ನಿಯಮಗಳನ್ನು ಸರಳಗೊಳಿಸಿ ತೆರಿಗೆಯನ್ನು ಕಡಿಮೆಗೊಳಿಸಲಾಗಿದೆ. ಭಾರತ ವಿಶ್ವವ್ಯಾಪಾರ ಕೇಂದ್ರವನ್ನಾಗಿ ಮಾಡುವುದಕ್ಕೆ ವಿಶೇಷ ಗಮನ ಹರಿಸುತ್ತಿದೆ.

ಹಣ್ಣುಗಳು, ತರಕಾರಿಗಳು, ಹೂವುಗಳು ಮತ್ತು ಕೆಲವು ಅರಣ್ಯವಸ್ತುಗಳನ್ನು ರಫ್ತುಮಾಡಲು ನೂತನ ಕೃಷಿ ಉತ್ಪಾದನಾ ಬೆಳವಣಿಗೆ ಯೋಜನೆ ವಿಶೇಷ ಕೃಷಿ ಉದಾಜ್ ಯೋಜನೆಯನ್ನು ಪರಿಚಯಿಸಲಾಯಿತು.

ಭಾರತದ ಸಾರಿಗೆ ವ್ಯವಸ್ಥೆ

ಒಂದು ರಾಷ್ಟ್ರದ ಅಭಿವೃದ್ಧಿಯು ವಸ್ತುಗಳ ಉತ್ಪಾದನೆ ಮತ್ತು ಸೇವೆಗಳು ಮಾತ್ರವಲ್ಲದೆ ಸಮರ್ಥ ಸಾರಿಗೆ ಸಂಸ್ಥೆಗಳನ್ನೂ ಒಳಗೊಂಡಿರುತ್ತದೆ. ವಸ್ತುಗಳ ಉತ್ಪಾದನೆಗೆ ಅಗತ್ಯವಾದ ಕಚ್ಚಾ ವಸ್ತುಗಳನ್ನು ಉತ್ಪಾದನಾ ಸ್ಥಳಕ್ಕೆ ಉತ್ಪಾದನೆ ಮಾಡಿದ ವಸ್ತುಗಳನ್ನು ಮಾರುಕಟ್ಟೆಗೆ ಸಾಗಿಸಲು ಸಹಾಯಕವಾಗಿದೆ. ಸಾಮಾಜಿಕ ಸಂಬಂಧ ಮತ್ತು ಆರ್ಥಿಕ ಅಭ್ಯುದಯವನ್ನು ವಿಸ್ತರಿಸಲು ನಿಕಟವಾದ ಸಾರಿಗೆ ಮಾರ್ಗಗಳು ಮುಖ್ಯವಾದುದಾಗಿದೆ. ಇವು ರಾಷ್ಟ್ರದ ಭದ್ರತೆಯನ್ನು ದೃಢಪಡಿಸುವುದರಿಂದ ರಾಷ್ಟ್ರದ ಒಗ್ಗಟ್ಟನ್ನು ಬಲಪಡಿಸುತ್ತದೆ. ತ್ವರಿತ ಸಾರಿಗೆ ಮಾರ್ಗಗಳಿಂದ ಅಭಿವೃದ್ಧಿ ಹೊಂದಿದ ಸಂಪರ್ಕ ವ್ಯವಸ್ಥೆಯಿಂದಾಗಿ ಭಾರತ ವಿಶ್ವದ ಇತರೆ ರಾಷ್ಟ್ರಗಳ ಜೊತೆ ನಿಕಟವಾದ ಸಂಪರ್ಕವನ್ನು ಹೊಂದಿದೆ.

ರಸ್ತೆ ಸಾರಿಗೆ


ಭಾರತದ ರಸ್ತೆ ಸಾರಿಗೆಯು ಕಡಿಮೆ ಖರ್ಚಿನ ಅತ್ಯುತ್ತಮವಾದ ಸಾರಿಗೆ ವ್ಯವಸ್ಥೆಯಾಗಿದೆ.

ಭಾರತದ ರಸ್ತೆ ಸಾರಿಗೆಯು ರಾಷ್ಟ್ರದ ಹಲವಾರು ಭಾಗಗಳನ್ನು ಅಧಿಕ ರಸ್ತೆಗಳಿಂದ ಒಂದು ಗೂಡಿಸುವ ಸುಲಭ ಮಾರ್ಗವಾಗಿದೆ. ನಮ್ಮ ರಾಷ್ಟ್ರದ ಉದ್ದವಾದ, ಅಗಲಕ್ಕನುಗುಣವಾಗಿ ರಸ್ತೆ ಸಾರಿಗೆಯು ವಿಶಾಲವಾಗಿ ನಿರ್ಮಿಸಲ್ಪಟ್ಟಿದೆ.

ರಸ್ತೆಗಳು ರಾಷ್ಟ್ರದ ಎಲ್ಲಾ ವರ್ಗದವರು ಉಪಯೋಗಿಸುವಂತಾಗಿದೆ. ಭಾರತದ ರಸ್ತೆ ಸಾರಿಗೆಯು 3.314 ಮಿಲಿಯನ್ ಕಿ.ಮೀ.ಉದ್ದದ ರಸ್ತೆ ಸಾರಿಗೆ ಹೊಂದಿರುವ ವಿಶ್ವದ ಎರಡನೇ ಅತೀ ದೊಡ್ಡ ರಸ್ತೆ ಸಾರಿಗೆಯಾಗಿದೆ. ಗ್ರಾಮಾಂತರ ರಸ್ತೆಗಳು, ಜಿಲ್ಲಾ ರಸ್ತೆಗಳು, ರಾಜ್ಯ ಹೆದ್ದಾರಿಗಳು, ರಾಷ್ಟ್ರೀಯ ಹೆದ್ದಾರಿಗಳು, ಸುವರ್ಣ ಚತುಷ್ಪತ, ಉತ್ಕೃಷ್ಟ ಹೆದ್ದಾರಿಗಳು, ವೇಗದ ಹೆದ್ದಾರಿಗಳು, ಗಡಿರಸ್ತೆಗಳು ಮತ್ತು ಅಂತರರಾಷ್ಟ್ರೀಯ ಹೆದ್ದಾರಿಗಳೆಂದು ವಿಂಗಡಿಸಲಾಗಿದೆ.

ಗ್ರಾಮಾಂತರ ರಸ್ತೆಗಳು

ಗ್ರಾಮಾಂತರ ರಸ್ತೆಗಳು ಹಲವಾರು ಗ್ರಾಮಗಳು, ನಗರಗಳೊಡನೆ ಸೇರಿಸುವ ರಸ್ತೆಗಳಾಗಿವೆ.



ಈ ರಸ್ತೆಗಳು ಗ್ರಾಮ ಪಂಚಾಯಿತಿಗಳಿಂದ ನಿರ್ವಹಣೆ ಮಾಡುತ್ತಾ ಬಂದಿವೆ. ಭಾರತದಲ್ಲಿ 26,50,000ಕಿ.ಮೀ. ಉದ್ದದ ರಸ್ತೆಗಳು ಕಂಡು ಬರುತ್ತದೆ.

ಜಿಲ್ಲಾ ರಸ್ತೆಗಳು

ಜಿಲ್ಲಾ ರಸ್ತೆಗಳು ಗ್ರಾಮಗಳನ್ನು ಜಿಲ್ಲೆಯ ಮುಖ್ಯನಗರಗಳೊಡನೆ ಸಂಪರ್ಕ ಕಲ್ಪಿಸುತ್ತವೆ. ಇವುಗಳನ್ನು ಮಹಾನಗರಗಳು, ಪುರಸಭೆಗಳು ನಿರ್ವಹಣೆ ಮಾಡುತ್ತವೆ. ಭಾರತದಲ್ಲಿ ಜಿಲ್ಲಾ ರಸ್ತೆಗಳು 4,67,763ಕಿ.ಮೀ. ಉದ್ದದ ವರೆಗೆ ಹಬ್ಬಿದೆ.

ರಾಜ್ಯ ಹೆದ್ದಾರಿಗಳು

ರಾಜ್ಯ ಹೆದ್ದಾರಿಗಳು ರಾಜ್ಯದ ರಾಜಧಾನಿಯೊಡನೆ ಹಲವಾರು ಜಿಲ್ಲಾ ಮುಖ್ಯನಗರಗಳೊಡನೆ ಸಂಪರ್ಕ ಕಲ್ಪಿಸುತ್ತವೆ. ರಾಜ್ಯ ಲೋಕೋಪಯೋಗಿ ಇಲಾಖೆಯಿಂದ ನಿರ್ವಹಣೆ ಮಾಡಲಾಗುತ್ತದೆ. ಭಾರತದಲ್ಲಿ 1,31,899 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿಗಳಿವೆ. ರಾಜ್ಯ ಹೆದ್ದಾರಿಗಳಿಗೆ ಉದಾಹರಣೆಗೆ ಕಡಲೂರು, ಚಿತ್ತೂರು ರಾಜ್ಯ ಹೆದ್ದಾರಿ.

ರಾಷ್ಟ್ರೀಯ ಹೆದ್ದಾರಿಗಳು

ರಾಜ್ಯದ ರಾಜಧಾನಿಗಳನ್ನು ರಾಷ್ಟ್ರದ ರಾಜಧಾನಿಯೊಡನೆ ಸಂಪರ್ಕ ಕಲ್ಪಿಸುವ ರಸ್ತೆಗಳೇ ರಾಷ್ಟ್ರೀಯ ಹೆದ್ದಾರಿಗಳಾಗಿವೆ. ಈ ರಸ್ತೆಗಳು ರಾಷ್ಟ್ರದ ಮೇಲ್ದರ್ಜೆ ರಸ್ತೆಗಳಾಗಿವೆ. ಇವುಗಳನ್ನು ಕೇಂದ್ರ ಲೋಕೋಪಯೋಗಿ ಇಲಾಖೆಯಿಂದ ನಿರ್ವಹಣೆ ಮಾಡಲಾಗುತ್ತದೆ. ಭಾರತದಲ್ಲಿ **92851** ಕಿ.ಮೀ. ಉದ್ದದ ರಾಷ್ಟ್ರೀಯ ಹೆದ್ದಾರಿಗಳಿವೆ. ಉದಾ: ರಾಷ್ಟ್ರೀಯ ಹೆದ್ದಾರಿ(ಸಂಖ್ಯೆ) 47 ತಮಿಳುನಾಡು ಮತ್ತು ಕೇರಳ ರಾಜ್ಯವನ್ನು ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿಯಾಗಿದೆ. 650ಕಿ.ಮೀ. ಉದ್ದದ ರಸ್ತೆಯಲ್ಲಿ 224ಕಿ.ಮೀ. ಉದ್ದದ ರಸ್ತೆಯು ತಮಿಳುನಾಡಿನಲ್ಲಿ ಹಾದು ಹೋಗಿದೆ.



ರಾಷ್ಟ್ರೀಯ ಹೆದ್ದಾರಿ–7

ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅತಿ ಕಡಿಮೆ ದೂರದ ರಾಷ್ಟ್ರೀಯ ಹೆದ್ದಾರಿ NH47A ಆಗಿದೆ. ಇದು 5.9ಕಿ.ಮೀ ದೂರದ ರಸ್ತೆಯಾಗಿದ್ದು ಎರ್ನಾಕುಲಂ–ಕೊಚ್ಚಿನ್ ಬಂದರನ್ನು ಸಂಪರ್ಕಿಸುವ ರಸ್ತೆಯಾಗಿದೆ. ಅತಿ ಉದ್ದವಾದ ರಾಷ್ಟ್ರೀಯ ಹೆದ್ದಾರಿ NH7. ಇದು ಉತ್ತರ ಪ್ರದೇಶದಲ್ಲಿರುವ ವಾರಣಾಸಿಯಿಂದ ಕನ್ಯಾಕುಮಾರಿಯವರೆಗೆ ಇದೆ. ಇದರ ಉದ್ದ 2,369 ಕಿ.ಮೀ. ಈ ಹೆದ್ದಾರಿಯು ಜಬ್ಬಲ್‌ಪುರ, ನಾಗ್ಪುರ, ಹೈದರಾಬಾದ್ ಮತ್ತು ಬೆಂಗಳೂರು ಮೊದಲಾದ ಮಹಾ ನಗರಗಳೊಡನೆ ಸಂಪರ್ಕ ಕಲ್ಪಿಸುತ್ತದೆ.

ಸುವರ್ಣ ಚತುಷ್ಪಥ ವಿಶೇಷ ಹೆದ್ದಾರಿ

ಭಾರತ ಸರಕಾರದಿಂದ ಪ್ರಾರಂಭಿಸಲ್ಪಟ್ಟ ಬೃಹತ್ ರಸ್ತೆ ಅಭಿವೃದ್ಧಿ ಯೋಜನೆಯು ವಿಶೇಷ ಸುವರ್ಣ ಚತುಷ್ಪಥ ರಾಷ್ಟ್ರೀಯ ಹೆದ್ದಾರಿಯನ್ನು ಆರಂಭಿಸಿತು. ಇದು ಸುಮರು 14846ಕಿ.ಮೀ. ಉದ್ದದವರೆಗೆ ಭಾರತದ ಪ್ರಮುಖ ನಗರಗಳನ್ನು ಸಂಪರ್ಕಿಸುವ ರಸ್ತೆಗಳಾಗಿವೆ. ಇವುಗಳಲ್ಲಿ ಸೇರಿರುವ ಪ್ರಮುಖ ಮಾರ್ಗಗಳು.



ಚೆನ್ನೈ–ಬೆಂಗಳೂರು ಸುವರ್ಣ ಚತುಷ್ಪಥ ಹೆದ್ದಾರಿ

ಆರು ಮಾರ್ಗಗಳ ವಿಶೇಷ ರಸ್ತೆಗಳು:

ಚೆನ್ನೈ, ಮುಂಬೈ, ದೆಹಲಿ, ಕೊಲ್ಕತ್ತ ಮುಂತಾದ ಮಹಾನಗರಗಳನ್ನು ಸುಮಾರು 5846ಕಿ.ಮೀ ದೂರದವರೆಗೆ ಸಂಬಂಧ ಕಲ್ಪಿಸುವ ರಸ್ತೆಗಳಾಗಿವೆ.

ಉತ್ತರ ದಕ್ಷಿಣ ಭಾಗಗಳನ್ನು ಜೋಡಿಸುವ ರಸ್ತೆಗಳು(ಕಾರಿಡಾರ್)


ಕಾರಿಡಾರ್ ರಸ್ತೆ ಉತ್ತರದ ಶ್ರೀನಗರವನ್ನು ದಕ್ಷಿಣದ ಕನ್ಯಾಕುಮಾರಿಯನ್ನು ಸೇರಿಸುತ್ತದೆ. ಪೂರ್ವ ಪಶ್ಚಿಮ ಭಾಗಗಳನ್ನು ಸೇರಿಸುವ ರಸ್ತೆಗಳು ಸಿಲ್ಚಾರ–ಪೋರ್ ಬಂದರನ್ನು ಸೇರಿಸುತ್ತದೆ. ಇದು 7300ಕಿ.ಮೀ ಉದ್ದದ ರಸ್ತೆಯಾಗಿದೆ.

ಪ್ರಮುಖ ಬಂದರುಗಳನ್ನು, ಸುವರ್ಣ ಚತುಷ್ಪಥ ರಸ್ತೆಗಳೊಡನೆ ಮತ್ತು ಕಾರಿಡಾರ್ ರಸ್ತೆಗೊಳೊಡನೆಯೂ 363ಕಿ.ಮೀ. ಉದ್ದದ ರಸ್ತೆಯನ್ನು ಜೋಡಿಸುತ್ತವೆ. ವಿಶೇಷ ಸುವರ್ಣ ಚತುಷ್ಪಥ ರಾಷ್ಟ್ರೀಯ ಹೆದ್ದಾರಿಗಳ ಮುಖ್ಯ ಉದ್ದೇಶ 'ದೇಶ' 'ಸುರಕ್ಷತೆ' ಮತ್ತು 'ಸಮಯ ಉಳಿತಾಯ' ಇವು ಪ್ರಯಾಣದ ಸಮಯವನ್ನು ಕಡಿಮೆ ಮಾಡಿ ಮಹಾನಗರಗಳನ್ನು ಅತಿ ಸಮೀಪ ದಿಂದ ಜೋಡಿಸುವುದಾಗಿದೆ. ಈ ಕಾರ್ಯಯೋಜನೆಗಳು ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಕಾರ್ಯಗತಗೊಳಿಸಲಾಗಿದೆ.

ಈ ಕಾರ್ಯಯೋಜನೆಗಳಿಗೆ ಅಧಿಕ ಬಂಡವಾಳ ಹೂಡಬೇಕಾಗಿರುವುದರಿಂದ ಸರಕಾರ ಖಾಸಗಿ ಸಂಸ್ಥೆಗಳಿಂದ ಬಂಡವಾಳ ಹೂಡಿಕೆ, ರಸ್ತೆಗಳನ್ನು ಅಭಿವೃದ್ಧಿಸುವುದು ಮತ್ತು ನಿರ್ವಹಣೆ ಜವಾಬ್ದಾರಿಯನ್ನು ಈ ಪ್ರಾಧಿಕಾರಕ್ಕೆ ಕೊಟ್ಟಿದೆ. ರಸ್ತೆಗಳ ನಿರ್ಮಾಣ, ನಿರ್ವಹಣೆ, ವರ್ಗಾವಣೆ (Build operate and transfer - BOT) ಅಭಿಪ್ರಾಯದ ಆಧಾರದಲ್ಲಿ ಒಪ್ಪಂದ ಮಾಡಿಕೊಂಡು ರಸ್ತೆಗಳನ್ನು ನಿರ್ಮಿಸಲಾಗುತ್ತಿದೆ. ಖಾಸಗಿ ಸಂಸ್ಥೆಗಳು ತಾವು ಮಾಡಿಕೊಂಡ ಒಪ್ಪಂದದ ಕಾಲ ಮಿತಿಯೊಳಗೆ ನಿರ್ಮಾಣದ ವೆಚ್ಚ, ಮತ್ತು ಲಾಭವನ್ನು ಪಡೆದ ನಂತರ ತಮ್ಮಲ್ಲಿ ಜವಾಬ್ದಾರಿಗಳನ್ನು ಸರಕಾರಕ್ಕೆ ಒಪ್ಪಿಸಬೇಕು.

ತ್ವರಿತ ರಸ್ತೆಗಳು

ತ್ವರಿತ ರಸ್ತೆಗಳನ್ನು ಉನ್ನತ ತಂತ್ರಜ್ಞಾನವನ್ನು ಆಧರಿಸಿ ನಿರ್ಮಾಣ ಮಾಡಲಾಗಿದೆ. ಈ ತಂತ್ರಜ್ಞಾನವು ಅಂತರ್‌ಜಾಲ ರಸ್ತೆಗಳಿಗಾಗಿಯೇ ಇರುವ ತಂತ್ರಜ್ಞಾನವನ್ನೂ ಒಳಗೊಂಡಿದ್ದು ಇದ ಆರು ಮಾರ್ಗಗಳನ್ನೂ ಒಳಗೊಂಡಿರುತ್ತದೆ. ಇದರ ಉದ್ದ ಸುಮಾರು 200ಕಿ.ಮೀ ಗಳಷ್ಟಿದೆ. ಇಂತಹ ರಸ್ತೆಗಳಿಗೆ ಉತ್ತಮ ಉದಾಹರಣೆ ನವ ಮುಂಬೈ ಮತ್ತು ಪೂನಾ ನಡುವೆ ಇರುವ ತ್ವರಿತ ರಸ್ತೆ.



ಮುಂಬೈ–ಪೂನಾ ತ್ವರಿತ ರಸ್ತೆ


ಗಡಿ ರಸ್ತೆಗಳು (Border Roads)

ನಮ್ಮ ರಾಷ್ಟ್ರದ ಉತ್ತರ ಮತ್ತು ಈಶಾನ್ಯದ ಗಡಿಯಲ್ಲಿ ಗಡಿ ರಸ್ತೆಯನ್ನು ನಿರ್ಮಿಸಲು ಭಾರತ ಸರಕಾರವು 1960ರಂದು "ಗಡಿ ರಸ್ತೆ ಅಭಿವೃದ್ಧಿ" ಮಂಡಳಿಯೊಂದನ್ನು (Border Roads Organisation - BRO) ಸ್ಥಾಪಿಸಿದೆ. ಈ ಮಂಡಳಿಯು ದೇಶದ ಆರ್ಥಿಕ ಪ್ರಗತಿ ರಾಷ್ಟ್ರದ ಭದ್ರತೆಯ ಮೇಲ್ವಿಚಾರಣೆಯ ಹೊಣೆಯನ್ನು ಹೊಂದಿದೆ. ರಾಷ್ಟ್ರವನ್ನು ವಿಭಜಿಸಲಾಗದೆಂದು ಅಭಿಪ್ರಾಯ ಪಡಲಾಗಿದೆ. ಈ ಮಂಡಳಿಯು 46,780 ಕಿ.ಮೀ ಉದ್ದದ ಗಡಿ ರಸ್ತೆಗಳನ್ನು ಕಠಿಣವಾದ ಭೂ ಭಾಗದಲ್ಲಿ ನಿರ್ಮಿಸಿದೆ.

ನಿಮಗಿದು ತಿಳಿದಿದೆಯೇ?

ಗಡಿ ಭಾಗದ ರಸ್ತೆ ನಿರ್ಮಾಣ ಸಂಸ್ಥೆ (BRO) ಯಿಂದ ವಿಶ್ವದಲ್ಲಿ ಅತ್ಯಂತ ಎತ್ತರದ ಸ್ಥಳದಲ್ಲಿ (4270 .ಮೀ. ಎತ್ತರದಲ್ಲಿ ರಸ್ತೆ ನಿರ್ಮಾಣ ಮಾಡಲಾಗಿದೆ) ಮನಾಲಿ – (ಹಿಮಾಚಲಪ್ರದೇಶ)ಕಾಶ್ಮೀರದಲ್ಲಿರುವ ಲೇ ಎಂಬ ಸ್ಥಳವನ್ನು ಸಂಪರ್ಕಿಸುತ್ತದೆ.

ಭಾರತ
ರಾಷ್ಟ್ರೀಯ ಹೆದ್ದಾರಿಗಳು



ಅಂತರ ರಾಷ್ಟ್ರೀಯ ಹೆದ್ದಾರಿ

ಇದು ನಮ್ಮ ದೇಶವನ್ನು ನೆರೆರಾಷ್ಟ್ರಗಳೊಡನೆ ಸಂಪರ್ಕಿಸುತ್ತದೆ. ಇದರಿಂದ ನೆರೆರಾಷ್ಟ್ರಗಳೊಡನೆ ಉತ್ತಮ ಬಾಂಧವ್ಯ ಬೆಳೆಯುತ್ತದೆ.

ರೈಲುಸಾರಿಗೆ

ಭಾರತೀಯು ರೈಲು ಸಾರಿಗೆಯು ಪ್ರಯಾಣಿಕರನ್ನು ಮತ್ತು ಸರಕುಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸುವ ಬಹು ಮುಖ್ಯ ಸಾರಿಗೆ ಸಾಧನವಾಗಿದೆ ಇದು ದೇಶದ ಬಹುದೂರದ ಮೂಲೆ ಮೂಲೆಗೂ ಜನರನ್ನು ಒಗ್ಗೂಡಿಸುತ್ತದೆ. ಇದು ವ್ಯಾಪಾರ, ಶಿಕ್ಷಣ, ಪ್ರವಾಸೋದ್ಯಮ ಮತ್ತು ದೇಶದ ಒಗ್ಗಟ್ಟನ್ನು ಬೆಳೆಸುತ್ತದೆ.

ರೈಲ್ವೆ ಸಾರಿಗೆಯು ಮೊಟ್ಟಮೊದಲಿಗೆ 1853ರಲ್ಲಿ ಪ್ರಾರಂಭವಾಯಿತು. 1947ರವರೆಗೆ 42 ರೈಲ್ವೆ ಸಂಸ್ಥೆಗಳು 37 ಖಾಸಗಿ ಸಂಸ್ಥೆಗಳಿಂದ ನಿರ್ವಹಣೆ ಕಾರ್ಯ ನಡೆದಿದೆ. 1951ರಲ್ಲಿ ಎಲ್ಲಾ ವ್ಯವಸ್ಥೆಗಳನ್ನು ರಾಷ್ಟ್ರೀಕರಣಗೊಳಿಸಿ 'ಭಾರತೀಯ ರೈಲ್ವೆ' ಎಂದು ಕರೆಯಲಾಯಿತು.



ರೈಲು ಸಾರಿಗೆ

ತಿಳಿದು ಕೊಳ್ಳೋಣ!

ಪ್ರಥಮ ರೈಲು ಮಾರ್ಗ ಮುಂಬೈ ಹಾಗೂ ಥಾಣಾ ನಡುವೆ 1853ರಲ್ಲಿ 34ಕಿ.ಮೀ.ರೈಲು ಪ್ರಾರಂಭವಾಯಿತು. ಭೋಪಾಲ್ ಶತಾಬ್ದಿ ರೈಲು ಭಾರತದಲ್ಲಿಯೇ ಅತಿವೇಗದ ರೈಲಾಗಿದೆ. ಇದು ಗಂಟೆಗೆ 150ಕಿ.ಮೀ ವೇಗದಲ್ಲಿ ಭೋಪಾಲ್ ರೈಲು ನಿಲ್ದಾಣದಿಂದ ನವದೆಹಲಿ ನಡುವೆ ಸಂಚರಿಸುತ್ತದೆ.

ಭಾರತೀಯು ರೈಲು ವ್ಯವಸ್ಥೆಯು ಏಷ್ಯಾಖಂಡದಲ್ಲಿಯೇ ಅತ್ಯಂತ ದೊಡ್ಡದು ಹಾಗೂ ಪ್ರಪಂಚದಲ್ಲಿಯೇ ಎರಡನೇ ದೊಡ್ಡ ವ್ಯವಸ್ಥೆಯಾಗಿದೆ. ಇದು ದೇಶದ ಉದ್ದಗಲಕ್ಕೂ 63,273ಕಿ.ಮೀ ದೂರದ 7025 ರೈಲು ನಿಲ್ದಾಣಗಳನ್ನು ಒಂದುಗೂಡಿಸುತ್ತದೆ.

ರೈಲು ಸಾರಿಗೆಯು ಪ್ರತಿ ದಿನವೂ 20ಮಿಲಿಯನ್ ಪ್ರಯಾಣಿಕರನ್ನು 2 ಮಿಲಿಯನ್ ಟನ್‌ಗಳಿಗಿಂತಲು ಹೆಚ್ಚು ಸರಕುಗಳನ್ನು ಸಾಗಿಸುತ್ತದೆ. ದೆಹಲಿಯನ್ನು ಕೇಂದ್ರ ಸ್ಥಾನವನ್ನಾಗಿ ಮಾಡಿಕೊಂಡು ದೇಶದ ಎಲ್ಲಾ ದಿಕ್ಕುಗಳಿಗೂ ಸಂಚರಿಸಿ ಬಂದರುಗಳು, ವಿಮಾನ ನಿಲ್ದಾಣಗಳು ಮತ್ತು ಮಹಾನಗರಗಳನ್ನು ಒಂದು ಗೂಡಿಸಿದೆ. ರೈಲು ಸಾರಿಗೆ ವ್ಯವಸ್ಥೆಯು ಹಲವಾರು ಬಗೆಯ ರೈಲು ಸಾರಿಗೆಗಳು ಈ ಕೆಳಗಿನಂತಿವೆ.

1. ಬ್ರಾಡ್‌ಗೇಜ್ (1.676 ಮೀಟರ್)
2. ಮೀಟರ್‌ಗೇಜ್ (1.000 ಮೀಟರ್)
3. ನ್ಯಾರೋ ಗೇಜ್ (0.672 ಮೀಟರ್)

ಭಾರತೀಯ ರೈಲ್ವೆಯನ್ನು 17 ವಲಯಗಳನ್ನಾಗಿ ವಿಂಗಡಿಸಲಾಗಿದೆ.

ವಲಯಗಳು	ಆಡಳಿತ ಕೇಂದ್ರ
1. ಮಧ್ಯರೈಲ್ವೆ	ಮುಂಬೈ
2. ಪೂರ್ವರೈಲ್ವೆ	ಕೊಲ್ಕತ್ತ
3. ಪೂರ್ವಕೇಂದ್ರ ರೈಲ್ವೆ	ಪಾಟ್ನ–ಹಾಜೀಪೂರ್
4. ಪೂರ್ವ ಕರಾವಳಿ ರೈಲ್ವೆ	ಭುವನೇಶ್ವರ
5. ಕೊಂಕಣ ರೈಲ್ವೆ ಕಾರ್ಪೋರೇಷನ್	ನವ ಮುಂಬೈ
6. ಉತ್ತರ ರೈಲ್ವೆ	ನವದೆಹಲಿ
7. ವಾಯುವ್ಯ ರೈಲ್ವೆ	ಅಲಹಬಾದ್
8. ಉತ್ತರ ಕೇಂದ್ರ ರೈಲ್ವೆ	ಜೈಪುರ
9. ಈಶಾನ್ಯ ರೈಲ್ವೆ	ಗೋರಕ್ ಪುರ
10. ಈಶಾನ್ಯ ಗಡಿ ರೈಲ್ವೆ	ಮಾಲಿಗಾನ್(ಗೌಹಾತಿ)
11. ದಕ್ಷಿಣ ರೈಲ್ವೆ	ಚೆನ್ನೈ
12. ದಕ್ಷಿಣ ಕೇಂದ್ರ ರೈಲ್ವೆ	ಸಿಕಂದರಾಬಾದ್
13. ದಕ್ಷಿಣ ಪೂರ್ವ ರೈಲ್ವೆ	ಕೊಲ್ಕತ್ತ
14. ದಕ್ಷಿಣ ಪೂರ್ವ ಕೇಂದ್ರ ರೈಲ್ವೆ	ಬಿಲಾಸ್‌ಪುರ
15. ನೈರುತ್ಯ ರೈಲ್ವೆ	ಹುಬ್ಬಳ್ಳಿ
16 ಪಶ್ಚಿಮ ರೈಲ್ವೆ	ಮುಂಬೈ
17. ಪಶ್ಚಿಮ ಕೇಂದ್ರ ರೈಲ್ವೆ	ಜಬಲ್‌ಪುರ

ಭಾರತೀಯ ರೈಲು ಸಾರಿಗೆ ಹಂಚಿಕೆಯಲ್ಲಿ ಪ್ರಾಕೃತಿಕ ಭೂಗೋಳದ ಪಾತ್ರ

ಪ್ರಾಕೃತಿಕ ಭೂಗೋಳವು ಭಾರತೀಯ ರೈಲು ಸಾರಿಗೆ ಹಂಚಿಕೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

ಏರುಪೇರಾದ ಭೂಭಾಗವನ್ನು ಹೊಂದಿರುವ ಹಿಮಾಲಯ ವಲಯದಲ್ಲಿ ರೈಲು ಹಳಿಗಳನ್ನು ಹಾಕುವುದು ತುಂಬಾ ಕಷ್ಟದ ಕೆಲಸವಾಗಿದ್ದರೂ ಮೂರು ರೈಲು ಮಾರ್ಗಗಳನ್ನು ಮಾತ್ರ ಕಾಣಬಹುದಾಗಿದೆ.

ಪಶ್ಚಿಮ ರಾಜಸ್ಥಾನದ ಒಣ, ಬ್ರಹ್ಮಪುತ್ರ ಕಣಿವೆಯಲ್ಲಿ ಪದೆ ಪದೇ ಉಂಟಾಗುವ ಪ್ರವಾಹ, ಈಶಾನ್ಯ ಭಾರತದಲ್ಲಿನ ದಟ್ಟಾರಣ್ಯ ಮತ್ತು ಏರು ಪೇರು ಭೂಭಾಗದಂತಹ ಈ ಭಾಗದಲ್ಲಿ ಕಡಿಮೆ ಸಂಖ್ಯೆಯ ರೈಲು ಮಾರ್ಗಗಳು ಕಂಡುಬಂದಿದೆ.

ಉತ್ತರ ಭಾರತದ ಬಯಲು ಫಲವತ್ತಾದ ಮೆಕ್ಕಲು ಮಣ್ಣನ್ನು ಹೊಂದಿರುವ ಸಮತಟ್ಟಾದ ಪ್ರದೇಶವಾಗಿದೆ. ಇದು ಅತ್ಯಂತ ಅಭಿವೃದ್ಧಿ ಹೊಂದಿದೆ ವ್ಯವಸಾಯ ಭೂ ಪ್ರದೇಶ, ಕೈಗಾರಿಕಾವಲಯಗಳನ್ನು ಹೊಂದಿರುವುದರ ಜೊತೆಗೆ ಹೆಚ್ಚು ಜನಸಂಖ್ಯೆಯಿಂದ ಕೂಡಿದೆ. ಆದ್ದರಿಂದ ಈ ಭಾಗವು ದಟ್ಟಣೆಯ ರೈಲುಮಾರ್ಗಗಳನ್ನು ಹೊಂದಿರುವ ಭಾಗವಾಗಿ ಕಂಡುಬರುತ್ತದೆ.

ಪರ್ಯಾಯ ಭಾರತದ ಪೀಠಭೂಮಿ ಪ್ರದೇಶವು ಏರು ತಗ್ಗುಗಳಿಂದ ಕೂಡಿದ ಭೂಸ್ವರೂಪವನ್ನು ಹೊಂದಿದೆ. ಈ ಕಾರಣದಿಂದಾಗಿ ವಿರಳವಾದ ರೈಲು ಮಾರ್ಗಗಳು ಕಂಡುಬರುತ್ತವೆ.

ಉಪನಗರ ರೈಲು ಮಾರ್ಗ

ಮುಂಬೈ, ಚೆನ್ನೈ, ಕೊಲ್ಕತ್ತ ಮತ್ತು ದೆಹಲಿಯಂತಹ ಮಹಾನಗರಗಳಲ್ಲಿ ಉಪನಗರ ರೈಲು ಸಾರಿಗೆಗಾಗಿ ಪ್ರತ್ಯೇಕ ರೈಲು ಮಾರ್ಗಗಳಿವೆ. ಕಾನ್ಪುರ, ಹೈದರಾಬಾದ್ ಮತ್ತು ಪೂನಾ ನಗರಗಳಲ್ಲಿ ಉಪನಗರ ರೈಲುಗಳಿಗಾಗಿಯೇ ಪ್ರತ್ಯೇಕ ರೈಲು ಮಾರ್ಗಗಳಿಲ್ಲ. ಅವುಗಳು ಬಹುದೂರ ಪ್ರಯಾಣಿಸುವ ರೈಲುಗಳು ಚಲಿಸುವ ಮಾರ್ಗದಲ್ಲಿಯೇ ಪ್ರಯಾಣಿಸುತ್ತವೆ. ಉಪನಗರ ರೈಲುಗಳು ಉಪನಗರದ ಭಾಗಗಳನ್ನು ನಗರದ ಜೊತೆ ಒಗ್ಗೂಡಿಸುತ್ತದೆ. ಅವುಗಳು ಬಹುತೇಕ ವಿದ್ಯುತ್ ರೈಲುಗಳಾಗಿವೆ. ಅವುಗಳು ಸಾಮಾನ್ಯವಾಗಿ ಒಂಬತ್ತು ಬೋಗಿಗಳನ್ನು ಹೊಂದಿರುತ್ತದೆ. ಆದರೆ ವಿಶೇಷ ಸಂದರ್ಭಗಳಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ಹೆಚ್ಚುವರಿಯಾಗಿ ಬೋಗಿಗಳನ್ನು ಜೋಡಿಸಲಾಗಿರುತ್ತದೆ.

ಎಂ.ಆರ್.ಟಿ.ಎಸ್.(MRTS) ಮತ್ತು ಮೆಟ್ರೋ ರೈಲು – ಚೆನ್ನೈ

ಸಾಮೂಹಿಕ ಕ್ಷಿಪ್ರ ಪ್ರಯಾಣದ ರೈಲು ವ್ಯವಸ್ಥೆ **(Mass Rapid Transit System)** ಮತ್ತು ಮೆಟ್ರೋ ರೈಲು ಎಂಬುದು ಎತ್ತರದಲ್ಲಿ ನಿರ್ಮಿಸಲ್ಪಟ್ಟ ರೈಲು ಮಾರ್ಗಗಳಲ್ಲಿ ಸಂಚರಿಸುವುದಾಗಿದೆ.

ಪ್ರಸ್ತುತ ಚೆನ್ನೈ ಸಮುದ್ರತೀರದಿಂದ ವೇಳಚ್ಚೇರಿವರೆಗೆ 25 ಕಿಲೋ ಮೀಟರ್ ದೂರದವರೆಗೆ (17 ನಿಲ್ದಾಣಗಳು) ಸಂಚರಿಸುತ್ತಿದೆ.



ಎಂ.ಆರ್.ಟಿ.ಎಸ್. ಮತ್ತು ಮೆಟ್ರೋ ರೈಲು – ಚೆನ್ನೈ

2015 ರಲ್ಲಿ ಮೆಟ್ರೋ ರೈಲು ಸಂಚಾರವು ಚೆನ್ನೈಯಲ್ಲಿ ಕೋಯಂಬೇಡುವಿನಿಂದ ಆಲಂದೂರು ವರೆಗೆ ಪರಿಚಯಿಸಲ್ಪಟ್ಟಿತು.

ಭಾರತದ ಅರ್ಥವ್ಯವಸ್ಥೆಯಲ್ಲಿ ರೈಲು ಸಾರಿಗೆಯ ಪಾತ್ರ

ಅಧಿಕ ಭಾರದ ವಸ್ತುಗಳನ್ನು ದೊಡ್ಡ ಪ್ರಮಾಣದಲ್ಲಿ ಸಾಗಿಸಲು ರೈಲುಸಾರಿಗೆ ಅನುಕೂಲಕರವಾಗಿದೆ. ಉದಾಹರಣೆಗೆ ಕಬ್ಬಿಣ, ಉಕ್ಕು, ತೈಲ, ನಿರ್ಮಾಣದ ವಸ್ತುಗಳು, ಕಲ್ಲಿದ್ದಲು ಮತ್ತು ಲೋಹದ ಮೂಲ ವಸ್ತುಗಳು ಮುಂತಾದವುಗಳಾಗಿವೆ.

ಭಿನ್ನಾಭಿಪ್ರಾಯವಿಲ್ಲದ ರಾಷ್ಟ್ರೀಯ ಮಾರುಕಟ್ಟೆ, ಸಮಾನಬೆಲೆ, ದೇಶೀಯ ಮತ್ತು ಅಂತರಾಷ್ಟ್ರೀಯ ವ್ಯಾಪಾರ ಬೆಳವಣಿಗೆ ಮುಂತಾದವುಗಳಿಗೆ ರೈಲು ಸಾರಿಗೆಯು ಅನುಕೂಲಮಾಡಿಕೊಡುತ್ತದೆ.


ಬರಗಾಲದಲ್ಲಿ ಅಗತ್ಯವಸ್ತುಗಳನ್ನು ತ್ವರಿತವಾಗಿ ಸಾಗಿಸಲು ರೈಲು ಸಾರಿಗೆಯು ಬಹಳ ಅನುಕೂಲವಾಗಿದೆ.

ಆಡಳಿತ ಮತ್ತು ರಾಷ್ಟ್ರೀಯ ಐಕ್ಯತೆಯಲ್ಲಿ ರೈಲು ಸಾರಿಗೆಯು ಪ್ರಮುಖ ಪಾತ್ರವಹಿಸುತ್ತವೆ.

ಕೊಳವೆ ಮಾರ್ಗದ ಸಾರಿಗೆ

ಪ್ರಾರಂಭದ ದಿನಗಳಲ್ಲಿ ನಗರಗಳಿಗೆ ನೀರನ್ನು ಸಾಗಿಸಲು ಕೊಳವೆ ಮಾರ್ಗಗಳನ್ನು ಬಳಸಲಾಗುತ್ತಿತ್ತು. ಆದರೆ ಈವಾಗ ಕಚ್ಚಾ ತೈಲ ಮತ್ತು ನೈಸರ್ಗಿಕ ಅನಿಲಗಳನ್ನು ಸಾಗಿಸಲು ಬಳಸಲಾಗುತ್ತಿದೆ. ತೈಲ ಮತ್ತು ನೈಸರ್ಗಿಕ ಅನಿಲ (Oil Field) ಕ್ಷೇತ್ರಗಳಿಂದ

ಭಾರತದ ರೈಲು ಮಾರ್ಗಗಳು



ಶುದ್ಧೀಕರಿಸದ ಎಣ್ಣೆ ಮತ್ತು ನೈಸರ್ಗಿಕ ಅನಿಲವನ್ನು ಶುದ್ಧೀಕರಿಸಿ ಕಾರ್ಖಾನೆಗಳಿಗೆ, ರಾಸಾಯನಿಕ ಕೈಗಾರಿಕೆಗಳಿಗೆ, ಉಷ್ಣ ಶಕ್ತಿ ಸ್ಥಾವರಗಳಿಗೆ ಸಾಗಿಸಲು ಕೊಳವೆ ಮಾರ್ಗ ಸಾರಿಗೆಯನ್ನು ಬಳಸಲಾಗುತ್ತದೆ.

ಕೊಳವೆ ಮಾರ್ಗದ ಅನುಕೂಲಗಳು

ಏರುಪೇರುಗಳಿಂದ ಕೂಡಿದ ಭೂಭಾಗದಲ್ಲಿ, ನೀರಿನ ತಳಭಾಗದಲ್ಲಿಯೂ ಕೊಳವೆ ಮಾರ್ಗ ಸಾರಿಗೆಯನ್ನು ಹಾಕಲಾಗಿದೆ.

ಕೊಳವೆ ಮಾರ್ಗ ಸಾರಿಗೆಯನ್ನು ಹಾಕಲು ಮೊದಲಿಗೆ ಅಧಿಕ ವೆಚ್ಚವಾಗುತ್ತದೆ. ಆದರೆ ಅನಂತರದ ನಿರ್ವಹಣೆ ವೆಚ್ಚ ಕಡಿಮೆಯಾಗಿರುತ್ತದೆ.

ಇದು ತಡೆ ರಹಿತ ಸಾರಿಗೆ ಯಾಗಿದ್ದು ಹಡಗಿಗೆ ತೈಲ ತುಂಬುವಾಗ ಮತ್ತು ಇಳಿಸುವಾಗ ಉಂಟಾಗುವ ನಷ್ಟವನ್ನು ಮತ್ತು ವಿಳಂಬವನ್ನು ಕಡಿಮೆ ಮಾಡುತ್ತದೆ.

ಇದು ಚಲಿಸುವುದಕ್ಕೆ ಕಡಿಮೆ ಪ್ರಮಾಣದ ಇಂಧನ ಅವಶ್ಯಕ.

ನಮ್ಮ ರಾಷ್ಟ್ರದಲ್ಲಿ ಮೂರು ಪ್ರಮುಖ ಕೊಳವೆ ಮಾರ್ಗ ಸಾರಿಗೆಗಳು ಕಂಡು ಬರುತ್ತವೆ.

1. ಎತ್ತರದ ಅಸ್ಸಾಂನ ತೈಲ ಬಾವಿಗಳಿಂದ ಗೌಹಾಟಿ, ಬರೂನಿ, ಅಲಹಬಾದ್ ಮಾರ್ಗವಾಗಿ ಉತ್ತರ ಪ್ರದೇಶದಿಂದ ಕಾನ್ಪುರದ ವರೆಗೆ ಸಾಗುವ ಕೊಳವೆ ಮಾರ್ಗ.
2. ಗುಜರಾತಿನ ಸಲಾಯ ದಿಂದ ವಿರಾಮ್‌ಗಾಮ್, ಮಥುರ, ದೆಹಲಿ, ಸೋನಿಪಾಟ್, ಮಾರ್ಗವಾಗಿ ಪಂಜಾಬ್‌ನಲ್ಲಿರುವ ಜಲಂದರ್‌ವರೆಗೆ ಸಾಗುವ ಕೊಳವೆ ಸಾರಿಗೆ.
3. ಅನಿಲ ಕೊಳವೆ ಸಾರಿಗೆ ಗುಜರಾತಿನಲ್ಲಿರುವ ಹಜಿರಾದಿಂದ ಮಧ್ಯಪ್ರದೇಶದ ವಿಜಯ್‌ಪುರ ಮಾರ್ಗವಾಗಿ ಉತ್ತರ ಪ್ರದೇಶದಲ್ಲಿರುವ ಜಗದೀಶ್‌ಪುರದವರೆಗೆ ಸಾಗುವ ಕೊಳವೆ ಮಾರ್ಗ.

ಇವುಗಳಲ್ಲದೆ ಮುಂಬೈ ಸಮುದ್ರದಲ್ಲಿರುವ "ಮುಂಬೈ – ಹೈ" ತೈಲ ಬಾವಿಗಳಿಂದ ಮುಂಬೈಗೆ, ಮುಂಬೈಯಿಂದ ಪೂನಾ ನಡುವೆ ಹಾಕಿರುವ ಕೊಳವೆ ಮಾರ್ಗಗಳು ಇದರಲ್ಲಿ ಸೇರಿವೆ.

ಜಲಸಾರಿಗೆ



ರಾಷ್ಟ್ರೀಯ ಜಲಸಾರಿಗೆ – 3

ಜಲಸಾರಿಗೆ ಅಗ್ಗವಾದ ಸಾರಿಗೆಯಾಗಿದೆ. ಭಾರವುಳ್ಳ ದೊಡ್ಡ ಗಾತ್ರದ ಸರಕುಗಳನ್ನು ಅಗ್ಗದ ಖರ್ಚಿನಲ್ಲಿ ಸಾಗಿಸಲು ಸೂಕ್ತ ಮಾರ್ಗ ಜಲಸಾರಿಗೆಯಾಗಿದೆ. ಇಂಧನ ಉಳಿತಾಯ ಹಾಗೂ ಪರಿಸರಕ್ಕೆ ಹಾನಿಉಂಟು ಮಾಡದಂತಿರುವ ಸಾರಿಗೆಯಾಗಿದೆ. ಜಲಸಾರಿಗೆಯನ್ನು ಒಳನಾಡಿನ ಜಲಸಾರಿಗೆ ಮತ್ತು ಸಮುದ್ರ ಸಾರಿಗೆ ಎಂದು ಎರಡು ವಿಧಗಳಾಗಿ ವಿಂಗಡಿಸಬಹುದು.

ಭಾರತದ ಒಳನಾಡಿನ ಜಲಸಾರಿಗೆ

ಭಾರತದ ನದಿಗಳು, ಕಾಲುವೆಗಳು ಮತ್ತು ಹಿನ್ನೀರುಗಳನ್ನೊಳಗೊಂಡ ವಿಸ್ತಾರವಾದ ಜಾಲವನ್ನು ಹೊಂದಿದೆ. ಭಾರತದಲ್ಲಿ ನೌಕಾಯಾನಕ್ಕೆ ಯೋಗ್ಯವಾದ ಒಟ್ಟು ಒಳನಾಡಿನ ಜಲಮಾರ್ಗಗಳ ಉದ್ದ 14,500ಕಿ.ಮೀ ಗಳು ಇದರಲ್ಲಿ ನದಿಗಳಲ್ಲಿ ಒಳನಾಡಿನ ಜಲಮಾರ್ಗಗಳ ಉದ್ದ 5685ಕಿ.ಮೀ, ಕಾಲುವೆಗಳ ಜಲಮಾರ್ಗಗಳ ಉದ್ದ 400ಕಿ.ಮೀ. ಯಂತ್ರ ಚಾಲಿತ ಹಡಗುಗಳ ಮೂಲಕ ನಡೆಯುತ್ತದೆ. "ಭಾರತೀಯ ಒಳನಾಡಿನ ಜಲಸಾರಿಗೆ ಪ್ರಾಧಿಕಾರ" ಈ ಐದು ಜಲಮಾರ್ಗಗಳನ್ನು ರಾಷ್ಟ್ರೀಯ ಜಲಮಾರ್ಗಗಳೆಂದು ಘೋಷಿಸಲಾಗಿದೆ.

ಅವುಗಳೆಂದರೆ,

ರಾಷ್ಟ್ರೀಯ ಜಲಮಾರ್ಗ ಸಂಖ್ಯೆ. 1.ಅಲಹಾಬಾದ್ ಮತ್ತು ಹಾಲ್ದಿಯಾಗಳ ನಡುವಣ ಗಂಗಾ ಜಲಮಾರ್ಗ

ರಾಷ್ಟ್ರೀಯ ಜಲಮಾರ್ಗ ಸಂಖ್ಯೆ. 2.ಬ್ರಹ್ಮಾಪುತ್ರ ನದಿಯ ಸಾಧಿಯ – ಧುಬ್ರಿ ವಿಸ್ತರಣಾ ಮಾರ್ಗ.

ರಾಷ್ಟ್ರೀಯ ಜಲಮಾರ್ಗ ಸಂಖ್ಯೆ. 3.ಕೇರಳದಲ್ಲಿರುವ ಚಂಪಕರ ಮತ್ತು ಉದ್ಯೋಗ ಮಂಡಲ ಕಾಲುವೆಯನ್ನು ಒಳಗೊಂಡ ಪಶ್ಚಿಮ ಕರಾವಳಿಗೆ ಹೊಂದಿಕೊಂಡ ಕೊಲ್ಲಮ್–ಕೋಟ್ಟಾಪುರಂ ಜಲಮಾರ್ಗ.

ರಾಷ್ಟ್ರೀಯ ಜಲಮಾರ್ಗ ಸಂಖ್ಯೆ 4.ಕೃಷ್ಣಾ, ಗೋದಾವರಿ ನದಿಗಳಲ್ಲಿರುವ ಸಿರಾಬಾದ್, ವಿಜಯವಾಡ ಮಾರ್ಗ, ಕಾಕಿನಾಡ– ಪುದುಚೇರಿ ಮಾರ್ಗ, ಭದ್ರಾ ಚಲಂ ರಾಜಮುಂದ್ರಿ ಮಾರ್ಗ.

ರಾಷ್ಟ್ರೀಯ ಜಲಮಾರ್ಗ ಸಂಖ್ಯೆ. 5.ಮಹಾನದಿ, ಬ್ರಾಹ್ಮಣಿ ನದಿಗಳ ತಲ್‌ಚಾರ್–ಧಾಮರ ಮಾರ್ಗ, ಪೂರ್ವ ಕರಾವಳಿ ಕಾಲುವೆಯ ಮಂಗಲ್‌ಗಾಡಿ – ಪಾರದೀಪ್‌ವರೆಗೆ ವಿಸ್ತರಿಸಿದೆ.

ಸಮುದ್ರ ಮಾರ್ಗ ಸಾರಿಗೆ

ಭಾರತದ ಸಮುದ್ರ ಮಾರ್ಗಗಳ ಒಟ್ಟು ಉದ್ದ 7516ಕಿ.ಮೀ ಆಗಿದೆ ಜೊತೆಗೆ 13 ದೊಡ್ಡ ಬಂದರುಗಳು ಮತ್ತು 187 ಮಧ್ಯಮ ಮತ್ತು ಚಿಕ್ಕ ಬಂದರುಗಳನ್ನು ಕರಾವಳಿಯಲ್ಲಿ ಸ್ಥಾಪಿಸಲಾಗಿದೆ. ಈ ಬಂದರುಗಳ ಮೂಲಕ ಶೇ.95ರಷ್ಟು ವಿದೇಶಿ ವ್ಯಾಪಾರ ನಡೆಯುತ್ತದೆ. ದೊಡ್ಡ ಬಂದರುಗಳೆಲ್ಲವು ಕೇಂದ್ರ ಸರಕಾರವು ನಿರ್ವಹಿಸುವ "ಬಂದರು ನಿಗಮ" ದಿಂದ ನಿರ್ವಹಿಸಲ್ಪಡುತ್ತದೆ. ಮಧ್ಯಮ ಮತ್ತು ಚಿಕ್ಕ ಬಂದರುಗಳು ರಾಜ್ಯ ಸರ್ಕಾರದ ಮೇಲ್ವಿಚಾರಣೆಗೆ ಒಳಪಟ್ಟಿರುತ್ತದೆ.

ಪಶ್ಚಿಮ ಕರಾವಳಿಯಲ್ಲಿ ಸ್ಥಾಪಿಸಲ್ಪಟ್ಟಿರುವ ದೊಡ್ಡ ಬಂದರುಗಳು ಕಾಂಡ್ಲ, ಮುಂಬೈ, ಜವಹರ್‌ಲಾಲ್ ನೆಹರು, ಮರ್ಮ ಗೋವ, ನವಮಂಗಳೂರು, ಮತ್ತು ಕೊಚ್ಚಿನ್ ಬಂದರುಗಳಾಗಿದೆ. ಪೂರ್ವ ಕರಾವಳಿಯಲ್ಲಿ ಸ್ಥಾಪಿಸಲ್ಪಟ್ಟಿರುವ ದೊಡ್ಡ ಬಂದರುಗಳು ತೂತುಕುಡಿ, ಚೆನ್ನೈ, ಎಣ್ಣೂರು, ವಿಶಾಖ ಪಟ್ಟಣಂ, ಪಾರದೀಪ್, ಹಾಲ್ದಿಯಾ ಮತ್ತು ಕೊಲ್ಕತ್ತ ಬಂದರುಗಳು.



ಚೆನ್ನೈ ಬಂದರು

ಭಾರತ ಹಡಗು ಕಟ್ಟಡ ವೃತ್ತಿಯಲ್ಲಿ (ಉದ್ಯೋಗ) ಏಷ್ಯಾದಲ್ಲಿ 2ನೇ ಸ್ಥಾನದಲ್ಲಿದೆ ವಿಶ್ವದಲ್ಲಿ 16ನೇ ಸ್ಥಾನ ಪಡೆದುಕೊಂಡಿದೆ. ಭಾರತದಲ್ಲಿ ನಾಲ್ಕು ಪ್ರಮುಖ ಹಡಗು ಕಟ್ಟುವ ಯಾರ್ಡ್‌ಗಳಿವೆ.

ಅವುಗಳೆಂದರೆ,


1. ಹಿಂದುಸ್ಥಾನ್ ಹಡಗು ಕಟ್ಟುವ ಕೈಗಾರಿಕೆ(ವಿಶಾಖಪಟ್ಟಣಂ)
2. ಗಾರ್ಡನ್ ರೀಚ್ ಕೈಗಾರಿಕೆ – ಕೊಲ್ಕತ್ತ
3. ಮೆಝಾಗನ್ – ಮುಂಬೈ
4. ಕೊಚ್ಚಿನ್ ಹಡಗು ಕಟ್ಟುವ ಯಾರ್ಡ್ (ಕೈಗಾರಿಕೆ) ಕೊಚ್ಚಿನ್.

ಭಾರತ ಸರಕಾರ ಖಾಸಗಿಯವರು ಬಂದರು ಇಲಾಖೆಗೆ ಬಂಡವಾಳ ಹೂಡಲು ಮಾರ್ಗದರ್ಶನ ನೀಡಿದೆ. ಭಾರತ ಬಂದರು ಕಾಯಿದೆ 1908 ಮತ್ತು ಬಂದರು ಕಾಯಿದೆ 1963 ಇವೆರಡೂ ಖಾಸಗಿಯವರು ಬಂಡವಾಳ ಹೂಡಲು ದಾರಿಯಾಯಿತು.

ವಾಯುಸಾರಿಗೆ

ವಾಯುಸಾರಿಗೆಯು ಅತೀ ವೇಗ ಚಾಲಿತ, ದುಬಾರಿ, ಹಿತಕರ ಮತ್ತು ಆಧುನಿಕ ಸಾರಿಗೆಯಾಗಿದೆ. ಅವುಗಳು ಪ್ರಯಾಣಿಕರು, ಸರಕುಗಳು ಮತ್ತು ಅಂಚೆಯನ್ನು ಸಾಗಿಸುತ್ತದೆ. ಇದು ಸ್ಥಳೀಯ, ಪ್ರಾದೇಶಿಕ ರಾಷ್ಟ್ರೀಯ ಮತ್ತು ಅಂತರ್ ರಾಷ್ಟ್ರೀಯ ನಗರಗಳನ್ನು ಸಂಪರ್ಕಿಸುತ್ತದೆ. ಎತ್ತರದ ಪರ್ವತಗಳು, ಮರುಭೂಮಿ ಮತ್ತು ದಟ್ಟವಾದ ಕಾಡುಗಳಂತಹ ಭೂಭಾಗಗಳನ್ನು

ಪ್ರಮುಖ ಜಲಮಾರ್ಗ ಮತ್ತು ವಾಯುಮಾರ್ಗಗಳು



ಸುಲಭವಾಗಿ ಸಂಪರ್ಕಿಸುತ್ತದೆ. ಭಾರತದ ವಾಯು ಸಂಚಾರವು ಮೊಟ್ಟ ಮೊದಲಿಗೆ 1911ರಲ್ಲಿ ಪ್ರಾರಂಭಗೊಂಡಿತ್ತು.



ವಾಯುಸಾರಿಗೆ

ಆದರೆ ವಾಸ್ತವವಾಗಿ 1932ರಲ್ಲಿ ಜೇ.ಆರ್.ಡಿ. ಟಾಟಾರವರಿಂದ ಟಾಟಾ ಏರ್ ಲೈನ್ಸ್ ವಾಯು ಸಂಚಾರವನ್ನು ಪ್ರಾರಂಭಿಸಿತು. ಇದು 1946ರಲ್ಲಿ ಏರ್ ಇಂಡಿಯಾ ಎಂದು ಪುನರ್ ನಾಮಕರಣಗೊಂಡಿತು. ನಂತರ ವಿಮಾನ ಸಂಚಾರವನ್ನು 1953ರಲ್ಲಿ ಭಾರತ ಸರಕಾರ ರಾಷ್ಟ್ರೀಕರಣಗೊಳಿಸಿತು. ಇಂದು ಭಾರತದಲ್ಲಿ ಎರಡು ಪ್ರಮುಖ ವಾಯು ಸಂಚಾರಗಳಿವೆ.1.ಇಂಡಿಯನ್ ಏರ್‌ಲೈನ್ಸ್:ಇದು ರಾಷ್ಟ್ರೀಯ ವಾಯು ಸಂಚಾರವನ್ನು ನಿರ್ವಹಿಸುತ್ತದೆ.2.ಏರ್ ಇಂಡಿಯಾ:ಇದು ವಿದೇಶಿ ವಾಯು ಸಂಚಾರವನ್ನು ನಿರ್ವಹಿಸುತ್ತದೆ. ಭಾರತದ ವಾಯು ಸಂಚಾರದಲ್ಲಿ ಇವೆರಡು ಸಂಸ್ಥೆಗಳು ಏಕ ಸ್ವಾಮ್ಯವನ್ನು ಹೊಂದಿದ್ದವು. ನಂತರ 1986ರ ಮುಕ್ತ ವ್ಯಾಪಾರ ನೀತಿಯಿಂದಾಗಿ ಖಾಸಗಿ ಸಂಸ್ಥೆಗಳ ವಾಯು ಸಂಚಾರವು ಸಹ ವಾಯು ಸಾರಿಗೆಯ ವ್ಯವಸ್ಥೆಯೊಡನೆ ವಿಲೀನಗೊಂಡವು.



ಚೆನ್ನೈ ವಿಮಾನ ನಿಲ್ದಾಣ

2007ರಲ್ಲಿ ಭಾರತ ಸರಕಾರ ಏರ್ ಇಂಡಿಯಾ ಮತ್ತು ಇಂಡಿಯನ್ ಏರ್‌ಲೈನ್ಸ್ ಸಂಸ್ಥೆಗಳನ್ನು ವಿಲೀನಗೊಳಿಸಿ ಭಾರತೀಯ ರಾಷ್ಟ್ರೀಯ ಆಕಾಶಯಾನ ನಿಗಮ (National Aviation Company of India Limited - NACIL) ಎಂದು ಹೆಸರಿಸಲಾಯಿತು.

ಭಾರತೀಯ ರಾಷ್ಟ್ರೀಯ ಆಕಾಶಯಾನ ನಿಗಮವು(NACIL) ಅಂತರ ರಾಷ್ಟ್ರೀಯ ವಿಮಾನ ಸೇವೆಯನ್ನೂ, ಸ್ವದೇಶ ಮತ್ತು ನೆರೆಯ ರಾಷ್ಟ್ರಗಳಿಂದ ಆಗ್ನೇಯ ಏಷ್ಯಾ ಮತ್ತು ಮಧ್ಯ ಪ್ರಾಚ್ಯ ರಾಷ್ಟ್ರಗಳಿಗೆ ಸಂಚರಿಸುವ ವಿಮಾನಗಳ ಸೇವೆಯನ್ನೂ ನಿರ್ವಹಿಸುತ್ತದೆ.

ಏರ್ ಇಂಡಿಯಾದ 159 ವಿಮಾನಗಳು ಮತ್ತು ಬೋಯಿಂಗ್ ವಿಮಾನಗಳು ಕಾರ್ಯ ನಿರತವಾಗಿದೆ. ಭಾರತದ ನಗರಗಳನ್ನು ವಿಶ್ವದ ಪ್ರಮುಖ ನಗರಗಳ ಜೊತೆ ಕೂಡಿಸುತ್ತವೆ. ಭಾರತದ ನಗರಗಳು ಹಾಗೂ ವಿಶ್ವದ ಪ್ರಮುಖ ನಗರಗಳು ಜೊತೆ ಗೂಡಿಸುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. NACIL ಅಲ್ಲದೆ ಖಾಸಗಿ ಸಂಸ್ಥೆಗಳಾದ, ಸ್ಪೈಸ್ ಜೆಟ್, ಇಂಟರ್ ಗ್ಲೋಬ್ ಏವಿಯೇಷನ್ (ಇಂಡಿಗೋ) ನಂತಹ ಸ್ವದೇಶಿ ವಿಮಾನ ಸೇವೆಗಳಾಗಿವೆ.



ಹೆಲಿಕಾಪ್ಟರ್

ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರವು (Airport authority of India) 1995ರಲ್ಲಿ ರಚಿಸಲಾಯಿತು. ಇದು ವಿಶ್ವದರ್ಜೆಯ ಭಾರತದ ವಿಮಾನ ನಿಲ್ದಾಣಗಳಿಗೆ ಭದ್ರತೆ ನೀಡುವುದಕ್ಕಾಗಿ ಸ್ಥಾಪಿಸಲಾಯಿತು. ಪ್ರಸ್ತುತ 129 ವಿಮಾನ ನಿಲ್ದಾಣಗಳು ಕಾರ್ಯ ನಿರತವಾಗಿದೆ. ಇದರಲ್ಲಿ 17 ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಗಳಾಗಿವೆ.

ಪವನ್ ಹಾನ್ಸ್ ಹೆಲಿಕ್ಯಾಪ್ಟರ್ ಲಿಮಿಟೆಡ್ ಇದು ಸಾರ್ವಜನಿಕ ಕಂಪೆನಿ, ತೈಲ ಮತ್ತು ಇಂಧನ ಸಂಸ್ಥೆಯ ಸಾಗರೋತ್ತರ ಪ್ರಯಾಣಿಕರಿಗೆ ಹೆಲಿಕ್ಯಾಪ್ಟರ್ ಸೇವೆಯನ್ನು ಕೊಡುತ್ತದೆ. ಇದಲ್ಲದೆ ಈ ಸಂಸ್ಥೆಯು

ಹಲವಾರು ರಾಜ್ಯ ಸರಕಾರಗಳಿಗೆ ಸೇವೆ ಸಲ್ಲಿಸುತ್ತದೆ. ವಿಶೇಷವಾಗಿ ಈಶಾನ್ಯ ರಾಜ್ಯಗಳಲ್ಲಿ ಇರುವ ಅಸಾಧ್ಯವಾದ ಭಾಗಗಳನ್ನು ಸಂಪರ್ಕಿಸುವಂತೆ ಮಾಡುತ್ತದೆ.

ಸಂಪರ್ಕ ಮಾಧ್ಯಮ

ಸಂಪರ್ಕವೆಂದರೆ "ಸಮಾಚಾರಗಳನ್ನು ವಿನಿಮಯ ಮಾಡಿಕೊಳ್ಳುವುದು. ಅಂದರೆ ನಿವೇದನೆಯನ್ನು ಹಂಚಿಕೊಳ್ಳುವುದು ಎಂದರ್ಥ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ಅನುಭವ ಆಸೆ, ಆಕಾಂಕ್ಷೆ, ಸುದ್ದಿ, ನಂಬಿಕೆ ಮತ್ತು ಭಾವನೆಗಳನ್ನು ಒಬ್ಬರಿಂದ ಮತ್ತೊಬ್ಬರಿಗೆ ತಿಳಿಸುವುದನ್ನು ಸಂಪರ್ಕ ಎನ್ನುವರು. ಇಂದು ನಮಗೆ ಸಮಾಚಾರದ ತಂತ್ರಜ್ಞಾನ ಮತ್ತು ಸಂಪರ್ಕ ಮಾಧ್ಯಮವು ಅವಿಭಾಜ್ಯ ಅಂಗವಾಗಿದೆ. ಇದಲ್ಲದೆ ಸಾಂಸ್ಕೃತಿಕ ಒಗ್ಗಟ್ಟನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ. ವೈಯಕ್ತಿಕ ಸಂಪರ್ಕವೆಂಬುದು ಇಬ್ಬರು ವ್ಯಕ್ತಿಗಳ ನಡುವೆ ಮಾಹಿತಿಗಳನ್ನು ವಿನಿಮಯ ಮಾಡಿಕೊಳ್ಳುವುದಾಗಿದೆ.

ವೈಯಕ್ತಿಕ ಸಂಪರ್ಕ ಮಾಧ್ಯಮಗಳು

1. ಅಂಚೆ ಸೇವೆ
2. ತಂತಿ
3. ದೂರವಾಣಿ
4. ಕರವಾಣಿ
5. ಫ್ಯಾಕ್ಸ್

1. ಅಂಚೆ ಸೇವೆ:

1837 ರಲ್ಲಿ ಜಾರಿಗೊಳಿಸಲ್ಪಟ್ಟ ಭಾರತದ ಅಂಚೆ ಕಾಯಿದೆಯ ಮೂಲಕ ಭಾರತದ ಅಂಚೆ ಸೇವೆಯು ಇಂದು ವಿಶ್ವದಲ್ಲಿ ಒಂದು ಬೃಹತ್ ಜಾಲವಾಗಿದೆ. ವಿದೇಶಗಳಿಗೆ ಸ್ವದೇಶದಲ್ಲಿರುವ ಬಹುದೂರದ ಗ್ರಾಮಗಳಿಗೆ ಅಂಚೆಗಳನ್ನು ಕಳುಹಿಸುತ್ತದೆ.

ಅಂಚೆಯಲ್ಲಿ ಎರಡು ಬಗೆಗಳಿವೆ. ಪ್ರಥಮ ದರ್ಜೆ ಅಂಚೆ ಹಾಗೂ ದ್ವೀತಿಯ ದರ್ಜೆ ಅಂಚೆ, ಪ್ರಥಮ ದರ್ಜೆ ಅಂಚೆಯಲ್ಲಿ ಅಂಚೆ ಕಾರ್ಡುಗಳು ದೇಶೀಯ ಪತ್ರಗಳು, ಮತ್ತು ಲಕೋಟೆಗಳಾಗಿವೆ.

ದ್ವಿತೀಯ ದರ್ಜೆ ಅಂಚೆಯಲ್ಲಿ ಪುಸ್ತಕ ಕಟ್ಟುಗಳು, ನೋಂದಾಯಿಸಿದ ವೃತ್ತಪತ್ರಿಕೆಗಳು ಮತ್ತು ನಿಯತ ಕಾಲಿಕೆಗಳು (periodicals),ಮಾಸ ಪತ್ರಿಕೆಗಳು ಇವುಗಳು ಅಂಚೆ ಸೇವೆಯಲ್ಲಿ ಎರಡು ಸ್ಥಳಗಳ ನಡುವೆ ಯಾವುದೇ ಹೆಚ್ಚುವರಿ ಶುಲ್ಕವಿಲ್ಲದೆ ವಾಯುಮಾರ್ಗದಲ್ಲಿ ಸಾಗಿಸಲ್ಪಡುತ್ತವೆ.

ಅಂಚೆ ಮೂಲಕ ಸರಕುಗಳನ್ನು ಕಳುಹಿಸುವುದಕ್ಕೆ (VPP) ವಿದ್ಯುನ್ಮಾನ ಹಣ ಜಮಾಯಿಸಿ ನೀಡುವ ಆಜ್ಞೆ, ಶೀಘ್ರ ಹಣ ಕಳುಹಿಸುವ ಸೇವೆ, ವಿದ್ಯುನ್ಮಾನ ಶುಲ್ಕಪಾವತಿ ಸೇವೆ, ವೇಗದ ಕಟ್ಟುಗಳು ಮತ್ತು ವೇಗದ ಅಂಚೆಗಳು ಭೂ ಮಾರ್ಗದಲ್ಲಿ ಸಾಗಿಸಲ್ಪಡುತ್ತವೆ.

ನಿಮಗಿದು ತಿಳಿದಿದೆಯೇ?

ಭಾರತವು ವಿಶ್ವದ ಜೊತೆ ಬೃಹತ್ ಅಂಚೆ ಜಾಲವನ್ನು ಹೊಂದಿದ್ದು, 1,55,618 ಅಂಚೆ ಕಛೇರಿಗಳನ್ನು ಹೊಂದಿದೆ.

2. ತಂತಿ (ಟೆಲಿಗ್ರಾಂ)

ದೂರದ ಸ್ಥಳಗಳಿಗೆ ಬರವಣಿಗೆ ಮೂಲಕ ತಕ್ಷಣದಲ್ಲಿ ಸಂದೇಶಗಳನ್ನು ಕಳುಹಿಸುವ ವಿಧಾನಕ್ಕೆ ತಂತಿ ಸಂದೇಶ ಎಂದು ಕರೆಯುವರು. ಈ ವಿಧಾನದಲ್ಲಿ ಅಂಚೆ ಸೇವೆಯಲ್ಲು ಸಹ ಬಹುಬೇಗ ಸಂದೇಶಗಳನ್ನು ಕಳುಹಿಸಲಾಗುವುದು.

3. ದೂರವಾಣಿ ಸಂಪರ್ಕ

ದೂರವಾಣಿಯು ಒಂದು ಮೌಖಿಕ ಸಂಪರ್ಕ ಮಾಧ್ಯಮಗಳಲ್ಲಿ ಒಂದಾಗಿದೆ. ಇದು ವಾಣಿಜ್ಯ ಬೆಳವಣಿಗೆಗೆ ಇದು ತುಂಬಾ ಅಗತ್ಯವಾದುದಾಗಿದೆ. ಇದರಿಂದಾಗಿ ದೂರದಲ್ಲಿರುವ ಜನರನ್ನು ಸಂಪರ್ಕಿಸಿ ನೇರವಾಗಿ ಮಾತನಾಡಬಹುದು. ಸ್ವದೇಶದಲ್ಲಿರುವವರನ್ನು ಸಂಪರ್ಕಿಸಲು (S.T.D.) ಎಸ್.ಟಿ.ಡಿ. (ರಾಷ್ಟ್ರೀಯ ಗ್ರಾಹಕರ ಡಯಲಿಂಗ್) ವಿದೇಶದಲ್ಲಿರುವ ಜೊತೆ ಸಂಪರ್ಕಿಸಲು (I.S.D.) ಐ.ಎಸ್.ಡಿ. (ಅಂತರ ರಾಷ್ಟ್ರೀಯ ಗ್ರಾಹಕರ ಡಯಲಿಂಗ್) ಉಪಯೋಗಿಸಲಾಗುತ್ತದೆ. ದೂರವಾಣಿಯು ಎಲ್ಲರೂ ಬಯಸುವ ಒಂದು ಉಪಕರಣವಾಗಿದೆ. ಏಕೆಂದರೆ ಆ ಕ್ಷಣದಲ್ಲೆ ಸಂಪರ್ಕಿಸ ಬಹುದಾಗಿದೆ.

4. ಚರ (ಕರ) ವಾಣಿ (Mobile(cell) Phones)

ಇಂದಿನ ಜೀವನದಲ್ಲಿ ಕರವಾಣಿಯು ನಮ್ಮೊಡನೆ ಒಂದುಗೂಡಿಸಲ್ಪಟ್ಟ ಒಂದು ಸಾಧನವಾಗಿದೆ. ನಾವು ಎಲ್ಲೇ ಹೋದರೂ ತೆಗೆದುಕೊಂಡು ಹೋಗಲೂ, ಜನರೊಡನೆ ಮಾತನಾಡಲೂ ಕರವಾಣಿ ಉಪಯೋಗವಾಗಿದೆ. ಬಹುದೂರದಲ್ಲಿರುವ ಗ್ರಾಮಾಂತರ ಭಾಗಗಳಿಂದ ಪ್ರಾರಂಭವಾಗಿ ಅತಿ ಎತ್ತರದ ಪರ್ವತ ಭಾಗಗಳವರೆಗೆ ಇದರ ಮೂಲಕ ಸುಲಭವಾಗಿ ಸಂಪರ್ಕಿಸಬಹುದು.

ಚರವಾಣಿಯಿಂದ ಮತ್ತೊಂದು ಚರವಾಣಿಗೆ ಸುದ್ದಿಗಳನ್ನು ಕಳುಹಿಸುವ ವಿಧಾನಕ್ಕೆ ಲಘು ಸುದ್ದಿಸೇವೆ (SMS) ಎಂದು ಕರೆಯುವರು. ಲಘು ಸಂದೇಶಗಳು ಒಂದು ಚರವಾಣಿಯಿಂದ ಮತ್ತೊಂದು ಚರವಾಣಿಗೆ ಅಥವಾ ಒಂದು ನಿರ್ದಿಷ್ಟ ಭೂ ಪ್ರದೇಶದಲ್ಲಿರುವ ಎಲ್ಲಾ ಚರವಾಣಿಗಳಿಗೆ (Group SMS) ಕಳುಹಿಸಬಹುದು.

5. ಫ್ಯಾಕ್ಸ್ (FAX)

ಫ್ಯಾಕ್ಸ್ ಅಂಚೆಯು ಒಂದು ವಿದ್ಯುನ್ಮಾನ ಸಾಧನವಾಗಿದೆ. ಮಾಹಿತಿಗಳನ್ನು ಬರೆದು ಮುದ್ರಿಸಿ ಅಥವಾ ನಕಾಸೆ ಗಳಂತಹವುಗಳನ್ನು ದೂರವಾಣಿಯ ಮೂಲಕ ತಕ್ಷಣದಲ್ಲಿ ಕಳುಹಿಸಬಹುದು, ಪಡೆಯಬಹುದು, ಅಂತರ್‌ಜಾಲ ಫ್ಯಾಕ್ಸ್ ಎನ್ನುವುದು ದಾಖಲೆಗಳನ್ನು (ಕಾಗದ ಪತ್ರ) ಫ್ಯಾಕ್ಸ್ ಯಂತ್ರದ ಸಹಾಯದಿಂದ ಕಳುಹಿಸುವುದಾಗಿದೆ.

ಸಮೂಹ ಸಂಪರ್ಕ ಮಾಧ್ಯಮಗಳು

ಸಮೂಹ ಮಾಧ್ಯಮಗಳು ಏಕ ಕಾಲದಲ್ಲಿ ಲಕ್ಷಾಂತರ ಜನರಿಗೆ ಮಾಹಿತಿಯನ್ನು ತಲುಪಿಸುತ್ತವೆ. ಇವು ರಾಷ್ಟ್ರದ ನೀತಿ ನಿಯಮ ಹಾಗೂ ಅದರ ಕಾರ್ಯಕ್ರಮದ ಬಗ್ಗೆ ಜನರಲ್ಲಿ ಜಾಗೃತಿಯನ್ನುಂಟು ಮಾಡುತ್ತದೆ.

1. ರೇಡಿಯೊ
2. ದೂರದರ್ಶನ
3. ವೃತ್ತ ಪತ್ರಿಕೆ
4. ದೃಶ್ಯ .
5. ಅಂತರ್ಜಾಲ

1. ಆಕಾಶವಾಣಿ

ಭಾರತದ ಅತ್ಯಂತ ಪ್ರಚಲಿತ ಸಮೂಹ ಸಂಪರ್ಕ ಮಾಧ್ಯಮಗಳಲ್ಲಿ ಆಕಾಶವಾಣಿಯು ಒಂದಾಗಿದೆ. ಭಾರತದಲ್ಲಿ ಆಕಾಶವಾಣಿ ಕಾರ್ಯ ಕ್ರಮವು ಮೊಟ್ಟ ಮೊದಲಿಗೆ 1927ರಲ್ಲಿ ಪ್ರಸಾರಗೊಂಡಿತು. 1936ರಲ್ಲಿ ಇದರ ಹೆಸರು "ಆಲ್ ಇಂಡಿಯಾ ರೇಡಿಯೋ" ಎಂದು ನಂತರ 1957ರಿಂದ ಇದು "ಆಕಾಶವಾಣಿ" ಎಂದು ಕರೆಯಲ್ಪಟ್ಟಿತು. ಕೆಲವು ಕ್ಷೇತ್ರಗಳಿಗೆ ಸಂಬಂಧ ಪಟ್ಟ ವಿಷಯಗಳನ್ನು ಕುರಿತ ಪ್ರಸಾರವಂತೂ ಉತ್ತಮವಾಗಿದೆ. ಜನರನ್ನು ಸುಶಿಕ್ಷಿತರನ್ನಾಗಿ ಮಾಡುವುದು, ಆರೋಗ್ಯ, ಪರಿಸರ ಸಂರಕ್ಷಣೆ, ಕುಟುಂಬ ಕಲ್ಯಾಣ, ವಿಜ್ಞಾನ ಮತ್ತು ತಂತ್ರಜ್ಞಾನಗಳಂತಹವುಗಳ ಬಗ್ಗೆ ಜಾಗೃತಿಯನ್ನುಂಟು ಮಾಡುತ್ತದೆ.

2. ದೂರದರ್ಶನ

ಭಾರತದಲ್ಲಿ ಟೆಲಿವಿಷನ್‌ನ್ನು 'ದೂರದರ್ಶನ' ಎಂದು ಕರೆಯುವರು. ಇದು ವಿಶ್ವದಲ್ಲೆ ಒಂದು ಬೃಹತ್ ಜಾಲವಾಗಿದೆ. ದೂರದರ್ಶನ ಎಲ್ಲಾ ವರ್ಗದ ಜನರಿಗೂ ತಲುಪುತ್ತದೆ. ರಾಷ್ಟ್ರೀಯ, ಪ್ರಾದೇಶಿಕ ಮತ್ತು ಸ್ಥಳೀಯ ಎಂದು ಮೂರು ಶ್ರೇಣಿಯ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತದೆ. ನೇರ ಪ್ರಸಾರದ ಮೂಲಕ ಮುಖ್ಯವಾದ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪ್ರಮುಖ ಕಾರ್ಯಕ್ರಮಗಳನ್ನು ವೀಕ್ಷಕರಿಗೆ ತಲುಪಿಸುತ್ತದೆ. ಇದು ವಿವಿಧ ವಯೋಗುಂಪಿನವರಿಗೆ ಒಪ್ಪಿಗೆಯಾಗುವಂತಹ ಮನರಂಜನೆ, ಶಿಕ್ಷಣ, ಕ್ರೀಡೆ, ಆರೋಗ್ಯ ಕಾರ್ಯಕ್ರಮಗಳ ಬಗ್ಗೆ ಪ್ರಸಾರ ಮಾಡುತ್ತದೆ.

3. ವೃತ್ತ ಪತ್ರಿಕೆ

ವೃತ್ತ ಪತ್ರಿಕೆ ಬಹುಕಾಲದಿಂದಲೂ ಪರಿಣಾಮಕಾರಿಯಾದ ಮಾಧ್ಯಮಗಳಾಗಿ ಮಹತ್ವದ ಪಾತ್ರವಹಿಸಿದೆ. ವೃತ್ತ ಪತ್ರಿಕೆಗಳು ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಘಟನೆಗಳ ಮಾಹಿತಿಯನ್ನು ಜನರಿಗೆ ಒದಗಿಸುತ್ತದೆ. ವೃತ್ತ ಪತ್ರಿಕೆಗಳು ಪ್ರಜಾಪ್ರಭುತ್ವದ ವ್ಯವಸ್ಥೆ ಇರುವ ಭಾರತದಂತಹ ರಾಷ್ಟ್ರಗಳಲ್ಲಿ ಜನರ ಅಭಿಪ್ರಾಯಗಳನ್ನು, ಚಿಂತನೆಗಳನ್ನು ತಿಳಿದುಕೊಳ್ಳಲು ಪ್ರಮುಖ ಸಾಧನ.

4. ಅಂತರ್ಜಾಲ (Internet)

ಅನೇಕ ಕಂಪ್ಯೂಟರ್ ಜಾಲಗಳನ್ನು ಒಳಗೊಂಡ ಮಹಾಜಾಲವನ್ನು ಇಂಟರ್‌ನೆಟ್ ಎನ್ನುವರು. ಜಗತ್ತಿನಾದ್ಯಂತವಿರುವ ವಿವಿಧ ಕಂಪ್ಯೂಟರ್‌ಗಳು ನಡುವೆ ಎಲ್ಲೆಡೆ ಅಸ್ಥಿತ್ವದಲ್ಲಿರುವ ಟೆಲಿಫೋನ್ ಜಾಲದ ಸಹಾಯದಿಂದ ಇಂಟರ್‌ನೆಟ್ ಸಂಪರ್ಕವನ್ನು ಕಲ್ಪಿಸುತ್ತದೆ. ಪ್ರಪಂಚದ ಯಾವುದೇ ಸ್ಥಳದಲ್ಲಿರುವ ಬೃಹತ್ ಸಂಗ್ರಹ ಸಾಮರ್ಥ್ಯದ ಕಂಪ್ಯೂಟರ್‌ನಿಂದ ಅಗತ್ಯವಾದ ಮಾಹಿತಿಗಳನ್ನು ಸುದ್ದಿ ಸಮಾಚಾರಗಳನ್ನು ಇಂಟರ್‌ನೆಟ್‌ನಿಂದ ಪಡೆಯಬಹುದು ಹಾಗೂ ಕಳುಹಿಸಲು ಬಳಸಬಹುದು.

ಇಂಟರ್‌ನೆಟ್ ಕಂಪ್ಯೂಟರ್‌ಗಳು ವಿಶಾಲವಾಗಿ ಹರಡಿದ ಜಾಲವಾಗಿದೆ. ಇದು ವಿಶ್ವದ ಹಲವಾರು ವಾಣಿಜ್ಯ ಸಂಸ್ಥೆಗಳು ಮತ್ತು ಒಬ್ಬ ವ್ಯಕ್ತಿಯನ್ನು ಸಹ ಸೇರಿಸುತ್ತದೆ. ಇಂಟರ್‌ನೆಟ್ ಸಾವಿರಾರು ಕಂಪ್ಯೂಟರ್ ಜಾಲಗಳನ್ನು ಒಂದರ ಜೊತೆ ಒಂದನ್ನು ಸೇರಿಸುವ ಜಾಲವಾಗಿದೆ. ಇದು ವಿಶ್ವದಾದ್ಯಂತ ಇರುವ

ಕಂಪ್ಯೂಟರ್ ಬಳಸುವವರು ಸುದ್ದಿಗಳನ್ನು ಮಾಹಿತಿಗಳನ್ನು ಹಲವಾರು ರೂಪದಲ್ಲಿ ಪಡೆಯಲು, ಕಳುಹಿಸಲು ಉಪಯೋಗಿಸುತ್ತಾರೆ.

ಪ್ರಾರಂಭದಲ್ಲಿ ಬರವಣಿಗೆಗಳ ಮಾಹಿತಿಗಳನ್ನು ವಿದ್ಯುನ್ಮಾನ ಸುದ್ದಿಯಾಗಿ (E-mail) ಕಳುಹಿಸಲು, ಪಡೆಯಲು ಬಳಸಲಾಯಿತು. ಆದರೆ ಈವಾಗ ಇದು ಹಲವಾರು ಬಹುಮಾಧ್ಯಮ (Multimedia) ಆಧಾರಿತ ವ್ಯವಸ್ಥೆ ಜೊತೆಗೆ ಚಿತ್ರಗಳು, ಪ್ರತಿಬಿಂಬಗಳು, ದೃಶ್ಯ ಮತ್ತು ಧ್ವನಿ ಯಂತಹವುಗಳ ಮೂಲಕ ಬಿಡುಗಡೆ ಮಾಡುತ್ತದೆ. ಇಂಟರ್‌ನೆಟ್‌ನ ಮೂಲ ಸೇವೆಗಳು ಯಾವುವೆಂದರೆ,

1. ವಿದ್ಯುನ್ಮಾನ ಅಂಚೆ (ಈ–ಮೇಲ್)
2. ವರ್ಲ್ಡ್ ವೈಡ್ ವೆಬ್(www)
3. ಇಂಟರ್‌ನೆಟ್ ಫೋನ್(ಅಂತರ್‌ಜಾಲ ದೂರವಾಣಿ)

ಸಂಪರ್ಕ ಮಾಧ್ಯಮಜಾಲದ ಅನುಕೂಲಗಳು

★ ವಾಹಿತಿ ಸಂಪರ್ಕದ ಸಾಮರ್ಥ್ಯ ಅಭಿವೃದ್ಧಿಯೊಂದಿದೆ.

★ ವಿಶ್ವದ ಹಲವಾರು ಸ್ಥಳಗಳಲ್ಲಿರುವ ಜನರು ತ್ವರಿತವಾಗಿ ಮಾಹಿತಿಗಳನ್ನು ವಿನಿಮಯ ಮಾಡಿಕೊಳ್ಳಬಹುದು.

★ ಇದು ವ್ಯಾಪಾರ ಮತ್ತು ವಾಣಿಜ್ಯ ಉದ್ಯಮದ ಪ್ರಗತಿಗೆ ನೆರವಾಗುತ್ತದೆ.

★ ಸಮಾಜದಲ್ಲಿರುವ ಹಲವಾರು ಸಾಮಾಜಿಕ – ಆರ್ಥಿಕ ಸಮಸ್ಯೆಗಳನ್ನು ಸರಕಾರ ಬಗೆಹರಿಸಲು ಸಹಾಯ ಮಾಡುತ್ತದೆ.

★ ಜನರ ಜೀವನ ಮಟ್ಟವನ್ನು ಹೆಚ್ಚಿಸುತ್ತದೆ.

★ ಮಾಹಿತಿ ಯುಗಕ್ಕೆ ಮುಕ್ತದ್ವಾರ ತೆರೆದಿದೆ.

★ ಉಪಗ್ರಹದ ಮೂಲಕ ಶಿಕ್ಷಣ ಕಾರ್ಯಕ್ರಮಗಳ ಪ್ರಸಾರ.

★ ಕಳೆದ ಹತ್ತು ವರ್ಷಗಳಲ್ಲಿ ಮಾಹಿತಿ ಯುಗ ಶರವೇಗದಲ್ಲಿ ಅನುಕೂಲ ಮಾಡಿ ಕೊಟ್ಟಿದೆ.

★ ನಾನಾವಿಧ'ದ ಕೌಶಲ್ಯ ಹೊಂದಿದ ಮಾಧ್ಯಮಗಳು(ಮುದ್ರಣ ಮತ್ತು ವಿದ್ಯುನ್ಮಾನ) ಅತಿ ವೇಗವಾಗಿ ಅಭಿವೃದ್ಧಿ ಹೊಂದಿದೆ. ಅಲ್ಲದೇ ಅವುಗಳು ರಾಷ್ಟ್ರದ ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಗೆ ಮಹತ್ವದ ಪಾತ್ರ ವಹಿಸುತ್ತವೆ.

ಅಭ್ಯಾಸ

1) ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ

1. ಸ್ವದೇಶದೊಳಗೆ ನಡೆಯುವ ವ್ಯಾಪಾರ _____ವ್ಯಾಪಾರ

   ಅ)ಹೊರಗಿನ ಆ)ವಿದೇಶಿ

   ಇ)ಸ್ಥಳೀಯ ಈ)ಅಂತರರಾಷ್ಟ್ರೀಯ

2. ವ್ಯಾಪಾರ ಸಹಕಾರ ಬಣಗಳು _____ ವಾಣಿಜ್ಯ ಬೆಳವಣಿಗೆಯನ್ನು ಸರಳಗೊಳಿಸಿದೆ.

   ಅ)ಬಹುರಾಷ್ಟ್ರಗಳವ್ಯಾಪಾರ ಆ)ದ್ವಿರಾಷ್ಟ್ರಗಳ ವ್ಯಾಪಾರ

   ಇ) ಸ್ಥಳೀಯ ಈ)ವಿದೇಶಿ ವ್ಯಾಪಾರ

3. ನಮ್ಮ ರಾಷ್ಟ್ರದಲ್ಲಿ ಕಡಿಮೆ ಖರ್ಚು ಮತ್ತು ಎಲ್ಲರಿಂದಲು ಬಳಸುವ ಸಾರಿಗೆ_____

   ಅ)ವಾಯುಸಾರಿಗೆ ಆ)ರಸ್ತೆಸಾರಿಗೆ

   ಇ)ಜಲಸಾರಿಗೆ ಈ)ರೈಲುಸಾರಿಗೆ

4. ಭಾರತೀಯ ರೈಲು ಸಾರಿಗೆಯ ಕೇಂದ್ರ ಕಾರ್ಯಾಲಯ ವಿರುವ ಸ್ಥಳ_____

   ಅ)ಮುಂಬೈ ಆ)ನವದೆಹಲಿ ಇ)ನಾಗಪುರ ಈ)ಚೆನ್ನೈ

5. ವೇಗ ಮತ್ತು ದುಬಾರಿ ನೂತನ ಸಾರಿಗೆ _____

   ಅ)ವಾಯುಸಾರಿಗೆ ಆ)ಭೂಸಾರಿಗೆ ಇ)ಜಲಸಾರಿಗೆ ಈ)ರೈಲುಸಾರಿಗೆ

2) ಹೊಂದಿಸಿ ಬರೆಯಿರಿ

1.	ಗ್ರಾಮ ರಸ್ತೆಗಳು	ನವದೆಹಲಿ
2.	ಜಿಲ್ಲಾ ರಸ್ತೆಗಳು	ಮುಂಬೈ
3.	ಕೇಂದ್ರ ರೈಲ್ವೆ	ಚೆನ್ನೈ
4.	ದಕ್ಷಿಣ ರೈಲ್ವೆ	ಗ್ರಾಮ ಪಂಚಾಯಿತಿ
5.	ಉತ್ತರ ರೈಲ್ವೆ	ನಗರಸಭೆ ಮತ್ತು ಮಹಾನಗರಪಾಲಿಕೆ ಹೈದರಾಬಾದ್

3) ವ್ಯತ್ಯಾಸ ಬರೆಯಿರಿ.

1. ರಾಷ್ಟ್ರೀಯ ಹೆದ್ದಾರಿಗಳು – ರಾಜ್ಯ ಹೆದ್ದಾರಿಗಳು
2. ರಫ್ತು – ಆಮದು
3. ದೇಶೀಯ ವ್ಯಾಪಾರ – ಅಂತರಾಷ್ಟ್ರೀಯ ವ್ಯಾಪಾರ
4. ರಸ್ತೆ ಮಾರ್ಗ – ರೈಲುಮಾರ್ಗ
5. ವಾಯುಮಾರ್ಗ – ಜಲಮಾರ್ಗ

4) ಸಂಕ್ಷಿಪ್ತವಾಗಿ ಉತ್ತರಿಸಿ

1. ವ್ಯಾಪಾರ ಎಂದರೇನು? ವ್ಯಾಪಾರದ ಬಗೆಗಳಾವುವು?
2. ಭಾರತದ ವಿದೇಶಿ ವ್ಯಾಪಾರ ನೀತಿ 2004ರ ಪ್ರಮುಖ ಅಂಶಗಳಾವುವು?
3. ವ್ಯಾಪಾರ, ಸಾರಿಗೆ ಮತ್ತು ಮಾಹಿತಿ ಸಂಪರ್ಕ ಈ ಮೂರರ ನಡುವೆ ಒಂದಕ್ಕೊಂದು ಸ್ಪರ್ಧಾವಕಾಶ ಉಂಟಾಗಿದೆ ಹೇಗೆ?
4. ಗಡಿ ರಸ್ತೆಗಳ ಪ್ರಾಮುಖ್ಯತೆ ಏನು?
5. ಭಾರತೀಯ ರೈಲು ಸಾರಿಗೆಯ ರಚನೆಗೆ ಭೌಗೋಳಿಕ ಅಂಶಗಳು ಹೇಗೆ ಪಾತ್ರವಹಿಸಿದೆ?
6. ಮೆಟ್ರೊ ರೈಲು ಸಾರಿಗೆ ಬಗ್ಗೆ ಟಿಪ್ಪಣಿ ಬರೆಯಿರಿ.
7. ಕೊಳವೆ ಸಾರಿಗೆಯ ಅನುಕೂಲಗಳಾವುವು?
8. ನಮ್ಮ ರಾಷ್ಟ್ರದ ಪ್ರಮುಖ ಕೊಳವೆ ಸಾರಿಗೆ ಟಿಪ್ಪಣಿ ಬರೆಯಿರಿ.
9. ಸಂಪರ್ಕ ಮಾಧ್ಯಮ ಜಾಲದ ಅನುಕೂಲಗಳಾವುವು?

5) ಒಂದು ಪುಟದಷ್ಟು ಉತ್ತರ ಬರೆಯಿರಿ

1. ಭಾರತದ ವ್ಯಾಪಾರದ ಬಗ್ಗೆ ವಿಶೇಷವಾಗಿ ರಫ್ತು ಮತ್ತು ಆಮದು ಬಗ್ಗೆ ವಿವರಿಸಿ.
2. ಭಾರತದ ರಸ್ತೆಗಳ ಬಗೆಗಳನ್ನು ವಿವರಿಸಿ.
3. ವೈಯಕ್ತಿಕ ಮಾಹಿತಿ ಸಂಪರ್ಕ ಭಾರತದಲ್ಲಿ ಯಾವ ರೀತಿ ಇದೆ? ವಿವರಿಸಿ.

6) ಭಾರತದ ನಕ್ಷೆಯಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ.

1. ಉತ್ತರ ಮತ್ತು ದಕ್ಷಿಣ ಭಾಗಗಳನ್ನು ಸಂಪರ್ಕಿಸುವ ರಸ್ತೆಗಳು.
2. ಕೇರಳ ಮತ್ತು ಒರಿಸ್ಸಾದಲ್ಲಿರುವ ಬಂದರುಗಳು.
3. ಮುಂಬೈ ಮತ್ತು ದೆಹಲಿಯನ್ನು ಸಂಪರ್ಕಿಸುವ ರಸ್ತೆ.
4. ಅತಿ ಉದ್ದವಾದ ರಾಷ್ಟ್ರೀಯ ಹೆದ್ದಾರಿ
5. ಕೊಂಕಣ ರೈಲ್ವೆ ಸಾರಿಗೆಯ ಪ್ರಧಾನ ಕೇಂದ್ರ .
6. ನಾಲ್ಕು ಮಹಾನಗರಗಳ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಗಳು.
7. ಚೆನ್ನೈ ಮತ್ತು ದೆಹಲಿಯ ನಡುವಿನ ರೈಲು ಮಾರ್ಗ.
8. ಮುಂಬೈ ಮತ್ತು ಕೊಲ್ಕತ್ತ ನಡುವಿನ ರೈಲು ಮಾರ್ಗ.

7) ಚಟುವಟಿಕೆ

ಭೂಪಟವನ್ನು ಬಳಸಿಕೊಂಡು ಕೆಳಕಂಡ ಸ್ಥಳಗಳನ್ನು ಗುರುತಿಸಿ.

1. ಭಾರತದ ರೈಲ್ವೆಯ ಪ್ರಧಾನ ಕಛೇರಿ
2. ಭಾರತದ ಪ್ರಮುಖ ಬಂದರುಗಳು
3. ಭಾರತದ ಅಂತರ್ ರಾಷ್ಟ್ರೀಯ ವಿಮಾನ ನಿಲ್ದಾಣಗಳು.

8. ದೂರ ಸಂವೇದಿ

ಭೂಗೋಳಶಾಸ್ತ್ರವು ಪೃಥ್ವಿಯ ಮೇಲ್ಭಾಗ ಮತ್ತು ವಾಯುಮಂಡಲ, ಸಾಗರಗಳು, ಸಸ್ಯಗಳು, ಪ್ರಾಣಿಗಳು, ಮತ್ತು ಜನರು ಅಥವಾ ವಸ್ತು ವಿಶ್ಲೇಷಣೆಗಳೊಂದಿಗೆ ನೇರ ಸಂಪರ್ಕ ಹೊಂದದೆ ದೂರದಿಂದಲೇ ಅದನ್ನು ಗ್ರಹಿಸುವುದಕ್ಕೆ 'ದೂರ ಸಂವೇದಿ' ಎನ್ನುವರು. ಭೂಗೋಳಶಾಸ್ತ್ರವು ನಕ್ಷೆಯ ಬಗ್ಗೆ ಅಧ್ಯಯನ ಮಾಡುವುದು ಎಂಬುದು ಬಹು ಜನರ ಅಭಿಪ್ರಾಯವಾಗಿದೆ. ಈ ಅಭಿಪ್ರಾಯವು ಪಕ್ಷಪಾತವಾದುದು. ಏಕೆಂದರೆ ಭೂಗೋಳಶಾಸ್ತ್ರವು ಮಾನವರ ನೈಸರ್ಗಿಕ ಪರಿಹಾರ ಮತ್ತು ಸಾಂಸ್ಕೃತಿಕ ಪರಿಸರದ ಮೇಲೆ ಪ್ರಭಾವ ಬೀರಿದೆ. ನಮ್ಮ ಪರಿಸರದ ಬಗ್ಗೆ ಕಲಿತು ಮತ್ತು ಅರಿತು ಕೊಳ್ಳುವುದು. ನೋಡಲು ಮುಟ್ಟಲು, ವಾಸನೆ ತಿಳಿಯಲು ಮತ್ತು ಆಲಿಸಲು ನಾವು ನಮ್ಮ ಇಂದ್ರಿಯಗಳನ್ನು ಉಪಯೋಗಿಸುವೆವು. ಇಂದ್ರಿಯಗಳು ನಮ್ಮ ಬಳಿಯಿರುವ ವಸ್ತುಗಳ ಬಗ್ಗೆ ತಿಳಿಯಲು ಸಹಾಯ ಮಾಡುತ್ತದೆ. ಆದರೆ ಭೂಗೋಳವು ಸುತ್ತುವರಿದ ಮಾಹಿತಿಗಳನ್ನು ಒಳಗೊಂಡಿದೆ. ಭೂಮಾಪನ ಮೂಲಕ ಒಂದು ಪ್ರದೇಶದ ಸಂಪನ್ಮೂಲಗಳ ಬಗ್ಗೆ ಅಧ್ಯಯನ ಮಾಡಲು ಹಲವು ತಿಂಗಳುಗಳಾಗಬಹುದು. ದಟ್ಟವಾದ ಅರಣ್ಯ ಏರು ಪೇರಾದ ಭೂಭಾಗ, ಮರುಭೂಮಿಗಳು, ಮತ್ತು ಮುಂಚಿತವಾಗಿಯೇ ತಿಳಿದುಕೊಳ್ಳಲಾಗದ ಹವಾಮಾನ ಮುಂತಾದವುಗಳು ಭೂಮಾಪನಕ್ಕೆ ಅಡ್ಡಿಯಾಗುತ್ತವೆ. ಹೀಗಿದ್ದರು ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವ ನೈಸರ್ಗಿಕ ಅನಾಹುತಗಳು, ಹವಾಗುಣದಲ್ಲಿ ಉಂಟಾಗಿರುವ ದೊಡ್ಡ ಬದಲಾವಣೆಗಳು, ಮರುಭೂಮೀಕರಣ ಮತ್ತು ಜೈವಿಕ ವೈವಿಧ್ಯತೆ ಅಭಾವ ಭೂಮಿಯ ಮೇಲ್ಭಾಗವನ್ನು ಗಮನಿಸುತ್ತಲೇ ಇರುವುದು ಅಗತ್ಯವಾಗಿದೆ. ಕಡಿಮೆ ಸಮಯದಲ್ಲಿ ಭೂಮಿಯ ಮೇಲೆ ಕಾಲಿಡದೆ ಯಾವುದೇ ಒಂದು ಭಾಗದಲ್ಲಿನ ಸಂಪನ್ಮೂಲದ ಬಗ್ಗೆ ವಿವರಣೆಗಳನ್ನು ಸಂಗ್ರಹಿಸಲು ಸಹಾಯ ಮಾಡುವ ಅತ್ಯಂತ ಶ್ರೇಷ್ಠವಾದ ತಾಂತ್ರಿಕ ದೂರ ಸಂವೇದಿ ಸಂಪರ್ಕ ಸಾಧನವಾಗಿದೆ.

ದೂರ ಸಂವೇದಿ ಎಂದರೇನು?

ದೂರ (Remote) – **ಬಹುದೂರ**

ಸಂವೇದಿ (Sensing) – **ಮಾಹಿತಿಗಳನ್ನು ಪಡೆಯುವುದು.**

ಭೂಮಿಯ ವಸ್ತುಗಳನ್ನು ನೇರವಾಗಿ ಸಂಪರ್ಕಿಸದೆ ದೂರದಿಂದಲೇ ಅದನ್ನು ಗ್ರಹಿಸುವುದೇ ದೂರ ಸಂವೇದಿಯಾಗಿದೆ.

ಮಾನವರು ಮತ್ತು ಇತರೆ ಪ್ರಾಣಿಗಳು ದೂರದಲ್ಲಿರುವ ವಸ್ತುಗಳ ಬಗ್ಗೆ ತಿಳಿದಿಕೊಳ್ಳಲು, ನೋಡಲು, ವಾಸನೆ ತಿಳಿಯಲು ಗ್ರಹಿಸಲು, ಶಬ್ದಗಳನ್ನು ಕೇಳಲು ಇಂದ್ರಿಯಗಳನ್ನು ಬಳಸಿಕೊಳ್ಳುತ್ತೇವೆ.




ಭೂಗೋಳಶಾಸ್ತ್ರಜ್ಞರು ದೂರ ಸಂವೇದಿ ತಂತ್ರಜ್ಞಾನವನ್ನು ಬಳಸಿ ಭೂಮಿಯ ಶಿಲಾಗೋಳ, ಜಲಗೋಳ,ವಾಯುಗೋಳ ಮತ್ತು ಜೀವಗೋಳಗಳ ಬಗ್ಗೆ ಅಂದಾಜು ಮಾಡುವರು.

ಭೂಗೋಳಶಾಸ್ತ್ರಜ್ಞರು ದೂರ ಸಂವೇದಿ (sensors) ಉಪಕರಣಗಳನ್ನು ಬಳಸಿ ಭೂಮಿಯ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸುವರು. ಈ ಉಪಕರಣಗಳು ವಸ್ತುಗಳನ್ನು ಮುಟ್ಟದೆ ಮಾಹಿತಿಯನ್ನು ಸಂಗ್ರಹಿಸಲು ಈ ಜ್ಞಾನೇಂದ್ರಿಯಗಳನ್ನು ಹೆಲಿಕ್ಯಾಪ್ಟರ್‌ಗಳು, ವಿಮಾನಗಳು, ಅಥವಾ ಉಪಗ್ರಹಗಳಲ್ಲಿ ಜೋಡಿಸಿ ಬೇಕಾದ ಮಾಹಿತಿಗಳನ್ನು ಪಡೆಯಲಾಗುತ್ತದೆ. ಈ ಮಾಹಿತಿಗಳು ವಸ್ತುಗಳ ಮೇಲೆ ಪ್ರತಿ ಫಲಿಸುವ ಅಥವಾ ಹಿಂತಿರುಗಿಸುವ ಸೂರ್ಯನ ಬೆಳಕಿನ ವಿದ್ಯುತ್ ಕಾಂತೀಯ ಶಕ್ತಿ (ಅಲೆಗಳನ್ನು) ದಾಖಲಿಸುವುದರ ಮೂಲಕ ಪಡೆಯಲಾಗುತ್ತದೆ.

ದೂರ ಸಂವೇದಿ ತಂತ್ರಜ್ಞಾನದ ಬೆಳವಣಿಗೆ

ವಾಯುಮಂಡಲದ ಛಾಯಾಚಿತ್ರಗಳು ದೂರ ಸಂವೇದಿ ತಂತ್ರಜ್ಞಾನದ ಪ್ರಾರಂಭವಾಗಿದೆ. ನಕಾಶೆ ತಯಾರಕರು, ವಾಯುಮಂಡಲದ ಛಾಯಾ ಚಿತ್ರಗಳನ್ನು ಬಳಸಿ ನಕ್ಷೆಗಳನ್ನು ಬರೆದರು.

1858ರಲ್ಲಿ ಫ್ರಾನ್ಸಿನ ನಕಾಶೆಗಾರರು ಬಿಸಿಗಾಳಿ ಬಲೂನ್ (ಪ್ಯಾರಾಚೂಟ್) ಗಳನ್ನು ಕ್ಯಾಮರಗಳನ್ನು ಜೋಡಿಸಿದವಿಮಾನಗಳನ್ನುಬಳಸಿ ಭೂ ಸ್ವರೂಪಗಳನ್ನು ಓರೆಯಾದ ಕೋನಗಳಲ್ಲಿ ಚಿತ್ರೀಕರಿಸಿದರು.



ಬಲೂನ್

ಮೊದಲನೇ ಮಹಾಯುದ್ಧ ನಡೆದ ಸ್ಥಳದ ಛಾಯಾಚಿತ್ರ ತೆಗೆಯಲು ವಿಮಾನಗಳನ್ನು ಬಳಸಿಕೊಂಡರು.



ವಾಯುಮಂಡಲದ ನೋಂದಣಿ

ಈ ಛಾಯಾಚಿತ್ರಗಳು ವಿರೋಧಿ ರಾಷ್ಟ್ರಗಳ ಸೈನಿಕರ ಚಲನವಲಗಳನ್ನು ಗಮನಿಸಲು ಸ್ಥಿತಿಗತಿಯ ಮಾಹಿತಿಗಳನ್ನು ಸಂಗ್ರಹಿಸಲು ಸಹಾಯವಾಯಿತು.

ಮಹಾಯುದ್ಧದ ನಂತರ ಬಾಹ್ಯಾಕಾಶ ಛಾಯಾಚಿತ್ರಗಳನ್ನು ಬಳಸಿಕೊಂಡರು.

ನಕಾಶೆ ತಯಾರಕರುಗಳು ವಿವಿಧ ಕೋನಗಳಲ್ಲಿ ತೆಗೆಯಲ್ಪಟ್ಟ ಛಾಯಾಚಿತ್ರಗಳನ್ನು ಹೋಲಿಸಿ ನೋಡಿ ನಿರ್ದಿಷ್ಟವಾದ ಗಡಿಯೊಳಗೆ ವಿಸ್ತೀರ್ಣವನ್ನು ಸೂಕ್ತವಾದ ವಿವರಗಳನ್ನೊಳಗೊಂಡ ನಕಾಶೆಗಳನ್ನು ಸೃಷ್ಟಿಸುವ ಸಾಮರ್ಥ್ಯ ಹೊಂದಿದ್ದರು. ವಿವಿಧ ಕೋನಗಳಲ್ಲಿ ತೆಗೆದ ಚಿತ್ರಗಳನ್ನು ಹೋಲಿಸಿ ಸರಿಯಾದ ಆಳತೆಗಳನ್ನು ನಿರ್ಧರಿಸುವ ವಿಧಾನಕ್ಕೆ ಛಾಯಾಚಿತ್ರ ಅಳತೆ ಎಂದು ಹೆಸರು. ವಾಯುಮಂಡಲದ ಛಾಯಾಚಿತ್ರಗಳನ್ನು ಉಪಯೋಗಿಸಿಕೊಂಡು ಬರೆಯುವ ಭೂಪಟ ಅಥವಾ ನಕಾಶೆಗೆ ಲಂಬವಾಗಿರುವ (Orthophoto Map) ನಕಾಶೆ ಎಂದು ಹೇಳುವರು.

1960ರಲ್ಲಿ ದೂರ ಸಂವೇದಿ ತಂತ್ರಜ್ಞಾನ ಇಲಾಖೆಯಲ್ಲಿ ಉಪಗ್ರಹವನ್ನು ಬಳಸಿದ ನಂತರ ಒಂದು ಕ್ರಾಂತಿ ನಡೆಯಿತು. ಉಪಗ್ರಹದ ಎತ್ತರದಿಂದ ಭೂಮಿಯ ವಿಸ್ತೀರ್ಣವನ್ನು ತೋರಿಸಬಹುದು. ಮೊದಲನೇ ವಾತಾವರಣ ಉಪಗ್ರಹ. TIROS -1 (Television and infrared observation satellite) ಅಮೇರಿಕಾ ಸಂಯುಕ್ತ ಸಂಸ್ಥಾನವು ಉಡಾಯಿಸಿತು. 1970ರಲ್ಲಿ ಭೂ ಸಂಪನ್ಮೂಲ ತಾಂತ್ರಿಕ ಉಪಗ್ರಹ (ERTS) ಉಡಾಯಿಸುವ ಮೂಲಕ ದೂರಸಂವೇದಿ ತಂತ್ರಜ್ಞಾನ ಇಲಾಖೆಯಲ್ಲಿ ಎರಡನೇ ಕ್ರಾಂತಿ ಉಂಟಾಯಿತು. 1975ರಲ್ಲಿ ಈ ಸರಣಿಯನ್ನು ಲ್ಯಾಂಡ್ ಸ್ಯಾಟ್ (LANDSAT) ಎಂದು ಪುನರ್ ನಾಮಕರಣ ಮಾಡಲಾಯಿತು.




TIROS - 1 ಉಪಗ್ರಹ

ಸಂವೇದಿ ತಂತ್ರಜ್ಞಾನ ಇಲಾಖೆಯಲ್ಲಿ ಬಳಕೆಯಾದ ನಂತರ ಹಲವು ಖಾಸಗಿ ಸಂಸ್ಥೆಗಳು ಸಹ ಉಪಕರಣಗಳನ್ನು ಬಾಹ್ಯಾಕಾಶಕ್ಕೆ ಉಡಾಯಿಸಿದರು. 1986ರಲ್ಲಿ ಫ್ರಾನ್ಸ್ ದೇಶದ ಸ್ಪಾಟ್ (SPOT -Satellite Pour l'Observation de la Terre)ಉಪಗ್ರಹ ತನ್ನ

ಕಾರ್ಯವನ್ನು ಪ್ರಾರಂಭಿಸಿತು. ಫ್ರಾನ್ಸಿನ ಐದು ಉಪಗ್ರಹಗಳನ್ನು ಬಾಹ್ಯಾಕಾಶಕ್ಕೆ ಉಡಾಯಿಸಿ 10 ಮಿಲಿಯನ್‌ಗಿಂತಲು ಹೆಚ್ಚು ಛಾಯಾಚಿತ್ರಗಳನ್ನು ತೆಗೆಯಲಾಗಿದೆ.

ದೂರ ಸಂವೇದಿಯ ಭಾಗಗಳು

ದೂರ ಸಂವೇದಿ ವ್ಯವಸ್ಥೆಯು ನಾಲ್ಕು ಮೂಲ ಅಂಗಗಳನ್ನು ಒಳಗೊಂಡಿದೆ. ಅವುಗಳೆಂದರೆ,




1. ಗುರಿ
2. ವಿಕಿರಣ ಮೂಲಕ
3. ಕಳುಹಿಸುವಿಕೆ ಮಾರ್ಗ
4. ಸಂವೇದಿ (ಸೆನ್ಸಾರ್)

ಯಾವುದೇ ವಸ್ತುವಿನ ಬಗ್ಗೆ ಮಾಹಿತಿ ಪಡೆಯಲು ಬಯಸುತ್ತೇವೆಯೋ ಅದನ್ನು ಗುರಿ ಎನ್ನುತ್ತೇವೆ. ಭೂಮಿಯ ವಸ್ತುಗಳನ್ನು ನೇರವಾಗಿ ಸಂಪರ್ಕಿಸದೆ, ಮಾಹಿತಿಗಳನ್ನು ಸಂಗ್ರಹಿಸಿ ದಾಖಲಿಸುವುದು ಈ ಕ್ಷೇತ್ರದ ಕಾರ್ಯವಾಗಿದೆ. ಸೂರ್ಯನನ್ನು ಶಕ್ತಿ ಸಂಪನ್ಮೂಲವೆಂದು ಅಭಿಪ್ರಾಯ ಪಡಲಾಗಿದೆ. ಸೂರ್ಯನು ವಿದ್ಯುತ್ ಕಾಂತೀಯ ಶಕ್ತಿಯನ್ನು ಭೂಮಿಗೆ ಕೊಡುತ್ತದೆ. ಸಾಮಾನ್ಯವಾಗಿ ಶಕ್ತಿ ಸಂಪನ್ಮೂಲಗಳನ್ನು ಎರಡು ಬಗೆಗಳಾಗಿ ವರ್ಗೀಕರಿಸಲಾಗಿದೆ.

1. **ನೈಸರ್ಗಿಕ ಪದ್ಧತಿ** : ನೈಸರ್ಗಿಕ ಪದ್ಧತಿಯು ಸೂರ್ಯನ ಕಿರಣದಲ್ಲಿ ಭೂವಸ್ತುಗಳ ಪ್ರತಿ ಬಿಂಬ.

2. **ಕೃತಕ ಪದ್ಧತಿ** : ಕೃತಕ ಪದ್ಧತಿಯಲ್ಲಿ ರಾಡರ್ ಉಪಕರಣದ ಮೂಲಕ ಪಡೆಯುವ ಕಿರಣ ಪ್ರತಿಬಿಂಬಿಸುವುದು. ಸೂರ್ಯನ ಶಕ್ತಿ ಕಿರಣಗಳಾಗಿ ಹೊರ ಬರುತ್ತವೆ. ಈ ಕಿರಣಗಳು ವಿದ್ಯುತ್ ಕಾಂತೀಯ ತರಂಗಗಳಾಗಿ ಬದಲಾದ ನಂತರ ಹೊರಗೆ ಹರಿಯುತ್ತದೆ. ಇವುಗಳಲ್ಲಿ ಉಳಿದ ಅತಿ ಕಿರು ತರಂಗಗಳನ್ನೊಳಗೊಂಡ ಗಾಮ ಕಿರಣಗಳಿಂದ ಅತಿ ದೂರದ ರೇಡಿಯೊ ತರಂಗದವರೆಗೆ ಇದೆ ಈ ಭಾಗವನ್ನು ವಿದ್ಯುತ್ ಕಾಂತೀಯ ವಿಕಿರಣಗಳೆಂದು ಕರೆಯುವರು. ದೂರ ಸಂವೇದಿಯಲ್ಲಿ ವಿದ್ಯುತ್ ಕಾಂತೀಯ ಕಿರಣಗಳನ್ನು ಬಳಸಲಾಗುತ್ತದೆ. ಭೂ ಭಾಗಗಳ ಮೇಲೆ ಬೀಳುವ ಸೂರ್ಯನ ಕಿರಣಗಳು ಪುನ: ವಾಯುಮಂಡಲಕ್ಕೆ ಹಿಂದಿರುಗಿಸುತ್ತದೆ. ಈ ರೀತಿ ಪ್ರತಿಫಲನದ ಮೂಲಕ ಗುರಿ ಬಗ್ಗೆ ಮಾಹಿತಿಗಳು ಸೆನ್ಸಾರ್‌ಗಳಿಗೆ ಕಳುಹಿಸಲಾಗುವುದು. ಸೆನ್ಸಾರ್ ಉಪಕರಣ ವಿದ್ಯುತ್ ಕಾಂತೀಯ ವಿಕಿರಣಗಳನ್ನು ಪತ್ತೆ ಹಚ್ಚುತ್ತದೆ. ಇಂದ್ರಿಯಗಳು ಪಡೆಯುವ ಶಕ್ತಿಯನ್ನಾಧರಿಸಿ ವೇಗದ ಇಂದ್ರಿಯಗಳು ಮತ್ತು ಮಂದ ಇಂದ್ರಿಯಗಳು

ದೂರ ಸಂವೇದಿಯ ಭಾಗಗಳು



ಎಂದು ವರ್ಗೀಕರಿಸಲಾಗಿದೆ. ಇಂದ್ರಿಯಗಳು ನೈಸರ್ಗಿಕವಾದ ಉಷ್ಣ ಶಕ್ತಿ ಪ್ರತಿ ಫಲಿಸುವುದನ್ನು ಕಂಡು ಹಿಡಿಯುತ್ತದೆ. ಉದಾಹರಣೆಗೆ ಸೂರ್ಯನ ಬೆಳಕಿನಲ್ಲಿ ನಮಗೆ ಇಷ್ಟವಾದ ಕ್ಯಾಮಾರದಿಂದ ಚಿತ್ರಗಳನ್ನು ತೆಗಯುವಂತಿದೆ. ತ್ವರಿತ ಪರಿಭಾವನೆಗಳನ್ನು ಕ್ಷೇತ್ರದಿಂದ ಸಂಕೇತಗಳನ್ನು ಹೊರಹಾಕಿ ಶಕ್ತಿಯನ್ನು ಅಳೆಯುತ್ತದೆ.

ಉದಾ: ರಾಡಾರ್ ಉಪಕರಣ

ದೂರ ಸಂವೇದಿ ತಂತ್ರಜ್ಞಾನದ ಬಳಕೆಯ ವಿಧಾನಗಳು

1. ಸೂರ್ಯನು ಒಂದು ಶಕ್ತಿ ಸಂಪನ್ಮೂಲ (A)

ದೂರ ಸಂವೇದಿಯಲ್ಲಿ ತುಂಬಾ ಅಗತ್ಯವಾದುದರಲ್ಲಿ ಸೂರ್ಯ ಶಕ್ತಿಯು ಮೊದಲನೆಯಾಗಿದೆ. ಈ ಶಕ್ತಿ ವಸ್ತುಗಳು ಪ್ರಕಾಶಿಸುವಂತೆ ಮಾಡುತ್ತದೆ. ಅದರ ಮೂಲಕ ವಸ್ತುಗಳಿಗೆ ಅಗತ್ಯವಾದ ವಿದ್ಯುತ್ ಕಾಂತೀಯ ಬಲವನ್ನು ಕೊಡುತ್ತದೆ.

2. ಸೂರ್ಯನಕಿರಣ ಮತ್ತು ವಾಯುಮಂಡಲ (B)

ಸೌರಶಕ್ತಿಯು, ವಾಯುಮಂಡಲದ ಮೂಲಕ ಹಾದು ಹೋಗುವಾಗ ಹಲವಾರು ವಸ್ತುಗಳು ಈ ಶಕ್ತಿಯನ್ನು ಸಂಪರ್ಕಿಸಲು ಕಾಯುತ್ತಿರುತ್ತದೆ. ಅದೇನೆಂದರೆ, ವಿದ್ಯುತ್ ಕಾಂತೀಯ ಮೊತ್ತದ ಒಂದು ಭಾಗವು ವಾಯು ಮಂಡಲದಲ್ಲಿರುವ ಗಾಳಿಯು ಗ್ರಹಿಸುತ್ತದೆ. ಇದೇ ಕಾರ್ಯವು ಭೂಮಿಯಿಂದ ಪ್ರತಿಫಲಿಸುವಾಗ ನಡೆಯುತ್ತದೆ.

3. ಸೂರ್ಯನ ಕಿರಣ ಮತ್ತು ಭೂಮಿಯ ಮೇಲಿನ ವಸ್ತುಗಳು. (C)

ಸೂರ್ಯ ಶಕ್ತಿಯು ಗುರಿಯ ಕಡೆಗೆ ಬಾಹ್ಯಾಕಾಶದ ಮಾರ್ಗವಾಗಿ ಹಾದು ಭೂಮಿಯನ್ನು ತಲುಪುತ್ತದೆ. ಗುರಿಯೊಡನೆ ಕಾರ್ಯ ನಿರ್ವಹಿಸುತ್ತದೆ. ಈ ಕಾರ್ಯವು ಗುರಿಯ ಸ್ವಾಭಾವವನ್ನು ಕಿರಣಗಳ ಸ್ವಭಾವಕ್ಕೆ ಅನುಗುಣವಾಗಿ ರಚನೆಯಾಗುತ್ತವೆ.

4. ಮಾಹಿತಿ ಅಥವಾ ಸಂಖ್ಯಾಬಲವನ್ನು ದಾಖಲಿಸುವುದು (ಸಂಗ್ರಹ)(D)

ಭೂ ವಿಸ್ತಾರದಿಂದ ಹೊರ ಹಾಕಲ್ಪಟ್ಟ ವಿದ್ಯುತ್ ಕಾಂತೀಯ ತರಂಗಗಳನ್ನು ಸೆನ್ಸಾರ್‌ಗಳು ಸಂಗ್ರಹಿಸಿ ದಾಖಲಿಸುತ್ತವೆ.

5. ಕಳುಹಿಸು, ಅಂಗೀಕಾರ ಮತ್ತು ಕಾರ್ಯ ವಿಧಾನ (E)

ಸೆನ್ಸಾರ್‌ಗಳಲ್ಲಿ ದಾಖಲಿಸಲ್ಪಟ್ಟ ವಿದ್ಯುತ್ ಕಾಂತೀಯ ತರಂಗಗಳನ್ನು ವಿದ್ಯುತ್ ಸೂಚಕಗಳಾಗಿ ಬದಲಾಯಿಸಿ ಭೂ ಕೇಂದ್ರಗಳಿಗೆ ಕಳುಹಿಸಲಾಗುತ್ತದೆ. ಸೆನ್ಸಾರ್‌ಗಳಿಂದ ಪಡೆಯುವ ವಿದ್ಯುತ್ ಸೂಚಕಗಳು ಹಲವು ದಾಖಲೆ ಸಂಖ್ಯೆಗಳಾಗಿ ಬದಲಾಗುತ್ತದೆ.

6. ಅರ್ಥ ವಿವರಣೆ ಮತ್ತು ವಿಶ್ಲೇಷಣೆ (F)

ಕ್ರಮಬದ್ಧಗೊಳಿಸಿದ ಉಪಗ್ರಹ ದಾಖಲೆಗಳನ್ನು ವರ್ಗೀಕರಿಸಿ ಮಾಹಿತಿ ಮೊತ್ತವನ್ನು ಬಳಸಿಕೊಳ್ಳುವುದು.

7. ಪ್ರಯೋಜನಗಳು

ದೂರ ಸಂವೇದಿಯ ಮೂಲಕ ಪಡೆದುಕೊಂಡ ಹೊಸ ಮಾಹಿತಿಗಳು ಹಲವಾರು ಪರಿಸ್ಥಿತಿಗಳಿಂದ ಉದ್ಭವಿಸುವ ಸಮಸ್ಯೆಗಳಿಗೆ ಪರಿಹಾರವನ್ನು ನೀಡುತ್ತದೆ.

ದೂರ ಸಂವೇದಿಯ ಉಪಯೋಗಗಳು

1. ಈ ವ್ಯವಸ್ಥೆಯು ವಿಶಾಲವಾಗಿ ಹಂಚಿಕೆಯಾದ ಭೂ ವಿಸ್ತೀರ್ಣದ ಬಗೆಗಿನ ವಿವರಗಳನ್ನು ಸಂಕ್ಷಿಪ್ತವಾಗಿ ಒದಗಿಸುತ್ತದೆ.

2. ಮಾನವನಿಂದ ಸುಲಭವಾಗಿ ತಲುಪಲು ಸಾಧ್ಯವಾಗದ ಭೂ ಭಾಗದ ಲಕ್ಷಣಗಳನ್ನು ದೂರ ಸಂವೇದಿ ಉಪಕರಣಗಳ ಮೂಲಕ ಕಂಡು ಹಿಡಿಯಬಹುದು. ಉದಾ: ಆಫ್ರಿಕಾದ ಕಾಂಗೊ ತೀರದ ಉಷ್ಣವಲಯದ ಅರಣ್ಯ ಪ್ರದೇಶ.



3. ಭೂ ಭಾಗದ ಮಾಹಿತಿಗಳನ್ನು ಅಗ್ಗವಾಗಿಯೂ, ತ್ವರಿತವಾಗಿಯೂ , ನಿರಂತರವಾಗಿ ಸಂಗ್ರಹಿಸಿ ಕೊಡುತ್ತದೆ. ಉದಾ: ಬೆಳೆಗಳಿಗೆ ಹಾನಿ ಉಂಟು ಮಾಡುವ ಕೀಟಗಳು, ಮತ್ತು ರೋಗಗಳನ್ನು ಗುರುತಿಸಿ ರೈತರಿಗೆ ಬೇಕಾದ ಮಾಹಿತಿಗಳನ್ನು ಕೊಡುತ್ತದೆ.

4. ದೇಶದ ಕಲ್ಯಾಣ ಯೋಜನೆಗಳನ್ನು ರೂಪಿಸಲು, ರೂಪಿಸಿದ ಯೋಜನೆಗಳನ್ನು ಕಾರ್ಯಗತಗೊಳಿಸಲು ಸಹಾಯ ಮಾಡುತ್ತದೆ. ಉದಾ: ನೈಸರ್ಗಿಕ ವಿಕೋಪಗಳಾದ ಸುನಾಮಿ, ಕ್ಷಾಮ, ಪ್ರವಾಹ, ಚಂಡಮಾರುತಗಳು ಉಂಟಾಗುವ ಸ್ಥಳಗಳನ್ನು ಗುರುತಿಸಿ ಸಂತ್ರಸ್ತರಿಗೆ ಪರಿಹಾರ ಒದಗಿಸಲು ಪುನರ್ ವಸತಿ ವರಗಿನ ಎಲ್ಲಾ ಕಾರ್ಯಗಳಲ್ಲೂ ಬಳಸಲಾಗುತ್ತದೆ.

5. ಭೂಗೋಳ ಶಾಸ್ತ್ರದ ವಿವರಗಳನ್ನೊಳಗೊಂಡ ಭೂಗರ್ಭಶಾಸ್ತ್ರ, ಜನಸಂಖ್ಯೆ, ಮಣ್ಣಿನ ಬಗೆಗಳಂತಹ ಭೂಪಟಗಳನ್ನು ತುಂಬಾ ಸೂಕ್ಷ್ಮವಾಗಿ ವಿಸ್ತಾರವಾಗಿಯೂ ನಕಾಶೆ ತಯಾರಕರು ತಯಾರಿಸಿದ್ದಾರೆ.

ಭೌಗೋಳಿಕ ಮಾಹಿತಿ ವ್ಯವಸ್ಥೆ

ಪೃಥ್ವಿಯ ಮೇಲ್ಭಾಗದ ವಿವರಣಾ ಸ್ಥಳಗಳ ಮಾಹಿತಿಯನ್ನು ಸಂಗ್ರಹಿಸುವ ಮತ್ತು ತಿಳಿಸುವ ಒಂದು ಕಂಪ್ಯೂಟರ್ ವ್ಯವಸ್ಥೆ, ನಿರ್ದಿಷ್ಟ ಕೆಲವು ಉದ್ದೇಶಗಳಿಗಾಗಿ ವಾಸ್ತವ ಪ್ರಪಂಚದಿಂದ ಪ್ರಾದೇಶಿಕ ಮಾಹಿತಿಯನ್ನು ವರ್ತಮಾನದಲ್ಲಿ ಸಂಗ್ರಹಿಸುವ, ಮರುಕಳಿಸುವ, ಪ್ರಸರಿಸುವ ಮತ್ತು ಸಂಬಂಧಿಸಿದ, ಮಾಹಿತಿ ಸೆರೆಯಿಡಿಯುವುದು, ತಪಾಸಣೆ, ದತ್ತಾಂಶ, ಸಮಗ್ರೀಕರಣ, ನಿರ್ವಹಣಾ ಕುಶಲತೆ ಮತ್ತು ವಿಶ್ಲೇಷಣೆ ಮಾಡುವ ವ್ಯವಸ್ಥೆಯನ್ನು ಭೌಗೋಳಿಕ ಮಾಹಿತಿ ವ್ಯವಸ್ಥೆ ಎಂದು ಹೇಳ ಬಹುದು.

ಭೌಗೋಳಿಕ ಮಾಹಿತಿ ವ್ಯವಸ್ಥೆಯ ಪ್ರಮುಖ ಅಂಶಗಳು



ಭೌಗೋಳಿಕ ಮಾಹಿತಿ ವ್ಯವಸ್ಥೆಯು ಕಂಪ್ಯೂಟರ್‌ನಿಂದ ಬರೆಯಲ್ಪಟ್ಟ ನಕಾಶೆ ಜೊತೆ ಅಂಕಿ ಸಂಖ್ಯೆ ಮಾಹಿತಿಯನ್ನು ಒಟ್ಟು ಗೂಡಿಸುವ ನಿರ್ವಹಣೆ ವ್ಯವಸ್ಥೆಯಾಗಿದೆ. ಈ ರೇಖಾ ಚಿತ್ರವು ಭೌಗೋಳಿಕ ಮಾಹಿತಿ ವ್ಯವಸ್ಥೆಯ ಮೂರು ಉಪಅಂಗಗಳನ್ನು ವಿವರಿಸುತ್ತದೆ.

ಸೇರಿಸುವಿಕೆ

1. ಕಂಪ್ಯೂಟರ್‌ನಲ್ಲಿ ಲಭ್ಯವಿರುವ ಮಾಹಿತಿ. ವ್ಯವಸ್ಥೆ ಸಂಗ್ರಹಿಸಲ್ಪಟ್ಟ ದತ್ತಾಂಶ ಉಪಯೋಗಿಸಿ ಕೆಲವು ಉದ್ದೇಶಗಳ ವಿಶ್ಲೇಷಣೆಗಾಗಿ ಬಳಸಲಾಗುತ್ತದೆ.

2. ಕಂಪ್ಯೂಟರ್ (ಹಾರ್ಡ್‌ವೇರ್) ಮತ್ತು ಸಾಫ್ಟ್‌ವೇರ್ ವ್ಯವಸ್ಥೆ ಇವು ಸಂಗ್ರಹಿಸಿದ ದತ್ತಾಂಶ, ದತ್ತಾಂಶವನ್ನು ನಿರ್ವಹಿಸಿ ಮತ್ತು ವಿಭಜಿಸಿ ಕೊಡುತ್ತದೆ.

3. ಹೊರಹಾಕುವ ವ್ಯವಸ್ಥೆಯ (ಭೌಗೋಳಿಕ ಮಾಹಿತಿ ವಿಭಾಗಗಳೆಂದರೆ, ಡಿಜಿಟಲ್ ನಕ್ಷೆ, ಏರಿಯಾಲ್ ಛಾಯಾಚಿತ್ರ, ಉಪಗ್ರಹ ಬಿಂಬ (ಇಮೇಜಸ್) ಅಂಕಿ ಸಂಖ್ಯೆಗಳ ಪಟ್ಟಿ ಮತ್ತು ಇತರ ಸಂಬಂಧ ಪಟ್ಟ ದಾಖಲೆಗಳು.

ಭೌಗೋಳಿಕ ಮಾಹಿತಿ ವ್ಯವಸ್ಥೆಗಳ ಉಪಯೋಗಗಳು

1. ಗಣಿಗಳನ್ನು ತೋಡುವುದಕ್ಕೆ ಮತ್ತು ಖನಿಜಗಳ ಶೋಧಕ್ಕಾಗಿ ಗಣಿ ಕಂಪನಿಗಳು ಭೌಗೋಳಿಕ ಮಾಹಿತಿ ವ್ಯವಸ್ಥೆಯನ್ನು ಬಳಸುವರು.

2. ವಿದ್ಯುತ್ ಕಂಪನಿಗಳು ಭೌಗೋಳಿಕ ಮಾಹಿತಿ ವ್ಯವಸ್ಥೆಯನ್ನು ಬಳಸಿ ನಿರ್ದಿಷ್ಟ ಪ್ರದೇಶಗಳಲ್ಲಿ ವಿದ್ಯುತ್ ಪ್ರಮಾಣ ಮತ್ತು ವಿದ್ಯುತ್ ಕಂಪನಿಯ ಸಾಮರ್ಥ್ಯದ ಮೇಲ್ವಿಚಾರಣೆ, ಸಂಶೋಧನೆಗಾಗಿ ಬಳಸಿಕೊಳ್ಳುವರು.

3. ಸಾರಿಗೆ ಸಂಸ್ಥೆಗಳು, ಭೌಗೋಳಿಕ ಮಾಹಿತಿ ವ್ಯವಸ್ಥೆಯನ್ನು ಬಳಸಿ ಅತೀ ಕಡಿಮೆ ದೂರವಿರುವ ಮತ್ತು ತಮ್ಮ ಸರಕುಗಳನ್ನು ತ್ವರಿತವಾಗಿ ಸಾಗಿಸುವುದರಿಂದ ಸಮಯ ಉಳಿತಾಯ ಮಾಡುವರು.

4. ಭೌಗೋಳಿಕ ಮಾಹಿತಿ ವ್ಯವಸ್ಥೆಯನ್ನು ಬಳಸಿ ಅಪರಾಧಗಳನ್ನು ಪರಿಶೀಲಿಸಿ, ಹೆಚ್ಚಿನ ಅಪರಾಧಗಳು ನಡೆಯುವ ಭಾಗಗಳನ್ನು ನಕಾಶೆಯಲ್ಲಿ ಗುರುತಿಸುವರು.

5. ಪರಿಸರಕ್ಕೆ ಸಂಬಂಧಿಸಿದಂತೆ ಜೀವಿಗಳ ಹಂಚಿಕೆ ಮತ್ತು ವಾಸ ಸ್ಥಳಗಳನ್ನು (ಗುರುತಿಸಲು) ತೋರಿಸಲು ಭೌಗೋಳಿಕ ಮಾಹಿತಿ ವ್ಯವಸ್ಥೆಯನ್ನು ಬಳಸಲಾಗುತ್ತದೆ.

ಜಾಗತಿಕ ಸ್ಥಾನ ನಿರ್ಧಾರ ವ್ಯವಸ್ಥೆ

ಪ್ರಪಂಚದ ಯಾವುದೇ ಸ್ಥಳವನ್ನು ಗುರುತಿಸಲು ವಿಶೇಷವಾಗಿ ತಯಾರಿಸಿದ ರಿಸೀವರ್ ನ್ನೊಳಗೊಂಡ ಕೃತಕ ಉಪಗ್ರಹಗಳ ಸಮೂಹ ಮತ್ತು ನಿಯಂತ್ರಣ ವ್ಯವಸ್ಥೆಗೆ ಜಾಗತಿಕ ಸ್ಥಾನ ನಿರ್ಧಾರ ವ್ಯವಸ್ಥೆ ಎನ್ನಬಹುದು. ಇದೊಂದು ಯಾನ ನಿರ್ವಹಣಾ ವ್ಯವಸ್ಥೆಯು ಆಗಿದೆ. ಇದರ ಸ್ಥಾನವು ವೇಗ ಮತ್ತು ಕಾಲಗಳ ಬಗೆಗಿನ ಮಾಹಿತಿಗಳನ್ನು ಎಲ್ಲಾ ಸಮಯದಲ್ಲೂ ಎಲ್ಲಾ ಕಾಲದಲ್ಲೂ 24 ಉಪಗ್ರಹಗಳ ಪುಂಜವಾಗಿದ್ದು, ಅಮೇರಿಕಾ ಸಂಯುಕ್ತ ಸಂಸ್ಥಾನದ ರಕ್ಷಣಾ ಪಡೆ ಸೇನೆಯಿಂದ ತಯಾರಿಸಿ ನಿರ್ವಹಿಸಲ್ಪಡುತ್ತದೆ. 1973ರಲ್ಲಿ ಜಾಗತಿಕ ಸ್ಥಾನ ನಿರ್ಧಾರ ವ್ಯವಸ್ಥೆಯು ಹಳೆಯ ವಿಧಾನಗಳಲ್ಲಿದ್ದ ನ್ಯೂನತೆಗಳನ್ನು ತೆಗೆದು ಹಾಕಿ ಬಳಸಿಕೊಳ್ಳಲಾಯಿತು. ಇದು ಜಾಗತಿಕ ಸ್ಥಾನ ನಿರ್ಧಾರ ವ್ಯವಸ್ಥೆಯ ಕಾರ್ಯನಿರತ 24 ಉಪಗ್ರಹಗಳ ಪುಂಜವಾಗಿದ್ದು, ಆರು ಭೂಕಕ್ಷೆಗಳು, ಎತ್ತರದಲ್ಲಿ ಭೂಮಿಯನ್ನು ಪ್ರದಕ್ಷಿಣೆ ಹಾಕುತ್ತದೆ. ಜಾಗತಿಕ ಸ್ಥಾನ ನಿರ್ಧಾರ ವ್ಯವಸ್ಥೆಗೆ ಸಂಬಂಧಿಸಿದಂತೆ ಮೂರು ಪ್ರಮುಖ ಅಂಗಗಳಿವೆ. ಅವುಗಳೆಂದರೆ,

1. ಅಂತರಿಕ್ಷ ಭಾಗ
2. ನಿಯಂತ್ರಣ ಭಾಗ
3. ಗ್ರಾಹಕ (ಬಳಕೆದಾರರ)ಭಾಗ

ಅಂತರಿಕ್ಷ ಭಾಗ (Space segment)


1.ಅಂತರಿಕ್ಷ ಭಾಗದಲ್ಲಿ 24 ರಿಂದ 32 ಕೃತಕ ಉಪಗ್ರಹಗಳ ಪುಂಜವಾಗಿದೆ. ಇವುಗಳಿಗೆ ಅಂತರಿಕ್ಷ ವಾಹನಗಳು ಎನ್ನುವರು. ಈ ಉಪಗ್ರಹಗಳು ಭೂ ಕಕ್ಷೆಗಳಲ್ಲಿ ಭೂಮಿಯನ್ನು ಪ್ರದಕ್ಷಿಣೆ ಹಾಕುತ್ತದೆ. ಭೂಕಕ್ಷೆಗಳಲ್ಲಿ ಉಪಗ್ರಹಗಳು ಉಡಾವಣಾ ಸಾಮರ್ಥ್ಯವನ್ನು ಹೆಚ್ಚಿಸಿ ಭೂಮಿಯನ್ನು ಪ್ರದಕ್ಷಿಣೆ ಹಾಕಲು ವಿದ್ಯುತ್ ಬಲವರ್ಧಕ ಯಂತ್ರಗಳನ್ನು (BOOSTER) ಅಳವಡಿಸಲಾಗಿದೆ.

2. ಪ್ರಧಾನ ಮಾಹಿತಿ ಸ್ವೀಕೃತ ಸೌಲಭ್ಯ ಕೇಂದ್ರ (RECEIVING CENTRE) ಮತ್ತು ಪರ್ಯಾಯ ಪ್ರಧಾನ ಮಾಹಿತಿ ಸ್ವೀಕೃತಿ ಕೇಂದ್ರ (ALTENATIVE RECEIVING CENTRE) ಪ್ರಧಾನ ನಿಯಂತ್ರಣ ಕೇಂದ್ರವು ಭೂ ಕಕ್ಷೆಯ ಅಂಕಿ ಸಂಖ್ಯೆ ವಿವರಗಳನ್ನು ಅಂತರಿಕ್ಷ ವಾಹನಗಳೂ, ರೇಡಿಯೊ, ಸಂಜ್ಞೆಗಳನ್ನು ಜಾಗತಿಕ ಸ್ಥಾನ ನಿರ್ಧಾರ ವ್ಯವಸ್ಥೆ ರಿಸೀವರುಗಳಿಗೆ ಕಳುಹಿಸುತ್ತದೆ.

3. ಬಳಕೆಗಾರರ ಭಾಗವು ಜಾಗತಿಕ ಸ್ಥಾನ ನಿರ್ಧಾರ ವ್ಯವಸ್ಥೆ ರಿಸೀವರುಗಳನ್ನು (RECEIVERS) ಬಳಸುವ ಜನರನ್ನೊಳಗೊಂಡಿದೆ. ಸೇನೆ, ಸಾರ್ವಜನಿಕರು, ವ್ಯಾಪಾರ ಮತ್ತು ವಿಜ್ಞಾನದ ಅಂಶಗಳಿಗಾಗಿ ಜಾಗತಿಕ ಸ್ಥಾನ ನಿರ್ಧಾರ ವ್ಯವಸ್ಥೆಯನ್ನು ಬಳಸಲಾಗುತ್ತದೆ.

ಜಾಗತಿಕ ಸ್ಥಾನ ನಿರ್ಧಾರ ವ್ಯವಸ್ಥೆಯ (GPS) ಮೂಲ ಕಲ್ಪನೆ

ಜಾಗತಿಕ ಸ್ಥಾನ ನಿರ್ಧಾರ ವ್ಯವಸ್ಥೆಯ (GPS) ರಿಸೀವರುಗಳು ಸ್ಥಾನ ಮತ್ತು ತರಂಗಗಳ ಹರಡುವಿಕೆ ವಿವರಗಳು, ಉಪಗ್ರಹಗಳಲ್ಲಿ ಜೋಡಿಸಲ್ಪಟ್ಟಿರುವ ಸೂಕ್ಷ್ಮ ಗಡಿಯಾರಗಳಿಗೆ ಸೇರಿದ ಎಲ್ಲಾ ಕೇಂದ್ರಗಳಿಗೆ ಕಳುಹಿಸುತ್ತದೆ.



ಜಾಗತಿಕ ಸ್ಥಾನ ನಿರ್ಧಾರ ವ್ಯವಸ್ಥೆ.

ಉಪಗ್ರಹಗಳಿಂದ ಬರುವ ಸಂಕೇತಗಳು, (ನಿಖರವಾದ)ಸ್ಥಾನ (ಎತ್ತರ) ವೇಳೆ ಮತ್ತು ವೇಗ ಎಂದು 3 ಪರಿಮಾಣಗಳಲ್ಲಿ ಗಣನೆ ಮಾಡಲು ಕನಿಷ್ಠ 3 ಉಪಗ್ರಹಗಳಾದರು ಬೇಕಾಗುತ್ತದೆ.

ಅತಿ ಸಣ್ಣ ಗಡಿಯಾರದಿಂದ ಸಣ್ಣ ತಪ್ಪು ಉಂಟಾದರೂ ಸಹ ದೊಡ್ಡ ತಪ್ಪಾಗಿ ಬದಲಾಗುತ್ತದೆ. ಏಕೆಂದರೆ ಉಪಗ್ರಹಗಳ ವೇಗ ಸರಿಯಾದ ಸ್ಥಾನವನ್ನು ತೋರಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಗ್ರಾಹಕವು 4 ಅಥವಾ ಅದಕ್ಕಿಂತ ಹೆಚ್ಚು ಸ್ಥಾನ ಮತ್ತು ವೇಳೆಗಳಲ್ಲಿ ಸಮಸ್ಯೆ ಉಂಟಾದರೆ ಉಪಗ್ರಹಗಳನ್ನು ಬಳಸುವರು.

ಜಾಗತಿಕ ಸ್ಥಾನ ನಿರ್ಧಾರ ವ್ಯವಸ್ಥೆಯ (GPS) ಅನುಕೂಲಗಳು.

ಜಾಗತಿಕ ಸ್ಥಾನ ನಿರ್ಧಾರ ವ್ಯವಸ್ಥೆಯ ಎರಡು ಅನುಕೂಲಗಳಿರುವ ತಂತ್ರಜ್ಞಾನವನ್ನೊಳಗೊಂಡಿದೆ ಎಂದು ಅಭಿಪ್ರಾಯ ಪಡಲಾಗಿದೆ. ಏಕೆಂದರೆ ಸೇನೆ ಮತ್ತು ಸಾರ್ವಜನಿಕರಿಗೂ ಅನುಕೂಲವಾಗುತ್ತದೆ.

ಭೂಮಾಪನ,ನಕಾಶೆ ಬರೆಯುವುದು,ನೌಕಾಸಾರಿಗೆ, ಚರವಾಣಿ ಮುಂತಾದವುಗಳಲ್ಲಿ GEOFENCING ಮುಂತಾದವುಗಳಲ್ಲಿ ಜಿ.ಪಿ.ಎಸ್.ಗಳನ್ನು ಸಾರ್ವಜನಿಕರು ಬಳಸುತ್ತಾರೆ. ರಕ್ಷಣೆ ಅಂಶಗಳಾದ ಮಾರ್ಗದರ್ಶನ, ಶಸ್ತ್ರಾಸ್ತ್ರ ಕ್ಷಿಪಣಿ, ರಕ್ಷಣಾ ಕಾರ್ಯ, ಶತ್ರು ರಾಷ್ಟ್ರದ ಸೈನಿಕ ಬಲವನ್ನು ತಿಳಿದುಕೊಳ್ಳಲು ಜಿ.ಪಿ.ಎಸ್.ಗಳನ್ನು ಬಳಸಲಾಗುತ್ತದೆ.

ಸಮುದ್ರ ರಕ್ಷಣಾ ಕಾರ್ಯಗಳಿಗೆ ಮಾರ್ಗದರ್ಶನ, ಶಸ್ತ್ರಾಸ್ತ್ರ ಕ್ಷಿಪಣಿ ಹುಡುಕುವುದು ಮತ್ತು ರಕ್ಷಣಾಕಾರ್ಯ ಶತ್ರು ರಾಷ್ಟ್ರದ ಸೈನಿಕ ಬಲವನ್ನು ತಿಳಿಯಲು ಸಹಾಯ ಮಾಡುತ್ತದೆ.

ಇದನ್ನು ವ್ಯಾಪಾರ, ವಿಜ್ಞಾನದ ಉಪಯೋಗ, ಮಾರ್ಗ(ದಾರಿ) ಮುಂತಾದವುಗಳಿಗೆ ಪ್ರಮುಖವಾದ ಉಪಕರಣವಾಗಿ ಬಳಸಲಾಗುತ್ತದೆ. ವಿಶ್ವದ ಸನ್ನಿವೇಶವನ್ನು ತಿಳಿಯುವ ಭಾಗವು ಸೂಕ್ಷ್ಮವಾದ ವೇಳೆಯನ್ನು ತೋರಿಸುವುದರಿಂದ ದಿನನಿತ್ಯದ ಜೀವನದಲ್ಲಿ ಬ್ಯಾಂಕು, ಕರವಾಣಿ, ನಿಯಂತ್ರಣ ಕೊಠಡಿಗಳು, ನಿಯಂತ್ರಣ ಕೇಂದ್ರಗಳು, ಉದ್ಯೋಗಸ್ಥರು ಮತ್ತು ಕೃಷಿಕರು ಇನ್ನೂ ಮುಂತಾದವರಿಂದ ಬಳಸಲ್ಪಡುತ್ತದೆ.

ಭೂಮಾಪಕರು, ಭೂರಚನೆಯ ಸಂಶೋಧನೆ ನಡೆಸುವವರು ಮತ್ತು ಅಸಂಖ್ಯಾತರು ತಮ್ಮ ಕೆಲಸಗಳನ್ನು ತುಂಬಾ ಸಾಮರ್ಥ್ಯದಿಂದಲೂ, ಸುರಕ್ಷಿತವಾಗಿಯೂ, ಮಿತವ್ಯಯ ಮತ್ತು ನಿಖರವಾಗಿಯೂ, ಕಾರ್ಯನಿರ್ವಹಿಸಲು ಮಾಹಿತಿ ಒದಗಿಸುವಲ್ಲಿ ಸಹಾಯಕವಾಗಿದೆ.



ಅಭ್ಯಾಸ

ಅ. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ

1. ವಾಯುಮಂಡಲದ ಛಾಯಾಚಿತ್ರಗಳನ್ನು ಬಳಸಿ ಬರೆಯುವ ನಕಾಶೆಗಳನ್ನು _____ಎಂದು ಕರೆಯುವರು.

   ಅ) ಲಂಬವಾಗಿರುವ ನಕಾಶೆ ಆ) ವಾಯುಮಂಡಲ ಛಾಯಾಚಿತ್ರ

   ಇ) ಸ್ವಾಭಾವಿಕ ಈ) ರಾಜಕೀಯ.

2. ವಸ್ತುಗಳನ್ನು ಕಂಡು ಹಿಡಿಯುವುದನ್ನು_____ಎಂದು ಕರೆಯುವರು.

   ಅ) ಗುರಿ ಆ) ಸಂಪನ್ಮೂಲ ಇ) ಸಂವೇದಿ ಈ) ಕಲ್ಪನೆ

3. ವಿದ್ಯುತ್ ಕಾಂತೀಯ ವಿಕಿರಣವನ್ನು ಕಂಡು ಹಿಡಿಯಲು ಬಳಸುವ ಉಪಕರಣ_____ಆಗಿದೆ.

   ಅ) ಗುರಿ ಆ) ಸಂವೇದಿ ಇ) ವಸ್ತು ಈ) ಕ್ಯಾಮರಾ

ಆ. ಹೊಂದಿಸಿರಿ.

1.	ಭೂ ಮಾಪನ	ಅಮೆರಿಕ ಸಂಯುಕ್ತ ಸಂಸ್ಥಾನ.
2.	ದೂರ ಸಂವೇದಿ	ಹಲವು ಮಾಸಗಳು.
3.	ಬಿಸಿಗಾಳಿ ಬಲೂನ್	ಕ್ರಮವಾದ ವಾಯುಮಂಡಲದ ಛಾಯಾ ಚಿತ್ರ.
4.	ವಿಮಾನಗಳು	ಫ್ರಾನ್ಸಿನ ನಕಾಶೆ ತಯಾರಕರು.
5.	ಟಿ ಐ ಆರ್ ಓ ಎಸ್ **(TIROS)**	ಅಲ್ಪಾವಧಿ
		ಭೌಗೋಳಿಕ ಮಾಹಿತಿ ವ್ಯವಸ್ಥೆ.
		ಜಾಗತಿಕ ಸ್ಥಾನ ನಿರ್ಧಾರ ವ್ಯವಸ್ಥೆ.

ಇ. ಸಂಕ್ಷಿಪ್ತವಾಗಿ ಉತ್ತರಿಸಿ.

1. ದೂರ ಸಂವೇದಿ ಎಂದರೇನು?
2. ಭೂ ಮಾಪನದ ಅನಾನುಕೂಲಗಳಾವುವು?
3. ದೂರ ಸಂವೇದಿಯ ಮೂಲ ಅಂಗಗಳಾವುವು?
4. ಭೌಗೋಳಿಕ ಮಾಹಿತಿ ವ್ಯವಸ್ಥೆ – ನಿರೂಪಿಸಿ.
5. ಭೌಗೋಳಿಕ ಮಾಹಿತಿ ವ್ಯವಸ್ಥೆಯ ಎರಡು ಅನುಕೂಲಗನ್ನು ತಿಳಿಸಿ.
6. ಜಾಗತಿಕ ಸ್ಥಾನ ನಿರ್ಧಾರ ವ್ಯವಸ್ಥೆಯ ಅನುಕೂಲಗಳಾವುವು?

ಈ. ಒಂದು ಪುಟದಲ್ಲಿ ಉತ್ತರಿಸಿ.

1. ದೂರ ಸಂವೇದಿ ತಂತ್ರಜ್ಞಾನದ ಬೆಳವಣಿಗೆಯ ಬಗ್ಗೆ ಬರೆಯಿರಿ?
2. ದೂರ ಸಂವೇದಿ ತಂತ್ರಜ್ಞಾನದ ಭಾಗಗಳನ್ನು ವಿವರಿಸಿ.
3. ದೂರ ಸಂವೇದಿ ತಂತ್ರಜ್ಞಾನವನ್ನು ಬಳುಸವ ವಿಧಾನಗಳನ್ನು ವಿವರಿಸಿ.
4. ದೂರ ಸಂವೇದಿ ತಂತ್ರಜ್ಞಾನದ ಉಪಯೋಗಗಳನ್ನು ವಿವರಿಸಿ.

9. ವಿಕೋಪದ ಅಪಾಯ ಕಡಿಮೆಗೊಳಿಸುವಿಕೆ

ವಿಕೋಪ ನಿರ್ವಹಣೆಯ ಮೂಲಭೂತ ಅಭಿಪ್ರಾಯಗಳು, ವಿಕೋಪ ನಿರ್ವಹಣಾ ಚಕ್ರ, ಪ್ರಮುಖವಾದ ಕೆಲವು ಪ್ರಾಕೃತಿಕ ವಿಪತ್ತುಗಳು ಹಾಗೂ ಮಾನವ ನಿರ್ಮಿತ ವಿಪತ್ತುಗಳು ಮತ್ತು ಸಾಮಾನ್ಯ ರಕ್ಷಣಾ ತಂತ್ರಗಳ ಬಗ್ಗೆ ಈಗಾಗಲೇ ನೀವು ಒಂಬತ್ತನೇ ತರಗತಿಯಲ್ಲಿ ಓದಿ ತಿಳಿದುಕೊಂಡಿರುವಿರಿ.

ಈ ಪಾಠದಲ್ಲಿ ವಿಕೋಪಗಳಿಂದ ಉಂಟಾಗುವ ಪ್ರಾಣಹಾನಿ, ಜೀವನಾಧಾರಗಳ ಹಾನಿ, ಆರ್ಥಿಕ ಮತ್ತು ನೈಸರ್ಗಿಕ ಸಂಪತ್ತು ಮುಂತಾದವುಗಳ ಹಾನಿಗಳನ್ನು ತಡೆಯುವ ವಿವಿಧೋಪಾಯಗಳ ಬಗ್ಗೆ ತಿಳಿದುಕೊಳ್ಳೋಣ. ಅಲ್ಲದೆ ಸಮಾಜದಲ್ಲಿ ವಿಕೋಪದ ಅಪಾಯ ಕಡಿಮೆಕೊಳಿಸುವಿಕೆ(Disaster Risk Reduction) ಮತ್ತು ವಿಕೋಪಗಳಿಂದ ಪರೋಕ್ಷವಾಗಿ ಏರ್ಪಡುವ ಪರಿಣಾಮಗಳನ್ನು ಕಡಿಮೆಗೊಳಿಸಲು ಸಮಗ್ರ ವಿಧಾನ (Comprehensive approach) ದ ಮೂಲಕ ಅರ್ಥಮಾಡಿಕೊಳ್ಳೋಣ.

ವಿಕೋಪ ಅಪಾಯ ಕಡಿಮೆಗೊಳಿಸುವಿಕೆಯು ನಮಗೇಕೆ ಅಗತ್ಯವಾಗಿದೆ?

ಒಂದು ವಿಕೋಪದ ತೀವ್ರತೆಯು ಸಮಾಜದ ಮೇಲೂ, ಪರಿಸರದ ಮೇಲೂ ಒಂದು ವಿಕೋಪವು ಎಂತಹ ಪರಿಣಾಮವನ್ನುಂಟುಮಾಡಬಲ್ಲದು ಎಂಬುದನ್ನು ಆಧರಿಸಿರುತ್ತದೆ. ಅದರ ಪ್ರಭಾವವು ನಂತರ ನಮ್ಮ ನಮ್ಮ ಪ್ರಾಣ ಹಾಗೂ ಪರಿಸರವನ್ನು ರಕ್ಷಿಸಲು ತೆಗೆದುಕೊಳ್ಳುವ ಮುನ್ನೆಚ್ಚರಿಕೆ ಕ್ರಮಗಳನ್ನು ಅವಲಂಬಿಸಿರುತ್ತದೆ. ನಾವು ತೆಗೆದುಕೊಳ್ಳುವ ಆ ತೀರ್ಮಾನಗಳು ನಮ್ಮನ್ನು ವಿಕೋಪದಿಂದ ಪಾರಾಗುವ ಸಾಮರ್ಥ್ಯವನ್ನು ಪಡೆದವರನ್ನಾಗಿಸುತ್ತವೆ.

UNISDR (United Nations International Strategy for Disaster Reduction) ವ್ಯಾಖ್ಯಾನಿಸಿರುವ ವಿಕೋಪ ಅಪಾಯ ಕಡಿಮೆಗೊಳಿಸುವಿಕೆಯ ವ್ಯಾಖ್ಯಾನವನ್ನು ತಿಳಿಯೋಣ.

"ವಿಕೋಪದ ಸಾಮಾನ್ಯ ಕಾರಣಗಳನ್ನು ಕಂಡುಹಿಡಿದು, ನಿರ್ವಹಣೆ ಮಾಡಿ ಕ್ರಮಬದ್ಧವಾದ ತರಬೇತಿ ಮತ್ತು ಪ್ರಯತ್ನಗಳನ್ನು ಕೈಗೊಂಡು ವಿಕೋಪದ ಅಪಾಯ ಕಡಿಮೆಗೊಳಿಸುವುದೇ ಇದರ ಅಭಿಪ್ರಾಯವಾಗಿದೆ. ವಿಕೋಪದ ಅಪಾಯ ಕಡಿಮೆಗೊಳಿಸುವಿಕೆ, ಜನರ ಪ್ರಾಣಹಾನಿ, ಆಸ್ತಿಗಳ ನಷ್ಟಗಳನ್ನು ಕಡಿಮೆಗೊಳಿಸಲು ಭೂಮಿ ಮತ್ತು ಪರಿಸರಗಳಲ್ಲಿ ಬುದ್ಧಿವಂತಿಕೆಯ ನಿರ್ವಹಣೆ ಮತ್ತು ಪ್ರಗತಿದಾಯಕ ಸಿದ್ಧರಾಗುವಿಕೆಯು ಹಂತ ಮುಂತಾದವುಗಳು ಇದರ ಅಭಿಪ್ರಾಯದಲ್ಲಿ ಅಡಗಿವೆ".

ವಿಕೋಪ ಅಪಾಯವನ್ನು ಕಡಿಮೆಗೊಳಿಸುವಿಕೆಯಲ್ಲಿ ಕೆಲವು ಮುಖ್ಯಾಂಶಗಳಿವೆ. ಅವುಗಳು ಯಾವುವೆಂದರೆ

- ಶಮನಗೊಳಿಸುವಿಕೆ
- ಮುನ್ನೆಚ್ಚರಿಕೆಯ ಕ್ರಮ
- ವಿಕೋಪ ಸಂಭವಿಸುವ ಮೊದಲು ಸಿದ್ಧರಾಗುವಿಕೆ
- ಚೇತರಿಸುವಿಕೆ

ಶಮನಗೊಳಿಸುವಿಕೆ

ಶಮನಗೊಳಿಸುವಿಕೆ ಮತ್ತು ಅದರ ಕ್ರಮಗಳು ಎಂಬುವು ವಿಕೋಪದ ನಿರಂತರ ಕ್ರಿಯೆಗಳು, ಪ್ರಮಾಣ, ದೃಢಪ್ರಯತ್ನ ಮತ್ತು ವಿಕೋಪದ ಪರಿಣಾಮಗಳನ್ನು ಕಡಿಮೆಗೊಳಿಸಲು ತರಬೇತಿಗಳನ್ನು ನೀಡುವುದಾಗಿದೆ. ಶಮನಗೊಳಿಸುವಿಕೆಯ ಕ್ರಮದಲ್ಲಿ ಎರಡು ಸಾಮಾನ್ಯ ವಿಧಾನಗಳಿವೆ, ಅವುಗಳೆಂದರೆ ರಚನಾತ್ಮಕ ಕ್ರಮಗಳು ಮತ್ತು ರಚನಾತ್ಮಕವಲ್ಲದ ಕ್ರಮಗಳು ಎಂಬುದಾಗಿವೆ. ಶಮನಗೊಳಿಸುವಿಕೆಯ ಕ್ರಮಗಳು ವಿಕೋಪಕ್ಕೂ ಮೊದಲು, ವಿಕೋಪದ ಸಮಯದಲ್ಲಿ, ವಿಕೋಪದ ನಂತರವೂ ತೆಗೆದುಕೊಳ್ಳಲ್ಪಡುತ್ತವೆ.

ರಚನಾತ್ಮಕ ಮತ್ತು ರಚನಾತ್ಮಕವಲ್ಲದ ಕ್ರಮಗಳು

ರಚನಾತ್ಮಕ ಕ್ರಮಗಳು

ರಚನಾತ್ಮಕ ಕ್ರಮ ಎಂಬುದು, ವಿಕೋಪದ ಪರಿಣಾಮಗಳನ್ನು ಕಡಿಮೆಗೊಳಿಸಲು ಅಥವಾ ತಪ್ಪಿಸಲು ಅನುಸರಿಸುವ ಕ್ರಮಗಳಾಗಿವೆ. (ಅಥವಾ) ಇಂಜಿನಿಯರಿಂಗ್‌ಗೆ ಸಂಬಂಧಿಸಿದ ತಂತ್ರಗಳನ್ನು ಬಳಸಿಕೊಂಡು ವಿಕೋಪವನ್ನು ತಡೆದುಕೊಳ್ಳುವ ಮತ್ತು ರಕ್ಷಣಾ ಸಾಮರ್ಥ್ಯವನ್ನು ಒಳಗೊಂಡ ವಿಧಾನ ಅಥವಾ ವಿಭಾಗವನ್ನು ರಚಿಸುವುದಾಗಿದೆ.

ರಚನಾತ್ಮಕವಲ್ಲದ ಕ್ರಮಗಳು

ದೃಢಪ್ರಯತ್ನಕ್ಕೆ ಒಳಪಡದ ಯಾವುದೇ ಕ್ರಮವು ರಚನಾತ್ಮಕವಲ್ಲದ ಕ್ರಮಗಳೆಂಬುದಾಗಿವೆ. ಅವುಗಳೆಂದರೆ ವಿಕೋಪವನ್ನು ಕಡಿಮೆಗೊಳಿಸುವಿಕೆ, ಅದರ ಪರಿಣಾಮಗಳ ಬಗ್ಗೆ ಜ್ಞಾನ, ಜಾರಿಗೊಳಿಸುವಿಕೆ ಅಥವಾ ಒಪ್ಪಂದಗಳು, ನಿರ್ದಿಷ್ಟ ತತ್ವಗಳು ಮತ್ತು ಕಾನೂನುಗಳು, ಸಾರ್ವಜನಿಕರಿಗೆ ಜಾಗೃತಿ ನೀಡುವುದು, ತರಬೇತಿ ಮತ್ತು ಶಿಕ್ಷಣ ನೀಡುವುದು ಮುಂತಾದವುಗಳಾಗಿವೆ.

ರಚನಾತ್ಮಕ ಕ್ರಮಗಳಲ್ಲಿ ಅಡಗಿರುವ ವಿವರಗಳು

- ನೀರನ್ನು ಸಂಗ್ರಹಿಸಿಡಲು ಏರಿಗಳನ್ನು ನಿರ್ಮಿಸುವುದು ಅಥವಾ ಏರಿಗಳನ್ನು ಬಲಗೊಳಿಸುವುದು.
- ಹವಾಮಾನ ಬದಲಾವಣೆಗಳು ಹಾಗೂ ಭೂಕಂಪವನ್ನು ತಡೆದುಕೊಳ್ಳುವ ವಿದ್ಯುಚ್ಛಕ್ತಿ ವಲಯಗಳನ್ನು ಯೋಜಿಸಿ ಸ್ಥಾಪಿಸುವುದು.
- ಕಟ್ಟಡಗಳ ನಿರ್ಮಾಣದಲ್ಲಿ ಗಟ್ಟಿಯಾದ ಮರಗಳು, ಮರದ ಸಾಮಾನುಗಳನ್ನು ಬಳಸುವುದು.
- ಭೂಕಂಪವನ್ನು ತಡೆದುಕೊಳ್ಳುವ ಕಟ್ಟಡಗಳನ್ನು ನಿರ್ಮಿಸಲು ಯೋಜಿಸುವುದು.
- ಸಾರ್ವಜನಿಕ ಕಟ್ಟಡಗಳನ್ನು ಆಗಾಗ್ಗೆ ದುರಸ್ತಿಗೊಳಿಸಿ ವಿಕೋಪಗಳಿಂದ ತಡೆದುಕೊಳ್ಳುವಂತೆ ವಿನ್ಯಾಸಗೊಳಿಸುವುದು.
- ವಿಕೋಪ ಸಂಭವಿಸುವ ವಲಯಗಳ ದೂರದಲ್ಲಿ ಮನೆಗಳನ್ನು ನಿರ್ಮಿಸುವುದು.

ರಚನಾತ್ಮಕವಲ್ಲದ ಕ್ರಮಗಳಲ್ಲಿ ಅಡಗಿರುವ ವಿವರಗಳು

- ನಿರ್ವಹಣೆ ಕ್ರಮಬದ್ಧಗೊಳಿಸುವಿಕೆಯ ವಿವರಗಳು
  - ವಲಯಗಳಿಗಾಗಿ ವಿಂಗಡಿಸಿ ಕಾರ್ಯಶೀಲವಾಗುವುದು
  - ಕರಾವಳಿ ತೀರ ಪ್ರದೇಶಗಳಲ್ಲಿ ನಿರ್ವಹಣೆ
  - ಬೆಟ್ಟ ಪ್ರದೇಶಗಳಲ್ಲಿ ನಿರ್ವಹಣೆ
  - ತಗ್ಗು ಪ್ರದೇಶಗಳಲ್ಲಿ ನಿರ್ವಹಣೆ
  - ಪ್ರವಾಹ ಮೈದಾನಗಳ ಬೆಳವಣಿಗೆಯ ತಡೆಯುವಿಕೆ ಇತ್ಯಾದಿ
- ಸಮುದಾಯ ಸೇವೆಗಳು
- ಶೈಕ್ಷಣಿಕ ಕಾರ್ಯಕ್ರಮಗಳು
- ನೈಸರ್ಗಿಕ ಸಂಪನ್ಮೂಲಗಳ ಬಳಕೆಯ ಬಗ್ಗೆ ನಿಬಂಧನೆಗಳು
- ಸುರಕ್ಷಿತವಲ್ಲದ ಯೋಜನೆಗಳನ್ನು ನಿಯಂತ್ರಿಸಲು ನೀತಿನಿಯಮಗಳು

ಮುನ್ನೆಚ್ಚರಿಕಾ ವ್ಯವಸ್ಥೆಗಳು

ಮುನ್ನೆಚ್ಚರಿಕಾ ವ್ಯವಸ್ಥೆಗಳು ಎಂಬುವು ತುರ್ತುಸಮಯಗಳಲ್ಲಿ ಅಪಾಯಗಳನ್ನು ಕಡಿಮೆಗೊಳಿಸಲು ಮಾಹಿತಿಗಳನ್ನು ನೀಡುವ ಒಂದು ವಿಭಾಗ ಎಂದು ವಿವರಿಸಲಾಗಿದೆ.

ಈ ವಿಭಾಗವು ಭೂಭೌತಿಕ ವಿನಾಶ, ಕೈಗಾರಿಕಾ ಹಾಗೂ ತಾಂತ್ರಿಕ ವಿನಾಶಗಳು, ತುರ್ತುಸಮಯಗಳಲ್ಲಿ ಮತ್ತು ಸಂಬಂಧಿಸಿದ ಇತರ ವಿನಾಶಗಳ ಕಾಲದಲ್ಲಿ ಕಾರ್ಯ ನಿರ್ವಹಿಸುವ ಒಂದು ವ್ಯವಸ್ಥೆಯಾಗಿದೆ.

ಮುನ್ನೆಚ್ಚರಿಕಾ ವ್ಯವಸ್ಥೆಗಳು ಇಲ್ಲವೆಂದರೆ ತರಬೇತಿ ಮತ್ತು ಪ್ರತಿಕ್ರಿಯಿಸುವಿಕೆಯಂತಹ ಕ್ರಮಗಳು ಸೂಕ್ತವಲ್ಲದವುಗಳಾಗಿಬಿಡುತ್ತವೆ. ಅಲ್ಲದೆ ಮುನ್ನೆಚ್ಚರಿಕಾ ವ್ಯವಸ್ಥೆಯು ನಾಲ್ಕು ಮುಖ್ಯವಾದ ಪರಸ್ಪರ ಸಂಬಂಧಿಸಿದ ಹೇಳಿಕೆಗಳನ್ನು ಒಳಗೊಂಡಿರುವುದಾಗಿದೆ.

ಅವುಗಳೆಂದರೆ,

- ಆಳವಾಗಿ ಗಮನಿಸುವಿಕೆ ಮತ್ತು ದಾಖಲಿಸುವಿಕೆ.
- ಅಪಾಯದ ಬಗ್ಗೆ ಜಾಗೃತಿ ಮತ್ತು ಗುರುತು ಹಿಡಿಯುವುದು.
- ಎಚ್ಚರಿಕೆ ನೀಡುವುದು ಮತ್ತು ಪ್ರಚಾರಗೊಳಿಸುವುದು
- ಸೂಕ್ತ ಪ್ರತಿಕ್ರಿಯೆ.

ನಿಮಗೆ ತಿಳಿದಿದೆಯೇ!

ಟೇಲಿ ಸ್ಮಿತ್ ಎಂಬ ಹತ್ತು ವರ್ಷದ ಬಾಲಕಿ ಥೈಲ್ಯಾಂಡ್ ದೇಶದ ಮೆಕಾವ್ ಸಮುದ್ರ ತೀರದಲ್ಲಿ

ನೂರಕ್ಕಿಂತಲೂ ಅಧಿಕ ವಿದೇಶಿ ಪ್ರವಾಸಿಗರನ್ನು 2004ರಲ್ಲಿ ಹಿಂದೂ ಮಹಾಸಾಗರದಲ್ಲಿ ಭೂಕಂಪದಿಂದಾಗಿ ಏರ್ಪಟ್ಟ ಸುನಾಮಿಯ ರಕ್ಕಸ ಅಲೆಗಳ ನಾಶದಿಂದ ರಕ್ಷಿಸಲ್ಪಟ್ಟು ಪ್ರಖ್ಯಾತಳಾಗಿದ್ದಾಳೆ. ಅವಳು ತನ್ನ ಪೋಷಕರಿಗೂ, ಇತರರಿಗೂ ರಕ್ಕಸ ಅಲೆಗಳು ಏರ್ಪಡುವ ಮೊದಲೇ ಸುನಾಮಿ ಬಗ್ಗೆ ಮುನ್ನೆಚ್ಚರಿಕೆಯನ್ನು ನೀಡಿದ್ದಳು. ಅವಳು ಶಾಲೆಯಲ್ಲಿ ಸುನಾಮಿಯ ಬಗ್ಗೆ ಓದಿದುದನ್ನು ಮನಗಂಡು ಮುನ್ನೆಚ್ಚರಿಕೆ ನೀಡಿ ಕಾಪಾಡಿದ್ದಾಳೆ.

ವಿಕೋಪದ ಸಿದ್ಧರಾಗುವಿಕೆ ಹಂತ

ಇದು ಒಂದು ದೀರ್ಘಕಾಲದ ಕಾರ್ಯ. ಸಿದ್ಧರಾಗುವಿಕೆಯು ಎಲ್ಲಾ ಬಗೆಯ ವಿಕೋಪಕ್ಕೆ ಸಂಬಂಧಿಸಿದ ತುರ್ತುಕಾಲಗಳಲ್ಲಿ ಕಾರ್ಯಗತಗೊಳಿಸಲಾಗುವುದು. ಇದರ ಉದ್ದೇಶವೇನೆಂದರೆ ಪ್ರಾಣಾಹಾನಿ ಹಾಗೂ ತೊಂದರೆಗಳನ್ನು ಕಡಿಮೆ ಮಾಡಲು ಪ್ರಯತ್ನಿಸುವ ಕೆಲಸವಾಗಿದೆ. ವಿಕೋಪ ಸಂಭವಿಸುವ ಮೊದಲು ಸಿದ್ಧರಾಗುವಿಕೆಯ ಕಾರ್ಯವು ಸಮುದಾಯದ ನೈಪುಣ್ಯತೆ, ಪರಿಣಾಮಕಾರಿಯಾದ ಹಾಗೂ ಅರ್ಥಬದ್ಧವಾದ ಒಂದು ಕಾರ್ಯವಾಗಿದೆ. ನೈಪುಣ್ಯತೆ ಎಂಬುದು ವೈಯಕ್ತಿಕ, ಸಾಮಾಜಿಕ, ರಾಷ್ಟ್ರ ಮತ್ತು ಪ್ರಪಂಚ ಎಂಬ ಎಲ್ಲಾ ಹಂತಗಳಲ್ಲೂ ಬಳಸಲ್ಪಡುವುದಾಗಿದೆ.

ಪ್ರಾಕೃತಿಕ ವಿಕೋಪಗಳಾದ ಚಂಡಮಾರುತ, ಬಿರುಗಾಳಿ, ಸುಂಟರಗಾಳಿ ಮುಂತಾದ ಕೆಲವು ಎಚ್ಚರಿಕೆ ನೀಡುತ್ತವಲ್ಲದೆ ಪ್ರಾರಂಭದ ಹಂತದಲ್ಲಿಯೇ ಕೆಲವು ಮುನ್ಸೂಚನೆಗಳನ್ನು ತೋರಿಸುತ್ತವೆ. ಅಲ್ಲದೆ ಅವುಗಳು ನಮಗೆ ಸಿದ್ಧರಾಗುವಿಕೆಗೆ ಕಾಲಾವಕಾಶ ನೀಡುತ್ತವೆ. ಇತರ ವಿಕೋಪಗಳಾದ ಭೂಕಂಪ, ಕಾಡ್ಗಿಚ್ಚು, ವಿಮಾನ ದುರಂತಗಳು, ಉಗ್ರಗಾಮಿಗಳ ದಾಳಿ ಮುಂತಾದವು ಸಾಮಾನ್ಯವಾಗಿ ಯಾವುದೇ ಮುನ್ನೆಚ್ಚರಿಕೆ ಸೂಚನೆಗಳನ್ನು ನೀಡದೆ ಸಂಭವಿಸುತ್ತವೆ. ತುರ್ತು ಸಿದ್ಧರಾಗುವಿಕೆಯ ಹಂತದಲ್ಲಿ ನಮಗೆ ಒಂದು ಅತಿದೊಡ್ಡ ಸವಾಲಾಗಿರುವುದು ಯಾವುದೆಂದರೆ ವಿಕೋಪದಿಂದ ಉಂಟಾಗುವ ಕಷ್ಟನಷ್ಟಗಳು ಹಾಗೂ ಪ್ರಾಕೃತಿಕ ಮೂಲಸೌಕರ್ಯಗಳನ್ನು ಸಂರಕ್ಷಿಸುವುದಾಗಿದೆ.

ಘೋರವಿಪತ್ತುಗಳು ಸಂಭವಿಸುವ ಸಮಯದಲ್ಲಿ ಸಾರ್ವಜನಿಕ ರಕ್ಷಣೆ, ತುರ್ತು ನಿವಾರಣೆ ನೀಡುವ ಹಾಗೂ ಕಾಪಾಡುವ ಜವಾಬ್ದಾರಿ ಎಲ್ಲಾ ಸರ್ಕಾರಗಳಿಗೂ ಇದೆ. ಮೊದಲು ಸಿದ್ಧರಾಗುವಿಕೆಯ ಪ್ರಯತ್ನಗಳನ್ನು ಕೈಗೊಳ್ಳುವ ಸ್ಥಳಗಳು ಅಧಿಕ ಪ್ರಮಾಣದ ಅಪಾಯ ಸ್ಥಳಗಳಾಗಿರುತ್ತವೆ.

ವಿಕೋಪದ ಸಿದ್ಧರಾಗುವಿಕೆಯ ಹಂತದ ವಿಧಾನವು ಅಗತ್ಯದ ಆಧಾರದ ವಿಧಾನದಿಂದ ಹಕ್ಕುಗಳು ಮತ್ತು ಸಮುದಾಯದ ಆಧಾರದ ವಿಧಾನಕ್ಕೆ ಬದಲಾವಣೆಯಾಗಿದೆ. ಈ ವಿಧಾನಗಳು ಬಾಧಿಸಲ್ಪಟ್ಟ ಜನರ ತೀರ್ಮಾನಗಳಿಗೆ ಹಾಗೂ ಘಟನೆಗೆ ಅಗತ್ಯವಾದ ಯೋಜನೆ ರೂಪಿಸುವುದಕ್ಕೆ ಪ್ರಾಧಾನ್ಯತೆ ನೀಡುತ್ತದೆ. ಆದ್ದರಿಂದ ವೈಯಕ್ತಿಕ ದುಃಖ, ಬಾಧಕಗಳು ಗಣನೀಯವಾಗಿ ಕಡಿಮೆಗೊಳಿಸಬಹುದು. ವಿಕೋಪದ ಸಿದ್ಧರಾಗುವಿಕೆಯ ಹಂತವು ತ್ವರಿತವಾಗಿ ಹಾಗೂ ಸಮರ್ಥವಾಗಿ ಕಾರ್ಯಶೀಲರಾಗಲು ದಾರಿಮಾಡಿಕೊಡುತ್ತದೆ ಎನ್ನಬಹುದು.

ಚೇತರಿಸುವಿಕೆ

ಚೇತರಿಸುವಿಕೆ ಎಂಬುದು ಒಂದು ವಿಕೋಪದ ನಂತರ ಕಳೆದುಕೊಂಡವುಗಳನ್ನು ಪುನಃ ಪಡೆಯಲು ತೆಗೆದುಕೊಳ್ಳುವ ತೀರ್ಮಾನಗಳು ಹಾಗೂ ಕ್ರಮಗಳ ಒಂದು ಕಣ್ಣೋಟವಾಗಿದೆ. ಅಲ್ಲದೆ ಚೇತರಿಸುವಿಕೆ ಕ್ರಿಯೆಯು ಸಮಾಜದ ಸ್ಥಿತಿಯನ್ನು ಅಭಿವೃದ್ಧಿಗೊಳಿಸಲು, ನಂತರ ಸಂಭವಿಸುವ ವಿಕೋಪಗಳನ್ನು ಅವರು ನಿಭಾಯಿಸುವ ಸಾಮರ್ಥ್ಯವನ್ನು ಬಲಪಡಿಸುವ ಕಾರ್ಯವಾಗಿದೆ. ಚೇತರಿಸುವಿಕೆಯು, ಹಿಂದಿನ ಸಾಮಾನ್ಯ ಸ್ಥಿತಿಗೆ ತರುವುದಲ್ಲದೆ ಸಮಸ್ಥಿತಿ ಹೊಂದಲು ಖಾತರಿಪಡಿಸಿದೆ. ಇಂತಹ ಸ್ಥಿತಿಯಲ್ಲಿ ಪುನರ್‌ರಚನೆ ಮತ್ತು ನಿರ್ಮಾಣಗಳು ಪ್ರಮುಖ ಕಾರ್ಯಗಳಾಗಿ ರಚನೆಯಾಗುತ್ತವೆ. ವಿಕೋಪ ಅಪಾಯ ಕಡಿಮೆಗೊಳಿಸುವಿಕೆಯು, ಕೈಗೊಳ್ಳುವ ಕ್ರಮಗಳ ಬೆಳವಣಿಗೆ ಹಾಗೂ ಜಾರಿಗೊಳಿಸುವಿಕೆಯಲ್ಲಿಯೂ ಅಮೂಲ್ಯ ಅವಕಾಶವನ್ನು ನೀಡುವುದಾಗಿಯೂ ರಚನೆಯಾಗಿದೆ.

ಸಮುದಾಯದ ಚಟುವಟಿಕೆಗಳು, ಶಾಲಾ ವಿಕೋಪ ನಿರ್ವಹಣೆ ಸಮಿತಿ ಮತ್ತು ವಿಕೋಪ ನಿರ್ವಹಣೆಯ ಶಿಕ್ಷಣ ಮುಂತಾದವು ಪ್ರಕೃತಿ ಮತ್ತು

ಮಾನವನಿಂದ ಏರ್ಪಡುವ ವಿಕೋಪದ ತೀವ್ರತೆಯನ್ನು ಕಡಿಮೆಗೊಳಿಸಲು ಪ್ರಮುಖ ಪಾತ್ರವಹಿಸುತ್ತವೆ.

ತಮಿಳುನಾಡು ಸರ್ಕಾರವು ವಿಶ್ವಸಂಸ್ಥೆಯ ಅಭಿವೃದ್ಧಿ ಯೋಜನೆ(UNDP)ಗಳ ಆಧಾರ ದೊಡನೆಯೂ, ಮಾರ್ಗದರ್ಶನದಿಂದಲೂ ವಿಕೋಪ ಅಪಾಯ ಕಡಿಮೆಗೊಳಿಸುವಿಕೆಯ ಕಾರ್ಯಕ್ರಮಗಳನ್ನು ಅಪಾರ ಆಸಕ್ತಿಯಿಂದ ಕಾರ್ಯಗತಗೊಳಿಸುತ್ತಾ ಬರುತ್ತಿದೆ. ಈ ಕಾರ್ಯಕ್ರಮಗಳ ಪ್ರಮುಖ ಉದ್ದೇಶವೇನೆಂದರೆ ಸ್ಥಳೀಯ ಜನರ ಸಾಮರ್ಥ್ಯ ವೃದ್ಧಿಸುವುದಾಗಿದೆ. ಪ್ರಥಮ ಚಿಕಿತ್ಸೆ, ಹುಡುಕುವಿಕೆ ಮತ್ತು ರಕ್ಷಣೆಯ ಅರ್ಹತೆ, ಮುನ್ನೆಚ್ಚರಿಕಾ ವ್ಯವಸ್ಥೆ ಮುಂತಾದವುಗಳಲ್ಲಿ ತರಬೇತಿ ನೀಡಿ ವಿಕೋಪ ಅಪಾಯ ಕಡಿಮೆಗೊಳಿಸಿ ಕಾರ್ಯಗತವಾಗುತ್ತಾ ಬರುತ್ತಿದೆ.

ಪ್ರತಿವರ್ಷ ಅಕ್ಟೋಬರ್ 13 ರಂದು **ವಿಶ್ವ ವಿಕೋಪ ಕಡಿಮೆಗೊಳಿಸುವಿಕೆಯ ದಿನ** ಎಂಬುದಾಗಿ ಆಚರಿಸುತ್ತಾ ಬರುತ್ತಿದೆ. ಅಂದು ಪ್ರತಿಯೊಬ್ಬ ಪ್ರಜೆಯನ್ನು, ಪ್ರತಿಯೊಂದು ದೇಶವನ್ನೂ ರಕ್ಷಿಸುವ ಸಮುದಾಯವಾಗಿಯೂ, ರಾಷ್ಟ್ರಗಳಾಗಿಯೂ ಬದಲಾಯಿಸಲು ಪಾತ್ರವಹಿಸುವಂತೆ ಪ್ರೋತ್ಸಾಹಿಸುತ್ತದೆ.

UNISDR - United Nations International Strategy for Disaster Reduction

DRR - Disaster Risk Reduction

UNDP - United Nations Development Programme

ಅಭ್ಯಾಸ

ಅ. ಸಂಕ್ಷಿಪ್ತವಾಗಿ ಉತ್ತರಿಸಿ

1. ವ್ಯಾಖ್ಯಾನಿಸು
   - ಅ. ವಿಕೋಪ ಅಪಾಯ ಸಂಭವ ಕಡಿಮೆಗೊಳಿಸುವಿಕೆ
   - ಆ. ರಚನಾತ್ಮಕ ಶಮನಗೊಳಿಸುವಿಕೆಯ ಕ್ರಮಗಳು
2. ವಿಕೋಪ ಅಪಾಯ ಸಂಭವ ಕಡಿಮೆಗೊಳಿಸುವಿಕೆಯ ಮುಖ್ಯಾಂಶಗಳು ಯಾವುವು?

ಆ. ವಿವರವಾಗಿ ಉತ್ತರಿಸಿ.

1. ವಿಕೋಪದ ಅಪಾಯ ಕಡಿಮೆಗೊಳಿಸುವಿಕೆಯಲ್ಲಿ ಮುನ್ನೆಚ್ಚರಿಕೆ ವ್ಯವಸ್ಥೆಯ ಪ್ರಾಮುಖ್ಯತೆಯ ಬಗ್ಗೆ ಬರೆಯಿರಿ.
2. ವಿಕೋಪ ಅಪಾಯ ಕಡಿಮೆಗೊಳಿಸುವಿಕೆಯಲ್ಲಿ ಚೇತರಿಸುವಿಕೆಯ ಹಂತದ ಬಗ್ಗೆ ನೀವು ತಿಳಿದಿರುವುದನ್ನು ಬರೆಯಿರಿ.
3. ಶಮನಗೊಳಿಸುವಿಕೆಯ ಎರಡು ಸಾಮಾನ್ಯ ವಿಧಾನಗಳು ಯಾವುವು? ಅವುಗಳನ್ನು ವಿವರಿಸಿ.

ಚಟುವಟಿಕೆ.

1. ಶಮನಗೊಳಿಸುವಿಕೆಯಲ್ಲಿ ರಚನಾತ್ಮಕ ಕ್ರಮಗಳನ್ನು ಪಟ್ಟಿಮಾಡಿ ಅದಕ್ಕೆ ಸಂಬಂಧಿಸಿದ ಚಿತ್ರಗಳನ್ನು ಸಂಗ್ರಹಿಸುವುದು.
2. ಕೆಳಕಂಡ ವಿವರಗಳಿಗೆ ಮುನ್ನೆಚ್ಚರಿಕಾ ವ್ಯವಸ್ಥೆಯ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸುವುದು.
   - i. ಕರಾವಳಿ ಜಿಲ್ಲೆಗಳಲ್ಲಿ ರೇಡಿಯೋ, ದೂರದರ್ಶನ ಮತ್ತು ಇತರ ಮಾಹಿತಿ ತಂತ್ರಜ್ಞಾನಗಳ ಮೂಲಕ ಚಂಡಮಾರುತದ ಬಗ್ಗೆ ಸೂಚನೆ.
   - ii. ಪ್ರವಾಹದ ಬಗ್ಗೆ ಎಚ್ಚರಿಕೆ.
   - iii. ಸುನಾಮಿ ಎಚ್ಚರಿಕೆ
   - iv. ಕೈಗಾರಿಕಾ ವಲಯಗಳಲ್ಲಿ ನೀಡುವ ಎಚ್ಚರಿಕೆ.

ಪೌರನೀತಿ

1. ಭಾರತ ಮತ್ತು ವಿಶ್ವಶಾಂತಿ

ಭಾರತ ಆಗಸ್ಟ್ 15, 1947 ರಲ್ಲಿ ಸ್ವಾತಂತ್ರ್ಯ ಪಡೆಯುವ ವರಗೆ ಒಂದು ಸಂಯುಕ್ತ ರಾಷ್ಟ್ರವಾಗಿ ಕಾಣಿಸಿಕೊಂಡಿತು. ಹೀಗಾಗಿ ವಿಶ್ವದ ಯಾವುದೇ ಪ್ರಮುಖವಾದ ವ್ಯವಹಾರಗಳಲ್ಲಿ ಭಾಗವಹಿಸಲಿಲ್ಲ. ಭಾರತ ಸ್ವಾತಂತ್ರ್ಯದ ನಂತರ ವಿಶ್ವದ ವ್ಯವಹಾರಗಳಲ್ಲಿ ತೀವ್ರವಾಗಿಯೂ ಸ್ವಇಚ್ಛೆಯಿಂದಲೂ ಭಾಗವಹಿಸುತ್ತಾ ಬರುತ್ತಿದೆ. ಇದರ ಮೂಲಕ ಅತೀ ಕಡಿಮೆ ಕಾಲದಲ್ಲಿ ವಿಶ್ವದಲ್ಲಿ ತನಗೆಂದೇ ಒಂದು ಪ್ರತ್ಯೇಕ ಸ್ಥಾನವನ್ನು ಪಡೆದುಕೊಂಡಿದೆ. ಭಾರತ ಶಾಂತಿಯನ್ನೇ ಬಯಸುವ ರಾಷ್ಟ್ರವಾಗಿದೆ. ವಿಶ್ವದಲ್ಲಿ ಶಾಂತಿ ನೆಲೆಸಲು ನಿರಂತರವಾಗಿ ಶ್ರಮಿಸುತ್ತಲೇ ಬರುತ್ತಿದೆ. ಅಂತರಾಷ್ಟ್ರೀಯ ಮಟ್ಟದಲ್ಲಿ ವಿಶ್ವರಾಷ್ಟ್ರಗಳ ನಡುವೆ ಶಾಂತಿ, ರಕ್ಷಣೆ ಮತ್ತು ಸಹಕಾರ ಬೆಳವಣಿಗೆಗಾಗಿ ಹಲವಾರು ಕ್ರಮಗಳನ್ನು ಅನುಸರಿಸುತ್ತಾ ಬಂದಿದೆ.



ವಿಶ್ವಶಾಂತಿಯ ಲಾಂಛನ

ವಿಶ್ವಶಾಂತಿಯ ಪ್ರವರ್ತಕರು

ಭಾರತವು ವಿಶ್ವದ ಹಲವಾರು ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಇದರ ಮೂಲಕ ಶಾಂತಿ ಮತ್ತು ರಕ್ಷಣೆಯನ್ನು ಸ್ಥಿರವಾಗಿಸುತ್ತಾ ಬಂದಿದೆ. ಭಾರತದ ಗಣನೀಯ ಪ್ರಯತ್ನದಿಂದಾಗಿ ಕೊರಿಯಾ ಮತ್ತು ಇಂಡೋಚೀನಾದಲ್ಲಿ ಶಾಂತಿ ನೆಲೆಗೊಂಡಿತು. ಇದೇ ರೀತಿಯಲ್ಲಿ ಇಸ್ರೇಲ್, ಇಂಗ್ಲೆಂಡ್ ಮತ್ತು ಫ್ರಾನ್ಸ್ ನಂತಹ ರಾಷ್ಟ್ರಗಳು ಈಜಿಪ್ಟಿನ ಮೇಲೆ ದಾಳಿ ಮಾಡಿದಾಗ ವಿಶ್ವ ಯುದ್ಧ ಉಂಟಾಗುವ ಭೀತಿ ಉಂಟಾಯಿತು. ಆದರೆ ಸೂಕ್ತ ಕಾಲದಲ್ಲಿ ಭಾರತದ ಮಧ್ಯ ಪ್ರದೇಶದಿಂದಾಗಿ ಯುದ್ಧ ತಪ್ಪಿತು.

ಪಂಚಶೀಲ ತತ್ವ

ಭಾರತವನ್ನು ಶಾಂತಿ ಸ್ಥಾಪನೆಯ ಒಂದು ಮಹಾನ್ ರಾಷ್ಟ್ರ ಎಂದು ಕರೆಯಲಾಗುತ್ತದೆ. ಮಹಾನ್ ಶಾಂತಿಪ್ರಿಯರಾದ, ಭಾರತದ ಪ್ರಧಾನ ಮಂತ್ರಿಗಳಾಗಿದ್ದ ಜವಹರ್‌ಲಾಲ್ ನೆಹರೂರವರು 1955 ರಲ್ಲಿ ಬಾಂಡುಂಗ್ ಸಮ್ಮೇಳನದಲ್ಲಿ ಶಾಂತಿಗಾಗಿ 5 ಅಂಶಗಳ ತತ್ವವನ್ನು ಪ್ರಕಟಿಸಿದರು. ಅವುಗಳನ್ನು ಪಂಚಶೀಲ ತತ್ವ ಎಂದು ಕರೆಯುವರು.


ಅವುಗಳೆಂದರೆ,

1. ಪ್ರತಿಯೊಂದು ದೇಶವು ಇತರ ರಾಷ್ಟ್ರಗಳ ಏಕತೆ ಮತ್ತು ಸಾರ್ವಭೌಮತ್ವವನ್ನು ಗೌರವಿಸಬೇಕು.
2. ಯಾವುದೇ ಒಂದು ರಾಷ್ಟ್ರ ಇತರೆ ಯಾವುದೇ ರಾಷ್ಟ್ರದ ಮೇಲೆ ದಾಳಿ ಮಾಡಬಾರದು.
3. ಒಂದು ರಾಷ್ಟ್ರದ ಆಂತರಿಕ ವ್ಯವಹಾರಗಳಲ್ಲಿ ಇತರ ರಾಷ್ಟ್ರಗಳು ತಲೆ ಹಾಕಬಾರದು.
4. ಎಲ್ಲಾ ರಾಷ್ಟ್ರಗಳು ಸಮಾನತೆ ಮತ್ತು ಪರಸ್ಪರ ಉತ್ತಮ ಸಂಬಂಧ ಹೊಂದಿರಬೇಕು.
5. ಪ್ರತಿಯೊಂದು ರಾಷ್ಟ್ರವು ಇತರ ರಾಷ್ಟ್ರಗಳೊಡನೆ ಶಾಂತ ರೀತಿಯಲ್ಲಿ ಸ್ನೇಹಿತರಾಗಿರಬೇಕು.

ಯುದ್ಧ ಶಸ್ತ್ರಾಸ್ತ್ರಗಳ ಕಡಿತ ಮತ್ತು ಅಣ್ವಸ್ತ್ರಗಳು

ವಿಶ್ವ ಶಾಂತಿಯ ಮೂಲಕ ಮಾತ್ರ ವಿಶ್ವರಾಷ್ಟ್ರಗಳ ಆರ್ಥಿಕ ಪ್ರಗತಿ ಸಾಧಿಸಬಹುದು. ವಿಶ್ವಶಾಂತಿ ಭಾರತದ ಆರ್ಥಿಕ ಪ್ರಗತಿಗೆ ಮಾತ್ರವಲ್ಲದೆ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಪ್ರಗತಿಗೆ ಅವಶ್ಯಕವಾದುದಾಗಿದೆ. ವಿಶ್ವದ ಕೆಲವು ರಾಷ್ಟ್ರಗಳು ಹೆಚ್ಚು

ಅಪಾಯವನ್ನುಂದಟುಮಾಡುವ ಅಣುಬಾಂಬು ಮತ್ತು ಹೈಡ್ರೋಜನ್ ಬಾಂಬುಗಳಂತಹವುಗಳನ್ನು ಸಂಶೋಧನೆ ನಡೆಸುತ್ತಾ ಬಂದಿವೆ. ಇದನ್ನು ತಡೆಗಟ್ಟದಿದ್ದರೆ ವಿಶ್ವವೇ ನಾಶವಾಗಿ ಬಿಡುತ್ತದೆ. ಹೀಗಾಗಿ ಭಾರತ ಅಣ್ವಸ್ತ್ರಗಳ ಉತ್ಪಾದನೆಯನ್ನು ಕಟುವಾಗಿ ವಿರೋಧಿಸಿದುದಲ್ಲದೆ, ಅಣ್ವಸ್ತ್ರಗಳ ಉತ್ಪಾದನೆಯ ವಿರುದ್ಧ ಧ್ವನಿ ಎತ್ತುತ್ತಲೇ ಬಂದಿದೆ.



ಪರಮಾಣು ಸಂಶೋಧನೆ ತಡೆ ಒಪ್ಪಂದ

ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿ 1956ರಲ್ಲಿ ಯುದ್ಧ ಶಸ್ತ್ರಾಸ್ತ್ರಗಳನ್ನು ಕಡಿತ ಗೊಳಿಸುವ ತೀರ್ಮಾನವನ್ನು ತೆಗೆದುಕೊಂಡ ಮೊದಲನೇ ರಾಷ್ಟ್ರ ಭಾರತವಾಗಿದೆ. 1963ರಲ್ಲಿ ಅಣ್ವಸ್ತ್ರಗಳ ತಡೆ ಒಪ್ಪಂದ ಸೃಷ್ಟಿಯಾಗಲು ಭಾರತ ಪ್ರಮುಖ ಪಾತ್ರ ವಹಿಸಿತು.

ಅಲಿಪ್ತ ನೀತಿ

ಎರಡನೇ ವಿಶ್ವಯುದ್ಧದ ನಂತರ ವಿಶ್ವದ ರಾಷ್ಟ್ರಗಳು ಎರಡು ವೈರಿ ಬಣಗಳಾಗಿ ಹುಟ್ಟಿಕೊಂಡವು. ಅಮೆರಿಕಾದ ಮುಖಂಡತ್ವದಲ್ಲಿ ಒಂದು ಬಣವು. ರಷ್ಯಾದ ಮುಖಂಡತ್ವದಲ್ಲಿ ಮತ್ತೊಂದು ಬಣಗಳಾದವು. ಈ ಎರಡು ಬಣಗಳು ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಿಕೊಳ್ಳುವ ಪ್ರಯತ್ನದಲ್ಲಿ ತಮ್ಮನ್ನು ತೊಡಗಿಸಿಕೊಂಡವು. ಇದರಿಂದಾಗಿ ವಿಶ್ವದಲ್ಲಿ ಭಯ ಮತ್ತು ಅಶಾಂತಿ ಉಂಟಾಯಿತು. ಭಾರತ ಎರಡು ಬಣಗಳಿಗೂ ಸೇರದೆ ಮಧ್ಯವರ್ತಿ ರಾಷ್ಟ್ರವಾಗುತ್ತಾ ಬಂದಿದೆ. ಈ ಎರಡು ಬಣಗಳ ನಡುವೆ ಬಿನ್ನಾಭಿಪ್ರಾಯಗಳುಂಟಾದಾಗ ಭಾರತ ಇವುಗಳನ್ನು ಬಗೆಹರಿಸುವ ಪ್ರಯತ್ನದಲ್ಲಿ ತೊಡಗಿಸಿಕೊಂಡು ವಿಶ್ವದಲ್ಲಿ ಶಾಂತಿ ನೆಲೆಸುವಂತೆ ಮಾಡುತ್ತಾ ಬಂದಿದೆ.

ಪ್ರಧಾನ ಸಹಾಯಕ

ಮೂಲಭೂತವಾಗಿ ಭಾರತ ವಸಾಹತು ಸಿದ್ಧಾಂತವನ್ನು ವಿರೋಧಿಸುತ್ತದೆ. ವಿಶ್ವದ ರಾಷ್ಟ್ರಗಳು ಕೆಲವು ರಾಷ್ಟ್ರಗಳ ಹಿಡಿತದಿಂದ ತಮ್ಮನ್ನು ಬಿಡಿಸಿಕೊಳ್ಳುವುದಕ್ಕೆ ಭಾರತ ಹೆಚ್ಚು ಬೆಂಬಲವನ್ನು ನೀಡುತ್ತಾ ಬಂದಿದೆ. ಹೀಗೆ ಭಾರತ ಹಾಲೆಂಡ್ ದೇಶದ ಹಿಡಿತದಿಂದ ಇಂಡೋನೇಷ್ಯಾಕ್ಕೆ ಸ್ವಾತಂತ್ರ್ಯ ಪಡೆಯಲು ಸಹಾಯ ಮಾಡಿತು. ಇದೇ ರೀತಿಯಲ್ಲಿ ಈಜಿಪ್ಟ್, ಸೂಡಾನ್, ಇಂಡೋ-ಚೀನಾ, ಘಾನಾ, ಮೊರಾಕ್ಕೊ, ಮತ್ತು ಬಾಂಗ್ಲಾದೇಶದಂತಹ ರಾಷ್ಟ್ರಗಳಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಗೆ ಭಾರತ ಸಂಪೂರ್ಣ ಬೆಂಬಲ ನೀಡಿತು.

ಸೈನಿಕ ಒಪ್ಪಂದಗಳಿಗೆ ವಿರೋಧ

ಆಧುನಿಕ ವಿಶ್ವದಲ್ಲಿ, ವಿಶ್ವದ ರಾಷ್ಟ್ರಗಳು ಸೈನಿಕ ಒಪ್ಪಂದಗಳು ಮತ್ತು ವಿರೋಧದ ಒಪ್ಪಂದಗಳನ್ನು ಮಾಡಿಕೊಳ್ಳುವುದರಲ್ಲಿ ಹೆಚ್ಚು ಗಮನ ಹರಿಸುತ್ತಾ ಬಂದಿದೆ. ಇದರ ಪರಿಣಾಮವಾಗಿ ಈವಾಗ NATO, SEATO, CENTO, ಬಾಗ್ದಾದ್ ಮತ್ತು ವಾರ್ಸಾದಂತಹ ಒಪ್ಪಂದಗಳು ಏರ್ಪಟ್ಟಿವೆ. ಆದರೆ ಇಂತಹ ಒಪ್ಪಂದಗಳಲ್ಲಿ ಭಾರತ ಯಾವುದರಲ್ಲೂ ಸೇರಲಿಲ್ಲ ಅದಲ್ಲದೆ ಇಂತಹ ಒಪ್ಪಂದಗಳನ್ನು ಕಟುವಾಗಿ ವಿರೋಧಿಸುತ್ತಾ ಬಂದಿದೆ.

ಭಾರತ-ದಬ್ಬಾಳಿಕೆ ಮತ್ತು ಅನ್ಯಾಯದ ವಿರೋಧ

ವಿಶ್ವದ ಯಾವುದೇ ಭಾಗದಲ್ಲೂ ದಬ್ಬಾಳಿಕೆ ಮತ್ತು ಅನ್ಯಾಯ ನಡೆಯುತ್ತಿದೆ ಎಂದಾದರೆ ಭಾರತ ಅದಕ್ಕೆ ತಕ್ಷಣದಲ್ಲಿ ತನ್ನ ವಿರೋಧವನ್ನು ವ್ಯಕ್ತ ಪಡಿಸುತ್ತದೆ. ಫ್ರಾನ್ಸ್ ಅಲ್ಜೀರಿಯಾದ ವಿರುದ್ಧವಾಗಿ ಆಕ್ರಮಣ ನಡೆಸಿದಾಗ, ಇಂಗ್ಲೆಂಡ್ ಸೈಪ್ರಸ್‌ಗೆ ವಿರುದ್ಧವಾಗಿ, ರಷ್ಯಾ ಹಂಗೇರಿ ವಿರುದ್ಧವಾಗಿ ದಾಳಿ ನಡೆಸಿದಾಗ ಭಾರತ ಈ ರಾಷ್ಟ್ರಗಳನ್ನು ತೀವ್ರವಾಗಿ ಖಂಡಿಸಿತು. ಇದೇ ರೀತಿಯಲ್ಲಿ ಚೀನಾ ವಿಶ್ವ ಸಂಸ್ಥೆಯಲ್ಲಿ ಸದಸ್ಯ ರಾಷ್ಟ್ರವಾಗಲು ಭಾರತ ತನ್ನ ಬೆಂಬಲವನ್ನು ತಿಳಿಸಿತು. ಆದರೆ ಇದರ ಮುಖಾಂತರ ಅನ್ಯಾಯದ ವಿರುದ್ಧ ಕಾರ್ಯ ನಿರ್ವಹಿಸುತ್ತಾ ಬಂದಿದೆ.

ವಿಶ್ವಸಂಸ್ಥೆಯ ಪ್ರಧಾನ ಬೆಂಬಲಿಗ

ಭಾರತವು ವಿಶ್ವಸಂಸ್ಥೆಯನ್ನು ಹೃದಯಪೂರ್ವಕವಾಗಿ ಬೆಂಬಲಿಸುತ್ತಾ ಬಂದಿದೆ. ವಿಶ್ವ ಸಂಸ್ಥೆಯ ತತ್ವಗಳಿಗೆ ಸಂಪೂರ್ಣವಾಗಿ ಬೆಂಬಲಿಸುತ್ತಾ ಆ ಸಿದ್ಧಾಂತಗಳನ್ನು ಯಶಸ್ವಿಗೊಳಿಸುವುದರ ಮೂಲಕ ವಿಶ್ವಶಾಂತಿಯನ್ನು ಸ್ಥಿರಗೊಳಿಸಲು ಶ್ರಮಿಸುತ್ತಲೇ ಬಂದಿದೆ.

ವರ್ಣಭೇದ ನೀತಿಯ ಅಂತ್ಯ

ವಿಶ್ವದ ಎಲ್ಲಾ ಭಾಗಗಳಲ್ಲೂ ವಾಸಿಸುವ ಜನರು ಸಮಾನರು ಎಂಬ ಭಾರತದ ನೀತಿಯು ಅಂತರ ರಾಷ್ಟ್ರೀಯ ನೀತಿಗೆ ತಳಹದಿಯಾಗಿ ಕಂಡುಬಂದಿದೆ.

ವರ್ಣಭೇದ ನೀತಿಯು ಆಫ್ರಿಕಾದಲ್ಲಿ ಅನುಸರಿಸಿದ ವಿಭಿನ್ನ ವರ್ಣಬೇಧ ನೀತಿಯಾಗಿದೆ. ಈ ಸಮಸ್ಯೆಯನ್ನು 1946ರಲ್ಲಿ ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಭಾರತ ಮೊಟ್ಟ ಮೊದಲಿಗೆ ಪ್ರಸ್ತಾಪಿಸಿತು. ಭಾರತ ನೀಡಿದ ನೈತಿಕ ಬೆಂಬಲ ಹಾಗೂ ನೆಲ್ಸನ್ ಮಂಡೇಲರ ನಿರಂತರ ಹೋರಾಟದ ಫಲವಾಗಿ 1990ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ವರ್ಣಬೇಧ ನೀತಿಯು (ಅಪಾರ್ತೀಡ್) ಕೊನೆಗೊಂಡಿತು.



ನೆಲ್ಸನ್ ಮಂಡೇಲ

ನೆಲ್ಸನ್ ಮಂಡೇಲ ಆಫ್ರಿಕಾದ ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷರಾದರು. ದಕ್ಷಿಣ ಆಫ್ರಿಕಾದಲ್ಲಿ ಕಾಣಿಸಿದ ಜನಾಂಗೀಯ ಸಮಸ್ಯೆಯ ವಿರುದ್ಧ ಹೋರಾಡಿದರು. 27 ವರ್ಷಗಳು ಸೆರೆ ವಾಸದಲ್ಲಿದ್ದರು. ನಂತರ 1994ರಲ್ಲಿ ದಕ್ಷಿಣ ಆಫ್ರಿಕಾದ ಅಧ್ಯಕ್ಷರಾದರು.

ಪ್ರಾದೇಶಿಕ ಸಹಕಾರ

ಶಾಂತಿ ಸ್ಥಾಪನೆಗಾಗಿ ಪ್ರಾದೇಶಿಕ ಸಹಕಾರಕ್ಕಾಗಿಭಾರತ ಪ್ರಯತ್ನಿಸತೊಡಗಿತು. ಇದರ ಪರಿಣಾಮವಾಗಿ 'ಸಾರ್ಕ್' (SAARC) ಒಕ್ಕೂಟದ ಉದಯವಾಯಿತು. (South Asian Association for Regional Co-operation) ಬಾಂಗ್ಲಾದೇಶ, ಭೂತಾನ್,ಭಾರತ, ಮಾಲ್ದೀವ್ಸ್,ನೇಪಾಳ, ಪಾಕಿಸ್ಥಾನ, ಶ್ರೀಲಂಕ ಸೇರಿದಂತೆ 7 ರಾಷ್ಟ್ರಗಳು ಸಾರ್ಕ್‌ನ ಸದಸ್ಯ ರಾಷ್ಟ್ರಗಳಾದವು. ಇದರ ಮೊದಲ ಸಭೆ ಡಿಸೆಂಬರ್ 7, 1985ರಲ್ಲಿ ಬಾಂಗ್ಲಾದೇಶದ ಢಾಕಾದಲ್ಲಿ ನಡೆಯಿತು. ಬಾಂಗ್ಲಾ ದೇಶದ ಅಬುಲ್ ಆಶಾನ್ ಸಾರ್ಕ್ ಸಂಸ್ಥೆಯ ಮೊದಲನೇ ಮಹಾ ಕಾರ್ಯದರ್ಶಿ ಯಾಗಿ ಅಧಿಕಾರವಹಿಸಿಕೊಂಡರು.

2007 ರ ಏಪ್ರಿಲ್ 3, ರಂದು ದೆಹಲಿಯಲ್ಲಿ ನಡೆದ ಸಾರ್ಕ್ ಸಮ್ಮೇಳನದಲ್ಲಿ ಆಫ್ಘಾನಿಸ್ತಾನದ ಅಧ್ಯಕ್ಷ ಹಮೀದ್ ಖಿರ್ಜಾಯಿ ಭಾಗವಹಿಸಿದ್ದರು. ಈವಾಗ ಆಫ್ಘಾನಿಸ್ಥಾನ ಇದರಲ್ಲಿ 8ನೇ ಸದಸ್ಯ ರಾಷ್ಟ್ರವಾಗಿ ಸೇರ್ಪಡೆಯಾಗಿದೆ.

ನೇಪಾಳದ ರಾಜಧಾನಿ ಕಠ್ಮಂಡುವಿನಲ್ಲಿ 2014ರ ನವೆಂಬರ್ 26 ಮತ್ತು 27ರಂದು ಸಾರ್ಕ್ ಒಕ್ಕೂಟದ 18ನೇ ಸಮ್ಮೇಳನವು ನಡೆಯಿತು.

ಸಾರ್ಕ್‌ನ ಸದಸ್ಯ ರಾಷ್ಟ್ರಗಳು ಪರಸ್ಪರ ಉತ್ತಮ ಸಂಬಂಧ ಆಧಾರದಲ್ಲಿ ಸಾರಿಗೆ, ಅಂಚೆ ಸೇವೆ, ಪ್ರವಾಸೋದ್ಯಮ, ವಾತಾವರಣಶಾಸ್ತ್ರ, ಹವಾಮಾನ, ಆರೋಗ್ಯ, ಕೃಷಿ ಮತ್ತು ಗ್ರಾಮ ಪುನರ್ ನಿರ್ಮಾಣ, ದೂರ ಸಂಪರ್ಕದಂತಹವುಗಳಿಗೆ ಸಹಾಯ ಮಾಡಿ ಕೊಳ್ಳುತ್ತಾ ಬಂದಿವೆ.

ನೆರೆ ರಾಷ್ಟ್ರಗಳೊಡನೆ ಉತ್ತಮ ಸಂಬಂಧ

ಭಾರತ–ಪಾಕಿಸ್ಥಾನ

ಭಾರತ ಪಾಕಿಸ್ಥಾನಗಳ ನಡುವೆ ಹಿಂದಿನಿಂದಲೂ ಹಗೆತನವಿದ್ದರೂ ಇದನ್ನು ಬದಿಗೊತ್ತಿ ಎರಡು ರಾಷ್ಟ್ರಗಳೂ ಉತ್ತಮ ಸಂಬಂಧ ಹೊಂದಲು ಪ್ರಯತ್ನಿಸುತ್ತಲೇ ಬಂದಿವೆ.1999ರ ಮಾರ್ಚ್ 16ರಂದು ದೆಹಲಿ–ಲಾಹೋರ್ ನಡುವೆ ಸಾರಿಗೆ ಪ್ರಯಾಣ, ಪ್ರಾರಂಭಿಸಿ ಎರಡು ರಾಷ್ಟ್ರಗಳ ನಡುವೆ ಉತ್ತಮ ಬಾಂಧವ್ಯ ಏರ್ಪಟ್ಟಿತು. ಇರಾನ್, ಪಾಕಿಸ್ಥಾನ, ಭಾರತಗಳ

ನಡುವಿನ ಅನಿಲಕೊಳವೆ ಸಂಪರ್ಕ ಪ್ರಯತ್ನ ಕಾರ್ಯ ನಡೆಸುತ್ತಾ ಬಂದಿದೆ.



ವಾಘಾಗಡಿ

ಭಾರತ ಮತ್ತು ಚೀನಾ

1949ರಲ್ಲಿ ಚೀನಾ ಪ್ರಜಾಪ್ರಭುತ್ವ ರಾಷ್ಟ್ರವಾದುದನ್ನು ಭಾರತ ಮೊದಲಿಗೆ ಅಂಗೀಕರಿಸಿದ ರಾಷ್ಟ್ರವಾಗಿದೆ. ಇದನ್ನು ಎರಡು ರಾಷ್ಟ್ರಗಳು ತಮ್ಮ ಆರ್ಥಿಕತೆಯ ಅವಶ್ಯಕತೆಗಳನ್ನು ನೆರವೇರಿಸಿಕೊಳ್ಳಲು ಪ್ರಯತ್ನಿಸುತ್ತವೆ. ವಿಶ್ವಸಂಸ್ಥೆಯಲ್ಲಿ ಚೀನಾವನ್ನು ಭದ್ರತಾ ಮಂಡಳಿಯ ಶಾಶ್ವತ ಸದಸ್ಯತ್ವ ಪಡೆದ ರಾಷ್ಟ್ರವೆಂದು ವಿಧಿವತ್ತಾಗಿ ಘೋಷಿಸಲಾಗಿತ್ತು. ಆದರೆ ಭಾರತಕ್ಕೆ ಭದ್ರತಾ ಮಂಡಳಿಯ ಶಾಶ್ವತ ಸದಸ್ಯತ್ವ ನೀಡಲು ತನ್ನ ಬೆಂಬಲವನ್ನು ಚೀನಾ ಹಿಂಪಡೆಯಿತು.

ಭಾರತ ಮತ್ತು ಶ್ರೀಲಂಕಾ

ಶ್ರೀಲಂಕಾ ಒಂದು ಬೌದ್ಧ ರಾಷ್ಟ್ರ. ಮೌರ್ಯ ಚಕ್ರವರ್ತಿ ಅಶೋಕ ತನ್ನ ಮಗ ಮತ್ತು ಮಗಳನ್ನು ಶ್ರೀಲಂಕಾಕ್ಕೆ ಕಳುಹಿಸಿ ಬೌದ್ಧ ಧರ್ಮ ಹರಡುವಂತೆ ಮಾಡಿದನು. ಇದಾದ ನಂತರ ಎರಡೂ ರಾಷ್ಟ್ರಗಳ ನಡುವೆ ವ್ಯಾಪಾರ ಸಂಬಂಧ ಉಂಟಾಯಿತು. ಶ್ರೀಲಂಕಾಕ್ಕೆ ಭಾರತ ತನ್ನ ಬೆಂಬಲವನ್ನು ನೀಡುತ್ತಾ ಬಂದಿದೆ. ಈ ಸಂಬಂಧ ಮಧುರ ಬಾಂಧವ್ಯ ಮುಂದುವರಿಸಿಕೊಂಡೇ ಬಂದಿದೆ.

ಭಾರತ ಮತ್ತು ಬಾಂಗ್ಲಾದೇಶ

ಭಾರತದ ಮಾಜಿ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರ ಪ್ರಮುಖ ಪ್ರಯತ್ನ ಮತ್ತು ಬೆಂಬಲದಿಂದಾಗಿ ಪಾಕಿಸ್ಥಾನದಿಂದ 1971ರಲ್ಲಿ ಬಾಂಗ್ಲಾದೇಶ ವಿಭಜನೆಗೊಂಡು ಸ್ವತಂತ್ರ ರಾಷ್ಟ್ರವಾಯಿತು. 1972ರಲ್ಲಿ ಈ ಎರಡು ರಾಷ್ಟ್ರಗಳ ನಡುವೆ ಸ್ನೇಹ ಸಂಬಂಧ, ಸಹಕಾರ ಮತ್ತು ಶಾಂತಿಗಾಗಿ 25 ವರ್ಷಗಳ ಒಪ್ಪಂದ ಒಂದನ್ನು ಢಾಕಾ ನಗರದಲ್ಲಿ ಮಾಡಿಕೊಳ್ಳಲಾಯಿತು. ಗಂಗಾನದಿ ನೀರು ಹಂಚಿಕೆಗೆ ಸಂಬಂಧಿಸಿದಂತೆ ಏರ್ಪಟ್ಟ ಫರಾಕ್ಕಾ ಅಣೆಕಟ್ಟೆ ಸಮಸ್ಯೆಗೆ ಶಾಂತಿ ರೀತಿಯ ಒಪ್ಪಂದ ಮಾಡಿಕೊಳ್ಳಲಾಯಿತು. ಭಾರತವು ಬಾಂಗ್ಲಾ ದೇಶದೊಡನೆ ಉತ್ತಮ ಗೆಳೆತನವನ್ನೂ ಬಳಸಿಕೊಳ್ಳುತ್ತಾ ಬಂದಿದೆ.

1956ರಲ್ಲಿ ಈಜಿಪ್ಟ್ ದೊರೆ ನಾಸರ್ ಸೂಯೇಜ್ ಕಾಲುವೆಯನ್ನು ರಾಷ್ಟ್ರೀಕರಣಗೊಳಿಸಿದರು. ಇದನ್ನು ವಿರೋಧಿಸಿ ಫ್ರಾನ್ಸ್, ಇಂಗ್ಲೆಂಡ್ ಮತ್ತು ಇಸ್ರೇಲ್ ರಾಷ್ಟ್ರಗಳು ಈಜಿಪ್ಟ್‌ನ ಮೇಲೆ ವಿರೋಧಿ ಚಟುವಟಿಕೆಗಳಲ್ಲಿತೊಡಗಿದವು. ಭಾರತದ ಮಧ್ಯ ಪ್ರವೇಶದಿಂದಾಗಿ ಯುದ್ಧ ಸಂಭವಿಸುವುದನ್ನು ತಪ್ಪಿಸಿ ಈಜಿಪ್ಟ್‌ನಲ್ಲಿ ಶಾಂತಿ ನೆಲೆಸಿತು.



ಸೂಯೇಜ್ ಕಾಲುವೆ

ಕಾಂಗೋ

ಇದು ದಕ್ಷಿಣ ಆಫ್ರಿಕಾದ ಒಂದು ರಾಷ್ಟ್ರ. 1960ರಲ್ಲಿ ಅಂತರ್ ಯುದ್ಧ ಸ್ಫೋಟಗೊಂಡಿತು. ವಿಶ್ವ ಸಂಸ್ಥೆಯು ಈ ಸಮಸ್ಯೆಗೆ ಶಾಂತಿಯುತವಾಗಿ ಪರಿಹರಿಸುವಂತೆ ಭಾರತವನ್ನು ಕೇಳಿಕೊಂಡಿತು. ಇದಕ್ಕೆ ಸಂಬಂಧಿಸಿದಂತೆ ಸೇನಾಧಿಪತಿ. ಕೆ.ಎನ್.ರಾಜಾರವರ ಅಧ್ಯಕ್ಷತೆಯಲ್ಲಿ ಭಾರತ ಶಾಂತಿ ಪಾಲನಾ ಪಡೆಯನ್ನು ಕಾಂಗೊ ರಾಷ್ಟ್ರಕ್ಕೆ ಕಳುಹಿಸಿ ಶಾಂತಿ ನೆಲೆಸುವಂತೆ ಮಾಡಿತು.

ಸೈಪ್ರಸ್

ಸಂಪ್ರದಾಯ ಬದ್ಧ ಕ್ರೈಸ್ತರು ಮತ್ತು ಟರ್ಕಿ ಮುಸ್ಲೀಂರ ನಡುವೆ ಸೈಪ್ರಸ್ ದ್ವೀಪದಲ್ಲಿ ಅಂತರ್‌ಯುದ್ಧ ಕಾಣಿಸಿಕೊಂಡಿತು. ಭಾರತದ ಸೇನಾಧಿಪತಿ ತಿಮ್ಮಯ್ಯನವರ ಅಧ್ಯಕ್ಷತೆಯಲ್ಲಿ ವಿಶ್ವ ಸಂಸ್ಥೆಯ ಶಾಂತಿ ಪಾಲನಾ ಪಡೆಯನ್ನೂ ಕಳುಹಿಸಲಾಯಿತು. ಇವರ ಮಹತ್ತರವಾದ ಪ್ರಯತ್ನದಿಂದಾಗಿ ಸೈಪ್ರಸ್ ದ್ವೀಪದಲ್ಲಿ ಶಾಂತಿ ನೆಲಸುವಂತಾಯಿತು.

ಮಹಾತ್ಮಗಾಂಧೀಜಿಯವರ ನಾಯಕತ್ವದಲ್ಲಿ ಅಹಿಂಸಾ ತತ್ವ ಸಿದ್ಧಾಂತದ ಮುಖಾಂತರ ಭಾರತ ಸ್ವಾತಂತ್ರ್ಯ ಪಡೆದುಕೊಂಡಿತು. ಭಾರತ ಸ್ವಾತಂತ್ರ್ಯದ ನಂತರವೂ ವಿಶ್ವದಲ್ಲಿ ಶಾಂತಿ ನೆಲೆಸಲು ಶ್ರಮಿಸುತ್ತಾ ಬಂದಿದೆ.

ಅಭ್ಯಾಸ

ಅ. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1. ಭಾರತ ಅಧಿಕವಾಗಿ ನಂಬಿಕೆಯನ್ನಿಟ್ಟುಕೊಂಡಿರುವುದು

   ಅ)ಯುದ್ಧ ಆ)ಶಾಂತಿ ಇ)ಪ್ರೀತಿ ಈ)ದ್ವೇಷ

2. ಪಂಡಿತ್ ಜವಹರಲಾಲ್ ನೆಹರುರವರ ಶಾಂತಿಗಾಗಿ ಐದು ತತ್ವಗಳು

   ಅ)ಸ್ವದೇಶಿ ಆ)ಹೊಸ ಬಳಕೆಯ ಹಕ್ಕು ಇ)ಪಂಚಶೀಲ ಈ)ಕೋಮುವಾದ

3. ಅಣ್ವಸ್ತ್ರ ನಿಷೇಧ ಕಾಯಿದೆಗೆ ಸಹಿ ಹಾಕಲಾದ ವರ್ಷ

   ಅ)1965 ಆ)1993 ಇ)1936 ಈ)1998

4. ಅಣ್ವಸ್ತ್ರ ಕಡಿತಗೊಳಿಸುವ ತೀರ್ಮಾನವನ್ನು ಭಾರತವು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ತೆಗೆದುಕೊಂಡುಬಂದ ವರ್ಷ

   ಅ)1963 ಆ)1956 ಇ)1995 ಈ)1976

5. ವರ್ಣಬೇಧ ನೀತಿಯು ಕೊನೆಗೊಂಡ ವರ್ಷ

   ಅ)1990 ಆ)1991 ಇ)1890 ಈ)1989

6 .ಸಾರ್ಕ್ ಒಕ್ಕೂಟದ ಪ್ರಥಮ ಮಹಾ ಕಾರ್ಯದರ್ಶಿ

   ಅ)ಜಿನ್ನಾ ಆ) ಅಬುಲ್ ಆಶಾನ್ ಇ)ಕೋಫಿ ಅನ್ನಾನ್ ಈ)ಗಾಂಧಿ

ಆ. ಸಂಕ್ಷಿಪ್ತವಾಗಿ ಉತ್ತರಿಸಿ.

1. ವಿಶ್ವ ಶಾಂತಿಯನ್ನುಸ್ಥಿರಗೊಳಿಸುವಲ್ಲಿ ಭಾರತದ ಪಾತ್ರವೇನು?
2. ವಿಶ್ವ ಶಾಂತಿಯು ಅವಶ್ಯಕವಾದ ಒಂದಾಗಿದೆ–ಏಕೆ?
3. ಪಂಚಶೀಲದ ಐದು ತತ್ವಗಳು ಯಾವುವು?
4. ವರ್ಣಬೇಧ ನೀತಿಯ ಬಗ್ಗೆ ಒಂದು ಟಪ್ಪಣಿ ಬರೆಯಿರಿ.
5. ಸಾರ್ಕ್ ರಾಷ್ಟ್ರಗಳು ಪರಸ್ಪರ ಉತ್ತಮ ಸಂಬಂಧವನ್ನು ಸ್ಥಿರಗೊಳಿಸಲು ಗುರುತಿಸಲ್ಪಟ್ಟ ಭಾಗಗಳನ್ನು ತಿಳಿಸಿ.
6. ಭಾರತ–ವಿಶ್ವಸಂಸ್ಥೆಯ **ಪ್ರಧಾನ ಬೆಂಬಲಿಗ**–ಈ ಹೇಳಿಕೆಯನ್ನು ವಿಶ್ಲೇಷಿಸು.

ಇ. ಒಂದು ಪುಟದಲ್ಲಿ ಉತ್ತರಿಸಿ.

1. ಪಂಚಶೀಲ ಮತ್ತು ಅಲಿಪ್ತ ನೀತಿ ಬಗ್ಗೆ ಬರೆಯಿರಿ.
2. ಸಾರ್ಕ್ ಒಕ್ಕೂಟದ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.

2. ಪ್ರಜಾಪ್ರಭುತ್ವ

ಪ್ರಜಾಪ್ರಭುತ್ವ

ಪ್ರಜಾಪ್ರಭುತ್ವ ಅಥವಾ ಜನನಾಯಕ ಮಾದರಿಯು ಇತ್ತೀಚಿನ ಕಾಲದಲ್ಲಿ ಉತ್ತಮ ಸರ್ಕಾರದ ಮಾದರಿ ಎಂಬುದಾಗಿ ಭಾವಿಸಲಾಗಿದೆ. ಆದರೆ ಸರ್ವಾಧಿಕಾರಿ ಆಡಳಿತ ಪದ್ಧತಿಯಿಂದ ಪ್ರಜಾಪ್ರಭುತ್ವ ಪದ್ಧತಿಯ ಬದಲಾವಣೆಯು ಬಹು ಸುಲಭವಾಗಿ ಸಂಭವಿಸಲಿಲ್ಲ. ಹಲವು ಹೋರಾಟಗಳು ಈ ಬದಲಾವಣೆಯನ್ನುಂಟುಮಾಡಿದವು. ಹಲವು ಹೋರಾಟಗಳ ನಂತರ ಜನರು ತಮ್ಮ ಅಧಿಕಾರವನ್ನು ಚಲಾಯಿಸುವ ಹಕ್ಕನ್ನು ಪಡೆದರು.

ಪ್ರಜಾಪ್ರಭುತ್ವದ ವ್ಯಾಖ್ಯಾನ

ಸುಮಾರು 2500 ವರ್ಷಗಳಿಗೂ ಹಿಂದೆ ಹೆರೊಡಟಸ್ ಎಂಬುವವರಿಂದ ಪ್ರಜಾಪ್ರಭುತ್ವ ಎಂಬ ಪದವು ಮೊಟ್ಟಮೊದಲು ಬಳಸಲ್ಪಟ್ಟಿತು. ಆಂಗ್ಲ ಭಾಷೆಯಲ್ಲಿ Democracy ಎಂಬ ಪದವು ಗ್ರೀಕ್ ಪದವಾದ Demos ಮತ್ತು cratia ಪದಗಳಿಂದ ಪಡೆದುದಾಗಿದೆ.

Demos ಎಂದರೆ ಜನರ ಎಂದೂ, cratia ಎಂದರೆ ಅಧಿಕಾರ ಅಥವಾ ಆಳ್ವಿಕೆ ಎಂಬುದನ್ನು ತಿಳಿಸುತ್ತದೆ.


ಆದ್ದರಿಂದಲೇ ಪ್ರಜಾಪ್ರಭುತ್ವ ಎಂಬುದು ಜನರ ಅಧಿಕಾರವನ್ನು ಸೂಚಿಸುತ್ತದೆ. ಸಂಕ್ಷಿಪ್ತವಾಗಿ, ಪ್ರಜಾಪ್ರಭುತ್ವ ಎಂಬುದು ಒಂದು ಸರ್ಕಾರದ ಮಾದರಿಯಾಗಿದೆ. ಇದರಲ್ಲಿ ಜನರು ನೇರವಾಗಿಯೋ ಅಥವಾ ತಮ್ಮ ಪ್ರತಿನಿಧಿಗಳ ಮೂಲಕವಾಗಿಯೋ ತಮ್ಮ ಅಧಿಕಾರವನ್ನು ಚಲಾಯಿಸುವ ಆಳ್ವಿಕೆಯ ಪದ್ಧತಿಯಾಗಿದೆ. ಅಮೆರಿಕಾದ ಅಧ್ಯಕ್ಷರಾಗಿದ್ದ ಅಬ್ರಹಾಂ ಲಿಂಕನ್ ಅಭಿಪ್ರಾಯದಂತೆ, "ಪ್ರಜಾಪ್ರಭುತ್ವ ಎಂಬುದು ಜನರಿಂದ, ಜನರಿಗಾಗಿ, ಜನರೇ ಆಡಳಿತ ನಡೆಸುವುದಾಗಿದೆ". ಪ್ರೊಫೆಸರ್ ಶೀಲೆ ಅಭಿಪ್ರಾಯದಂತೆ, "ಪ್ರಜಾಪ್ರಭುತ್ವ ಎಂಬುದು ಒಂದು ಸರ್ಕಾರದ ಮಾದರಿಯಾಗಿದೆ.ಇದರಲ್ಲಿ ಎಲ್ಲಾ ಜನರು ಭಾಗವಹಿಸುವರು" ಎಂದು ತಿಳಿಸಿದ್ದಾರೆ.

ಪ್ರಜಾಪ್ರಭುತ್ವದ ವಿಧಗಳು

ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಎರಡು ವಿಧಗಳಿವೆ

1) ಪ್ರತ್ಯಕ್ಷ ಪ್ರಜಾಪ್ರಭುತ್ವ

2) ಪರೋಕ್ಷ ಪ್ರಜಾಪ್ರಭುತ್ವ



ಪ್ರಜಾಪ್ರಭುತ್ವದ ಅನುಕೂಲತೆಗಳು

ಇಂದಿನ ಪ್ರಪಂಚದಲ್ಲಿ ಪ್ರಜಾಪ್ರಭುತ್ವ ಪದ್ಧತಿಯು ಉತ್ತಮ ಸರ್ಕಾರದ ಪದ್ಧತಿಯಾಗಿದೆ. ಇದು ಹಲವಾರು ಅನುಕೂಲತೆಗಳನ್ನು ಹೊಂದಿದೆ. 1) ಉತ್ತಮ ಸರ್ಕಾರದ ರಚನೆಗೆ ದಾರಿ ಮಾಡಿಕೊಡುತ್ತದೆ. 2) ಜನರ ಹಕ್ಕುಗಳಿಗೆ ರಕ್ಷಣೆ ಸಿಗುತ್ತದೆ. 3) ಸಮಾನತೆಯು ಅನುಸರಿಸಲ್ಪಡುತ್ತದೆ. 4) ಜನರು ಶಿಕ್ಷಣದ ಜ್ಞಾನ ಪಡೆಯಲು ಸಹಾಯಕವಾಗಿದೆ. 5) ದೇಶದ ಒಳಿತು ಅಭಿವೃದ್ಧಿಯಾಗುತ್ತದೆ. 6) ಶಾಂತಿಮಾರ್ಗದಲ್ಲಿ ಸರ್ಕಾರದ ಬದಲಾವಣೆಯನ್ನು ಉಂಟುಮಾಡುವುದು. 7) ಪ್ರಜಾಪ್ರಭುತ್ವವು ಯುದ್ಧ ಶಸ್ತ್ರಾಸ್ತ್ರಗಳನ್ನು ನಂಬದೆ ಮತ ಪೆಟ್ಟಿಗೆಗಳನ್ನು ನಂಬುತ್ತದೆ. 8) ಪ್ರಜಾಪ್ರಭುತ್ವ ಸರ್ಕಾರದ ಮಾದರಿಯಲ್ಲಿ ಕ್ರಾಂತಿ ಮತ್ತು ಗಲಭೆಗಳಿಗೆ ಅವಕಾಶವಿಲ್ಲ.

ಪ್ರಜಾಪ್ರಭುತ್ವದ ಅನಾನುಕೂಲತೆಗಳು

1) ಪ್ರಜಾಪ್ರಭುತ್ವವು ಕೆಲವು ಸಮಯಗಳಲ್ಲಿ ಬಹುಸಂಖ್ಯಾತರ ಅಭಿಪ್ರಾಯಗಳಿಗೆ ಪ್ರಾಮುಖ್ಯತೆ ನೀಡಬೇಕಾಗುತ್ತದೆ. 2) ರಾಜಕೀಯ ಪಕ್ಷದ ನಾಯಕರುಗಳು ಮತ್ತು ರಾಜಕೀಯ ಪಕ್ಷದ ಸದಸ್ಯರುಗಳು ಸರ್ಕಾರಿ ಹುದ್ದೆಗಳಲ್ಲಿ ಇರುವವರನ್ನೂ, ಸಾರ್ವಜನಿಕರನ್ನೂ ತಮ್ಮ ನಿಯಂತ್ರಣದಲ್ಲಿ ಟ್ಟುಕೊಳ್ಳುವರು. 3) ಪ್ರಜಾಪ್ರಭುತ್ವವು ವೈಯಕ್ತಿಕ ಅಭಿಪ್ರಾಯಗಳನ್ನು ಪ್ರೋತ್ಸಾಹಿಸುವುದಿಲ್ಲ. 4) ಪ್ರಜಾಪ್ರಭುತ್ವವು ಅಧಿಕ ವೆಚ್ಚದ ಸರ್ಕಾರವನ್ನು ಒಳಗೊಂಡಿದೆ. 5) ಪ್ರಜಾಪ್ರಭುತ್ವದಲ್ಲಿ ಭ್ರಷ್ಟಾಚಾರ ಹಾಗೂ ಅಧಿಕಾರಿಗಳು ಕಾನೂನುಗಳನ್ನು ಮೀರುವುದನ್ನು ತಡೆಯಲು ಸಾಧ್ಯವಿಲ್ಲ. 6) ಪ್ರಜಾಪ್ರಭುತ್ವವು ಸರ್ಕಾರದಲ್ಲಿ ಹೊಸಬರು ಸಾಮಾನ್ಯ ಜನರ ಮೇಲೆ ಅಧಿಕಾರ ಚಲಾಯಿಸುವಂತೆ ಮಾಡುತ್ತದೆ.

ಪ್ರಜಾಪ್ರಭುತ್ವದ ಪ್ರಾಮುಖ್ಯತೆ

ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಜನರು ತಮ್ಮ ಪ್ರತಿನಿಧಿಗಳನ್ನು ಸ್ವತಂತ್ರವಾಗಿ ಚುನಾಯಿಸುವರು. ಇದರಿಂದ ಜನರು ಗೌರವಿಸಲ್ಪಡುವರು. ಜನ ಮೂಲಭೂತ ಹಕ್ಕುಗಳಿಗೆ ರಕ್ಷಣೆ ದೊರೆಯುವುದು. ಅದರಲ್ಲೂ ಜೀವಿಸುವ ಹಕ್ಕು ಮತ್ತು ಸ್ವಾತಂತ್ರ್ಯದ ಹಕ್ಕುಗಳಿಗೆ ಸಂವಿಧಾನವು ಭರವಸೆ ನೀಡುವುದು. ಪ್ರಜಾಪ್ರಭುತ್ವದಲ್ಲಿ ಎಲ್ಲಾ ತೀರ್ಮಾನಗಳೂ ಬಹುಮತದ ಆಧಾರದ ಮೇಲೆ ಕೈಗೊಳ್ಳಲ್ಪಡುತ್ತವೆ. ಈ ಪದ್ಧತಿಯ ಜನರ ಕ್ಷೇಮವನ್ನು ಉತ್ತಮಗೊಳಿಸುತ್ತದೆ. ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತ್ವಗಳಂತಹ ತತ್ವಗಳು ಪ್ರಜಾಪ್ರಭುತ್ವಕ್ಕೆ ಮೂಲಾಧಾರವಾಗಿ ಕಂಡುಬರುತ್ತಿವೆ.

ರಾಜಕೀಯ ಪಕ್ಷಗಳು

ಪ್ರಜಾಪ್ರಭುತ್ವ ಆಡಳಿತ ಪದ್ಧತಿಗೆ ಪಕ್ಷ ಪದ್ಧತಿಯು ಮೊದಲ ಅಗತ್ಯವಾಗಿದೆ. ಸರ್ಕಾರದ ಸುಲಲಿತವಾದ ಆಳ್ವಿಕೆಗೆ ಪಕ್ಷಗಳು ದಾರಿ ಮಾಡಿಕೊಡುತ್ತವೆ. ಏಕೆಂದರೆ ಪ್ರಜಾಪ್ರಭುತ್ವ ಮಾದರಿಯಂತೆ ಬಹುಮತ ಪಡೆದ ಪಕ್ಷವೇ ಸರ್ಕಾರವನ್ನು ರಚಿಸಿ ನಿಯಂತ್ರಿಸುತ್ತದೆ. ಅದೇ ಸಮಯದಲ್ಲಿ ವಿರೋಧ ಪಕ್ಷವು ಆಡಳಿತ ಪಕ್ಷದ ತಪ್ಪುಗಳನ್ನು ಎತ್ತಿಹಿಡಿದು ಅಧಿಕಾರವನ್ನು ತಪ್ಪು ಮಾರ್ಗಗಳಲ್ಲಿ ನಡೆಸದಂತೆ ಕಾರ್ಯನಿರ್ವಹಿಸುತ್ತದೆ. ಆಡಳಿತ ಪಕ್ಷವು ಆಳ್ವಿಕೆಯ ಹಕ್ಕನ್ನು ಪಡೆದಿದೆ, ವಿರೋಧ ಪಕ್ಷವು ಸರ್ಕಾರವನ್ನು ವಿರೋಧಿಸುವ ಹಕ್ಕನ್ನು ಪಡೆದಿದೆಯಲ್ಲದೇ ಆಡಳಿತ ಪಕ್ಷದ ದೋಷಗಳು ಮತ್ತು ನೀತಿಗಳನ್ನು ವಿಮರ್ಶಿಸುತ್ತದೆ. ಒಮ್ಮತ ಅಭಿಪ್ರಾಯದ ಜನರಿಂದ ರಾಜಕೀಯ ಅಧಿಕಾರವನ್ನು ಪಡೆಯುವ ಉದ್ದೇಶದಿಂದ ರಚಿಸಲಾದ ಸಂಘಟನೆಯೇ ರಾಜಕೀಯ ಪಕ್ಷವಾಗಿದೆ.

ರಾಜಕೀಯ ಪಕ್ಷಗಳ ಕಾರ್ಯಗಳು

ಪ್ರಜಾಪ್ರಭುತ್ವ ರಾಜಕೀಯದಲ್ಲಿ, ರಾಜಕೀಯ ಪಕ್ಷಗಳು ಹಲವಾರು ಕರ್ತವ್ಯಗಳನ್ನು ನಿರ್ವಹಿಸುತ್ತವೆ. ಇವು ಪ್ರಜಾಪ್ರಭುತ್ವ ಪದ್ಧತಿಯು ಸ್ಥಿರವಾಗಿಯೂ, ಉತ್ತಮವಾಗಿ ಕಾರ್ಯನಿರ್ವಹಿಸಲೂ ಬಹಳ ನೆರವಾಗಿವೆ.

- ಸಾರ್ವಜನಿಕ ತತ್ವ ಸಿದ್ಧಾಂತಗಳನ್ನು ರೂಪಿಸುವುದು.
- ಚುನಾವಣೆಗಳಲ್ಲಿ ಸ್ಪರ್ಧಿಸುವುದು.
- ಜನರಿಗೆ ಶಿಕ್ಷಣದ ಅರಿವು ಮೂಡಿಸುವುದು.
- ಸರ್ಕಾರವನ್ನು ನಡೆಸುವುದು ಮತ್ತು ವಿಮರ್ಶಿಸುವುದು.
- ಸರ್ಕಾರ ಮತ್ತು ಜನರ ನಡುವೆ ಸೇತುಬಂಧದಂತಿರುವುದು.
- ಜನರನ್ನು ಒಂದುಗೂಡಿಸುವುದು ಅಥವಾ ಒಗ್ಗೂಡಿಸುವ ಸಂಘಟನೆಯಾಗಿ ಕಾರ್ಯನಿರ್ವಹಿಸುವುದು ಮುಂತಾದ ಕರ್ತವ್ಯಗಳನ್ನು ಮಾಡುತ್ತವೆ.

ಪಕ್ಷ ಪದ್ಧತಿಯ ವಿಧಗಳು

ರಾಜಕೀಯ ಪಕ್ಷಗಳನ್ನು ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಮೂರು ಭಾಗಗಳಾಗಿ ವಿಂಗಡಿಸಬಹುದು. ಅವುಗಳು ಕ್ರಮಬದ್ಧವಾಗಿ ಏಕಪಕ್ಷ ಪದ್ಧತಿ, ದ್ವಿಪಕ್ಷ ಪದ್ಧತಿ ಮತ್ತು ಬಹುಪಕ್ಷ ಪದ್ಧತಿ ಎಂಬುದಾಗಿವೆ.



1. ಏಕಪಕ್ಷ ಪದ್ಧತಿ

ಏಕಪಕ್ಷ ಪದ್ಧತಿಯಲ್ಲಿ ಒಂದೇ ಒಂದು ಪಕ್ಷ ಮಾತ್ರ ಇರುತ್ತದೆ. ಇದು ಜನರಿಂದಲೂ, ಸಂವಿಧಾನದಿಂದಲೂ ಅಂಗೀಕರಿಸಲ್ಪಟ್ಟಿರುವುದಾಗಿದೆ. ಯಾವುದೇ ವಿರೋಧವೂ ಇಲ್ಲದೇ ರಾಜಕೀಯ ಅಧಿಕಾರವನ್ನು ಹೊಂದಿ ಕಾರ್ಯನಿರ್ವಹಿಸುತ್ತದೆ. ಇತರೆ ಪಕ್ಷಗಳು ಕಾರ್ಯನಿರ್ವಹಿಸುವುದಿಲ್ಲ. ಉದಾಹರಣೆಗೆ: **ಕ್ಯೂಬಾ ಮತ್ತು ಚೀನಾ.**

ಏಕಪಕ್ಷ ಪದ್ಧತಿಯ ಅನುಕೂಲತೆಗಳು

1. ತುರ್ತು ಸಂದರ್ಭಗಳಲ್ಲಿ ಅಥವಾ ಆಪತ್ಕಾಲಗಳಲ್ಲಿ ಏಕಪಕ್ಷ ಪದ್ಧತಿಯು ದಕ್ಷತೆಯಿಂದಲೂ, ಸ್ವತಂತ್ರವಾಗಿಯೂ ತ್ವರಿತವಾಗಿ ಕಾರ್ಯನಿರ್ವಹಿಸಬಹುದು.
2. ಏಕಪಕ್ಷ ಪದ್ಧತಿಯಲ್ಲಿ ತೀರ್ಮಾನಗಳನ್ನು ಬಹುಬೇಗನೆ ತೆಗೆದುಕೊಳ್ಳುವ ಅವಕಾಶವಿದೆ.
3. ಖರ್ಚು ವೆಚ್ಚಗಳನ್ನು ಕಡಿಮೆಗೊಳಿಸುತ್ತದೆ.
4. ದೇಶದ ಹಿರಿಮೆಗಳನ್ನು ಅಧಿಕ ಪ್ರಮಾಣದಲ್ಲಿ ಹೆಚ್ಚಿಸುತ್ತದೆ.

ಏಕಪಕ್ಷ ಪದ್ಧತಿಯ ಅನಾನುಕೂಲತೆಗಳು

1. ಏಕಪಕ್ಷ ಪದ್ಧತಿಯಲ್ಲಿ ರಾಷ್ಟ್ರಮಟ್ಟದ ವಿವಾದಗಳನ್ನು ಚರ್ಚಿಸಲಾಗದು.
2. ಏಕಪಕ್ಷ ಪದ್ಧತಿಯಲ್ಲಿ ರಾಜಕೀಯ ಹಕ್ಕುಗಳು, ಮೂಲಭೂತ ಹಕ್ಕುಗಳು ಮತ್ತು ಸಾಮಾನ್ಯ ಸ್ವತಂತ್ರಗಳೂ ತಿರಸ್ಕರಿಸಲ್ಪಡುತ್ತವೆ.
3. ಏಕಪಕ್ಷ ಪದ್ಧತಿ ಅಸಮರ್ಥವಾಗಿದ್ದಾಗ ದೇಶದ ಬೆಳವಣಿಗೆ ಮತ್ತು ಅಭಿವೃದ್ಧಿ ಕ್ರಮಗಳು ಹೆಚ್ಚು ಬಾಧಿಸಲ್ಪಡುತ್ತವೆ.
4. ಈ ಪದ್ಧತಿಯು ಏಕಾಧಿಪತ್ಯ ಮತ್ತು ಸರ್ವಾಧಿಕಾರ ಪದ್ಧತಿಗೆ ದಾರಿ ಮಾಡಿಕೊಡುತ್ತದೆ.

2. ದ್ವಿಪಕ್ಷ ಪದ್ಧತಿ

ದ್ವಿಪಕ್ಷ ಪದ್ಧತಿಯಲ್ಲಿ ಒಂದು ಪಕ್ಷವು ಆಡಳಿತ ಪಕ್ಷವಾಗಿಯೂ ಮತ್ತೊಂದು ಪಕ್ಷವು ವಿರೋಧ ಪಕ್ಷವಾಗಿಯೂ ಇರುತ್ತದೆ. ಈ ಪದ್ಧತಿಯಲ್ಲಿ ಒಂದು ಪಕ್ಷವು ಸರ್ಕಾರವನ್ನು ನಡೆಸುತ್ತದೆ. ವಿರೋಧ ಪಕ್ಷವು ಆಡಳಿತ ಪಕ್ಷದ ಲೋಪದೋಷಗಳನ್ನು ಎತ್ತಿಹಿಡಿದು ಸರ್ಕಾರವನ್ನು ನಿಯಂತ್ರಿಸುತ್ತದೆ. ಉದಾಹರಣೆಗೆ: **ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಇಂಗ್ಲೆಂಡ್**ಗಳಲ್ಲಿ ದ್ವಿಪಕ್ಷ ಪದ್ಧತಿಯು ಕಾರ್ಯನಿರ್ವಹಿಸುತ್ತಿದೆ.

ಅಮೆರಿಕದಲ್ಲಿ ಡೆಮಾಕ್ರೆಟಿಕ್ ಮತ್ತು ರಿಪಬ್ಲಿಕನ್ ಎಂಬ ಎರಡು ಪಕ್ಷಗಳೂ, ಇಂಗ್ಲೆಂಡಿನಲ್ಲಿ ಲೇಬರ್ ಪಕ್ಷ ಮತ್ತು ಕನ್ಸರ್ವೇಟಿವ್ ಪಕ್ಷ ಎಂಬ ಎರಡು ಪಕ್ಷಗಳು ಕಾರ್ಯನಿರ್ವಹಿಸುತ್ತಿವೆ.

ದ್ವಿಪಕ್ಷ ಪದ್ಧತಿಯ ಅನುಕೂಲತೆಗಳು

1. ದ್ವಿಪಕ್ಷಗಳು ಇರುವುದರಿಂದ ಜನರಿಗೆ ಆಡಳಿತ ಪಕ್ಷವನ್ನು ಆಯ್ಕೆ ಮಾಡುವುದು ಬಹು ಸುಲಭವಾಗಿದೆ.
2. ವಿರೋಧ ಪಕ್ಷವು ಆಡಳಿತ ಪಕ್ಷವನ್ನು ಜಾಗರೂಕತೆಯಿಂದ ಕಾರ್ಯನಿರ್ವಹಿಸುವಂತೆ ಮಾಡುತ್ತದೆ.

ದ್ವಿಪಕ್ಷ ಪದ್ಧತಿಯ ಅನಾನುಕೂಲತೆಗಳು

1. ದ್ವಿಪಕ್ಷ ಪದ್ಧತಿಯಲ್ಲಿ ಎರಡೂ ಪಕ್ಷಗಳೂ ಕಳಪೆಯಾಗಿದ್ದಾಗ ಮೂರನೇ ಪಕ್ಷವನ್ನು ಆಯ್ಕೆಮಾಡುವ ಅವಕಾಶವೇ ಇರುವುದಿಲ್ಲ. ಈ ಕಳಪೆಯಾದವುಗಳಲ್ಲಿ ಯಾವುದಾದರೂ ಒಂದು ಪಕ್ಷವನ್ನೇ ಆಯ್ಕೆ ಮಾಡಬೇಕಾಗಬಹುದು.
2. ಈ ಎರಡೂ ಪಕ್ಷಗಳೂ ತಮ್ಮೊಳಗೇ ಒಂದು ವಿಧವಾದ ಒಪ್ಪಂದಕ್ಕೆ ಬಂದಾಗ ಜನರು ಮೂರ್ಖರಾಗುವರು. ಆದ್ದರಿಂದ ಪಕ್ಷದ ತಪ್ಪುಗಳು ಮತ್ತು ಭ್ರಷ್ಟಾಚಾರಗಳನ್ನು ಮರೆಮಾಚುವ ಸಂಭವವಿದೆ.

3. ಬಹುಪಕ್ಷ ಪದ್ಧತಿ

ಬಹುಪಕ್ಷ ಪದ್ಧತಿಯಲ್ಲಿ ಎರಡಕ್ಕಿಂತ ಅಧಿಕವಾದ ಪಕ್ಷಗಳಿರುತ್ತವೆ. ಬಹುಪಕ್ಷ ಪದ್ಧತಿಗೆ ಭಾರತ

ಮತ್ತು ಫ್ರಾನ್ಸ್ ದೇಶಗಳು ಉತ್ತಮ ಉದಾಹರಣೆಗಳಾಗಿವೆ.

ಬಹುಪಕ್ಷ ಪದ್ಧತಿಯ ಅನುಕೂಲತೆಗಳು

1. ಹಲವು ಪಕ್ಷಗಳಿರುವುದರಿಂದ ಪ್ರತಿಯೊಂದು ಪಕ್ಷವು ಆಡಳಿತದ ಚುಕ್ಕಾಣಿ ಹಿಡಿಯುವ ಆಸಕ್ತಿಯಿಂದ ಉತ್ತಮ ಯೋಜನೆಗಳನ್ನು ಆಲೋಚಿಸಿ ಕಾರ್ಯಗತ ಮಾಡಬಹುದು.
2. ಎರಡೂ ಪಕ್ಷಗಳಲ್ಲಿರುವ ನಾಯಕರನ್ನು ಮಾತ್ರ ನಂಬದೇ ಹೊಸ ಅಭಿಪ್ರಾಯಗಳನ್ನು, ಹೊಸ ದೃಷ್ಟಿಯಲ್ಲಿ ಸಮಸ್ಯೆಗಳನ್ನು ಬಗೆಹರಿಸುವ ಶಕ್ತಿಯುಳ್ಳ ನವನಾಯಕರನ್ನು ಆಯ್ಕೆ ಮಾಡಬಹುದು.

ಬಹುಪಕ್ಷ ಪದ್ಧತಿಯ ಅನಾನುಕೂಲತೆಗಳು

1. ಬಹುಪಕ್ಷ ಪದ್ಧತಿಯು ಲಂಚಗುಳಿತನ, ಪ್ರಾಂತೀಯತೆ, ಪಕ್ಷಪಾತ ಮೊದಲಾದವುಗಳನ್ನು ಪ್ರೇರೇಪಿಸುತ್ತದೆ.
2. ಆಡಳಿತ ಪಕ್ಷವು ಜನರ ಒಳಿತನ್ನು ಪರಿಗಣಿಸದೆ ತನ್ನ ಆಡಳಿತಗಾರರ ಒಳಿತನ್ನು ಮಾತ್ರ ಬಯಸುವ ಅವಕಾಶವುಂಟು.
3. ಒಂದು ಪಕ್ಷದಿಂದ ಮತ್ತೊಂದು ಪಕ್ಷಕ್ಕೆ ಪಕ್ಷಾಂತರ ಮಾಡುವ ಮೂಲಕ ಸರ್ಕಾರದ ಸ್ಥಿರತೆಗೆ ಅಡ್ಡಿವುಂಟಾಗುವುದು.

ಭಾರತದ ರಾಜಕೀಯ ಪಕ್ಷಗಳು

ಭಾರತದ ರಾಜಕೀಯ ಪಕ್ಷಗಳನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು. 1) ರಾಷ್ಟ್ರೀಯ ಪಕ್ಷಗಳು. 2. ಪ್ರಾದೇಶಿಕ ಪಕ್ಷಗಳು.

ರಾಷ್ಟ್ರೀಯ ಪಕ್ಷಗಳು

ಭಾರತದ ಚುನಾವಣಾ ಆಯೋಗದಿಂದ ಅಂಗೀಕರಿಸಲ್ಪಟ್ಟು, ಲೋಕಸಭೆ ಚುನಾವಣೆಯಲ್ಲಿ ದಾಖಲಾದ ಮತಗಳಲ್ಲಿ ನಾಲ್ಕು ಅಥವಾ ಅದಕ್ಕೂ ಹೆಚ್ಚು ರಾಜ್ಯಗಳಲ್ಲಿ ಶೇ. 6ರಷ್ಟು ಮತಗಳನ್ನು ಪಡೆಯುವ ಪಕ್ಷಗಳು ರಾಷ್ಟ್ರೀಯ ಪಕ್ಷಗಳು ಎಂದು ಕರೆಯಲ್ಪಡುತ್ತವೆ.

ಉದಾಹರಣೆ: ಕಾಂಗ್ರೆಸ್, ಭಾರತೀಯ ಜನತಾ ಪಕ್ಷ(ಬಿ.ಜೆ.ಪಿ).






ರಾಷ್ಟ್ರೀಯ ಪಕ್ಷಗಳ ಚಿಹ್ನೆಗಳು

ಪ್ರಾದೇಶಿಕ ಪಕ್ಷಗಳು

ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ದಾಖಲಾದ ಮತಗಳಲ್ಲಿ ಶೇ. 6ರಷ್ಟು ಮತಗಳನ್ನು ಪಡೆದು ಕನಿಷ್ಠಪಕ್ಷ ಎರಡು ಸ್ಥಾನಗಳನ್ನು ಗೆದ್ದ ಪಕ್ಷಗಳು ರಾಜ್ಯಪಕ್ಷಗಳು ಅಥವಾ ಪ್ರಾದೇಶಿಕ ಪಕ್ಷಗಳು ಎಂದು ಕರೆಯಲ್ಪಡುತ್ತವೆ. ಈ ಪಕ್ಷಗಳೂ ಸಹ ಚುನಾವಣಾ ಆಯೋಗದಿಂದ ಅಂಗೀಕರಿಸಲ್ಪಟ್ಟವುಗಳಾಗಿವೆ. ಉದಾಹರಣೆಗೆ: ಡಿ.ಎಂ.ಕೆ., ಎ.ಡಿ.ಎಂ.ಕೆ., ಡಿ.ಎಂ.ಡಿ.ಕೆ. ಮತ್ತು ತೆಲುಗುದೇಶಂ.






ಪ್ರಾದೇಶಿಕ ಪಕ್ಷಗಳ ಚಿಹ್ನೆಗಳು

ನಮ್ಮ ದೇಶದಲ್ಲಿರುವ ಕೆಲವು ರಾಷ್ಟ್ರೀಯ ಪಕ್ಷಗಳು ಮತ್ತು ಪ್ರಾಂತೀಯ ಪಕ್ಷಗಳನ್ನು ಗುರುತಿಸಿ.

ಚುನಾವಣೆ

ಪ್ರಜಾಪ್ರಭುತ್ವದ ಜಯ ಎಂಬುದು ಒಂದು ದೇಶದಲ್ಲಿ ಒಂದು ನಿಗದಿತ ಕಾಲದ ನಂತರ ನಡೆಸಲ್ಪಡುವ ಚುನಾವಣೆಯನ್ನು ಅವಲಂಬಿಸಿದೆ. ಈ ಚುನಾವಣೆಗಳ ಮೂಲಕವೇ ಜನರು ಆಡಳಿತ ಪಕ್ಷದ ಕಾರ್ಯಗಳನ್ನು ಮೌಲ್ಯಮಾಪನ ಮಾಡಲು ಸಾಧ್ಯ ಇದರ ಮೂಲಕ ಭ್ರಷ್ಟಾಚಾರ ಮಾಡುವ



ವಿದ್ಯುನ್ಮಾನ ಮತಯಂತ್ರ

ರಾಜಕಾರಣಿಗಳನ್ನು ತ್ಯಜಿಸಿ, ಅವರಿಗೆ ಪಾಠ ಕಲಿಸಿದೆ ಇತರರನ್ನು ಶೋಧಿಸಿ ಚುನಾಯಿಸಬಹುದು. ಇವುಗಳನ್ನು ಕ್ರಮಬದ್ಧಗೊಳಿಸಲು ಎಲ್ಲಾ ಪ್ರಜಾಪ್ರಭುತ್ವ ರಾಷ್ಟ್ರಗಳು ಪ್ರೌಢ ಮತದಾನದ ಹಕ್ಕು ಎಂಬುದನ್ನು ಕಾರ್ಯರೂಪಕ್ಕೆ ತಂದು ಅನುಸರಿಸಿಕೊಂಡು ಬರುತ್ತಿವೆ.

ಭಾರತದಲ್ಲಿ 18 ವರ್ಷ ತುಂಬಿದವರು ಚುನಾವಣೆಗಳಲ್ಲಿ ಮತಗಳನ್ನು ಚಲಾಯಿಸಲು ಹಕ್ಕುದಾರರಾಗಿರುವರು. 25 ವರ್ಷ ತುಂಬಿದ ಭಾರತದ ಪ್ರಜೆಗಳು ಚುನಾವಣೆಯಲ್ಲಿ ಸ್ಪರ್ಧಿಸಬಹುದು.

ಭಾರತದಲ್ಲಿ ಚುನಾವಣಾ ವಿಧಾನಗಳು

ಭಾರತದಲ್ಲಿ ಪ್ರತ್ಯಕ್ಷ ಚುನಾವಣೆಯ ಮೂಲಕವೋ ಅಥವಾ ಪರೋಕ್ಷ ಚುನಾವಣೆಯ ಮೂಲಕವೋ ಪ್ರಜೆಗಳು ತಮ್ಮ ಪ್ರತಿನಿಧಿಗಳನ್ನು ಚುನಾಯಿಸುವರು.

1. ಪ್ರತ್ಯಕ್ಷ ಚುನಾವಣಾ ವಿಧಾನ

ಪ್ರಜೆಗಳು ತಾವೇ ನೇರವಾಗಿ ಮತದಾನ ಮಾಡಿ ತಮ್ಮ ಪ್ರತಿನಿಧಿಗಳನ್ನು ಚುನಾಯಿಸುವ ವಿಧಾನವನ್ನು ಪ್ರತ್ಯಕ್ಷ ಚುನಾವಣಾ ವಿಧಾನ ಎನ್ನುತ್ತಾರೆ.

ಭಾರತದಲ್ಲಿ ವಿಧಾನಸಭೆ ಮತ್ತು ಲೋಕಸಭೆಯ ಸದಸ್ಯರುಗಳನ್ನು ಚುನಾಯಿಸುವ ವಿಧಾನವು ಈ ವಿಧಾನದಲ್ಲಿಯೇ ರಚಿತವಾಗಿದೆ.

2. ಪರೋಕ್ಷ ಚುನಾವಣಾ ವಿಧಾನ

ಪ್ರಜೆಗಳು ನೇರವಾಗಿ ತಮ್ಮ ಮತಗಳನ್ನು ಚಲಾಯಿಸದೆ, ತಮ್ಮ ಪ್ರತಿನಿಧಿಗಳು ಮತ ಚಲಾಯಿಸುವುದರ ಮೂಲಕ ಸದಸ್ಯರುಗಳನ್ನು ಚುನಾಯಿಸುವ ವಿಧಾನವು ಪರೋಕ್ಷ ಚುನಾವಣಾ ವಿಧಾನವಾಗಿದೆ.

ಸಂಸತ್ತಿನ ಮೇಲ್ಮನೆ ಸದಸ್ಯರುಗಳು, ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿ ಇವರು ಈ ವಿಧಾನದ ಮೂಲಕ ಚುನಾಯಿಸಲ್ಪಡುವರು

ಉಪಚುನಾವಣೆ

ಕೆಲವು ಸಮಯಗಳಲ್ಲಿ ಯಾವುದಾದರೂ ಒಂದು ಕ್ಷೇತ್ರದಲ್ಲಿ ಚುನಾಯಿತರಾದ ಅಭ್ಯರ್ಥಿಯು ಮರಣಹೊಂದಿದರೆ ಅಥವಾ ಪದವಿಗೆ ರಾಜೀನಾಮೆ ನೀಡಿದರೆ ಅಂತಹ ಸಂದರ್ಭಗಳಲ್ಲಿ ಆ ಕ್ಷೇತ್ರಕ್ಕಾಗಿ ಮತ್ತೊಮ್ಮೆ ಚುನಾವಣೆ ನಡೆಯುತ್ತದೆ. ಹೀಗೆ ನಡೆಯುವ ಚುನಾವಣೆಗಳಿಗೆ ಉಪಚುನಾವಣೆಗಳು ಎಂದು ಹೆಸರು.

ಮಧ್ಯಂತರ ಚುನಾವಣೆಗಳು

ಕೆಲವು ಸಮಯಗಳಲ್ಲಿ ಲೋಕಸಭೆ ಅಥವಾ ರಾಜ್ಯ ವಿಧಾನಸಭೆಗಳು ಅದು ಕಾರ್ಯ ನಿರ್ವಹಿಸಬೇಕಿರುವ ಅವಧಿಯನ್ನು ಸಂಪೂರ್ಣವಾಗಿ (ಈಗ ಐದು ವರ್ಷಗಳು) ಹಲವಾರು ಕಾರಣಗಳಿಂದಾಗಿ ಕಾರ್ಯಗತ ಮಾಡಲಾಗದೆ ಮಧ್ಯದಲ್ಲಿ ವಿಸರ್ಜಿಸಿದರೆ, ಪುನಃ ಅವುಗಳಿಗೆ ಚುನಾವಣೆ ನಡೆಸಲ್ಪಡುವುದು. ಇದಕ್ಕೆ ಮಧ್ಯಂತರ ಚುನಾವಣೆ ಎಂದು ಹೆಸರು.

ವಿರೋಧ ಪಕ್ಷಗಳ ಪಾತ್ರಗಳು

ಪ್ರಜಾಪ್ರಭುತ್ವದ ಜಯ ಎಂಬುದು ವಿರೋಧ ಪಕ್ಷಗಳ ಕಾರ್ಯಚಟುವಟಿಕೆಗಳನ್ನು ಅವಲಂಬಿಸಿರುತ್ತದೆ. ಪ್ರಜಾಪ್ರಭುತ್ವದಲ್ಲಿ ಎಲ್ಲಾ ಪಕ್ಷಗಳಿಗೂ ಬಹುಮತ

ಸಿಗುವುದು ಕಷ್ಟಸಾಧ್ಯ. ಈ ಸಮಯಗಳಲ್ಲಿ ಕಡಿಮೆ ಸ್ಥಾನಗಳನ್ನು ಗೆದ್ದ ರಾಜಕೀಯ ಪಕ್ಷಗಳು ವಿರೋಧ ಪಕ್ಷಗಳಾಗುತ್ತವೆ. ಲೋಕಸಭೆಯಲ್ಲಿ ಆಡಳಿತ ಪಕ್ಷದ ನಂತರದ ಸ್ಥಾನಗಳನ್ನು ಪಡೆಯುವ ಪಕ್ಷವು ಅಂಗೀಕರಿಸಲ್ಪಟ್ಟ ವಿರೋಧ ಪಕ್ಷವಾಗುವುದು. ವಿರೋಧ ಪಕ್ಷದ ನಾಯಕ ಆಡಳಿತ ಪಕ್ಷದ ಸಚಿವರಿಗೆ ಸಮನಾದ ಅಧಿಕಾರಗಳನ್ನು ಹೊಂದಿರುವರು. ಸಂವಿಧಾನದ ಕಾನೂನಿನಂತೆ ನಿರ್ದೇಶಿಸಲ್ಪಟ್ಟ ಅಧಿಕಾರಗಳನ್ನು ಹೊಂದಿದ ಆಡಳಿತ ಪಕ್ಷಗಳು ಹೇಗೆ ಮುಖ್ಯವಾದುದಾಗಿ ಭಾವಿಸಲ್ಪಡುವುದೋ, ಅದೇ ರೀತಿ ವಿರೋಧ ಪಕ್ಷಗಳ ಪಾತ್ರವೂ ಸಹ ಪ್ರಜಾಪ್ರಭುತ್ವದಲ್ಲಿ ಅನಿವಾರ್ಯವಾಗಿದೆ.

ಆಡಳಿತ ಪಕ್ಷಗಳು ಯಥೇಚ್ಛಧಿಕಾರ ಮನೋಭಾವನೆಯೊಂದಿಗೆ ಕಾರ್ಯನಿರ್ವಹಿಸದಿರಲೂ, ಅವರ ಅಧಿಕಾರಗಳನ್ನು ನಿರ್ಣಯಿಸಲೂ, ಅವರನ್ನು ಮೇಲ್ವಿಚಾರಣೆ ಮಾಡಲೂ ವಿರೋಧ ಪಕ್ಷಗಳು ಮುಖ್ಯ ಕಾರ್ಯಗಳನ್ನು ಕೈಗೊಳ್ಳುತ್ತವೆ. ಇವರ ಮುಖ್ಯ ಕೆಲಸ ಆಡಳಿತ ಪಕ್ಷದ ತತ್ವ ಸಿದ್ಧಾಂತಗಳನ್ನು ವಿಮರ್ಶಿಸುವುದಾಗಿದೆ. ಮತ್ತು ಆಡಳಿತ ಪಕ್ಷದ ಸಿದ್ಧಾಂತಗಳ ವಿಮರ್ಶೆಗಳನ್ನು ವಿಧಾನಸಭೆಗಳ ಹೊರಗಿದ್ದು ಪತ್ರಿಕೆ ಮತ್ತು ಇತರ ಮಾಧ್ಯಮಗಳನ್ನು ಆಕರ್ಷಿಸುವುದೂ ಸಹ ಇವರ ಕೆಲಸವಾಗಿದೆ.

ವಿರೋಧ ಪಕ್ಷಗಳಿಗೆ ಸರ್ಕಾರದ ಖರ್ಚು ವೆಚ್ಚಗಳನ್ನು ತಿಳಿದುಕೊಳ್ಳಲು ಸಂಪೂರ್ಣ ಹಕ್ಕಿದೆ. ಪ್ರಶ್ನೆ ಕೇಳುವ ಸಮಯಗಳಲ್ಲಿ, ಆಡಳಿತ ಪಕ್ಷದವರನ್ನು ವಿಮರ್ಶಿಸುವುದರ ಮೂಲಕ ತಪ್ಪಾದ ಮಾರ್ಗದಲ್ಲಿ ಆಡಳಿತ ಪಕ್ಷದವರು ಅಧಿಕಾರಗಳನ್ನು ದುರ್ಬಳಕೆ ಮಾಡಲು ವಿರೋಧ ಪಕ್ಷದವರು ತಡೆಗಲ್ಲುಗಳಾಗಿ ಇರುವರು.

ಪ್ರಜಾಪ್ರಭುತ್ವ ಒಂದು ದೇಶಕ್ಕೆ ಹೇಗೆ ನೆರವಾಗಿದೆ?

ಭಾರತದ ಸಂವಿಧಾನವು ಪ್ರಜಾಪ್ರಭುತ್ವದ ತತ್ವ ಸಿದ್ಧಾಂತಗಳನ್ನು ಮೂಲಾಧಾರವನ್ನಾಗಿಸಿದೆ. ಭಾರತದ ಸಂಸತ್ ಪ್ರಜಾಪ್ರಭುತ್ವ ಪದ್ಧತಿಯನ್ನೊಳಗೊಂಡಿದೆ. ಭಾರತದ ಸಂವಿಧಾನವು ಎರಡು ಬಗೆಯ ಸರ್ಕಾರಗಳ ಬಗ್ಗೆ ತಿಳಿಸುವುದಾಗಿದೆ. 1) ಕೇಂದ್ರ ಸರ್ಕಾರ 2) ರಾಜ್ಯ ಸರ್ಕಾರ. ಕೇಂದ್ರ ಸರ್ಕಾರಕ್ಕೆ ಚುನಾಯಿಸಲ್ಪಡುವ ಸದಸ್ಯರುಗಳನ್ನು ಸಂಸತ್ ಸದಸ್ಯರೆಂದೂ, ರಾಜ್ಯ ಸರ್ಕಾರಕ್ಕೆ ಚುನಾಯಿಸಲ್ಪಡುವ ಸದಸ್ಯರುಗಳನ್ನು ವಿಧಾನಸಭಾ ಸದಸ್ಯರೆಂದೂ ಕರೆಯುವೆವು. ಇವಲ್ಲದೆ



ಚುನಾವಣೆಯಲ್ಲಿ ಮತದಾನಮಾಡುತ್ತಿರುವುದು

ಸ್ಥಳೀಯ ಆಡಳಿತ ಸಂಸ್ಥೆಗಳು ಗ್ರಾಮಗಳನ್ನೂ, ನಗರಗಳನ್ನೂ ನಿರ್ವಹಿಸುತ್ತವೆ.

ಚುನಾವಣಾ ಆಯೋಗ

ಜನರ ಪ್ರತಿನಿಧಿಗಳನ್ನು ಸಂಸತ್ತಿಗೂ, ರಾಜ್ಯ ವಿಧಾನ ಸಭೆಗಳಿಗೂ ಚುನಾಯಿಸಲ್ಪಡುವ ಕಾರ್ಯ ನಡೆಸಿ ಮುಗಿಸಲು ಒಂದು ಚುನಾವಣಾ ಆಯೋಗವು ಭಾರತದ ಸಂವಿಧಾನದ ಕಾನೂನಿನಂತೆ ರಚಿಸಲ್ಪಟ್ಟಿದೆ. ಇದು ಒಂದು ಸ್ವತಂತ್ರ ಅಂಗವಾಗಿದೆ. ಈ ಆಯೋಗವು ನವದೆಹಲಿಯನ್ನು ಮುಖ್ಯ ಕೇಂದ್ರವನ್ನಾಗಿಸಿಕೊಂಡು ಕಾರ್ಯನಿರ್ವಹಿಸುತ್ತಿದೆ. ಈ ಆಯೋಗವನ್ನು **ನಿರ್ವಚನ್ ಸದನ್** ಎಂದೂ ಕರೆಯುವರು.



ಭಾರತದ ಚುನಾವಣಾ ಆಯೋಗ

ಭಾರತದ ಚುನಾವಣಾ ಆಯೋಗವು ಮೂರು ಸದಸ್ಯರನ್ನೊಳಗೊಂಡಿದೆ. ಒಬ್ಬ ಮುಖ್ಯ ಚುನಾವಣಾ ಆಯುಕ್ತರು ಮತ್ತು ಅವರಿಗೆ ಸಮನಾದ ಇಬ್ಬರು ಚುನಾವಣಾ ಆಯುಕ್ತರು ನೇಮಿಸಲ್ಪಟ್ಟಿರುವರು. ಈ ಮೂವರೂ ರಾಷ್ಟ್ರಪತಿಯವರಿಂದ ನೇಮಿಸಲ್ಪಡುವರು. ಇವರ ಪದವಿ ಕಾಲ ಆರು ವರ್ಷಗಳು. ಇದರಲ್ಲಿ ಮುಖ್ಯ

ಚುನಾವಣಾ ಆಯುಕ್ತರು, ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಿಗೆ ಸಮನಾದ ಅಧಿಕಾರವನ್ನು ಹೊಂದಿದವರಾಗಿರುತ್ತಾರೆ.

ಭಾರತದ ಈಗಿನ ಮುಖ್ಯ ಚುನಾವಣಾ ಆಯುಕ್ತರು ಯಾರು?

ಮುಖ್ಯ ಚುನಾವಣಾಧಿಕಾರಿ

ಪ್ರತಿಯೊಂದು ರಾಜ್ಯಗಳಲ್ಲಿಯೂ ಒಬ್ಬ ಮುಖ್ಯ ಚುನಾವಣಾಧಿಕಾರಿ ಇರುವರು. ಇವರನ್ನು ರಾಜ್ಯ ಸರ್ಕಾರದ ಒಪ್ಪಿಗೆಯೊಡನೆ ರಾಷ್ಟ್ರಪತಿಯವರು ನೇಮಕ ಮಾಡುವರು. ರಾಜ್ಯ ಚುನಾವಣಾ ಕಾರ್ಯಗಳನ್ನು ಮೇಲ್ವಿಚಾರಣೆ ಮಾಡುವುದು ಇವರ ಕಾರ್ಯವಾಗಿದೆ.

ತಮಿಳುನಾಡಿನ ಈಗಿನ ಮುಖ್ಯ ಚುನಾವಣಾಧಿಕಾರಿ ಯಾರು?

ಚುನಾವಣಾ ಆಯೋಗದ ಕಾರ್ಯಗಳು

ಚುನಾವಣಾ ಆಯೋಗವು ಹಲವಾರು ಮುಖ್ಯ ಕಾರ್ಯಗಳನ್ನು ನಿರ್ವಹಿಸುತ್ತಿದೆ. ಅವುಗಳೆಂದರೆ.

1. ರಾಜಕೀಯ ಪಕ್ಷಗಳಿಗೆ ಅಂಗೀಕಾರ ನೀಡುವುದು.
2. ಚುನಾವಣೆಯಲ್ಲಿ ಸ್ಪರ್ಧಿಸುವ ರಾಜಕೀಯ ಪಕ್ಷಗಳಿಗೂ, ಪ್ರತ್ಯೇಕ ಉಮೇದುದಾರರಿಗೂ ಚುನಾವಣಾ ಚಿಹ್ನೆಗಳನ್ನು ಕಾದಿರಿಸುವುದು.
3. ಮತದಾನ ಮಾಡುವ ದಿನಾಂಕಗಳನ್ನೂ, ಮತಗಳನ್ನು ಎಣಿಸುವ ದಿನಾಂಕಗಳನ್ನು ಘೋಷಿಸುವುದು ಮತ್ತು ಚುನಾವಣೆಯ ಅಂತಿಮ ಫಲಿತಾಂಶಗಳನ್ನು ಘೋಷಿಸುವುದು.

ನಮ್ಮ ದೇಶ ಅಧಿಕವಾದ ಜನಸಂಖ್ಯೆಯನ್ನು ಹೊಂದಿದ ಪ್ರಪಂಚದ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿದೆ. ಹಲವಾರು ಇಕ್ಕಟ್ಟಿನ ಪರಿಸ್ಥಿತಿಗಳನ್ನು ದಾಟಿ ಭಾರತವು ಪ್ರಜಾಪ್ರಭುತ್ವದ ವಿಧಿನಿಯಮಗಳನ್ನು ಕಾಪಾಡುವುದರಲ್ಲಿ ಯಶಸ್ಸು ಹೊಂದಿದೆ. ಪ್ರಜಾಪ್ರಭುತ್ವ ಪದ್ಧತಿಯು ಜಯಶಾಲಿಯಾಗಿ ಕಾರ್ಯನಿರ್ವಹಿಸಲು ಎಲ್ಲಾ ಪಕ್ಷಗಳು, ಖಾಸಗಿಯವರೂ ಒಳ್ಳೆಯ ರೀತಿಯಲ್ಲಿ ಸಹಕರಿಸಬೇಕು. ಅದೇ ರೀತಿ ಚುನಾವಣೆಯ ಸಮಯದಲ್ಲಿ ಪ್ರತಿಯೊಬ್ಬರೂ ತಮ್ಮ ಮತದಾನದ ಹಕ್ಕನ್ನು ಸರಿಯಾಗಿ ಬಳಸಿಕೊಂಡು ತಾನು ಇಚ್ಛೆಪಡುವ ಸರ್ಕಾರವನ್ನು ಆಯ್ಕೆ ಮಾಡುವುದನ್ನು ತಮ್ಮ ಪ್ರಮುಖ ಕರ್ತವ್ಯವಾಗಿಸಿಕೊಳ್ಳಬೇಕು.

ಅಭ್ಯಾಸ

ಅ. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1. ಇತ್ತೀಚಿನ ಕಾಲದಲ್ಲಿ ಅತ್ಯಂತ ಪ್ರಸಿದ್ಧಿ ಪಡೆದ ಸರ್ಕಾರದ ಮಾದರಿ

   ಅ) ಕುಟುಂಬ ಆಳ್ವಿಕೆ ಆ) ಉನ್ನತ ಕುಟುಂಬ ಆಳ್ವಿಕೆ

   ಇ) ಪ್ರಜಾಪ್ರಭುತ್ವ ಈ) ಸರ್ವಾಧಿಕಾರ

2. ಪ್ರತ್ಯಕ್ಷ ಪ್ರಜಾಪ್ರಭುತ್ವವು ಪ್ರಾಚೀನ ಕಾಲದಲ್ಲಿ ಬಳಕೆಯಲ್ಲಿದ್ದ ದೇಶ

   ಅ) ಗ್ರೀಸ್ ಆ) ಇಟಲಿ ಇ) ಸಾರ್ಡಿನಿಯಾ ಈ) ಸೈಪ್ರಸ್

3. ತೆಲುಗುದೇಶಂ ಎಂಬುದು

   ಅ) ಪ್ರಾದೇಶಿಕ ಪಕ್ಷ ಆ) ರಾಷ್ಟ್ರೀಯ ಪಕ್ಷ

   ಇ)ಸರ್ವದೇಶ ಪಕ್ಷ ಈ) ಸಾಂಸ್ಕೃತಿಕ ಪಕ್ಷ

4. ಒಂದು ದೇಶದಲ್ಲಿ ಎರಡು ಪಕ್ಷ ಪದ್ಧತಿಯಿದ್ದಾಗ ಅದರ ಹೆಸರು

   ಅ) ಏಕಪಕ್ಷ ಪದ್ಧತಿ ಆ) ದ್ವಿಪಕ್ಷ ಪದ್ಧತಿ

   ಇ) ಬಹುಪಕ್ಷ ಪದ್ಧತಿ ಈ) ಪ್ರಾದೇಶಿಕ ಪಕ್ಷ ಪದ್ಧತಿ

5. ವಿರೋಧ ಪಕ್ಷದ ನಾಯಕನಿಗೆ ನೀಡಲಾಗಿರುವ ಸ್ಥಾನ

ಅ) ಕ್ಯಾಬಿನೆಟ್ ಸಚಿವ ಆ) ಸಹಾಯಕ ಸಚಿವ

ಇ) ರಾಜ್ಯ ಸಚಿವ ಈ) ಮಂತ್ರಿಮಂಡಲ ಸಚಿವ

6. ಚುನಾವಣೆಯಲ್ಲಿ ಮತದಾನದ ಅರ್ಹತೆಯ ವಯಸ್ಸು

ಅ) 21 ಆ) 18 ಇ) 25 ಈ) 35

7. ಕೇಂದ್ರದಲ್ಲಿ ಪ್ರಜೆಗಳಿಂದ ಚುನಾಯಿಸಲ್ಪಟ್ಟ ಪ್ರತಿನಿಧಿಗಳ ಸಂಘಟನೆ

ಅ) ವಿಧಾನಸಭೆ ಆ) ಸರ್ವೋಚ್ಚ ನ್ಯಾಯಾಲಯ

ಇ) ಸರ್ವಪಕ್ಷ ಸಭೆ ಈ) ಲೋಕಸಭೆ

8. ಚುನಾವಣಾ ಆಯುಕ್ತರು ಇವರ ಸರಿಸಮನಾದ ಅಧಿಕಾರವನ್ನು ಹೊಂದಿರುವರು

ಅ) ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ಆ) ಉಚ್ಚ ನ್ಯಾಯಾಲಯದ ನ್ಯಾಯಾಧೀಶರ

ಇ) ಜಿಲ್ಲಾ ನ್ಯಾಯಾಧೀಶರ ಈ) ತಾಲ್ಲೋಕು ದಂಡಾಧಿಕಾರಿ

9. ರಾಜ್ಯ ಚುನಾವಣಾ ಕಾರ್ಯಗಳನ್ನು ಮೇಲ್ವಿಚಾರಣೆ ಮಾಡುವವರು

ಅ) ಮುಖ್ಯ ಚುನಾವಣಾ ಆಯುಕ್ತರು ಆ) ಮುಖ್ಯ ಚುನಾವಣಾಧಿಕಾರಿ

ಇ) ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶ ಈ) ಉಚ್ಚ ನ್ಯಾಯಾಲಯದ ನ್ಯಾಯಾಧೀಶ

10. ಭಾರತದ ಚುನಾವಣಾ ಆಯೋಗವು ಇರುವ ಸ್ಥಳ

ಅ) ಚೆನ್ನೈ ಆ) ಮುಂಬೈ ಇ) ಮುರಾದಾಬಾದ್ ಈ) ದೆಹಲಿ

ಆ. ಸಂಕ್ಷಿಪ್ತವಾಗಿ ಉತ್ತರಿಸಿ

1. ಪ್ರಜಾಪ್ರಭುತ್ವದ ಬಗ್ಗೆ ಅಬ್ರಹಾಂ ಲಿಂಕನ್‌ನ ಅಭಿಪ್ರಾಯವನ್ನು ತಿಳಿಸಿ.
2. ರಾಷ್ಟ್ರೀಯ ಪಕ್ಷಗಳು ಎಂದರೇನು?
3. ರಾಜಕೀಯ ಪಕ್ಷಗಳು ಎಂದರೇನು?
4. ರಾಜಕೀಯ ಪಕ್ಷಗಳ ಕಾರ್ಯಗಳನ್ನು ಬರೆಯಿರಿ.
5. ಏಕಪಕ್ಷ ಪದ್ಧತಿಯ ಅನುಕೂಲತೆಗಳನ್ನು ಬರೆಯಿರಿ.
6. ಚುನಾವಣಾ ಆಯೋಗದ ಕಾರ್ಯಗಳನ್ನು ಸಂಕ್ಷಿಪ್ತವಾಗಿ ಬರೆಯಿರಿ.
7. ತಮಿಳುನಾಡಿನಲ್ಲಿರುವ ಪ್ರಾದೇಶಿಕ(ರಾಜ್ಯ) ಪಕ್ಷಗಳು ಯಾವುವು?

ಇ. ಒಂದು ಪುಟದಲ್ಲಿ ಉತ್ತರಿಸಿ.

1. ಪ್ರಜಾಪ್ರಭುತ್ವದ ವಿಧಗಳು ಮತ್ತು ಅದರ ಪ್ರಾಮುಖ್ಯತೆಯನ್ನು ವಿವರಿಸಿ.
2. ಚುನಾವಣಾ ವಿಧಾನಗಳನ್ನು ಬರೆದು ಅವುಗಳ ಬಗ್ಗೆ ವಿವರಿಸಿ.
3. ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷದ ಪಾತ್ರವನ್ನು ವಿವರಿಸಿ.

3. ವೈವಿಧ್ಯತೆಯಲ್ಲಿ ಏಕತೆ

ಭಾರತ ಭೌಗೋಳಿಕ, ಧರ್ಮ, ಭಾಷೆ, ಜಾತಿ ಮತ್ತು ಸಾಂಸ್ಕೃತಿಕ ವೈವಿಧ್ಯತೆಗಳನ್ನೊಳಗೊಂಡ ಒಂದು ವಿಸ್ತಾರವಾದ ರಾಷ್ಟ್ರವಾಗಿದೆ.

ಭಾರತವು ಅತಿ ಎತ್ತರವಾದ ಪರ್ವತ ಶ್ರೇಣಿಗಳು, ತಗ್ಗಾದ ಕರಾವಳಿ ಬಯಲು ಪ್ರದೇಶಗಳು, ಫಲವತ್ತಾದ ಬಯಲುಗಳು, ಮರುಭೂಮಿ, ನಿತ್ಯಹರಿದ್ವರ್ಣ ಕಾಡುಗಳು ಮತ್ತು ಒಣ ಕುರುಚಲು ಕಾಡುಗಳು ಮತ್ತು ವಿವಿಧ ಬಗೆಯ ಸಸ್ಯವರ್ಗ, ಪ್ರಾಣಿವರ್ಗ ಮತ್ತು ಸಂಸ್ಕೃತಿಗಳನ್ನು ಹೊಂದಿದ ದೇಶವಾಗಿದೆ. ಇಂತಹ ಹಲವು ಬಗೆಯ ವೈವಿಧ್ಯತೆಗಳ ನಡುವೆ ನಾವು ಏಕತೆಯನ್ನು ಕಾಪಾಡಿಕೊಂಡು ಬರುತ್ತಿದ್ದೇವೆ. ನಮ್ಮ ಪ್ರಾಚೀನ ಕಾಲದ ಇತಿಹಾಸವೂ ಸಂಪತ್ಭರಿತವಾದ ಸಂಸ್ಕೃತಿಯೂ ಈ ಏಕತೆಗೆ ಕಾರಣವಾಗಿವೆ.

ಧರ್ಮ

ಭಾರತದಲ್ಲಿ ನೂರು ಕೋಟಿಗಳಿಗಿಂತಲೂ ಅಧಿಕ ಜನರು ಜಾತಿ, ಧರ್ಮ, ಭಾಷೆ, ಪಂಗಡಗಳಿಂದ ಹಲವು ಭಾಗಗಳಾಗಿ ವಿಂಗಡಿಸಲ್ಪಟ್ಟಿದ್ದಾರೆ. ಇಂತಹ ವಿಭಾಗಗಳಿಂದ ಕೂಡಿದ ಭಾರತವು ಮಾನವ ಜನಾಂಗದ ಅಧ್ಯಯನ ಮಾಡುವ ವಸ್ತುಸಂಗ್ರಹಾಲಯವಾಗಿಯೂ, ಪ್ರಯೋಗಾಲಯವಾಗಿಯೂ ಕಂಡುಬರುತ್ತಿದೆ. ಆದ್ದರಿಂದಲೇ ಭಾರತವನ್ನು "ಹಲವು ಜನಾಂಗಗಳ ಸಂಗ್ರಹಾಲಯ" ಎಂದು ಹೇಳುವುದು ಸರಿ.



ಧಾರ್ಮಿಕ ಸಂಕೇತಗಳು

ಭಾರತವು ಹಲವು ಧರ್ಮಗಳ ಜನ್ಮಸ್ಥಳವಾಗಿಯೂ, ಕೆಲವು ಧರ್ಮಗಳ ವಾಸಸ್ಥಾನವಾಗಿಯೂ ಕಂಡುಬರುತ್ತಿದೆ. ಭಾರತದ ಪ್ರಾಚೀನ ಧರ್ಮ ವೈಧಿಕಧರ್ಮ (ಹಿಂದೂ ಧರ್ಮ) ವಾಗಿದೆ. ಕ್ರಿಶ. ಒಂದನೇ ಶತಮಾನದಲ್ಲಿ ಕ್ರೈಸ್ತ ಧರ್ಮವನ್ನು ಯೇಸುವಿನ ಶಿಷ್ಯನಾದ ಸೈಂಟ್ ಥಾಮಸ್ ಎಂಬುವವನು ಪ್ರಥಮವಾಗಿ ಭಾರತದಲ್ಲಿ ಆಚರಣೆಗೆ ತಂದನು. ಭಾರತವನ್ನು ಬಿಟ್ಟು ಹೊರಗೋಡಿಸಲ್ಪಟ್ಟ ಪರ್ಷಿಯನ್ನರಿಂದ ಪರ್ಷಿಯಾದ ಧರ್ಮವಾದ ಜೊರಾಸ್ಟ್ರಿಯನ್ ಧರ್ಮವು ಭಾರತದಲ್ಲಿ ಹರಡಲ್ಪಟ್ಟಿತು. ಭಾರತವನ್ನು ವಶಪಡಿಸಿಕೊಂಡು ಮುಸಲ್ಮಾನರು ತಮ್ಮ ಧರ್ಮವಾದ ಇಸ್ಲಾಂ ಧರ್ಮವನ್ನು ಭಾರತದಲ್ಲಿ ಬೇರೂರುವಂತೆ ಮಾಡಿದರು. ಈ ಧರ್ಮಗಳಲ್ಲದೆ ಬೌದ್ಧ ಧರ್ಮ, ಜೈನ ಧರ್ಮ, ಸಿಖ್‌ಧರ್ಮಗಳೂ ಭಾರತದಲ್ಲಿ ಕಂಡುಬಂದವು. ಇಂತಹ ಧಾರ್ಮಿಕ ವೈವಿಧ್ಯತೆಯಿದ್ದರೂ ನಮ್ಮ ಧರ್ಮಸಹಿಷ್ಣುತೆಯಿಂದಾಗಿ ಧಾರ್ಮಿಕ ಗಲಭೆಗಳಿಗೆ ಅವಕಾಶಕೊಡುವುದಿಲ್ಲ.

ಭಾಷೆ

ಭಾರತದ ಜನರು ತಮಿಳು, ತೆಲುಗು, ಕನ್ನಡ, ಮಲಯಾಳ, ಹಿಂದಿ, ಉರ್ದು, ಸಂಸ್ಕೃತ, ಗುಜರಾತಿ ಬೆಂಗಾಲಿ ಮತ್ತು ಹಲವಾರು ವಿದೇಶಿ ಭಾಷೆಗಳು ಮತ್ತು ಉಪಭಾಷೆಗಳನ್ನು ಮಾತನಾಡುತ್ತಿರುವರು.

ಅನೇಕವಾಗಿ, ಭಾರತದಲ್ಲಿ ಸುಮಾರು 845 ಭಾಷೆಗಳನ್ನು ಮಾತನಾಡುವರು. ಇವುಗಳಲ್ಲಿ 22 ಭಾಷೆಗಳು ನಮ್ಮ ಸರ್ಕಾರದಿಂದ ಅಂಗೀಕರಿಸಲಾಗಿವೆ. ದೇವನಾಗರಿ ಲಿಪಿಯಲ್ಲಿರುವ ಹಿಂದಿ ಭಾಷೆಯನ್ನು ಭಾರತದ ಆಡಳಿತ ಭಾಷೆಯನ್ನಾಗಿ ಆರಿಸಲಾಗಿದೆ. ಆಂಗ್ಲ ಭಾಷೆಯನ್ನು ಕಛೇರಿ ಭಾಷೆಯನ್ನಾಗಿ ಬಳಸಲಾಗುತ್ತಿದೆ.

ಸಂಪರ್ಕ ಸಾಧನವಾದ ಭಾಷೆಯು ಈಗ ಪ್ರತ್ಯೇಕತಾವಾದವನ್ನು ಪ್ರಚೋದಿಸುವ ಸಾಧನವಾಗುತ್ತಿದೆ. ನಮ್ಮ ಭಾಷೆಯಂತೆಯೇ ಇತರ

ಭಾಷೆಗಳನ್ನು ಉನ್ನತವಾಗಿ ಭಾವಿಸಿದರೆ ಅವು ನಮ್ಮ ಅಭಿವೃದ್ಧಿ, ಬೆಳವಣಿಗೆ, ಸಹೋದರತ್ವಗಳಿಗೆ ಸಹಾಯಕವಾಗಿ ರೂಪಿತಗೊಳ್ಳುತ್ತವೆ.

ಸಾಹಿತ್ಯ

ಭಾರತೀಯ ಭಾಷೆಗಳ ಬೆಳವಣಿಗೆಯು ಭಾರತೀಯ ಸಾಹಿತ್ಯವು ತನ್ನ ಪರಾಕಷ್ಠತೆಯನ್ನು ತಲುಪಲು ಸಹಾಯಕವಾಗುತ್ತದೆ. ಸಂಸ್ಕೃತ ಮತ್ತು ಇತರ ಭಾರತದ ಭಾಷೆಗಳು ನಮ್ಮ ಭಾವನೆಗಳ ಮತ್ತು ಚಿಂತನೆಗಳ ಬೆಳವಣಿಗೆಗೆ ನೆರವಾಗುತ್ತವೆ.

ರಾಮಾಯಣ ಮತ್ತು ಮಹಾಭಾರತ ಇವು ಭಾರತದ ಎರಡು ಮಹಾಪುರಾಣಗಳಾಗಿವೆ. ತಿರುವಳ್ಳುವರ್ ಬರೆದ ತಿರುಕ್ಕುರಳ್ ತಮಿಳಿನ ಮಹಾನ್ ಸಾಹಿತ್ಯ ಕೃತಿಯಾಗಿದೆ. ಭಗವದ್ಗೀತೆಯು ಹಿಂದೂಗಳ ಪವಿತ್ರ ಗ್ರಂಥವಾಗಿದೆ. ಉಮರುಪ್ಪುಲವರ್‌ರವರ ಸೀರಾಪ್ಪುರಾಣಂ ಪ್ರವಾದಿ ಮಹಮದ್ ಪೈಗಂಬರನ ಜೀವನ ಚರಿತ್ರೆಯನ್ನು ತಿಳಿಸುತ್ತದೆ. ವೀರಮಾಮುನಿವರ್ ಬರೆದ ತೇಂಬಾವಣಿ ಕ್ರೈಸ್ತ ಧರ್ಮಕ್ಕೆ ಸಂಬಂಧಿಸಿದುದು.

ಹಬ್ಬಗಳು

ಭಾರತದಲ್ಲಿ ಹಿಂದೂಗಳ ಹಬ್ಬಗಳಾದ ದೀಪಾವಳಿ, ನವರಾತ್ರಿ, ವಿನಾಯಕ ಚತುರ್ಥಿ, ಸಂಕ್ರಾಂತಿ, (ಪೊಂಗಲ್) ಚೈತ್ರ ಮಹೋತ್ಸವ, ಆಡಿ ಶುಕ್ರವಾರ, ಯುಗಾದಿ, ಶಿವರಾತ್ರಿ, ವೈಕುಂಟ ಏಕಾದಶಿ, ಶ್ರೀರಾಮನವಮಿ ಮತ್ತು ಕುಂಬಮೇಳ ಮುಂತಾದವುಗಳು ಎಲ್ಲರಿಂದಲೂ ಆಚರಿಸಲ್ಪಡುವ ಮುಖ್ಯ ಹಬ್ಬಗಳಾಗಿವೆ.



ದೀಪಾವಳಿ



ಸಂಕ್ರಾಂತಿ (ಪೊಂಗಲ್) ಹಬ್ಬ

ಕ್ರಿಸ್‌ಮಸ್, ಹೊಸ ವರ್ಷದ ದಿನ, ಗುಡ್‌ಫ್ರೈಡೆ ಮುಂತಾದ ಹಬ್ಬಗಳನ್ನು ಕ್ರೈಸ್ತರು ಆಚರಿಸುತ್ತಾರೆ. ಈದ್–ಮಿಲಾದ್, ರಂಜಾನ್, ಬಕ್ರೀದ್ ಮುಂತಾದ ಹಬ್ಬಗಳನ್ನು ಮುಸ್ಲೀಮರು ಆಚರಿಸುತ್ತಾರೆ.

ಬೌದ್ಧ ಧರ್ಮದವರು ಬುದ್ಧಪೂರ್ಣಿಮ ಹಬ್ಬವನ್ನೂ, ಜೈನ ಧರ್ಮದವರು ಮಹಾವೀರ ಜಯಂತಿಯನ್ನು ಆಚರಿಸುವರು. ಸಿಖ್‌ಧರ್ಮದವರು ಗುರುನಾನಕ್ ಜಯಂತಿಯನ್ನು ಆಚರಿಸುವರು. ವಿವಿಧ ಜನಾಂಗದವರಿಂದ ವಿವಿಧ ಹಬ್ಬಗಳು ಆಚರಿಸಲ್ಪಡುತ್ತಿರುವುದರಿಂದ ಧರ್ಮಸಹಿಷ್ಣುತೆ ಉಂಟಾಗುತ್ತದೆ. ಇದುವರೆಗೆ ಎಲ್ಲಾ ಧರ್ಮದ ಜನರು ದೈವಭಕ್ತಿ ಮತ್ತು ಸಹಿಷ್ಣುತೆಯಿಂದ ಮಾತ್ರ ದೈವತ್ವವನ್ನು ಹೊಂದಬಹುದು ಎಂದು ನಂಬಿರುವರು.

ನಮ್ಮ ಆಚಾರಗಳು, ಆಚರಣೆಗಳು ಮತ್ತು ಪರಂಪರೆ

ಭಾರತೀಯ ಪರಂಪರೆಯು ಅತಿಥಿ ಸತ್ಕಾರ, ಅನುಕಂಪ, ಮಿತ್ರತ್ವ, ಪ್ರೇಮ, ನಿಸ್ವಾರ್ಥ, ನ್ಯಾಯ, ಸದ್ಗುಣ, ವಿನಯ, ಸತ್ಯ, ಶಾಂತಿ, ದಯೆ, ಆಧ್ಯಾತ್ಮಿಕ ಭಾವನೆಗಳು, ಪೋಷಕರಲ್ಲಿ ಮತ್ತು ಹಿರಿಯರಲ್ಲಿ ಗೌರವ ಮತ್ತು ಸಹಿಷ್ಣುತೆಗಳನ್ನು ಪ್ರತಿಪಾದಿಸುತ್ತದೆ. ಇವೆಲ್ಲವೂ ಭಾರತೀಯರು ಇತರೆ ಎಲ್ಲಾ ಭಿನ್ನತೆಗಳನ್ನು ಮರೆತು ಒಗ್ಗಟ್ಟಿನಿಂದ ಬಾಳಲು ನೆರವಾಗಿವೆ.

ಕಲೆ ಮತ್ತು ವಾಸ್ತುಶಿಲ್ಪ

ಪ್ರಾಚೀನ ಕಾಲದಿಂದಲೂ ಭಾರತವು ತನ್ನ ಅದ್ವಿತೀಯ ವಾಸ್ತುಶಿಲ್ಪಕ್ಕೆ ಪ್ರಖ್ಯಾತಿಯಾಗಿದೆ. ಇವು ಇಂದಿಗೂ, ಇಂದಿನ ಆಧುನಿಕ ಪರಿಸರಕ್ಕೆ ತಕ್ಕಂತೆ ಅಭಿವೃದ್ಧಿ ಹೊಂದುತ್ತಿದೆ.

ಅಜಂತಾ ಮತ್ತು ಎಲ್ಲೋರಗಳ ಚಿತ್ರಕಲೆಗಳು ವಿಶ್ವವಿಖ್ಯಾತವಾದವುಗಳಾಗಿವೆ. ಗಾಂಧಾರ ಕಲೆ ಮತ್ತು ಶಿಲ್ಪಕಲೆಯು ಭಾರತದ ಶಿಲ್ಪಕಲೆಯ ಹಿರಿಮೆಯನ್ನು ಸಾರುತ್ತಿವೆ. ದೇವಾಲಯಗಳ ವಾಸ್ತುಶಿಲ್ಪವು ಭಾರತದ ವಾಸ್ತುಶಿಲ್ಪಗಳ ಪೈಕಿ ಅತ್ಯುತ್ತಮವಾದುದಾಗಿದೆ.



ಬುದ್ಧರ ಪ್ರತಿಮೆ

ಉತ್ತರ ಭಾರತದ ಜನರು ದಕ್ಷಿಣ ಭಾರತದ ದೇವಾಲಯಗಳಿಗೆ, ಚರ್ಚುಗಳಿಗೆ ಮತ್ತು ದರ್ಗಾಗಳಿಗೆ ಪವಿತ್ರ ಯಾತ್ರೆ ಕೈಗೊಳ್ಳುವರು, ಅದೇ ರೀತಿ ದಕ್ಷಿಣ ಭಾರತದ ಜನರು ಉತ್ತರ ಭಾರತದ ಯಾತ್ರಾಸ್ಥಳಗಳಾದ ಕಾಶಿ, ಮಥುರ, ಋಷಿಕೇಶ ಮತ್ತು ಹರಿದ್ವಾರ ಮುಂತಾದ ಪವಿತ್ರ ಕ್ಷೇತ್ರಗಳಿಗೆ ಯಾತ್ರೆ ಹೋಗುವರು. ಇಂತಹ ಪವಿತ್ರ ಕ್ಷೇತ್ರಗಳು ಭಾರತೀಯರಲ್ಲಿ ಏಕತೆಯನ್ನುಂಟುಮಾಡುವ ಕೇಂದ್ರಗಳಾಗಿ ಕಂಡುಬರುತ್ತಿವೆ.

ಸಂಗೀತ ಮತ್ತು ನೃತ್ಯ

ಭಾರತದಲ್ಲಿ ಉದಯಿಸಿದ ಕರ್ನಾಟಿಕ್ ಮತ್ತು ಹಿಂದೂಸ್ತಾನಿ ಸಂಗೀತವು ಬಹುತೇಕ ಜನರಿಂದ ಇಚ್ಛಿಪಟ್ಟು ಕಲಿಯಲ್ಪಡುತ್ತವೆ. ಭರತನಾಟ್ಯ, ಕೂಚ್ಚುಪುಡಿ, ಕಥಕ್ಕಳಿ, ಮಣಿಪುರಿ ಮತ್ತು ಒಡಿಸ್ಸಿ ಇವುಗಳು ಭಾರತದ ಪ್ರಖ್ಯಾತ ನೃತ್ಯಗಳಾಗಿವೆ. ಇದರೊಂದಿಗೆ ಹಲವಾರು ಗ್ರಾಮೀಣ ನೃತ್ಯಗಳೂ ಜನರಿಂದ ಇಷ್ಟಪಟ್ಟು ಆರಾಧಿಸಿ ಪೋಷಿಸಲ್ಪಡುತ್ತಿವೆ. ಹಲವು ಮಾರ್ಗಗಳಲ್ಲಿ ಭಾರತದ ಹಲವಾರು ಸಂಗೀತ ಮತ್ತು ನೃತ್ಯಕಲೆಗಳು ಏಕತೆ ಮತ್ತು ಭಾವೈಕ್ಯತೆಯನ್ನು ಬೆಳೆಸುವಲ್ಲಿ ಅತ್ಯಧಿಕ ಸಹಾಯಕವಾಗಿವೆ.



ಭರತ ನಾಟ್ಯ

ರಾಷ್ಟ್ರೀಯ ಭಾವೈಕ್ಯತೆ

ಭೌಗೋಳಿಕ ಲಕ್ಷಣ, ಅದಕ್ಕನುಗುಣವಾದ ಜನರ ಜೀವನ ಪದ್ಧತಿ, ವಿವಿಧ ಆಚಾರಗಳು, ಧಾರ್ಮಿಕ ನಂಬಿಕೆಗಳು, ಭಾಷೆ, ಆಹಾರ ಮತ್ತು ಉಡುಪು ಮುಂತಾದವುಗಳಿಂದ ಭಾರತೀಯರು ವೈವಿಧ್ಯತೆಯಿಂದಿದ್ದಾರೆ. ಹೀಗಿದ್ದರು ಭಾರತದ ಪರಂಪರೆಯಿಂದ ಒಂದುಗೂಡುತ್ತಾರೆ. ಮಾನವೀಯತೆ, ಧಾರ್ಮಿಕ ಭಾವನೆ, ಭ್ರಾತೃತ್ವ, ಮಿತ್ರತ್ವ, ಸರ್ವಧರ್ಮಸಹಿಷ್ಣುತೆ ಇವುಗಳು ಭಾರತೀಯರು ಏಕತೆ ಮತ್ತು ಸಾಮರಸ್ಯದಿಂದ ಬಾಳುವಂತೆ ಮಾಡುತ್ತವೆ.

ಭಾರತೀಯರೆಲ್ಲರೂ ಸಹೋದರ–ಸಹೋದರಿಯರು ಎಂಬ ಭಾವನೆಗಳು ಭಾರತದ ಭಾವೈಕ್ಯತೆಯನ್ನು ಬೆಳೆಸಲು ಬಹಳ ನೆರವಾಗುತ್ತವೆ. ಇದಲ್ಲದೆ ರಾಷ್ಟ್ರೀಯ ಚಿನ್ಹೆಗಳು, ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆ ಮುಂತಾದವುಗಳೂ ಸಹ ರಾಷ್ಟ್ರೀಯ ಭಾವೈಕ್ಯತೆಯನ್ನು ಬೆಳೆಸುತ್ತವೆ. "ಒಗ್ಗಟ್ಟಾಗಿದ್ದರೆ ಉಂಟು ಬಾಳು, ಬೇರ್ಪಟ್ಟರೆ ಉಂಟು ಸೋಲು" ಎಂಬ ಭಾವನೆಯು ಭಾರತದ ಭಾವೈಕ್ಯತೆಗೆ ದಾರಿಮಾಡಿಕೊಡುತ್ತದೆ. ಇಂತಹ ಭಾರತದ ಏಕತೆಯು ಸಿಂಧೂ ಬಯಲಿನ ನಾಗರೀಕತೆಯ ಕಾಲದಿಂದ ಇಂದಿನವರೆಗೂ ಬೆಳೆದು ಬಂದಿರುವ ಭಾರತದ ಸಂಸ್ಕೃತಿಯಿಂದಾದುದಾಗಿದೆ.

ಅಭ್ಯಾಸ

ಅ. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1. ನಮ್ಮ ದೇಶದ ಪ್ರಾಚೀನ ಧರ್ಮ

   ಅ) ವೈದಿಕ ಧರ್ಮ (ಹಿಂದೂ ಧರ್ಮ) ಆ) ಕ್ರೈಸ್ತ ಧರ್ಮ

   ಇ) ಇಸ್ಲಾಂ ಧರ್ಮ ಈ)ಜೊರಾಸ್ಟ್ರಿಯನ್ ಧರ್ಮ

2. ಭಾರತದಲ್ಲಿ ಅಂಗೀಕರಿಸಲ್ಪಟ್ಟ ಆಡಳಿತ ಭಾಷೆಗಳು

   ಅ) 25 ಆ) 23 ಇ) 22 ಈ) 27

3. ಭಾಷೆ ಎಂಬುದು

   ಅ) ಸಂಚಾರ ಆ) ನೀರಾವರಿ

   ಇ) ಸಂಪರ್ಕ ಸಾಧನ ಈ) ಭಾವನೆಗಳಿಂದಾದುದು

4. ತೇಂಬಾವಣಿಯೊಡನೆ ಸಂಬಂಧಿಸಿರುವುದು

   ಅ) ಹಿಂದೂ ಧರ್ಮ ಆ) ಸಿಖ್ ಧರ್ಮ ಇ) ಕ್ರೈಸ್ತ ಧರ್ಮ ಈ) ಇಸ್ಲಾಂ ಧರ್ಮ

5. ಬುದ್ಧ ಪೂರ್ಣಿಮವನ್ನು ಆಚರಿಸುವವರು

   ಅ) ಭಾರತೀಯರು ಆ) ಮುಸಲ್ಮಾನರು

   ಇ) ಜೈನರು ಈ) ಬೌದ್ಧ ಧರ್ಮದವರು

6. ಏಕತೆ ಮತ್ತು ಭಾವೈಕ್ಯತೆಯನ್ನು ಬೆಳೆಸಲು ಮುಖ್ಯ ಪಾತ್ರವಹಿಸಿರುವುದು

   ಅ) ಸಂಗೀತ ಮತ್ತು ನೃತ್ಯ ಆ) ಕಲೆ ಮತ್ತು ವಾಸ್ತುಶಿಲ್ಪ

   ಇ) ಆಹಾರ ಮತ್ತು ಆಚಾರ ಈ) ಉಡುಪು ಮತ್ತು ಆಚಾರ–ವಿಚಾರಗಳು

ಆ. ಸಂಕ್ಷಿಪ್ತವಾಗಿ ಉತ್ತರಿಸಿ.

1. 'ಮಾನವ ಜನಾಂಗದ ಸಂಗ್ರಹಾಲಯ' ಎಂದು ಭಾರತೀಯರು ಏಕೆ ಕರೆಯಲ್ಪಡುವರು?
2. ಭಾರತದಲ್ಲಿರುವ ಕೆಲವು ಧರ್ಮಗಳ ಹೆಸರುಗಳನ್ನು ಬರೆಯಿರಿ.
3. ನಮ್ಮ ಆಚಾರ, ಆಚರಣೆ ಮತ್ತು ಪರಂಪರೆಗಳು ಹೇಗೆ ಒಗ್ಗಟ್ಟನ್ನು ಬೆಳೆಸುತ್ತವೆ?
4. ಭಾರತದ ಕಲೆ ಮತ್ತು ವಾಸ್ತುಶಿಲ್ಪದ ಬಗ್ಗೆ ನೀವು ತಿಳಿದಿರುವುದೇನು?
5. ಭಾರತದ ಸಂಗೀತ ಮತ್ತು ನೃತ್ಯದ ಬಗ್ಗೆ ಲಘು ಟಿಪ್ಪಣಿ ಬರೆಯಿರಿ.

ಇ. ಒಂದು ಪುಟದಲ್ಲಿ ಉತ್ತರಿಸಿ

1. ವೈವಿಧ್ಯತೆಯಲ್ಲಿ ಏಕತೆಯನ್ನು ಸಂರಕ್ಷಿಸಲು ಭಾಷೆ ಮತ್ತು ಸಾಹಿತ್ಯಗಳು ಹೇಗೆ ಸಹಾಯಕವಾಗಿವೆ ಎಂಬುದನ್ನು ವಿವರಿಸಿ.
2. ರಾಷ್ಟ್ರೀಯ ಭಾವೈಕ್ಯತೆಯ ಬಗ್ಗೆ ವಿವರಿಸಿ.

4. ಗ್ರಾಹಕರ ಹಕ್ಕುಗಳು

ಯಾವುದೇ ಒಂದು ಉಪಯುಕ್ತ ವಸ್ತುವಿನಿಂದ ಪರಿಪೂರ್ಣ ಉಪಯುಕ್ತತೆಯನ್ನು ಪಡೆದುಕೊಳ್ಳುವ ವ್ಯಕ್ತಿಯನ್ನು ಗ್ರಾಹಕರು ಎನ್ನುತ್ತೇವೆ. ಒಂದು ವಸ್ತು ಅಥವಾ ಸೇವೆಗೆ ಹಣ ಸಂದಾಯ ಮಾಡಿ ಅದರ ಉಪಯೋಗವನ್ನು ಪಡೆದುಕೊಂಡಾಗ ಆ ವ್ಯಕ್ತಿ ಗ್ರಾಹಕನಾಗುತ್ತಾನೆ. ಕೆಲವು ವೇಳೆ ಅಂಗಡಿ ಮಾಲೀಕರು ಆಯಾ ವಸ್ತುಗಳ ಅಗತ್ಯ ಬೆಲೆಗಿಂತ ಅಧಿಕ ಬೆಲೆಯನ್ನು ಪಡೆದುಕೊಳ್ಳುತ್ತಾರೆ. ಆ ಮೂಲಕ ಗ್ರಾಹಕರನ್ನು ವಂಚಿಸುತ್ತಾರೆ.

ಗ್ರಾಹಕರನ್ನು ವಂಚಿಸುವ ವಿಧಗಳು

ಆರ್ಥಿಕವಾಗಿ ಮುಂದುವರಿಯುವ ದೃಷ್ಟಿಯಿಂದ ವ್ಯಾಪಾರಾಭಿವೃದ್ಧಿಯ ಚಟುವಟಿಕೆಗಳನ್ನು ವಿಸ್ತರಿಸಲು ಆರ್ಥಿಕ ಕ್ಷೇತ್ರದಲ್ಲಿರುವವರು ಸದಾ ಹಂಬಲಿಸುತ್ತಿರುತ್ತಾರೆ. ಹೀಗಾಗಿ ನಾವು ಪ್ರತಿ ದಿನ ಮಾರುಕಟ್ಟೆಯಲ್ಲಿ ವಿವಿಧ ರೀತಿಯ (ನಮೂನೆಯ) ವಸ್ತುಗಳನ್ನು ಕಾಣುತ್ತೇವೆ. ಅಲ್ಲದೆ ವಿಮೆ, ಸಾರಿಗೆ, ವಿದ್ಯುಚ್ಛಕ್ತಿ, ಹಣಕಾಸು ಮತ್ತು ಬ್ಯಾಂಕಿನಂತಹ ಸೇವಾ ಕ್ಷೇತ್ರಗಳನ್ನು ನಾವು ಕಾಣಬಹುದು. ನಮ್ಮ ಯಾವುದೇ



ಹಲವು ಸರಕುಗಳ ಅಂಗಡಿ

ವಸ್ತು ಅಥವಾ ಸೇವಾಕ್ಷೇತ್ರಗಳನ್ನು ನಾವು ಕಾಣಬಹುದು. ನಮ್ಮ ಯಾವುದೇ ವಸ್ತು ಅಥವಾ ಸೇವೆಯ ಬೇಡಿಕೆ ಹೆಚ್ಚಾಗಲು ಮುಖ್ಯವಾಗಿ ಜಾಹೀರಾತುಗಳ ಪ್ರಭಾವ ಹೆಚ್ಚಾಗಿರುತ್ತದೆ. ಪ್ರತಿಯೊಂದು ಕಂಪನಿಯು ವೈಯಕ್ತಿಕವಾಗಿ ಜಾಹೀರಾತಿಗಾಗಿ ಯಥೇಚ್ಚವಾದ ಹಣವನ್ನು ಖರ್ಚು ಮಾಡುತ್ತವೆ. ಹೀಗೆ ಮಾಡುವುದರ ಮುಖ್ಯ ಉದ್ದೇಶ ಗ್ರಾಹಕರನ್ನು ಆಕರ್ಷಿಸುವುದಾಗಿರುತ್ತದೆ. ಅಲ್ಲದೆ ಇವು ವಸ್ತುಗಳ ಬಗ್ಗೆ ಸಂಕ್ಷಿಪ್ತವಾಗಿ ಮಾಹಿತಿಯನ್ನು ನೀಡುತ್ತವೆ. ಆದರೆ ಇವು ಗ್ರಾಹಕರಿಗೆ ತಮ್ಮ ಸರಕುಗಳ ಉತ್ತಮ ಗುಣ ಮಟ್ಟವನ್ನು ತಿಳಿದುಕೊಳ್ಳಲು ಸಾಧ್ಯವಾಗುವುದಿಲ್ಲ. ಅನುಭೋಗಿಗಳು ಮಾರುಕಟ್ಟೆಯಲ್ಲಿ ದೊರೆಯುವ ಯಾವುದೇ ವಸ್ತುಗಳ ಬಗ್ಗೆ ಪೂರ್ಣ ಮಾಹಿತಿಯಿಲ್ಲದೆ ಖರೀದಿಸಿದಲ್ಲಿ ಮೋಸ ಹೋಗುತ್ತಾರೆ.



ವಿದ್ಯುತ್ ಉಪಕರಣಗಳ ಅಂಗಡಿ

ಕೆಲವು ಸಮುದಾಯದಲ್ಲಿ ವ್ಯಾಪಾರಿ ಸಮುದಾಯದವರು ಜನರನ್ನು ತೀವ್ರವಾಗಿ ವಂಚಿಸುತ್ತಾರೆ.

ಗ್ರಾಹಕರು ಉತ್ಪಾದಕರು ಮತ್ತು ವ್ಯಾಪಾರಸ್ಥರಿಂದಲೂ ವಿವಿಧ ರೀತಿಯಲ್ಲಿ ವಂಚನೆಗೆ ಒಳಗಾಗುತ್ತಾರೆ.

ಮಾರುಕಟ್ಟೆಯಲ್ಲಿ ಮಾರಾಟಕ್ಕಿರುವ ಕೆಲವು ವಸ್ತುಗಳು ತೂಕ ಅಥವಾ ಅಳತೆ ಸರಿಯಾಗಿರುವುದಿಲ್ಲ ಅಲ್ಲದೆ ಅದರ ಗುಣ ಮಟ್ಟವು ಉತ್ತಮವಾಗಿರುವುದಿಲ್ಲ. ಕೆಲವು ಔಷಧಿಗಳ ಕಾಲಾವಧಿ ಮುಗಿದು ಹೋಗಿದ್ದರೂ ವ್ಯಾಪಾರವಾಗುತ್ತಿರುತ್ತವೆ ಮತ್ತು ಕೆಲವು ಗೃಹೋಪಯೋಗಿ ವಸ್ತುಗಳು ಕಳಪೆ ಗುಣಮಟ್ಟದ್ದಾಗಿದ್ದು, ಅನುಪಯುಕ್ತವಾಗಿರುತ್ತವೆ. ವಸ್ತುಗಳ ನೈಜ ಬೆಲೆಗಿಂತ ಅಧಿಕ ಬೆಲೆಗೆ ಮಾರಾಟ ಮಾಡುತ್ತಾರೆ. ವಸ್ತುಗಳನ್ನು ಉತ್ಪಾದಿಸುವವರ ಹೆಸರಿನಲ್ಲಿ ನಕಲಿ ವಸ್ತುಗಳನ್ನು ಮಾರಾಟ ಮಾಡುತ್ತಾರೆ.

ಗ್ರಾಹಕರ ಹಕ್ಕುಗಳು

ಗ್ರಾಹಕರ ಹಿತ ರಕ್ಷಣೆಯ ದೃಷ್ಟಿಯಿಂದ ಭಾರತದಲ್ಲಿ ಅನೇಕ ಕಾಯ್ದೆಗಳನ್ನು ಮಾಡಲಾಗಿದೆ. ಈ

ಕಾಂಶ್ಯೆದಗಳನ್ನು ವ್ಯಾಪಾರ ಸಮುದಾಯವು ಗಮನದಲ್ಲಿಟ್ಟುಕೊಳ್ಳಬೇಕು.

ಹಕ್ಕುಗಳು

ಗ್ರಾಹಕರು ಮಾರುಕಟ್ಟೆಯಲ್ಲಿ ದೊರೆಯುವ ವಸ್ತುಗಳಿಂದ ಸಂಭವಿಸಬಹುದಾದ ನಷ್ಟವನ್ನು ಅಥವಾ ಅಂತಹ ನಷ್ಟದ ವಿರುದ್ಧ ರಕ್ಷಣೆ ಪಡೆಯಲು ಮತ್ತು ಅಂತಹ ವಸ್ತುಗಳಿಂದ ಪ್ರಾಣ ಮತ್ತು ಆಸ್ತಿ ಪಾಸ್ತಿಗಳಿಗಾಗುವ ನಷ್ಟವನ್ನು ತಪ್ಪಿಸಲು ಈ ಕಾಯಿದೆಗಳು ಸಹಾಯ ಮಾಡುತ್ತವೆ. ಒಂದು ವಸ್ತುವಿನ ಪರಿಪೂರ್ಣ (ತೂಕ ಅಳತೆ) ಗುಣಮಟ್ಟ, ಸಾಮರ್ಥ್ಯ, ಶುದ್ಧತೆ ಗುಣಧರ್ಮ, ದರ್ಜೆ ಮತ್ತು ಅದರ ಬೆಲೆ ಇವು ಸರಿಯಾಗಿ ನಮೂದಿಸಿರಬೇಕು. ಜೊತೆಗೆ ಆ ವಸ್ತುಗಳ ಮೇಲೆ ಭರವಸೆ ಬಂದರೆ ಈ ಪೈಪೋಟಿ ಯುಗದಲ್ಲಿ ಇವುಗಳನ್ನು ಕಡ್ಡಾಯವಾಗಿ ನಮೂದಿಸುವುದರಿಂದ ವಸ್ತುಗಳ ಮಾರಾಟ ಮತ್ತು ಹೆಚ್ಚು ಉತ್ಪನ್ನಕ್ಕೆ ಅವಕಾಶವಾಗುತ್ತದೆ. ಈ ಮೇಲ್ಕಂಡ ಅಂಶಗಳನ್ನು ಯಾವುದೇ ಗ್ರಾಹಕನಿಗೆ ವಸ್ತುಗಳನ್ನು ಪೂರೈಕೆ ಮಾಡುವವರಿಂದ ಅನ್ಯಾಯವಾಗಿದ್ದಲ್ಲಿ ಅವರಿಗೆ ಸಂತೃಪ್ತಿ ಆ ವಸ್ತುಗಳಿಂದ ದೊರೆಯುವುದಿಲ್ಲ. ಆ ಮೂಲಕ ನ್ಯಾಯವಾದ ಬೆಲೆಗೆ ಅವರಿಗೆ ವಸ್ತುಗಳು ಸಿಗುವಂತೆ ಮಾಡಿಕೊಡಲಾಗುತ್ತದೆ. ಹಾಗೊಂದು ವೇಳೆ ಗ್ರಾಹಕರಿಗೆ ಯಾವುದೇ ವಸ್ತು ಅಥವಾ ಸೇವೆಯಿಂದ ಅವರು ನೀಡಿರುವ ಬೆಲೆಗೆ ತಕ್ಕಂತೆ ತೃಪ್ತಿ ದೊರೆಯದೆ ವಂಚನೆಯಾಗಿದ್ದರೆ ಅವರು ಶೋಷಣೆಗೆ ಒಳಗಾಗಿದ್ದಲ್ಲಿ, ಅವರ ಯೋಗಕ್ಷೇಮದ ಹಿತದೃಷ್ಟಿಯಿಂದ ಅವರ ಆಸಕ್ತಿಯ ಮೇರೆಗೆ ಕಂಪನಿ ಅಥವಾ ವ್ಯಕ್ತಿಯ ಮೇಲೆ ದೂರು ದಾಖಲಿಸಿದಲ್ಲಿ ಅವರಿಗೆ ಸೂಕ್ತ ಪರಿಹಾರ ಕೊಡಿಸಲು ಗ್ರಾಹಕರ ವೇದಿಕೆಯು ನೆರವಾಗುತ್ತದೆ. ಹೀಗೆ ಗ್ರಾಹಕರಿಗೆ ಆದ ವಂಚನೆ, ಮೋಸ ಅಥವಾ ಶೋಷಣೆಯ ವಿರುದ್ಧ ಹೋರಾಡಲು ಅವರಿಗೆ ಗ್ರಾಹಕರಿಗೆ ಹಕ್ಕಿದೆ ಎಂದು **ಮಾಹಿತಿ ಹಕ್ಕು ಕಾಯಿದೆ** ಸಂಸತ್ತಿನಲ್ಲಿ 2005ರ ಅಕ್ಟೋಬರ್ 12 ರಂದು ಜಾರಿಗೆ ಬಂದಿತು. ಪ್ರತಿಯೊಬ್ಬ ನಾಗರೀಕ ಈ ಕಾಯಿದೆಯ ಬಗ್ಗೆ ತಿಳಿದುಕೊಳ್ಳುವುದು ಮತ್ತು ಅದರ ಉಪಯೋಗ ಪಡೆದುಕೊಳ್ಳುವುದು ಅವರ ಮೂಲಭೂತ ಹಕ್ಕಾಗಿದ್ದು, ಇದು ಅವರಿಗೆ ವಸ್ತು ಮತ್ತು ಸೇವೆಗಳ ಬಗ್ಗೆ ಮಾರ್ಗದರ್ಶನ ನೀಡುತ್ತದೆ.

ಮಾಹಿತಿ ಕಾಯಿದೆಗಳ ಮುಖ್ಯ ಉದ್ದೇಶಗಳು

ಗ್ರಾಹಕ ಸಂರಕ್ಷಣೆಯ ಹಿತದೃಷ್ಟಿಯಿಂದ ಸಾರ್ವಜನಿಕ ವಿತರಣಾ ವ್ಯವಸ್ಥೆಯು ಪ್ರಮುಖ ವಿಷಯವಾಗಿ ಬೆಳೆಯುತ್ತಿದ್ದು ಸಾರ್ವಜನಿಕ ವಿತರಣಾ ವ್ಯವಸ್ಥೆಯು ಗ್ರಾಹಕರ ಕಲ್ಯಾಣವನ್ನು ಗಮನದಲ್ಲಿಟ್ಟುಕೊಂಡು ಮುನ್ನಡೆಯಬೇಕಾಗಿದೆ. ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಪಾರದರ್ಶಕತೆಯನ್ನು ಅಳವಡಿಸಲಾಗಿದೆ. ವಿತರಣಾ ವ್ಯವಸ್ಥೆಯಲ್ಲಿನ ದೋಷಗಳು ಸೇರಿದಂತೆ ಗ್ರಾಹಕರಿಗಾಗುವ ಯಾವುದೇ ಅನ್ಯಾಯವನ್ನು ಪ್ರಶ್ನಿಸಲು ಪ್ರತಿಯೊಬ್ಬ ಗ್ರಾಹಕನಿಗೆ ಶಾಸನಬದ್ಧ ಅಧಿಕಾರವಿದೆ. ಗ್ರಾಹಕರ ಸಂರಕ್ಷಣೆಯನ್ನು ಮಾಡಲು ವಿವಿಧ ರೀತಿಯ ಕಾಯಿದೆಗಳಿವೆ.

ಮಾಹಿತಿ ಹಕ್ಕು ಕಾಯಿದೆಯು (RTI) ಸರ್ಕಾರದ ವಿವಿಧ ಹಂತದಲ್ಲಿ ಲಭ್ಯವಿವೆ. ಮುಖ್ಯವಾಗಿ ಗ್ರಾಮೀಣ ಪ್ರದೇಶದ ಹಾಗೂ ಇತರೆ ಪ್ರದೇಶದ ಗ್ರಾಹಕರಿಗೆ ಲಭ್ಯವಿರುವ ಹಕ್ಕುಗಳು ಹಾಗೂ ಜವಬ್ದಾರಿಗಳ ಬಗ್ಗೆ ತಿಳುವಳಿಕೆ ನೀಡಲು ಗ್ರಾಹಕರ ಹಕ್ಕುಗಳ ಬಗ್ಗೆ ಆಸಕ್ತಿಯಿರುವ ಸ್ವಯಂ ಸೇವಾ ಸಂಸ್ಥೆಗಳನ್ನು ಒಳಗೊಂಡ ಗ್ರಾಹಕ ಅದಾಲತ್‌ಗಳನ್ನು ವಿವಿದ ಇಲಾಖೆಗಳು, ಜಿಲ್ಲೆ, ತಾಲ್ಲೋಕು, ಹೋಬಳಿ ಹಾಗೂ ಗ್ರಾಮ ಮಟ್ಟದಲ್ಲಿವೆ.

ಗ್ರಾಹಕರ ಕಲ್ಯಾಣಕ್ಕಾಗಿ ರಾಜ್ಯದಲ್ಲಿ ಅನೇಕ ಸಂಸ್ಥೆಗಳಿವೆ ಪ್ರತಿ ರಾಜ್ಯದಲ್ಲೂ ರಾಜ್ಯ ಗ್ರಾಹಕರ ಕಲ್ಯಾಣ ನಿಧಿ ನಿಯಮಗಳನ್ನು ರಚಿಸಿ ಹೊರಡಿಸಲಾಗಿದ್ದು, ಇದರಂತೆ ರಾಜ್ಯ ಗ್ರಾಹಕರ ಕಲ್ಯಾಣ ನಿಧಿಯನ್ನು ಸ್ಥಾಪಿಸಲಾಗಿದೆ. ಸದರಿ ನಿಯಮದಂತೆ ರಾಜ್ಯ ಗ್ರಾಹಕ ಕಲ್ಯಾಣ ನಿಧಿ ಸಮಿತಿಯನ್ನು ರಚಿಸಲಾಗಿದ್ದು, ಸದರಿ ಸಮಿತಿಯ ಶಿಫಾರಸ್ಸಿನಂತೆ ವಿವಿಧ ಗ್ರಾಹಕ ಸಂಸ್ಥೆಗಳಿಗೆ ಗ್ರಾಹಕರ ಚಟುವಟಿಕೆಗಳಿಗಾಗಿ ಅನುದಾನ ಬಿಡುಗಡೆ ಮಾಡಲಾಗುತ್ತದೆ. ಈ ನಿಯಮಗಳಂತೆ ಗ್ರಾಹಕರ ಪರ ಕೆಲಸ ಮಾಡುವ ಗ್ರಾಹಕ ಸಂಘ, ಸಂಸ್ಥೆಗಳಿಗೆ ಆರ್ಥಿಕ ನೆರವು ನೀಡಲು ಅವಕಾಶವಿದೆ.

ಇಷ್ಟೆ ಅಲ್ಲದೆ ಮಾಹಿತಿ ಪಡೆಯುವ ಹಕ್ಕಿನಿಂದ ಬಹಳಷ್ಟು ಪ್ರಯೋಜನ ಅಥವಾ ಉಪಯೋಗಗಳಿವೆ. ಯಾವುದೇ ಗ್ರಾಹಕ ಸರ್ಕಾರಿ ಅಧಿಕಾರ ಸರಕಾರೇತರ ಅಧಿಕಾರಗಳು ಆಥವಾ ಸಂಘ ಸಂಸ್ಥೆಗಳು, ಸ್ವಯಂ ಸಂಘಗಳು (ಸಂಘಟನೆಗಳು) ಮತ್ತು ಇನ್ನಿತರ ಖಾಸಗಿ ಸಂಘಟನೆಗಳ ಬಗ್ಗೆಯೂ ಮಾಹಿತಿ ಪಡೆಯುವ ಹಕ್ಕಿದೆ. ಅಲ್ಲದೆ ಸರ್ಕಾರದಿಂದ ಸಾಕಷ್ಟು ಅನುದಾನ ಪಡೆಯುವ ಯಾವುದೇ ಸಂಘ ಸಂಸ್ಥೆಯ ಬಗ್ಗೆ ಮಾಹಿತಿ ಪಡೆಯುವ ಹಕ್ಕಿದೆ. ಅರ್ಜಿಯನ್ನು ಹಾಕಿ ಯಾವುದೇ ಸಂಘ ಸಂಸ್ಥೆಯ ಬಗ್ಗೆ ಮಾಹಿತಿ ಅಥವಾ ದಾಖಲೆಗಳನ್ನು ಪಡೆದುಕೊಳ್ಳುವ ಹಕ್ಕನ್ನು ಪ್ರತಿ ಗಾಹಕನು ಹೊಂದಿದ್ದಾನೆ ಹಾಗೆ ಪಡೆದುಕೊಳ್ಳುವ ಮಾಹಿತಿಯು ಸಂಬಂಧಿಸಿದ

ವ್ಯಕ್ತಿ ಆಥವಾ ಇಲಾಖೆಯಿಂದ ಪಡೆದುಕೊಳ್ಳಬಹುದಾಗಿದೆ. ನಾಗರೀಕರು ತಮಗೆ ಬೇಕಾದ ಮಾಹಿತಿ ಪಡೆಯುವ ಹಕ್ಕಿನ ಬಗ್ಗೆ ಭಾರತ ಸಂವಿಧಾನದಲ್ಲಿ ಮುಕ್ತವಾಗಿ ಮೂಲಭೂತ ಹಕ್ಕುಗಳ ಅಧ್ಯಾಯದಲ್ಲಿ ಸ್ಪಷ್ಟವಾಗಿ ವಿವರಿಸಿಲ್ಲವಾದರೂ ಸಂಸತ್ತಿನಲ್ಲಿ ಈ ಕಾಯಿದೆಯನ್ನು ಜಾರಿಗೆ ತರಲಾಗಿದೆ. ಇದರಿಂದ ಪ್ರತಿಯೊಬ್ಬ ನಾಗರೀಕನು ಈ ಹಕ್ಕಿನ ಸದುಪಯೋಗ ಪಡೆಯಬೇಕೆಂಬ ಆಶಯ ಸರ್ಕಾರದ್ದಾಗಿದೆ. ಸದುಪಯೋಗ ಪಡೆದು ಸರಿಯಾದ ಮಾರ್ಗದಲ್ಲಿ ನಡೆಯ ಬೇಕೆಂಬುದು ಈ ಕಾಯಿದೆಯ ಉದ್ದೇಶ.

ಗ್ರಾಹಕರ ಸಂರಕ್ಷಣೆಯ ನಿಯಮಗಳು

ಗ್ರಾಹಕರ ಅವಶ್ಯಕತೆಗಳನ್ನು ರಕ್ಷಿಸುವ ಸಲುವಾಗಿ ಸರ್ಕಾರವು ಈ ಕೆಳಕಂಡ ಮೂರು ಹಂತಗಳಲ್ಲಿ ಗ್ರಾಹಕರ ಸಂರಕ್ಷಣೆ ಮಾಡುತ್ತದೆ.

1. ಶಾಸನ ಬದ್ಧ ಕ್ರಮಗಳು –

ಗ್ರಾಹಕರ ಸಂರಕ್ಷಣೆಯ ಕಾನೂನನ್ನು ರೂಪಿಸುವಿಕೆ.

2. ಆಡಳಿತಾತ್ಮಕ ಕ್ರಮಗಳು –

ಅಗತ್ಯ ವಸ್ತುಗಳನ್ನು ಸಾರ್ವಜನಿಕ ವಿತರಣೆಯ ಮೂಲಕ ವಿತರಿಸುವಿಕೆ.

3. ತಾಂತ್ರಿಕ ನಿಯಮಗಳು –

ಉತ್ಪನ್ನಗಳ ಗುಣಮಟ್ಟವನ್ನು ಕಾಪಾಡುವಿಕೆ.

ಅ. ಗ್ರಾಹಕ ಹಕ್ಕು ಕಾಯಿದೆಗಳು

1986ರ ಗ್ರಾಹಕರ ಸಂರಕ್ಷಣೆಯ ಉದ್ದೇಶಕ್ಕಾಗಿ ಸರ್ಕಾರ ರಚಿಸಿದ ಕಾಯಿದೆಯನ್ನು ಗ್ರಾಹಕ ಸಂರಕ್ಷಣೆ ಕಾಯಿದೆ ಎಂದು ಕರೆದು, ಗ್ರಾಹಕರ ಹಿತವನ್ನು ಸಂರಕ್ಷಿಸುವ ಜವಾಬ್ದಾರಿ ಕೇಂದ್ರ, ರಾಜ್ಯ ಸರಕಾರಗಳಲ್ಲಿ ಪ್ರತ್ಯೇಕ ಇಲಾಖೆಗಳು ಕಾರ್ಯ ನಿರ್ವಹಿಸುತ್ತಾ ಬರುತ್ತಿವೆ. ಈ ಕಾಯಿದೆಯ ಮೂಲಕ ಗ್ರಾಹಕ ಸಂರಕ್ಷಣೆ ಕಾಯಿದೆಯಲ್ಲಿರುವ ಅಂಶಗಳನ್ನು ವಿಸ್ತರಿಸಲಾಗಿದೆ.

ಕಾನೂನು ಬದ್ದ ದೂರು ಕೊಡುವ ವಿಧಾನಗಳು

ದೂರು ಕೊಡುವುದಕ್ಕೆಂದು ಪ್ರತ್ಯೇಕ ವಿಧಾನಗಳು ಯಾವುವೂ ಇಲ್ಲ, ಗ್ರಾಹಕನು ಒಬ್ಬ ವ್ಯಾಪಾರಿಯಿಂದಲೋ ಅಥವಾ ಉತ್ಪಾದಕರಿಂದಲೋ ವಂಚನೆಗೊಳಗಾದಾಗ ಒಂದು ಬಿಳಿ ಹಾಳೆಯಲ್ಲಿ ತನ್ನ ದೂರನ್ನು ಲಿಖಿತ ರೂಪದಲ್ಲಿ ದಾಖಲಿಸಬಹುದು. ವಸ್ತುವಿಗೆ ಸಂಬಂಧಿಸಿದ ರಸೀತಿಗಳು, ಸಂರಕ್ಷಣಾ ನಕಲುಗಳು, ಮುಂತಾದವುಗಳನ್ನು ಅದರ ಜೊತೆಯಲ್ಲಿ ಸೇರಿಸಿ, ಜೋಡಿಸಿ ಜಿಲ್ಲಾ ಗ್ರಾಹಕ ನ್ಯಾಯಾಲಯಗಳಿಗೆ ಕಳುಹಿಸಬೇಕು. ಗ್ರಾಹಕರು ಬೇರೆ ಯಾವ ವಕೀಲರ ಸಹಾಯವನ್ನು ಹುಡುಕುವ ಅವಶ್ಯಕತೆ ಇಲ್ಲ. ಗ್ರಾಹಕರು ತಾವೇ ಈ ವ್ಯವಹಾರಕ್ಕೆ ಸಂಬಂಧಿಸಿದಂತೆ ಗ್ರಾಹಕ ನ್ಯಾಯಾಲಯದಲ್ಲಿ ವಾದಿಸಬಹುದು.

ಆ. ಸಾರ್ವಜನಿಕ ವಿತರಣಾ ವ್ಯವಸ್ಥೆ

ಸಾರ್ವಜನಿಕ ಆಡಳಿತ ವ್ಯವಸ್ಥೆಯ ಮೂಲಕ ಎಲ್ಲಾ ಬಡವರಿಗೂ ಆಹಾರ ಪದಾರ್ಥಗಳನ್ನು ವಿತರಣೆ ಮಾಡುವುದನ್ನು ದೃಢಪಡಿಸಿದೆ. ಆಹಾರ ಪದಾರ್ಥಗಳನ್ನು ಕದ್ದುಕೊಂಡು ಹೋಗುವುದು, ಮರೆಮಾಚುವುದನ್ನು ತಡೆಗಟ್ಟುವುದು, ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸಬೇಕು.

ಇ. ಗುಣಮಟ್ಟದ ಉತ್ಪಾದನೆಯ ಹೆಚ್ಚಳ

ಗ್ರಾಹಕರ ಹಿತಕ್ಕನುಗುಣವಾಗಿ ಗುಣಮಟ್ಟದ ವಸ್ತುಗಳು ಮತ್ತು ದೋಷ ಪೂರಿತ ವಸ್ತುಗಳು ಮಾರಾಟವನ್ನು ತಡೆಯುವ ಹೊಣೆ ಸರಕಾರ ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತಾ ಬಂದಿದೆ. ಭಾರತದಲ್ಲಿ ವಸ್ತುಗಳ ಗುಣವನ್ನು ಗುರುತಿಸುವ ಹೊಣೆ ಅದರ ಮೇಲೆ ಭಾರತ ಗುಣಮಟ್ಟ ಚಿಹ್ನೆ BIS ಮತ್ತು ಆಗ್ಮಾರ್ಕ್, ಗುರುತುಗಳನ್ನು ಗುರುತಿಸಲಾಗಿದೆ. ಇದರಲ್ಲಿ ಉದ್ಯೋಗಕ್ಕೆ ಸಂಬಂಧಿಸಿದ ಮತ್ತು ಗ್ರಾಹಕ ವಸ್ತುಗಳ ಮೇಲೆ BIS ಎಂದು ವ್ಯವಸಾಯಕ್ಕೆ ಸಂಬಂಧಿಸಿದ ವಸ್ತುಗಳ ಮೇಲೆ ಆಗ್ಮಾರ್ಕ್ ಮುದ್ರೆಯನ್ನು ಮುದ್ರಿಸಲಾಗಿದೆ.

ಭಾರತದಲ್ಲಿ ಇರುವಂತೆಯೇ ವಿಶ್ವದ, ವಸ್ತುಗಳ ಗುಣ ಮಟ್ಟವನ್ನು ದೃಢ ಪಡಿಸಲು ವಿಶ್ವದ ಗುಣಮಟ್ಟ ಸಂಸ್ಥೆ (ISO) 1947ರಲ್ಲಿ ಜಿನಿವಾದಲ್ಲಿ ಆರಂಭವಾಯಿತು. ಇದು ಒಂದು ಸರಕಾರೇತರ ಸಂಸ್ಥೆಯಾಗಿದೆ. ವಿಶ್ವ ಮಟ್ಟದಲ್ಲಿ ವಸ್ತುಗಳ ಮಟ್ಟವನ್ನು ತಿಳಿದುಕೊಳ್ಳುವ ಹೊಣೆ ಇದರ ಕಾರ್ಯಗಳಾಗಿವೆ.

ಆಹಾರ ಪದಾರ್ಥಗಳಿಗೆ ಸಂಬಂಧಿಸಿದಂತೆ ವಿಶ್ವದ ಗುಣವನ್ನು ತಿಳಿದುಕೊಳ್ಳುವ ಹೊಣೆ ಕೋಡಾಕ್ಸ್ ಅಲುಮೆಂಟೇಷನ್ ಕ್ರಮಿಷನ್ (Codex Alimentation Commission) ಸ್ಥಾಪಿಸಲಾಯಿತು. ಈ ಸಂಸ್ಥೆಯು (CAC) 1963ರಲ್ಲಿ ಇಟಲಿಯ ರೋಮ್ ನಗರದಲ್ಲಿ ಆಹಾರ ಮತ್ತು ಕೃಷಿ ಇಲಾಖೆ ಸಂಸ್ಥೆಯನ್ನು (FAO) ಮತ್ತು ವಿಶ್ವ ಅರೋಗ್ಯ ಸಂಸ್ಥೆ (WHO) ಗಳನ್ನು ಸ್ಥಾಪಿಸಲಾಯಿತು. ಈ ಸಂಸ್ಥೆಯು ಆಹಾರ ಪದಾರ್ಥಗಳ ಗುಣಮಟ್ಟವನ್ನು

ಹೆಚ್ಚಿಸುವುದರಲ್ಲೂ, ವಸ್ತುಗಳ ಉತ್ಪಾದನೆಗೆ ಮಾರ್ಗದರ್ಶನ, ಸಲಹೆ, ಅಂತರ ರಾಷ್ಟ್ರೀಯ ಮಟ್ಟದಲ್ಲಿ ಆಹಾರ ಪದಾರ್ಥಗಳ ವ್ಯಾಪಾರ ಮಾಡುವುದರ ಬಗ್ಗೆ ಕ್ರಮ ಕೈಗೊಳ್ಳುತ್ತಾ ಬಂದಿದೆ.

ಪ್ರತಿ ವರ್ಷ ಡಿಸೆಂಬರ್ 24 ರಂದು ರಾಷ್ಟ್ರೀಯ ರಾಷ್ಟ್ರೀಯ ಗ್ರಾಹಕರ ದಿನಾಚರಣೆಯನ್ನಾಗಿ ಆಚರಿಸಲಾಗುತ್ತಿದೆ. ಆ ದಿನದಂದು 1986ರಲ್ಲಿ ಭಾರತದ ಸಂಸತ್ತು ಗ್ರಾಹಕರ ರಕ್ಷಣಾ ಕಾಯಿದೆಯನ್ನು ಘೋಷಿಸಿತು. ಪ್ರತಿ ವರ್ಷ ಮಾರ್ಚ್ 15 ರಂದು ವಿಶ್ವದಾದ್ಯಂತ ವಿಶ್ವಗ್ರಾಹಕರ ದಿನಾಚರಣೆಯನ್ನಾಗಿ ಆಚರಿಸಲಾಗುತ್ತಿದೆ. 1962ರಲ್ಲಿ ಇದೇ ದಿನದಂದು ಗ್ರಾಹಕರ ಹಕ್ಕುಗಳನ್ನು ಒಳಗೊಂಡ ಪ್ರತಿಯನ್ನು ಅಮೆರಿಕಾ ಕಾಂಗ್ರೆಸ್ ಸಭೆಗೆ ಕಳುಹಿಸಲಾಯಿತು. ಹೀಗಾಗಿ ಈ ದಿನವನ್ನು ಇತಿಹಾಸದ ಪ್ರಮುಖವಾದ ದಿನವೆಂದು ತಿಳಿಯಲಾಗಿದೆ.

ರಾಲ್ಫ್‌ನಾಡಾರ್ ಎಂಬುವವರನ್ನು ಗ್ರಾಹಕ ಸಂಘದ ಜನಕ ಎಂದು ಕರೆಯಲಾಗಿದೆ.

ಕೋಪ್ರಾದ ಉದಯ

ಗ್ರಾಹಕರ ಸಮಸ್ಯೆಗಳನ್ನು ಹೇಳುವ ಹಕ್ಕಿನಿಂದಾಗಿ ಗ್ರಾಹಕರ ರಕ್ಷಣಾ ಕಾಯ್ದೆ (Consumer Protection Act) (COPRA), 1986ರಲ್ಲಿ ಭಾರತದಲ್ಲಿ ಜಾರಿಗೊಳಿಸಿತು. ಈ ಕಾಯ್ದೆಯನ್ನು ಗ್ರಾಹಕರ ಮಹಾಶಾಸನ (ಮ್ಯಾಗ್ನಕಾರ್ಟ) ಎಂದು ಕರೆಯಲಾಯಿತು.

ಗ್ರಾಹಕರ ಹಿತ ಸಂರಕ್ಷಿಸಲು ತಮಿಳುನಾಡು ಸರ್ಕಾರ ಕೈಗೊಂಡಿರುವ ಕ್ರಮಗಳು.

ಗ್ರಾಹಕರ ಹಿತ ರಕ್ಷಿಸಲು ಪ್ರತಿ ಶಿಕ್ಷಣ ಸಂಸ್ಥೆಗಳಲ್ಲಿಯೂ ಕ್ಲಬ್‌ಗಳನ್ನು ತೆರೆಯಲಾಗಿದೆ. ಆ ಮೂಲಕ ಗ್ರಾಹಕರ ಹಿತರಕ್ಷಣೆ ಶಿಕ್ಷಣವನ್ನು ನೀಡಲಾಗುತ್ತದೆ. ಅಲ್ಲದೆ ಗ್ರಾಮೀಣ ಸಮುದಾಯದಲ್ಲಿ ಸ್ತ್ರೀಯರ ಸ್ವಸಹಾಯ ಸಂಘಗಳು, ಗ್ರಾಮ ಪಂಚಾಯ್ತಿ ಸಭೆ ಇವುಗಳ ಮೂಲಕ ಪ್ರತಿಯೊಬ್ಬರಿಗೆ ಗ್ರಾಹಕ ಹಿತ ರಕ್ಷಣೆ ಬಗ್ಗೆ ಜಾಗೃತಿ ಮೂಡಿಸಲಾಗುತ್ತದೆ. ಇನ್ನು ನಗರ ಪ್ರದೇಶಗಳಿಲ್ಲಿ ಅನೇಕ ಸಂಘ ಸಂಸ್ಥೆಗಳಲ್ಲಿ ಕಾರ್ಯಾಗಾರ, ಭಾಷಣ , ಚರ್ಚೆಗಳು, ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸುವುದರ ಮೂಲಕ ಜನರಲ್ಲಿ ಗ್ರಾಹಕ ಸಂರಕ್ಷಣೆಯ ಬಗ್ಗೆ ಜಾಗೃತಿಯನ್ನು ಮೂಡಿಸುತ್ತಾರೆ. ಅಷ್ಟೆ ಅಲ್ಲದೆ ಗ್ರಾಹಕ ಹಿತ ರಕ್ಷಣೆಯ ಕುರಿತು ಜಾಗೃತಿ ಮಾಡಿಸುವ ಮಾಸಿಕ (ಮಾಸ ಪತ್ರಿಕೆ) "ತಮಿಳುನಾಡು ಗ್ರಾಹಕರ ಕವಚ" ಎಂಬ ಮಾಸ ಪತ್ರಿಕೆಯನ್ನು ಪ್ರಕಟಿಸಿ ಜನರಲ್ಲಿ ಜಾಗೃತಿ ಉಂಟು ಮಾಡಲಾಗುತ್ತಿದೆ. ಗ್ರಾಹಕರ ಬಗ್ಗೆ ಜಾಗೃತಿಗಾಗಿ ರೇಡಿಯೋ, ದೂರದರ್ಶನ, ಮತ್ತು ಕಿರುಚಿತ್ರಗಳ ಮೂಲಕ ಸಾರ್ವಜನಿಕರಿಗಾಗಿ ಪ್ರಸಾರ ಮಾಡಲಾಗುತ್ತಿದೆ. ಪ್ರಜೆಗಳನ್ನು ಮೌಲ್ಯಯುತ ಗ್ರಾಹಕನನ್ನಾಗಿ ಮಾಡಲು ತಮಿಳುನಾಡು ಸರಕಾರದೊಡನೆ ಗ್ರಾಹಕ ಸಂಘಗಳು ಗ್ರಾಹಕರಿಗೆ ಅಗತ್ಯವಾದ ಜ್ಞಾನ ಮತ್ತು ಜಾಗೃತಿಯನ್ನು ಉಂಟು ಮಾಡುತ್ತಾ ಬಂದಿವೆ.



ನ್ಯಾಯಬೆಲೆ ಅಂಗಡಿ

ಹಲವಾರು ರಾಷ್ಟ್ರಗಳಲ್ಲಿರುವ ಗ್ರಾಹಕ ಕಾಯಿದೆಗಳು

ಅಮೆರಿಕ ಸಂಯುಕ್ತ ಸಂಸ್ಥಾನ

ಅಮೆರಿಕಾದಲ್ಲಿ ಗ್ರಾಹಕರ ಹಿತ ರಕ್ಷಣೆಯ ಕಾರಣದಿಂದಾಗಿ ಕೇಂದ್ರ, ರಾಜ್ಯ ಮಟ್ಟದಲ್ಲಿ ಹಲವು ಬಗೆಯ ಕಾಯಿದೆಗಳನ್ನು ರಚಿಸಲಾಗಿದೆ ಅವುಗಳೆಂದರೆ ಸಂಯುಕ್ತ ಕಾನೂನು ಸಾಲ ವಸೂಲಿ ಕಾಯಿದೆ, (The federal fair debt collection practices Act) ಕಾನೂನು ಸಾಲ ವರದಿ ಕಾಯಿದೆ (Fair Credit Reporting Act), ಸತ್ಯ ಸಾಲ ಕೊಡುವಿಕೆ ಕಾಯಿದೆ (Truth in lending Act) ರಾಜ್ಯ ಮಟ್ಟದಲ್ಲಿ ಹಲವು ರಾಜ್ಯಗಳು ಗ್ರಾಹಕರ ವ್ಯವಹಾರ ಇಲಾಖೆಗಳನ್ನು ಸೃಷ್ಟಿಸಿ ಗ್ರಾಹಕರ ಹಿತವನ್ನೂ ರಕ್ಷಿಸುವ ಸಲುವಾಗಿ ಹಲವಾರು ಕ್ರಮಗಳನ್ನು ಕೈಗೊಳ್ಳಲಾಗುತ್ತಾ ಬಂದಿದೆ.

ಇಂಗ್ಲೆಂಡ್ (United Kingdom)

ಯುರೋಪ್ ಸಂಯುಕ್ತ ರಾಷ್ಟ್ರದಲ್ಲಿ ಇಂಗ್ಲೆಂಡ್ ಒಂದು ಅಂಗವಾಗಿದೆ. ಯೂರೋಪ್ ಸಂಯುಕ್ತ ರಾಷ್ಟ್ರಗಳಲ್ಲಿ ಇರುವ ಗ್ರಾಹಕರ ರಕ್ಷಣೆಗೆ ಸಂಬಂಧಿಸಿದ ಕಾಯಿದೆಗಳನ್ನು ಕಾರ್ಯಗತಗೊಳಿಸುತ್ತದೆ. ಇದು ಗ್ರಾಹಕರ ರಕ್ಷಕನಾಗಿಯು ಕೆಲಸ ಮಾಡುತ್ತದೆ.

ಜರ್ಮನಿ

ಗ್ರಾಹಕರ ಹಕ್ಕುಗಳು ಮತ್ತು ರಕ್ಷಣಾ ಜವಾಬ್ದಾರಿಯು ಒಂದು ಸಂಯುಕ್ತ ಸಚಿವ ಸಂಪುಟ ಸಚಿವರೊಬ್ಬರಿಗೆ ಕೊಟ್ಟಿದೆ.

ಗ್ರಾಹಕರ ಕಾಯಿದೆಯ ಅನುಕೂಲಗಳು

1. ಜಾಗೃತಿ ಮೂಡಿಸುವುದು– ಗ್ರಾಹಕರ ಕಾಯಿದೆ ಜನರಲ್ಲಿ ವಸ್ತುಗಳ ಬೆಲೆ, ಗುಣಮಟ್ಟ ಮತ್ತು ಸೇವೆಯ ಬಗ್ಗೆ ಜಾಗೃತಿಯನ್ನು ಉಂಟು ಮಾಡುತ್ತದೆ.

2. ಸಮಾಜಕ್ಕೆ ಸಂಬಂಧಿಸಿದ– ವಸ್ತುಗಳ ಉತ್ಪಾದನೆ ಮತ್ತು ಸೇವೆ ಬೇರೆಯವರಿಗೆ ತೊಂದರೆಯಾಗದಂತೆ ಈ ಕಾಯಿದೆಯು ಕಾರ್ಯ ನಿರ್ವಹಿಸುತ್ತದೆ.

3. ಪರಿಸರಕ್ಕೆ ಸಂಬಂಧಿಸಿದ. – ಗ್ರಾಹಕರು ವಸ್ತುಗಳನ್ನು ಬಳಸಿಕೊಂಡರೆ ಪರಿಸರದಲ್ಲಿ ಉಂಟಾಗುವ ಪರಿಣಾಮಗಳನ್ನು ತಿಳಿದುಕೊಳ್ಳಲು ಸಹಾಯ ಮಾಡುತ್ತದೆ.

ಜಾಗೃತಿ ಇಲ್ಲದಿದ್ದಲ್ಲಿ ಉಂಟಾಗುವ ಬಾಧಕಗಳು

1. ಕೆಲವು ಮಾರ್ಗಗಳಲ್ಲಿ ಗ್ರಾಹಕರು ಆಕರ್ಷಣೆಯು ಜಾಹಿರಾತುಗಳ ಮೂಲಕ ಭಾದಿಸಲ್ಪಡುವರು.



ಸಾಮಾಜಿಕ ಜಾಗೃತಿ

2. ವರ್ತಕರು (ವ್ಯಾಪಾರಸ್ಥರು) ಗ್ರಾಹಕರ ಬಲಹೀನತೆಯನ್ನು ತಿಳಿದುಕೊಂಡು ಅದಕ್ಕನುಗುಣವಾಗಿ ವಸ್ತುಗಳನ್ನು ಬದಲಾಯಿಸುವುದು, ಬಹುಮಾನ ಕೊಡುವುದು, ಅದೃಷ್ಟ ಪರೀಕ್ಷೆ (ಲಕ್ಕಿ ಬಹುಮಾನ) ಗಳಂತಹವುಗಳ ಮೂಲಕ ಗ್ರಾಹಕರನ್ನು ವಂಚಿಸಲಾಗುತ್ತದೆ. ಇದರಿಂದ ಉಂಟಾಗುವ ಸಮಸ್ಯೆಗಳನ್ನು ಬಹಳಷ್ಟು ಜನರು ಗ್ರಾಹಕ ನ್ಯಾಯಾಲಯಗಳಿಗೆ ದೂರು ಸಲ್ಲಿಸದಿರುವುದು.

3. ಗ್ರಾಹಕರು ಒಬ್ಬ ರಾಜನಂತಿದ್ದರು ಅವರು ಅನೇಕ ರಾಷ್ಟ್ರಗಳಲ್ಲಿ ಹಲವು ಮಾರ್ಗಗಳಲ್ಲಿ ಮೋಸಕ್ಕೊಳಗಾಗುತ್ತಿದ್ದಾರೆ.



ಪರಿಸರ ಜಾಗೃತಿ ಮೂಡಿಸುವುದು.

4. ಜನರಿಗೆ ಗ್ರಾಹಕ ಹಕ್ಕುಗಳ ಮತ್ತು ವಸ್ತುಗಳ ಬಗ್ಗೆ ಸಾಕಾಗುವಷ್ಟು ಜಾಗೃತಿ ಇಲ್ಲದಿರುವುದು.

5. ನಾವು ಬಳಸುವ ಯಾವುದೇ ವಸ್ತುವಿನಿಂದ ಅಥವಾ ಚಟುವಟಿಕೆಯಿಂದ ನಮ್ಮ ಪರಿಸರ ಹಾಳಾಗದಂತೆ ಎಚ್ಚರ ವಹಿಸುತ್ತೇವೆ.

ಗ್ರಾಹಕರಲ್ಲಿ ಜಾಗೃತಿಯನ್ನುಂಟು ಮಾಡಲು ಇರುವ ಉತ್ತಮ ಯೋಜನೆಗಳು

ಹಿರಿಯ ಹಾಗೂ ಸಿಬ್ಬಂದಿಗಳು ಹಾಗೂ ಮುಖಂಡರುಗಳಿಗೆ ಸೂಕ್ತ ತರಬೇತಿ, ಚರ್ಚೆಗಳು, ಮತ್ತು ಸಾರ್ವತ್ರಿಕ ಶಿಕ್ಷಣ ಕ್ರಮಗಳ ಮೂಲಕ ಮುಂದೆ ಕೈಗೊಳ್ಳಬಹುದಾದ ಚಟುವಟಿಕೆಗಳ ಕುರಿತು ಚರ್ಚಿಸಿ ತಿಳಿಸಬೇಕು.

ಪ್ರಸಿದ್ಧ ವ್ಯಕ್ತಿಗಳಿಂದ ಆ ಕುರಿತು ಶಿಕ್ಷಣ ಕೊಡಿಸುವುದು.

ಇತರೆ ಯೋಜನೆಗಳು.

- ಗ್ರಾಹಕರಿಗೆ ಜಾಗೃತಿ ಮೂಡಿಸುವ ಇತರ ಕ್ರಮಗಳು.
- ವ್ಯಾಪಾರ ಮೇಳ (ಸಂತೆ)
- ಗ್ರಾಹಕರ ಹಬ್ಬ
- ಪಂಚಾಯ್ತಿ ಮಟ್ಟದಲ್ಲಿ ಸ್ವ–ಸಹಾಯ ಗುಂಪುಗಳ ಮಟ್ಟದಲ್ಲಿ ಗ್ರಾಹಕರಿಗೆ ಜಾಗೃತಿ ತರಬೇತಿ ನೀಡುವುದು.
- ಸ್ವಯಂ ಸಂಘಟನೆಗಳು
- ನಿವಾಸಿಗಳ ಸಂಘದ ಮೂಲಕ ಗ್ರಾಹಕರ ಹಕ್ಕುಗಳ ಬಗ್ಗೆ ವಿಚಾರ ಸಂಕಿರಣ ಮತ್ತು ತರಬೇತಿಗಳನ್ನು ಏರ್ಪಡಿಸುವುದು.

• ಅನಧಿಕೃತ ವ್ಯಾಪಾರ ವಹಿವಾಟುಗಳ ಕುರಿತು ಜಾಗೃತಿ ಮೂಡಿಸಲು ಕಾರ್ಯಗಾರಗಳನ್ನು ಏರ್ಪಡಿಸುವುದು.

• ಬ್ಯಾಂಕ್, ಕ್ರೆಡಿಟ್‌ಕಾರ್ಡ್, ಮೊಬೈಲ್‌ಫೋನ್‌ಗಳ ಕುರಿತಾಗಿ ಚರ್ಚೆಗಳನ್ನು ಏರ್ಪಡಿಸುವುದು.

ದೂರು ದಾಖಲಿಸಲು ಇರುವ ಕಾನೂನಿನ ನಿಯಮಗಳು

ದೂರು ದಾಖಲಿಸಲು ಯಾವುದೇ ನಿಯಮಗಳಿಲ್ಲ. ಒಂದು ವೇಳೆ ನೀವು ಯಾವುದೇ ವ್ಯಾಪಾರಿ ಅಥವಾ ಉತ್ಪಾದಕನಿಂದ ಮೋಸ ಹೋಗಿದ್ದರೆ ಅವರ ವಿರುದ್ಧ ಗ್ರಾಹಕರ ನ್ಯಾಯಾಲಯದಲ್ಲಿ ದೂರು ದಾಖಲಿಸ ಬೇಕೆಂದು ಬಯಸಿದಲ್ಲಿ ಒಂದು ಬಿಳಿ ಹಾಳೆಯ ಮೇಲೆ ಎಲ್ಲಾ ವಿವರಗಳನ್ನು ಬರೆದು ಅದಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಅಂದರೆ ಗ್ಯಾರಂಟಿ ಅಥವಾ ವಾರಂಟಿ ಕಾರ್ಡ್, ಹಣ ಪಾವತಿಸಿದ ರಶೀದಿ ಮುಂತಾದವುಗಳನ್ನು ಲಗತ್ತಿಸಬೇಕು.

BIS	- Bureau of Indian Standards
ISO	- International Organisation for Standardization
FAO	- Food and Agriculture Organisation
WHO	- World Health Organisation
UK	- United Kingdom
COPRA	- Consumer Protection Act.

ಅಭ್ಯಾಸ

ಅ. ಸರಿಯಾದ ಉತ್ತರವನ್ನುಆರಿಸಿ ಬರೆಯಿರಿ.

1. ಒಂದು ವಸ್ತುವನ್ನು ಸಂಪೂರ್ಣವಾಗಿ ಬಳಸಲ್ಪಡುವವರು
   ಅ)ಉತ್ಪಾದಕರು ಆ)ಗ್ರಾಹಕರು ಇ)ಅಂಗಡಿಯವರು ಈ)ರೈತ
2. ಗ್ರಾಹಕರನ್ನು ವಂಚಿಸುವವರು
   ಅ)ಮರಗೆಲಸ ಮಾಡುವವರು ಆ)ರೈತ ಇ)ದರ್ಜಿ ಈ)ವ್ಯಾಪಾರಿ
3. ಮಾಹಿತಿ ಹಕ್ಕು ಕಾಯಿದೆಯು ಸಂಸತ್ತಿನಲ್ಲಿ ನೆರವೇರಿಸಲ್ಪಟ್ಟದ್ದು
   ಅ)ಅಕ್ಟೋಬರ್ 12, 2005 ಆ)ಅಕ್ಟೋಬರ್ 21, 2005
   ಇ)ಅಕ್ಟೋಬರ್ 12, 2006 ಈ)ಅಕ್ಟೋಬರ್21, 2006
4. ವಿಶ್ವ ಗ್ರಾಹಕರ ದಿನವನ್ನಾಗಿ ಆಚರಿಸಲ್ಪಡುವುದು
   ಅ)ಮಾರ್ಚ್ 15 ಆ)ಮಾರ್ಚ್ 16 ಇ)ಮಾರ್ಚ್ 14 ಈ)ಮಾರ್ಚ್ 11
5. ಗ್ರಾಹಕರ ಮಹಾಶಾಸನ
   ಅ)ವಿಶ್ವ ಆರೋಗ್ಯಸಂಸ್ಥೆ ಆ)ಗ್ರಾಹಕರ ರಕ್ಷಣಾ ಕಾಯಿದೆ(ಕೋಪ್ರಾ)
   ಇ)ಎಕ್ಸ್‌ನೋರಾ ಈ)ಆಹಾರ ಮತ್ತು ಕೃಷಿಸಂಸ್ಥೆ
6. ಗ್ರಾಹಕರಿಗೆ ಜಾಗೃತಿ ಮೂಡಿಸುವ ಯೋಜನೆಗಳು
   ಅ)ವನ ಮಹೋತ್ಸವ ಆ)ಆಪರೇಷನ್ 21
   ಇ)ವ್ಯಾಪಾರ ಮೇಳ ಈ)ರಾಜರಾಜನ್ 1000

ಆ. ಸಂಕ್ಷಿಪ್ತವಾಗಿ ಉತ್ತರಿಸಿ.

1. ಗ್ರಾಹಕರು ಹೇಗೆ ವಂಚನೆಗೊಳಗಾಗುತ್ತಾರೆ?ಯಾವುದಾದರೂ ಎರಡು ವಿಧಾನಗಳನ್ನು ತಿಳಿಸಿರಿ.
2. ಗ್ರಾಹಕರ ರಕ್ಷಣಾ ಕಾಯಿದೆಯ(ಕೋಪ್ರಾ) ಬಗ್ಗೆ ಲಘು ಟಿಪ್ಪಣಿ ಬರೆಯಿರಿ.
3. ಗ್ರಾಹಕರು ವಂಚನೆಗೊಳಗಾಗುವುದನ್ನು ತಡೆಯಲು ತಮಿಳುನಾಡು ಸರ್ಕಾರವು ಕೈಗೊಂಡಿರುವ ಕ್ರಮಗಳಲ್ಲಿ ಯಾವುದಾದರೂ ಎರಡರ ಬಗ್ಗೆ ಬರೆಯಿರಿ.

ಇ) ಒಂದು ಪುಟದಲ್ಲಿ ಉತ್ತರಿಸಿ.

1. ಗ್ರಾಹಕರ ಹಕ್ಕುಗಳ ಬಗ್ಗೆ ಬರೆಯಿರಿ.
2. ಗ್ರಾಹಕರನ್ನು ರಕ್ಷಿಸಲು ತಮಿಳುನಾಡು ಸರ್ಕಾರವು ಕೈಗೊಂಡಿರುವ ಕ್ರಮಗಳು ಯಾವುವು?



ಅರ್ಥಶಾಸ್ತ್ರ

1. ರಾಷ್ಟ್ರೀಯ ಆದಾಯ

ಪೀಠಿಕೆ

ನಾವು ಸಮಾಜದಲ್ಲಿನ ಜನರನ್ನು ಅವರ ವೈಯಕ್ತಿಕ ಆದಾಯದ ಆಧಾರದ ಮೇಲೆ ಶ್ರೀಮಂತ, ಮಧ್ಯಮ ಹಾಗೂ ಬಡ ವರ್ಗದ ಜನರೆಂದು ವರ್ಗೀಕರಿಸಿಕೊಳ್ಳಬಹುದು. ಅದೇರೀತಿ ವಿಶ್ವದ ರಾಷ್ಟ್ರಗಳನ್ನು ಅವುಗಳ ರಾಷ್ಟ್ರೀಯ ಆದಾಯದ ಆಧಾರದ ಮೇಲೆ ಮುಂದುವರಿದ ಹಾಗೂ ಮುಂದುವರಿಯುತ್ತಿರುವ ರಾಷ್ಟ್ರಗಳೆಂದು ವರ್ಗೀಕರಿಸಬಹುದು. ಒಂದು ದೇಶದ ವರಮಾನವು ಆ ದೇಶದ ಆರ್ಥಿಕ ಬೆಳವಣಿಗೆಯನ್ನು ತಿಳಿಸುವ ಸಂಕೇತಗಳಲ್ಲಿ ಒಂದಾಗಿದೆ. ಒಂದು ದೇಶದ ವರಮಾನವು ಆ ದೇಶವು ಕೈಗೊಳ್ಳುವ ಎಲ್ಲಾ ಕ್ರಮಗಳನ್ನು ಆಧರಿಸಿಯೇ ತೀರ್ಮಾನಿಸಲ್ಪಡುತ್ತದೆ. ಆದ್ದರಿಂದಲೇ ನಾವು ಈಗ ರಾಷ್ಟ್ರೀಯ ಆದಾಯ ಎಂದರೇನು? ಅದರ ಪರಿಭಾವನೆಗಳು, ರಾಷ್ಟ್ರೀಯ ಆದಾಯದ ವಿಧಾನಗಳು ಹಾಗೂ ರಾಷ್ಟ್ರೀಯ ಆದಾಯದ ಅಧ್ಯಯನದ ಅಗತ್ಯತೆ ಬಗ್ಗೆ ಅಧ್ಯಯನ ಮಾಡುತ್ತೇವೆ.

ರಾಷ್ಟ್ರೀಯ ಆದಾಯ

ವ್ಯಾಖ್ಯಾನ: "ಒಂದು ದೇಶದಲ್ಲಿ ಒಂದು ವರ್ಷದ ಅವಧಿಯಲ್ಲಿ ಉತ್ಪಾದಿಸಲಾಗುವ ಸರಕು ಮತ್ತು ಸೇವೆಗಳ ಒಟ್ಟು ಮೌಲ್ಯವನ್ನು ಅಂದಾಜಿಸುವುದೇ ರಾಷ್ಟ್ರೀಯ ಆದಾಯವಾಗಿದೆ". ಸಾಮಾನ್ಯವಾಗಿ ರಾಷ್ಟ್ರೀಯ ಆದಾಯವನ್ನು "ಒಟ್ಟು ರಾಷ್ಟ್ರೀಯ ಉತ್ಪನ್ನ" (GNP-Gross National Product) ಅಥವಾ ರಾಷ್ಟ್ರೀಯ ಲಾಭಾಂಶ ಎಂದು ಕರೆಯಲಾಗುತ್ತದೆ. ಹೀಗೆ ರಾಷ್ಟ್ರೀಯ ಆದಾಯವು ಒಂದು ದೇಶದ ಒಟ್ಟು ಆದಾಯವನ್ನು ತಿಳಿಸುತ್ತದೆ.

ಸರಕುಗಳು ಎಂಬುದು ಉತ್ಪಾದಿಸಿದ ಕಾರುಗಳು, ದ್ವಿಚಕ್ರ ವಾಹನಗಳು, ಹಡಗುಗಳು, ರೈಲು ಎಂಜಿನ್‌ಗಳು ಲೇಖನಿ ಸಾಮಾಗ್ರಿಗಳು, ಅಕ್ಕಿ, ಗೋಧಿ ಮತ್ತು ಅಡಿಗೆ ಎಣ್ಣೆ ಮುಂತಾದವುಗಳಾಗಿವೆ.

ಸೇವೆಗಳು ಎಂದರೆ ವೈದ್ಯರು, ಅಭಿಯಂತರರು, ಶಿಕ್ಷಕರು ಮತ್ತು ತನಿಖಾಧಿಕಾರಿಗಳು ಮುಂತಾದವರುಗಳ ಸೇವೆಗಳನ್ನು ಒಳಗೊಂಡಿದೆ.

ಮೂಲಭೂತ ಅಭಿಪ್ರಾಯಗಳು

1. ಒಟ್ಟು ರಾಷ್ಟ್ರೀಯ ಉತ್ಪನ್ನ (GNP)

(Gross National Product) ಒಟ್ಟು ರಾಷ್ಟ್ರೀಯ ಉತ್ಪನ್ನವು ಉತ್ಪಾದಿಸಲ್ಪಟ್ಟ ಉತ್ಪನ್ನಗಳ ಒಟ್ಟು ಮೌಲ್ಯ ಹಾಗೂ ಒಂದು ನಿರ್ದಿಷ್ಟ ವರ್ಷದಲ್ಲಿ ಒಂದು ರಾಷ್ಟ್ರವು ಪಡೆದುಕೊಳ್ಳುವ ಆದಾಯವಾಗಿದೆ. ಇದು ವಿದೇಶಿ ಬಂಡವಾಳ ಹೂಡಿಕೆಯಿಂದ ಬರುವ ಲಾಭವನ್ನು ಒಳಗೊಂಡಿರುತ್ತದೆ.

2. ಒಟ್ಟು ದೇಶೀಯ ಉತ್ಪನ್ನ (GDP)

(Gross Domestice Product) ಒಟ್ಟು ದೇಶೀಯ ಉತ್ಪನ್ನವು ಒಂದು ದೇಶದ ಭೌಗೋಳಿಕ ಎಲ್ಲೆಯೊಳಗೆ ಉತ್ಪಾದನಾಂಗಗಳಿಂದ ಉತ್ಪಾದಿಸುವ ಉತ್ಪನ್ನಗಳು (ಸರಕು ಮತ್ತು ಸೇವೆಗಳು) ಒಟ್ಟು ಮೌಲ್ಯವಾಗಿದೆ. ವಿದೇಶಿ ಬಂಡವಾಳದ ಮೂಲಕ ದೊರೆಯುವ ಲಾಭವನ್ನು ಸೇರಿಸಿದ ಮೊತ್ತವು ದೇಶದ ಉತ್ಪತ್ತಿಯಾಗುತ್ತದೆ.

ಉತ್ಪಾದನಾ ಅಂಶಗಳು ಎಂಬುವು ಭೂಮಿ, ಬಂಡವಾಳ ಮತ್ತು ಕೈಗಾರಿಕಾರಚನೆಯನ್ನು ತಿಳಿಸುತ್ತದೆ.

3. ನಿವ್ವಳ ರಾಷ್ಟ್ರೀಯ ಉತ್ಪನ್ನ (NNP)

(Net National Product) ನಿವ್ವಳ ರಾಷ್ಟ್ರೀಯ ಉತ್ಪನ್ನವು ಸವಕಳಿ ವೆಚ್ಚವನ್ನು ಕಳೆದಾಗ ಬರುವ ಮೌಲ್ಯವಾಗಿದೆ ನಾವು ಒಟ್ಟು ರಾಷ್ಟ್ರೀಯ ಉತ್ಪನ್ನದಿಂದ **(GDP)** ಸವಕಳಿ ಮೌಲ್ಯವನ್ನು ಕಳೆಯುವುದರ ಮೂಲಕ ನಿವ್ವಳ ರಾಷ್ಟ್ರೀಯ ಉತ್ಪನ್ನವನ್ನು ಪಡೆದುಕೊಳ್ಳಬಹುದು.

ನಿವ್ವಳ ರಾಷ್ಟ್ರೀಯ ಉತ್ಪನ್ನ = ಒಟ್ಟು ರಾಷ್ಟ್ರೀಯ ಉತ್ಪನ್ನ – ಸವಕಳಿ ವೆಚ್ಚ

ಸವಕಳಿ ಮೌಲ್ಯ:

ಸವೆತದ ಕಾರಣದಿಂದ ಬಂಡವಾಳ ಸಂಪನ್ಮೂಲಗಳ (ಯಂತ್ರಗಳು) ಮೌಲ್ಯ ಕಡಿಮೆಯಾಗುವುದನ್ನು ಸವಕಳಿ ಎನ್ನಬಹುದು.

4. ನಿವ್ವಳ ದೇಶೀಯ ಉತ್ಪನ್ನ – NDP

(Net Domestic Product) ನಿವ್ವಳ ದೇಶೀಯ ಉತ್ಪನ್ನವು ಒಟ್ಟು ದೇಶೀಯ ಉತ್ಪನ್ನದ ಒಂದು ಭಾಗವಾಗಿದೆ. ನಿವ್ವಳ ದೇಶೀಯ ಉತ್ಪನ್ನವನ್ನು ಒಟ್ಟು ದೇಶೀಯ ಸವಕಳಿ ವೆಚ್ಚವನ್ನು ಕಳೆಯುವುದರ ಮೂಲಕ ಪಡೆದುಕೊಳ್ಳಬಹುದು.

ನಿವ್ವಳ ದೇಶೀಯ ಉತ್ಪನ್ನ = ಒಟ್ಟು ದೇಶದ ಉತ್ಪನ್ನ – ಸವಕಳಿ ವೆಚ್ಚ.

5. ತಲಾ ಆದಾಯ: (Per capita Income)

ತಲಾ ಆದಾಯ ಅಥವಾ ತಲಾ ಉತ್ಪನ್ನವು ಒಂದು ರಾಷ್ಟ್ರದ ಜನರ ಜೀವನಮಟ್ಟವನ್ನು ತೋರಿಸುವ ಸೂಚಕವಾಗಿದೆ. ಇದನ್ನು ಒಂದು ರಾಷ್ಟ್ರದ ಜನಸಂಖ್ಯೆಯಿಂದ ರಾಷ್ಟ್ರೀಯ ಆದಾಯವನ್ನು ಭಾಗಿಸುವುದರ ಮೂಲಕ ಪಡೆದುಕೊಳ್ಳಬಹುದು.

$$\text{ತಲಾ ಆದಾಯ} = \frac{\text{ಒಟ್ಟು ದೇಶೀಯ ಉತ್ಪನ್ನ}}{\text{ದೇಶದ ಜನಸಂಖ್ಯೆ}}$$

ದೇಶಗಳ ತಲಾ ಆದಾಯದ ಹೋಲಿಕೆ

ದೇಶದ ಹೆಸರು	ತಲಾ ಆದಾಯ (ಅಮೆರಿಕಾ ಡಾಲರ್‌ಗಳಲ್ಲಿ)
ಜಪಾನ್	47490
ಅಮೆರಿಕಾ ಸಂಯುಕ್ತ ಸಂಸ್ಥಾನ	46040
ಇಂಗ್ಲೆಂಡ್	42740
ಜರ್ಮನಿ	38860
ಫ್ರಾನ್ಸ್	38500
ಇಟಲಿ	33540
ಬ್ರೆಜಿಲ್	4870
ಚೈನಾ	2360
ಶ್ರೀಲಂಕಾ	1540
ಭಾರತ	950
ಪಾಕಿಸ್ತಾನ	870
ಬಾಂಗ್ಲಾದೇಶ	470

ಮೂಲ : ವಿಶ್ವಬ್ಯಾಂಕು ವರದಿ

ರಾಷ್ಟ್ರೀಯ ಆದಾಯವನ್ನು ಅಂದಾಜು ಮಾಡುವ ವಿಧಾನಗಳು

ಒಂದು ರಾಷ್ಟ್ರದ ರಾಷ್ಟ್ರೀಯ ಆದಾಯವನ್ನು ಈ ಕೆಳಗಿನ ಮೂರು ವಿಧಾನಗಳ ಮೂಲಕ ಅಂದಾಜು ಮಾಡಬಹುದು.

1. ಉತ್ಪನ್ನ ವಿಧಾನ
2. ಆದಾಯ ವಿಧಾನ
3. ವೆಚ್ಚದ ವಿಧಾನ

1. ಉತ್ಪನ್ನ ವಿಧಾನ

ಈ ವಿಧಾನದಲ್ಲಿ ಒಂದು ರಾಷ್ಟ್ರದಲ್ಲಿ ಉತ್ಪಾದಿಸಲಾಗುವ ಎಲ್ಲಾ ಸರಕು ಮತ್ತು ಸೇವೆಗಳ ಒಟ್ಟು ಮೌಲ್ಯವನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಾಗುತ್ತದೆ.

2. ಆದಾಯ ವಿಧಾನ

ಈ ವಿಧಾನದಲ್ಲಿ ದೇಶದ ಎಲ್ಲಾ ಜನರು ಪಡೆದುಕೊಳ್ಳುವ ಆದಾಯ ಮತ್ತು ಪ್ರತಿ ಫಲಗಳನ್ನು ಲೆಕ್ಕ ಹಾಕಲಾಗುತ್ತದೆ.

3. ವೆಚ್ಚದ ವಿಧಾನ

ಈ ವಿಧಾನದಲ್ಲಿ ಎಲ್ಲಾ ಜನರು ಅನುಭೋಗ, ಉಳಿತಾಯ ಹಾಗೂ ಹೂಡಿಕೆಗಳ ಮೇಲೆ ಮಾಡುವ ವೆಚ್ಚವನ್ನು ಒಟ್ಟುಗೂಡಿಸಲಾಗುತ್ತದೆ.

ಸಾಮಾನ್ಯವಾಗಿ ಭಾರತದಲ್ಲಿ ರಾಷ್ಟ್ರೀಯ ಆದಾಯವನ್ನು ಅಂದಾಜಿಸಲು ಉತ್ಪನ್ನ ಹಾಗೂ ಆದಾಯ ವಿಧಾನವನ್ನು ಬಳಸಲಾಗುತ್ತದೆ.

ರಾಷ್ಟ್ರೀಯ ಆದಾಯವನ್ನು ಅಂದಾಜಿಸುವಲ್ಲಿನ ತೊಂದರೆಗಳು.

1. ಕಪ್ಪು ಹಣ

ಲೆಕ್ಕಕ್ಕೆ ಸೇರದಿರುವ ಹಣವೇ ಕಪ್ಪು ಹಣವಾಗಿದೆ. ಅಂದರೆ ಕಾನೂನು ಬಾಹಿರ ಚಟುವಟಿಕೆಗಳು, ವ್ಯಾಪಾರ ಹಾಗೂ ಭ್ರಷ್ಟಾಚಾರದ ಮೂಲಕ ಗಳಿಸುವ ಹಣವೇ ಕಪ್ಪು ಹಣವಾಗಿದೆ. ಈ

ಕಪ್ಪು ಹಣವು ಅರ್ಥ ವ್ಯವಸ್ಥೆಯನ್ನು ಬಾಧಿಸುವಂತೆಯೇ ಸಮಾಜವನ್ನೂ ಬಾಧಿಸುತ್ತದೆ.

2. ಹಣ ರಹಿತ ಅರ್ಥ ವ್ಯವಸ್ಥೆ

ಬಹುತೇಕ ಗ್ರಾಮೀಣ ಪ್ರದೇಶಗಳಲ್ಲಿ ಬಹುತೇಕ ವಿನಿಮಯ ಕಾರ್ಯವು ಸಾಟಿ ಪದ್ಧತಿಯ ಮೂಲಕ ನಡೆಯುತ್ತಿರುತ್ತದೆ. ಅವುಗಳನ್ನು ಹಣರಹಿತ ಅರ್ಥವ್ಯವಸ್ಥೆ ಎನ್ನಲಾಗುತ್ತದೆ. ಈ ರೀತಿಯ ಹಣರಹಿತ ಅರ್ಥ ವ್ಯವಸ್ಥೆಯು ರಾಷ್ಟ್ರೀಯ ಆದಾಯದ ಅಂದಾಜನ್ನು ನೈಜತೆಗಿಂತ ಕಡಿಮೆ ಮಟ್ಟದಲ್ಲಿ ಸೂಚಿಸುತ್ತದೆ.

3. ದ್ವಿಎಣಿಕೆ

ರಾಷ್ಟ್ರೀಯ ಆದಾಯವನ್ನು ಲೆಕ್ಕ ಹಾಕುವಲ್ಲಿ ದ್ವಿ ಎಣಿಕೆ ಒಂದು ತೊಡಕಾಗಿದೆ. ದ್ವಿಎಣಿಕೆ ಸಮಸ್ಯೆಯನ್ನು ನಿವಾರಿಸಲು ಮೊದಲು ಕಚ್ಚಾ ಸರಕುಗಳನ್ನು ನಂತರ ಸಿದ್ದ ವಸ್ತುಗಳನ್ನು ಗಣನೆಗೆ ತೆಗೆದುಕೊಳ್ಳಬೇಕು.

4. ಅವೈಜ್ಞಾನಿಕ ಹಾಗೂ ಅವಾಸ್ತವಿಕ ಅಂಕಿ ಅಂಶಗಳು

ಕೃಷಿವಲಯದಿಂದ ಸಂಗ್ರಹಿಸುವ ಅಂಕಿ ಅಂಶಗಳು ವಾಸ್ತವಾಂಶಕ್ಕೆ ದೂರವಾದವುಗಳಾದ್ದರಿಂದ ರಾಷ್ಟ್ರೀಯ ಆದಾಯದ ಅಂದಾಜು ಸಹಾ ಅವೈಜ್ಞಾನಿಕವಾಗಿರುತ್ತದೆ.

5. ಗೃಹ ಕೃತ್ಯ ಸೇವೆಗಳು

ರಾಷ್ಟ್ರೀಯ ಆದಾಯದ ವಿಶ್ಲೇಷಣೆಯು ವೈಯಕ್ತಿಕ ಕಾರ್ಯ, ಗೃಹ ಕೆಲಸ ಹಾಗೂ ಸಾಮಾಜಿಕ ಸೇವೆಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ, ಮಹಿಳೆಯರು ಮನೆಯಲ್ಲೇ ನಿರ್ವಹಿಸುವ ಮೌಲ್ಯಯುತ ಗೃಹ ಕೆಲಸದ ಸೇವೆಗಳು ರಾಷ್ಟ್ರೀಯ ಆದಾಯದ ಲೆಕ್ಕಾಚಾರದಲ್ಲಿ ಸೇರಿಕೊಳ್ಳುವುದಿಲ್ಲ.

6. ಸಾಮಾಜಿಕ ಸೇವೆಗಳು

ಇದು ಸ್ವಯಂ ಸೇವಕರು ಹಾಗೂ ಪ್ರತಿಫಲಾಪೇಕ್ಷೆಯಿಲ್ಲದ ಸಾಮಾಜಿಕ ಸೇವೆಗಳು ಉಪೇಕ್ಷಿಸುತ್ತದೆ. ಉದಾಹರಣೆಗೆ – ಮದರ್ ತೆರೆಸಾರವರ ನಿರ್ಗತಿಕರು ಹಾಗೂ ರೋಗಿಗಳಿಗೆ ಮಾಡಿದ ಅದ್ಭುತ ಸೇವೆಯನ್ನು ರಾಷ್ಟ್ರೀಯ ಆದಾಯದ ಲೆಕ್ಕಾಚಾರದಲ್ಲಿ ಸೇರಿಸಿಕೊಂಡಿಲ್ಲ.

ರಾಷ್ಟ್ರೀಯ ಆದಾಯದ ಅಧ್ಯಯನದ ಅವಶ್ಯಕತೆ

1. ಅರ್ಥ ವ್ಯವಸ್ಥೆಯ ಗಾತ್ರ ಹಾಗೂ ರಾಷ್ಟ್ರಗಳ ಆರ್ಥಿಕ ಪ್ರಗತಿಯ ಮಟ್ಟವನ್ನು ಅಂದಾಜಿಸಲು.
2. ಸರಕು ಮತ್ತು ಸೇವೆಗಳ ಉತ್ಪಾದನೆಯನ್ನು ಅಂದಾಜಿಸಲು,
3. ನಮ್ಮ ರಾಷ್ಟ್ರದ ಆರ್ಥಿಕ ಬೆಳವಣಿಗೆಯ ಗತಿಯನ್ನು ಹಿಂದಿನ ವರ್ಷದ ಆರ್ಥಿಕ ಬೆಳವಣಿಗೆಗೆ ಹಾಗೂ ಇತರ ರಾಷ್ಟ್ರಗಳ ಆರ್ಥಿಕ ಬೆಳವಣಿಗೆಗೆ ಹೋಲಿಸಿ ನೋಡಲು,
4. ರಾಷ್ಟ್ರೀಯ ಆದಾಯಕ್ಕೆ ಪ್ರಾಥಮಿಕ, ದ್ವೀತಿಯ ಹಾಗೂ ತೃತೀಯ ವಲಯಗಳ ಕೊಡುಗೆಯನ್ನು ತಿಳಿಯಲು,
5. ಆರ್ಥಿಕ ಬೆಳವಣಿಗೆಯನ್ನು ಹೆಚ್ಚಿಸಲು ಸರ್ಕಾರ ಅಭಿವೃದ್ಧಿ ಯೋಜನೆ ಹಾಗೂ ನೀತಿಗಳನ್ನು ರಚಿಸಲು.

ಆರ್ಥಿಕ ಚಟುವಟಿಕೆಗಳನ್ನು ಪ್ರಾಥಮಿಕ, ದ್ವಿತೀಯ, ಹಾಗೂ ತೃತೀಯ ವಲಯಗಳೆಂದು ಮೂರು ವಲಯಗಳಾಗಿ ವರ್ಗೀಕರಿಸಿಕೊಳ್ಳಲಾಗಿದೆ.

ಪ್ರಾಥಮಿಕ ವಲಯವು ಕೃಷಿ, ಅರಣ್ಯ, ಮೀನುಗಾರಿಕೆ, ಗಣಿಗಾರಿಕೆ, ಹೈನುಗಾರಿಕೆ ಮುಂತಾದವುಗಳನ್ನು, ದ್ವಿತೀಯ ವಲಯವು ತಯಾರಿಕಾ ಕೈಗಾರಿಕೆಗಳು, ವಿದ್ಯುಚ್ಛಕ್ತಿ, ಅಡಿಗೆ ಅನಿಲ, ಕುಡಿಯುವ ನೀರುಪೂರೈಕೆ ಹಾಗೂ ನಿರ್ಮಾಣಗಳನ್ನು ಒಳಗೊಂಡಿರುತ್ತದೆ.


ತೃತೀಯ ವಲಯವು (ಸೇವಾ ವಲಯ) ವ್ಯಾಪಾರ, ಹೋಟೆಲ್ ಉದ್ಯಮ, ಸಾರಿಗೆ, ದಾಸ್ತಾನು, ಸಂಪರ್ಕ, ಹಣಕಾಸು, ವಿಮೆ, ರಿಯಲ್ ಎಸ್ಟೇಟ್ ಹಾಗೂ ಸಮಾಜಸೇವೆ ಮುಂತಾದವುಗಳನ್ನು ಒಳಗೊಂಡಿದೆ.

ಭಾರತದ ರಾಷ್ಟ್ರೀಯ ಆದಾಯದ ವಲಯವಾರು ಬೆಳವಣಿಗೆ ದರ (2009)

ವಲಯ	ಶೇಕಡವಾರು
ಪ್ರಾಥಮಿಕ ವಲಯ	15.8
ದ್ವಿತೀಯ ವಲಯ	25.8
ತೃತೀಯ ವಲಯ	58.4

ಮೂಲ: ಕೇಂದ್ರೀಯ ಅಂಕಿ ಅಂಶಗಳ ಸಂಸ್ಥೆ.

ಭಾರತದಲ್ಲಿ ರಾಷ್ಟ್ರೀಯ ಆದಾಯ ಪ್ರವೃತ್ತಿ (ಶೇಕಡವಾರು).



ಮೂಲ: ಕೇಂದ್ರೀಯ ಅಂಕಿ ಅಂಶಗಳ ಸಂಸ್ಥೆ.

ಆರ್ಥಿಕಾಭಿವೃದ್ಧಿಯಲ್ಲಿ ಸರ್ಕಾರದ ಪಾತ್ರ

ಆಧುನಿಕ ಯುಗದಲ್ಲಿ ಸರ್ಕಾರದ ಪಾತ್ರ ಸಂಪೂರ್ಣವಾಗಿ ಬದಲಾಗಿದೆ. ಹಿಂದಿನ ಕಾಲದಲ್ಲಿ ಹಸ್ತಕ್ಷೇಪ ರಹಿತ ನೀತಿಯು (Laissez - faire) ಹೆಚ್ಚು ಪ್ರಚಲಿತದಲ್ಲಿತ್ತು. ಪ್ರಾಚೀನ ಸಾಮ್ರಾಜ್ಯಗಳು ಹೆಚ್ಚು ಕಡಿಮೆ ಪೋಲೀಸ್ ಸಾಮ್ರಾಜ್ಯದಂತೆ (police State) ಕಾನೂನು ಮತ್ತು ಆಜ್ಞೆಜಾರಿಗೊಳಿಸುವ ನ್ಯಾಯ ಪಾಲನೆ ಹಾಗೂ ಬಾಹ್ಯ ಶತ್ರುಗಳಿಂದ ದೇಶವನ್ನು ರಕ್ಷಿಸುವ ಪೋಲೀಸ್ ರಾಜ್ಯವಾಗಿತ್ತು.

ಹಸ್ತಕ್ಷೇಪ ರಹಿತ (Laissez - faire) ಎಂದರೆ ಆರ್ಥಿಕತೆಯಲ್ಲಿ ಸರ್ಕಾರದ ಮಧ್ಯಪ್ರವೇಶಿಸುವಿಕೆ ಇಲ್ಲದಿರುವುದು.

ಆಧುನಿಕ ಯುಗದಲ್ಲಿ ಸರ್ಕಾರದ ಪಾತ್ರ ವಿಸ್ತಾರವಾಗಿದೆ. ಸರ್ಕಾರವು ಜನರ ಆಸೆ ಹಾಗೂ ಅಗತ್ಯಗಳನ್ನು ಪೂರೈಸುವ ಕಲ್ಯಾಣ ರಾಜ್ಯವಾಗಿ ಕಾರ್ಯ ನಿರ್ವಹಿಸುತ್ತದೆ.

ಆಧುನಿಕ ಕಲ್ಯಾಣ ರಾಜ್ಯದ ಕಾರ್ಯಗಳು

1. ರಕ್ಷಣಾ ಕಾರ್ಯಗಳು.

ಒಂದು ರಾಷ್ಟ್ರದಲ್ಲಿ ಶಾಂತಿ ಸುವ್ಯವಸ್ಥೆಯಿದ್ದಾಗ ಮಾತ್ರ ಅದು ಆರ್ಥಿಕಾಭಿವೃದ್ಧಿ ಸಾಧಿಸಲು ಸಾಧ್ಯ. ಹೀಗಾಗಿ ದೇಶದ ಜನರನ್ನೂ ಬಾಹ್ಯ ಶತ್ರುಗಳು ಹಾಗೂ ಆಂತರಿಕ ಅವ್ಯವಸ್ಥೆಗಳಿಂದ ರಕ್ಷಿಸಿ ಕಾನೂನು ಮತ್ತು ಆಜ್ಞೆಯನ್ನು ಪರಿಪಾಲಿಸುವುದು ಸರ್ಕಾರದ ಪ್ರಾಥಮಿಕ ಕಾರ್ಯವಾಗಿದೆ.

2. ಆಡಳಿತಾತ್ಮಕ ಕಾರ್ಯಗಳು

ಪ್ರಜೆಗಳಿಗೋಸ್ಕರ ಮೂರು ಪ್ರಮುಖ ಅಂಗಗಳಾದ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗಗಳನ್ನು ವ್ಯವಸ್ಥೆಗೊಳಿಸುವುದು.

3. ಸಾಮಾಜಿಕ ಭದ್ರತಾ ಕಾರ್ಯಗಳು

ಸರ್ಕಾರವು ಬಡವರು, ಅಂಗವಿಕಲಕರು ಹಾಗೂ ನಿರುದ್ಯೋಗಿಗಳಿಗೆ, ನಿವಾರಣಾ ಭತ್ಯೆಗಳನ್ನು ನೀಡುವುದರ ಮೂಲಕ ಸಾಮಾಜಿಕ ಭದ್ರತೆಯನ್ನು ಒದಗಿಸುತ್ತದೆ.

4. ಆರ್ಥಿಕ ಕಾರ್ಯಗಳು

ಸರ್ಕಾರವು ಕೃಷಿ, ವ್ಯಾಪಾರ ಹಾಗೂ ಕೈಗಾರಿಕೆಗಳ ಅಭಿವೃದ್ಧಿಗಾಗಿ ಹಲವು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ.

ಹೀಗಾಗಿ ಸರ್ಕಾರವು ಆರ್ಥಿಕ ಅಭಿವೃದ್ಧಿಯನ್ನು ಹೆಚ್ಚಿಸಲು ಹಲವು ಕಾರ್ಯಗಳನ್ನು ಕೈಗೊಳ್ಳುತ್ತಾ ಬಂದಿದೆ.

ಅಭ್ಯಾಸ

ಅ). ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1. ರಾಷ್ಟ್ರೀಯ ಆದಾಯದ ಮತ್ತೊಂದು ಹೆಸರು

   ಅ) ನೈಜ ಆದಾಯ ಆ) ಹಣರೂಪಿ ಆದಾಯ

   ಇ) ನಾಮ ಮಾತ್ರ ಆದಾಯ ಈ) ಒಟ್ಟು ರಾಷ್ಟ್ರೀಯ ಉತ್ಪನ್ನ.

2. ರಾಷ್ಟ್ರೀಯ ಆದಾಯವನ್ನು ಲೆಕ್ಕ ಹಾಕುವ ವಿಧಾನಗಳು

   ಅ) 2 ವಿಧಾನಗಳು ಆ) 3 ವಿಧಾನಗಳು

   ಇ) 4 ವಿಧಾನಗಳು ಈ) 5ವಿಧಾನಗಳು.

3. ನಿವ್ವಳ ರಾಷ್ಟ್ರೀಯ ಉತ್ಪನ್ನ.

   ಅ) ಒಟ್ಟು ರಾಷ್ಟ್ರೀಯ ಉತ್ಪನ್ನದಿಂದ ಸವಕಳಿ ಮೌಲ್ಯವನ್ನು ಕಳೆದಾಗ ಬರುವ ಮೌಲ್ಯ

   ಆ) ನಿವ್ವಳ ದೇಶೀಯ ಉತ್ಪನ್ನದಿಂದ ಸವಕಳಿ ವೆಚ್ಚ ಮೌಲ್ಯವನ್ನು ಕಳೆದಾಗ ಬರುವ ಮೌಲ್ಯ

   ಇ) ತಲಾ ಆದಾಯದಿಂದ ಸವಕಳಿ ಮೌಲ್ಯವನ್ನು ಕಳೆದಾಗ ಬರುವ ಮೌಲ್ಯ.

   ಈ) ಒಟ್ಟು ದೇಶೀಯ ಉತ್ಪನ್ನದಿಂದ ಸವಕಳಿ ಮೌಲ್ಯವನ್ನು ಕಳೆದಾಗ ಬರುವ ಮೌಲ್ಯ.

4. ಭಾರತದ ತಲಾ ಆದಾಯವು

   ಅ) 220 ಡಾಲರ್‌ಗಳು ಆ) 950 ಡಾಲರ್‌ಗಳು

   ಇ) 2930 ಡಾಲರ್‌ಗಳು ಈ) 600 ಡಾಲರ್‌ಗಳು.

5. ಪ್ರಾಥಮಿಕ ವಲಯ ಎಂಬುದು

   ಅ) ವ್ಯಾಪಾರ ಆ) ನಿರ್ಮಾಣ

   ಇ) ಕೃಷಿ ಈ) ದೂರ ಸಂಪರ್ಕ

6. ರಾಷ್ಟ್ರೀಯ ಆದಾಯದ ಮೌಲ್ಯವು

   ಅ)ಹಣದ ಒಟ್ಟು ಮೌಲ್ಯ ಆ) ಆಹಾರ ಬೆಳೆಗಳ ಒಟ್ಟು ಮೌಲ್ಯ

   ಇ)ಕೈಗಾರಿಕೆ ಸರಕುಗಳ ಒಟ್ಟು ಮೌಲ್ಯ ಈ) ಸರಕು ಮತು ಸೇವೆಗಳ ಒಟ್ಟು ಮೌಲ್ಯ.

7. ರಾಷ್ಟ್ರೀಯ ಆದಾಯವನ್ನು ವೆಚ್ಚ ವಿಧಾನದ ಮೂಲಕ ಅಂದಾಜಿಸುವುದು.

ಅ) ಉತ್ಪನ್ನದ ಆಧಾರದ ಮೇಲೆ ಆ) ಆದಾಯದ ಆಧಾರದ ಮೇಲೆ

ಇ) ವೆಚ್ಚದ ಆಧಾರದ ಮೇಲೆ ಈ) ಉಳಿತಾಯದ ಆಧಾರದ ಮೇಲೆ

8. ಆದಾಯದ ವಿಧಾನದ ರಾಷ್ಟ್ರೀಯ ಆದಾಯ ಎಂಬುದು.

ಅ) ವೆಚ್ಚದ ಆಧಾರದ ಮೇಲೆ ಆ) ಆದಾಯದ ಆಧಾರದ ಮೇಲೆ

ಇ) ಉಳಿತಾಯದ ಆಧಾರದ ಮೇಲೆ ಈ) ಹೂಡಿಕೆ ಆಧಾರದ ಮೇಲೆ

9. ತಲಾಆದಾಯವು ಸೂಚಿಸುವುದು

ಅ) ಜನರ ಶ್ರೀಮಂತಿಕೆ ಆ) ಜನರ ಬಡತನ

ಇ) ಜನರ ಜೀವನ ಮಟ್ಟ ಈ) ಜನರ ಸಾಕ್ಷರತೆ.

10. ಭಾರತದಲ್ಲಿ ರಾಷ್ಟ್ರೀಯ ವರಮಾನದಲ್ಲಿ ಪ್ರಾಥಮಿಕ ವಲಯದ ಪಾಲು

ಅ) 15.8% ಆ) 25.8% ಇ) 58.4% ಈ) 12.8%

ಆ) ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. ರಾಷ್ಟ್ರೀಯ ಆದಾಯವನ್ನು ವ್ಯಾಖ್ಯಾನಿಸಿ.
2. ನಿವ್ವಳ ರಾಷ್ಟ್ರೀಯ ಉತ್ಪನ್ನವನ್ನು ಹೇಗೆ ಪಡೆದುಕೊಳ್ಳಬಹುದು?
3. ಆದಾಯ ವಿಧಾನದ ಬಗ್ಗೆ ಟಿಪ್ಪಣಿ ಬರೆಯಿರಿ?
4. ತಲಾ ಆದಾಯ ಎಂದರೇನು?
5. ರಾಷ್ಟ್ರೀಯ ಆದಾಯದ ಅಧ್ಯಯನದ ಯಾವುದಾದರೂ 2 ಅಗತ್ಯತೆಗಳನ್ನು ಬರೆಯಿರಿ.
6. ಸೇವಾ ವಲಯಕ್ಕೆ (ತೃತೀಯ ವಲಯ) ಉದಾಹರಣೆ ಕೊಡಿ.
7. ಹಸ್ತಕ್ಷೇಪ ರಹಿತ ನೀತಿ ಎಂದರೇನು?
8. ಆಧುನಿಕ ಕಲ್ಯಾಣ ರಾಜ್ಯದ ರಕ್ಷಣಾ ಕಾರ್ಯದ ಬಗ್ಗೆ ಟಿಪ್ಪಣಿ ಬರೆಯಿರಿ.
9. ಒಟ್ಟು ದೇಶೀಯ ಉತ್ಪನ್ನವನ್ನು ವ್ಯಾಖ್ಯಾನಿಸಿ.
10. ನಿವ್ವಳ ದೇಶೀಯ ಉತ್ಪನ್ನ ಎಂದರೇನು?

ಇ) ಈ ಕೆಳಕಂಡ ಪ್ರಶ್ನೆಗಳಿಗೆ ಒಂದು ಪುಟದಲ್ಲಿ ಉತ್ತರಿಸಿ.

1. ರಾಷ್ಟ್ರೀಯ ಆದಾಯದ ಎರಡು ಪರಿಭಾವನೆಗಳನ್ನು ವಿವರಿಸಿ.
2. ರಾಷ್ಟ್ರೀಯ ಆದಾಯದ ಅಧ್ಯಯನದ ಅಗತ್ಯತೆಯನ್ನು ವಿವರಿಸಿ.
3. ರಾಷ್ಟ್ರೀಯ ಆದಾಯವನ್ನು ಅಂದಾಜಿಸುವ ವಿಧಾನಗಳನ್ನು ವಿವರಿಸಿ.
4. ಆಧುನಿಕ ಕಲ್ಯಾಣ ರಾಜ್ಯದ ಕಾರ್ಯಗಳನ್ನು ಬರೆಯಿರಿ.

ಈ) ಚಟುವಟಿಕೆ:

ತಮಿಳುನಾಡಿನ ತಲಾ ಆದಾಯವನ್ನು ತಿಳಿದುಕೊಳ್ಳಿರಿ.

2. ಸ್ವಾತಂತ್ರ್ಯಾ ನಂತರದ ಭಾರತದ ಆರ್ಥಿಕತೆ

ಪರಿಚಯ:

ಭಾರತದ ಆರ್ಥಿಕತೆಯ ಲಕ್ಷಣಗಳನ್ನು, ಬ್ರಿಟಿಷರ ಆಡಳಿತ ಕಾಲದ ಹಾಗೂ ಸ್ವಾತಂತ್ರ್ಯಾನಂತರದ ಭಾರತದ ಆರ್ಥಿಕ ಪರಿಸ್ಥಿತಿಯನ್ನು ತಿಳಿದುಕೊಳ್ಳುವುದು.

ಬ್ರಿಟಿಷ್ ಆಡಳಿತದ ಅವಧಿಯಲ್ಲಿ ಭಾರತದ ಆರ್ಥಿಕತೆ

ಗ್ರಾಮೀಣ ಅರ್ಥ ವ್ಯವಸ್ಥೆಯ ಆಧಾರವನ್ನು ಹೊಂದಿತ್ತು. ವ್ಯವಸಾಯವು ಮುಖ್ಯ ಕಸುಬಾಗಿದ್ದು ಸುಮಾರು ಶೇಕಡ 70 ರಷ್ಟು ಜನರು ಈ ಉದ್ಯೋಗದಲ್ಲಿ ತೊಡಗಿಸಿ ಕೊಂಡಿದ್ದರು. ಪ್ರತಿಯೊಂದು ಗ್ರಾಮವು ತಮಗೆ ಅಗತ್ಯವಾದ ವಸ್ತುಗಳನ್ನು ತಾವೇ ಉತ್ಪಾದನೆ ಮಾಡಿ ಕೊಂಡವು. ವಸ್ತುಗಳೆಲ್ಲವೂ ಸ್ಥಳೀಯ ಮಾರುಕಟ್ಟೆಯಲ್ಲಿಯೇ ಮಾರಾಟವಾದವು. ಹೊರ ಮಾರುಕಟ್ಟೆಗಳಿಗೆ ವಸ್ತುಗಳನ್ನು ಮಾರಾಟ ಮಾಡಲು ಕಳುಹಿಸಲಿಲ್ಲ. ಪಕ್ಕದ ಗ್ರಾಮಗಳೊಡನೆ ವ್ಯಾಪಾರ ಸಂಬಂಧವನ್ನು ಹೊಂದಿರಲಿಲ್ಲ.

ಭಾರತದಲ್ಲಿ ವಾಣಿಜ್ಯ ಮತ್ತು ಕೈಗಾರಿಕೆಗಳು ನಗರ ಪ್ರದೇಶಗಳಲ್ಲಿ ಕೇಂದ್ರೀಕೃತಗೊಂಡಿತ್ತು. ಭಾರತದಲ್ಲಿ ಮುಖ್ಯ ಕಸುಬಾಗಿ ಬಟ್ಟೆ ಉದ್ಯಮವು ಕಂಡು ಬಂದಿತು. ಕರಕುಶಲ ವಸ್ತುಗಳ ಉತ್ಪತ್ತಿಯಲ್ಲಿ ಭಾರತವು ಉತ್ತಮವಾಗಿ ರೂಪುಗೊಂಡಿತು.

ಕ್ಯಾಲಿಕೋ ಬಟ್ಟೆಗಳ ಉತ್ಪಾದನೆಯಲ್ಲಿ ಬಂಗಾಳವೂ, ರೇಷ್ಮೆಗೆ ಬನಾರಸ್, ಜವಳಿ ಉದ್ಯಮದಲ್ಲಿ ತಮಿಳುನಾಡು, ಶಾಲುಗಳನ್ನು ತಯಾರಿಸುವುದರಲ್ಲಿ ಕಾಶ್ಮೀರವೂ, ಮರದಿಂದ ತಯಾರಿಸುವ ವಸ್ತುಗಳಿಗೆ ಲೂಧಿಯಾನವೂ ಪ್ರಸಿದ್ಧಿ ಪಡೆದಿದ್ದವು. ಬ್ರಿಟಿಷರು ಭಾರತದಲ್ಲಿ ಆಡಳಿತ ನಡೆಸುವಾಗ ಗ್ರಾಮೀಣ ಆರ್ಥಿಕತೆಯು ಸಂಕಷ್ಟವನ್ನು ಅನುಭವಿಸಿತು. ಇಂಗ್ಲೆಂಡಿನಲ್ಲಿ ಕೈಗಾರಿಕಾ ಕ್ರಾಂತಿಯಿಂದ ಇಂಗ್ಲೆಂಡಿನ ವಾಣಿಜ್ಯ ಮತ್ತು ಆರ್ಥಿಕ ಒಳಿತಿಗಾಗಿ ಬಳಸಿ ಕೊಳ್ಳುವುದರೊಂದಿಗೆ ಭಾರತವು ಇಂಗ್ಲೆಂಡಿನ ಕಚ್ಚಾವಸ್ತುಗಳ ಬೇಡಿಕೆಯನ್ನು ಪೂರೈಸುವ ಸಂಸ್ಥೆಯಾಗಿ ಪರಿಣಮಿಸಿತು.

ಬ್ರಿಟಿಷರ ಆಡಳಿತದಿಂದ ಈ ಕೆಳಕಂಡ ಮುಖ್ಯ ಪರಿಣಾಮಗಳು ಉಂಟಾದವು.

1. ಗ್ರಾಮೀಣ ಪ್ರದೇಶದ ಆರ್ಥಿಕತೆಯ ನಾಶ.
2. ಭಾರತದ ಕರಕುಶಲ ವಸ್ತುಗಳ ಜನಪ್ರಿಯತೆಗೆ ಧಕ್ಕೆ.
3. ಹೊಸ ಭೂಪದ್ಧತಿ ಪರಿಚಯ.

ಹೀಗೆ ಬ್ರಿಟಿಷ್ ಸರಕಾರವು ಭಾರತದ ಸ್ವಾಭಾವಿಕ ಸಂಪನ್ಮೂಲಗಳನ್ನು ಇಂಗ್ಲೆಂಡಿನ ಕೈಗಾರಿಕಾಭಿವೃದ್ಧಿಗೆ ಬಳಸಿ ಕೊಂಡಿದ್ದರೂ, ಬ್ರಿಟಿಷರ ಆಡಳಿತವು ಸಮಗ್ರ ಭಾರತದ ಉದಯಕ್ಕೆ ಕಾರಣವಾಯಿತು.

ಸ್ವಾತಂತ್ರ್ಯಾ ನಂತರದ ಭಾರತದ ಆರ್ಥಿಕತೆ.

ಸ್ವಾತಂತ್ರ್ಯಾ ನಂತರ ಭಾರತದ ಆರ್ಥಿಕತೆಯನ್ನು ಅಭಿವೃದ್ಧಿಪಡಿಸುವುದರಲ್ಲಿ ರಾಷ್ಟ್ರ ನಾಯಕರು, ಯೋಜನಾ ಪಂಡಿತರುಗಳು ಮುಖ್ಯ ಗುರಿಯನ್ನು ಹೊಂದಿದ್ದರು. ಮಾಜಿ ಪ್ರಧಾನಮಂತ್ರಿ ಜವಹರಲಾಲ್ ನೆಹರು ಗ್ರಾಮೀಣ ಆರ್ಥಿಕತೆಯನ್ನು ಬಲಪಡಿಸಲು ಆಶಿಸಿದರು. ಇದರಿಂದ ವ್ಯವಸಾಯ, ನೀರಾವರಿ ಮತ್ತು ವಿದ್ಯುತ್ ಉತ್ಪಾದನೆ ಯೋಜನೆಗಳಿಗೆ ಆದ್ಯತೆ ನೀಡಿದರು. ಶೀಘ್ರ ಆರ್ಥಿಕ ಬೆಳವಣಿಗೆಯನ್ನು ಹೊಂದಲು ಸಾರ್ವಜನಿಕ ಕ್ಷೇತ್ರ ಮತ್ತು ಖಾಸಗಿ ಕ್ಷೇತ್ರಗಳು ಒಗ್ಗೂಡಿ ಕಾರ್ಯ ನಿರ್ವಹಿಸಲು ಮಿಶ್ರ ಆರ್ಥಿಕತೆಯನ್ನು ಜಾರಿಗೊಳಿಸಲು ನೆಹರು ಬಯಸಿದರು.

ಆದ್ದರಿಂದ ಶೀಘ್ರ ಆರ್ಥಿಕಾಭಿವೃದ್ಧಿಗಾಗಿ ಪಂಚವಾರ್ಷಿಕ ಯೋಜನೆಗಳು ಸೂಕ್ತವಾದುದು ಎಂದು ಒತ್ತಿ ಹೇಳಿದರು.

ಪಂಚವಾರ್ಷಿಕ ಯೋಜನೆಗಳು ಹಿಂದಿನ ಸೋವಿಯತ್ ರಷ್ಯಾ ದೇಶದಿಂದ ಪಡೆದ ಪರಿಭಾವನೆಯಾಗಿದೆ. ಸೋವಿಯತ್ ದೇಶದಲ್ಲಿ ಸಪ್ತ ವಾರ್ಷಿಕ ಯೋಜನೆಗಳು ಜಾರಿಯಲ್ಲಿದ್ದವು.

ಭಾರತದಲ್ಲಿ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೊಳಿಸಲು ಭಾರತದ ಯೋಜನಾ ಆಯೋಗವು 1950ರಲ್ಲಿ ರಚಿಸಲ್ಪಟ್ಟಿತು.ಭಾರತದ ಪ್ರಧಾನಮಂತ್ರಿಯು ಯೋಜನಾ ಆಯೋಗದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುವರು. ಯೋಜನಾ ಆಯೋಗದ ಕಾರ್ಯಗಳನ್ನು ಕಾರ್ಯಗತಗೊಳಿಸಲು, ಪೂರ್ಣಾವಧಿಯಲ್ಲಿ ಕಾರ್ಯ ನಿರ್ವಹಿಸಲು ಉಪಾಧ್ಯಕ್ಷರನ್ನು ನೇಮಿಸಲಾಯಿತು.

ಯೋಜನಾ ಆಯೋಗವು ಪ್ರಸ್ತುತ ನೀತಿ ಆಯೋಗ್ (NITI Aayog - National Institution for Transforming India) ಎಂದು ಕರೆಯಲ್ಪಡುತ್ತಿದೆ.

ಭಾರತದ ಪಂಚವಾರ್ಷಿಕ ಯೋಜನೆಗಳ ಮುಖ್ಯ ಉದ್ದೇಶಗಳು

1. ದೇಶದ ಆದಾಯವನ್ನು ಹೆಚ್ಚಿಸುವುದು.
2. ಆದಾಯ ಮತ್ತು ಸಂಪತ್ತಿನಲ್ಲಿರುವ ಅಸಮಾನತೆಯನ್ನು ಕಡಿಮೆಗೊಳಿಸುವುದು.
3. ಬಡತನವನ್ನು ಹೋಗಲಾಡಿಸುವುದು.
4. ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು.
5. ವ್ಯವಸಾಯ ಉತ್ಪಾದನೆ ಮತ್ತು ಕೈಗಾರಿಕಾ ಉತ್ಪಾದನೆಯಲ್ಲಿರುವ ತೊಂದರೆಗಳನ್ನು ಹೋಗಲಾಡಿಸುವುದು.

ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೊಳಿಸಲು ರಾಜ್ಯ ಸರ್ಕಾರಗಳ ಸಹಕಾರವನ್ನು ಬಯಸಿ, ರಾಷ್ಟ್ರೀಯ ಅಭಿವೃದ್ಧಿ ಮಂಡಳಿ (National Development Council) ಯನ್ನು ರಚಿಸಲಾಯಿತು. ಈ ಮಂಡಳಿಯಲ್ಲಿ ರಾಜ್ಯಗಳ ಮುಖ್ಯಮಂತ್ರಿಗಳು ಸದಸ್ಯರಾಗಿ ಕಾರ್ಯ ನಿರ್ವಹಿಸುವರು.

ಭಾರತದಲ್ಲಿ ಇದುವರೆಗೆ 11 ಪಂಚವಾರ್ಷಿಕ ಯೋಜನೆಗಳು ಮುಗಿದಿವೆ. ಹನ್ನೆರಡನೆಯ ಪಂಚವಾರ್ಷಿಕ ಯೋಜನೆಯು ಕಾರ್ಯ ನಿರ್ವಹಿಸುತ್ತಾ ಬಂದಿದೆ.

ಹನ್ನೊಂದನೆಯ ಪಂಚವಾರ್ಷಿಕ ಯೋಜನೆ (2007–2012)

11 ನೇ ಪಂಚವಾರ್ಷಿಕ ಯೋಜನೆಯು ಏಪ್ರಿಲ್ 2007ರಲ್ಲಿ ಪ್ರಾರಂಭವಾಯಿತು. ಈ ಯೋಜನೆಯ ಅವಧಿ 2007ರಿಂದ 2012ರವರೆಗಾಗಿದೆ.

ಹನ್ನೊಂದನೇ ಪಂಚವಾರ್ಷಿಕ ಯೋಜನೆಯ ಗುರಿಗಳು

1. ನೀರಾವರಿ ಸೌಲಭ್ಯ, ಗ್ರಾಮೀಣ ವಿದ್ಯುದ್ಧೀಕರಣ ಮತ್ತು ಗ್ರಾಮೀಣ ರಸ್ತೆಗಳ ನಿರ್ಮಾಣಕ್ಕಾಗಿ ಸರ್ಕಾರದ ಅನುದಾನವನ್ನು ಹೆಚ್ಚಿಸುವುದು.
2. ವಿದ್ಯುತ್ ಮತ್ತು ಗೊಬ್ಬರಗಳಿಗೆ ಮಾನ್ಯ ಕಡಿಮೆಗೊಳಿಸುವುದು.
3. ಕೃಷಿ ಸಂಶೋಧನೆಯನ್ನು ಪ್ರೋತ್ಸಾಹಿಸುವುದು.
4. ಪರಿಸರ ರಕ್ಷಣೆಗೆ ಭರವಸೆ ನೀಡುವುದು.
5. ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು.
6. ಗ್ರಾಮೀಣ ಮೂಲಭೂತ ಅವಶ್ಯಕತೆಗಳನ್ನು ಅಭಿವೃದ್ಧಿಗೊಳಿಸುವುದು.
7. ಬಡತನ ಹೋಗಲಾಡಿಸುವುದು.
8. ಪ್ರಾಥಮಿಕ ಶಾಲೆಗಳಲ್ಲಿ ಶಾಲೆ ಬಿಡುವ ಮಕ್ಕಳ ಪ್ರಮಾಣವನ್ನು ಕಡಿಮೆಗೊಳಿಸುವುದು.

ಕೃಷಿ ಮತ್ತು ಕೈಗಾರಿಕಾ ಬೆಳವಣಿಗೆಯು ದೇಶದ ಆರ್ಥಿಕತೆಯ ಮೂಲ ಅಂಶಗಳು ಆಗಿರುವುದರಿಂದ ಅವುಗಳ ಬಗ್ಗೆ ನಾವು ತಿಳಿದು ಕೊಳ್ಳೋಣ.

ಕೃಷಿ ಅಭಿವೃದ್ಧಿ ಮತ್ತು ಆಹಾರ ಉತ್ಪಾದನೆ

ಕೃಷಿಯು ನಮ್ಮ ದೇಶದ ಆರ್ಥಿಕತೆಯ ಬೆನ್ನೆಲುಬಾಗಿದೆ. ನಮ್ಮ ದೇಶದ ರಾಷ್ಟ್ರೀಯ ಆದಾಯದಲ್ಲಿ ಶೇಕಡ 20 ರಷ್ಟು ಭಾಗವನ್ನು ಕೃಷಿಯಿಂದಲೇ ಪಡೆಯಲಾಗುತ್ತಿದೆ. ಇದರಿಂದ ಸರ್ಕಾರವು ಕೃಷಿ ಅಭಿವೃದ್ಧಿಗಾಗಿ ಹಲವಾರು ಕ್ರಮಗಳನ್ನು ತೆಗೆದುಕೊಂಡಿದೆ.

ಹಸಿರು ಕ್ರಾಂತಿ

ಭಾರತದಲ್ಲಿ 1967ರಲ್ಲಿ ಹಸಿರು ಕ್ರಾಂತಿಯು ಪರಿಚಯಿಸಲ್ಪಟ್ಟಿತು. ಭಾರತೀಯ ಕೃಷಿ ಸಂಶೋಧನಾ



ಹಸಿರು ಕ್ರಾಂತಿಯ ಪರಿಣಾಮ

ಸಂಸ್ಥೆ ಹಸಿರು ಕ್ರಾಂತಿ ಎಂಬ ಕಾರ್ಯ ವಿಧಾನವನ್ನು ಭೂ ಸುಧಾರಣೆ, ಇಳುವರಿ ಕೊಡುವ ಸುಧಾರಿತ ಬಿತ್ತನೆ ಬೀಜಗಳನ್ನು ಉಪಯೋಗಿಸುವುದು ಮತ್ತು ನೀರಾವರಿ

ಸೌಲಭ್ಯವನ್ನು ಅಭಿವೃದ್ಧಿಪಡಿಸುವುದರ ಮೂಲಕ ಪರಿಚಯಿಸಲಾಯಿತು.

ಭೂ ಸುಧಾರಣೆ

ಭೂಮಿಯ ಗರಿಷ್ಠ ಮಟ್ಟ, ಮಧ್ಯವರ್ತಿಗಳ ಆರ್ಥಿಕ ಮತ್ತು ಗೇಣಿ ಪದ್ಧತಿಯನ್ನು ಹೋಗಲಾಡಿಸಲು, ಸುಧಾರಣ ಕಾನುನುಗಳನ್ನು ಸರ್ಕಾರವು ತ್ವರಿತಗತಿಯಲ್ಲಿ ಕಾರ್ಯಗತಗೊಳಿಸಿ ಕೃಷಿ ಅಭಿವೃದ್ಧಿಗೆ ಸಹಾಯಕವಾಯಿತು. ಇದರಿಂದಾಗಿ ಆಚಾರ್ಯ ವಿನೋಭಾ ಭಾವೆಯವರ ಭೂದಾನ ಚಳುವಳಿಯನ್ನು ನೆನೆಪಿಸಿ ಕೊಳ್ಳಬೇಕು.



ಆಚಾರ್ಯ ವಿನೋಭಾ ಭಾವೆ

ಭೂದಾನ ಚಳುವಳಿಯ ಮೂಲಕ ಮಿಲಿಯನ್ ಗಟ್ಟಲೆ ಎಕರೆಯಷ್ಟು ಭೂಮಿಯನ್ನು ಜಮೀನ್ದಾರರುಗಳಿಂದ ದಾನವಾಗಿ ಪಡೆದು ಭೂರಹಿತ ಬಡ ರೈತರುಗಳಿಗೆ ಕೊಡಲ್ಪಟ್ಟಿತು.

ಹೆಚ್ಚು ಇಳುವರಿ ಕೊಡುವ ಬೀಜಗಳಿಂದ ಬೆಳೆಯುವ ಯೋಜನೆ

ಹಸಿರು ಕ್ರಾಂತಿ ಎಂಬುದು ಗೋಧಿ ಮತ್ತು ಅಕ್ಕಿ ಮುಂತಾದ ಬೆಳೆಗಳ ಉತ್ಪಾದನೆಯನ್ನು ಹೆಚ್ಚಿಸುವುದಕ್ಕಾಗಿ ಹೆಚ್ಚು ಇಳುವರಿ ಕೊಡುವ ಸುಧಾರಿತ ಬೀಜಗಳನ್ನು ಬಳಸುವುದಾಗಿದೆ. ಅಲ್ಲದೆ ಹೆಚ್ಚು ಇಳುವರಿ ಕೊಡುವ ಸುಧಾರಿತ ಬೀಜಗಳಿಂದ ಬಿತ್ತನೆ ಮಾಡಲು ನೀರಾವರಿ ಸೌಲಭ್ಯ, ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕ ಔಷಧಿಗಳ ಅವಶ್ಯಕವಾಗಿವೆ.

ಹಸಿರು ಕ್ರಾಂತಿಯ ಪರಿಣಾಮದಿಂದಾಗಿ ಭಾರತದ ಬಹಳಷ್ಟು ರಾಜ್ಯಗಳಲ್ಲಿ ಆಹಾರ ಉತ್ಪಾದನೆ ಅಧಿಕವಾಯಿತು. ಇದರಿಂದ ಭಾರತ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿತು. ಅಧಿಕ ಇಳುವರಿ ಕೊಡುವ ಬಿತ್ತನೆ ಬೀಜಗಳನ್ನು ಬಳಸುವುದಕ್ಕೆ ಭಾರತದ ಕೃಷಿ ಸಂಶೋಧನಾ ಸಂಸ್ಥೆಯು, ಭಾರತ ಕೃಷಿ ವಿಶ್ವವಿದ್ಯಾನಿಲಯವು ಲೂಧಿಯಾನ, ಪಂತ್‌ನಗರ ಮತ್ತು ಕೊಯಮತ್ತೂರು ಇವುಗಳು ಮುಖ್ಯ ಕಾರಣಗಳಾಗಿವೆ.

ಕೈಗಾರಿಕಾ ಕ್ಷೇತ್ರ



ಹಿಂದೂಸ್ತಾನ್ ಹಡಗು ನಿರ್ಮಾಣ ಸಂಸ್ಥೆ – ವಿಶಾಖಿ ಪಟ್ಟಣ

ಕೈಗಾರಿಕಾಭಿವೃದ್ಧಿಗಾಗಿ ಸಾರ್ವಜನಿಕ ಕ್ಷೇತ್ರದಡಿಯಲ್ಲಿ ಹಲವು ಕೈಗಾರಿಕಾ ಸಂಸ್ಥೆಗಳನ್ನು ಪ್ರಾರಂಭಿಸಲಾಯಿತು. ಹಿಂದೂಸ್ತಾನ್ ಹಡಗು ನಿರ್ಮಾಣ ಸಂಸ್ಥೆ, ಸಿಂಧ್ರಿ ರಾಸಾಯನಿಕ ಕೈಗಾರಿಕೆ, ರೈಲು ಬೋಗಿ ಜೋಡಣೆ, ಕೈಗಾರಿಕೆ ಮತ್ತು ಕಾಗದ ಕಾರ್ಖಾನೆಗಳು ಮುಖ್ಯ ಸಾರ್ವಜನಿಕ ಕ್ಷೇತ್ರದ ಕೈಗಾರಿಕಾ ಸಂಸ್ಥೆಗಳಾಗಿವೆ. ಅಲ್ಲದೆ ಬೃಹತ್ ಕೈಗಾರಿಕೆಗಳು, ಯಂತ್ರೋಪಕರಣಗಳ ಕೈಗಾರಿಕೆಗಳು, ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಗಳು, ಪೆಟ್ರೋಲಿಯಂ ಮತ್ತು ರಾಸಾಯಿನಿಕ ಗೊಬ್ಬರ ಕಾರ್ಖಾನೆಗಳಿಗೆ ಆದ್ಯತೆ ನೀಡಲಾಯಿತು.

ಸಾರ್ವಜನಿಕ ವಲಯದ ಸಂಸ್ಥೆಗಳು ಸರ್ಕಾರದಿಂದ ನಡೆಸಲಾಗುತ್ತಿವೆ. ಉದಾಹರಣೆಗೆ ನೈವೇಲಿ ಲಿಗ್ನೈಟ್ (ಕಲ್ಲಿದ್ದಲು ಸಂಸ್ಥೆ (NLC), ಭಾರತ್ ಭಾರೀ ಯಂತ್ರೋಪಕರಣಗಳ ಸಂಸ್ಥೆ (BHEL), ಭಾರತ್ ಸಂಚಾರ ನಿಗಮ ನಿಯಮಿತ (BSNL) ಮತ್ತು ಏರ್ ಇಂಡಿಯಾ ಸಂಸ್ಥೆಗಳಾಗಿವೆ. ಖಾಸಗಿ ವಲಯವು ಖಾಸಗಿಯವರಿಂದ ನಿರ್ವಹಿಸಲ್ಪಡುತ್ತದೆ. ಉದಾಹರಣೆಗೆ ಅಶೋಕ ಲೈಲಾಂಡ್, ಟಿವಿಎಸ್ ಸಂಸ್ಥೆಗಳು, ಗೋದ್ರೇಜ್ ಮತ್ತು ಟಿ.ಐ. ಸೈಕಲ್ಲುಗಳು ಆಗಿವೆ.

ಆರ್ಥಿಕ ಸುಧಾರಣೆಗಳು: 1991

ಭಾರತದ ಆರ್ಥಿಕತೆಯಲ್ಲಿ 1991ನೇ ವರ್ಷವು ವಿಶೇಷವಾದ ಪ್ರಾಮುಖ್ಯತೆಯನ್ನು ಪಡೆದು ಕೊಂಡಿದೆ. 1991ರಲ್ಲಿ ಜಾರಿಗೊಳಿಸಲ್ಪಟ್ಟ, ಆರ್ಥಿಕ ನೀತಿಯ ಉದ್ದೇಶಗಳನ್ನು ಈಡೇರಿಸಲು ಹಲವಾರು ಆರ್ಥಿಕ ಕ್ರಮಗಳನ್ನು ಪರಿಚಯಿಸಲಾಯಿತು.

ಕೈಗಾರೀಕೀಕರಣ ವಿಸ್ತರಿಸಲು ಕೈಗಾರಿಕಾ ಹಕ್ಕನ್ನು ನೀಡುವ ಪದ್ಧತಿ ನಿಷೇಧ, ವಿದೇಶಿ ಬಂಡವಾಳವನ್ನು ಆಕರ್ಷಿಸುವುದು ಮತ್ತು ಸಾರ್ವಜನಿಕ ವಲಯ, ಖಾಸಗೀ ಕ್ಷೇತ್ರದ ಸಹಭಾಗಿತ್ವದ ಕಾರ್ಯ ಮುಂತಾದ ಕಾರ್ಯ ಚಟುವಟಿಕೆಗಳನ್ನು ಸರ್ಕಾರವು ಕೈಗೊಂಡಿದೆ.

ಆರ್ಥಿಕ ಸುಧಾರಣೆಯಿಂದಾಗಿ ವಿದೇಶಿ ಬಂಡವಾಳ ಭಾರತದಲ್ಲಿ ಹಲವು ಪಟ್ಟು ಅಧಿಕವಾಯಿತು. ಬಹುರಾಷ್ಟ್ರೀಯ ಕಂಪನಿಗಳಾದ (Multinational Corporation) ನೋಕಿಯಾ, ಫೋರ್ಡ್, ಹೊಂಡೈ ಮತ್ತು ಎಲ್ ಆಂಡ್ ಟಿ ಮುಂತಾದ ಕಂಪನಿಗಳು ಭಾರತದಲ್ಲಿ ಕೈಗಾರಿಕಾ ಸಂಸ್ಥೆಗಳನ್ನು ಪ್ರಾರಂಭಿಸುವುದರ ಮೂಲಕ ಬಂಡವಾಳವನ್ನು ಹೂಡಿದವು.

ಬಹುರಾಷ್ಟ್ರೀಯ ಕಂಪನಿಗಳು ಎಂದರೆ ಹಲವು ರಾಷ್ಟ್ರಗಳಲ್ಲಿ ತಮ್ಮ ಕೈಗಾರಿಕಾ ಸಂಸ್ಥೆಗಳನ್ನು ಪ್ರಾರಂಭಿಸಿ ನಡೆಸಿ ಕೊಂಡು ಹೋಗುವ ಸಂಸ್ಥೆಗಳಾಗಿವೆ.

ಅಲ್ಲದೆ ಸಣ್ಣ ಕೈಗಾರಿಕೆ ಮತ್ತು ಗುಡಿ ಕೈಗಾರಿಕೆಗಳು ಅಭಿವೃದ್ಧಿ ಹೊಂದಲು ಹಲವಾರು ಸೌಲಭ್ಯಗಳನ್ನು ನೀಡಲಾಗಿದೆ.



ಗುಡಿ ಕೈಗಾರಿಕೆಗಳು

ಗುಡಿ ಕೈಗಾರಿಕೆ ಎಂಬುದು ಒಂದು ಕುಟುಂಬದ ಸದಸ್ಯರಿಂದ ಸ್ಥಳೀಯ ಮಾರುಕಟ್ಟೆಯಲ್ಲಿ ಮಾರಾಟ ಮಾಡುವುದಕ್ಕಾಗಿ ಸಾಂಪ್ರದಾಯಿಕವಾಗಿ ನಡೆಸುವ ಕೈಗಾರಿಕೆಯಾಗಿದೆ. ಉದಾಹರಣೆಗೆ ಕೈಮಗ್ಗ ಮತ್ತು ನಾರಿನ ಉತ್ಪನ್ನಗಳು.

ಗುಡಿ ಕೈಗಾರಿಕಾ ಸಂಸ್ಥೆಗಳು ಎಂದರೆ ಹೆಚ್ಚು ಕಡಿಮೆ ಸಣ್ಣ ಕೈಗಾರಿಕೆಗಳಾಗಿವೆ. ಇವುಗಳು ಬೃಹತ್ ಕೈಗಾರಿಕೆಗಳನ್ನು ಅವಲಂಬಿಸಿಕೊಂಡಿರುವ ಕೈಗಾರಿಕೆಗಳಾಗಿವೆ. ಉದಾಹರಣೆಗೆ ತಿರುಚ್ಚಿ ಮತ್ತು ರಾಣಿಪೇಟೆಯಲ್ಲಿ ಸ್ಥಾಪನೆಯಾಗಿರುವ ಭಾರತದ ಭಾರಿ ವಿದ್ಯುತ್ ನಿಗಮ (BHEL) ಕೈಗಾರಿಕೆಯಾಗಿದೆ.

ಆರ್ಥಿಕ ಸುಧಾರಣೆಯ ಪ್ರಮುಖ ಅಂಶಗಳು ಈ ಕೆಳಕಂಡಂತಿವೆ.

1.ಉದಾರೀಕರಣ.

2. ಖಾಸಗೀಕರಣ.

3. ಜಾಗತೀಕರಣ.

1.ಉದಾರೀಕರಣ

ಉದಾರೀಕರಣವೆಂಬುದು ಖಾಸಗಿ ವಲಯದ ಕೈಗಾರಿಕಾ ಸಂಸ್ಥೆಗಳ ಕಾನೂನು ಮತ್ತು ನಿಯಂತ್ರಣವನ್ನು ಹಿಂತೆಗೆದು ಕೊಳ್ಳಬಹುದು. ಈ ನೀತಿಯ ಮೂಲಕ ಸಾರ್ವಜನಿಕ ವಲಯ ಮಾತ್ರ ಕಾರ್ಯ ನಿರ್ವಹಿಸಲು ಮೀಸಲಿಟ್ಟ ಕೈಗಾರಿಕೆಗಳಲ್ಲಿ ಖಾಸಗೀ ಸಂಸ್ಥೆಗಳು ಕಾರ್ಯ ನಿರ್ವಹಿಸುವ ಅನುಮತಿಯನ್ನು ನೀಡಲಾಯಿತು. ಉದಾಹರಣೆಗೆ ವಿದ್ಯುಚ್ಛಕ್ತಿ ಉತ್ಪಾದನೆಯಲ್ಲಿ ಖಾಸಗೀ ಸಂಸ್ಥೆಯವರು ಕಾರ್ಯ ನಿರ್ವಹಿಸಲು ಅನುಮತಿ ನೀಡಲಾಯಿತು.

2. ಖಾಸಗೀಕರಣ

ಸಾರ್ವಜನಿಕ ವಲಯದ ಸಂಸ್ಥೆಗಳನ್ನು ಖಾಸಗಿ ಒಡೆತನಕ್ಕೆ ವಹಿಸುವುದನ್ನು ಖಾಸಗೀಕರಣ ಎಂದು ಕರೆಯುತ್ತಾರೆ. ಅಲ್ಲದೆ ಸಾರ್ವಜನಿಕ ಅನುಭೋಗಿ ಸೇವೆಗಳಲ್ಲಿ ಖಾಸಗಿ ಸಂಸ್ಥೆಯು ಕಾರ್ಯ ನಿರ್ವಹಿಸುವಂತೆ ಅನುಮತಿ ನೀಡಲಾಯಿತು.

3. ಜಾಗತೀಕರಣ

ಒಂದು ದೇಶದ ಮಾರುಕಟ್ಟೆಯನ್ನು ವಿದೇಶಿ ಮಾರುಕಟ್ಟೆಯೊಡನೆ ಸಂಪರ್ಕಗೊಳಿಸುವುದನ್ನು ಜಾಗತೀಕರಣ ಎಂದು ಕರೆಯುತ್ತಾರೆ. ಇದು ಆರ್ಥಿಕತೆ, ವಾಣಿಜ್ಯ ವ್ಯವಹಾರ ಸಂಪರ್ಕ ಮುಂತಾದವುಗಳೊಡನೆ ಸಂಪರ್ಕ ಹೊಂದಿದೆ. ವಸ್ತುಗಳನ್ನು ಉತ್ಪಾದಿಸಿ ವಿಶ್ವರಾಷ್ಟ್ರಗಳಿಗೆ ಮಾರಾಟಕ್ಕೆ ಕಳುಹಿಸುವುದೇ ಜಾಗತೀಕರಣವಾಗಿದೆ.

ವಿಜ್ಞಾನ ಮತ್ತು ತಂತ್ರಜ್ಞಾನ

ಭಾರತದ ಆರ್ಥಿಕತೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಒಂದು ಪ್ರಮುಖ ಅಂಶವಾಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ವಿಶ್ವದ ರಾಷ್ಟ್ರಗಳಲ್ಲಿ ಭಾರತ ಪ್ರಮುಖ ಸ್ಥಾನವನ್ನು ಪಡೆದುಕೊಂಡಿದೆ. ಸಾರ್ವತ್ರಿಕವಾಗಿ ಅಣುಶಕ್ತಿ, ಬಾಹ್ಯಾಕಾಶ ಸಂಶೋಧನೆ, ಖಗೋಳಶಾಸ್ತ್ರ ಮತ್ತು ಗಗನ ಭೌತಶಾಸ್ತ್ರ, ಸಾಗರಶಾಸ್ತ್ರ , ಜೈವಿಕ ತಂತ್ರಜ್ಞಾನ ಮತ್ತು ಸಾವಯವ ರಸಾಯನಶಾಸ್ತ್ರ, ಕ್ಷೇತ್ರಗಳು ವಿಶೇಷವಾದ ಸ್ಥಾನವನ್ನು ಪಡೆದುಕೊಂಡಿವೆ.

ಅಣುಶಕ್ತಿ ಯೋಜನೆಗಳು



ಅಣುಶಕ್ತಿ ಸ್ಥಾವರ – ಕಲ್ಪಾಕಂ

ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಯನ್ನು ಪೂರೈಸಲು ಅಣುಶಕ್ತಿ ಯೋಜನೆಗಳಿಂದ ಪರಿಹಾರ ಸಾಧ್ಯವೆಂಬುದನ್ನು 1954ಕ್ಕೂ ಮೊದಲೇ ಸರ್ಕಾರವು ಅರಿತು ಕೊಂಡಿತು. ಆದ್ದರಿಂದ ಅಣುಶಕ್ತಿ ಸ್ಥಾವರಗಳನ್ನು ವಿದ್ಯುತ್ ಉತ್ಪಾದನೆ, ಕೃಷಿ, ವೈದ್ಯಕೀಯ ಮತ್ತು ಕೈಗಾರಿಕೆಗಳಿಗೆ ಶಾಂತಿ ಕಾರ್ಯಗಳಿಗೆ ಉಪಯೋಗಿಸಿ ಕೊಳ್ಳವುದು ಮುಖ್ಯ ಉದ್ದೇಶವಾಗಿತ್ತು. ಪ್ರಸ್ತುತ ಭಾರತದಲ್ಲಿ 17 ವಿದ್ಯುಚ್ಛಕ್ತಿ ಸ್ಥಾವರಗಳು ಕಾರ್ಯನಿರ್ವಹಿಸುತ್ತಿವೆ.

ಬಾಹ್ಯಾಕಾಶ ಸಂಶೋಧನೆ

ಬಾಹ್ಯಕಾಶಕ್ಕೆ ಉಪಗ್ರಹಗಳನ್ನು ಉಡಾವಣೆ ಮಾಡುವ ಆರು ದೇಶಗಳಲ್ಲಿ ಭಾರತವು ಒಂದಾಗಿದೆ. ಭಾರತೀಯ ಬಾಹ್ಯಾಕಾಶ ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು ಉಪಗ್ರಹಗಳು ಮತ್ತು ದೂರ ಸಂವೇದಿ (Remote Sensing) ಗಳಂತಹವುಗಳಲ್ಲಿ ಸಂಶೋಧನೆಗಳನ್ನು ನಡೆಸುತ್ತಾ ಬರುತ್ತಿದೆ.



ಉಪಗ್ರಹ ಉಡಾವಣೆ

ಭಾರತದಲ್ಲಿ ಮೊಟ್ಟ ಮೊದಲು 1975ರಲ್ಲಿ ಆರ್ಯಭಟ ಎಂಬ ಉಪಗ್ರಹವನ್ನು ಬಾಹ್ಯಾಕಾಶದಲ್ಲಿ ಉಡಾವಣೆ ಮಾಡಲಾಯಿತು. ಕಳೆದ 40 ವರ್ಷಗಳಲ್ಲಿ ಇದುವರೆವಿಗೆ 50 ಉಪಗ್ರಹಗಳನ್ನು ಬಾಹ್ಯಕಾಶದಲ್ಲಿ ಯಶಸ್ವಿಯಾಗಿ ಉಡಾವಣೆ ಮಾಡಲಾಯಿತು. 2008ರಲ್ಲಿ ಚಂದ್ರಯಾನ್–I ಉಪಗ್ರಹವನ್ನು ಚಂದ್ರನಲ್ಲಿಗೆ ಯಶಸ್ವಿಯಾಗಿ ಕಳುಹಿಸಲ್ಪಟ್ಟು ಚಂದ್ರನಲ್ಲಿ ನೀರು ಇರುವುದನ್ನು ಪತ್ತೆ ಹಚ್ಚಲಾಯಿತು.

ಭಾರತದ ಮಂಗಳ್‌ಯಾನ್ ಉಪಗ್ರಹವು ಇಸ್ರೋದಿಂದ 2013ರ ನವೆಂಬರ್ 5ರಂದು ಕಳುಹಿಸಲ್ಪಟ್ಟು 2014ರ ಸೆಪ್ಟಂಬರ್ 24ರಂದು ಮಂಗಳ ಗ್ರಹದ ಕಕ್ಷೆಯಲ್ಲಿ ಮೊದಲ ಪ್ರಯತ್ನದಲ್ಲಿಯೇ ಯಶಸ್ವಿಯಾಗಿ ನೆಲೆಗೊಳಿಸಲ್ಪಟ್ಟಿತು. ಇದು ಪ್ರಪಂಚದಲ್ಲಿಯೇ ಅತಿ ಕಡಿಮೆ ಖರ್ಚಿನಲ್ಲಿ ಮಂಗಳ ಗ್ರಹಕ್ಕೆ ಕಳುಹಿಸಲ್ಪಟ್ಟ ಉಪಗ್ರಹವಾಗಿದೆ.

ಸಾಗರ ಶಾಸ್ತ್ರ

ಭಾರತದ ಸಾಗರ ಅಭಿವೃದ್ಧಿ ಇಲಾಖೆಯು ಸಮುದ್ರದ ಜೀವರಾಶಿಗಳು ಮತ್ತು ನಿರ್ಜೀವ ಸಂಪನ್ಮೂಲಗಳನ್ನು ರಕ್ಷಿಸಲು ಮತ್ತು ಪರಿಸರ ಸಂರಕ್ಷಣೆಯ ಯೋಜನಾ ಕಾರ್ಯಗಳನ್ನು ಮಾಡುತ್ತಾ ಬರುತ್ತಿದೆ.

ಜೈವಿಕ ತಂತ್ರಜ್ಞಾನ

ಭಾರತದಲ್ಲಿ ಜೈವಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ಗಮನಾರ್ಹವಾದ ಸಂಶೋಧನೆಗಳು ನಡೆಯುತ್ತಾ ಬಂದಿವೆ. ವಿಶೇಷವಾಗಿ ಕೃಷಿ, ಆರೋಗ್ಯ, ಪಶು ವೈದ್ಯಕೀಯ, ಪರಿಸರ, ಕೈಗಾರಿಕಾಕ್ಷೇತ್ರ

ಮುಂತಾದವುಗಳ ಮೂಲಕ ಗಣನೀಯ ಬೆಳವಣಿಗೆಯಾಗಿದೆ. ಉದಾಹರಣೆಗೆ ಕಾಲರಾ ಗುಣ ಪಡಿಸಲು ಬಾಯಿ ಲಸಿಕೆ ಮದ್ದು.

ದೂರ ಸಂಪರ್ಕ ಮತ್ತು ಮಾಹಿತಿ ತಂತ್ರಜ್ಞಾನ

ದೂರ ಸಂಪರ್ಕ ಸೌಲಭ್ಯಗಳನ್ನು ಒದಗಿಸುವುದರಲ್ಲಿ ಭಾರತವು ವಿಶ್ವದ ರಾಷ್ಟ್ರಗಳಲ್ಲಿ ಹತ್ತನೇ ಸ್ಥಾನದಲ್ಲಿದೆ. ಭಾರತದಲ್ಲಿ 77.93 ಮಿಲಿಯನ್ ದೂರವಾಣಿ ಸಂಪರ್ಕಗಳೂ, 1.79 ಸಾರ್ವಜನಿಕ ದೂರವಾಣಿ ನಿಲಯಗಳು ಇವೆ. 933 ಮಿಲಿಯನ್ ಮೊಬೈಲ್ ಬಳಕೆದಾರರು ಮೊಬೈಲ್‌ಗಳನ್ನು ಬಳಸುತ್ತಿದ್ದಾರೆ. ಅಲ್ಲದೆ 1 ಮಿಲಿಯನ್ ಮೊಬೈಲ್‌ಗಳನ್ನು ಪ್ರತಿ ತಿಂಗಳು ಪಡೆಯಲಾಗುತ್ತಿದೆ.

ಮಾಹಿತಿ ತಂತ್ರಜ್ಞಾನ

ಗಣಕಯಂತ್ರ ಉಪಯೋಗಿಸುವುದರ ಮೂಲಕ ಸಂಪರ್ಕ ನಿರ್ವಹಣೆಗಾಗಿ ಗಣಕಯಂತ್ರಗಳನ್ನು ಮತ್ತು ಮೃದೋಪಕರಣಗಳನ್ನು ಬಳಸುವುದನ್ನು ಮಾಹಿತಿ ತಂತ್ರಜ್ಞಾನ ಎನ್ನುತ್ತೇವೆ. ಭಾರತದಲ್ಲಿ ಬೆಂಗಳೂರು,



ಮಾಹಿತಿ ತಂತ್ರಜ್ಞಾನ ಗೋಪುರ

ಹೈದರಬಾದ್ ಮತ್ತು ಚೆನ್ನೈ ಮುಖ್ಯ ಮಾಹಿತಿ ತಂತ್ರಜ್ಞಾನ ಕೇಂದ್ರಗಳಾಗಿವೆ. ಮೃದೋಪಕರಣಗಳ ರಫ್ತಿನ ಮೂಲಕ ಭಾರತಕ್ಕೆ ಹೆಚ್ಚು ವಿದೇಶಿ ವಿನಿಮಯವು ದೊರಕುತ್ತದೆ. ಅಲ್ಲದೆ ಭಾರತದ ಯುವ ಜನಾಂಗಕ್ಕೆ ಅಪಾರವಾದ ಉದ್ಯೋಗವಕಾಶಗಳನ್ನು ಒದಗಿಸುತ್ತದೆ. ಭಾರತದಲ್ಲಿ ಟಾಟಾಕನ್ಸಲ್ಟೆನ್ಸಿ, ಇನ್‌ಫೋಸಿಸ್, ವಿಪ್ರೋ, ಹೆಚ್.ಸಿ.ಎಲ್, ಕಾಗ್ನಿಜೆಂಟ್ ಇನ್ನೂ ಮುಂತಾದವುಗಳು ಪ್ರಧಾನ ಮಾಹಿತಿ ತಂತ್ರಜ್ಞಾನ ಕೇಂದ್ರಗಳಾಗಿವೆ.

ಭಾರತದಲ್ಲಿ ಶಿಕ್ಷಣ ಬೆಳವಣಿಗೆ

2011ರ ಜನಗಣತಿಯ ಪ್ರಕಾರ ಭಾರತದಲ್ಲಿ ಅಕ್ಷರಸ್ಥರ ಸಂಖ್ಯೆ ಶೇಕಡ 74.04ರಷ್ಟಿತ್ತು. ಪುರುಷ ಅಕ್ಷರಸ್ಥರ ಸಂಖ್ಯೆ ಶೇಕಡ 82.14 ಆಗಿದೆ. ಮಹಿಳಾ ಅಕ್ಷರಸ್ಥರ ಸಂಖ್ಯೆ ಶೇ.65.46 ರಷ್ಟಾಗಿದೆ. ಭಾರತದಲ್ಲಿ ಅಕ್ಷರಸ್ಥರ ಸಂಖ್ಯೆ 778.45 ಮಿಲಿಯನ್‌ಗಳಾಗಿದೆ.

ಭಾರತದಲ್ಲಿ ಕೇರಳ ರಾಜ್ಯದಲ್ಲಿ ಅತೀ ಹೆಚ್ಚು ಅಂದರೆ ಶೇ. 93.9ರಷ್ಟು ಅಕ್ಷರಸ್ಥರಿದ್ದಾರೆ. ಅತ್ಯಂತ ಕಡಿಮೆ ಶೇ. 63.8ರಷ್ಟು ಅಕ್ಷರಸ್ಥರನ್ನು ಹೊಂದಿರುವ ರಾಜ್ಯ ಬಿಹಾರವಾಗಿದೆ. ತಮಿಳುನಾಡಿನಲ್ಲಿ ಅಕ್ಷರಸ್ಥರ ಸಂಖ್ಯೆ ಶೇ. 80.3 ಆಗಿದೆ.

ಪ್ರಾಥಮಿಕ ಶಿಕ್ಷಣ

ಭಾರತ ಸರ್ಕಾರವು 14 ವರ್ಷದವರೆಗಿನ ಮಕ್ಕಳಿಗೆ ಶಾಲೆಯಲ್ಲಿ ದಾಖಲಿಸಲು ಎಲ್ಲಾ ಪ್ರಯತ್ನಗಳನ್ನೂ ಮಾಡುತ್ತಾ ಬಂದಿದೆ. ಬಾಲ ಕಾರ್ಮಿಕರು ಕೆಲಸಕ್ಕೆ ಸೇರಿ ಕೊಳ್ಳುವುದನ್ನು ನಿಷೇಧಿಸಲಾಗಿದೆ. ಪ್ರಾಥಮಿಕ ಶಾಲೆಗಳಲ್ಲಿ ಶೇ. 80 ರಷ್ಟು ಶಾಲೆಗಳು ಸರ್ಕಾರಿ ಶಾಲೆಗಳಾಗಿ ಅಥವಾ ಸರ್ಕಾರದಿಂದ ಅನುದಾನ ಪಡೆಯುವ ಶಾಲೆಗಳು ಕಾರ್ಯನಿರ್ವಹಿಸುತ್ತಿವೆ. 14 ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ 2009ರ ಕಾನೂನಿನಂತೆ (Right of Children to Free and Compulsory Education Act of 2009) 14 ವರ್ಷದೊಳಗಿನ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸುತ್ತಾ ಬಂದಿದೆ. ಜಿಲ್ಲಾ ಪ್ರಾಥಮಿಕ ಶಿಕ್ಷಣ ಮತ್ತು ಸರ್ವರಿಗೂ ಶಿಕ್ಷಣ (Sarva Shiksha Abhyan) ಯೋಜನೆಯ ಮೂಲಕ ಸಾಮರ್ಥ್ಯ ಬೆಳವಣಿಗೆ ತರಬೇತಿ ನೀಡುವುದರ ಫಲವಾಗಿ ಮಕ್ಕಳ ದಾಖಲಾತಿ ಪ್ರಮಾಣ ಅಧಿಕವಾಗಿದೆ.

ಪ್ರೌಢ ಶಿಕ್ಷಣ

14 ರಿಂದ 18 ವರ್ಷದವರೆಗಿನ ವಿದ್ಯಾರ್ಥಿಗಳು ವ್ಯಾಸಂಗ ಮಾಡುವ ಪ್ರೌಢ ಶಿಕ್ಷಣದಲ್ಲಿ 88.5 ಮಿಲಿಯನ್ ವಿದ್ಯಾರ್ಥಿಗಳು ಶಿಕ್ಷಣ ಪಡೆದು ಕೊಳ್ಳುತ್ತಿದ್ದಾರೆ. ಪ್ರೌಢ ಶಿಕ್ಷಣದ ಪ್ರಾಮುಖ್ಯತೆಯಿಂದ ಉನ್ನತ ಶಿಕ್ಷಣದಲ್ಲಿ ವಿದ್ಯೋಗಿಕ ಶಿಕ್ಷಣವನ್ನು ಸೇರಿಸಿದುದಾಗಿದೆ. ಅಲ್ಲದೆ ಪ್ರೌಢ ಶಿಕ್ಷಣದ ಅಭಿವೃದ್ಧಿಗಾಗಿ ಸರ್ವರಿಗೂ ಮಾಧ್ಯಮಿಕ

ಶಿಕ್ಷಣ (Rashtriya Madhyamik Shiksha Abhiyan) ಯೋಜನೆಯನ್ನು ಪ್ರಾರಂಭಿಸಲಾಗಿದೆ.

ಉನ್ನತ ಶಿಕ್ಷಣ

ಉನ್ನತ ಶಿಕ್ಷಣ ಒದಗಿಸುವುದರಲ್ಲಿ ಚೀನಾ ಮತ್ತು ಅಮೆರಿಕ ದೇಶಗಳ ನಂತರ ಭಾರತವು ಮೂರನೆಯ ಸ್ಥಾನದಲ್ಲಿದೆ. ಉನ್ನತ ಶಿಕ್ಷಣವನ್ನು ಒದಗಿಸುವುದರಲ್ಲಿ ವಿಶ್ವವಿದ್ಯಾಲಯ ಧನ ಸಹಾಯ ಆಯೋಗ ಮುಖ್ಯವಾದ ಪಾತ್ರ ವಹಿಸುತ್ತಾ ಬಂದಿದೆ. ಭಾರತದಲ್ಲಿ 2009 ರವರೆಗೆ 20 ಕೇಂದ್ರೀಯ ವಿಶ್ವವಿದ್ಯಾಲಯಗಳು, 215 ರಾಜ್ಯ ವಿಶ್ವವಿದ್ಯಾಲಯಗಳು 100 ವಿಶ್ವವಿದ್ಯಾಲಯಗಳು, ರಾಷ್ಟ್ರದ ಪ್ರಾಮುಖ್ಯತೆಯನ್ನು ಪಡೆದ 13 ಸಂಸ್ಥೆಗಳು ಕಾರ್ಯನಿರ್ವಹಿಸುತ್ತಾ ಬಂದಿವೆ. ಅಲ್ಲದೆ 16000 ಕಾಲೇಜುಗಳು, ಮಹಿಳೆಯರಿಗಾಗಿ ಪ್ರತ್ಯೇಕವಾಗಿ 1800 ಕಾಲೇಜುಗಳು ಕಾರ್ಯನಿರ್ವಹಿಸುತ್ತಿವೆ. ಉನ್ನತ ಶಿಕ್ಷಣದಲ್ಲಿ ವಿಜ್ಞಾನ ಮತ್ತು ತಾಂತ್ರಿಕ ಶಿಕ್ಷಣ ಕ್ಷೇತ್ರಕ್ಕೆ ಆದ್ಯತೆ ನೀಡಲಾಗಿದೆ.

ವಿಶ್ವ ಪ್ರಸಿದ್ಧಿ ಪಡೆದ ಭಾರತೀಯ ತಾಂತ್ರಿಕ ಸಂಸ್ಥೆಯು (I.I.T.- Indian Institute of Technology), ಭಾರತೀಯ ಆಡಳಿತ ನಿರ್ವಹಣೆ ಸಂಸ್ಥೆ (I.I.M.- Indian Institute of Management), ಗಳು ಕಾರ್ಯ ನಿರ್ವಹಿಸುತ್ತಿವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಶಿಕ್ಷಣದ ಬೆಳವಣಿಗೆಗೆ ಅವಶ್ಯಕವಾದ ಧನ ಸಹಾಯ ನೀಡುವುದರೊಂದಿಗೆ ಆರ್ಥಿಕಾಭಿವೃದ್ಧಿ ಸಾಧಿಸಲು ಎಲ್ಲಾ ವರ್ಗದ ಜನರಿಗೂ ಶಿಕ್ಷಣ ನೀಡ ಬೇಕೆಂಬ ಮುಖ್ಯ ಉದ್ದೇಶವನ್ನು ಹೊಂದಿದೆ.

ತಮಿಳುನಾಡಿನ ಸಾಮಾಜಿಕ – ಆರ್ಥಿಕ ಬೆಳವಣಿಗೆಗಳು

ಸಮಾಜದ ಆರ್ಥಿಕಾಭಿವೃದ್ಧಿಯಲ್ಲಿ ತಮಿಳುನಾಡು ಭಾರತದಲ್ಲಿ ಮೂರನೇ ಸ್ಥಾನವನ್ನು ಪಡೆದು ಕೊಂಡಿದೆ.

1. ಶಿಕ್ಷಣ

ಅ. ಪ್ರಾಥಮಿಕ ಶಿಕ್ಷಣ

ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗೆ ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಶ್ರೀ ಕೆ.ಕಾಮರಾಜ್‌ರವರು ಪ್ರಮುಖ ಕಾರಣ ಕರ್ತರಾಗಿದ್ದಾರೆ. ಪ್ರಾಥಮಿಕ ಶಿಕ್ಷಣದಲ್ಲಿ ಎಲ್ಲಾ ಮಕ್ಕಳಿಗೂ ಶಾಲೆಗೆ ಹೋಗುವ ಅವಕಾಶವನ್ನು ಸಂಪೂರ್ಣವಾಗಿ ಕಲ್ಪಿಸಿ ಕೊಡಲಾಗಿದೆ. ಎಲ್ಲಾ ಗ್ರಾಮಗಳು ಮತ್ತು ವಾಸಸ್ಥಳಗಳಲ್ಲಿ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಎಲ್ಲಾ ಮಕ್ಕಳನ್ನು ಶಾಲೆಯಲ್ಲಿ ದಾಖಲಾತಿ ಮಾಡಿಸುವುದಕ್ಕೂ, ಮಧ್ಯಂತರದಲ್ಲಿ ಮಕ್ಕಳು ಶಾಲೆ ಬಿಡುವುದನ್ನು ತಪ್ಪಿಸುವುದು ಮತ್ತು ಶಿಕ್ಷಣದಲ್ಲಿ ಸಂಪೂರ್ಣ ಅಭಿವೃದ್ಧಿ ಹೊಂದುವುದು. ತಮಿಳುನಾಡು ಸರ್ಕಾರವು ಪೌಷ್ಟಿಕ ಆಹಾರ ಮತ್ತು ಉಚಿತ ಸಾರಿಗೆ ಸೌಕರ್ಯಗಳನ್ನು ಒದಗಿಸುತ್ತಾ ಬಂದಿದೆ. ಪೌಷ್ಟಿಕ ಆಹಾರ ಯೋಜನೆಯಡಿಯಲ್ಲಿ ಶಾಲೆಗಳಲ್ಲಿಯೇ ಪ್ರತಿನಿತ್ಯ ಆಹಾರ ತಯಾರಿಸುವುದರೊಂದಿಗೆ ವಾರದಲ್ಲಿ ಐದು ದಿನಗಳು ಮೊಟ್ಟೆಯನ್ನು ಕೊಡುತ್ತಾ ಬರುತ್ತಿದೆ. ಅಲ್ಲದೆ ಪ್ರಾಥಮಿಕ ಶಾಲಾ ಶಿಕ್ಷಣದ ಪ್ರಗತಿಗಾಗಿ ತಮಿಳುನಾಡು ಸರ್ಕಾರವು ಕೇಂದ್ರ ಸರ್ಕಾರದ ಸಹಭಾಗಿತ್ವದೊಂದಿಗೆ ಸರ್ವಶಿಕ್ಷ ಅಭಿಯಾನ ಯೋಜನೆಯು (Sarva Shiksha Abhiyan) ಕಾರ್ಯನಿರ್ವಹಿಸುತ್ತಾ ಬರುತ್ತಿದೆ.

ಆ. ಪ್ರೌಢ ಶಿಕ್ಷಣ

ಪ್ರಾಥಮಿಕ ಶಿಕ್ಷಣವನ್ನು ಮತ್ತು ಉನ್ನತ ಶಿಕ್ಷಣವನ್ನು ಜೋಡಿಸುವ ಸೇತುವೆಯಾಗಿ ಪ್ರೌಢ ಶಿಕ್ಷಣವು ಕಾರ್ಯನಿರ್ವಹಿಸುತ್ತಿದೆ. ವಿದ್ಯಾರ್ಥಿಗಳು ಆಸಕ್ತಿಯೊಡನೆ ಶಿಕ್ಷಣ ಪಡೆಯಲು ಹನ್ನೊಂದನೆಯ ತರಗತಿ ವಿದ್ಯಾರ್ಥಿಗಳಿಗೆ ಉಚಿತ ಬೈಸಿಕಲ್ಲುಗಳನ್ನು ನೀಡುತ್ತಾ ಬರುತ್ತಿದೆ. ಅಲ್ಲದೆ ರಾಜ್ಯ ಮಟ್ಟದಲ್ಲಿ ಹೆಚ್ಚು ಅಂಕಗಳಿಸುವ ಹತ್ತನೇ ತರಗತಿ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ (Laptop) ನ್ನು ಕೊಡುತ್ತಿದೆ. ಉದ್ಯೋಗವಕಾಶಗಳನ್ನು ಪಡೆಯುವುದಕ್ಕಾಗಿ ಗಣಕ ಶಿಕ್ಷಣವನ್ನು, ವೃತ್ತಿ ಆಧಾರಿತ ಶಿಕ್ಷಣವನ್ನು (Vocational Education) ನೀಡುತ್ತಾ ಬಂದಿದೆ. ಮಾಧ್ಯಮಿಕ.ಪ್ರೌಢ ಶಿಕ್ಷಣವನ್ನು ಎಲ್ಲರೂ ಪಡೆದು ಕೊಳ್ಳುವುದಕ್ಕಾಗಿಯೂ, ಎಲ್ಲಾ ವಿದ್ಯಾರ್ಥಿಗಳು ಸಮಾಜದ ಕರ್ತವ್ಯ ಪ್ರಜ್ಞೆಯೊಂದಿಗೆ ಆರ್ಥಿಕ ಉನ್ನತ ಮಟ್ಟಕ್ಕೇರಲು ಕೇಂದ್ರ ಸರ್ಕಾರ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷ ಅಭಿಯಾನ (Rashtriya Madhyamik Shiksha Abhiyan) ಯೋಜನೆಯನ್ನು ಜಾರಿಗೊಳಿಸಿದೆ.

ಇ.ಶಿಕ್ಷಕರ ಶಿಕ್ಷಣ

ತಮಿಳುನಾಡಿನಲ್ಲಿ 30 ಜಿಲ್ಲೆಗಳಲ್ಲಿ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯು (District

Institute of Education and Training) ಕಾರ್ಯನಿರ್ವಹಿಸುತ್ತಿದೆ. ಶಿಕ್ಷಣ ಕಲಿಕೆಯ ಕಾರ್ಯಕ್ಕೆ ಸಂಬಂಧಿಸಿದ ಸಾಮರ್ಥ್ಯ ತರಬೇತಿ ನೀಡಿ, ಉತ್ತಮ ಶಿಕ್ಷಕರುಗಳನ್ನು ಸೃಷ್ಟಿಸಲು ತರಬೇತಿ ನೀಡುತ್ತಾ ಬರುತ್ತಿದೆ.

ಈ. ಉನ್ನತ ಶಿಕ್ಷಣ.

ಉನ್ನತ ಶಿಕ್ಷಣವನ್ನು ನೀಡುವುದರಲ್ಲಿ ತಮಿಳುನಾಡು ಭಾರತದಲ್ಲಿ ಮಾದರಿ ರಾಜ್ಯವಾಗಿದೆ. ಗ್ರಾಮೀಣ ವಿದ್ಯಾರ್ಥಿಗಳನ್ನು ಸಂಪೂರ್ಣವಾಗಿ ಕಾಲೇಜಿನಲ್ಲಿ ಸೇರಿಸಿ ಅವರು ಶಿಕ್ಷಣವನ್ನು ಮುಂದುವರಿಸುವ ಅವಕಾಶವನ್ನು ಕಲ್ಪಿಸಿದೆ. ಸರ್ಕಾರದ ಮುಖ್ಯ ಉದ್ದೇಶವೇ ಉನ್ನತ ಶಿಕ್ಷಣದಲ್ಲಿ ಶೇ. 11.72 ರಷ್ಟಿರುವ ಉನ್ನತ ಶಿಕ್ಷಣದ ದಾಖಲಾತಿ ಪ್ರಮಾಣವನ್ನು 2020 ರಲ್ಲಿ ಶೇ. 25 ರಷ್ಟಕ್ಕೆ ಹೆಚ್ಚಿಸುವುದಾಗಿದೆ.

2. ವ್ಯವಸಾಯ

ತಮಿಳುನಾಡು ಜನರ ಜೀವನಾಧಾರವಾಗಿರುವುದು ವ್ಯವಸಾಯವಾಗಿದೆ. ತಮಿಳುನಾಡಿನ ಮುಖ್ಯ ಆಹಾರ ಬೆಳೆಗಳು ಭತ್ತ, ಜೋಳ, ಕಂಬು ಮತ್ತು ರಾಗಿ.

ತಮಿಳುನಾಡಿನ ಮುಖ್ಯವಾದ ವಾಣಿಜ್ಯ ಬೆಳೆಗಳು ಕಬ್ಬು, ಹತ್ತಿ ಸೂರ್ಯಕಾಂತಿ, ತೆಂಗಿನಕಾಯಿ, ಗೋಡಂಬಿ, ಎಳ್ಳು ಮತ್ತು ನೆಲಗಡಲೆಯಾಗಿದೆ. ಮುಖ್ಯವಾದ ತೋಟಗಾರಿಕಾ ಬೆಳೆಗಳು ಕಾಫಿ, ಟೀ, ಏಲಕ್ಕಿ ಮತ್ತು ರಬ್ಬರ್ ಆಗಿದೆ. ತಮಿಳುನಾಡಿನ ವ್ಯವಸಾಯದ ಉತ್ಪಾದನೆಯು ಭೂ ಸುಧಾರಣೆ ಮತ್ತು ನವೀನ ಕೃಷಿ ವಿಧಾನದಿಂದಲೂ ಅಧಿಕವಾಗುತ್ತಿದೆ.

3. ಕೈಗಾರಿಕಾಭಿವೃದ್ಧಿ

ತಮಿಳುನಾಡು ಸರ್ಕಾರವು ಕೈಗಾರಿ ಕಾಭಿವೃದ್ಧಿಯನ್ನು ಪ್ರೋತ್ಸಾಹಿಸುತ್ತಾ ಬರುತ್ತಿದೆ. ಸಿಮೆಂಟ್, ಜವಳಿ, ಸಕ್ಕರೆ, ಪೆಟ್ರೋಲಿಯಂ ಮತ್ತು ಮಾಹಿತಿ ತಂತ್ರಜ್ಞಾನ ಇನ್ನೂ ಮುಂತಾದವು ತಮಿಳುನಾಡಿನ ಅತೀ ಮುಖ್ಯವಾದ ಬೃಹತ್ ಕೈಗಾರಿಕೆಗಳಾಗಿವೆ.

4. ವಿದ್ಯುಚ್ಛಕ್ತಿ

ತಮಿಳುನಾಡಿನ ವಿದ್ಯುಚ್ಛಕ್ತಿ ಉತ್ಪಾದನಾ ಘಟಕಗಳು ಈ ಕೆಳಕಂಡಂತಿವೆ.

1.ಶಾಖೋತ್ಪನ್ನ ಉತ್ಪಾದನೆ



ಶಾಖೋತ್ಪನ್ನ ಸ್ಥಾವರ – ನೈವೇಲಿ.

ತಮಿಳುನಾಡಿನಲ್ಲಿ ಎಣ್ಣೂರ್, ತೂತ್ತುಕುಡಿ, ನೈವೇಲಿ ಮತ್ತು ಮೆಟ್ಟೂರಿನಲ್ಲಿ ಶಾಖೋತ್ಪನ್ನ ಘಟಕಗಳಿವೆ.

2. ಜಲವಿದ್ಯುತ್ ಸ್ಥಾವರಗಳು

ತಮಿಳುನಾಡಿನಲ್ಲಿ ಜಲವಿದ್ಯುತ್ ಸ್ಥಾವರಗಳು ಮೆಟ್ಟೂರು, ಕುಂದಾ, ಪೆರಿಯಾರ್ ಅಣೆಕಟ್ಟು, ಕೋದೈಯಾರು ಅಣೆಕಟ್ಟು, ಪಾಯ್ಕರಾ, ಸಿಂಗಾರ ಮತ್ತು ಮಾಯಾರ್ ಎಂಬ ಸ್ಥಳಗಳಲ್ಲಿ ಸ್ಥಾಪಿಸಲ್ಪಟ್ಟಿವೆ.

3. ಅಣು ವಿದ್ಯುಚ್ಛಕ್ತಿ ಉತ್ಪಾದನೆ

ಅಣು ವಿದ್ಯುಚ್ಛಕ್ತಿ ಉತ್ಪಾದನಾ ನಿಲಯಗಳು ಕಲ್ಪಾಕಂ ಮತ್ತು ಕೂಡಂಗುಳಂ ಗಳಲ್ಲಿ ಸ್ಥಾಪಿಸಲ್ಪಟ್ಟಿವೆ.

4. ಪವನ ವಿದ್ಯುಚ್ಛಕ್ತಿ



ಪವನ ಶಕ್ತಿಯಿಂದ ವಿದ್ಯುತ್ ಉತ್ಪಾದನೆ.

ಸಾಂಪ್ರದಾಯಿಕ ವಿದ್ಯುತ್ ಉತ್ಪಾದನೆಯಲ್ಲಿ ಪವನ ವಿದ್ಯುಚ್ಛಕ್ತಿಯು ತಮಿಳುನಾಡಿನಲ್ಲಿ ಪ್ರಮುಖ ಸ್ಥಾನ ಪಡೆದು ಕೊಂಡಿದೆ. ತಮಿಳುನಾಡಿನಲ್ಲಿ ಕೊಯಮತ್ತೂರು,

ಕನ್ಯಾಕುಮಾರಿ, ತೂತ್ತುಕುಡಿ, ತಿರುನಲ್ವೇಲಿ ಮತ್ತು ರಾಮನಾಥಪುರಂ ಜಿಲ್ಲೆಗಳಲ್ಲಿ ಪವನ ಪಂಕಗಳು ಇವೆ.

5. ಜೈವಿಕ ವಸ್ತುಗಳ ಇಂಧನ ಶಕ್ತಿ (Bio Mass Energy)

ಇದು ಒಂದು ಸಾಂಪ್ರದಾಯಿಕ ವಿದ್ಯುಚ್ಛಕ್ತಿ ವಿಧಾನವಾಗಿದೆ. ಈ ವಿಧಾನದಲ್ಲಿ ಧರ್ಮಪುರಿ ಮತ್ತು ನಾಮಕ್ಕಲ್ ಜಿಲ್ಲೆಗಳಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆ ಮಾಡಲಾಗುತ್ತಿದೆ.

ಜೈವಿಕ ವಸ್ತುಗಳ ಇಂಧನ ಎಂಬುದು ವ್ಯವಸಾಯ ವಸ್ತುಗಳ ತ್ಯಾಜ್ಯಗಳಿಂದ ಪಡೆಯಲಾಗುತ್ತದೆ.

ತಮಿಳುನಾಡಿನಲ್ಲಿ ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಯನ್ನು ನಿವಾರಿಸಲು 8315 ಮೆಗಾವ್ಯಾಟ್ ವಿದ್ಯುಚ್ಛಕ್ತಿ ಉತ್ಪಾದನೆ ವಾಡುವ ವಿದ್ಯುಚ್ಛಕ್ತಿ ಘಟಕಗಳನ್ನು ಸ್ಥಾಪಿಸಲಾಗುತ್ತಿದೆ. ರಾಷ್ಟ್ರೀಯ ಶಾಖೋತ್ಪನ್ನ ನಿಗಮವು (National Thermal Power Corporation Ltd), ತಮಿಳುನಾಡು ವಿದ್ಯುತ್ ಮಂಡಳಿಗಳ ಸಹಯೋಗದ ಪ್ರಯತ್ನದಿಂದಾಗಿ ತಿರುವಳ್ಳುವರ್ ಜಿಲ್ಲೆಯ ವೆಲ್ಲೂರಿನಲ್ಲಿ ಶಾಖೋತ್ಪನ್ನ ವಿದ್ಯುತ್ ಘಟಕವನ್ನು ಆರಂಭಿಸುತ್ತಿದೆ. ಈ ಯೋಜನೆಗಳು ತಮಿಳುನಾಡಿನ ವಿದ್ಯುತ್ ಬೇಡಿಕೆಯನ್ನು ಪೂರೈಸುತ್ತವೆ ಎಂದು ನಂಬಲಾಗುತ್ತಿದೆ.

ಸಾರಿಗೆ

ತಮಿಳುನಾಡಿನ ಆರ್ಥಿಕಾಭಿವೃದ್ಧಿಗೆ ರಸ್ತೆ ಸಾರಿಗೆ ಸೌಲಭ್ಯಗಳು ಮುಖ್ಯ ಕಾರಣಗಾಳಾಗಿವೆ. ಅಲ್ಲದೆ ಭಾರತದಾದ್ಯಂತ ರೈಲು ಸಾರಿಗೆಯಿಂದ ಜೋಡಿಸಲ್ಪಟ್ಟಿದೆ. ಹೊಸ ರೈಲು ಮಾರ್ಗ ಸ್ಥಾಪಿಸುವುದಕ್ಕಾಗಿ ಶೋಧನಾ ಕಾರ್ಯಗಳು ನಡೆಯುತ್ತಾ ಬರುತ್ತಿವೆ. ಚೆನ್ನೈನಲ್ಲಿ ಎಂ.ಆರ್.ಟಿ.ಎಸ್ (Mass Rapid Transit System) ಮತ್ತು ಚೆನ್ನೈ ಮಹಾನಗರ ರೈಲು ಸಾರಿಗೆ ಯೋಜನೆಯ (Chennai Metro Rail Project) ಮೂಲಕ ಸಾರಿಗೆ ಯೋಜನೆಗಳು ಕಾರ್ಯಗತವಾಗುತ್ತಾ ಬರುತ್ತಿವೆ. ತಮಿಳುನಾಡಿನ ಅತ್ಯಂತ ದೊಡ್ಡ ಬಂದರುಗಳು ಚೆನ್ನೈ, ಎಣ್ಣೂರ್ ಮತ್ತು ತೂತ್ತುಕುಡಿಯಾಗಿವೆ.



ಚೆನ್ನೈ ಬಂದರು

ಸಣ್ಣ ಬಂದರುಗಳು ಕಡಲೂರು ಮತ್ತು ನಾಗ ಪಟ್ಟಣಗಳಾಗಿವೆ. ತಮಿಳುನಾಡಿನ ವಿಮಾನ ನಿಲ್ದಾಣಗಳು ಚೆನ್ನೈ, ಕೊಯಮತ್ತೂರು, ಮಧುರೈ, ತಿರುಚಿ, ಸೇಲಂ ಮತ್ತು ತೂತ್ತುಕುಡಿ ಇವುಗಳಾಗಿವೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪ್ರಯತ್ನದಿಂದಾಗಿ ವ್ಯವಸಾಯ ಮತ್ತು ಕೈಗಾರಿಕಾ ಕ್ಷೇತ್ರದಲ್ಲಿ ಭಾರತವು ತ್ವರಿತ ಆರ್ಥಿಕಾಭಿವೃದ್ಧಿ ಹೊಂದುತ್ತಾ ಬರುತ್ತಿದೆ. ಭವಿಷ್ಯದಲ್ಲಿ ಭಾರತ ಬಲಿಷ್ಠ ರಾಷ್ಟ್ರವಾಗುವುದರಲ್ಲಿ ಸಂಶಯವೇ ಇಲ್ಲ.

ಅಭ್ಯಾಸ

ಅ. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

1. ಭಾರತದಲ್ಲಿ ಪಂಚವಾರ್ಷಿಕ ಯೋಜನೆಗಳ ಪರಿಭಾವನೆಯನ್ನು

ಅ) ಸೋವಿಯತ್ ರಷ್ಯಾದಿಂದ ಪಡೆಯಲಾಗಿದೆ.

ಆ) ಅಮೆರಿಕ ಸಂಯುಕ್ತ ಸಂಸ್ಥಾನಗಳಿಂದ ಪಡೆಯಲಾಗಿದೆ.

ಇ) ಇಂಗ್ಲೆಂಡ್ ದೇಶದಿಂದ ಪಡೆಯಲಾಗಿದೆ.

ಈ) ಸಂಯುಕ್ತ ಅರಬ್ ರಾಷ್ಟ್ರಗಳಿಂದ ಪಡೆಯಲಾಗಿದೆ.

2. ಹನ್ನೊಂದನೇ ಪಂಚವಾರ್ಷಿಕ ಯೋಜನಾ ಅವಧಿ.

ಅ) 1956–61 ಆ) 1997–2002 ಇ) 2002–2007 ಈ) 2007–2012

3. ಭಾರತದ ಯೋಜನಾ ಆಯೋಗದ ಅಧ್ಯಕ್ಷರು

ಅ) ರಾಷ್ಟ್ರಪತಿಗಳು ಆ) ಪ್ರಧಾನಮಂತ್ರಿ

ಇ) ಹಣಕಾಸು ಮಂತ್ರಿ ಈ)ಉಪರಾಷ್ಟ್ರಪತಿಗಳು

4. ಭಾರತದಲ್ಲಿ ಯೋಜನಾ ಆಯೋಗವನ್ನು (ನಿತಿ ಆಯೋಗ್) ರಚಿಸಿದ ವರ್ಷ.

ಅ) 1962 ಆ) 1950 ಇ) 1956 ಈ) 1949

5. ಭಾರತದ ಪ್ರಧಾನಮಂತ್ರಿ ನೆಹರು ಜಾರಿಗೊಳಿಸಲು ಬಯಸಿದ ಭಾರತದ ಆರ್ಥಿಕತೆಯು.

ಅ) ಮಿಶ್ರ ಆರ್ಥಿಕ ವ್ಯವಸ್ಥೆ.

ಆ) ಸಮಾನತೆಯ ಅರ್ಥವ್ಯವಸ್ಥೆ.

ಇ) ಬಂಡವಾಳಶಾಹಿ ಅರ್ಥವ್ಯವಸ್ಥೆ.

ಈ) ಹಣ ಆರ್ಥಿಕವ್ಯವಸ್ಥೆ.

6. ಹಸಿರು ಕ್ರಾಂತಿ ಜಾರಿಗೆ ಬಂದ ವರ್ಷ

ಅ) 1967 ಆ) 1977 ಇ) 1987 ಈ) 1957

7. ಭೂದಾನ ಚಳುವಳಿಯನ್ನು ಆರಂಭಿಸಿದವರು.

ಅ) ಜಯಪ್ರಕಾಶ್ ನಾರಾಯಣ್ ಆ) ಜವಹರಲಾಲ್ ನೆಹರು

ಇ) ಆಚಾರ್ಯ ವಿನೋಭಾ ಭಾವೆ ಈ) ಡಾಕ್ಟರ್ ರಾಜೇಂದ್ರ ಪ್ರಸಾದ್.

8. ಭಾರತದ ಅರ್ಥವ್ಯವಸ್ಥೆಯಲ್ಲಿ ಪ್ರಾಮುಖ್ಯತೆಯನ್ನು ಪಡೆದ ವರ್ಷ.

ಅ) 1981 ಆ) 1991 ಇ) 2001 ಈ) 2010.

9. ಉಪಗ್ರಹ ಮತ್ತು ದೂರ ಸಂಪರ್ಕ ಸಂಶೋಧನೆ ಮತ್ತು ಅಭಿವೃದ್ಧಿಗಾಗಿ, ಹೊಣೆಗಾರಿಕೆಯನ್ನು ಹೊಂದಿರುವ ಸಂಸ್ಥೆ.

ಅ) ಭಾರತ ಕೃಷಿ ಸಂಶೋಧನಾ ಸಂಸ್ಥೆ.

ಆ) ಭಾರತ ವೈದ್ಯಕೀಯ ಸಂಶೋಧನಾ ಸಂಸ್ಥೆ.

ಇ) ಭಾರತ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ.

ಈ) ಭಾರತೀಯ ವಿಜ್ಞಾನ ಮತ್ತು ತಾಂತ್ರಿಕ ಸಂಶೋಧನಾ ಸಂಸ್ಥೆ.

10. 2001 ರ ಜನಗಣತಿಯ ಪ್ರಕಾರ ಅಕ್ಷರಸ್ಥರ ಸಂಖ್ಯೆ.

ಅ) 64.8% ಆ) 65.8% ಇ) 66.8% ಈ) 67.8%

ಆ) ಕೆಳಕಂಡ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ.

1. ಹನ್ನೊಂದನೇ ಪಂಚವಾರ್ಷಿಕ ಯೋಜನೆಯ ಮೂರು ಉದ್ದೇಶಗಳನ್ನು ಬರೆಯಿರಿ.

2. ಹಸಿರು ಕ್ರಾಂತಿ ಕರಿತು ಲಘು ಟಿಪ್ಪಣಿ ಬರೆಯಿರಿ.

3. ಮಿಶ್ರ ಆರ್ಥಿಕ ವ್ಯವಸ್ಥೆ ಎಂದರೇನು?

4. ಬಹುರಾಷ್ಟ್ರೀಯ ಕಂಪನಿಗಳು – ಲಘು ಟಿಪ್ಪಣಿ ಬರೆಯಿರಿ.

5. ಗುಡಿ ಕೈಗಾರಿಕೆ – ಲಘು ಟಿಪ್ಪಣಿ ಬರೆಯಿರಿ.

6. ಉದಾರೀಕರಣ ಎಂದರೇನು?

7. ಖಾಸಗೀಕರಣ ಎಂದರೇನು?

8. ಜಾಗತೀಕರಣ – ಲಘು ಟಿಪ್ಪಣಿ ಬರೆಯಿರಿ.

9. ತಮಿಳುನಾಡು ಸಾರಿಗೆಯ ಅಭಿವೃದ್ಧಿ ಕುರಿತು ಲಘು ಟಿಪ್ಪಣಿ ಬರೆಯಿರಿ.

ಇ) ಕೆಳಕಂಡ ಪ್ರಶ್ನೆಗಳಿಗೆ ಒಂದು ಪುಟದಲ್ಲಿ ಉತ್ತರ ಬರೆಯಿರಿ.

1. ಹನ್ನೊಂದನೇ ಪಂಚವಾರ್ಷಿಕ ಯೋಜನೆಯ ಉದ್ದೇಶಗಳನ್ನು ವಿವರಿಸು.

2. ಹಸಿರು ಕ್ರಾಂತಿಯ ಬಗ್ಗೆ ವಿವರಿಸು.

3. 1991 ರ ಆರ್ಥಿಕ ಸುಧಾರಣೆಗಳ ಬಗ್ಗೆ ವಿವರಿಸು.

4. ತಮಿಳುನಾಡಿನ ವಿದ್ಯುಚ್ಛಕ್ತಿ ಯೋಜನೆಗಳನ್ನು ವಿವರಿಸು.

ಈ) ಚಟುವಟಿಕೆ.

ನಿಮ್ಮ ಪ್ರದೇಶದಲ್ಲಿರುವ ಮುಖ್ಯ ವ್ಯವಸಾಯದ ಬೆಳೆಗಳನ್ನು ತಿಳಿದುಕೊಳ್ಳಿರಿ.